ಹರಿದಾಸರು ಹಾಡಿದ
ಶ್ರೀರಾಮನ ಕೀರ್ತನೆಗಳು

ಸಂ: ಪ್ರೊ|| ಜಿ ಅಶ್ವತ್ಥನಾರಾಯಣ



ತೇರಾ ಕೋಟಿ ಶ್ರೀ ರಾಮ ನಾಮ ಲೇಖನ ಯಜ್ಞ

TERAH KOTI SRI RAMA NAMA LEKHANA YAGNA

ತ್ರಯೋದಾಕ್ಷರ ಶ್ರೀ ರಾಮ ನಾಮ ಜಪ ಅಥವ "ಶ್ರೀರಾಮ ಜಯರಾಮ ಜಯಜಯ ರಾಮ" ಎನ್ನುವ ಹದಿಮೂರು ಅಕ್ಷರ ರಾಮ ಜಪಗಳಲಲ್ಲಾ ಅತಿ ಮಹತ್ವವಾದದ್ದು. ಈ ದಿವ್ಯ ಮಂತ್ರವನ್ನು ಬರೆಯುವುದರಿಂದ ಸರ್ವ ಪುರುಷಾರ್ಥ ಬಯಕೆಗಳು ಸಿದ್ಧಿಸುವುದು.

ಶ್ರೀ ಜಯರಾಮ ಸೇವಾ ಮಂಡಳಿಯು "ತೇರಾ ಕೋಟಿ ತ್ರಯೋದಾಕ್ಷರ ಶ್ರೀ ರಾಮ ನಾಮ ಲೇಖನ ಯಜ್ಞ"ವನ್ನು ಯೆಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳ ದಿವ್ಯ ಮಾರ್ಗದರ್ಶನ ಹಾಗೂ ಆಶೀರ್ವಾದಗಳೊಂದಿಗೆ ಹಮ್ಮಿಕೊಂಡಿತ್ತು. ಈ ಯಜ್ಞದಲ್ಲಿ 13 ಕೋಟಿ ರಾಮನಾಮಗಳಿರುವ ಪುಸ್ತಕಗಳನ್ನು ಮಂದಿರದಲ್ಲಿ ನಿರ್ಮಾಣಗೊಂಡ? ಹೊಸ ಸ್ತೂಪದ ಅಡಿಯಲ್ಲಿ ಸುಮಾರು 50,000 ಪುಸ್ತಕಗಳನ್ನು ಮುಡಿಪಾಗಿಡಲಾಗಿದೆ. ಸಾವಿರಾರು ಭಕ್ತರು ಶ್ರೀ ರಾಮನಾಮ ಲೇಖನದಲ್ಲಿ ಪಾಲ್ಗೊಂಡು ಕೃತಾರ್ಥರಾಗಿ ಶ್ರೀರಾಮನ ಕೃಪೆಗೆ ಪಾತ್ರರಾಗಿದ್ದಾರೆ.

ಈ ಯಜ್ಞನ ಅಂಗವಾಗಿ ಮಂಡಳಿಯು 10ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವುದು ಹೆಮ್ಮೆಯ ವಿಷಯ?. ಆ ಪುಸ್ತಕಗಳಲ್ಲಿ "ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು" ಎಂಬ ಈ ಪುಸ್ತಕವೂ ಒಂದು.

ಹರಿದಾಸರು ಹಾಡಿದ

ಶ್ರೀರಾಮನ ಕೀರ್ತನೆಗಳು

ಸಂಪಾದಕರು:

ಪ್ರೊ॥ ಜಿ ಅಶ್ವತ್ಥನಾರಾಯಣ

ಎಸ್ ಕೆ ಗೋಪಾಲಕೃಷ್ಣ
ಗೌ॥ ಕಾರ್ಯದರ್ಶಿ
ಶ್ರೀ ಜಯರಾಮ ಸೇವಾ ಮಂಡಳಿ (ರಿ.)
೪೯೨/ಎ, ಶ್ರೀ ಜಯರಾಮ ಸೇವಾ ಮಂಡಳಿ ರಸ್ತೆ, ೧ನೇ ಮುಖ್ಯ ರಸ್ತೆ,
೮ನೇ ಬಡಾವಣೆ, ಜಯನಗರ, ಬೆಂಗಳೂರು - ೫೬೦೦೭೦
ದೂರವಾಣಿ - ೦೮೦ ೨೨೪೪ ೫೨೩೨

HARIDASARU HAADIDA
SHRIRAMANA KEERTANEGALU

Author:

Prof. G Ashwathnarayan

Copyright : Publishers
Copies : 1000
Price : Rs. 400

SK Gopalakrishna
Hon. Secretary
Sri Jayarama Seva Mandali (R.)
492/A, Jayarama Seva Mandali Road, 1st Main,
8th Block, Jayanagar, Bangalore - 560070
Phone: 080 2244 5232

Printed at

USHA PRINTS
NO.12 1st Main, Ranganathapura
Kamakshipalya, Bangalore 560 079
Phone: 9916525059

ಪ್ರಕಾಶಕರ ನುಡಿ

ಶ್ರೀ ಜಯರಾಮ ಸೇವಾ ಮಂಡಳಿಯು ಬೆಂಗಳೂರಿನ ಒಂದು ಪ್ರಮುಖ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿ ಮುನ್ನೆಲೆಗೆ ಬಂದಿದೆ. ಸಣ್ಣದಾಗಿ ರಾಮನವಮಿಯನ್ನು ಆಚರಿಸಿಕೊಂಡು ಬರುತ್ತಿದ್ದ ಸಂಸ್ಥೆಯಲ್ಲಿ ಈಗ ಪ್ರತಿದಿನವೂ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿವೆ. ಸಂಗೀತ ನೃತ್ಯಗಳಲ್ಲದೆ ಅನೇಕ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಿ ನೂರಾರು ವಿದ್ವಾಂಸರುಗಳಿಂದ ರಾಮಾಯಣದ ಹಿರಿಮೆಯನ್ನು ಜನರಿಗೆ ತಲುಪಿಸುವ ಸತ್ಕಾರ್ಯ ನಡೆಯುತ್ತಿದೆ. ಆ ಉಪನ್ಯಾಸಗಳು ನಾಲ್ಕೈದು ಪುಸ್ತಕಗಳ ರೂಪದಲ್ಲಿ ಪ್ರಕಟವಾಗಿವೆ.

1965ರಲ್ಲಿ ಕೀರ್ತಿಶೇಷ **ನಾಡೋಜ ಪ್ರೊ॥ ಜಿ. ವೆಂಕಟಸುಬ್ಬಯ್ಯನವರ** ಪ್ರೇರಣೆಯಿಂದ, ಅವರ ಮಾರ್ಗದರ್ಶನದಲ್ಲಿ ಮೊದಲಬಾರಿಗೆ ಖ್ಯಾತ ವಿದ್ವಾಂಸರುಗಳಿಂದ ವಿವಿಧ ರಾಮಾಯಣ ಗ್ರಂಥಗಳ ಮೇಲೆ ಹದಿನೈದು ದಿನಗಳ ಉಪನ್ಯಾಸಮಾಲೆಯನ್ನು ಏರ್ಪಡಿಸಲಾಗಿತ್ತು. ಅವರು ನೀಡಿದ ಉಪನ್ಯಾಸದ ಲಿಖಿತ ರೂಪವನ್ನು 1990ರ ದಶಕದಲ್ಲಿ **"ಶ್ರೀರಾಮ ಸಂಭವ"** ಎಂಬ ಗ್ರಂಥವಾಗಿ ಪ್ರಕಟಿಸಲಾಯಿತು. ಅದು ಜನಪ್ರಿಯವಾಗಿ ಮುದ್ರಿತ ಎಲ್ಲಾ ಪ್ರತಿಗಳು ಮುಗಿದು, ಶ್ರೀ ಜಯರಾಮ ಸೇವಾ ಮಂಡಳಿಯು 2019ರಲ್ಲಿ ಆಚರಿಸಿದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ, ಪ್ರೊ॥ ಜಿ. ವೆಂಕಟಸುಬ್ಬಯ್ಯನವರ ಉತ್ತೇಜನೆಯಿಂದ **ಶ್ರೀರಾಮ ಸಂಭವದ** ಪುನರ್ಮುದ್ರಣವನ್ನೂ ಮಾಡಲಾಯಿತು. "ಶ್ರೀರಾಮ ಸಂಭವ" ಪುಸ್ತಕವನ್ನು ಹೊರತು ಹತ್ತಕ್ಕೂ ಹೆಚ್ಚು ರಾಮಾಯಣಕ್ಕೆ ಸಂಬಂಧಿತ ಅತ್ಯುತ್ಕೃಷ್ಟ ಗ್ರಂಥಗಳನ್ನೂ ಕೂಡಾ ಶ್ರೀ ಜಯರಾಮ ಸೇವಾ ಮಂಡಳಿಯು ಪ್ರಕಟಿಸಿದೆ.

ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ **ಶ್ರೀ ಶ್ರೀ ಶಂಕರ ಭಾರತೀ** ಮಹಾಸ್ವಾಮಿಗಳ ಆಶೀರ್ವಾದದಿಂದ, **ತೇರಾ ಕೋಟಿ ಶ್ರೀ ರಾಮನಾಮ ಲೇಖನ ಯಜ್ಞವನ್ನು**, 2022-2024ರಲ್ಲಿ 17 ತಿಂಗಳ ಕಾಲ, ಶ್ರೀ ಜಯರಾಮ ಸೇವಾ ಮಂಡಳಿಯು ಹಮ್ಮಿಕೊಂಡಿತ್ತು.

ಶ್ರೀರಾಮನ ಧ್ಯಾನ ಬಹುಪಾಲು ಭಕ್ತಿ ಪ್ರಧಾನವಾದುದು. ಜಪ, ಸ್ತೋತ್ರಗಳನ್ನು ಹೊರತು ಗಾಯನವೂ ಪ್ರಮುಖ ಹಾಗೂ ಜನಪ್ರಿಯವಾದದ್ದು. ಈ ಭಕ್ತಿ ರಸವನ್ನು

ಮಹಾನದಿಯನ್ನಾಗಿ ಪ್ರವಹಿಸುವಲ್ಲಿ ಹರಿದಾಸರ ಪಾತ್ರ ಅಪಾರ. ಹರಿದಾಸರ ಕೀರ್ತನೆಗಳು ಅಥವ ದಾಸರಪದಗಳು ಜನಮನವನ್ನು ಶ್ರೀರಾಮನ ಭಕ್ತಿಯಲ್ಲಿ ಮುಳುಗಿಸುತ್ತದೆ. ಇಂತಹ ಅನೇಕ ಹರಿದಾಸರ ನೂರಾರು ಕೀರ್ತನೆಗಳನ್ನು ಸಂಗ್ರಹಿಸುವಲ್ಲಿ **ಪ್ರೊ॥ ಜಿ ಅಶ್ವತ್ಥನಾರಾಯಣ** ಅವರ ಈ ಶ್ರಮ ಅಸಮಾನ್ಯ ಹಾಗೂ ಸ್ಮರಣೀಯವಾದದ್ದು. ಮಂಡಲಿಯು ಅವರಿಗೆ ಚಿರಋಣಿ.

ಈ ಪುಸ್ತಕವನ್ನು ಮುದ್ರಿಸಲು ನಮಗೆ ಸಹಕರಿಸಿದ ದಿವಂಗತ ಮಲ್ಲತ್ತಹಳ್ಳಿ **ಶ್ರೀ ಎಂ. ಪಿ. ವೆಂಕಟೇಶಮೂರ್ತಿ** ಅವರ ಪುತ್ರರಾದ **ಶ್ರೀ ವಿ. ಶ್ರೀನಿವಾಸ್** ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪುಸ್ತಕದ ಡಿ.ಟಿ.ಪಿ ಮಾಡಿದ **ಎನ್. ಹೆಚ್. ಠಾಕೂರ್** ಅವರಿಗೆ ಆಭಾರಿಯಾಗಿದ್ದೇನೆ. ಈ ಪುಸ್ತಕವು ರೂಪಗೊಳಲ್ಲು ಎಲ್ಲಾ ರೀತಿಯಲ್ಲೂ ಸಹಕರಿಸಿದ **ಶ್ರೀ ಕೆ ಚಂದ್ರಶೇಖರ್** ಮತ್ತು **ಶ್ರೀ ಶತರ್ ಹರಿಹರಪುರ ಸತೀಶ್** ಅವರಿಗೂ ಕೃತಜ್ಞತೆಗಳು. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ **ಉಷಾ ಪ್ರಿಂಟ್ಸ** (ಕಾಮಾಕ್ಷಿಪಾಳ್ಯ) ಅವರಿಗೂ ಅನಂತ ಧನ್ಯವಾದಗಳು. ಮಂಡಳಿಯ ಎಲ್ಲಾ ಪುಸ್ತಕ ಪ್ರಕಟಣೆಗಳಿಗೂ ಮಾರ್ಗದರ್ಶಕರಾಗಿರುವ **ಪ್ರಿಸಮ್ ಬುಕ್ಸ** ಸಂಸ್ಥಾಪಕರಾದ **ಶ್ರೀ ಪ್ರಾಣೇಶ್ ಸಿರಿವರ** ಅವರಿಗೂ ಧನ್ಯವಾದಗಳು. ಕಡೆಯದಾಗಿ ಈ ಕೃತಿಯ ಎಲ್ಲಾ ಹಂತಗಳಲ್ಲೂ ಪ್ರೋತ್ಸಾಹ ನೀಡಿದ ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ. ಈ ಪುಸ್ತಕವು ಜನಸಾಮಾನ್ಯರಿಗೆ ರಾಮನ ಕೀರ್ತನೆಗಳ ಒಂದು ಕೋಶವಾಗಬೇಕೆಂದು ಆಶಿಸುತ್ತೇವೆ.

ಶ್ರೀ ರಾಮ ನಾಮಸ್ಮರಣೆಗಳೊಂದಿಗೆ,

ಎಸ್.ಕೆ. ಗೋಪಾಲಕೃಷ್ಣ
ಗೌರವ ಕಾರ್ಯದರ್ಶಿ
ಶ್ರೀ ಜಯರಾಮ ಸೇವಾ ಮಂಡಳಿ (ರಿ.)

ನುಡಿ ನಮನ



ಶ್ರೀ ದಿ| ಎಂ.ಪಿ. ವೆಂಕಟೇಶ್ ಮೂರ್ತಿ, ಮಲ್ಲತ್ತಹಳ್ಳಿ

ಶ್ರೀಯುತರ ಚಿರಸ್ಮರಣೆಗಾಗಿ ಅವರ ಆಪ್ತ ಸ್ನೇಹಿತರು ಹಾಗೂ ಬಂಧು ಬಳಗದವರು"ಶ್ರೀರಾಮನ ಕೀರ್ತನೆಗಳು" ಎಂಬಪುಸ್ತಕ ಪ್ರಕಟಣೆ ಮಾಡುವ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ ಈ ನುಡಿನಮನವನ್ನು ಅರ್ಪಿಸುತ್ತಿದ್ದೇವೆ.

80 ವರ್ಷಗಳ ಸಾರ್ಥಕ್ಯ ಜೀವನವನ್ನು ನಡೆಸಿ ಸ್ವರ್ಗಸ್ಥರಾದ ಶ್ರೀ ಎಂ.ಪಿ. ವೆಂಕಟೇಶ್ ಮೂರ್ತಿ ಮಲ್ಲತ್ತಹಳ್ಳಿಯವರು ಸರಳ, ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು. ನೇರ ದಿಟ್ಟ ನಡೆನುಡಿಗಳ ಮಾತಿನವರಾಗಿದ್ದ ಶ್ರೀಯುತರು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದ ಧೀರೋಧಾತ್ತ ವ್ಯಕ್ತಿಯಾಗಿದ್ದರು. ಹಾಗಾಗಿ ಸಕಲರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿದ್ದರು. ಅವರು ತಮ್ಮ ಕಠಿಣ ಪರಿಶ್ರಮದಿಂದ ಜೀವನೋದ್ಧಾರವನ್ನು ಕಂಡವರಾಗಿದ್ದರು.

ಬಹುಮುಖ ವ್ಯಕ್ತಿತ್ವದ ಶ್ರೀಯುತರು ವಿಶಾಲ ಹೃದಯಿಯಾಗಿ, ಸ್ನೇಹಜೀವಿಯಾಗಿ, ಸಂಘಜೀವಿಯಾಗಿ, ಕೊಡುಗೈದಾನಿಯಾಗಿ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದರು. ನಮ್ಮ ಸಂಸ್ಕೃತಿ ಹಾಗೂ ಸನಾತನ ಪರಂಪರೆಯ ಬಗ್ಗೆ ಸದಾ ತುಡಿತವನ್ನು ಹೊಂದಿದ್ದು ಅದರ ಔನತ್ಯಕ್ಕಾಗಿ ಹಗಲಿರುಳು ಶ್ರಮಿಸಿದ್ದರು. ಅನೇಕ ಧಾರ್ಮಿಕ ಸಂಘ ಸಂಸ್ಥೆ ಹಾಗೂ ಮಂಡಳಿಗಳಲ್ಲಿ ಐದಾರು ದಶಕಗಳ ಕಾಲ ಸತತವಾಗಿ ಸೇವೆ ಸಲ್ಲಿಸುತ್ತಾ, ದಾನಧರ್ಮವನ್ನು ಮಾಡುತ್ತಾ, ಅನೇಕ ಸಲಹೆ ಸೂಚನೆಗಳನ್ನು ನೀಡುತ್ತಾ ಅವುಗಳ ಶ್ರೇಯಸ್ಸಿಗಾಗಿ ಶ್ರಮಿಸಿದ್ದರು. ತಮ್ಮ ಸುತ್ತಮುತ್ತ ನಡೆಯುವ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಾರ್ಗದರ್ಶನ ಹಾಗೂ ಪ್ರೋತ್ಸಾಹವನ್ನು ನೀಡುತ್ತಿದ್ದರು.

ಮಹಾನ್ ಆಸ್ತಿಕರಾದ ಶ್ರೀಯುತರು ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶುಕ್ಲಯಜುರ್ವೇದದ ಉನ್ನತಿಗಾಗಿ ಬಹಳ ಶ್ರಮಿಸುತ್ತಿದ್ದರು. ಕಣ್ವಮಠ, ಯಾಜ್ಞವಲ್ಕ್ಯ ಆಶ್ರಮದ ಶ್ರೇಯೋಭಿವೃದ್ಧಿಗಾಗಿ ಅದರ ಕೆಲಸಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಮಾತ್ರವಲ್ಲ, ಅನೇಕ ದೇವಸ್ಥಾನಗಳ ಜೀರ್ಣೋದ್ಧಾರ, ಹಾಗೂ ದೇವಾಲಯಗಳಿಗೆ ಸೇರಿದ ಭವನ ಹಾಗೂ ಕಟ್ಟಡಗಳನ್ನು ನಿರ್ಮಿಸಲು ತನು, ಮನ, ಧನದ ಮೂಲಕ ಅವಿರತವಾಗಿ ಶ್ರಮಿಸಿದ್ದರು.

ಹೀಗೆ ಸತ್ಕಾರ್ಯ, ನಿಸ್ವಾರ್ಥ, ಹಾಗೂ ಸನ್ಮಾರ್ಗದ ದಾರಿಯಲ್ಲಿ ಬಾಳಿ, ಸಮದರ್ಶಿತ್ವ ಹಾಗೂ ಸಚ್ಚಾರಿತ್ರ್ಯ ಹಾಗೂ ಸದ್ಗುಣ ಸಂಪನ್ನರಾಗಿ; ಸಮಾಜಕ್ಕೆ ಆದರ್ಶಪ್ರಾಯರಾಗಿ ಬಾಳಿ ಬದುಕಿ ಅಜರಾಮರರಾದ ಶ್ರೀ ಎಂ.ಪಿ. ವೆಂಕಟೇಶ ಮೂರ್ತಿಯವರು ನಡೆದುಬಂದ ಹಾದಿಯು ನಮಗೆಲ್ಲ ಸ್ಫೂರ್ತಿದಾಯಕವಾಗಿದೆ.

"ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ|
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ"
–[ಭಗವದ್ಗೀತೆ – ಅಧ್ಯಾಯ 3 – ಶ್ಲೋಕ –11]

ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು

ವಿಷಯಸೂಚಿ

ಗ್ರಂಥ ಸಂಪಾದಕನ ಮಾತು

ಕನ್ನಡದಲ್ಲಿ ದಾಸಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ಹಲವುತೆರನಾಗಿ ಪ್ರಕಟವಾಗಿವೆ. ಅವುಗಳ ಕೆಲವು ಪ್ರಕಾರಗಳು ಹೀಗಿವೆ.

- ಹರಿದಾಸರ ಕೀರ್ತನೆಗಳು
- ಹರಿದಾಸರ ಕಾವ್ಯಗಳು - ಮಹಾಕಾವ್ಯಗಳು
- ಹರಿದಾಸರ ಕೀರ್ತನೆಗಳ ವಿಮರ್ಶೆಗಳು
- ಹರಿದಾಸರ ಜೀವನಚರಿತ್ರೆಗಳು
- ಹರಿದಾಸರ ಮತ್ತು ಕೃತಿಗಳಬಗ್ಗೆ ಮಹಾಪ್ರಬಂಧಗಳು (ಪಿಎಚ್‌ಡಿ ಗ್ರಂಥಗಳು)
- ಹರಿದಾಸರ ಸಾಹಿತ್ಯದ ಕೈಪಿಡಿ ಸೂಚಿಗಳು
- ಹರಿದಾಸರ ಕೀರ್ತನೆಗಳ ಧ್ವನಿಮುದ್ರಿಕೆಗಳು
- ಹರಿದಾಸರ ಸಾಹಿತ್ಯದ ಕೋಶಗಳು
- ಹರಿದಾಸರ ಸಾಹಿತ್ಯ ಮತ್ತುಹರಿದಾಸರ ಜಯಂತಿವರ್ಧಂತಿ ಸಂದರ್ಭದಲ್ಲಿ ಪ್ರಕಟವಾದ ವಿಶೇಷ ಪ್ರಕಟನೆಗಳು.
- ಹರಿದಾಸರ ಸಾಹಿತ್ಯ ಮತ್ತು ಜೀವನ ಕುರಿತಲೇಖನಗಳು ಸಂಗ್ರಹಗಳು ಇತ್ಯಾದಿ...

ಈಪೈಕಿ ಹರಿದಾಸರಕೀರ್ತನೆಗಳನ್ನು ಆಯಾದಾಸರಕೃತಿಗಳ ಸಂಗ್ರಹವನ್ನಾಗಿ. ತಾರತಮ್ಯಾನುಸಾರ ಭಜನಸಂಗ್ರಹಗಳನ್ನಾಗಿ ಕೀರ್ತನೆಗಳಿಗೆ ವಿವರಣೆ ಟಿಪ್ಪಣಿಗಳ ವ್ಯಾಖ್ಯಾನ ಗ್ರಂಥಗಳನ್ನು, ಕೀರ್ತನೆಗಳ ಪ್ರಾಯೋಗಿಕವಿಮರ್ಶಾ ಲೇಖನಗಳನ್ನಾಗಿ, ಪ್ರಕಟಿಸಿರುವ ಗ್ರಂಥಗಳಿವೆ.

ಇನ್ನು ರಾಮಾಯಣಕ್ಕೆ ಸಂಬಂಧಿಸಿದಂಥ ಕೀರ್ತನೆಗಳನ್ನು ವ್ಯಕ್ತಿ ಅನುಸಾರವಾಗಿ ಆಂಜನೇಯ ಕೀರ್ತನೆಗಳು, ಇತ್ಯಾದಿ ಪ್ರಕಟವಾಗಿವೆ ಈಪೈಕಿ ಕನ್ನಡ ಶ್ರೀರಾಮನ ಕೀರ್ತನೆಗಳನ್ನು ಶ್ರೀಪಾದರಾಜರಿಂದಮೊದಲ್ಗೊಂಡು ಗುರುಗೋವಿಂದವಿಠಲರವರೆಗೆ ೧೯೦೦ಕ್ಕೆ ಮುಂಚೆ ಜನಿಸಿದ ಹರಿದಾಸರ ಸುಮಾರು ೧೫೦೦೦ ಕೀರ್ತನೆಗಳಿಂದ ಶ್ರೀರಾಮನ ೫೦೦ ಕೀರ್ತನೆಗಳನ್ನು ಸಂಗ್ರಹಿಸಿ ಸಂಪಾದಿಸಿ ಮೊದಲಬಾರಿಗೆ ಕನ್ನಡದಲ್ಲಿ ಪ್ರಕಟಮಾಡಲಾಗುತ್ತಿದೆ. ಅಯೋಧ್ಯೆಯ ಶ್ರೀರಾಮ ಮಂದಿರ ಉದ್ಘಾಟನೆಯ ನೆನಪಿಗೆ (೨೨ ಜನವರಿ ೨೦೨೪) ಪ್ರಕಟವಾಗುತ್ತಿರುವುದು ಶುಭಸಂಗತಿಯಾಗಿದೆ.

ಬೆಂಗಳೂರುನಗರದಲ್ಲಿ ಹತ್ತಾರು ವರ್ಷಗಳಿಂದ ನಾನಾಕಡೆಗಳಲ್ಲಿ ರಾಮೋತ್ಸವದ ಕಾರ್ಯಕ್ರಮಗಳು ಹಲವಾರು ವಾರಗಳವರೆಗೆ ಅದ್ದೂರಿಯಾಗಿ ನಡೆದುಬರುತ್ತಿವೆ. ರಾಮನವಮಿ ಅಂಗವಾಗಿ ಹರಿಕಥೆ ಸಂಗೀತ ನಾಟಕ ನೃತ್ಯ ಸಮೂಹವಾದ್ಯಗೋಷ್ಠಿ ರಾಮಾಯಣ ಪಾರಾಯಣ, ಉತ್ಸವ ಅನ್ನದಾನ ಚರಪುವಿನಿಯೋಗ ಇತ್ಯಾದಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಾಬಂದಿದೆ. ಈ ಸಂದರ್ಭಗಳಲ್ಲಿ ಶ್ರೀರಾಮನನ್ನು ಹಾಗೂ ರಾಮಾಯಣವನ್ನು ಕುರಿತು ಪ್ರವಚನಗಳನ್ನು ಏರ್ಪಡಿಸುವುದರಜತೆಗೆ ಗ್ರಂಥಗಳನ್ನು ವಿಶೇಷ ಸಂಚಿಕೆಗಳನ್ನೂ ಪ್ರಕಟಿಸಿದ್ದಾರೆ.

ಹೀಗೆ ರಾಮನವಮಿ ಆಚರಣೆಗೆ ಜತೆಗೆ ಶ್ರೀರಾಮ ಗೀತಗುಚ್ಛ ಎಂದು ಶ್ರೀರಾಮನನ್ನು ಕುರಿತು ಹರಿದಾಸರು ರಚಿಸಿದ ಕೀರ್ತನೆಗಳ ಕಿರುಸಂಗ್ರಹಗಳನ್ನು ಪ್ರತಿವರ್ಷ ತರುತ್ತಿರುವವರು ಡಿ. ಎನ್. ವೆಂಕಟರಮಣಯ್ಯ ಅವರು ಪ್ರಸಿದ್ಧ ದೇಶಭಕ್ತರೂ ಶ್ರೀರಾಮನ ಭಕ್ತರೂ ಆಗಿದ್ದಾರೆ. ವಿಶ್ವೇಶ್ವರಪುರದ ಶ್ರೀರಾಮ ಸೇವಾಮಂಡಳಿ ಪರವಾಗಿ ರಾಮನವಮಿ ಕಾರ್ಯಕ್ರಮಗಳನ್ನು ನಡೆಸುತ್ತಾ ಜೊತೆಗೆ ಶ್ರೀರಾಮಗೀತೆಗುಚ್ಛವನ್ನು ಪ್ರತಿವರ್ಷ ಹೊಸಕೀರ್ತನೆಗಳನ್ನು ಸೇರಿಸುತ್ತಾ ಡಿ. ಎನ್. ವೆಂಕಟರಮಣಯ್ಯನವರು ಪ್ರಕಟಿಸುತ್ತಾ ಬಂದಿದ್ದಾರೆ. ಪ್ರಸಿದ್ಧ ಸಾಹಿತಿ ವಿದ್ವಾಂಸ ಕಲಾವಿದರಲ್ಲಿ ಒಬ್ಬರನ್ನು ಕರೆಸಿ ಗ್ರಂಥ ಬಿಡುಗಡೆ ಮಾಡುತ್ತಾ ಬಂದಿದ್ದಾರೆ.

೨೦೧೭ರಲ್ಲಿ ಶ್ರೀರಾಮನವಮಿ ಸಮಾರಂಭದಲ್ಲಿ ಆವರ್ಷದ ಶ್ರೀರಾಮ ಗೀತಗುಚ್ಛವನ್ನು ಪ್ರಕಟಿಸಿ ಬಿಡುಗಡೆ ಸಮಾರಂಭಕ್ಕೆ ನನ್ನನ್ನು ಡಿ. ವೆಂಕಟರಮಣಯ್ಯನವರು ಆಹ್ವಾನಿಸಿದ್ದರು. ಆಗ ಸಂಕ್ಷಿಪ್ತವಾಗಿ ಶ್ರೀರಾಮನ ಕೀರ್ತನೆಗಳ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡುವಾಗ "ಇದೊಂದು ಒಳ್ಳೆಯಪ್ರಯತ್ನ ಸಂಗೀತಗಾರರಿಗೆ ಭಜನಾಸಕ್ತರಿಗೆ ಶ್ರೀರಾಮಭಕ್ತರಿಗೆ ಉಪಯುಕ್ತ ಗ್ರಂಥ ಇದನ್ನು ಸಂಪಾದಿಸಿ ಪ್ರಕಟಿಸುತ್ತಿರುವ ಮಿತ್ರರಾದ ಡಿ. ಎನ್. ವೆಂಕಟರಮಣಯ್ಯನವರು ಅಭಿನಂದನಾರ್ಹರು ಆದರೆ ಪ್ರತಿವರ್ಷ ೮೦–೯೦ ಕೀರ್ತನೆಗಳ ಸಂಗ್ರಹ ಪ್ರಕಟವಾದರೆ ಸಾಲದು ಕನ್ನಡದಲ್ಲಿ ಸಾವಿರಕ್ಕೂ ಹೆಚ್ಚಿನ ಶ್ರೀರಾಮ ಕೀರ್ತನೆಗಳಿವೆ ಅವುಗಳನ್ನೆಲ್ಲಾ ಸಂಗ್ರಹಿಸಿ ಪ್ರಕಟಿಸಬೇಕು ಇದು ಅತ್ಯಗತ್ಯವಾಗಿ ಆಗಬೇಕಾದ ಕೆಲಸ" ಎಂದೆ. ಅದಕ್ಕೆ ವೆಂಕಟರಮಣಯ್ಯನವರು ನೀವೇ ಅಂಥ ಸಮಗ್ರ ಶ್ರೀರಾಮನ ಕೀರ್ತನೆಗಳ ಸಂಗ್ರಹಮಾಡಿ, ಪ್ರಕಟನೆಗೆ ಪ್ರಯತ್ನಿಸೋಣ ಎಂದಿದ್ದರು.

ಈ ಪ್ರಸಂಗನಡೆದಿದ್ದು ೨೦೦೭ರ ಸಮಾರಂಭದಲ್ಲಿ ೧೬ ವರ್ಷಗಳನಂತರ ೨೦೨೩ರಲ್ಲಿ ಒಂದುದಿನ ನಮ್ಮ ಮನೆಗೆ ಬೆಂಗಳೂರಿನ ಪ್ರಸಿದ್ಧ ಶ್ರೀಜಯರಾಮ ಸೇವಾಮಂಡಳಿ (ಜಯನಗರ ೮ನೇ ಬಡಾವಣೆ) ಗೌರವ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ ಮತ್ತು ಕಾರ್ಯಕರ್ತರಾದ ಚಂದ್ರಶೇಖರ್ ಅವರು ಬಂದು ನಮ್ಮ ಸಂಸ್ಥೆ

ಆಶ್ರಯದಲ್ಲಿ ಶ್ರೀರಾಮನ ಬಗ್ಗೆ ರಾಮಾಯಣದಬಗ್ಗೆ ಈಗಾಗಲೇ ಹತ್ತಾರು ಗ್ರಂಥಗಳನ್ನು ಪ್ರಕಟಿಸಿದ್ದೇವೆ ಈವರ್ಷ ನಡೆಸಲಿರುವ ತೇರಾಕೋಟಿ ಶ್ರೀರಾಮನಾಮ ಲೇಖನಯಜ್ಞದ ಸಮಾರೋಪದ ವೇಳೆಗೆ ರಾಮಾಯಣಕ್ಕೆ ಸಂಬಂಧಿಸಿದಂತೆ ಕೆಲವು ಗ್ರಂಥಗಳನ್ನು ಪ್ರಕಟಿಸಬೇಕೆಂದಿದ್ದೇವೆ. ಕನ್ನಡದಲ್ಲಿ ಇರುವ ಗದ್ಯರಾಮಾಯಣ ಕೃತಿಗಳಲ್ಲಿ ಸಂಕ್ಷಿಪ್ತವೂ ಸರಳವೂ ಸಮಗ್ರಕಥಾಸಾರ ಒಳಗೊಂಡ ವಾಲ್ಮೀಕಿ ರಾಮಾಯಣವನ್ನು ಆಧರಿಸಿರುವ ಗ್ರಂಥವೊಂದಿದ್ದರೆ ತಿಳಿಸಿ ಅದನ್ನು ಪ್ರಕಟಿಸುತ್ತೇವೆ ಎಂದರು. ಕನ್ನಡದಲ್ಲಿ ಇರುವ ೧೨೦೦ಕ್ಕೂ ಹೆಚ್ಚಿನ ರಾಮಾಯಣದ ಪುಸ್ತಕಗಳಲ್ಲಿ ಗದ್ಯದಕೃತಿಗಳೇ ಹೆಚ್ಚು ಆದರೆ ನೀವು ಕೇಳುವಂಥ ಗ್ರಂಥ (ಎಲ್ಲ ವಯಸ್ಸಿನವರು ಓದುವಂಥದ್ದು) ಹುಡುಕಿ ತಿಳಿಸುತ್ತೇನೆ ಎಂದೆ.

ಕೆಲವು ದಿನಗಳನಂತರ ದೇವುಡು ಅವರ ವಾಲ್ಮೀಕಿ ರಾಮಾಯಣದ ಸಂಕ್ಷಿಪ್ತಾನುವಾದ ಹಾಗೂ ವ್ಯಕ್ತಿಗಳನುಸಾರ ಬರೆದ ರಾಮಾಯಣದ ಮಹಾಪುರುಷರು ಗ್ರಂಥಗಳನ್ನು ಪ್ರಕಟನೆಗೆ ಸೂಚಿಸಿದೆ. ಜಯರಾಮ ಸೇವಾಮಂಡಳಿ ಸಮಿತಿ ನನ್ನ ಸೂಚನೆಯನ್ನು ಅಂಗೀಕರಿಸಿ ಆ ಗ್ರಂಥಗಳನ್ನು ಪ್ರಕಟಿಸುತ್ತಿದ್ದಾರೆ ಅದೇ ಸಮಯದಲ್ಲಿ ಕನ್ನಡ ಸಂಗೀತಗಾರರಿಗೆ, ಭಜನಾಭಕ್ತರಿಗೆ, ಯುವಜನರಿಗೆ, ಮಹಿಳೆಯರಿಗೆ, ಓದಲು ಹಾಡಲು ಅನುಕೂಲವಾಗುವಂತೆ ಸಮಗ್ರ ಕನ್ನಡ ಶ್ರೀರಾಮನ ಕೀರ್ತನೆಗಳ ಸಂಗ್ರಹವನ್ನು ಪ್ರಕಟಿಸಬಹುದಲ್ಲವೇ ಎಂದಾಗ ಅದಕ್ಕೆ ಬಂದ ವ್ಯವಸ್ಥಾಪಕರು ಒಳ್ಳೆಯ ಆಲೋಚನೆ ಆದರೆ ಆ ಕೆಲಸವನ್ನು ನೀವೇ ಮಾಡಬೇಕು, ನಾವು ಪ್ರಕಟಿಸುತ್ತೇವೆ ಎಂದರು.

ಹಲವು ವರ್ಷಗಳಿಂದ ಕನ್ನಡ ಶ್ರೀರಾಮನ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸಬೇಕೆಂಬ ಪ್ರಯತ್ನದಲ್ಲಿದ್ದ ನನಗೆ ನಡೆಯುತ್ತಿದ್ದವನು ನಿಧಿಯನ್ನು ಎಡವಿದಂತಾಯಿತು ಈಗ್ರಂಥ ಶ್ರೀರಾಮನ ಸೇವೆಯೆಂದು ೨೦೨೪ರ ಜನವರಿ ೨೨ರಲ್ಲಿ ನಡೆಯಲಿರುವ ಅಯೋಧ್ಯಾ ಶ್ರೀರಾಮಮಂದಿರದ ಉದ್ಘಾಟನೆ ನೆನಪಿಗೆ ಪ್ರಕಟವಾದರೆ ನನ್ನದೂ ಒಂದು ಅಳಿಲಸೇವೆ ಎಂದು ಒಪ್ಪಿಕೊಂಡೆ. ಅದರೆ ದೂರದಬೆಟ್ಟನುಣ್ಣಗೆ ಎಂಬಂತೆ ಸಂಗ್ರಹದ ಕೆಲಸತಾನೇ ಎಂದು ಭಾವಿಸಿಕೊಂಡು ಸಂಗ್ರಹಕ್ಕೆ ಸಂಪಾದನೆಗೆ ಕೈಹಾಕಿದಮೇಲೆ ಅದರ ಆಳ-ಅಗಲ ಅರಿವಾಗಿ ಬಹಳ ಶ್ರಮದಿಂದ ಕೀರ್ತನೆಗಳನ್ನು ಸಂಗ್ರಹವನ್ನು ಸಿದ್ದಪಡಿಸಿದ್ದೇನೆ ೧೯೨೪ರ ಜನವರಿ ೨೨ರ ವೇಳೆಗೆ ಗ್ರಂಥ ಸಿದ್ಧವಾಗಬೇಕಾಗಿದ್ದ ಕಾರಣ ೧೯೦೦ನೇ ಇಸವಿಗೆ ಮುಂಚೆ ಹುಟ್ಟಿದ ಹರಿದಾಸರ ಕನ್ನಡ ಶ್ರೀರಾಮನ ಕೀರ್ತನೆಗಳು ಸಾವಿರಕ್ಕೂ ಹೆಚ್ಚಿಗೆ ಸಿಗುತ್ತದೆ ಎಂದು ತಿಳಿಯುತ್ತಲೇ ಆಪೈಕಿ ೫೦೦ ಕೀರ್ತನೆಗಳನ್ನು ಮಾತ್ರ ಸಂಗ್ರಹಿಸಿ-ಸಂಪಾದಿಸಿ ಪ್ರಕಟನೆಗೆ ಸಿದ್ಧಗೊಳಿಸಿರುವೆ.

೨೦ನೇ ಶತಮಾನ ಒಂದರಲ್ಲೇ (೧೯೦೧ ರಿಂದ ೨೦೦೦ ವರೆಗೆ) ಜನಿಸಿದ

ರಾಮಭಕ್ತರು, ಸಾಹಿತಿಗಳು ಕವಿಗಳು, ವಿದ್ವಾಂಸರು, ಮಹಿಳೆಯರು ರಚಿಸಿದ ಶ್ರೀರಾಮನ ಕೀರ್ತನೆಗಳೇ ಒಂದು ಸಾವಿರಕ್ಕೂ ಹೆಚ್ಚಿರುವುದು ಕಂಡುಬಂತು, ಅವುಗಳನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕು ಎಂದು ನಿರ್ಧರಿಸಿದೆ. ಏಕೆಂದರೆ ಅಯೋಧ್ಯೆಯ ಶ್ರೀರಾಮಮಂದಿರದ ಉದ್ಘಾಟನೆ ನೆನಪಿಗೆ (ಜನವರಿ ೨೦೨೪) ಈ ಗ್ರಂಥ ಬಿಡುಗಡೆ ಆಗಲು ಕಾಲಮಿತಿ ಪುಟಗಳಮಿತಿ ಗೊತ್ತುಮಾಡಿದ್ದರಿಂದ ೫೦೦ ಕೀರ್ತನೆಗಳ ಸಂಗ್ರಹವನ್ನು ಮೊದಲಸಂಪುಟವನ್ನಾಗಿ ಸಿದ್ಧಪಡಿಸಿದ್ದೇನೆ.

ಗ್ರಂಥ ಸಂಪಾದನೆ

- ಶ್ರೀರಾಮನ ಕೀರ್ತನೆಗಳನ್ನು ಸಂಗ್ರಹಿಸಿ ಸಂಪಾದಿಸುವ ಸಂದರ್ಭದಲ್ಲಿ ಅನುಸರಿಸಿದ ಕ್ರಮವನ್ನು ಕುರಿತು ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದೇನೆ.
- ಚರಣಗಳ ಸಾಲುಗಳಲ್ಲಿ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದುದ್ದನ್ನು ಸರಿಪಡಿಸಿದೆ ಒಂದು ಚರಣದಲ್ಲಿ ೪ ಸಾಲು ೨ನೇ ಚರಣದಲ್ಲಿ ೫ ಸಾಲುಗಳು ಇತ್ಯಾದಿಗಳನ್ನು ಪ್ರಸಂಗಾನಾಸಾರ, ಅರ್ಥಾನುಸಾರ ಸಮಸಾಲುಗಳ ಚರಣಗಳನ್ನಾಗಿ ಪರಿವರ್ತಿಸಿದೆ.
- ಪದಚ್ಛೇದ ಅರ್ಥಹೀನವಾಗಿ ಅಪಾರವಾಗಿದ್ದು ಅವುಗಳನ್ನು ಸೂಕ್ತವಾಗಿ ಅರ್ಥಪೂರ್ಣ ಸಮಾಸಪದಗಳನ್ನಾಗಿ ಮಾಡಿದೆ.
- ಸ್ಥಳೀಯ ಭಾಷೆಯ ಬಳಕೆಯ ಪದಗಳನ್ನು ಕೆಲವೆಡೆ ಹಾಗೇ ಇಡಲಾಗಿದೆ ಸೂಕ್ತವೆನಿಸಿದ ಕಡೆ ಅದರರೂಪಗಳನ್ನು ತಿದ್ದಿದೆ.
- ಪ್ರತಿಕೀರ್ತನೆಯ ಮೊದಲಸಾಲನ್ನು ದಪ್ಪಕ್ಷರಗಳಲ್ಲಿ ಕೀರ್ತನೆಯ ಶೀರ್ಷಿಕೆಯನ್ನಾಗಿ ಮಾಡಿದೆ.
- ಮೊದಲಬಾರಿಗೆ ಪ್ರತಿಕೀರ್ತನೆಯ ಅಡಿಯಲ್ಲಿ ಸಣ್ಣಕ್ಕರಗಳಲ್ಲಿ ದಾಸರ ಅಂಕಿತ / ನಿಜನಾಮ / ಜೀವಿತಕಾಲವನ್ನು ಕೊಟ್ಟಿದೆ. ಸಾಧ್ಯವಾದ್ದಷ್ಟು ಕಾಲಾನುಕ್ರಮದಲ್ಲಿ ಕೀರ್ತನೆಗಳನ್ನು ಕೊಟ್ಟಿದೆ.
- ಕ್ರಿ.ಶ ೧೯೦೦ಕ್ಕೆ ಮೊದಲು ಜನಿಸಿದ ಹರಿದಾಸ – ಹರಿದಾಸರ ಶ್ರೀರಾಮ ಕೀರ್ತನೆಗಳನ್ನು ಮಾತ್ರ ಆಯ್ದುಕೊಂಡಿದೆ.
- ಸುಳಾದಿ, ಉಗಾಭೋಗ, ಲಾವಣಿ, ಷಟ್ಪದಿ, ಕಂದ ಮೊದಲಾದ ಛಂದಗಳಲ್ಲಿ ರಚಿತ ಶ್ರೀರಾಮ ಕೀರ್ತನೆಗಳನ್ನು ಆಯ್ಕೆಮಾಡಿಕೊಂಡಿಲ್ಲ.

- ಕೇವಲ ಪಲ್ಲವಿ, ಅನುಪಲ್ಲವಿ (ಇರಬಹುದು - ಇರದಿರಬಹುದು) ಅಂಕಿತ ಕೆಲವು ಚರಣಗಳು (೧ ರಿಂದ ೧೩) ಇರುವ ಕೀರ್ತನೆಗಳನ್ನೇ ಆಯ್ಕೆಮಾಡಿದೆ.

- ರಾಮಾಯಣದ ಕಥೆಯನ್ನು ಕೇಳುವ ದೀರ್ಘಕೀರ್ತನೆಗಳಿವೆ ನಾಟಕಗಳ ಪದ್ಯಗಳು ಕಿರುಕಾವ್ಯಗಳೇ ಇವೆ. ಅವುಗಳನ್ನು ಕೈಬಿಟ್ಟಿದೆ.

- ಅತಿ ಸಂಕ್ಷಿಪ್ತವಾಗಿ ರಾಮಾಯಣದ ಕಥೆ ಹೇಳುವ ಅಥವಾ ಕಥಾಪ್ರಸಂಗ ತಿಳಿಸುವ ಕೆಲವು ಶ್ರೀರಾಮ ಕೀರ್ತನೆಗಳನ್ನು ಆಯ್ದಿದೆ.

- ರಾಮಾಯಣದ (ಕಂಪೆನಿ) ನಾಟಕಗಳಲ್ಲಿ ಕಥೆಯನ್ನು ಹೇಳುವ ಕೀರ್ತನೆಗಳು (ಕಥೆಯನ್ನೇ ಕೀರ್ತನೆರೂಪಮಾಡಿದ ಕೀರ್ತನೆಗಳು)ಧಾರಾಳವಾಗಿವೆ. ಆವುಗಳನ್ನು ಬಿಡಲಾಗಿದೆ. ಅವುಗಳನ್ನು ಬಿಟ್ಟು ಶ್ರೀರಾಮನ ಗುಣಾತಿಶಯಗಳನ್ನು ತಿಳಿಸುವ ಸಂಗೀತಕಾರರು, ಭಜನಕಾರರು ಹಾಡಲು ಅನುಕೂಲವಾಗುವಂಥ ಕೀರ್ತನೆಗಳನ್ನು ಆರಿಸಿದೆ.

- ಸಂಪ್ರದಾಯದ ಹಾಡುಗಳಲ್ಲಿ ಷೋಡಶಸಂಸ್ಕಾರದ ಹಾಡುಗಳಲ್ಲಿ ಸಂಪ್ರದಾಯದ ಹಾಡುಗಳಲ್ಲಿ ಶ್ರೀರಾಮನ ಕೀರ್ತನೆಗಳು ಸಾಕಷ್ಟಿವೆ. ವ್ರತನೋಂಪಿ ಕೀರ್ತನೆಗಳಲ್ಲೂ ಶ್ರೀರಾಮನ ಕೀರ್ತನೆಗಳಿವೆ. ಅವುಗಳಲ್ಲಿ ೧೯೦೦ಕ್ಕೆ ಮುಂಚೆ ರಚಿತವಾಗಿರುವ ಎಂದರೆ ೧೯೦೦ಕ್ಕೆ ಮುಂಚೆ ಜನಿಸಿದ ಹರಿದಾಸರು ರಚಿಸಿದ ಸಂಪ್ರದಾಯದ ಕೀರ್ತನೆಗಳನ್ನು ಮಾತ್ರ ಆರಿಸಿದೆ.

- ೨೦ನೇ ಶತಮಾನದ ಅನೇಕ ಹರಿದಾಸರು ಹರಿದಾಸಿಯರು ಇತರ ಪ್ರತಿಭಾನ್ವಿತ ಕವಯಿತ್ರಿಯರು ರಚಿಸಿದಕೀರ್ತನೆಗಳು ಸಾಕಷ್ಟು ಎಂದರೆ ಸಾವಿರಾರು ಕೀರ್ತನೆಗಳಿವೆ. ೨೦ನೇ ಶತಮಾನದವರಿಂದ ರಚಿತವಾದ ಸಂಪ್ರದಾಯದ ಹಾಡುಗಳೂ ಇವೆ. ಇವುಗಳಲ್ಲಿ ಕಂಡುಬರುವ ಶ್ರೀರಾಮನ ಕೀರ್ತನೆಗಳನ್ನು ಪ್ರತ್ಯೇಕಸಂಪುಟವನ್ನಾಗಿ ಪ್ರಕಟಿಸಲು ಉದ್ದೇಶಿಸಿರುವ ಕಾರಣ ಅವುಗಳನ್ನು ಇಲ್ಲಿಸೇರಿಸಿಲ್ಲ.

- ಸಾಮಾನ್ಯವಾಗಿ ಹರಿದಾಸರ ಕೀರ್ತನೆಗಳಲ್ಲಿ ೩, ೫, ೭, ೯, ೧೧, ೧೩, ೧೫ ಇತ್ಯಾದಿ ಬಿಡಿಸಂಖ್ಯೆಗಳ ಚರಣಗಳಿರುತ್ತವೆ ಏಕೆಕಾರಣ ಗೊತ್ತಿಲ್ಲ. ಆದರೆ ಅನೇಕ ಹರಿದಾಸರು ಒಂದು ಚರಣದ ಕೀರ್ತನೆ ಮತ್ತು ಸಮಸಂಖ್ಯೆಯ ಚರಣಗಳ ಕೀರ್ತನೆಗಳನ್ನು ರಚಿಸಿದ್ದಾರೆ ಅವುಗಳಲ್ಲಿ ಸೂಕ್ತವಾದುವನ್ನು ಆರಿಸಿದೆ.

- ಮುಖ್ಯವಾಗಿ ಕೀರ್ತನೆಗಳ ಆಯ್ಕೆಗೆ ೧೯೦೦ಕ್ಕೆ ಮುಂಚೆ ಜನಿಸಿದ ಹರಿದಾಸರ ಕೀರ್ತನೆಗಳನ್ನು ಮಾತ್ರ ಆಯ್ಕೆಮಾಡಲು ಕನ್ನಡ ಸಂಸ್ಕೃತಿ ಇಲಾಖೆ ೩೫

ಸಂಪುಟಗಳನ್ನು (೫೦ ಭಾಗಗಳನ್ನು ಪ್ರಕಟಿಸಿದೆ) ಅವುಗಳನ್ನು ಆಧಾರಮಾಡಿಕೊಡು ಶ್ರೀರಾಮನ ಕೀರ್ತನೆಗಳನ್ನು ಆಯ್ಕೆಮಾಡಿದೆ.

- ದಾಸಸಾಹಿತ್ಯದ ಇತರರಿಂದ ಸಂಪಾದಿತವಾದ ಪರಿಶೋಧಿತ ಕೀರ್ತನ ಸಂಪುಟಗಳನ್ನು ಶ್ರೀರಾಮನ ಕೀರ್ತನೆಗಳ ಆಯ್ಕೆಗೆ ಬಳಸಿಕೊಂಡಿದೆ.

- ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದ ಹರಿದಾಸರ ಕೀರ್ತನೆಗಳ ಸಂಪುಟಗಳಲ್ಲಿರುವ ಪಾಠಾಂತರಗಳನ್ನೇ (ಕೆಲವೊಮ್ಮೆ ಅವು ಸೂಕ್ತ-ವೆನಿಸದಿದ್ದರೂ) ಕೊಟ್ಟಿದೆ.

- ಸಾಧ್ಯವಿದ್ದಷ್ಟು ಇತರ ಪರಿಷ್ಕೃತ ಕೀರ್ತನೆಗಳ ಸಂಪುಟಗಳನ್ನು ಗಮನಿಸಿ ಹಲವಾರೆಡೆ ಪಾಠಾಂತರಗಳನ್ನು ತಿದ್ದಿದೆ ಆದರೂ ಏಕೈಕ ಹಸ್ತಪ್ರತಿ ಆಧಾರವಾದ ಕಾರಣ ಅನೇಕಕಡೆ ಶುದ್ಧಪಾಠಾಂತರಗಳನ್ನು ಕೊಡಲು ಸಾಧ್ಯವಾಗಿಲ್ಲ.

- ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದ ೧೫೦೦೦ಕ್ಕೆ ಮಿಗಿಲಾದ ಕೀರ್ತನೆಗಳು ೫೦ ಸಂಪುಟಗಳು ಕನ್ನಡಕ್ಕೆ ಅಪೂರ್ವಕೊಡುಗೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವುಗಳ ಮುದ್ರಣ ಕಾಲದಲ್ಲಿ ಅಚ್ಚುಗಾರರು ಅಂತಿಮಕರಡಿನ ಅಚ್ಚಿನದೋಷಗಳನ್ನು ತಿದ್ದಿದಪ್ರತಿಯುನ್ನು ಕರಡಚ್ಚುತಿದ್ದುಗಾರರಿಗೆ ಕೊಡದಿದ್ದರಿಂದ ಸಾಕಷ್ಟು ಸ್ಖಾಲಿತ್ಯಗಳಿವೆ. ಹಾಗಾಗಿ ಇಲ್ಲಿಯೂ ಅವುದೋಷಪೂರ್ಣಪಾಠಗಳಾಗಿ ಉಳಿದಿವೆ ಈಗ ಸಮಗ್ರ ದಾಸಸಾಹಿತ್ಯದ ದ್ವಿತೀಯ ಮುದ್ರಣವಾಗುತ್ತಿದೆ ಎಂಬ ಸುದ್ದಿಯಿದೆ. ಆ ಸಂದರ್ಭದಲ್ಲಿ ಆಯಾ ಸಂಪುಟಗಳ ಸಂಪಾದಕರಿಂದ ಹಾಗೂ ಇತರರಿಂದ ಸ್ಖಾಲಿತ್ಯಗಳನ್ನು ತಿದ್ದಿಸಬೇಕಾಗಿದೆ.

- ೧೯೦೦ಕ್ಕೆ ಮುಂಚೆ ಜನಿಸಿದ ಎಲ್ಲ ಹರಿದಾಸರ ಹತ್ತಾರು ಕೀರ್ತನೆಗಳನ್ನು ಸಮಗ್ರ ದಾಸಸಾಹಿತ್ಯದಲ್ಲಿ ಸಂಗ್ರಹಗೊಂಡಿಲ್ಲ ಗಮನಕ್ಕೆ ಬಂದ ಅಂಥ ಹತ್ತಾರು ಗ್ರಂಥಗಳ ಪಟ್ಟಿಯನ್ನು ಶ್ರೀನಿವಾಸಹಾವನೂರರು (ಸಮಗ್ರ ದಾಸಸಾಹಿತ್ಯ ಪ್ರಕಟನೆಯ ಪ್ರಧಾನ ಸಂಪಾದಕರು) ತಮ್ಮ ಸಮಗ್ರ ಹರಿದಾಸ ವಾಙ್ಮಯ ಕೋಶವೆಂಬ (೨೦೧೪) ೧೪೦ ಹರಿದಾಸರ (೧೫೫೦೦ ಕೀರ್ತನೆಗಳ ಸೂಚಿ) ಗ್ರಂಥದಲ್ಲಿ ೧೯೦೦ಕ್ಕೆ ಮುಂಚೆ ಜನಿಸಿದವರ ಹಲವರ ಕೀರ್ತನೆಗಳು ಸಮಗ್ರ ದಾಸಸಾಹಿತ್ಯ ಪ್ರಕಟನೆಯಲ್ಲಿ ಸೇರಿಲ್ಲದೆ ಇರುವುದನ್ನು ಗಮನಿಸಿ ಮುಂದಿನ ಮುದ್ರಣದಲ್ಲಿ ಸೇರಿಸಲು ೨೩ ಗ್ರಂಥಗಳ ಪಟ್ಟಿಯೊಂದನ್ನು ಪುಟ ೫೪ರಲ್ಲಿ ಕೊಟ್ಟಿದ್ದಾರೆ, ಅವುಗಳಿಂದಲೂ ಅದರ ಜತೆಗೆ ಅವರ ಗಮನಕ್ಕೆ ಬಾರದ ೧೯೦೦ಕ್ಕು ಮುಂಚಿನ ದಾಸರ ಇತರ ಗ್ರಂಥಗಳಿಂದಲೂ ಶ್ರೀರಾಮನ ಕೀರ್ತನೆಗಳನ್ನು ಇಲ್ಲಿ ಆರಿಸಿದೆ.

- ಶ್ರೀನಿವಾಸ ಹಾವನೂರರು ತಮ್ಮ ಸಮಗ್ರ ಹರಿದಾಸ ವಾಙ್ಮಯ ಕೋಶದಲ್ಲಿ ಪಟ್ಟಿಮಾಡಿದ ಕೀರ್ತನೆಗಳಲ್ಲಿ ಬಂದಿರುವ ವಿಷಯಗಳ ಅಕಾರಾದಿಸೂಚಿಯಲ್ಲಿ (ಪ್ರಕರಣ ೫ ಪುಟ ೫೮) ಶ್ರೀರಾಮಚಂದ್ರ ಎಂಬ ಶೀರ್ಷಿಕೆಯಲ್ಲಿ (ಪುಟ ೪೨೧ - ೪೩೦) ವರೆಗೆ ಸುಮಾರು ೩೭೫ ಕೀರ್ತನೆಗಳನ್ನು ಶ್ರೀರಾಮನ ಕೀರ್ತನೆಗಳನ್ನು ಪಟ್ಟಿಮಾಡಿಕೊಟ್ಟಿದ್ದಾರೆ ಆ ಪಟ್ಟಿಯನ್ನು ಬಳಸಿಕೊಂಡು ಆ ಪಟ್ಟಿಯಲ್ಲಿ ಇಲ್ಲದ ೧೦೦ಕ್ಕು ಹೆಚ್ಚಿನ ಶ್ರೀರಾಮನ ಕೀರ್ತನೆಗಳನ್ನು ಈ ಸಂಗ್ರಹದಲ್ಲಿ ಸೇರಿಸಿದ್ದೇನೆ.
- ಶ್ರೀರಾಮಚಂದ್ರನ ಕೀರ್ತನೆಗಳು ಯಾವಯಾವ ಸಂಪುಟದಲ್ಲಿ ಬಂದಿದೆ ಎಂಬುದನ್ನು ಹಾವನೂರರು ಕೊಟ್ಟಿದ್ದಾರೆ ಆದರೆ ಸಂಪುಟದಲ್ಲಿ ಎಷ್ಟನೇ ಕೀರ್ತನೆ ಎಷ್ಟನೇ ಪುಟದಲ್ಲಿ ಬಂದಿದೆ ಎಂಬುದನ್ನು ತಿಳಿಸಿಲ್ಲ ಅದನ್ನು ಪತ್ತೆಹಚ್ಚಿ ಕೀರ್ತನೆಗಳನ್ನು ಆಯ್ಕೆಮಾಡಿದೆ.
- ಸಮಗ್ರ ಹರಿದಾಸ ವಾಙ್ಮಯ ಕೋಶದಲ್ಲಿ ಪುಟ ೩೩೮ ರಿಂದ ೩೪೦ ವರೆಗೆ ಸಮಗ್ರ ರಾಮಾಯಣದಲ್ಲಿ ಬರುವ ಭರತ, ಅಹಲ್ಯೆ, ಹನುಮ, ಲವಕುಶ, ಸೀತೆ ಮೊದಲಾದವರನ್ನು ಕುರಿತ ಕೀರ್ತನೆಗಳ ಪಟ್ಟಿಕೊಟ್ಟಿದ್ಯಾರೆ. ಅವುಗಳನ್ನು ಇಲ್ಲಿ ಪರಿಗಣಿಸಿಲ್ಲ ಕೇವಲ ಶ್ರೀರಾಮನನ್ನು ಕುರಿತ ಕೀರ್ತನೆಗಳನ್ನಷ್ಟೆ ಗಮನಿಸಿದೆ.
- ೧೫೫೦೦ ಕೀರ್ತನೆಗಳ ೫೦ ಭಾಗಗಳ ಗ್ರಂಥಗಳು ೨೦೦೩ರಲ್ಲಿ ಪ್ರಕಟವಾಗಿ ಸಾಕಷ್ಟು ವರ್ಷಗಳಾದರೂ ಅಪಾರಬೇಡಿಕೆ ಇದ್ದರೂ ಸರ್ಕಾರ ಮರುಮುದ್ರಣಮಾಡಿಲ್ಲ. ವಚನ ಸಾಹಿತ್ಯ-ದಾಸಸಾಹಿತ್ಯ ಕನ್ನಡಶಾರದೆಯ ಎರಡು ಕಣ್ಣುಗಳಿದ್ದಂತೆ ಇದರ ಬಗ್ಗೆ ತಾರತಮ್ಯ ಸಲ್ಲದು ಆದಷ್ಟುಬೇಗನೆ ವಚನಸಾಹಿತ್ಯ ಸಂಪುಟಗಳು ಮರು ಮುದ್ರಣವಾಗಿರುವಂತೆ ಪರಿಷ್ಕೃತ ಸಮಗ್ರದಾಸಸಾಹಿತ್ಯ ಪ್ರಕಟನೆ ಆಗುವುದು ಅಗತ್ಯವಿದೆ. ಮರುಮುದ್ರಣಕ್ಕೆ ಅನುಕೂಲವಾಗಲೆಂದು ಅನುಬಂಧವಾಗಿ ೧೯೦೦ಕ್ಕೆ ಮುಂಚೆ ಜನಿಸಿದ ಹರಿದಾಸರ ಕೀರ್ತನೆಗಳ ಪ್ರಕಟನೆ ಶ್ರೀರಾಮನ ಕೀರ್ತನೆಗಳಿರುವ ಸಂಗ್ರಹಗಳ ಪಟ್ಟಿಯನ್ನು ಅನುಬಂಧದಲ್ಲಿ ಕೊಡಲಾಗಿದೆ ದಾಸಸಾಹಿತ್ಯದ ಅಭ್ಯಾಸಿಗಳಿಗೆ ಉಪಯುಕ್ತವಿದು ಎಂದು ಭಾವಿಸಿದ್ದೇನೆ.

ಕೃತಜ್ಞತೆಗಳು

ಹರಿದಾಸರು ಹಾಡಿದ ೫೦೦ ಕನ್ನಡ ಶ್ರೀರಾಮಕೀರ್ತನೆಗಳ ಗ್ರಂಥವನ್ನು ಸಿದ್ಧಪಡಿಸಲು ಕಾರಣಕರ್ತರಾದ ಜಯರಾಮಸೇವಾಮಂಡಳಿಗೆ ಅದರ ಗೌರವ ಕಾರ್ಯದರ್ಶಿಗಳಾದ ಎಸ್.ಕೆ. ಗೋಪಾಲಕೃಷ್ಣ ಮತ್ತು ಮಿತ್ರರಾದ ಚಂದ್ರಶೇಖರ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಪ್ರಕಟನೆಗೆ ನೆರವಿತ್ತ ಶ್ರೀ ವಿ. ಶ್ರೀನಿವಾಸ್‌ರವರಿಗೆ

ಧನ್ಯವಾದಗಳು ಗ್ರಂಥ ಪ್ರಕಟನೆಗೆ ಒಪ್ಪಿಗೆಯಿತ್ತ ಜಯರಾಮಸೇವಾ ಮಂಡಳಿ ಅಧಿಕಾರಿವರ್ಗ, ಪ್ರಕಟನಸಮಿತಿ ಮತ್ತು ಸದಸ್ಯರಿಗೆ ಆಭಾರಿಆಗಿದ್ದೇನೆ.

ಈ ಗ್ರಂಥವನ್ನು ಸಂಪಾದಿಸುವಾಗ ಹಲವಾರು ವಿಧದಲ್ಲಿ ಸಹಾಯಮಾಡಿ ಒತ್ತಾಸೆನೀಡಿದ ನನ್ನ ಸಹಧರ್ಮಿಣಿ ಎಂ.ಆರ್. ಲಕ್ಷ್ಮೀದೇವಿಗೆ ಪ್ರೋತ್ಸಾಹಕ ನುಡಿಗಳನ್ನಾಡಿದ ಅಮೇರಿಕೆಯಲ್ಲಿರುವ ವಿಜ್ಞಾನಿ, ನನ್ನ ಮಗಳು ಡಾ. ಕ್ಷಮಾಅಶ್ವತ್ಥಳನ್ನು ನೆನೆಯುವುದು ನನ್ನ ಕರ್ತವ್ಯವಾಗಿದೆ.

ಈ ಗ್ರಂಥರಚನೆಗೆ ತೊಡಗಿದಾಗ ಈ ಬಗೆಯ ಪ್ರಯತ್ನವನ್ನು ಮೆಚ್ಚಿ ಕೀರ್ತನರಚನಾಕಾರ್ತಿ ಗೀತಾಶೇಷಾದ್ರಿ, ನಾ. ಗೀತಾಚಾರ್ಯ, ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ ಮೊದಲಾದವರು ಮೆಚ್ಚುಗೆ ಮಾತುಗಳನ್ನಾಡಿ ಸ್ಫೂರ್ತಿತುಂಬಿದ್ದಾರೆ ಅವರಿಗೆ ನನ್ನ ವಂದನೆಗಳು.

ಗ್ರಂಥವನ್ನು ಅಚ್ಚುಕಟ್ಟಾಗಿ ತಪ್ಪಿಲ್ಲದೆ ಡಿ.ಟಿ.ಪಿ ಮಾಡಿಸಿಕೊಟ್ಟ ಚಿತ್ರಕಲಾವಿದ ಎನ್.ಎಚ್.ಠಾಕೂರ್ ಅವರು ಬೇಸರಗೊಳ್ಳದೆ ಕರಡಚ್ಚಿನ ತಪ್ಪುಗಳನ್ನು ಸರಿಪಡಿಸಿ ಪುಸ್ತಕವನ್ನು ಸಿದ್ದಪಡಿಸಿದ್ದಾರೆ ಅವರ ಸಿಬ್ಬಂದಿಯ ಶ್ರಮ ಶ್ರದ್ಧೆಯನ್ನು ಮೆಚ್ಚುವಂಥದ್ದು.

ಸುಂದರ ರಕ್ಷಾಪತ್ರವನ್ನು ರಚಿಸಿಕೊಟ್ಟ ಕಲಾವಿದ ಶರತ್ ಹರಿಹರಪುರ ಸತೀಶ್ ಅವರಿಗೆ ಗ್ರಂಥವನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟ ಉಷಾ ಪ್ರಿಂಟ್ಸ್, (ಕಾಮಾಕ್ಷಿಪಾಳ್ಯ) ಅವರಿಗೆ ಕೃತಜ್ಞತೆಯಿಂದ ಸ್ಮರಿಸುವುದು ನನ್ನ ಕರ್ತವ್ಯವಾಗಿದೆ.

ಎಲ್ಲಕ್ಕಿಂತ ಮಿಗಿಲಾಗಿ ಶ್ರೀರಾಮನನ್ನು ಕುರಿತು ಕೀರ್ತನೆಗಳನ್ನು ಹಾಡಿ ನಲಿದ ಕನ್ನಡ ಶಾರದೆಯ ಸೊಬಗನ್ನು ಹೆಚ್ಚಿಸಿದ ಹರಿದಾಸರಿಗೆ ಎಷ್ಟೇ ಕೃತಜ್ಞತೆಗಳನ್ನು ಸಲ್ಲಿಸಿದರೂ ಸಾಲದು. ಹರಿದಾಸ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ ಶ್ರೀನಿವಾಸ ಹಾವನೂರಅವರು ನನ್ನ ದಾಸಸಾಹಿತ್ಯದ ಸೇವೆಗೆ ಸ್ಫೂರ್ತಿದಾಯಕರೂ ಮಾರ್ಗದರ್ಶಿಗಳೂ ಆಗಿದ್ದರು ಅವರಿಗೆ ನಾನು ಸದಾಋಣಿ. ಹರಿದಾಸರು ಹಾಡಿದ ೫೦೦ ಕನ್ನಡ ಶ್ರೀರಾಮನ ಕೀರ್ತನೆಗಳ ಗ್ರಂಥ ನಿಮ್ಮ ಕೈಯಲ್ಲಿದೆ ಓದಿ ಹಾಡಿ ಪ್ರೋತ್ಸಾಹಿಸಿದರೆ. ತಿಳಿದವರು ತಪ್ಪುಗಳನ್ನು ತಿಳಿಸಿದರೆ ನಾನು ಧನ್ಯನಾಗುತ್ತೇನೆ.

~ **ಪ್ರೊ ಜಿ. ಅಶ್ವತ್ಥನಾರಾಯಣ.**
ಗ್ರಂಥ ಸಂಪಾದಕ

ಕೀರ್ತನೆಗಳ ಪರಿವಿಡಿ

೧೨೬	**ಜಯಜಯ ರಾಘವೇಂದ್ರ ಸಜ್ಜನ ಪಯೋನಿಧಿ ಚಂದ್ರ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೦
೧೨೭	**ಜಯರಾಮ ಜಯರಾಮ ರಘುವಂಶಾಬ್ಧಿಸೋಮ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೧
೧೨೮	**ವೈದೇಹೀ ರಮಣನೆ ನಮೋ ನಮೋ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೧
೧೨೯	**ಶರಣು ಶರಣು ಶ್ರೀರಾಮಚಂದ್ರನೆ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೧
೧೩೦	**ಶ್ರೀರಾಮ ರಘುಕುಲಸೋಮ ಕಾಮಿತ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೨
೧೩೧	**ಸಾಕೇತಾಧಿಪ ಸತ್ಯಸ್ವರೂಪ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೩
೧೩೨	**ನೋಡಿದ್ಯಾ ಶ್ರೀರಾಮನ ನೋಡಿದ್ಯಾ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೪
೧೩೩	**ಪಾಲಿಸ್ಯೆ ಪದ್ಮಾಕ್ಷ ಪಾದವೇ ಗತಿಯೆನಗೆ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೫
೧೩೪	**ರಘುರಾಮ ನೀನೆನ್ನ ಪಾಲಿಸ್ಯೆ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೬
೧೩೫	**ಶ್ರೀರಘುರಾಮ ಬಾರೋ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೭
೧೩೬	**ಲಾಲಿಮನುಕುಲತಿಲಕ ಮದನಾರಿಎನುತ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೭
೧೩೭	**ಜಯ ಮಂಗಳಂ ನಿತ್ಯ ಶುಭಮಂಗಳಂ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೮
೧೩೮	**ಜಯ ಜನಕಜಾಮಾತ ಜಯ ಜಾನಕೀಕಾಂತ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೨೯
೧೩೯	**ನೀಲಮೇಘಶ್ಯಾಮ ನಿಖಿಲ ಸದ್ಗುಣಧಾಮ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೦

೧೪೦	**ಕ್ಷೀರಾಜಾರಮಣ ಕ್ಷೀರಾಂಬುನಿಧಿಶಯನ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೦
೧೪೧	**ಮಾತಿನೊಳು ಕಡುಜಾಣ ನೀತಿಯೆಂಬುದು ಕಾಣ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೧
೧೪೨	**ದೃಢಚಿತ್ತ ದೊಳಗೆನ್ನ ಒಡೆಯನೀತಗೆ ಮುನ್ನ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೨
೧೪೩	**ಜನಕ ನೇನುತೆನ್ನ ಘನವಂತನಿವನೆಂದು** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೨
೧೪೪	**ಧುರಧೀರ ನಿವನೆಂದು ನೆರೆವೆರೆಯಲ್ಕೈ ತಂದು** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೩
೧೪೫	**ಬೇಡಿಕೊಂಬೆ ಹಸೆಗೇಳಲ್ಕೈ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೩
೧೪೬	**ಬಾರೆಂದು ಹಸೆಗೆ ಕರೆವೆನು** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೪
೧೪೭	**ಮಂಗಳಂ ರಘುರಾಮಗೆ ಜಯಮಂಗಳಂ** (ಶೇಷಗಿರೀಶ / ನಂಜನಗೂಡು ತಿರುಮಲಾಂಬಾ / ೧೮೮೭ – ೧೯೮೨)	೧೩೫
೧೪೮	**ಕರುಣಾನಿಧಿ ನೀ ಶ್ರೀರಾಮನಿನ್ನ** (ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)	೧೩೫
೧೪೯	**ರಘುರಾಮಗೆ ಬೆಳಗಿರೆ ಬೇಗ ಆರತಿ** (ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)	೧೩೬
೧೫೦	**ರಾಮ ನಿನ್ನಯ ಚರಿತೆ ರಘು** (ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)	೧೩೭
೧೫೧	**ಲಾಲಿ ರಘುಕುಲತಿಲಕ ಲಾವಣ್ಯ ಗುಣಧಾಮ** (ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)	೧೩೮
೧೫೨	**ನೆನೆ ಮನವನನುದಿನ ಹನುಮನೀಶನ** (ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)	೧೩೯
೧೫೩	**ನವರತ್ನ ಮಂಟಪದಿ ಮೆರೆವೊ ಸುಖಾಸನಕೆ** (ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)	೧೩೯

೧೫೪	**ಎಲ್ಯಾಡಿಲ್ಲಗೆ ಬಂದನೆ ಈತನು ಕೌಸಲ್ಯಾದೇವಿಯ** (ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ – ೧೯೦೩)	೧೪೦
೧೫೫	**ಕಂದನೆಂದೆನಿಸಿದ ಕೌಸಲ್ಯಾದೇವಿಗೆ ರಾಮ** (ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ – ೧೯೦೩)	೧೪೧
೧೫೬	**ನರಸಖ ನಾರಾಯಣಕೆರೆ ಪುರವಾಸ** (ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ – ೧೯೦೩)	೧೪೩
೧೫೭	**ರಾಮರಾಮ ಶ್ರೀರಘುರಾಮ ನೀಲಮೇಘ** (ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ – ೧೯೦೩)	೧೪೪
೧೫೮	**ಜಯ ಜನಕಜಾಪತೇ ರಾಮಾ ಜಯ** (ಶ್ರೀದವಿಠಲ / ದಾಸಪ್ಪ / ೧೭೪೦ – ೧೮೨೦)	೧೪೫
೧೫೯	**ನೋಡು ನೋಡೆಂಥಾ ರಘುವೀರ** (ಶ್ರೀದವಿಠಲ / ದಾಸಪ್ಪ / ೧೭೪೦ – ೧೮೨೦)	೧೪೫
೧೬೦	**ದಾಶರಥೇ ದಯಮಾಡೋ ನಿನ್ನ** (ಶ್ರೀದವಿಠಲ / ದಾಸಪ್ಪ / ೧೭೪೦ – ೧೮೨೦)	೧೪೬
೧೬೧	**ರಘುರಾಮನ ಪಾದವ ಹಿಡಿ ಹಿಡೀ** (ಶ್ರೀದವಿಠಲ / ದಾಸಪ್ಪ / ೧೭೪೦ – ೧೮೨೦)	೧೪೬
೧೬೨	**ರಾಮಚಂದ್ರ ನೀನೇ ಪಾಲಿಸೋ** (ಶ್ರೀದವಿಠಲ / ದಾಸಪ್ಪ / ೧೭೪೦ – ೧೮೨೦)	೧೪೭
೧೬೩	**ನೋಡಿರಯ್ಯ ಶ್ರೀರಾಮನ ಮೂರ್ತಿಯ** (ಸಿರಿವತ್ಸಾಂಕಿತ / ಚಿಕ್ಕೋಡಿಆಚಾರ್ಯ / ೧೯ ಶ ಆದಿ – ೨೦ಶ ಅಂತ್ಯ)	೧೪೮
೧೬೪	**ರಾಮ ರಕ್ಷಿಸೋ ಸೀತಾರಾಮ ರಕ್ಷಿಸೋ** (ಸಿರಿವತ್ಸಾಂಕಿತ / ಚಿಕ್ಕೋಡಿಆಚಾರ್ಯ / ೧೯ ಶ ಆದಿ – ೨೦ಶ ಅಂತ್ಯ)	೧೪೯
೧೬೫	**ಚರಣಕಮಲವನು ತೋರೋ** (ಸಿರಿವತ್ಸಾಂಕಿತ / ಚಿಕ್ಕೋಡಿಆಚಾರ್ಯ / ೧೯ ಶ ಆದಿ – ೨೦ಶ ಅಂತ್ಯ)	೧೫೦
೧೬೬	**ಎಂಥಾದ್ದು ರಾಮನ ರೂಪಿನ್ನೆಂಥಾದ್ದು** (ನರಸಿಂಹ ವಿಠಲ / ಕುಂಚೂರ ಹನುಮಂತಾಚಾರ್ಯ / ೧೯ ಶ.)	೧೫೦
೧೬೭	**ಶ್ರೀರಾಮನಾ ಅಡಿವಿಡಿವೆನು** (ನರಸಿಂಹ ವಿಠಲ / ಕುಂಚೂರ ಹನುಮಂತಾಚಾರ್ಯ / ೧೯ ಶ.)	೧೫೧

೧೯೬	**ನೀಲಮೇಘಶ್ಯಾಮ ರಾಮ** (ಲಕ್ಷ್ಮೀನಾರಾಯಣ / ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ / ೧೮೫೪ - ೧೯೨೪)	೧೭೭
೧೯೭	**ಪಾಲಿಸೋ ಪಂಕಜನೇತ್ರ ರಘು** (ರಾಜೇಶ ಹಯಮುಖ / ವಿಶ್ವೇಂದ್ರತೀರ್ಥ / ೧೮ ಶ. - ೧೯ ಶ.)	೧೭೮
೧೯೮	**ರಾಮನಾಥಸ್ವಾಮಿ ಪಾಲಿಸೋ** (ಗೋವಿಂದದಾಸ / ..../ ೧೯೦೨ - ೧೯೫೯)	೧೭೯
೧೯೯	**ಬಾರೋ ಬೇಗ ಬಾರೋ ರಾಮ** (ರಮಾಪತಿ / ವಾಸುದೇವ ಪ್ರಭು / ೧೯ ಶ. ಉತ್ತರಾರ್ಧ ?)	೧೭೯
೨೦೦	**ರಾಮಾ ರಾಮ ಎಂಬ ನಾಮ ಜಿಹ್ವೆಯೊಳಿರುವ** (ಕೆಳದಿರಾಮೇಶ / ಕೆಳದಿವೆಂಕಣ್ಣ / ಸು. ೧೭೭೫)	೧೮೦
೨೦೧	**ರಾಮಚಂದ್ರನೇ ನಿನ್ನ ಪದಯುಗ** (ವರದೇಶವಿಠಲ / ಸ್ವಾಮಿರಾಯ / ೧೮೦೭ - ೧೯೧೮)	೧೮೧
೨೦೨	**ರಾಮಹರೇ ಹರೇರಾಮ ಹರೇಕೃಷ್ಣ** (ವರದೇಶವಿಠಲ / ಸ್ವಾಮಿರಾಯ / ೧೮೦೭ - ೧೯೧೮)	೧೮೩
೨೦೩	**ಶ್ರೀರಾಮ ಜಯರಾಮ ಜಯ ಜಯತು ರಾಮ** (ವರದೇಶವಿಠಲ / ಸ್ವಾಮಿರಾಯ / ೧೮೦೭ - ೧೯೧೮)	೧೮೫
೨೦೪	**ಸ್ಮರಿಸುವೆ ಸದ್ಭಕ್ತಿಯಲಿ ಶ್ರೀರಾಮನ** (ವರದೇಶವಿಠಲ / ಸ್ವಾಮಿರಾಯ / ೧೮೦೭ - ೧೯೧೮)	೧೯೨
೨೦೫	**ಎಂಥ ಶೂರನೋ ಎಂಥ ಧೀರನೋ** (ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? - ೧೯೫೪)	೧೯೫
೨೦೬	**ಬಂದನು ರಘುವೀರ ರಣಧೀರ** (ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? - ೧೯೫೪)	೧೯೬
೨೦೭	**ಮಾತು ಮಾತಿಗೆ ಮರೆಯಬೇಡ ಸೀತಾರಾಮನ** (ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? - ೧೯೫೪)	೧೯೮
೨೦೮	**ರಾಮನ ನೋಡಿರೆ ರಘುಕುಲ ತಿಲಕನ** (ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? - ೧೯೫೪)	೧೯೯
೨೦೯	**ಆರೈದು ಸಲಹೋ ಎನ್ನ ಶ್ರೀರಾಮಚಂದ್ರ** (ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)	೨೦೧

೨೩೮	**ರಾಮ ರಾಜೀವ ಲೋಚನ** (ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ – ೧೯೬೯)	೨೨೮
೨೩೯	**ರಾಮಚಂದ್ರ ಪ್ರೇಮದಿ ಬಾ ಜನಕ** (ನರಹರಿ / ಪ್ರದ್ಯುಮ್ನತೀರ್ಥ / ೧೮೯೦ – ೧೯೨೫)	೨೨೯
೨೪೦	**ಕರುಣಿಸೆಲೊ ಮುಕುಂದಮಾಧವ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೨೯
೨೪೧	**ದಶರಥನಂದನ ದೀನ ದಯಾಪರ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೦
೨೪೨	**ದಶರಥ ರಾಮಹರೇ ಸೀತಾಪತೇ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೧
೨೪೩	**ರಾಮ ರಮಣಾ ರಘು** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೨
೨೪೪	**ರಾಮ ರಾಮ ರಾಮ ಎಂದು ಸ್ಮರಿಸೋ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೩
೨೪೫	**ರಾಮ ರಾಮ ರಾಮ ರಾಮಯೆಂದು** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೪
೨೪೬	**ರಾಮ ರಾಮ ರಾಮ ಶ್ರೀರಾಮನೆನ್ನಿರೋ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೪
೨೪೭	**ರಾಮ ರಾಮ ರಾಮ ಹರೇ ರಘು** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೫
೨೪೮	**ರಾಮ ರಾಮ ರಾಮ ರಾಮಸೀತಾರಾಮ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೬
೨೪೯	**ಶ್ರೀರಾಮ ಜಯರಾಮ ಶ್ರೀರಾಮರಾಮ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೩೯
೨೫೦	**ಶ್ರೀರಾಮ ರಾಮ ರಾಮಾ ರಘುಕುಲ ಅಬ್ಧಿಸೋಮಾ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೪೨
೨೫೧	**ಶ್ರೀರಾಮ ರಾಮನ ಭಜಿಸಿರೊ** (ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)	೨೪೩

೨೫೨	**ರಾಮನ ನೋಡಿರೈ ಮಂಗಳನಾಮನ ಪಾಡಿರೈ** (ಕಾರ್ಪರ ನರಹರಿದಾಸ / ಕೊಪ್ಪರ ಗಿರಿಯಚಾರ್ಯ / ೧೮೪೬ – ೧೯೭೯)	೨೪೪
೨೫೩	**ಆನಂದ ಆನಂದಪ್ರದವೋ ದಾಶರಥಿ ಧ್ಯಾನಾ** (ಶಾಮಸುಂದರವಿಠಲ / ಗುಂಡಾಚಾರ್ಯ /೧೮೭೬ – ೧೯೫೬)	೨೫೪
೨೫೪	**ರಘುರಾಮ ರಘುರಾಮ ಮುಗಿವೆ** (ಶಾಮಸುಂದರವಿಠಲ / ಗುಂಡಾಚಾರ್ಯ /೧೮೭೬ – ೧೯೫೬)	೨೪೬
೨೫೫	**ಮಂಗಳಗಾನ ವಿಲೋಲಾ ಮುನಿಪಾಲಾ** (ಶಾಮಸುಂದರವಿಠಲ / ಗುಂಡಾಚಾರ್ಯ /೧೮೭೬ – ೧೯೫೬)	೨೪೭
೨೫೬	**ಮನುಜಾವತಾರ ಶ್ರೀರಾಮನೆಂಬುದು ನಿಜವೆ** (ತಿರುಪತಿ ವೆಂಕಟ / ತಿಮ್ಮಪ್ಪಯ್ಯ / ೧೭೭೦ – ೧೮೬೦)	೨೪೮
೨೫೭	**ರಾಮ ರಕ್ಷ ಮಾಂ ರಾಮ ರಕ್ಷ ಮಾಂ** (ತಿರುಪತಿ ವೆಂಕಟ / ತಿಮ್ಮಪ್ಪಯ್ಯ / ೧೭೭೦ – ೧೮೬೦)	೨೪೯
೨೫೮	**ಜಗದ್ಗುರೋ ರಾಮ ತ್ರಾಹಿ ಶ್ರೀ ರಾಮಚಂದ್ರ** (ತಿರುಪತಿ ವೆಂಕಟ / ತಿಮ್ಮಪ್ಪಯ್ಯ / ೧೭೭೦ – ೧೮೬೦)	೨೫೦
೨೫೯	**ಬಿಟ್ಟಿರಲಾರೆ ನಿನ್ನ ಪಟ್ಟಾಭಿರಾಮಮೂರ್ತೇ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೧
೨೬೦	**ಮಂಗಳಂ ಮಂಗಳಂ ದಾಶರಥಿಗೆ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೨
೨೬೧	**ರಾಘವಂ ಸ್ಮರಾಮಿ ಸತತಂ ರಾಘವಂ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೩
೨೬೨	**ರಾಮ ದಯಾಳೂ ರಾಮ ದಯಾಳೂ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೩
೨೬೩	**ರಾಮ ಪಾಲಯ ಮಾಂ ಕೋದಂಡಪಾಣಿ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೬
೨೬೪	**ಬಾರೋ ಬಾರೋ ಭಾಗ್ಯನಿಧಿಯೇ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೭
೨೬೫	**ಲಾಲಿ ರಘುಕುಲಸೋಮ ರಾಜೇಂದ್ರರಾಮ** (ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)	೨೫೮

೩೦೮	**ಪರಿಭಾವಿಸೆ ತಾವಕರೂಪಂ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೦೭
೩೦೯	**ರಘುಕುಲಾಂಬುಧಿ ಚಂದ್ರನೆ ಪೊರೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೦೮
೩೧೦	**ರವಿಕುಲಾಂಬುಧಿ ಸೋಮನೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೦೮
೩೧೧	**ರವಿಕುಲಾಂಬುಧಿ ಪೂರ್ಣಚಂದ್ರ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೦೯
೩೧೨	**ರಾಮ ನಿನ್ನ ಭಜನೆಗೈಯುವೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೦
೩೧೩	**ರಾಮ ರಘುಕುಲ ಲಕ್ಷ್ಮಣಾಗ್ರಜ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೧
೩೧೪	**ಶ್ರೀಕಾಂತ ನಿನ್ನ ನಂಬಿದೆ ನಾಕೇಶವಂದ್ಯ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೨
೩೧೫	**ಸಲಹೈ ಸೀತಾಪತೇಲೋಲ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೨
೩೧೬	**ರಾಮ ಕಥಾಸುಧಾರಸಪಾನ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೩
೩೧೭	**ಚೆಂಡನಾಡಿದ ರಘುಕಲ ನಂದನಾಶ್ರಿತವ್ವಲ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೪
೩೧೮	**ದೃಷ್ಟಿತಾಕಿತೆ ನಿನಗೆ ಶ್ರೀರಾಮ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೪
೩೧೯	**ಮಂಗಳಂ ಶ್ರೀರಾಮಚಂದ್ರ ಭಂಗಿತಾ ಸುರೇಂದ್ರನೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೫
೩೨೦	**ಮಂಗಳಂ ಶ್ರೀರಾಮಚಂದ್ರ ಮಂಗಳಾಂಗಗೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೬
೩೨೧	**ಮಂಗಳಂ ಸುಗುಣಾಭಿರಾಮಗೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೬

೩೨೨	**ರಘುನಂದನ ಬಾರ್ಯೆ ಹಸೆಗೆ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೭
೩೨೩	**ರಘು ರಾಮಚಂದ್ರ ಬಾರ್ಯೆ ಹರೇ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೮
೩೨೪	**ರಾಮಪೀಠಮಾಶ್ರಯ ಕಾಮಕೋಟಿ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೯
೩೨೫	**ಲಾಲಿ ರವಿಕುಲಕಲಶ ಜಲಧಿವರ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೧೯
೩೨೬	**ನೀರೆಯರು ಸಾರುತ್ತ ಮುದದಿ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ – ೧೯೩೭)	೩೨೦
೩೨೭	**ಇಂದ್ರಾದಿ ಸುರರಾಧಿತ ಇನವಂಶ ಸಂಜಾತಾ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೧
೩೨೮	**ಇದ್ದೀಯಯ್ಯ ಎನ್ನೊಳಗೆ ನೀ ಇನಕುಲರಾಯ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೧
೩೨೯	**ಜಯ ಜಾನಕೀನಾಥ ಜಯ ಕುಶೀಲವ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೨
೩೩೦	**ಜಾನಕೀವರ ತೇ ಜಯ ಮಂಗಲಂ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೨
೩೩೧	**ಜಾನಕೀ ಮನೋಹರ ಪ್ರಭೋ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೩
೩೩೨	**ನಿತ್ಯ ಪರಿಪೂರ್ಣಕಾಮ ಪಟ್ಟಾಭಿರಾಮ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೪
೩೩೩	**ನಿದ್ರೆ ಗೈಯುವ ನಮ್ಮಸ್ವಾಮಿ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೬
೩೩೪	**ಪರಮಪುರಷ ರಾಘವ ಪಾಲಿಸೊ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೬
೩೩೫	**ಪರಮಪುರುಷ ರಘುವೀರ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೨೭

೩೩೬	**ರಾಮಚಂದ್ರ ಸೀತಾ ಮನೋಹರನೆ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೨೮
೩೩೭	**ರಾಮನಾಮ ಕೀರ್ತನೆ ಮಾಡೊ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೨೯
೩೩೮	**ರಾಮಜಾನಕೀ ಮನೋಹರ ಮಾರ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೦
೩೩೯	**ರಾಮರಾಜೀವಾಕ್ಷ ಬೇಗ ಬಾರೊ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೦
೩೪೦	**ಶ್ರೀರಾಮ ಮಂಗಳಂ ಘೋರಾರಾಘಮರ್ದನ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೧
೩೪೧	**ಶ್ರೀರಾಮ ಮನೋಹರ ಕೃಪಾಸಾಗರ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೧
೩೪೨	**ಶ್ರೀ ರಘುವರ ತೇ ನಮೋ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೨
೩೪೩	**ಸಲಹೋ ಎನ್ನನು ಸ್ವಾಮಿ ಸರ್ವಾಂತರ್ಯಾಮಿ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೩
೩೪೪	**ಸರೋಜದಳೇಕ್ಷಣ ಸಲಹೋಯೆನ್ನ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೩
೩೪೫	**ಸೀತಾಮನೋಹರ ಬಾರೋ ಸ್ವಾಮಿ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೪
೩೪೬	**ಸೀತಾಪತಿಮಮಲಂ ವಂದೇಹಂ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೫
೩೪೭	**ಹಸೆಗೆ ಬಾರೈ ರಾಮಾ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೫
೩೪೮	**ಹಸೆಗೆ ಬಾರೈ ಶ್ರೀರಾಮ ಹನುಮ ಪ್ರೇಮ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೬
೩೪೯	**ಭೋಜನ ಮಾಡೈಯ ಶ್ರೀರಾಮಚಂದ್ರ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)	೩೩೭

೩೫೦	**ಮಂಗಳಂ ಸೀತಾಮನೋಹರ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೩೮
೩೫೧	**ನಮ್ಮ ತಂದೆಯು ರಾಮನು** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೩೯
೩೫೨	**ಚೆಂಡನಾಡಿದನು ಶ್ರೀರಘುವರ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೪೦
೩೫೩	**ಕರುಣ ಬರುವುದೆಂದಿಗೆ ಶ್ರೀರಾಮಚಂದ್ರಾ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೪೦
೩೫೪	**ನಾ ನಿಮ್ಮ ದಾಸನಯ್ಯ ಸೀತಾರಾಮ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೪೧
೩೫೫	**ರಾಮನಾಮವ ಪಾಡೆಲೊ ಮನುಜ** (ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)	೩೪೨
೩೫೬	**ಕಂಡುಕೊಂಡೆನೊ ಕೋದಂಡಧಾರಿಯ** (ಜಾಜೀಶ / ಶಾಮಶರ್ಮದಾಸ / ೧೮೯೪ – ೧೯೬೨)	೩೪೨
೩೫೭	**ನೀನೇ ಸಕಲವೆನಗೆ ರಾಮಚಂದ್ರ** (ಜಾಜೀಶ / ಶಾಮಶರ್ಮದಾಸ / ೧೮೯೪ – ೧೯೬೨)	೩೪೩
೩೫೮	**ರಾಘವದೇವ ಬಿಡಬೇಡ ಕೈಬಿಡಬೇಡ** (ಜಾಜೀಶ / ಶಾಮಶರ್ಮದಾಸ / ೧೮೯೪ – ೧೯೬೨)	೩೪೪
೩೫೯	**ರಾಮಚಂದ್ರನು ಶೋಭಿಪನಿಂದು** (ಜಾಜೀಶ / ಶಾಮಶರ್ಮದಾಸ / ೧೮೯೪ – ೧೯೬೨)	೩೪೪
೩೬೦	**ರಾಮಕೋಟಿ ನಾಮಭಜನಾ** (ಜಾಜೀಶ / ಶಾಮಶರ್ಮದಾಸ / ೧೮೯೪ – ೧೯೬೨)	೩೪೫
೩೬೧	**ಆರತಿ ಬೆಳಗುವೆ ನಿನಗೆ ಶ್ರೀರಾಮ** (ಜಾಜೀಶ / ಶಾಮಶರ್ಮದಾಸ / ೧೮೯೪ – ೧೯೬೨)	೩೪೬
೩೬೨	**ತವದಾಸೋಹಂ ತವದಾಸೋಹಂ** (ವರದವಿಠಲ / ವೆಂಕಟವರದಾರ್ಯ / ೧೮೨೦ – ೧೯೦೦)	೩೪೭
೩೬೩	**ರಾಮನ ನೆನೆ ಮನವೆ** (ವರದವಿಠಲ / ವೆಂಕಟವರದಾರ್ಯ / ೧೮೨೦ – ೧೯೦೦)	೩೪೮

೩೬೪	**ರಾಮಭಜೇ ತೇ ಪದಯುಗಳಂ** (ವರದವಿಠಲ / ವೆಂಕಟವರದಾರ್ಯ / ೧೮೨೦ - ೧೯೦೦)	೩೪೯
೩೬೫	**ರಾಮನಾಮವೆ ನಾನಾಕಾರ** (ಜಾಜಿಪುರೀಶ / ನಾರಾಯಣಶರ್ಮ / ೧೯೧೨ - ೧೯೯೨)	೩೫೨
೩೬೬	**ರಾಮನ ನೆನೆಬೇಕು ಶ್ರೀರಾಮನ ನೆನೆಬೇಕು** (ಜಾಜಿಪುರೀಶ / ನಾರಾಯಣಶರ್ಮ / ೧೯೧೨ - ೧೯೯೨)	೩೫೩
೩೬೭	**ಕರುಣವೇಕೆ ಬಾರದಯ್ಯ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೩
೩೬೮	**ಕರುಣಾಜಲಧಿರಾಮ ಪವನಜಪ್ರೇಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೪
೩೬೯	**ಕರುಣಿಸು ರಘುನಂದನ ರಾಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೫
೩೭೦	**ಕೋಟಿನಾಮಗಳಲ್ಲಿ ಹಿರಿಯದಂತೆ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೫
೩೭೧	**ಕೌಸಲ್ಯಾಸುಕುಮಾರ ಭಾಷಿತ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೬
೩೭೨	**ಚಿಂತಯಾಮಿ ತಾರಕನಾಮಂ ಅಂತರಾತ್ಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೬
೩೭೩	**ಚಿಂತಯಾಮಿ ರಾಮಮಮಿತ ಮಹಿಮಂ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೭
೩೭೪	**ಜಯ ಜಾನಕೀಪ್ರಿಯ ರಾಘವ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೮
೩೭೫	**ಜಯರಾಮ ರಘುರಾಮ ಪುರುಷೋತ್ತಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೯
೩೭೬	**ಜಾನಕೀರಾಮಾ ಸಾಮಜ ಪ್ರೇಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೫೯
೩೭೭	**ಜಾನಕೀರಾಮಚಂದ್ರಾಯ ನಮಸ್ತೇ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ - ೧೯೮೪)	೩೬೦

೩೭೮	**ಜಾನಕೀ ಮನೋಹರಾ ಜನಪಕುಮಾರಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೦
೩೭೯	**ದಿನಮಣಿ ಕುಲಜಾತಾ ಪ್ರತಾಪ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೧
೩೮೦	**ದೇವ ದೇವ ಲೋಕೇಶ್ವರರಾಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೧
೩೮೧	**ಧರಣಿಜಾಪ್ರಿಯ ರಾಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೨
೩೮೨	**ಧರಣೀರಮಣಾ ರಾಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೨
೩೮೩	**ನಮೋ ನಮೋ ರಾಮ ರಘೂತ್ತಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೩
೩೮೪	**ನಾರದನುತ ಪಾವನನಾಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೪
೩೮೫	**ಪತಿತ ಪಾವನ ರಮಾಪತಿ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೪
೩೮೬	**ಪಾಲಯ ಮಾಂ ಕರುಣಾಭರಣ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೫
೩೮೭	**ಪಾಲಯಾಶು ಮಾಂ ಸೀತಾರಾಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೫
೩೮೮	**ಪಾವನಕರನಾಮಾ ಪರಮ ಪುರುಷ ರಾಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೬
೩೮೯	**ಪಾಹಿ ಪಾಹಿ ಪರಂಧಾಮ ಸುನಾಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೬
೩೯೦	**ಪಾಹಿ ಮೋಹನರಾಮ ಅಭಿರಾಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೮
೩೯೧	**ಪೀತಾಂಬರಧರ ದಶರಥಬಾಲಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೭೯ – ೧೯೮೪)	೩೬೮

೪೦೬	**ಹಿಡಿದ ಕೈ ಬಿಡಬೇಡವೋ ರಾಮಾ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ – ೧೯೮೪)	೩೭೮
೪೦೭	**ಶ್ರೀರಾಮ ಜಯರಾಮ ರಘುರಾಮಪಾಹಿ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ – ೧೯೮೪)	೩೭೯
೪೦೮	**ಶ್ರೀರಾಮ ಪಾಹಿಮಾಂ ಸದಾಪೂರ್ಣಕಾಮ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ – ೧೯೮೪)	೩೮೦
೪೦೯	**ಹರೇ ರಾಘವ ಪಾಲಯ** (ಮಾಂಗಿರಿರಂಗ/ಆಸೂರಿ ರಾಮಸ್ವಾಮಿ ಅಯ್ಯಂಗಾರ್/೧೮೮೯ – ೧೯೮೪)	೩೮೦
೪೧೦	**ಪಾಹಿ ಶ್ರೀ ರಮಾರಮಣ ಸಂತತಂಮಾಂ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೦
೪೧೧	**ಪಾಹಿ ಶ್ರೀ ರಘುವರ ನಿತ್ಯಂದೇಹಿ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೨
೪೧೨	**ಶ್ರೀ ರಘುವರ ಸುಗುಣಾಲಯ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೩
೪೧೩	**ಮಾಮವ ರಘುವೀರ ಮಾನಿತ ಮುನಿವರ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೪
೪೧೪	**ಜಾನಕೀ ಮನೋಹರಾಯ ಜಯಮಂಗಳಂ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೫
೪೧೫	**ಪಾಹಿಮಾಂ ಶ್ರೀರಾಮಚಂದ್ರ ನಲಿನಾಸನಂ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೬
೪೧೬	**ಭಜೇಹಂ ವೀರರಾಘವಂ ಭಜೇಹಂ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೮
೪೧೭	**ಶ್ರೀ ರಘುಕುಲವರ ಶುಭಕರ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೮೯
೪೧೮	**ರಾಮ ಪಾಲಯಮಾಂ – ಹರೇ ಸೀತಾ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೯೦
೪೧೯	**ಕೋಸಲೇಂದ್ರ ಮಾಮವ ಅಮಿತ** (ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ.–೧೮ಶ.)	೩೯೧

೪೨೪	**ರಾಮ ಬಾರೋ ರಘು ನಂದನ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೫
೪೩೫	**ಶ್ರೀ ರಾಮಚಂದ್ರ ದೇವಭೂರಿದಯವ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೫
೪೩೬	**ಯಾತಕುಪೇಕ್ಷೆಯ ಮಾಡುವೆ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೬
೪೩೭	**ಶ್ರೀರಾಮ ರಾಕ್ಷಸಭೀಮ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೭
೪೩೮	**ಜನಕಜಾವರ ರಾಮ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೮
೪೩೯	**ನಾಮ ಭಿಕ್ಷೆವೀಯೋ ಪ್ರೇಮದಿ ರಾಮ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೯
೪೪೦	**ಮಂತ್ರವೆಂದು ಸಿದ್ಧಿಸುವುದೋ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೦೯
೪೪೧	**ಆ ರಮಣೀಯ ರೂಪ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೦
೪೪೨	**ಇದಕೀಗ ನಾನೇನ ಮಾಡಲಯ್ಯ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೧
೪೪೩	**ದಯಮಾಡಿ ಕೊಡೊ ಎನ್ನಿಷ್ಟವ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೨
೪೪೪	**ದಾಸ್ಯವನೇ ಬೇಡುವೆ ನಿನ್ನ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೩
೪೪೫	**ಚಿತ್ತದಲಿ ನೀ ನಿತ್ಯವೂ ಇರೆನ್ನ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೩
೪೪೬	**ಶರಣಾಗತ ಪರಿಪಾಲಕ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೪
೪೪೭	**ಶ್ರೀರಾಮ ರಾಮಭದ್ರ** (ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)	೪೧೫

೪೬೨	**ರಾಮ ರಕ್ಷಿಸೊ ಕೋದಂಡಪಾಣಿ** (ಚೆಲ್ವರಾಮಮೂರ್ತಿ / ....?.........../ ಕಾಲ. ೧೯ಶ.)	೪೨೯
೪೬೩	**ಜಯ ಜಯ ಜಯ ಜಯ ಜಯರಾಮಚಂದ್ರ** (ಖಾದ್ರಿ ನರಸಿಂಹ / ತಿಪ್ಪಣಾರ್ಯ / ಕಾಲ. ೧೯ಶ.)	೪೩೦
೪೬೪	**ಬಾರೋ ಮನಕೆ ರಾಮ ಬೇಗ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೦
೪೬೫	**ಶ್ರೀ ರಾಮಂ ಭಜೇ ರಘು ರಾಮಂ ಭಜೇ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೧
೪೬೬	**ರಾಮ ಪಾಲಯ ಶ್ರೀರಾಮ ಸದಯಾ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೨
೪೬೭	**ರಾಮ ರಾಕೇಂದು ಸುಂದರಾ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೨
೪೬೮	**ಶ್ರೀರಾಮಚಂದ್ರ ಬರುವ ನಾರೀಮಣಿಯೆ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೩
೪೬೯	**ಶ್ರೀ ರಘುವರ ಕರುಣಾಕರ ಸಲಹೈ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೪
೪೭೦	**ರಾಮಚಂದ್ರಾ ರಾಜಕುಲೇಂದ್ರ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೪
೪೭೧	**ರಾಮಹರೇ ರಘುರಾಮಹರೇ ತವ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೫
೪೭೨	**ಜಯರಾಮ ಜಿತಕಾಮ ಜಗದೀಶ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೬
೪೭೩	**ನಿನ್ನವಿನಾ ಅನ್ಯರಕಾಣೆ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೬
೪೭೪	**ಪಾಹಿ ರಾಘವೇಶಾ ಹರೇರಾಮ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೭
೪೭೫	**ಶ್ರೀರಾಮಂ ಭಜರೇ ಮಾನಸ** (ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)	೪೩೭

೪೯೦	**ಎನಗೆಂದಿಗೆ ಸಂದರ್ಶನವನೀವೆ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೪೬
೪೯೧	**ನಿನ್ನಪ್ರೇರಣೆಯಿಂದ ಜನ್ಮಿಸಿದೆ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೪೭
೪೯೨	**ಏನೀ ಚೋದ್ಯಂಗಳು ದೀನನಾದ ಯೆನ್ನೊಳು** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೪೭
೪೯೩	**ಯೆನ್ನ ಬಿನ್ನಪಗಳನು ಕೇಳ ಮನ್ನಿಪಾತ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೪೮
೪೯೪	**ಪರಮಗುಣಸಾಂದ್ರ ರಾಮ ನಿರಾಮಯ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೪೯
೪೯೫	**ನೀನೆ ಪರಗತಿಮತಿಯೀವ ಕಾವದೇವ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೪೯
೪೯೬	**ಪರತರ ಪಾವನನಾಮ ರಾಮ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೫೦
೪೯೭	**ಎಂದಿಗೆನ್ನನು ಧನ್ಯನಾಗಿಪೆ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೫೦
೪೯೮	**ಸಾರಪದಾಂಭೋಜಶ್ರೀ** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೫೧
೪೯೯	**ಧರಣಿಯು ಜೀರ್ಣ ನಿಲಯದೊಳು** (ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)	೪೫೧
೫೦೦	**ಕಂದರ್ಪಕೋಟಿ ಸುಂದರಾಂಗ ರಾಮ** (ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)	೪೫೨

--✿✿✿✿✿--

೧
ನಿನ್ನ ಪೂಜೆಯೊ ರಾಮ
(ರಂಗವಿಠಲ / ಶ್ರೀಪಾದರಾಜ / ೧೪೦೬ - ೧೫೦೬)

ನಿನ್ನ ಪೂಜೆಯೊ ರಾಮ
ಎನ್ನ ವ್ಯಾಪಾರವಲ್ಲ ॥ಪ॥

ಸ್ನಾನ ಸಂಧ್ಯಾವಂದನ ಹೋಮ ಮೌನ ಜಪ ಸದ್ಗ್ರಂಥ ವ್ಯಾ
ಖ್ಯಾನಯಜ್ಞಸಾಧನ ಸಂಪಾದನ ಅಧ್ಯಯನ
ನಾನಾರಸ ನೈವೇದ್ಯ ಭೋಜನ ತಾಂಬೂಲಚರ್ವಣ
ಮಾನಿನಿ ಮೊದಲಾದ ಸ್ಯಂದನ ಗಾನದ ಭೋಗಗಳೆಲ್ಲ ॥೧॥

ಸರ್ವೇಂದ್ರಿಯಗಳಲಿಹ ಶರ್ವಾದಿ ದೇವರ್ಕಳಿಗೆ
ಸರ್ವಚೇಷ್ಟಾಪ್ರದನಾದ ಪ್ರಾಣಿಗೆ ನಿರ್ವಾಹಕನಾಗಿ
ಸರ್ವಜೀವರ ಕೈಯಿಂದ ಸರ್ವಜ್ಞಾನಕರ್ಮಗಳನು
ಸರ್ವದಾಮಾಡಿಸಿ ಅವರ ಸರ್ವಶುಭೋಕ್ತನಹೆ ॥೨॥

ಅಂಗಾಂಗಗಳಲ್ಲಿ ಸುರರು ಕಂಗಳಲ್ಲಿ ಭಾಗ್ಯಲಕ್ಷ್ಮಿ
ಉಂಗುಷ್ಟದಿ ಲೋಕಪಾವನೆ ಗಂಗಾದೇವಿಯು
ಹಿಂಗದೆ ನಿನ್ನಲ್ಲಿರಲು ತುಂಗಗುಣ ಪರಿಪೂರ್ಣ
ರಂಗವಿಠಲ ನೆಲೆಯಾಗಿ ಮಂಗಳಾಂಗನೆ ಮನ್ನಿಸುವೆಯೊ ॥೩॥

--✿✿✿✿✿--

೨
ರಾಮಾವರಂತೆ ರಕ್ಷಿಸೋಎಂದರೆ
(ರಂಗವಿಠಲ / ಶ್ರೀಪಾದರಾಜ / ೧೪೦೬ - ೧೫೦೬)

ರಾಮಾವರಂತೆ ರಕ್ಷಿಸೋ ಎಂದರೆ
ರಕ್ಷಿಸಲೊಲ್ಲ ಪರಾಕು ॥ಪ॥

ಕಾಮಿತಫಲವೀವ ಕರುಣಾಂಬುಧಿ ಎಂದು
ನಾ ಮೊರೆ ಹೊಕ್ಕನಲ್ಲೋ ರಾಮ ರಾಮ ಪ್ರಘುಲ್ಲ ॥ಅ.ಪ॥

೧

ಎಡವಿದ ಮಾತ್ರದಿ ಪೆಣ್ಣಾದ ಗೌತಮ
ಮಡದಿಯು ನಿನ್ನವಳೇನೋ
ಕಡುಪ್ರೀತಿಯಿಂದ ಕಾಯಿದಿ ಕಲಿರಾಜನು ನಿನ್ನ
ಒಡಲಲ್ಲಿ ಜನಿಸಿದನೇನೋ
ನಡುಗುತ ಮಗನ ನಾರಗನೆನ್ನಲು
ನುಡಿಕೇಳಿ ಪೊರೆದೆಲ್ಲೋ ರಾಮರಾಮ ॥೧॥

ಹಿರಿದ್ವೈರಿ ದೆಸೆಯಿಂದ ಬಂದ ವಿಭೀಷಣನು
ತಂದೆಯ ಪಡೆಯವನೇನೋ
ಕಂದು ಕುಂದೆಣಿಸದೆ ಕಾಯಿದಿ ಘಂಟಾಕರ್ಣಾ
ಎಂದಾ ಯಿಯಿಮಾತಿಗೆ ಬಗೆಯೇನೋ
ಬಂದು ಕಂಬದಿ ಶಿಶುವ ಬಾಧೆಯ ಬಿಡಿಸಿದೆ ಅಪ
ದ್ಬಾಂಧವ ನೀನಲ್ಲೋ ರಾಮರಾಮ ॥೨॥

ಉಲ್ಲಸದಿಂದ ಶಬರಿ ಉಂಡೆಂಜಲಗೊಡ್ಡಿದ
ವಲ್ಲಭ ನೀನಲ್ಲವೇನೋ
ಎಲ್ಲಿಯ ಬಲ್ಲಿದ ಪಿಡಿಯವಲಕ್ಕಿಗೆ ನೀ ಪೋಗಿ
ವಡ್ಲ್ಯೊಡ್ಡಿದ ಮರೆತ್ಯೇನೋ
ಎಲ್ಲಿಯ ಮಾತಿದು ಪೇಳಲಂಜುವೆ ರಂಗ ವಿ
ಠಲ ನೀನಲ್ಲೋ ರಾಮರಾಮ ॥೩॥

--✿✿✿✿✿--

೩

ಶರಣು ಶರಣು ಶರಣು ಸಕಲೋದ್ಧಾರ

(ರಂಗವಿಠಲ / ಶ್ರೀಪಾದರಾಜ / ೧೪೦೬ – ೧೫೦೬)

ಶರಣು ಶರಣು ॥ಪ॥

ಶರಣು ಸಕಲೋದ್ಧಾರ ಅಸುರಕುಲ ಸಂಹಾರ
ಅರಸು ದಶರಥ ಜಾನಕಿಯ ಲೋಲ
ವಾಲಿಸಂಹಾರ ವಾರಿಧಿ ನಯ
ಗಾರಏಕಪತ್ನಿಯಶೀಲ ತುಳಸೀವನಮಾಲ ॥ಅ.ಪ॥

ಈ ಮುದ್ದು, ಈ ಮುಖವು, ಈ ತನುವಿನ ಕಾಂತಿ,
ಈ ಬಿಲ್ಲು, ಈ ಬಾಣ, ಈ ನಿಂತ ಭಾಮ
ಈ ತಮ್ಮ, ಈ ಸೀತೆ, ಈ ಬಂಟ, ಈ ಭಾಗ್ಯ
ಇನ್ಯಾವ ದೇವರಿಗುಂಟು ಮೂಲೋಕದೊಳಗೆ ॥೧॥

ಉಟ್ಟ ಪೀತಾಂಬರವು ಉಡಿಗಂಟೆ ವೊಡ್ಯಾಣ
ತೊಟ್ಟ ನವರತ್ನದಾಭರಣ ರಸಕರುಣ
ಕೊಟ್ಟ ನಂಬಿಕೆಯು ಕರುಣದಲಿ ರಕ್ಷಿಸುವ
ಸೃಷ್ಟಿಯೊಳಗೆಣೆಕಾಣೆ ಕೌಸಲ್ಯರಾಮ ॥೨॥

ಭಾವಿಸಲು ಅಯೋಧ್ಯಾಪಟ್ಟಣದ ಪುರವಾಸವಾ
ಬೇಡಿದವರಿಗೆ ವರವ ನೀಡುವೆನೆಂದು
ರೂಢಿಯೊಳಗಧಿಕ ಚುಂಚನಕಟ್ಟೆಯಲಿ ನೆಲೆಸಿದ
ಸ್ವಾಮಿ ಹಯವದನ ಪಾಲಿಸೊ ನಿಸ್ಸೀಮ ॥೩॥

--✿✿✿✿✿--

೪

ಜಯಜಯ ಈ ಮುದ್ದು ಮುಖವೊ

(ಹಯವದನ / ವಾದಿರಾಜ / ೧೪೮೦ - ೧೬೦೦)

ಜಯಾ ಜಯಾ ॥ಪ॥

ಈ ಮುದ್ದುಮುಖವೊ ಮತ್ತೆ ತನುವಿನ ಕಾಂತಿ
ಈ ಬಿಲ್ಲು ಈ ಬಾಣ ನಿಂತಭಾವ ॥೧॥

ಈ ತನು ಈ ರಾಣಿ ಈ ಬಂಟ ಈ ಭಾಗ್ಯ
ಆವ ದೇವರಿಗುಂಟು ಮೂಲೋಕದೊಳಗೆ ॥೨॥

ಜಯ ಇನಕುಲೋದ್ಧರಣ ಜಯ ಮುನಿಕೃತ ಶರಣ
ಜಯ ದನುಜವಿದಾರಣ ಜಯ ತಮಹರಣ ॥೩॥

ಧರೆಯೊಳತಿಭಾರವನು ಇಳುಹಿ ಕಮಲಜ ಮುಖ್ಯ
ಸುರರ ಮೊರೆಯನು ಕೇಳು ನರರೂಪ ತಾಳ್ದ ॥೪॥

ದಶರಥನ ಗರ್ಭದಲಿ ಜನಿಸಿ ಮುನ್ನ ಮುನಿ
ಮನೋರಥ ಕಾಯಿದ ಪುಣ್ಯಚರಿತ್ರ ॥೫॥

ಅಸುರರನು ಅಳಿದು ಅಹಲ್ಯಳಿಗಿತ್ತ ವರವಿತ್ತು.
ಮಿಥಿಳಾಪುರದಿ ಹರನ ಧನುವನುರೆ ಮುರಿದು ॥೬॥

ಅತುಳಬಲದಲ್ಲಿ ಸೀತೆಯ ಒಲಿಸಿದ ಭಾರ್ಗವ ಮ
ಹಿತಳ ಬಲವಂತ ದೇವೋತ್ತುಂಗ ಜಯತು ॥೭॥

ಭರದಿಂದಲಯೋಧ್ಯಾಪುರವನು ಶೃಂಗರಿಸೆ
ಹರುಷತನದಲ್ಲಿ ರಾಮಗರಸುತನವೆನಲ ॥೮॥

ಕಿರಿಯ ಮಾತೆಯು ಬಂದು ಭರತನಿಗೆ ಪಟ್ಟವೆನೆ
ಸಿರಿಸಹಿತ ಹೊರಹೊಂಟ ಕರುಣಾಳು ಜಯತು ॥೯॥

ಅನುಜ ಅವನಿಜೆ ಸಹಿತ ವನವಾಸವ ಮಾಡಿ
ವನಜಾಕ್ಷ ಪತಿಯಾಗೆಂದು ರಾಕ್ಷಸಿಯು ಬರಲು ॥೧೦॥

ಅನುವಾಯಿತೆಂದು ನಾಸಿಕವ ಹರಿದು ಭಂಗಿಸಿದೆ
ಬಿನುಗು ಹೊಮ್ಮೃಗವೆಚ್ಚ ಘನಮಹಿಮ ಜಯತು ॥೧೧॥

ಜಕ್ಕಿದ ವಾಲಿಯನು ಕೊಂದು ಕುಲಸೈನ್ಯ ಸಹವಾಗಿ
ನಿಲ್ಲದೆ ಸೇತುವೆಗಟ್ಟಿ ಅಸುರರೊಡಗೂಡಿ ॥೧೨॥

ಖುಲ್ಲ ದಾನವ ಕುಂಭಕರ್ಣ ರಣಮುಟ್ಟಿ
ಎಲ್ಲರನು ತರಿದಂಥ ಬಲ್ಲಿದನೆ ಜಯತು ॥೧೩॥

ದೇವಕ್ಕಳು ಹರುಷದಲ್ಲಿ ಪೂಮಳೆಗರೆಯೆ
ಭೂಮಿಜೆಯ ಸಹಿತ ಸೌಮಿತ್ರಿಯೊಡಗೂಡಿ ॥೧೪॥

ಕ್ಷೇಮದಿಂದಯೋಧ್ಯಾಪುರದಿ ಸುಖದಲ್ಲಿರ್ದ
ಸ್ವಾಮಿ ಶ್ರೀಹಯವದನ ರಘುಕುಲತಿಲಕನಲ್ಲವೆ ॥೧೫॥

--✿✿✿✿✿--

೫೫

ಪರಮ ಪಾವನ್ನ ನಾಮ ಭಳಿರೆ ಸಂಗರಭೀಮ

(ಹಯವದನ / ವಾದಿರಾಜ / ೧೪೮೦ - ೧೬೦೦)

ಪರಮಪಾವನ್ನನಾಮ ಭಳಿರೆ ಸಂಗರಭೀಮ
ಸರಸಗುಣಾಭಿರಾಮ ತರಣಿವಂಶ ಲಲಾಮ
ತಾರಾನಂದನ ಪ್ರೇಮ ಪರಿಪೂರ್ಣಧಾಮ ಪಟ್ಟಾಭಿರಾಮ ॥ಪ॥

ಚಿಕ್ಕಪ್ರಾಯದಲಿ ಬಲುರಕ್ಕಸಿಯನು ಸೀಳಿ
ತಾಕಲದೆ ಕಾಲ್ವೆಣ್ಗೈದು ರಾಜಮೌಳಿಯ ಬಿಲ್ಲ
ಗಕ್ಕನೆ ಖಂಡಿಸಿ ಕೈವಿಡಿದು ಸೊಬಗನುಕ್ಕುವ ಜಾನಕಿಯ
ಧಿಕ್ಕರಿಸುತ ಪೋಗಿ ದಿತಿಯ ಕೈಕೆಯ ಮಾತು
ದಕ್ಕಲೆನುತ ಪೋಗಿ ದಂಡಕಾರಣ್ಯವ
ಪೊಕ್ಕು ದೂಷಣ ಮುಖ್ಯ ಭೂರಿ ದಾನವಹಿಂಡ
ಚಕ್ಕಂದದಲಿ ಕೊಂದ ಜಾಣ ನೀನಹುದೊ ॥೧॥

ಭುವನೇಶ ಶಬರಿಯ ಪೂಜೆಯ ಕೈಕೊಂಡು
ಪವನಾತ್ಮಜನ ಕಂಡು ಬರಹೇಳಿ
ರವಿಯ ಸೂನನ ಕಾಣಿಸಿಕೊಂಡು ತವಕದಿಂ ವಾಲಿಯ
ಹವಣರಿಯದಸುವ ಕೊಂದು
ಪ್ಲವಗ ಬಲವನು ಕೂಡಿ ಬಲು ಸಮುದ್ರವ ಬಂಧ-
ನವ ಮಾಡಿ ಕುಂಭಕರ್ಣ ರಾವಣನ ಸಂಹಾರಮಾಡಿ
ಲಂಕಾರಾಜ್ಯ ವಿಭೀಷಣಗಿತ್ತು ಅವನಿಜೆಸಹ ಪುಷ್ಪಕವನೇರಿ ನಡದೆ ॥೨॥

ಸುರರೆಲ್ಲ ಪೂಮಳೆಗರೆಯೆ ಸುಗ್ರೀವಾದಿ
ವರರಾವಣರ ಸೇನೆ ಬೈಲಾಗಿ ನೀ ನಡೆಯೆ ಶೃಂ-
ಗಾರವಾದ ಸಾಕೇತಪುರಕೆ ಭರದಿ ಬಂದು

ನಿರುತ ಸೌಖ್ಯದಲ್ಲಿ ನಿಂದು ಸಿರನೆಲೆವಿನಯದಿ ಚಿನ್ಮಯನಾ
ಗಿರಿಯ ಶುಭಕರ್ಣವೊ(?) ಸೀತಾಲಕ್ಷ್ಮಣ
ಭರತಶತ್ರುಘ್ನಯಿರೆ ಹನುಮನ ಸೇವೆ ದಿವ್ಯಸಿಂಹಾಸನವೇರಿ
ಧರೆ ಆಳಿದ ಪರಿಣಾಮದಿ ಹಯವದನ ರಾಮ ॥೩॥

--✿✿✿✿✿--

೬

ಮಂಗಳಂ ಶ್ರೀರಾಮಚಂದ್ರಗೆ ಜಯ

(ಹಯವದನ / ವಾದಿರಾಜ / ೧೪೮೦ - ೧೬೦೦)

ಮಂಗಳಂ ಶ್ರೀರಾಮಚಂದ್ರಗೆ ಜಯ
ಮಂಗಳಂ ಸೀತಾಸಮೇತನಿಗೆ ॥ಪ॥

ಮಚ್ಛಾವತಾರಗೆ ವೇದವ ತಂದಗೆ
ಕೂರ್ಮರೂಪದಿ ಜಲದೊಳು ಹೊಕ್ಕವಗೆ
ಹಿರಣ್ಯಾಕ್ಷಾಸುರನ ಗೆಲಿಯೆ ಬಂದು
ಮೆಚ್ಚೆ ವರಾಹರೂಪ ತೋರಿದಗೆ ॥೧॥

ಛತ್ರಿಯ ಪಿಡಿದು ಭರತ ನಿಂದಿರಲಾಗ
ಶತ್ರುಘ್ನ ಚಾಮರವನು ಬೀಸಲು
ಮತ್ತೆ ಲಕ್ಷ್ಮಣ ಮಡಿಸೆಲೆ ಕೊಡುತಿರಲಾಗಿ
ವಿಸ್ತಾರ ವೈಭೋಗ ರಘುರಾಮಗೆ ॥೨॥

ತಮ್ಮ ಲಕ್ಷ್ಮಣ ಸಹ ಒಲ್ಮೆಯಿಂದಲಿ ಬಂದ
ನಮ್ಮ ಶ್ರೀರಘುರಾಮಚಂದ್ರನಿಗೆ
ಸನ್ಮಾನದಲಿ ರಾಮ ಸಾಗರಶಯನಾಗ
ಚೆನ್ನ ಚುಂಚನಕಟ್ಟೆ ಸ್ಥಿರವಾಸಿಗೆ ॥೩॥

ಎಡದ ಕರದಿ ಬಿಲ್ಲು ಬಲದ ಕರದಿ ಬಾಣ
ಕರದ ಕಮಲದೊಳಗಿಪ್ಪವನಿಗೆ
ಬಲದ ಭಾಗದಿ ಸಿರಿಸೀತೆಯ ಧರಿಸಿದ
ಚದುರ ಶ್ರೀ ಕಲ್ಯಾಣಚಂದ್ರನಿಗೆ ॥೪॥

ಹರುಷದಿ ದೇವತೆಗಳಿಗೊರವಿತ್ತಗೆ
ದುರುಳ ರಕ್ಕಸರ ಸಂಹರಿಸಿದಗೆ
ಪರಮಭಕ್ತನಿಗೆ ಸ್ಥಿರರಾಜ್ಯವನೆ ಕೊಟ್ಟ
ಹಯವದನಮೂರ್ತಿ ಎಂದೆನಿಸಿದಗೆ ॥೫॥

--✿✿✿✿✿--

೭

ರಾಮ ಎನ್ನುವ ಎರಡು ಅಕ್ಷರದ ಮಹಿಮೆಯನು

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ - ೧೫೬೫)

ರಾಮ ಎನ್ನುವ ಎರಡು ಅಕ್ಷರದ ಮಹಿಮೆಯನು
ಪಾಮರರು ತಾವೇನ ಬಲ್ಲರಯ್ಯ ॥ಪ॥

ರಾಯೆಂದ ಮಾತ್ರದೊಳು ರಕ್ತಮಾಂಸದೊಳಿದ್ದ
ಆಯಸ್ಥಿಗತವಾದ ಅತಿಪಾಪವನ್ನು
ಮಾಯವನು ಮಾಡಿ ಮಹಾರಾಯ ಮುಕ್ತಿಯ ಕೊಡುವ
ದಾಯವನು ವಾಲ್ಮೀಕಿ ಮುನಿರಾಯ ಬಲ್ಲ ॥೧॥

ಮತ್ತೆ ಮ ಎಂದೆನಲು ಹೊರಬಿದ್ದ ಪಾಪಗಳು
ಒತ್ತಿ ಒಳಪೊಗದಂತೆಯೆ ಕವಾಟವಾಗಿ
ಚಿತ್ತಕಾಯಗಳ ಸುಪವಿತ್ರ ಮಾಡುವ ಪರಿಯ
ಭಕ್ತವರ ಹನುಮಂತ ತಾನೊಬ್ಬ ಬಲ್ಲ ॥೨॥

ಧರೆಯೊಳೀ ನಾಮಕ್ಕೆ ಸರಿಮಿಗಿಲು ಇಲ್ಲೆಂದು
ಪರಮ ವೇದಗಳೆಲ್ಲ ಹೊಗಳುತಿಹವು
ಸಿರಿಯರಸ ಶ್ರೀಪುರಂದರವಿಠಲ ರಾಮನನು
ವರಕಾಶಿಯೊಳಗಿಪ್ಪ ಶಿವನು ತಾ ಬಲ್ಲ ॥೩॥

--✿✿✿✿✿--

೮

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ – ೧೫೬೫)

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ।
ನಾಮವಿಠಲ ತುಪ್ಪ ಬೆರೆಸಿ ಬಾಯಿ ಚಪ್ಪರಿಸಿರೊ ॥ಪ॥

ಒಮ್ಮನ ಗೋದಿಯ ತಂದು । ವೈರಾಗ್ಯ ಕಲ್ಲಲಿ ಬೀಸಿ ।
ಸುಮ್ಮನ ಸಜ್ಜಿಗೆ ತೆಗೆದು । ಸಣ್ಣ ಸೇವಿಗೆ ಹೊಸೆದು ॥೧॥

ಹೃದಯವೆಂಬ ಪಾತ್ರೆಯೊಳಗೆ । ಮನವೆಂಬ ಎಸರನಿಟ್ಟು ।
ಬುದ್ಧಿಯಿಂದ ಪಾಕಮಾಡಿ । ಹರಿವಾಣ ತುಂಬಿರೆ ॥೨॥

ಆನಂದ ಆನಂದವೆಂಬ ತೇಗು ಬಂದ ಪರಿಯಲಿ ।
ಆನಂದಮೂರುತಿ ನಮ್ಮ ಪುರಂದರವಿಠಲ ॥೩॥

--✿✿✿✿✿--

೯

ರಾಮನಾಮಾಮೃತವ ಕೊಂಬವರೆಲ್ಲ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ – ೧೫೬೫)

ರಾಮನಾಮಾಮೃತವ ಕೊಂಬವರೆಲ್ಲ ।
ಪ್ರೇಮದಿಂದಚ್ಯುತಪೇಟೆಗೆ ಬನ್ನಿರೆ ॥ಪ॥

ಒಮ್ಮನವೆರಸಿ ಬನ್ನಿ ।
ನಿಮ್ಮ ಮನಕೆ ಬಂದಂತಳೆದುಕೊಳ್ಳಿ ॥
ರಾಮಟಂಕೆಯ ಸಲಿಸಿ ಶ್ರೀ ಕೃಷ್ಣನೆಂಬ ।
ಧರ್ಮದ ಸಂತೆ ನೆರೆದಿದೆ ಬನ್ನಿ ॥೧॥

ಉಂಟು ನಾಲ್ಕು ಕುದುರೆಗಳು ।
ಎಂಟಾನೆಯ ಬಿರುಬಲೆಯಲ್ಲಿ ಕಟ್ಟಬಹುದು ॥

ಸಾಲವರ್ಣದ ಪಟ್ಟೆಯು ಏಳಿರೆ ।
ಏಳುಲೋಕವು ಬಲ್ಲದು ॥೨॥

ಬೆಲೆಯಿಲ್ಲದ ಮುತ್ತುಂಟು ।
ಏಳೇಳ್ಪುಟಿಯ ಹೊಳೆವಪರಂಜಿಯ ಚಿನ್ನವುಂಟು ॥
ಥಳಥಳಿಸುವ ನೀಲಿಯ ಕೊಂಬುವರೆಲ್ಲ ।
ನಳಿನನಾಭನ ಸನ್ನಿಧಿಗೆ ಬನ್ನಿ ॥೩॥

ಎರಡು ಕಾಶಿಯಲಳವ ಕೊಳಗವು ।
ಪಿರಿದುವೊಂದು ಕಿರಿದೊಂದು ಉಂಟಲ್ಲಿಗೆ ॥
ಗರಳವವೊರಿಸಲು ರತ್ನವು ।
ಮರುತಾಶ್ರಯನ ಸನ್ನಿಧಿಗೆ ॥೪॥

ಆರಂಗಡಿಯ ಸುಟ್ಟು ।
ಸೂರೆಮಾಡಿ ಏಳು ಎಂಟು ಹಟ್ಟಕೊರವನೊರೆದುದು ॥
ಸಾರಿಸಿ ನವವಿಧ ಶುಚಿಯ ಹೇಳಿದ ।
ಸರ್ವಾತ್ಮಗೆ ಸೌದೆಯ ॥೫॥

ಸುಂಕಿಗರೈವರಿಗೆ ಹರುಷದಿಂದ ।
ಪಂಕಜನಾಭನ ಚೀಲ ತೋರಿ ॥
ಶಂಕೆಯಿಲ್ಲದೆ ನಡೆವ ಅವರನೆಲ್ಲ ।
ವಂಚಿಸಿ ಎದೆಯ ಟೊಣೆದು ಹೋಗುವಾ ॥೬॥

ಇದೊಂದು ಸರಸಿಗೆ ಬಹಳ ಲಾಭ ತಾ ।
ತಂದು ಕುಳಿತುಂಬುದಕೆ ಉಂಟು ॥
ತಂದೆ ಪುರಂದರ ವಿಠಲರಾಯ ।
ಗಂದವಾಯಿತು ಬೇಹಾರವು ॥ ॥೭॥

--✿✿✿✿✿--

ಇಲ್ಲಿ ನೋಡಲು ರಾಮ, ಅಲ್ಲಿ ನೋಡಲು ರಾಮ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ - ೧೫೬೫)

ಇಲ್ಲಿ ನೋಡಲು ರಾಮ, ಅಲ್ಲಿ ನೋಡಲು ರಾಮ ।
ಎಲ್ಲೆಲ್ಲಿ ನೋಡಲು ರಾಮಚಂದ್ರನು ॥ಪ॥

ಮೂಲೋಕದಲ್ಲಿ ತ್ರೈಮೂರ್ತಿರೂಪಗಳಲ್ಲಿ
ಎಲ್ಲೆಲ್ಲಿ ನೋಡಲು ಅಲ್ಲಲ್ಲಿ ರಾಮರೂಪ ॥ಅ.ಪ॥

ರಾವಣನ ಮೂಲಬಲವ ಕಂಡು ಕಪಿಗಳು
ಆವಾಗಲೆ ಹೊರಟೋಡುತಿರೆ
ಈವಾಗ ನರನಾಗಿ ಇರಬಾರದೆಂದೆನುತ
ದೇವ ರಾಮಚಂದ್ರ ಬಹುರೂಪ ತಾನಾದ ॥೧॥

ಅವನಿಗೆ ಇವ ರಾಮ ಇವನಿಗೆ ಅವ ರಾಮ
ಬುವಿಯೊಳಗೆ ಬೇರೆ ರೂಪವುಂಟೆ
ಅವನಿಯೊಳಿರುತಿಪ್ಪ ದುರುಳಜನರೆಲ್ಲ
ಅವರವರೆ ಹೊಡೆದಾಡಿ ಹತವಾಗಿ ಹೋದರು ॥೨॥

ಹನುಮಂತಾದಿ ಸಾಧುಜನರು ಅಪ್ಪಿಕೊಂಡು
ಕುಣಿದಾಡಿದರು ಅತಿಹರುಷದಲಿ
ಕ್ಷಣದಲಿ ಪುರಂದರವಿಠಲರಾಯನು
ಕೊನೆಗೆ ರಾಮಚಂದ್ರನೊಬ್ಬನಾಗಿ ನಿಂತ ॥೩॥

--✿✿✿✿✿--

೧೧

ರಾಮ ಗೋವಿಂದ ಸೀತಾ-ರಾಮ ಗೋವಿಂದ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ - ೧೫೬೫)

ರಾಮ ಗೋವಿಂದ ಸೀತಾ - ರಾಮ ಗೋವಿಂದ ॥ಪ॥

ತೃಪ್ತಿಯಹುದೆ ಹೆತ್ತ ತಾಯಿ ಇಕ್ಕದನಕ
ಭಕ್ತಿಯಹುದೆ ಭಕ್ತಜನರ ಸಲಹದನಕ
ಮುಕ್ತಿಯಹುದೆ ಭಾವಶುದ್ಧಿ ಇಲ್ಲದನಕ
ಚಿತ್ತಶುದ್ಧಿ ಆತ್ಮನಿಜವು ತಿಳಿಯದನಕ ||೧||

ಓದಲೇಕೊ ಮನದಿ ಜ್ಞಾನವಿಲ್ಲದನಕ
ಭೇದವೇಕೊ ಗತಿಯು ಗಮನ ತಿಳಿಯದನಕ
ಕಾದಲೇಕೊ ಭುಜದಿ ಶಕ್ತಿಯಿಲ್ಲದನಕ
ವಾದವೇಕೊ ಶ್ರುತಿ - ಶಾಸ್ತ್ರ ತಿಳಿಯದನಕ ||೨||

ನಳಿನವಿದ್ದರೇನು ತುಂಬಿಯೊದಗದನಕ
ದಳವು ಇದ್ದರೇನು ಧೈರ್ಯಕೊಡದನಕ
ಲಲನೆಯಿದ್ದರೇನು ಪುತ್ರರಿಲ್ಲದನಕ
ಚೆಲುವನಾದರೇನು ವಿದ್ಯೆ ಕಲಿಯದನಕ ||೩||

ವನವಿದ್ದೇಕೊ ಶುಕ - ಪಿಕವಿಲ್ಲದನಕ
ತನುವಿದ್ದೇಕೊ ಪರಹಿತಕೆ ಬಾರದನಕ
ಮನೆಯಿದ್ದೇಕೊ ಅತಿಥಿಯೊಬ್ಬರಿಲ್ಲದನಕ
ಧನವಿದ್ದರೇನು ದಾನ - ಧರ್ಮಕ್ಕೊದಗದನಕ ||೪||

ಹರಿಯ ಚಿಂತೆಯಿರಲು ಅನ್ಯಚಿಂತೆಯೇತಕೊ
ಹರಿಯ ಧ್ಯಾನವಿರಲು ಅನ್ಯಧ್ಯಾನವೇತಕೊ
ಸಿರಿ ಪುರಂದರವಿಠಲನಿರಲು ಭಯವು ಏತಕೊ
ಹರಿಯು ಒಲಿದ ಮನುಜನಿಗೆ ದೈನ್ಯವೇತಕೊ ||೫||

--✿✿✿✿✿--

೧೨

ರಾಮ ಮಂತ್ರವ ಜಪಿಸೋ-ಹೇ ಮನುಜಾ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ - ೧೫೬೪)

ರಾಮಮಂತ್ರವ ಜಪಿಸೊ - ಹೇ ಮನುಜಾ
ಶ್ರೀ ರಾಮಮಂತ್ರವ ಜಪಿಸೊ ||ಪ||

ಆ ಮಂತ್ರ ಈ ಮಂತ್ರ ನೆಚ್ಚಿ ಕೆಡಲು ಬೇಡ
ಸೋಮಶೇಖರಗಿದು ಭಜಿಸಿ ಬಾಳುವ ಮಂತ್ರ ॥ಅ.ಪ॥

ಕುಲಹೀನನಾದರೂ ಕೂಗಿ ಜಪಿಸುವ ಮಂತ್ರ
ಛಲದಿ ಬೀದಿಯೊಳು ಉಚ್ಚರಿಪ ಮಂತ್ರ ॥
ಹಲವು ಪಾತಕಗಳ ಹಸನಗೆಡಿಸುವ ಮಂತ್ರ
ಸುಲಭದಿಂದಲಿ ಸ್ವರ್ಗಸೂರೆಗೊಂಬುವ ಮಂತ್ರ ॥೧॥

ಸನುಮುನಿಗಳಿಗೆಲ್ಲ ಸಲುಗೆಯಾಗಿಹ ಮಂತ್ರ
ಮನುಮುನಿಗಳಿಗೆಲ್ಲ ಮೌನ ಮಂತ್ರ ॥
ಹೀನಗುಣಗಳೆಲ್ಲ ಹಿಂಗಿ ಹೋಗುವ ಮಂತ್ರ
ಏನೆಂಬೆ ಧ್ರುವನಿಗೆ ಪಟ್ಟಗಟ್ಟಿದ ಮಂತ್ರ ॥೨॥

ಸಕಲವೇದಗಳಿಗೆ ಸಾರವಾಗಿಹ ಮಂತ್ರ
ಮುಕುತಿಪಥಕೆ ಇದು ಮೂಲಮಂತ್ರ ॥
ಶಕುತಪರಕೆ ಇದು ಬಟ್ಟೆದೋರುವ ಮಂತ್ರ
ಸುಖನಿಧಿ ಪುರಂದರವಿಠಲ ಮಹಾಮಂತ್ರ ॥೩॥

--✿✿✿✿✿--

೧೩

ರಾಮ ರಾಮ ರಾಮ ರಾಮನೆನ್ನಿರೋ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ - ೧೫೬೪)

ರಾಮ ರಾಮ ರಾಮ ರಾಮನೆನ್ನಿರೊ ।
ರಾಮ ರಾಮವೆಂಬ ನಾಮ ಮನದಿ ನೆನೆಯಿರೊ ॥ಪ॥

ಇಂದ್ರಿಯಂಗಳೆಲ್ಲ ಕೂಡಿ ಬಂದ ತನ್ನ ಮುಸುಕಿದಾಗ ।
ಸಿಂಧುಸುತಾಪತಿಯ ಧ್ಯಾನ ಅಂದಿಗೆ ಒದಗಲೀಯದು ॥೧॥

ಭರದಿ ಯಮನ ಭಟರು ಬಂದು ಹೊರಡು ಎಂದು ಮೆಟ್ಟಲು
ಕೊರಳಿಗಾತ್ಮ ಸೇರಿದಾಗ ಹರಿಯ ಧ್ಯಾನ ದೊರೆಯದಯ್ಯ ॥೨॥

ಕಾಸಶ್ವಾಸದಲ್ಲಿ ಸಿಲುಕಿ ದೋಷ ಬಲಿದು ಪೋಗುವಾಗ ।
ವಾಸುದೇವನೆಂಬ ನಾಮ ವದನದಲ್ಲಿ ಒದಗದಯ್ಯ ॥೩॥

ಶೃಂಗಾರವಾದ ದೇಹ ತಂಗಿಬಿಟ್ಟು ಪೋಗುವಾಗ ।
ಕಂಗಳಿಗಾತ್ಮ ಸೇರಿದಾಗ ರಂಗಧ್ಯಾನ ದೊರಕದಯ್ಯ ॥೪॥

ಕಷ್ಟಜನ್ಮದಲ್ಲಿ ಬಂದು ದುಷ್ಟಕರ್ಮಗಳನು ಮಾಡಿ ।
ಬಿಟ್ಟು ಹೋಗುವಾಗ ಪುರಂದರವಿಠಲನ ನೆನೆಮನವೆ ॥೫॥

--✿✿✿✿✿--

೧೪

ರಾಮ ಸೀತಾರಾಮ ಎನ್ನಿರೋ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ – ೧೫೬೫)

ರಾಮ ಸೀತಾರಾಮ ಎನ್ನಿರೋ ॥ಪ॥

ಇಂದ್ರಿಯಂಗಳೆಲ್ಲ ಕೂಡಿ
ಬಂದು ತನುವ ಮುಸುಕಲು
ಸಿಂಧುಸುತೆಯ ಪತಿಯಧ್ಯಾನ
ಎಂದಿಗಿಲ್ಲಿ ದೊರೆಯದೊ ॥೧॥

ಭರದಿ ಯಮನ ಭಟರಾಗಲೆ
ಹೊರಡು ಎಂದು ಮೆಟ್ಟಿ ತುಳಿಯೆ
ಕೊರಳಿಗಾತ್ಮ ಸೇರಿದಾಗ
ಹರಿಯ ಧ್ಯಾನ ದೊರೆಯದೊ ॥೨॥

ದೋಷ ಕ್ಲೇಶ – ದುಃಖವೆಂಬ
ಶ್ಲೇಷ್ಮದಲ್ಲಿ ಸಿಕ್ಕಿ ಇರಲು
ವಾಸುದೇವ ಕೃಷ್ಣನೆಂಬು
ದಾ ಸಮಯಕ್ಕೆ ದೊರೆಯದೊ ॥೩॥

ಸಿಂಗಾರವಾದ ದೇಹವೆಲ್ಲ
ಅಂಗವಳಿದು ಮುರಿದು ಬೀಳೆ ॥
ಅಂಗಳಿಗಾತ್ಮ ಸೇರಿದಾಗ
ರಂಗನ ಧ್ಯಾನವು ದೊರೆಯದೊ ॥೪॥

ಕೆಟ್ಟಕೆಟ್ಟರಲ್ಲೊ ಬರಿದೆ
ಕಟ್ಟಕಡೆಯಲ್ಲಿ ಕಾಯ
ಬಿಟ್ಟುಹೋಗುವಾಗ ಪುರಂದರ
ವಿಠಲಧ್ಯಾನ ದೊರೆಯದೊ ॥೫।

--✿✿✿✿✿--

೧೫

ಮಂಗಳಂ ಜಯಮಂಗಳಂ ವಾತಸುತ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ - ೧೫೬೫)

ಮಂಗಳಂ ಜಯಮಂಗಳಂ ॥ಪ॥

ವಾತಸುತ ಹನುಮನ ಒಡೆಯಗೆ ಮಂಗಳ
ದಾತ ಶ್ರೀ ರಘುಪತಿಗೆ ಮಂಗಳ ॥
ಸೇತುವೆಗಟ್ಟಿದ ರಾಯಗೆ ಮಂಗಳ
ಸೀತಾರಮಣಗೆ ಶುಭ ಮಂಗಳ ॥೧॥

ಬಿಲ್ಲ ಹಿಡಿದು ಬಲು ಬಿಂಕದ ದೈತ್ಯರ
ಹಲ್ಲ ಮುರಿದವಗೆ ಮಂಗಳ ॥
ಕಲ್ಲಾದಹಲ್ಯೆಯನುದ್ಧಾರ ಮಾಡಿದ
ಬಲ್ಲಿದ ದಾಶರಥಿಗೆ ಮಂಗಳ ॥೨॥

ಹರಧನು ಮುರಿದ ವಿನೋದಿಗೆ ಮಂಗಳ
ವರದ ತಿಮ್ಮಪ್ಪಗೆ ಮಂಗಳ
ಪುರಂದರವಿಠಲರಾಮಗೆ ಮಂಗಳ
ಸರುವೋತ್ತಮನಿಗೆ ಶುಭಮಂಗಳ ॥೩॥

--✿✿✿✿✿--

೧೬

ಆರು ಬಿಟ್ಟರೂ ನಿನ್ನ ಬಿಡದೆ ನಾ ನಂಬಿದೆ ರಾಮ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ – ೧೫೬೫)

ಆರು ಬಿಟ್ಟರೂ ನಿನ್ನ ಬಿಡದೆ ನಾ
ನಂಬಿದೆ ರಾಮರಾಮ – ಸ್ವಾಮಿ ।
ನೀ ಬಿಟ್ಟರಿನ್ನು ಅದಾರ ಸೇರಲುಬೇಕೊ
– ರಾಮರಾಮ ॥ಪ॥

ತುಂಬಿದ ನದಿಯಲಿ ಹರಿಗೋಲು
ಮುಳುಗಿತೊ ರಾಮ ರಾಮ – ಅಲ್ಲಿ
ಅಂಬಿಗನಾಶೆಯು ಅನುಗಾಲ ತಪ್ಪಿತೊ
– ರಾಮ ರಾಮ ॥೧॥

ನಂಬಿಹಿಡಿದರೆ ಬಲುಕೊಂಬೆಯು
ಮುರಿಯಿತೊ – ರಾಮ ರಾಮ – ಅಲ್ಲಿ
ಹಂಬಲಿಸಿದರೆ ಕೈ ಹಿಡಿವರ ನಾ ಕಾಣೆ
–ರಾಮ ರಾಮ ॥೨॥

ಹಿಂದೆ ನೋಡಲು ಹೆಬ್ಬಾವಟ್ಟಿ
ಬರುತಿದೆ – ರಾಮರಾಮ – ಇಲ್ಲಿ
ಮುಂದೆ ನೋಡಲು ಹೆಬ್ಬುಲಿ ಬಾಯ ತೆರೆದಿದೆ
– ರಾಮ ರಾಮ ॥೩॥

ಇದಕಂಜಿ ಕಡಲಮಡುವ ಪೊಕ್ಕೆನೊ
ಸ್ವಾಮಿ – ರಾಮ ರಾಮ –ಅಲ್ಲಿ
ಅದುಭುತವಾದಂಥ ಆನೆಗಳು ನುಂಗುತಲಿವೆ
– ರಾಮ ರಾಮ ॥೪॥

ಶಿಶುವುತನದಲ್ಲಿ ಪಶುವ ನೀ ಕಾಯ್ದೆಯೊ
– ರಾಮ ರಾಮ
ಅಸಮದಾಕಾರ ಶ್ರೀ ಪುರಂದರವಿಠಲ
– ರಾಮ ರಾಮ ॥೫॥

೧೭

ಜಯ ಜಾನಕೀಕಾಂತ ಜಯ ಸಾಧುಜನ ವಿನುತ

(ಪುರಂದರ ವಿಠಲ / ಶೀನಪ್ಪನಾಯಕ / ೧೪೮೦ – ೧೫೬೪)

ಜಯ ಜಾನಕೀಕಾಂತ ಜಯ ಸಾಧುಜನವಿನುತ
ಜಯತು ಮಹಿಮಾನಂತ ಜಯ ಭಾಗ್ಯವಂತ ॥ಪ॥

ದಶರಥಾತ್ಮಜ ವೀರದಶಕಂಠ ಸಂಹಾರ
ಪಶುಪತೀಶ್ವರಮಿತ್ರ ಪಾವನಚರಿತ್ರ
ಕುಸುಮಬಾಣಸ್ವರೂಪ ಕುಶಲವ ಕೀರ್ತಿಕಲಾಪ
ಅಸಮರಾಕ್ಷಸಶಿಕ್ಷ ಅಂಬುಜದಳಾಕ್ಷ ॥೧॥

ಸಾಮಗಾನವಿಲೋಲ ಸಾಧುಜನಪರಿಪಾಲ
ಕಾಮಿತಾರ್ಥಪ್ರದಾತ ಕೀರ್ತಿವಿಖ್ಯಾತ
ಸೋಮಸೂರ್ಯಪ್ರಕಾಶ ಸಕಲಲೋಕಾಧೀಶ
ಶ್ರೀಮಹಾರಘುವೀರ ಸಿಂಧುಗಂಭೀರ ॥೨॥

ಸಕಲಶಾಸ್ತ್ರವಿಚಾರ ಶರಣಜನಮಂದಾರ
ವಿಕಸಿತಾಂಬುಜವದನ ವಿಶ್ವಮಯಸದನ
ಸುಕೃತಮೋಕ್ಷಾಧೀಶ ಸಾಕೇತಪುರವಾಸ
ಭಕ್ತವತ್ಸಲರಾಮ ಪುರಂದರ ವಿಠ್ಠಲ ॥೩॥

--✿✿✿✿✿--

೧೮

ಶ್ರೀರಾಮ ಎನ್ನಿರೋ ಮೂಜಗದವರೆಲ್ಲ

(ಆದಿಕೇಶವ / ಕನಕದಾಸ / ೧೪೯೫ – ೧೫೯೩)

ಶ್ರೀರಾಮ ಎನ್ನಿರೋ ಮೂಜಗದವರೆಲ್ಲ
ಈರೇಳುಭುವನ ತನ್ನುದರದೊಳಿಟ್ಟನ ॥ಪ॥

ಅನಿಮಿಷರಂದದಿ ವನವಾಸಕೆ ಹೋದವನ
– ಶ್ರೀರಾಮ ಎನ್ನಿರೋ
ಮನಸಿಜನಾರಿಯ ಪಿತನ ಕೊಂದನ ಪಿತನ ಪೊತ್ತವನ
–ಶ್ರೀರಾಮ ಎನ್ನಿರೋ
ಘನಕೋಡ ಕೊನೆಯಿಂದ ಧರಣಿಯ ತಾಳ್ದವನ
– ಶ್ರೀರಾಮ ಎನ್ನಿರೋ
ದಿನಕರನಳಿವಿನಲಿ ಪಗೆಯ ಗೆದ್ದಾತನ
– ಶ್ರೀರಾಮ ಎನ್ನಿರೋ ॥೧॥

ಗಜವನೇರಿದವನ ತಂದೆಯ ತಾಯನಳೆದವನ
– ಶ್ರೀರಾಮ ಎನ್ನಿರೋ
ಭುಜಬಲದಿಂದ ಭೂಪಾಲರ ಗೆದ್ದವನ
– ಶ್ರೀರಾಮ ಎನ್ನಿರೋ
ನಿಜಮುನಿಗಳ ವನದಿಂದ ತನಯರ ತಂದವನ
– ಶ್ರೀರಾಮ ಎನ್ನಿರೋ
ಭುಜಗಧರನ ಕೈಯ ಆಯುಧವನು ತಂದವನ
– ಶ್ರೀರಾಮ ಎನ್ನಿರೋ ॥೨॥

ಪೆಣನ ಭೋಜನ ಮಾಡಿದವರ ವಾಸವ ಹೊಕ್ಕವನ
–ಶ್ರೀರಾಮ ಎನ್ನಿರೋ
ತೃಣಕೆ ಬಾಯಿತ್ತನ ಮೇಲೇರಿ ಬಪ್ಪನ
– ಶ್ರೀರಾಮ ಎನ್ನಿರೋ
ಅಣುರೇಣುತೃಣದೊಳು ಪರಿಪೂರ್ಣನಾದನ
– ಶ್ರೀರಾಮ ಎನ್ನಿರೋ
ಪ್ರಣವಗೋಚರ ಕಾಗಿನೆಲೆಯಾದಿಕೇಶವನ
– ಶ್ರೀರಾಮ ಎನ್ನಿರೋ ॥೩॥

--✿✿✿✿✿--

೧೯
ರಾಮನಾಮವ ನೆನೆ ಮನವೆ
(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ರಾಮನಾಮವ ನೆನೆ ಮನವೆ ರಾಮ ಎಂದವನೆ ಧನ್ಯನು ॥ಪ॥

ಹೀಗೆಂದು ಶ್ರುತಿತತಿಗಳು ಪೊಗಳುತಿರೆ ॥ಅ.ಪ॥

ತರುಣತನದಿ ದಿನ ದಾಟಿತು ಸುಮ್ಮನೆ
ಹೃದಯದೊಳು ಸ್ಮರನಾಡುತಲೆ
ತರುಣಿ ಸುತರು ಸಂಸಾರವೆಂಬೋ ಈ
ಶರಧಿಯೊಳಗೆ ಮುಳುಗಿರದೆ ಮನವೆ ॥೧॥

ಬಗೆಬಗೆ ಜನ್ಮದಿ ಜನಿಸಿದಿ ನಾಳೆಗೆ
ಸಿಗುವುದೆ ನಿಜದಿಂ ಈ ಸಮಯ
ಮುಗುದನಾಗಿ ಪುನಃ ಜನಿಸಿ ಬರುವುದು
ಸೊಗಸು ಕಾಣುವುದೆ ಛೀ ಮನವೆ ॥೨॥

ತೊಂತಿದ ಚಿಂತೆಯ ಸಂತವಿಟ್ಟು ನಿ
ನ್ನಂತರಂಗದೊಳಹರ್ನಿಶವೂ
ಕಂತುಪಿತ ಕನಕಾದಿಕೇಶವನ ನಾಮ
ವೆಂತಾದರು ನೀ ಬಿಡಬ್ಯಾಡ ಮನವೆ ॥೩॥

--✿✿✿✿✿--

೨೦
ಏನು ಮಾಡಲಯ್ಯ ಬಯಲಾಸೆ ಬಿಡದು
(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ಏನು ಮಾಡಲಯ್ಯ ಬಯಲಾಸೆ ಬಿಡದು ॥ಪ॥

ಮಾನವಮೃಗೇಂದ್ರ ರಾಮಚಂದ್ರ ರಕ್ಷಿಸಯ್ಯ ॥ಅ.ಪ॥

ಜ್ಯೋತಿರ್ಮಯವಾದ ದೀಪದ ಬೆಳಕಿಗೆ ತಾನು
ಕಾತರಿಸಿ ಬೀಳುವ ಪತಂಗದಂದದಲಿ
ಧಾತುಗೆಟ್ಟು ಬೆಳ್ಳಿ ಬಂಗಾರದಲಿ ಮೆರೆವ
ಧೂರ್ತೆಯರ ನೋಡುವೀ ಚಕ್ಷುರಿಂದ್ರಿಯಕೆ ॥೧॥

ಅಂದವಹ ಸಂಪಿಗೆಯ ಅರಳ ಪರಿಮಳವುಂಡು
ಮುಂದುವರಿಯದೆ ಬೀಳ್ವ ಮಧುಪನಂತೆ
ಸಿಂಧೂರಗಮನೆಯರ ಸಿರಿಮುಡಿಯೊಳಿಪ್ಪ ಪೂ
ಗಂಧ ವಾಸಿಸುವ ಘ್ರಾಣೇಂದ್ರಿಯಕೆ ॥೨॥

ಗಾಣದ ತುದಿಯೊಳಿಪ್ಪ ಭೂನಾಗನಂ ಕಂಡು
ಪ್ರಾಣಾಹುತಿಯೆಂದು ಸವಿವ ಮೀನಿನಂತೆ
ಏಣಾಕ್ಷಿಯರ ಚೆಂದುಟಿಯ ಸವಿಯ ಸವಿಸವಿದು
ಜಾಣತನದಲಿ ನಲಿವ ಜಿಹ್ವೇಂದ್ರಿಯಕೆ ॥೩॥

ದಿಮಿದಿಮ್ಮಿ ಘಣಘಣಾ ಎಂಬ ಘಂಟೆಯ ರವಕೆ
ಜುಮುಜುಮನೆ ಬೆಮೆಗೊಳ್ಳುವ ಹರಿಣದಂತೆ
ರಮಣಿಯರ ರಂಜಕದ ನುಡಿಗಳನು ಕೇಳಿ ಪ್ರ-
ಣವವೆಂದು ತೋಷಿಸುವ ಕರ್ಣೇಂದ್ರಿಯಕೆ ॥೪॥

ತ್ವಕ್ಕು ಮೊದಲಾದ ಪಂಚೇಂದ್ರಿಯಗಳೊಳು ಸಿಕ್ಕಿ
ಕಕ್ಕುಲತೆಗೊಂಬುದಿದ ನೀನು ಬಿಡಿಸೊ
ಸಿಕ್ಕಿಸದಿರು ಸಿಕ್ಕಿಗೆ ಆದಿಕೇಶವರಾಯ
ದಿಕ್ಕಾಗಿ ನಿನ್ನಂಘ್ರಿಯೊಳೆನ್ನ ಮನವನಿರಿಸೊ ॥೫॥

--✿✿✿✿✿--

೨೧
ಶ್ರೀ ರಾಮರ ಪೂಜಿಸಲಿಲ್ಲ – ಮೈಮರೆತನಲ್ಲ
(ಆದಿಕೇಶವ / ಕನಕದಾಸ / ೧೪೮೫ – ೧೫೮೩)

ಶ್ರೀರಾಮರ ಪೂಜಿಸಲಿಲ್ಲ – ಮೈಮರೆತೆನಲ್ಲ ॥ಪ॥

ಬಾಲತ್ವದಲಿ ಬಲು ಲೀಲೆಯಿಂದಲಿ ನಾನು
ಕಾಲವ ಕಳೆದೆನಲ್ಲ – ಮೈಮರೆತೆನಲ್ಲ ॥೧॥

ಸತಿಸುತರೆ ಎನಗೆ ಗತಿಯೆಂದು ತಿಳಿದು ನಾನು
ಮತಿಗೆಟ್ಟು ಭ್ರಾಂತನಾದೆನಲ್ಲ – ಮೈಮರೆತೆನಲ್ಲ ॥೨॥

ಹೊನ್ನ ಗಳಿಸಿ ಪರರಿಗೆ ಅನ್ನವಿಕ್ಕಲಿಲ್ಲ
ಚೆನ್ನಕೇಶವನ ನಂಬಲಿಲ್ಲ– ಮೈಮರೆತೆನಲ್ಲ ॥೩॥

--✿✿✿✿✿--

೨೨
ಏನ್ಮೈ ರಾವಣ ನಿನ್ಮೈ ಸೀತೆಯ

(ಆದಿಕೇಶವ / ಕನಕದಾಸ / ೧೪೮೫ – ೧೫೮೩)

ಏನ್ಮೈ ರಾವಣ ನಿನ್ಮೈ ಸೀತೆಯ
ಕಾಣದಹಾಗೆ ತರಬಹುದೇನ್ಮೈ ॥ಪ॥

ತಾನಾಗಿ ರಾಮಚಂದ್ರನ ಸೇನೆಯ ಕೂಡಿಕೊಂಡು
ನೀನಿದ್ದ ಬಳಿಗೀಗ ಬಂದಕಾಣ್ಮೈ ಇಕ್ಕೊ ಬಂದಕಾಣ್ಮೈ ॥ಅ.ಪ॥

ನಿನ್ನ ಬಳಿಗೆ ರಾಮ ಎನ್ನ ಕಳುಹಿಕೊಟ್ಟ
ಇನ್ನಾದರು ಸೀತೆಯನು ಬಿಡುತೇನ್ಮೈ
ಬೆನ್ನಿನ ಮರೆಬಿದ್ದು ಹೋಗತೇನ್ಮೈ ರಾಮನ
ಬೆನ್ನಿನ ಮರೆಬಿದ್ದು ಬದುಕೇನ್ಮೈ ॥೧॥

ರುಂಡಮಾಲೆಯ ಕೊಟ್ಟುಕೊಂಡಂಥ ಶಿವ ಕೊಟ್ಟುದು
ಉಂಡು ಸುಖದೊಳಿರಬಾರದೇನ್ಮೈ
ಚಂಡತನಕೆ ಸಿಕ್ಕಿ ತಂಡೋಪತಂಡದಿಂದ
ಹೆಂಡರ ವಾಲೆ ಕೆಡ್ಸಬ್ಯಾಡ ಕಾಣ್ಮೈ ॥೨॥

ಶೂರ್ಪನಖಿ ಹುಚ್ಚುಮೂಳಿಯ ಮಾತು ಕೇಳಿ
ಖರದೂಷಣರು ಏನಾದರು ಹೇಳ್ಮೈ

ಸಾರವ ನೋಡು ನೀನೆ ಸಕಲವ ತಿಳಿದುಕೊಂಡು
ಮಾರಿಯ ಹೊಕ್ಕು ಸಾಯಬ್ಯಾಡ ಕಾಣ್ಯೆ ॥೩॥

ವೇದವನೋದಿಕೊಂಡು ಭೇದವ ತಿಳಿದುಕೊಂಡು
ಮೂದೇವಿ ನಿನಗೆ ಬಂದು ಮೂಡಿತೇನ್ಯೆ
ಕಾದೂವಿಗೆವಿಗಿಚ್ಚ ಬೂದಿಯ ಬುದ್ಧಿಬಿಟ್ಟು
ಪಾದವ ನಂಬಿ ರಾಮನ ಪಡೆಯೇನ್ಯೆ ॥೪॥

ಸಾಕ್ಷಾತು ಹರಿ ರಾಮಚಂದ್ರ ಜಾನಕಿ ಮಹ-
ಲಕ್ಷುಮಿದೇವಿಯೆಂದರಿಯೇನ್ಯೆ
ಲಕ್ಷುಮಣನೆ ಶೇಷ ಈ ಕ್ಷಿತಿ ಸಲಹುವ
ದಕ್ಷರ ಸುತ್ತು ನವಕಪಿಸೇನ್ಯೆ ॥೫॥

ಆದಿಕೇಶವನ ನಂಬಿ ಸಾಧುತನದಿ ನೀನು
ಪಾದದ ಮ್ಯಾಲೆ ಬಿದ್ದು ಬದುಕೇನ್ಯೆ
ನಂಬಿದವರ ಕೆಡಿಸ ರಾಮಸ್ವಾಮಿಸೇವೆಯಮಾಡಿ
ಸುಖಿಯಾಗು ನೀ ಕೆಡಬ್ಯಾಡಕಾಣ್ಯೆ ॥೬॥

--✿✿✿✿✿--

೨೩

ಶರಣು ಶರಣು ಶರಣು ದಶರಥರಾಮ ದೂತಗೆ

(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ಶರಣು ಶರಣು ॥ಪ॥

ಶರಣು ದಶರಥರಾಮದೂತಗೆ ಶರಣು ತುರುಕುಲಾಧೀಶಗೆ
ಶರಣು ವೈಷ್ಣವಮತವಿಲಾಸಗೆ ಶರಣು ಮುಖ್ಯಪ್ರಾಣಗೆ ॥ಅ॥

ವಾರಿಧಿಯನ್ನು ವೇಗದಿ ದಾಟಿ ವನವ ಕಿತ್ತಿದಾತಗೆ
ಮೇರೆಯಿಲ್ಲದೆ ಅಸುರರ ಸಂಹರಿಸಿದ ರಣಶೂರಗೆ
ವಾರಿಜಾಕ್ಷಿ ಸೀತಾದೇವಿಗೆ ವರದ ಮುದ್ರಿಕೆಯನಿತ್ತಗೆ
ಧೀರತನದಲಿ ಅಕ್ಷಕುಮಾರನ ಪ್ರಾಣವನು ಕೊಂಡಗೆ ॥೧॥

ರಾಜಸೂಯವ ರಚಿಸಬೇಕೆಂದು ರಾಜರ ಸೀಳಿದಾತಗೆ
ರಾಜಮುಖಿಯಳ ರಕ್ಷಿಸಿ ಮೃಗರಾಜಗೆ ಒಲಿದಾತಗೆ
ತ್ರಿಜಗವಂದಿತ ದೇವಗೆ ಸಜ್ಜನಪ್ರಿಯ ಎನಿಪಗೆ
ರಾಜಧರ್ಮಗೆ ಅನುಜನಾದಗೆ ರಾಜಪೂಜಿತರಾಜಗೆ ॥೨॥

ಧಾರಿಣಿಯೊಳು ದುರ್ವಾದಿದೈತ್ಯರ ಗಂಟಲಗಾಣವಾದಗೆ
ಮೂರೇಳುಮತವನೆಲ್ಲ ಮುರಿದ ಧೀರಮಧ್ವರಾಯಗೆ
ಸಾರತತ್ತ್ವಗಳನೆಲ್ಲ ಶೋಧಿಸಿ ಸೂರೆಮಾಡಿದಾತಗೆ
ಉರ್ವಿಯೊಳು ವರದೇವತಾದಿಕೇಶವದೊರೆ ದಾಸಗೆ ॥೩॥

--✿✿✿✿✿--

೨೪
ಏನೆಂದಳೇನೆಂದಳೋ

(ಆದಿಕೇಶವ / ಕನಕದಾಸ / ೧೪೮೫ – ೧೫೮೩)

ಏನೆಂದಳೇನೆಂದಳೋ ॥ಪ॥

ನಿನ್ನೊಳು ಸೀತೆ ಹನುಮಯ್ಯ ॥ಅ.ಪ॥

ಜನಕನಮನೆಯಲ್ಲಿ ಜನಿಸಿ ಸುಖದಲ್ಲಿರೆ
ಧನುಸುಮುರಿದು ತರಲು ಘನತನ್ನ ಪದವಿಯ ಬಿಟ್ಟು
ವನವ ಸೇರಿದನೆಂದು ಘನತಪದಿಂದಲಿ
ವನಿತೆ ಮನದಿ ನೊಂದು ॥೧॥

ಕುರುಹಿನುಂಗುರವಾ ತರಳಾಕ್ಷಿಗೆ ಕೊಡೆ
ಬರಿದು ಮಹಾವೆಂದು ಬೇಸರದಿ
ಬೀರಿದಳೇ ಸೀತೆ ಅಶೋಕವನದಿಂದ
ನಿರುತ ಸಂತಾಪದಿಂದಲಿ ಮನದಿ ನೊಂದು ॥೨॥

ಸೇತುವೆಯ ಕಟ್ಟಿ ರಾವಣನಳಿದು ಸಂ
ಜಾತ ಲಂಕಾಧಿಪನನೋಡಿಸಿ
ಸೀತೆಯ ಸೆರೆಯ ಬಿಡಿಸಿದ್ದೇ ಆದರೆ
ನಾಥಾದಿಕೇಶವಗೆ ಬಲುಬಿರುದು ಎಂದು ॥೩॥

೨೫
ನೇಮವಿಲ್ಲದ ಹೋಮವೇತಕಯ್ಯ
(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ನೇಮವಿಲ್ಲದ ಹೋಮವೇತಕಯ್ಯ
ರಾಮನಾಮವಲ್ಲದೆ ಮತ್ತೆ ನಮಗೆ ಬೇರೊಂದೆ ॥ಪ॥

ನೀರ ಮುಣುಗಲು ಏಕೆ ನಾರಿಯನು ಬಿಡಲೇಕೆ
ವಾರಕೊಂದುಪವಾಸವಿರಲೇತಕೆ
ನಾರಸಿಂಹನ ದಿವ್ಯನಾಮವನ್ನು ನೆನೆದರೆ
ಘೋರಪಾತಕವೆಲ್ಲ ತೊಲಗಿ ಪೋಗುವುದು ॥೧॥

ಅಂಬರವ ತೊರೆಯಲೇಕೆ ತಾಂಬೂಲ ಬಿಡಲೇಕೆ
ಡಂಭತನದಲ್ಲಿ ನೀನಿರಲೇತಕೆ
ಅಂಬುಜನಾಭನನು ಭಾವದಲ್ಲಿ ನೆನೆದರೆ
ಇಂಬುಂಟು ವೈಕುಂಠಪುರದೊಳಗೆ ಅಯ್ಯ ॥೨॥

ಬಂಧದೊಳಗೆ ಬಿದ್ದು ಹರಿಯನೆ ನೆನೆಯುತಿರೆ
ಬೆಂದುಹೋಗುವುವು ದುರಿತಂಗಳೆಲ್ಲ
ಬಂದದುಃಖಗಳೆಲ್ಲ ನಿಲ್ಲದಲೆ ಕಳೆಯುವುವು
ಚೆಂದಾಗಿ ಕಾಗಿನೆಲೆಯಾದಿಕೇಶವನ ನೆನೆಯೆ ॥೩॥

--✿✿✿✿✿--

೨೬
ರಾಮರಾಮಾ ಎಂಬ ನಾಮವನು ಅನವರತ
(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ರಾಮರಾಮಾ ಎಂಬ ನಾಮವನು ಅನವರತ
ತಾಮಸವ ಬಿಟ್ಟು ನೆನೆಯಿರೊ ಮನುಜರು ॥ಪ॥

ಕಾಷಾಯಾಂಬರ ಧರಿಸಿ ಕೊಡೆ ಕಮಂಡಲ ಪಿಡಿದು
ವೇಷಧಾರಕನಾಗಿ ತಿರುಗಬೇಡ
ದೇಶದೊಳಗುಳ್ಳ ತೀರ್ಥಂಗಳಲಿ ಮುಳುಗಿ ನಿ-
ರ್ದೋಷಿಯಾದೆನೆಂಬ ನೇಮ ಬೇಡ
ಆಶೆಯಿಂದಲಿ ಪರರ ಮನೆಯ ಬಾಗಿಲು ಕಾಯ್ದು
ಕ್ಲೇಶಪಡಿಸಲಿಬೇಡ ಬರಿದೆ ತನುವ
ಬೇಸರದೆ ಹಗಲಿರುಳು ಜಗದೀಶ ರಾಘವನ್ನ ನೆನೆಯಿರೊ ॥೧॥

ತನುವ ದಂಡಿಸಬೇಡ ನಿರಶನವ್ರತದಿಂದ
ವನಿತೆಯನು ಬಿಟ್ಟು ತಪವಿರಲುಬೇಡ
ವನದೊಳಗೆ ಕಂದಮೂಲಾಹಾರಗಳ ತಿಂದು
ದಿನವ ಕಳೆದೆನೆಂಬೊ ನೆನಹುಬೇಡ
ಧನವ ವಿಪ್ರರಿಗಿತ್ತು ಧನ್ಯತೆಯ ಪಡೆವ ಭಾವಬೇಡ
ಅನಲಮುಖದಿಂದ ಕರ್ಮವನು ಕಳೆದು
ಅನಿಮಿಷತ್ವವ ಪಡೆವ ಮುಕ್ತರಾಗಿರೊ ॥೨॥

ನಿಷ್ಠೆನಾದೆನೆಂಬ ನೇಮಬೇಡ
ಅಷ್ಟಕರಣೇಂದ್ರಿಯಗಳು ಜಪತಪಹೋಮ
ನೈಷ್ಠಿಕ ಬ್ರಹ್ಮಚರ್ಯವನು ಅನುಸರಿಸಿ ಭೂ-
ಸೃಷ್ಟಿಯೆಲ್ಲವ ತೊಳಲಿ ಬಳಲಬೇಡ
ಶ್ರೇಷ್ಠವಹ ಪಂಚಯಜ್ಞಂಗಳಿಂ ಭೂತ
ತುಷ್ಟಿಪಡಿಪೆನೆಂಬ ಚೇಷ್ಟೆ ಬೇಡ ಈ
ಕಷ್ಟಸಂಸಾರವನು ದಾಂಟುವರೆ ಪರ -
ಮೇಷ್ಠಿಪಿತನಂಘ್ರಿಯನು ಭಜಿಸಿರೊ ॥೩॥

ಒಮ್ಮೆ ಹರಿಯೆಂದು ಸ್ಮರಿಸಲು ಅಶ್ವಮೇಧಫಲ ಮ-
ತ್ತೊಮ್ಮೆ ನೆನೆವುದರಿಂದ ಕೋಟಿಫಲವು
ಕ್ರಮದಿಂದ ಬ್ರಹ್ಮಾದಿಭೋಗಗಳನ್ನು ಬಯಸಿ
ದುರ್ಮತಿಗಳಾಗಿ ತಾ ತಿರುಗಿಬಹರು
ನಿರ್ಮಲಾಂತಃಕರಣನಾಗಿ ಅಕ್ಷರವೆರಡ

ಸುಮ್ಮಾನದಿಂದ ಉಚ್ಚರಿಸುತಿಹರ ಕರ್ಮಬಂಧನ
ವಿಮೋಚನವಾಗಿ ಮನದೊಳಿಹ ಹಮ್ಮು
ಮಮತೆಯನಳಿದು ಮುಕ್ತರಹರು ॥೪॥

ರಾಮನಾಮವೆ ಸಕಲಸುಕೃತಫಲ ಪಾಪಹರ
ರಾಮನಾಮವೆ ಸಕಲಶಾಸ್ತ್ರಸಿದ್ಧ
ರಾಮನಾಮವೆ ಭವಾಂಬುಧಿಗೆ ಬಡಬಾನಲ
ರಾಮನಾಮವೆ ಕರೆವ ಕಾಮಧೇನು
ರಾಮನಾಮವೆ ಇಹಪರಸಾಧನ
ಸಾಮಜನ ಪೊರೆದ ವೇಲಾಪುರಾಧೀಶ್ವರನ
ರಾಮಾದಿಕೇಶವನ ಚರಣವನು ಭಜಿಸಿರೊ ॥೫॥

--✿✿✿✿✿--

೨೭
ಅಂಗಳದೊಳು ರಾಮನಾಡಿದ

(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ಅಂಗಳದೊಳು ರಾಮನಾಡಿದ
ಚಂದ್ರಬೇಕೆಂದು ತಾ ಹಠಮಾಡಿದ ॥ಪ॥

ತಾಯಿಯ ಕರೆದು ಕೈಮಾಡಿ ತೋರಿದ
ಮುಗಿಲ ಕಡೆಗೊಮ್ಮೆ ದಿಟ್ಟಿಸಿ ನೋಡಿದ
ಚಿಣಿಕೋಲು ಚೆಂಡು ಬುಗುರಿ ಎಲ್ಲವಾ
ಬೇಡ ಬೇಡಾ ಎನ್ನುತ್ತಾ ಬೀಸಾಡಿದ ॥೧॥

ಕಂದ ಬಾಯೆಂದು ತಾಯಿ ಕರೆದಳು
ಮಮ್ಮು ತಿನ್ನೆಂದು ಬಣ್ಣಿಸಿದಳು
ತಾಯಿ ಕೌಸಲ್ಯ ಕಳವಳಗೊಂಡಳು
ಕಂದ ಅಂಜಿದಾ ಎನುತಿದ್ದಳು ॥೨॥

ಅಳುವ ಧ್ವನಿಯ ಕೇಳಿ ರಾಜನು
ಮಂತ್ರಿ ಸಹಿತಾಗಿ ಧಾವಿಸಿ ಬಂದನು
ನಿಲುವಗನ್ನಡಿ ತಂದಿರಿಸಿದ
ಶ್ರೀರಾಮನ್ನ ಎತ್ತಿ ಮುದ್ದಾಡಿದ ॥೩॥

ಕನ್ನಡಿಯೊಳು ಬಿಂಬ ನೋಡಿದ
ಚಂದ್ರಸಿಕ್ಕಿದನೆಂದು ಕುಣಿದಾಡಿದ
ಈ ಸಂಭ್ರಮನೋಡಿ ಆದಿಕೇಶವ
ರಘುವಂಶವನ್ನೇ ಕೊಂಡಾಡಿದ ॥೪॥

--✿✿✿✿✿--

೨೮
ಶ್ರೀರಾಮಚರಣಸೇವಕ ವಿಭೀಷಣನೊಲಿದು

(ಆದಿಕೇಶವ / ಕನಕದಾಸ / ೧೪೮೫ - ೧೫೮೯)

ಶ್ರೀರಾಮಚರಣಸೇವಕ ವಿಭೀಷಣನೊಲಿದು
ತಾ ರಾಮನಂಘ್ರಿಯುಗಳ ನೆನೆದು ಎದ್ದು
ತೀರಿಸಿದ ನಿತ್ಯಕರ್ಮವನು ಬಿಡದೆ
ಆರಾಧಿಸಿ ಕೊಂಡಾಡಿದನು ನಡೆದ
ವೀರರಾವಣನೆಡೆಗೆ ತಾನು ॥ಪ॥

ಬರಲು ಕಂಡ ರಾವಣ ಸಹೋದರರನ ಕುಳ್ಳಿರಿಸಿ ಸ
ತ್ಕಾರವನು ಮಾಡಿ ನೋಡಿ ಆ ಕ್ಷಣದಿ
ತಂದೆವಲ್ಲೋ ಸೀತೆಯೆಂದ ॥ಅ.ಪ॥

ಕಟ್ಟಾಳು ರಾಮಚಂದ್ರನ ಕೆಣಕಿ ಬಲ್ಲಿದರು
ಕೆಟ್ಟವರು ಬಹಳಮಂದ್ಯೋ ಅಣ್ಣಾ ಮೋಹಿನಿಗಾಗಿ
ಸುಟ್ಟುಹೋದ ಭಸ್ಮಾಸುರನು ಕಾಮಧೇನುವಿಗೆ
ಮಡಿದ ಅರ್ಜುನನು ಪಾಂಚಾಲಿಗೆ
ಕೆಟ್ಟ ಕೀಚಕನು ಇದನರಿತು ಸೆರಗಿನಲಿ ಬೆಂಕಿಯನು
ಕಟ್ಟಿಕೊಳ್ಳಲಿಬ್ಯಾಡವೋ ಅಣ್ಣಾ ಕೊಟ್ಟು
ಕಳುಹೋ ಸೀತೆಯಾ ॥೧॥

ಕಿರಿತಮ್ಮನ ಮಾತು ಕೇಳಿದನು ದನುಜೇಂದ್ರ
ಶಿರನೊಲಿದೊಲಿದು ನಗುತ ತಮ್ಮಾ ಈ
ಧರೆಯೊಳಗೆ ಎನಗೆ ಎದುರ್ಯಾರೋ ಮೇಲೆ

ಸುರರೊಳಗದಾರುಂಟು ಹೇಳೋ ಮಿಕ್ಕ
ನರರ ಪಾಡೆನಗೆ ಸಾರೋ ಈ
ಹರನ ಕೃಪೆಯಿಂದ ನಾ ಬಲವಂತನಾಗಿಹಪರಿ ನೀ
ನರಿಯೇನೋ ತಮ್ಮ ಬಿಡಬಿಡೆನೊ ಸೀತೆಯ ॥೨॥

ಅಣ್ಣನೆಂಬೋದು ಕೇಳಿ ಮರುಗಿ ವಿಭೀಷಣನು
ಬಣ್ಣಗೆಟ್ಟಿತು ಲಂಕೆ ಎಂದ ಶಿರಗ-
ಳಣ್ಣೆ ಕಲ್ಲಾಡುವನು ರಾಮ ಬಹುಶಃ
ಮಣ್ಣಗೂಡುವುದು ನನ್ನ ವಂಶನಿರ್ನಾಮ ಸ್ವಾಮಿ
ಅನ್ಯಾಯಕೊಪ್ಪನೆಂಬೊ ನೇಮ ಅಹುದು
ಕಣ್ಣಾರ ಕಾಣಬೇಕಾಯಿತೀ ದುಃಖವನು ಮುಂ-
ದುಣ್ಣಬೇಕಾಯಿತಲ್ಲೊ ಅಣ್ಣಾ ಕೊಟ್ಟುಕಳುಹೊ ಸೀತೆಯಾ ॥೩॥

--✿✿✿✿✿--

೨೯

ಏನು ಸಿರಿಯಿಂದ ನೀ ಎನ್ನ ಮರೆತೆ

(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ಏನು ಸಿರಿಯಿಂದ ನೀ ಎನ್ನ ಮರೆತೆ
ಜಾನಕೀರಮಣನೆ ಪೇಳು ನೀ ಎನಗೆ ॥ಪ॥

ಸುರರ ಸೆರೆಯನು ಬಿಡಿಸಿ ಕಾಯ್ದೆನೆಂಬ ಸಿರಿಯೊ
ಕರಿಯ ಮೊರೆಯನು ಲಾಲಿಸಿದೆನೆಂಬ ಸಿರಿಯೊ
ಧುರದೊಳಗೆ ರಾವಣನ ಶಿರವ ತರಿದೆನೆಂಬ ಸಿರಿಯೊ
ಹರುಷದಿಂ ಪೇಳೆನಗೆ ಶ್ರೀನರಹರಿಯೇ ॥೧॥

ಮುನಿಜನಂಗಳು ನಿನ್ನ ಸ್ತುತಿಸುತಿಹರೆಂಬ ಸಿರಿಯೊ
ಹನುಮ ನಿನ್ನ ಬಂಟನಾದನೆಂಬ ಸಿರಿಯೊ
ಬಿನುಗುದೈವಂಗಳು ನಿನಗೆಣೆಯಲ್ಲವೆಂಬ ಸಿರಿಯೊ
ಅನುಮಾನವ್ಯಾತಕ್ಕೆ ಪೇಳು ಅಚ್ಯುತನೇ ॥೨॥

ಭೂಮಿಯನು ಮೂರಡಿಯ ಮಾಡಿದೆನೆಂಬ ಸಿರಿಯೊ
ಕಾಮ ನಿನ್ನ ಸುತನಾದನೆಂಬ ಸಿರಿಯೊ
ಆ ಮಹಾಲಕುಮಿ ನಿನ್ನ ಸತಿಯಾದಳೆಂಬ ಸಿರಿಯೊ
ಪ್ರೇಮದಿಂ ಪೇಳೆನಗೆ ಶ್ರೀನರಹರಿಯೇ ॥೩॥

ಕಡಲೊಳಗೆ ಮನೆಮಾಡಿ ಮಲಗಿದೆನೆಂಬ ಸಿರಿಯೊ
ಮೃಡ ನಿನ್ನ ಸಖನಾದನೆಂಬ ಸಿರಿಯೊ
ಬಿಡದೆ ದ್ರೌಪದಿ ಮಾನಕಾಯ್ದೆನೆಂಬ ಸಿರಿಯೊ
ದೃಢವಾಗಿ ಹೇಳೆನಗೆ ದೇವಕೀಸುತನೇ ॥೪॥

ಇಂತು ಸಿರಿಯಲಿ ಎನ್ನ ನೀ ಮರೆತೆಯೊ
ಪಂಥವೇ ಇದು ಎನಗಿದಾವ ನಡತೆ
ಕಂತುಪಿತ ಕಾಗಿನೆಲೆಯಾದಿಕೇಶವರಾಯ
ಚಿಂತೆಯನು ಬಿಡಿಸಿ ನಿಶ್ಚಿಂತೆಯಲಿ ಪಾಲಿಸೆ ॥೫॥

--✿✿✿✿✿--

೩೦
ಎಲ್ಲಿ ನೋಡಿದರಲ್ಲಿ ರಾಮ

(ಆದಿಕೇಶವ / ಕನಕದಾಸ / ೧೪೮೫ - ೧೫೮೩)

ಎಲ್ಲಿ ನೋಡಿದರಲ್ಲಿ ರಾಮ – ಇದ ॥ಪ॥

ಬಲ್ಲ ಜಾಣರ ದೇಹದೊಳಗೆ ನೋಡಣ್ಣ ॥ಅ.ಪ॥

ಕಣ್ಣೇ ಕಾಮನ ಬೀಜ -- ಈ
ಕಣ್ಣಿಂದಲೆ ನೋಡು ಮೋಕ್ಷಸಾಮ್ರಾಜ್ಯ
ಕಣ್ಣಿನ ಮೂರುತಿ ಬಿಗಿದು – ಒಳ
ಗಣ್ಣಿಂದಲೇ ದೇವರ ನೋಡಣ್ಣ ॥೧॥

ಮೂಗೇ ಶ್ವಾಸ ನಿಃಶ್ವಾಸ – ಈ
ಮೂಗಿಂದಲೇ ಕಾಣೋ ಯೋಗ ಸಂನ್ಯಾಸ

ಮೂಗನಾದರೆ ವಿಶೇಷ – ಒಳ
ಮೂಗಲಿ ನೋಡಣ್ಣ ಲೀಲಾವಿಲಾಸ ॥೨॥

ಕಿವಿಯೇ ಕರ್ಮಕೆ ದ್ವಾರ – ಈ
ಕಿವಿಯಿಂದಲೇ ಕೇಳೋ ಮೋಕ್ಷದ ಸಾರ
ಕಿವಿಯೇ ಕರ್ಮಕುಠಾರ – ಒಳ
ಗಿವಿಯಲ್ಲಿ ಕಾಣೋ ನಾದದ ಬೇರ ॥೩॥

ಬೊಮ್ಮ ಮಾಡಿದ ತನುಬಿಟ್ಟು – ವಿಶ್ವ
ಕರ್ಮನು ಮಾಡಿದ ಬೊಂಬೆಯನಿಟ್ಟು
ಸುಮ್ಮನೆ ಕೂಗುಗಳಿಟ್ಟು – ಅದ
ನಂಬುವನೆಂಬೋನು ಹೋಹ ಕಂಗೆಟ್ಟು ॥೪॥

ರೂಢಿಯೊಳಗೆ ಶುದ್ಧಮೂಢ – ಈ
ಕಾಡುಕಲ್ಲುಗಳನ್ನು ನಂಬಬೇಡ
ನಾಡಾಡಿದೈವಗಳನೆಲ್ಲ – ನಮ್ಮ
ಬಾಡದಾದಿಕೇಶವನೊಬ್ಬನೆ ಬಲ್ಲ ॥೫॥

--✿✿✿✿✿--

೩೧

ರಾಮ ರಾಮೆಂದವನಿಗೆ ಏನೇನು ಭಯವಿಲ್ಲ

(ಆದಿಕೇಶವ / ಕನಕದಾಸ / ೧೪೮೫ – ೧೫೮೩)

ರಾಮ ರಾಮೆಂದವನಿಗೆ ಏನೇನು ಭಯವಿಲ್ಲ
ರಾಮಾ ರಾಮಾ ರಾಮಾ ॥ಪ॥

ಸೂಜಿಗಡತರ ಮರವು
ದಬ್ಬಣಗಡತರ ಹುರಿಯು ॥೧॥

ಒಂಟಿಗಡತರ ಕಾಯಿ
ಆನಿಗಡತರ ಹಣ್ಣು ॥೨॥

ಕಣ್ಣು ಇಲ್ಲದ ಮನುಜ
ನೋಡ್ಯಾನ ಆ ಹಣ್ಣು ॥೩॥

ಕಾಲು ಇಲ್ಲದ ಮನುಜ
ನೋಡ್ಯಾನ ಆ ಹಣ್ಣು ॥೪॥

ಏರ್‍ಯಾನು ಆ ಮರವ
ಕೈ ಇಲ್ಲದ ಮನುಜ ॥೫॥

ಕೊಯ್ದಾನು ಆ ಹಣ್ಣು
ತಳ ಇಲ್ಲದ ಬುಟ್ಟಿ ॥೬॥

ಇಳಿಸ್ಯಾರು ಆ ಹಣ್ಣು
ನೆತ್ತಿ ಇಲ್ಲದ ಮನುಜ ॥೭॥

ಹೊತ್ತಾನು ಆ ಹಣ್ಣು
ಸಂತಿ ನೆರೆಯದ ಪ್ಯಾಟಿ ॥೮॥

ಇಳಿಶ್ಯಾರು ಆ ಹಣ್ಣು
ಮೂಗಿಲ್ಲದ ಜಾಣ ॥೯॥

ಮೂಸಿ ನೋಡಿದನು ಹಣ್ಣ
ಅಂಗಳಿಲ್ಲದ ಅಣ್ಣ ॥೧೦॥

ನುಂಗಿಬಿಟ್ಟನು ಹಣ್ಣ
ಧರೆಯೊಳು ಆದಿಕೇಶವನೊಬ್ಬನೆ ಬಲ್ಲ ॥೧೧॥

ರಾಮಾ ರಾಮೆಂದವನಿಗೆ .....

--✿✿✿✿✿--

೩೨

ಕಾಯಯ್ಯ ರಘುರಾಮ ದೀನಜನೋದ್ಧಾರಿ

(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಕಾಯಯ್ಯ ರಘುರಾಮ
ದೀನಜನೋದ್ಧಾರಿ ರಘುರಾಮ ॥ಪ॥

ಕೇವಲ ಪತಿಪಾಮರ ನಾನು
ಕೈವಲ್ಯಾವನ ಮೂರುತಿ ನೀನು
ಕೇವಲ ಘನ ಅಪರಾಧಿಯು ನಾನು
ದೇವನೆ ಕರುಣಾಸಾಗರ ನೀನು ॥೧॥

ಭಾವಭಕುತಿಕೀಲವ ನಾನರಿಯೆ
ವಿವೇಕಾಮೃತ ನೀಡುವ ದೊರೆಯೆ
ಆವಾಗ ವಿಷಯಾಸಕ್ತನು ಹರಿಯೆ
ಕಾವ ದೈವ ನೀನೆ ಶ್ರೀ ಹರಿಯೆ ॥೨॥

ಚರಣವೆ ಗತಿಯೆಂದಾತನ ತಂದೆ
ತರಳನ ಕುಂದನಾರಿಸದಿರು ತಂದೆ
ತರಳಮಹಿಪತಿ ಪ್ರಭು ನಮೋ ಎಂದೆ
ಶರಣರಕ್ಷಕ ನೀನಿಹುದೆಂದೆ ॥೩॥

--✿✿✿✿✿--

೩೩

ರಾಮರಾಮೆನ್ನಿರೋ ಮುಖ್ಯ ತಾ ಕಾರುಣ

(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ರಾಮರಾಮೆನ್ನಿರೋ ಮುಖ್ಯ ತಾ ಕಾರುಣ
ನೇಮದಿಂದಾಯಿತು ಅಹಲ್ಯೋದ್ಧರಣ
ರೋಮರೋಮಕೆ ತಾ ಪ್ರೇಮ ಬಾಹಗುಣ
ನಾಮಸ್ಮರಿಸಿ ದಶರಥಾತ್ಮಜನ ॥೧॥

ಒಮ್ಮೆ ಸ್ಮರಿಸಿರೊ ರಾಮರಾಮೆಂದು ತಾ
ಸುಮ್ಮನೆ ಬಾಹುದು ಸಾರದ ಅಮೃತ
ತಮ್ಮನ ಜೀವಪಡೆದ ಸಂಜೀವ ತಾ
ಝುಮ್ಮನೆ ಹಾದಿಮಾಡಿತು ಸಮುದ್ರ ತಾ ॥೨॥

ರಾಮರಾಮೆನ್ನಲು ಸಾಮರಾಜ್ಯಹುದು
ನೇಮದಿಂದೆನ್ನಿರೊ ಶ್ರಮನೀಗೋಗುದು
ನಾಮ ಕೊಂಡಾಡಲು ರಾಮನಂತಾಹುದು
ಸುಮ್ಮನೆಯಾದರೆ ತಾಮಸಬಾಹುದು ॥೩॥

ರಾಮರಾಮೆಂದರೆ ಬ್ರಹ್ಮರಾಕ್ಷಸ ತಾ
ಸುಮ್ಮನೆ ಓಡಿಹೋಗುದು ತಾತ್ಕಾಲ ತಾ
ನಾಮ ಸೇವಿಸಲು ಸುಮ್ಮಲ್ಹೊಳೆದು ತಾ
ಝುಮ್ಮನೆ ಬಾಹುದು ಭಾಗ್ಯ ಕೈಕೊಟ್ಟು ತಾ ॥೪॥

ರಾಮನಾಮವೆ ತಾ ಪಾಪಕೆ ತಾ
ನಾಮ ತೇಲಿಸಿತು ನೀರೊಳು ಪರ್ವತ
ನೇಮದಿಂದಾದರ ಭಕ್ತರರಹುತಾ
ಸೀಮಿ ಕೈಕೊಟ್ಟಿತು ಭಕ್ತಗೆ ಶಾಶ್ವತ ॥೫॥

ನಾಮವೆ ಕಪಿಕುಲವ ತಾರಿಸಿತು
ಸೋಮಶೇಖರಗೆ ತಾನೆ ಪ್ರಿಯಾಯಿತು
ಗ್ರಾಮನಂದಿಯಲಿ ನೇಮಪೂರಿಸಿತು
ರೋಮರೋಮೆಲ್ಲ ಭರತಗ ಸುಖವಾಯಿತು ॥೬॥

ಸ್ವಾಮಿ ಶ್ರೀರಾಮನಾಮ ಸುಧಾಮೃತ
ಕಾಮಪೂರಿಸುವ ಕಾಮಧೇನುವೆ ತಾ
ನೇಮದಿಂದಾಗುವ ಮಹಿಪತಿಗಿಂತ
ರಾಮರಾಜ್ಯವೆ ಎನ್ನೊಳಗಾಗೆದ ತಾ ॥೭॥

--✿✿✿✿✿--

೩೪

ರಾಮ ಸಲಹಯ್ಯ ಪುಣ್ಯನಾಮ ಶ್ರೀ ರಾಘವೇಂದ್ರ

(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ರಾಮ ಸಲಹಯ್ಯ ಪುಣ್ಯನಾಮ ಶ್ರೀ ರಾಘವೇಂದ್ರ
ಪೂರಿತಕಾಮ ನೇಮಶ್ಯಾಮ ಪರಮಗುಣ ರತ್ನಧಾಮ ॥ಪ॥

ವನಜಾಂತಕ ಕುಂದರದನ ಅನುಪಮ ಸುಂದರವದನ
ರಣದಲಿ ಜಿತದಶವದನ
ಅನಂತ ಮದನಲಾವಣ್ಯ ಸದನ ॥೧॥

ಕರುಣ ಶರಣ ಭರಣ ಭರಣ ಧರಣೋದ್ಧಾರಣ
ಸ್ಫುರಣ ಕಿರಣದೋರಣ ಚರಣ ಅರುಣಾಂಬುಜಾಲಯರಮಣ ॥೨॥

ವೀರಗುಣಗಂಭೀರ ಕ್ರೂರಾಸುರಸಂಹಾರ
ಶೂರ ಜನ್ಮವಿದೂರ ಮಹಿಪತಿ
ಧೀರ ಕೃಷ್ಣೊಡಿಯ ಉದಾರ ॥೩॥

--✿✿✿✿✿--

೩೫

ಶ್ರೀ ರಾಮ ರಾಮ ಜಯ ಜಯಾತ್ಮಾರಾಮ

(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಶ್ರೀರಾಮ ರಾಮ ॥ಪ॥

ಜಯ ಜಯಾತ್ಮಾರಾಮ ದಯಗುಣದಿ ನಿಸ್ಸೀಮ
ಮಾಯಾರಹಿತನುಪಮಕಾಯ ಕೃಪಾನಿಧಿ ನಮ್ಮ ॥೧॥

ಮುನಿಜನರ ಪ್ರತಿಪಾಲ ದೀನಬಂಧು ದೀನದಯಾಳ
ಘನಸುಖದ ಕಲ್ಲೋಳ ನೀನಹುದೈ ಅಚಲ ॥೨॥

ಕರುಣಾಬ್ಧಿ ನೀನೆ ರಾಮ ಹರಹೃದಯವಿಶ್ರಾಮ
ತರಳಮಹಿಪತಿ ನಿಮ್ಮ ಸ್ಮರಿಸುವ ಪಾದಪದ್ಮ ॥೩॥

೩೬
ಶ್ರೀ ರಾಮನಾಮಾ ಶರಣಾಗತ ರಕ್ಷಕ ನೇಮ
(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಶ್ರೀ ರಾಮನಾಮಾ ॥ಪ॥

ಶರಣಾಗತರಕ್ಷಕನೇಮ ಸುರಮುನಿಜನಪೂರಿತಕಾಮ
ಹರಹೃದಯಕಾತಿಹುದು ವಿಶ್ರಮ ಶ್ರೀ ರಾಮನಾಮ ॥೧॥

ತರಣೋಪಾಯಕತಿಸುಗಮ ವರ್ತಿಸುತಿಹದಾಗಮ ನಿಗಮ
ಪುರತ್ರಯಪಾವನ ಮಾಡುತಿಹುದು ಪರಮ ॥೨॥

ಕರುಣಾರ್ಣವ ಕಲ್ಪದ್ರುಮ ವರಪ್ರತಾಪದಿ ನಿಸ್ಸೀಮ
ತರಳಮಹಿಪತಿ ಪಾವನಮಾಡಿತು ಜನ್ಮ ॥೩॥

--✿✿✿✿✿--

೩೭
ಶ್ರೀ ರಾಮ ರಾಮನೇ ಸಾರ್ವಭೌಮ
(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಶ್ರೀರಾಮರಾಮನೇ ಸಾರ್ವಭೌಮ
ಪರಮಪುರುಷೋತ್ತಮಾನಂತ ಮಹಿಮ ॥ಪ॥

ಹರಹೃದಯವಿಶ್ರಾಮ ಸುರಜನರಿಗೆ ಪ್ರೇಮ
ಕರುಣಾಸಾಗರ ಸಕಲಾತ್ಮರಾಮ ॥೧॥

ಸುರಭಿಕಲ್ಪದ್ರುಮಸಾರ ಸ್ವಹಿತನಾಮ
ಖರದೂಷಣಾರಿ ಪೂರಿತಕಾಮ ॥೨॥

ವರದಯದಿ ನಿಸ್ಸೀಮ ಹೊರೆವ ಶರಣರ ನೇಮ
ತರಳಮಹಿಪತಿ ಸ್ವಾಮಿ ಘನಮಹಿಮ ॥೩॥

೩೮
ಸಾರ್ವಭೌಮ ನೀ ರಾಮ ಶರಣರಕ್ಷಕನೇಮ
(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಸಾರ್ವಭೌಮ ನೀರಾಮ ಶರಣರಕ್ಷಕನೇಮ ॥ಪ॥

ಸೀತಾಮನೋಹರ ಸೇತುಗಟ್ಟಿದ ಶೂರ
ಹತ್ತುತಲಿಯವನ ಮಾಡಿದೊ ಸಂಹಾರ
ಖ್ಯಾತಿಗೆ ತಂದ್ಯೊ ವಿಭೀಷಣಗೆ ಸ್ಥಿರ ॥೧॥

ಕುಡುವೆ ನೀ ವರಪೂರ್ಣ ದೃಢಭಕ್ತರ ಪ್ರಾಣ
ಆಡುದೊಂದೆ ವಚನ ಬಿಡುವದೊಂದೆ ಬಾಣ
ಜಡವಾಗಿದ್ದ ಶಿಲೆಯ ಮಾಡಿದ್ಯುದ್ಧರಣ ॥೨॥

ಸಮಸ್ತಜನಪ್ರಿಯ ಸೋಮಶೇಖರಧ್ಯೇಯ
ನಾಮ ಸ್ಮರಿಸುವರಿಗಿಹೆ ಹೃದಯ
ಸ್ವಾಮಿ ನೀನಹುದೊ ದಾಸಮಹಿಪತಿಯ ॥೩॥

--✿✿✿✿✿--

೩೯
ಸ್ವಾಮಿ ನೀನೇ ಸಾರ್ವಭೌಮ ಶ್ರೀರಾಮ
(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಸ್ವಾಮಿ ನೀನೆ ಸಾರ್ವಭೌಮ ಶ್ರೀ ರಘುರಾಮ
ಸೋಮಶೇಖರಪ್ರಿಯ ದಿವ್ಯ ನಿನ್ನನಾಮ ॥ಪ॥

ಕಾಕುತ್ಸ್ಥತಿಲಕ ಕಾರುಣ್ಯನಿಧಿ ಕೃಪಾಲ
ಪ್ರಕಟ ಪ್ರಖ್ಯಾತಲಿಹ ಸತ್ಯಶೀಲ
ನಾಕಜರ ಸೆರೆಬಿಡಿಸ್ಯಾದೆ ಸಾನುಕೂಲ
ಸಕಲಸುಖದೀವ ಮೂಲೋಕಪಾಲ ॥೧॥

ಖರದೂಷಣಾರಿ ಶರಣಾಗತರ ಸಹಕಾರಿ
ಸರ್ವರಾಧಾರಿ ಕೋದಂಡಧಾರಿ
ದುರಿತ ದುಷ್ಕೃತ ದುರುಳ ದುಷ್ಟಜನಸಂಹಾರಿ
ವರಪೂರ್ಣವೀವ ಪರಮ ಉದಾರಿ ॥೨॥

ಅನುದಿನದಲಿ ನಿನ್ನ ನಡಿನುಡಿಗಳೊಂದವೆ ನೇಮ
ಅನಂತಗುಣ ಪೂರ್ಣಾನಂದ ಮಹಮಹಿಮ
ದೀನ ಮಹಿಪತಿ ಅತ್ಮಾರಾಮ ಪೂರಿತಕಾಮ
ಭಾನುಕೋಟಿತೇಜ ಘನದಯ ನಿಸ್ಸೀಮ ॥೩॥

--✿✿✿✿✿--

೪೦
ಸ್ವಾಮಿ ಸೀತಾರಾಮ ಪತಿತಪಾವನ ನಾಮ

(ಮಹಿಪತಿ / ಕಾಖಂಡಕಿ ಮಹಿಪತಿರಾಯ / ೧೬೪೦ - ೧೭೦೫)

ಸ್ವಾಮಿ ಸೀತಾರಾಮ ಪತಿತಪಾವನ ನಾಮ ॥ಪ॥

ಅಮಿತವಾದ ಗುಣ ನಿರ್ಮಳಾಚರಣಿ
ಕಮಲಭವಾರ್ಚಿತ ಕಾರ್ಮುಕಪಾಣಿ
ನೇಮದಿಂದಾಡುವ ಅಮೃತವಾಣಿ ॥೧॥

ಸಮಸ್ತ ಹೃದಯಾಂತ್ರ ವಿಮಲಸುಚರಿತ್ರ
ಸುಮನ ಸುಗಾತ್ರ ಅಮರಜನೇತ್ರ
ಸೋಮಶೇಖರಪ್ರಿಯ ಪುಣ್ಯಪವಿತ್ರ ॥೨॥

ಸಾಹ್ಯಸಹಕಾರ ಬಾಹ್ಯಾಂತ್ರ ಸ್ಥಿರ
ಸ್ವಹಿತದಾಗರ ಮಹಿಪತಿ ಮನೋಹರ
ಮಹಾಮಹಿಯನ್ನುಳ್ಳನಹುದೋ ಉದಾರ ॥೩॥

--✿✿✿✿✿--

೪೧
ಪಾಲಯ ಸೀತಾರಾಮ ಭೌಮ
(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಪಾಲಯ ಸೀತಾರಾಮ ಭೌಮ ॥ಪ॥

ದಶರಥನಂದನ ದಶಮುಖಭಂಜನ ತ್ರಿ
ದಶಭಯಶಮನ ಸುಸ್ಮಿತವದನ ॥೧॥

ವಾತಜನುತ ಪಾತಕಹರ ವಿಧಿತಾತ ಮು
ನೀತಪದ ಭೂತಪವರದ ॥೨॥

ಇನಕುಲರಕ್ಷ ದೀನಜನರಕ್ಷ
ಮುನಿಜನತೋಷ ಪ್ರಸನ್ವೆಂಕಟೇಶ ॥೩॥

--✿✿✿✿✿--

೪೨
ಪಾಲಿಸೋ ಶ್ರೀರಾಮಪೂತ ನೀರದಶ್ಯಾಮ
(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಪಾಲಿಸೋ ಶ್ರೀರಾಮಪೂತ ನೀರದಶ್ಯಾಮ ॥ಪ॥

ಕೌಶಿಕಪ್ರಿಯ ಸುಸತಿ ಸಹಾಯ
ಕೌಸಲ್ಯಾಪುತ್ರ ಕಮನೀಯಗಾತ್ರ ॥೧॥

ಪಶುಪತಿವಂದ್ಯ ಪರಮಾನಂದ
ದೂಷಣ ಖರಾರಿ ದಶಶಿರಹಾರಿ ॥೨॥

ಋಷಿ ಹೃತ್ಪೂರ್ಣ ರಘುಕುಲರನ್ನ
ಪ್ರಸನ್ವೆಂಕಟೇಶ ಪವನಜತೋಷ ॥೩॥

--✿✿✿✿✿--

೪೩
ಪಾಹಿ ಮಾಂ ಪಾಹಿ ಸೀತಾಪತೇ
(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಪಾಹಿಮಾಂ ಪಾಹಿ ಸೀತಾಪತೇ ||ಪ||

ವಾಣೀಧವಪಿತ ಫೋಣಿ ರಥಪದ
ಪಾಣಿ ನಂದಕೃಪಾಣಿ ಜಯ ಜಯ
ಕ್ಷೋಣೀವಲ್ಲಭ ಕ್ಷೋಣೀಸುತಾಚಿ
ದ್ರೌಣ ವರಾಹಾಗ್ರಣಿ ಶ್ರೀರಾಮ ||೧||

ರಾಜಕುಲಾಂಬುಧಿ ರಾಜಾರಮಣ
ರಾಜತೇಜ ವೈರಾಜ ಜಯ ಜಯ
ರಾಜಸೂಯಾರ್ಚಿತ ರಾಜೇಶ್ವರ ಸುರ
ರಾಜಾನುಜ ರಘುರಾಜ ಶ್ರೀರಾಮ ||೨||

ಮಂದರಧರ ನಿಜಸುಂದರ ಚಿನ್ಮಯ
ಮಂದಿರ ನಿತ್ಯಾನಂದ ಜಯ ಜಯ
ವೃಂದಾವನಚರ ವೃಂದಾರಕ ಮುನಿ
ವೃಂದ ನೃಪಾನ್ವಯವಂದ್ಯ ಶ್ರೀರಾಮ ||೩||

ಶ್ರೀಪದ ಶ್ವೇತದ್ವೀಪನಿಲಯ ಶ್ರುತಿ
ತಾಪಹರಣ ನಿರ್ಲೇಪ ಜಯ ಜಯ
ಶ್ರೀ ಪ್ರಸನ್ವೆಂಕಟಭೂಪತಿ ಭುವನ
ವ್ಯಾಪಕ ಪೂರ್ಣಪ್ರತಾಪ ಶ್ರೀರಾಮ ||೪||

--✿✿✿✿✿--

೪೪
ಬಂದಕೋ ರಾಮಚಂದ್ರ
(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಬಂದಕೋ ರಾಮಚಂದ್ರ
ಬಂದನದಕೋ ರಾಮಚಂದ್ರನವನಿಜೆಯ ಕಳು
ಹೆಂದರೆ ವಿಭೀಷಣನ ಕುಂದ ನುಡಿದಣ್ಣ ||ಪ||

ಲೆಂಕರೊಳೊರ್ವನು ಮಾಭುಂಕರಿಸಿ ವನದಿ
ಶಂಕ ರಕ್ಕಸರಳಿದು ಲಂಕೆ ಉರುಹಿದ
ಸಂಖ್ಯೆರಹಿತ ಪ್ಲವಗರಂಕಪಡೆಯೊಡನೆ ಬಹ
ಪಂಕರುಹಮುಖಿ ಕೊಡೆನಲಹಂಕರಿಸಿದಣ್ಣ ||೧||

ಜೀವರಂತಲ್ಲ ಹರಿ ಸಾವು ರಚಿತ ನಿಮಗು
ಶಿವನ ಬಿಲ್ಮುರಿದ ಭಾವರಿವಿರಿ
ನೀವು ರಕ್ಕಸರಾಕೆ ದೇವರರಸಿಯ ಬಯಸ
ಲಾವರಿಸದೆನೆ ಕೊಲ್ಲಲಿ ಕಾವರಿಸಿದಣ್ಣ ||೨||

ಅನುಜವಾಕ್ಯವ ಕೇಳಿ ದನುಜನುಗ್ರದಿ ಹುಲು
ಮನುಜ ಸರಿಯೇ ನನ್ನರಣ ಜಯಿಪನೆ
ಇನಜಭವ ಶುಭಕಂಠಾಂಜನಿಜ ಜಾಂಬವ ಮುಖ್ಯರ
ದನುಜ ಗ್ರಹಿಸದರಿವನೆನೆ ಜಡಧಿಯಣ್ಣ ||೩||

ವಿಧಿಯಲೇಖನ ನೋಡಿ ಕುದಿಯಲಾರ್ದಟ್ಟಿಹರು
ಸುಧೆಯೆ ವಿಷವೈ ಕ್ರೂರಹೃದಯಗೆನಲು
ಬದಿಯ ತಿವಿದೆಲೆ ಹೇಡಿ ಮದೀಯಾರಿ ಹೋಗೆನ್ನೆ ಅಂ
ಬುಧಿಯಿಳಿದ ರಾಮಕುಶಲುದಯವೆಲ್ಲಣ್ಣ ||೪||
ದೂಷಣೋಕ್ತಿಯಿಂ ಚಿಂತಾಕೃಶನಾಗಿ ರಾಮಪದ
ದರ್ಶನಾಪೇಕ್ಷದಲಿ ವಿಭೀಷಣ ನಿಲುತ
ಪ್ರಸನ್ನವೆಂಕಟರಾಮನಶನಿಶರಕಂಗನಗ
ನುಸಿ ನುಗ್ಗಹುದು ಸತ್ಯ ಪುಸಿನುಡಿಯೆನಣ್ಣ ||೫||

--✿✿✿✿✿--

೪೫
ರಾಮ ರಾಮ ಸೀತಾರಾಮ ರಘುರಾಮ
(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ರಾಮ ರಾಮ ಸೀತಾರಾಮ ರಘುರಾಮ ||ಪ||

ರಾಮರಾಮ ರಘುನಂದನ ತೋಷವ
ಆಮಿಷಪಾದಾಂಬುಜ ಪಾವನ
ನಾಮ ವಿಮಲ ಕಮಲಾಯತಲೋಚನ
ಭೂಮಿಜಾರಮಣ ಸದಾ ಶುಭಮಹಿಮನೆ ॥೧॥

ದಂಡ ಕುಖರಹರ ವಂದಿತ ಸುಜಟಾ
ಮಂಡಿತಮೌಳಿ ಮುನೀಂದ್ರಕರಾರ್ಚಿತ
ಚಂಡಕುಲೇಶ ಖಳನಿಶಾಚರ
ದಂಡನ ವರಕೋದಂಡವಿದಾರಿ ॥೨॥

ವಾರಿದ ಶಾಮ ದಯಾಂಬುಧಿ ಭಕ್ತ ಸ
ಮೀರಜ ಸೇವ್ಯ ವಿಭೀಷಣವರದ ಸು
ಸ್ಮೇರವದನ ಸಾಮ್ರಾಜ್ಯ ಪಾರಾಯಣ
ಭೂರಿ ಪ್ರಸನ್ವೆಂಕಟ ಕೃಷ್ಣ ನಮೋ ॥೩॥

--✿✿✿✿✿--

೪೬

ರಾಮನ ನೋಡಿರೈ ರಘುಕುಲ ಸೋಮನ

(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ರಾಮನ ನೋಡಿರೈ ರಘುಕುಲ
ಸೋಮನ ಪಾಡಿರೈ ॥ಪ॥

ಜೀಮೂತ ಶ್ಯಾಮಲಕಾಯ ಜನಕ
ಜಾಮಾತ ಸೀತಾಕಾಂತ ॥ಅ.ಪ॥

ಕೋಟಿದಿವಾಕರನಿಭ ಮಕುಟದ
ಮಸ್ತಕದ ಮುದ್ದಿನ ಮುಖದ
ನೀಟಹ ಪಣೆಯಲಿ ಮೃಗಮದ
ಪುಂಡ್ರತಿಲಕದ ನೀಲಾಳಕದ
ಮಾಟಕ ಮದನನ ಬಿಲ್ಲ ಹಳಿವ

ಹುಬ್ಬುಗಳ ಇತ್ತಂಡಗಳ
ನೋಟದಿ ದಯಾರಸ ಸೂಸುವ
ಕಮಲದಳಗಳ ಸಮನಯನಗಳ ॥೧॥

ಎಸೆವ ಸುನಾಸಿಕ ಜ್ವಲಿತಕುಂಡಲ
ಸ್ಮಿತವದನ ಶಶಿಸಮರದನ
ಹೊಸತುಲಸಿಯ ಮಂಜರಿ
ವನಮಾಲಾಧರನ ಸತ್ಕಂಧರನ
ಮಿಸುನಿಯ ವೈಜಯಂತಿ ತ್ರಿಸರವು
ದಿವ್ಯಪದಕಗಳ ಝುಳ ಝುಳಪುಗಳ
ಲಸತ್ ಶ್ರೀವತ್ಸವಕ್ಷದಿಕುಂಕುಮ
ಚಂದನದ ಗುಣಗಣಘನದ ॥೨॥

ಮರಕತಸ್ತಂಭಗಳಿಗೆ ಪೋಲ್ವೆಡೆಬಾಹುಗಳ
ಅಂಗದಯುಗಳಕರವಲಯಾಂಗುಲಿಮುದ್ರಿಕೆ
ಧೃತಕೋದಂಡ ದಂಡಕದಂಡ
ಸಿರಿಜಠರ ತ್ರಿವಳಿ ಗಂಭೀರನಾಭ
ನಿರ್ಜರನಾಭವರಪಿಂಗಳ
ಕೌಶೇಯಾಂಬರ ಕಟಿಸೂತ್ರ ಶ್ರೀ ಬ್ರಹ್ಮಸೂತ್ರ ॥೩॥

ಬಟ್ಟದೊಡೆ ಜಾನು ಘಟ್ಟದಂತೋಪಮ
ಜಂಘಸಂವೃತ ಜಂಘಾ
ಕುಟಿಲ ನೀ ರಾಕ್ಷಸದಲ್ಲಣ
ಪೆಂಡೆಯದ ಚೆಲುವಾ ಜನಜನಿಗೊಲಿವ
ಕಠಿಣತರ ಪದತಳದೆಡೆ ಧ್ವಜಾಂಕುಶಾಂಬುಜ
ಹೃತ್ಕಲುಷಾನಿಟಿಲನಯನ ವಿಧಿಸುರ
ಋಷಿವಂದಿತ ಚರಣ ನೂಪುರಾಭರಣ ॥೪॥

ಸುಖಮುನಿ ಮುಖ್ಯಮುನಿಪೂಜಿತ
ವಿಗ್ರಹ ವಾರಾಪಾರ ವಿಹಾರ
ನಿಖಿಲಗುಣಾರ್ಣವ ನಿತ್ಯದಯಾರ್ಣವ ರಾಜ

ರಾಜಾಧಿರಾಜಸಕಲಸಂಯಮಿಕುಲಮೌಳಿರತುನ
ಸತ್ಯಪೂರ್ಣಮನೋರಥಪೂರ್ಣ ಪ್ರಸ
ನ್ವೆಂಕಟಪತಿ ಶ್ರೀ ಭೂಲೋಲ
ಭುವನಕೆ ಮೂಲ ||೫||

--✿✿✿✿✿--

೪೭
ರಾಮನೆನ್ನಿ ರಾಮನೆನ್ನಿ
(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ರಾಮನೆನ್ನಿ ರಾಮನೆನ್ನಿ
ವ್ಯೋಮಕೇಶಗೆ ದಿವ್ಯನಾಮಾಮೃತವಿತ್ತ ||ಪ||

ಪಾತಕವನು ಮಾಡಿ ಪಾತಕರೊಡನಾಡಿ
ಸೂತಕಾಗಿ ವಿಪ್ರಘಾತಕಾಗಿ
ಜಾತಿಬಾಹಿರನಾಗಿ ಧಾತುಗೆಟ್ಟವಗೆ, ಶ್ರೀ
ಸೀತಾಕಾಂತನ ನಾಮಪೂತಕಾರಣ ||೧||

ಕದ್ದು ಬಂಗಾರವ ಮೆದ್ದು ಅಭಕ್ಷಣ
ಒದ್ದು ದುರ್ಬಲರ ಸೊಕ್ಕಿದ್ದು ನಿತ್ಯ
ಶ್ರದ್ಧಾವಿಹೀನನಾದ ಮದ್ಯಪ್ರಾಶನಿಯೊದ
ಶುದ್ಧಾತ್ಮಕನಿಗೆ ಶುದ್ಧಕರನು ಮೂಲ ||೨||

ಪರಪತ್ನಿಗಮಿಸಿ ಭೂಸುರವೃತ್ತ ಭೇದಿಸಿ
ಪರತಾಪೇಕ್ಷಿಸದೆ ಪಾಮರನಾಗಿಹ
ನರಗೆ ಪಶ್ಚಾತ್ತಾಪ ಬರಿಸುವ ಪ್ರಸನ್ವೆಂಕ
ಟರಸನೆ ತುದಿಯಲಿ ಹೊರೆವ ಬಿಡದೆ ರಘು ||೩||

--✿✿✿✿✿--

ರಾಮಸ್ಮರಣೆಯಿಂದ ಸಕಲ ಪಾಪಹರ ರಾಮ

(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ರಾಮಸ್ಮರಣೆಯಿಂದ ಸಕಲ
ಪಾಪಹರ ರಾಮ ರಾಮ ಎನ್ನಿರೊ
ವ್ಯೋಮಕೇಶನ ದಿವ್ಯತಾರಕ ಮಂತ್ರವು ||ಪ||

ಶತಕೋಟಿ ರಾಮಾಯಣದ ಬೀಜಾಕ್ಷರ
ರಾಮ ರಾಮ ಎನ್ನಿರೊ
ಕ್ಷಿತಿಜೆಯ ಪ್ರಾಣದ್ವಲ್ಲಭ ಶ್ರೀದಶರಥ
ರಾಮ ರಾಮ ಎನ್ನಿರೊ ||೧||

ಪಾಮರರೆಲ್ಲರು ಪಂಡಿತರಾದರು
ರಾಮ ರಾಮ ಎನ್ನಿರೊ
ಆ ಮೋಕ್ಷ ಕರತಳವಾಹುದು ಕೊಂಡಾಡೆ
ರಾಮ ರಾಮ ಎನ್ನಿರೊ ||೨||

ಮಖಕೋಟಿಗಧಿಕ ಮಹಾಪುಣ್ಯದಾಯಕ
ರಾಮ ರಾಮ ಎನ್ನಿರೊ
ಮುಕ್ತಾಮುಕ್ತಾರ್ಚಿತ ಕರುಣವಾರಿಧಿ
ರಾಮ ರಾಮ ಎನ್ನಿರೊ ||೩||

ಭಕ್ತವತ್ಸಲ ಭಾಗ್ಯಭೂಷಿತ ಭವಹರ
ರಾಮ ರಾಮ ಎನ್ನಿರೊ
ನಿಖಿಲಭುವನಪತಿ ಬ್ರಹ್ಮಾದಿಸುರವಂದ್ಯ
ರಾಮ ರಾಮ ಎನ್ನಿರೊ ||೪||

ಅಂಜನಾಜಾತಪೂಜಿತ ಪಾದವಾರಿಜ
ರಾಮ ರಾಮ ಎನ್ನಿರೊ
ಕಂಜನೇತ್ರ ಕಂಜಸಖ ಅನಂತಪ್ರಭ
ರಾಮ ರಾಮ ಎನ್ನಿರೊ ||೫||

ದಶಶಿರಮರ್ದನ ವಿಭೀಷಣವರಪದ
ರಾಮ ರಾಮ ಎನ್ನಿರೊ
ಸುಶರಧಿಬಂಧನ ಸುಗ್ರೀವಸಂಸೇವ್ಯ
ರಾಮ ರಾಮ ಎನ್ನಿರೊ ॥೬॥

ಲಕ್ಷ್ಮಣ ಭರತ ಶತ್ರುಘ್ನಾರಾಧಿತ
ರಾಮ ರಾಮ ಎನ್ನಿರೊ
ಋಕ್ಷವರಪ್ರದ ರಘುಕುಲಾಂಬುಧಿಚಂದ್ರ
ರಾಮ ರಾಮ ಎನ್ನಿರೊ ॥೭॥

ಜ್ಞಾನಾನಂದ ಬಲಾತ್ಮ ಪರಬ್ರಹ್ಮ
ರಾಮ ರಾಮ ಎನ್ನಿರೊ
ಮೌನಿನಿಕರ ಧ್ಯೇಯ ಪುಣ್ಯಪುರುಷಗೇಹ
ರಾಮ ರಾಮ ಎನ್ನಿರೊ ॥೮॥

ಪ್ರಸನ್ನಮೂರುತಿ ಪ್ರಸನ್ನಾನನ ಪರಮಾತ್ಮ
ರಾಮ ರಾಮ ಎನ್ನಿರೊ
ಪ್ರಸನ್ನನಿಲಯ ನಿತ್ಯಪ್ರಸನ್ನವೆಂಕಟರಾಮ
ರಾಮ ರಾಮ ಎನ್ನಿರೊ ॥೯॥

--✿✿✿✿✿--

೪೯
ಶರಣು ಭಾಸ್ಕರಕುಲಶರಧಿ ಪೂರ್ಣಸೋಮ

(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಶರಣು ಭಾಸ್ಕರಕುಲಶರಧಿ ಪೂರ್ಣಸೋಮ
ಕರುಣಾಮೃತ ಪೂರ್ಣರಾಮ ॥ಪ॥

ನೃಪದಶರಥನ ತ್ಯಜಿಸಿ ಸೌಮಿತ್ರನ ಕೂಡಿ
ವಿಪಿನದಿ ಸೀತೆ ಕಾಣದೆ ನೀ
ಕಪಿಗಳ ನೆರಹಿ ಅಂಬುಧಿಗೆ ದಾರಿಯ ಬಲಿದೆ
ಕಪಟರಾವಣನ ಸವರಿದೆ ॥೧॥

ನಿಜರಾಣಿಯ ಯಜ್ಞಿಯ ಮುಖದಲಿ ಕೈಕೊಂಡು
ಸುಜನವಿಭೀಷಣನ ಪೊರೆದೆ
ತ್ರಿಜಗವಂದಿತ ಪುಷ್ಪಕವನೇರಿ ಬಂದು ಅ
ನುಜ ಭರತನ ಕಾಯ್ದೆ ಅಂದು ॥೨॥

ಹಲವು ಸಾಸಿರ ಅಬ್ಧ ಅಯೋಧ್ಯೆಯನಾಳ್ದೆ ಅ
ನಿಲತನಯನ ಸೇವೆಗೊಲಿದೆ
ಸುಲಭದಿ ಮುಕ್ತಿ ತೋರಿದೆ ಪ್ರಸನ್ವೆಂಕಟ
ನಿಲಯ ಭಕ್ತರಿಗೆ ಇತ್ತೆ ತುಷ್ಟಿ ॥೩॥

--✿✿✿✿✿--

೫೦
ಶರಣು ಶರಣು ರಾಮ ರಘುಕುಲ

(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಶರಣು ಶರಣು ರಾಮ ರಘುಕುಲ
ಶರಣು ಪೂರಣ ಸೋಮ
ಕರುಣಾಪಾಂಗದಿ ಶರಣಾಗತರ ಭಯ
ಹರಣಾಹಲ್ಯೋದ್ಧರಣ ಕಾರಣ ಸುಚರಣ ॥ಪ॥

ದಂಡಕದನುಜನ ದಂಡಿಸಿದಗಣಿತ
ಚಂಡ ರುಚಿರಕೋದಂಡಕರ
ಕುಂಡಲಮಂಡಿತ ಗಂಡ ಸುತಂಡ ಬೊ
ಮ್ಮಾಂಡ ಕೋಟಿರಕ್ಷಾ ಪುಂಡರೀಕಾಕ್ಷ ॥೧॥

ದೂಷಣ ಖರಾಂತಕ ದಶಶಿರದಮನ ತ್ರಿ
ದಶರ ಪೊರೆದ ಜಗದೀಶವರದ
ಬಿಸಜಭವ ಸಮೀರ ಪಶುಗಮನಾದಿ ಸು
ರೇಶನುತಪದನೆ ಅಶೇಷದುರಿತಾರಿ ॥೨॥

ದುಷ್ಟಜನಮರ್ದನ ಜಠರಜನ ನರಸಿಂಹ
ಚಟುಲ ದ್ವಿಜಾರ್ಚಿತಪಟು ದೇವ
ತೃಟಿಯೊಳು ನೆನೆವರ ಕುಟಿಲವಾರಕ ವಿಶ್ವ
ನಾಟಕ ಪ್ರಸನ್ನವೆಂಕಟ ರಘುರಾಮ ॥೩॥

--✿✿✿✿✿--

೫೧

ಶ್ರೀ ಮಂಗಳದೇವಿಗೆ ಜಯ ಜಯ

(ಪ್ರಸನ್ವೆಂಕಟ / ವೆಂಕಟೇಶ / ೧೬೮೦ – ೧೭೫೨)

ಶ್ರೀ ಮಂಗಳದೇವಿಗೆ ಜಯ ಜಯ
ಶ್ರೀ ಮಂಗಳದೇವಿಗೆ ಜಯ ಜಯ
ಸ್ವಾಮಿಗೆ ಜಯ ಸ್ವಾಮಿನಿಗೆ । ಜಯ ಜಯವೆಂದು ಪಾಡಿ
ಜಾನಕಿರಾಮಗಾರತಿಯ ಬೆಳಗಿರೆ ॥ಪ॥

ಪದುಮಿಣಿಯರು ಪತಿವ್ರತಾಮಣಿಯರು
ವಿಧುಬಿಂಬದ ಮುಖಿಯರು ಸಖಿಯರು
ಪದುಮರಾಗದ ಹರಿವಾಣದಿ । ಹರಿವಾಣದಿ ಹರಿಮಣಿ
ದೀಪದಕದಡಿನಾರತಿಯ ಬೆಳಗಿರೆ ॥೧॥

ಉಲಿವಂದುಗೆಗಾಲಿನ ಮೇಲಿನ
ಕಲಧೌತದ ಇತ್ತರದುತ್ತರಿ
ಥಳಥಳಿಸುವ ಶಶಿರವಿ ಕೋಟಿಗಳ । ಕೋಟಿಗಳಗೆಲುವ
ರವಿಕುಲತಿಲಕಗಾರತಿಯ ಬೆಳಗಿರೆ ॥೨॥

ಅಂಗದ ವಲಯಾಂಗುಲಿ ಮುದ್ರಿಕೆ
ರಂಗಮಾಣಿಕ ಮುತ್ತಿನ ಸರ
ಬಂಗಾರದ ಮೇಲೆ ವೈಜಯಂತಿ । ವೈಜಯಂತಿ ಪದಕವು
ತುಳಸಿಶೃಂಗಾರಗಾರತಿಯ ಬೆಳಗಿರೆ ॥೩॥

ಇಂದಿರೆ ಸೀತಾರ್ಪಿತಮಾಲಾ
ಕಂಧರ ಭುವನಾವಳಿಗಪ್ರತಿ
ಸುಂದರ ಸದ್ಗುಣಸಾಂದ್ರ ಉಪೇಂದ್ರ ಭೂಮಿಜೇಂದ್ರ
ಲಕ್ಷ್ಮಣಾಗ್ರಜ ರಾಮಚಂದ್ರಗಾರತಿಯ ಬೆಳಗಿರೆ ॥೪॥

ಕುಂಡಲ ಮುಕುಟಾಂಕಿತ ಸನ್ಮುಖ ಸುಭ್ರೂಹಿತ
ಮಂಡಲ ಗಂಡದ
ಪುಂಡರೀಕಾಭಾನಯನದ ನಯನದ ಘನಶಾಮಲವರಕೋ
ದಂಡಗಾರತಿಯ ಬೆಳಗಿರೆ ॥೫॥

ಋಷಿಮಖವನು ಈಕ್ಷಿಸಿ ರಕ್ಷಿಸಿ
ವಿಷಮಾಚರಿ ರಾಕ್ಷಸಿ ಶಿಕ್ಷಿಸಿ
ವಿಷಕಂಠನ ಧನುವ ಮುರಿಹೊಯಿದು ಮುರಿಹೊಯಿದು
ವೈದೇಹಿಯ ಘನತುಷಿಸಿದಗಾರತಿಯ ಬೆಳಗಿರೆ ॥೬॥

ಹನುಮನ ಕಂಠದ ಸನ್ಮಣಿಗೆ
ಪಣೆಗಣ್ಣನ ಶ್ರೀ ಜಪಮಣಿಗೆ
ನೆನೆವರ ಚಿಂತಾಮಣಿ ಸೀತಾಶಿರೋಮಣಿಗೆ ಶಿರೋಮಣಿಗೆ
ಪ್ರಸನ್ನವೆಂಕಟ ವನಜೋದ್ಭವಪಿತಗಾರತಿಯ ಬೆಳಗಿರೆ ॥೭॥

--✿✿✿✿✿--

೫೨
ಸೀತಾಪತೇ ಸ್ವಾಮಿ ಸೀತಾಪತೇ

(ಪ್ರಸನ್ವೆಂಕಟ / ವೆಂಕಟೇಶ / ೧೬೮೦ - ೧೭೫೨)

ಸೀತಾಪತೇ ಸ್ವಾಮಿ ಸೀತಾಪತೇ
ವಾತಜನುತ ಭೂತನಾಥಪತೇ ರಾಮ ॥ಪ॥

ಗುಪ್ತಗುಣ ತಾಳಸಪ್ತಾಘಹನ
ದೀಪ್ತಕಾಯ ಕುಶಸುಪ್ತಜಯರಾಮ ॥೧॥

ತಾಟಕಾರಿ ರಘುರಾಮ ಹರಿ
ಹಾಟಕಪುರಪ ನಿಶಾಟಹರ ರಾಮ ॥೨॥

ಭರ್ತನೇಮ ಪರಿಪೂರ್ತ ನಮೋ
ಕರ್ತ ಪ್ರಸನ್ವೆಂಕಟಾರ್ತಾಶ್ರಯ ಪಾಹಿ ॥೩॥

--✿✿✿✿✿--

೫೩
ಏನುಕಾರಣ ಮಲಗಿದಿಯೋ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ಏನು ಕಾರಣ ಮಲಗಿದಿಯೋ
ಶ್ರೀನಾಥ ರಘುಕುಲೋದ್ಭವ ದರ್ಭಶಯನಾ ॥ಪ॥

ಸೀತೆ ಪೋದಳು ಎಂದು ಚಿಂತೆಯಲಿ ಮಲಗಿದೆಯೋ
ಸೇತುಗಟ್ಟುವದು ಅಸಾಧ್ಯವೆಂದು ಮಲಗಿದೆಯಾ
ಕೋತಿಗಳ ಕೈಯಲೆ ರಣವಾಗದೆಂದು ಮಲಗಿದೆಯಾ
ಪಾತಕಹರದೈತ್ಯಭಂಜಾ ತಿಳುಪುವದು
ಜ್ಯೋತಿರ್ಮಯರೂಪ ದರ್ಭಶಯನಾ ॥೧॥

ವನವಾಸ ತಿರುಗಲಾರೆನೆಂದು ಮಲಗಿದೆಯೋ
ವನಧೀಶ ಮಾರ್ಗವನು ಕೊಡನೆಂದು ಮಲಗಿದೆಯೋ
ದನುಜ ಬಲ್ಲಿದನೆಂಬೊ ವ್ಯಾಕುಲದಿ ಮಲಗಿದೆಯೋ
ಜನನಮರಣರಹಿತ ರಾಮ ತಿಳುಹುವದು
ಹನುಮವಂದಿತಪಾದ ಶ್ರೀದರ್ಭಶಯನಾ ॥೨॥

ಅನಿಲಾರಿ ಅಹರಗೆ ಕರುಣಿಸಿ ಮಲಗಿದೆಯೋ
ವನಜಸಂಭವಗೆ ನೀ ಒಲಿಯ ಬಂದು ಮಲಗಿದಿಯೋ
ಮುನಿಗಳು ಸ್ತೋತ್ರವ ಮಾಡಲು ಹಿಗ್ಗಿ ಮಲಗಿದೆಯೋ
ಜನನಾಥ ಜಾನಕೀಕಾಂತ ತಿಳುಪುವದು
ಎನಗೊಲಿದ ವಿಜಯವಿಠ್ಠಲ ದರ್ಭಶಯನಾ ॥೩॥

ಕಾಮಹರ ಒಬ್ಬ ತಾನೆ ಬಲ್ಲಾ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ಕಾಮಹರ ಒಬ್ಬ ತಾನೆ ಬಲ್ಲಾ ।
ರಾಮ ರಾಮ ಸೀತಾರಾಮ ರಾಮನಲ್ಲದಿಲ್ಲವೆಂದು ॥ಪ॥

ಕೈಯಲಿ ಕಿನ್ನರಿ ಧರಿಸಿ ಸಿರಿಮೊಗದಿಂದ ।
ಮೈಯಲಿ ದ್ವಾದಶಪುಂಡ್ರ ಧರಿಸಿ ।
ಕೈಲಾಸಗಿರಿಯಲ್ಲಿ ಪಾರ್ವತಿಕೂಡ ಜಗ
ದಯ್ಯನಯ್ಯ ಜಗದೊಡಿಯ ರಾಮನಲ್ಲದಿಲ್ಲೆಂದು ॥೧॥

ಫಣಿಯಾಭರಣವು ಪಡೆಯೆತ್ತಿ ಇರಲು ।
ಮಣಿಮಣಿ ರುಂಡಮಾಲೆ ತೂಗಾಡಲು ।
ಕುಣಿದು ಕಣಕಾಲಿಂದ ಥಕ್ ಥಕ್ ಥೈ ರು
ಕ್ಮಿಣಿ ಪತಿ ಸರ್ವೋತ್ತಮ ರಾಮನಲ್ಲದಿಲ್ಲವೆಂದು ॥೨॥

ಕಾಳಕೂಟದ ವಿಷಬಿಂದು ಮಾತುರನುಂಗೆ ।
ತಾಳಲಾರದೆ ತಳಮಳವಗೊಂಡು ।
ಕಾಳಿಮರ್ದನ ಕಮಲಾಯತಾಕ್ಷ ಎನ್ನ ।
ಪಾಲಿಸಿದ ಪರಮಾತ್ಮ ರಾಮನಲ್ಲದಿಲ್ಲವೆಂದು ॥೩॥

ಗಜಮುಖ ತಾಳವ ಪಿಡಿದು ತಥೈ ಎನ್ನಿ ।
ಅಜಸುತ ರಿಪು ಮದ್ದಳಿಯೆ ಮುಟ್ಟಿ ।
ಗಜಚರ್ಮಾಂಬರ ಗಾಯನವ ಮಾಡುತ
ತ್ರಿ ಜಗಾಧಿಪತಿವಿಷ್ಣು ರಾಮನಲ್ಲದಿಲ್ಲವೆಂದು॥೪॥
ಆರುಮುಖದವ ಶಂಖವನ್ನು ಊದೆ ।
ಭೈರವ ನಾಗಸ್ವರವ ನುಡಿಸೆ ।
ಚಾರು ಪ್ರಥಮಭೂತತಲೆ ಚಪ್ಪಳಿಡೇ ।
ಧಾರಿಣಿಧರ ಸೀತಾರಾಮನಲ್ಲದಿಲ್ಲವೆಂದು ॥೫॥

ಗೋರಾಜ ಸರಿಗಮಪದನಿಸ ಎಂದು ನಲಿಯೇ
ಉರಗದಿ ಮೂಷಕಾದಿ ಚಿಗಿದಾಡಲು
ಮಾರಣದ ಗಂಗೆ ಸಿರದಲಿ ತುಳುಕಲು
ನಾರಾಯಣ ಪರದೈವ ರಾಮನಲ್ಲದಿಲ್ಲವೆಂದು ॥೬॥

ತುಂಬುರ ನಾರಂದ ತಂದನ್ನಾ ತಾಎನ್ನೆ
ಅಂಬರದಿಂದ ಪೂಮಳೆಗೆರೆಯೆ
ಅಂಬುಜಾಪತಿ ಶಿರಿವಿಜಯವಿಠ್ಠಲ ವಿ
ಶ್ವಂಭರಜಾಂಡಕರ್ತು ರಾಮನಲ್ಲದಿಲ್ಲವೆಂದು ॥೭॥

--✿✿✿✿✿--

೫೫

ಜಾನಕೀರಾಮ ಜಾನಕೀರಾಮ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ಜಾನಕೀರಾಮ ಜಾನಕೀರಾಮ
ಜಾನಕೀರಾಮ ಜಾನಕೀರಾಮ ॥ಪ॥

ಭಕ್ತರ ನೋಡು ಗೀತವ ಪಾಡು
ನೃತ್ಯವನಾಡೋ ವರಗಳ ನೀಡೋ ॥೧॥

ವಾರಿಧಿಬಂಧ ವಸುದೇವಕಂದ
ಸ್ವಾರಸ್ಯ ತಂದ ಸತ್ಕರುಣದಿಂದ ॥೨॥

ಶಿರಿವಾಸ ಸಿರಿದೇವಿ ತೋಷ
ಶಿರಿವಿಜಯವಿಠ್ಠಲ ಉದ್ಧವಘೋಷ ॥೩॥

--✿✿✿✿✿--

ರಂಗನ ನೋಡಿರೈ ಕರುಣಾಪಾಂಗನ ನೋಡಿರೈ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ರಂಗನ ನೋಡಿರೈ ಕರುಣಾಪಾಂಗನ ಪಾಡಿರೈ ॥ಪ॥

ಮಂಗಳಮೂರುತಿ ಮನುಕುಲೋತ್ತುಂಗ
ಜಗದಂತರಂಗ ಹೋ ಹೋ ॥ಅ.ಪ॥

ಶೀಕರೆ ಪುಟ್ಟಿದೆ ಮೇದಿನಿಪಾಲಗೆ ಮೆಚ್ಚಿ-ಬಂದನೊ ಹೆಚ್ಚಿ
ಆತುಮಮೂರುತಿ ದಶರಥನಿಗೆ ಮಗನಾದ-
ಲೀಲಾ ವಿನೋದ
ಜ್ಯೋತಿಪ್ರಕಾಶನು ಸಾಕೇತಪುರದಲಿ ನಲಿದ-
ಸುತ್ತಿ ಪರಿಗೊಲಿದ
ಭೂತಳದೊಳು ಜಾನಕಿಗೆನಾಥನಾಗಿ ಮೆರೆದ-
ಕಾಮಿತಗರೆದ ಹೋ ಹೋ ॥೧॥

ಜಲಜಸಂಭವಭವ ಮಿಕ್ಕಾದವರನು ಗರ್ಭ-ದೊಳಿಟ್ಟ ಸರ್ಬ
ಜಲಜಾಯತದಳ ಹೊಕ್ಕಳಿಂದಲಿ
ಅಂದು ಪಡೆದ-ಮಗನಿಗೆ ನುಡಿದ
ಪ್ರಳಯಕಾಲದಿ ವಟಪತ್ರದ ಮೇಲ್ ಮಲ-ಗಿದ್ದ ಸುಪ್ರಸಿದ್ಧ
ಪೊಳೆದ ಪ್ರಣವ ವಿಮಾನದೊಳಗಿಂದ
ಬಂದ ಪರಮಾ-ನಂದ ಹೋ ಹೋ ॥೨॥

ಬರುತ ವಿಭೀಷಣ ಕಾವೇರಿತೀರಕೆ ಬಂದ, ಉತ್ಸಾಹದಿಂದ
ಪರಮಪುರುಷ ಲಂಕೆಗೆ ಪೋಗದೆ ನಿಂತ-ಬಲು ಜಯವಂತ
ಧರಣಿಪತಿ ಧರ್ಮವರ್ಮನ ಮಾತಿಗೆ ನಕ್ಕ-ಕೇಳಾವಾಕ್ಯ
ನಿರುತದಿ ದಾಲ್ಬ್ಯಮುನೀಶನಿಂದ
ಪೂಜೆಗೊಂಬ ಸರ್ವರ-ಬಿಂಬ ಹೋ ಹೋ ॥೩॥

ಲೋಕಕಂಟಕ ದಶಕಂಠನವಂಶವ ಕೊಂದ –ಈತ
ಮುಕುಂದಏಕ ತನ್ನೊಳು ತಾನೆ ಪೂಜೆಯ
ಮಾಡಿಸಿಕೊಂಡ –ಬಲು ಪ್ರಚಂಡ
ನಾಕದ ಜನರೆಲ್ಲ ಜಯ
ಜಯವೆನುತಿರಲಯೋಧ್ಯಾ–ಆಳ್ದ ಅನಾದ್ಯ
ಕೈಕಸೆಸುತ ಭಜಿಸಲು ವಲಿದು ಬಂದನಂದು,
ಕರುಣಾ–ಸಿಂಧು ಹೋ ಹೋ ||೪||

ದಕ್ಷಿಣಮುಖನಾಗಿ ಉರಗನ ಮೇಲ್ ಮಲಗಿಪ್ಪ –
ಮೂಜಗದಪ್ಪ
ನಕ್ಷತ್ರೇಶ ಸರೋವರತಟ ಪುನ್ನಾಗ–ವೃಕ್ಷದಲ್ಲಿಹ ದಕ್ಷ
ಅಕ್ಷಯಮೂರುತಿ ಅಪ್ರಾಕೃತ ಶರೀರ–ಧೃತ
ಮಂದಾರಪಕ್ಷಿವಾಹನ ನಮ್ಮ ವಿಜಯವಿಠ್ಠಲ ರಾಜ–
ರಾಜಾಧಿರಾಜ ಹೋ ಹೋ ||೫||

--✿✿✿✿✿--

೫೭

ರಾಮ ರಘುಕುಲಾಬ್ಧಿ ಸೋಮಾ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ರಾಮ ರಘುಕುಲಾಬ್ಧಿ ಸೋಮಾ ||ಪ||

ಸಂತತ ಭಕ್ತಪ್ರೇಮಾ ಮಂಗಲಧಾಮಾ ।
ಪರಿಪೂರ್ಣ ನಿನ್ನಯ ನಾಮವೆ ಗತಿ ಎನಗೆ ||ಅ.ಪ||

ಏಸಪರಾಧಗಳೆಣಿಸದೆ ದಯವಿಟ್ಟು ।
ದೋಷದೂರನ ಮಾಡೊ ಕೇಶವ ಕಮಲಾಕ್ಷಾ ||೧||

ಪ್ರಣವಾಕಾರ ವಿಮಾನಮನಿಯಾಗಿಯಿಪ್ಪನೆ ।
ಫಣಿಶಾಯಿ ರಂಗೇಶ ಮಣಿಗಣಭೂಷಣನೆ ||೨||

ಇಕ್ಷ್ವಾಕು ನೃಪವರದ ಸಾಕ್ಷಾತ್ತ ಪರಮಾತ್ಮಾ–।
ಧ್ಯಕ್ಷ ವಿಜಯವಿಠಲಾ ರಕ್ಷಿಸು ಬಿಡದೆನ್ನ ||೩||

೫೮

ರಾಮ ರಾಮ ಎಂಬೆರಡಕ್ಷರ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ರಾಮ ರಾಮ ಎಂಬೆರಡಕ್ಷರ ।
ಪ್ರೇಮದಿ ಸಲಹಿತು ಸುಜನರನು ॥ಪ॥

ಹಾಲಾಹಲವನು ಪಾನವಮಾಡಿದ ।
ಫಾಲಲೋಚನನೆ ಬಲ್ಲವನು ॥
ಆಲಾಪಿಸುತ್ತ ಶಿಲೆಯಾಗಿದ್ದ
ಬಾಲೆ ಅಹಲ್ಯೆಯ ಕೇಳೇನು ॥೧॥

ಅಂಜಿಕೆಯಿಲ್ಲದೆ ಗಿರಿಸಾರಿದ ಕಪಿ-।
ಕುಂಜರ ರಮಿಸುತ ಬಲ್ಲವನು ॥
ಎಂಜಲಫಲಗಳ ಹರಿಗರ್ಪಿಸಿದ ।
ಕಂಜಲೋಚನೆಯ ಕೇಳೇನು ॥೨॥

ಕಾಲವರಿತು ಸೇವೆಯ ಮಾಡಿದ
ಲೋಲಲಕ್ಷ್ಮಣನೆ ಬಲ್ಲವನು ॥
ವ್ಯಾಳಶಯನ ಶ್ರೀ ವಿಜಯವಿಠ್ಠಲನ
ಲೀಲೆ ಶರಧಿಯ ಕೇಳೇನು ॥೩॥

--✿✿✿✿✿--

೫೯

ದಯಬಾರದ್ಯಾಕೊ ರಾಘವಾ

(ವಿಜಯವಿಠಲ / ದಾಸಪ್ಪ / ೧೬೮೨ - ೧೭೫೫)

ದಯಬಾರದ್ಯಾಕೊ ರಾಘವಾ ॥ಪ॥

ಕಾಯಬೇಕುಯೆಂದು ಕೊರಗಿ ಮೊರೆಯಿಡೆ
ನ್ಯಾಯವೇನು ಯೆನ್ನ ಮರೆತುಬಿಡುವುದು ॥ಅ.ಪ॥

ಅಂದು ಅಜಮಿಳನು ಅಂತ್ಯಕಾಲದಲಿ
ಕಂದ ನಾರ ಬಾಯೆಂದು ಕರೆಯಲು
ಅಂದ ಮಾತುಗಳಿಗೆ ಅತಿ ಹರುಷಿಸಿ
ಬಂದ ಯಮನಬಾಧೆ ಬಿಡಿಸಲಿಲ್ಲವೇನೊ ॥೧॥

ಹರಿಯೆ ಗತಿಯೆಂದು ಹೊಗಳು ಕಂದನ
ಹರುಷವಿಲ್ಲದೆ ಪಿತಕಷ್ಟಪಡಿಸಲು
ಊರು ತೋರದಂತಾ ಸ್ತಂಭದಿಂದ ಬಂದು
ಮೂರುಜಗವು ಅರಿಯೆ ಮನ್ನಿಸಲಿಲ್ಲವೇನೊ ॥೨॥

ಸರ್ಪಶಯನನೆ ಸಾರ್ವಭೌಮನೆ
ಶೂರ್ಪನಖಿ ನಾಸಿಕ ಶ್ರೋತ್ರಕವಳಿದನೇ
ಅಪ್ಪಗುರುವರ ವಿಜಯವಿಠ್ಠಲನೇ
ಒಪ್ಪದಿಂದ ವಲಿವ ವರದರಾಜನೇ ॥೩॥

--✿✿✿✿✿--

೬೦

ಈತ ಸೀತಾನಾಥನೇ ವಾತಜಾತಪ್ರೀತನೇ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಈತ ಸೀತಾನಾಥನೇ । ವಾತಜಾತಪ್ರೀತನೇ ।
ಧಾತುಮಾತುರಹಿತ ಖ್ಯಾತ । ಭೂತವ್ರತದಾತನೆ ॥ಪ॥

ಸುಗ್ರೀವಗೆ ಸಾಮಗ್ರನೆ । ಶೀಘ್ರಗೈದನುಗ್ರಹನೆ ।
ನಿಗ್ರಹಿಸಿದಾ ವ್ಯಾಘ್ರದಶಾ । ಗ್ರೀವನುಗ್ರಹ ವಿಗ್ರಹನೆ ॥೧॥

ಕಾಮನಿವಾನೇಮನೆ । ನಾಮಸಾರ್ವಭೌಮನೆ ।
ರಾಮಶ್ಯಾಮ ಮಹೀಪತಿನಂದನ । ಹೃತ್ಕುಮುದಾ ಸೋಮನೆ ॥೨॥

--✿✿✿✿✿--

೬೧
ಎನ್ನ ಪ್ರಿಯನಾ ನೀ ತಂದು ತೋರೇ ಸುಜ್ಞಾನೇ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಎನ್ನ ಪ್ರಿಯನಾ ನೀ ತಂದು ತೋರೇ ಸುಜ್ಞಾನೇ ॥ಪ॥

ಕನಸಿನೊಳಗ ಕಂಡ ಪರಿಯಾರೂಪವ ದೋರಿ
ದಾವ ತೇಜಮುಸುಕಿತು ಧರಿಯೇ ।
ತ್ರೈಭುವನವ ರಕ್ಷಿಸಬಂದಾ ಹರಿಯೇ ।
ಮುಜ್ಜೆಮರಿಯೇ ॥೧॥

ಮುಟ್ಟಿಲೀತಗ ಧನುಏಳಲಿ ಝುಮ್ಮನೇ
ನಾವು ನೆಟ್ಟನೆಪೂಜಿಪೆವು ಗೌರಮ್ಮನೇ ಎಂದು
ಬಿಟ್ಟ ಮಗಳು ಬೇಡಿಕೊಂಡರು ಸುಮ್ಮನೇ
ಅಡಿಯಿಟ್ಟು ನಲಿದುಬರುವ ರಾಮೋ ಘಮ್ಮನೇ ಪರಬೊಮ್ಮನೇ ॥೨॥

ಬಂದು ನೋಡಿ ಬಿಲ್ಲನೆತ್ತಿದಾ ಚಕ್ಕನೇ
ಅರವಿಂದಲೋಚನೆ ಮಾಲಿಹಾಕಲು ಫಕ್ಕನೇ
ವೃಂದ ಕಾಣುತ ಹೆದರಿತು ಧಕ್ಕನೇ
ನಮ್ಮ ತಂದೆಮಹಿಪತಿನಂದನ ಪ್ರಭು ಠಕ್ಕನೇ ಪಾಲಕ್ಕುನೇ ॥೩॥

--✿✿✿✿✿--

೬೨
ಏಳಯ್ಯ ಆತ್ಮಾರಾಮ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಏಳಯ್ಯಾ ಆತ್ಮಾರಾಮಾ । ಯತಿಮುನಿಜನಪ್ರೇಮಾ ।
ಏಳಯ್ಯ ಘನಶ್ಯಾಮಾ । ಎನ್ನಪಾಲಿಸೈ ಗುಣಧಾಮಾ ॥ಪ॥

ಗುರುಕರುಣೋದಯದಲ್ಲಿ ಬೋಧಸೂರ್ಯನು ಬರಲಿ ।
ಮರವಿನ ಕತ್ತಲೆ ತೆರಳಿ । ಬೆಳಗಾಯಿತು ಮನದಲ್ಲಿ ॥೧॥

ವಾದತಾರೆಗಳಡಗಿ । ವಿಕಸಿತಹೃತ್ಕಮಲಾಗಿ ।
ಸಾಧನಪಕ್ಷಿಗಳೊದಗಿ । ಕಲಕಲಿಸುತಿವೇ ಬಹುವಾಗಿ ॥೨॥

ವಿವೇಕಾದ ಭರತಾ ॥ ವೈರಾಗ್ಯಶತ್ರುಘ್ನ ತಾ ।
ಸಾವಧಲಕ್ಷ್ಮಣನಿರುತಾ ಪದಸೇವೆಗೆ ನಿಂತರು ತ್ವರಿತಾ ॥೩॥

ಶಮದಮವೇ ನಿಸ್ಸೀಮಾ । ವಿಭೀಷಣ ಸುಗ್ರೀವ ನೇಮಾ ।
ಸುಮತಿ ಶ್ರದ್ಧಾಪರಮಾ । ಇದೋಬಂದರು ಜಾಂಬವ ಹನುಮಾ ॥೪॥

ಶಾಂತಿಸೀತೆಯು ವಲಿದು ನಿಂತಿಹಳ್ಳೆ ಕೈಮುಗಿದು ।
ಚಿಂತಿತಾರ್ಥವನೇ ಕೊಡು । ಮಹಿಪತಿಸುತಗೊಲಿದು ॥೫॥

--✿✿✿✿✿--

೬೩
ಕರುಣಿಸು ಶ್ರೀರಾಮಾ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಕರುಣಿಸು ಶ್ರೀ ರಾಮಾ ॥ಪ॥

ವಾರಿರುಹನಯನ ಜೀಮೂತಶ್ಯಾಮಾ ।
ಪೂರಿತ ಮನೋಕಾಮಾ ॥೧॥

ದೀನೋದ್ಧರಣಾ ಸದ್ಗುಣಧಾಮಾ ।
ಶ್ರೀನಿಧೀ ಸಾರ್ವಭೌಮಾ ॥೨॥

ಗುರುಮಹಿಪತಿಸುತ ಪ್ರಭು ಸರ್ವಾತ್ಮಾ ।
ಸುರಮುನಿ ವಿಶ್ರಾಮಾ ॥೩॥

--✿✿✿✿✿--

೬೪
ಕಾಲಕಾಲದಿ ಕರುಣೆಗಳರಸನಾದ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ಕಾಲಕಾಲದಿ ಕರುಣೆಗಳರಸನಾದ
ರಾಮಾ ಎನಬಾರದೇ । ಜಗ ।
ಪಾಲಕ ನಿನಗಿಹಪರಗಳನೀವಾ ॥ಪ॥

ಪಂಚಾಗ್ನಿಯಲಿ ದೇಹ ಬಳಲಿಸುವದ್ಯಾತಕ ।
ರಾಮಾ ಎನಬಾರದೇ । ಪ್ರ ।
ಪಂಚ ತೊರೆದು ವನವಾಸ ಹಿಡವುದ್ಯಾಕ ।
ರಾಮಾ ಎನಬಾರದೇ ॥
ಒಂಟಿಕಾಲಿನ ಯೋಗಧಾರಣವ್ಯಾಕ ।
ರಾಮಾ ಎನಬಾರದೇ । ಪುಣ್ಯ ।
ಸಂಚಿಸೆ ಕೃಚ್ಛ ಚಾಂದ್ರಾಯಣಿ ವ್ರತವ್ಯಾಕ ।
ರಾಮಾ ಎನಬಾರದೇ ॥೧॥

ಮಂಡಿಸಿ ಪಶುವಧಯಾಗ ಮಾಡುವದ್ಯಾಕ
ರಾಮಾ ಎನಬಾರದೇ । ಆ ।
ನಿಗಮನುಳುಹಿದ ಕೂರ್ಮ ವರಾಹ ನರಸಿಂಹಗೆ
ಅಗವೈರಿಯನುಜ ಪರಶುರಾಮಗ
ರಘುನಾಥ ಕೃಷ್ಣ ಬೌದ್ಧೇಶಕಲಿನಾಶಗ
ಜಗದ್ಗುರು ಮಹಿಪತಿ ಸುತಪ್ರಿಯಗ ॥೨॥

--✿✿✿✿✿--

೬೫
ಜಯ ಜಯ ರಾಮ ಸಕಲಗುಣಧಾಮನೇ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ಜಯ ಜಯ ರಾಮ ಸಕಲಗುಣಧಾಮನೇ
ಜಯ ಶರಣರ ಸುರಧೇನು

ಜಯ ಜಯವಿಧಿಹರವಂದ್ಯ ಪರಾತ್ಪರ
ಜಯ ಜಯ ಸೀತಾರಮಣ ॥ಪ॥

ಸೊಕ್ಕಿದ ದೈತ್ಯರ ಬಾಧೆಗಾರದಿಹ ದೇ
ವರ್ಕಳ ಮೊರೆಯನು ಕೇಳಿ
ಘಕ್ಕನೆ ದಶರಥನಾಲಯದೊಳು ಪುಟ್ಟಿ
ಮಿಕ್ಕನುಜರ ಕೂಡ ಬೆಳೆದು
ಚಿಕ್ಕತನದಿ ತಾಟಕಿಯ ಕೊಂದು ಮುನಿಮಖ
ಅಕ್ಕರದಲಿ ಕಾಯದು ಬರಲಿ
ಸಿಕ್ಕಿದ ನೆಲದೊಳು ಸತಿಯನುದ್ಧರಿಸಿ ಜಾ
ನಕ್ಕಿ ಕೈವಿಡಿದನೇ ಜಯತು ॥೧॥

ಕೈಕೆ ನುಡಿಗೆ ಬಂದು ವನದೊಳು ಶೂರ್ಪನಖೀ
ಆ ಖರದೂಷಣರಳಿದು
ಲೋಕಮಾತೆಯಾಕೃತಿ ಒಯ್ಯಲು ರಾವಣ
ತಾ ಕಪಿಕರಡಿಯನೆ ಕೂಡಿ
ಆ ಕುಮತಿಯ ಬಲದಿ ಕೊಂದು ಶರಣಗೆ
ಬೇಕಾದ ಸ್ಥಿರಪದ ನೀಡಿ
ಶ್ರೀ ಕಮಲಾಂಬಕಿ ಸಹಿತ ಹೊಕ್ಕನು ಬಂದು
ಸಾಕೇತಪುರಾಧೀಶ ಜಯತು ॥೨॥

ಇಳೆಯ ಸಾಮ್ರಾಜ್ಯ ಸಿಂಹಾಸನದಲಿ ಬರೆ
ಲಲನೆ ಧಾಮದಲಿ ಕುಳ್ಳಿರಲಿ
ಬಲಕವಶಿಷ್ಠ ಭರತ ಶತ್ರುಘ್ನ ಕೂಡೆ
ನೆಲಿಛತ್ರ ವಿಡಿಯೆ ಲಕ್ಷ್ಮಣನು
ಒಲಿದು ಸಮ್ಮುಖದಿ ಹನುಮ ಕೈಯ್ಯ ಮುಗಿದಿರೆ
ಉಳಿದಸುರನರರು ಕುಳ್ಳಿರಲಿ
ನಲಿದು ಕಾಸಲಿ ಗುರು ಮಹಿಪತಿ ಪ್ರಭುವಿಗೆ
ಬೆಳಗಿದಳಾರತಿ ಜಯತು ॥೩॥

--✿✿✿✿✿--

೬೬
ಜಯ ಮಂಗಳಂ ಮಹಾ ಶುಭಮಂಗಳಂ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ಜಯ ಮಂಗಳಂ ಮಹಾ ಶುಭಮಂಗಳಂ
ತ್ರಯಭುವನ ವಂದ್ಯ ಸೀತಾಕಾಂತಗೆ ॥ಪ॥

ದಶರಥಾತ್ಮಜನಾಗಿ ನರಲೀಲೆ ನಟಿಸಿದಗ
ಋಷಿಮಖಕಾಯ್ದಹಿಲ್ಯೋದ್ಧಾರಗ
ಅಸಮಧನುಮುರಿದವನಿಜೆಯಾ ಮಾಲೆಧರಿಸಿದಗ
ಬಿಸಜಲೋಚನ ಜನಕ ಜಾಮಾತಗ ॥೧॥

ಮಾನವರನುಜರ ಕೂಡಿ ಕಲ್ಯಾಣವಿಡಿದಂಗ
ದೇವಭೃಗುಪತಿ ಮನಾ ನಲಿಸಿದವಂಗ
ಅವಿಭವಿ ಬಂದಯೋಧ್ಯಾಪುರವನಾಳ್ದಂಗ
ಜೀವಜಾತಕಸುಖವ ಬಡಿಸಿದಂಗೆ ॥೨॥

ಗುರುಮಹಿಪತಿ ಸುತನ ಜೀವದಲಿ ತಾ ನಿಲಿಸಿ
ನಿರುಪಮಚಾರಿತ್ರ ನುಡಿಸಿದಂಗೆ
ಧರೆಯೊಳಗ ದೀನ ಅನಾಥರನು ಪೊರೆವ
ಪರಮ ಮಂಗಳನಾಮ ಶ್ರೀರಾಮಗೆ ॥೩॥

--✿✿✿✿✿--

೬೭
ಜಯ ರಘುರಾಮಾ ಸದ್ಗುಣಧಾಮಾ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ಜಯರಘುರಾಮಾ। ಸದ್ಗುಣಧಾಮಾ।
ದಯದಾಗರ ಘನಶ್ಯಾಮಾ ॥ಪ॥

ಜಯರಘುರಾಮಾ। ಸದ್ಗುಣಧಾಮಾ।
ದಯದಾಗರ ಘನಶ್ಯಾಮಾ।

ಭಯಹರನೇಮಾ। ರಣನಿಸ್ಸೀಮಾ
ತ್ರಯಂಬಕ ವಿಶ್ರಾಮಾ
ಪ್ರಿಯಕರನಾಮಾ। ಪೂರಿತಕಾಮಾ
ಶ್ರಯಶ್ರಯಿಸುದಾಯಕ ಮಹಿಮಾ ॥೧॥

ಸುರಸಹಕರ। ಇನಕುಲೋದ್ಧಾರ
ಧರಣೀಸುತೆ। ಮನೋಹರಾ।
ಸರಯೂತೀರಅಯೋಧ್ಯವಿಹಾರಾ
ಚರಿತಪಾರಾವಾರಾ
ಪರಮೋದಾರಾ ಸರ್ವಾಧಾರಾ
ದುರಿತಾವಳಿವಿದಾರಾ ॥೨॥

ವನರುಹಾಸನ ವಂದಿತಚರಣಾ
ಜನನಿ ಕೌಸಲ್ಯಾ ನಿಧಾನಾ
ಅಣುರೇಣುಜೀವನಾ ವ್ಯಾಪಕಪೂರ್ಣ
ಕನಕಾಂಬರಭೂಷಣ
ಮುನಿಜನರಂಜನಾ ದೈತ್ಯವಿಭಂಜನಾ
ಮಹಿಪತಿನಂದನ ಪ್ರಾಣಾ ॥೩॥

--✿✿✿✿✿--

೬೮
ಜಯದೇವ ಜಯದೇವ ಜಯರಾಘವ ರಾಮಾ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ಜಯದೇವ ಜಯದೇವ ಜಯರಾಘವ ರಾಮಾ
ದಯದಲಿ ಯಚ್ಚರನೀವದು ಸ್ಮರಿಸಲು ತವನಾಮಾ ॥ಪ॥

ಅಭವ ಭವಮುಖರ ಮೊರೆಯನು ಕೇಳುತಲಿ
ದಶರಥ ಕೌಸಲ್ಯರಾ ಬಸಿರಿಂದುದಿಸುತಲಿ
ಋಷಿಮಖರಕ್ಷಿಸಿ ತಾಟಕಿ ದೇಹದಿ ಬಿಡಿಸುತಲಿ
ವಸುಧಿಲಿ ಶಿಲೆಯನು ಪಾದದಿಮೆಟ್ಟ್ಯುದ್ಧರಿಸುತಲಿ ॥೧॥

ಹರುಷದಿ ಕೌಶಿಕನೊಡನೆ ಮಿಥಿಲೆಗೆ ಹೋಗುತಲಿ
ಹರದು ಮುರಿದು ಜನಕಜೆ ಮಾಲೆಯ ಧರಿಸುತಲಿ
ಬರಲಾನಂದದಿ ಭೃಗುಪತಿ ದಶರಥ ದರುಶನ ಪಾಡುತಲಿ
ಅರಸುತನಕ ಕೈಕೆಯು ಬ್ಯಾಡೆನೆ ನಡೆದ್ಯೆ ತ್ವರಿಲಿ ॥೨॥

ವನದಲಿ ಭಂಗಿಸಿಶೂರ್ಪನಖಿ ಖರದೂಷಣರಾ
ಅನುವರ ಕಾಂಚನಮೃಗವಾ ಬೆಂಬೆತ್ತಲು ದೂರಾ
ಜನಕಜೆಯಾಕೃತಿ ಒಯ್ಯಲು ಕಪಟದಿ ದಶಶಿರಾ
ಅನುಭಜಟಾಯುವಿನಿಂದಲಿ ಕೇಳಿ ನಡದ್ಯೆ ಧೀರಾ ॥೩॥

ಪಥದಲಿ ಮುರಿದು ಕಬಂಧವ ಶಬರಿಗೆ ಗತಿನೀಡಿ
ಪ್ರಥಮದಿ ಹನುಮನ ಕಂಡು ವಾಲಿಯ ಹತಮಾಡಿ
ರತಿಯಲಿ ಸುಗ್ರೀವಜಾಂಬವ ಸೈನ್ಯದಲೊಡಗೂಡಿ
ಕ್ಷಿತಿಜೆಯಾ ಸುದ್ದಿಯ ತರಿಸಿ ನಡೆದ್ಯೆ ನಲಿದಾಡಿ ॥೪॥

ಸೇತುವೆಗಟ್ಟಿಸಿ ಶರಣವ ಬರಲು ವಿಭೀಷಣನು
ಭೀತಿಯ ಹಾರಿಸಿ ಸೈನ್ಯದಿ ದಾಟಿದೆ ಶರಧಿಯನು
ನೀತಿಯ ತಪ್ಪಿದ ರಾವಣ ಕುಂಭಶ್ರವಣರನು
ಖ್ಯಾತಿಲಿ ಮಡುಹಿದೆ ಅವರಾ ಸಂತತಿ ಸಂಪದನು ॥೫॥

ಶರಣಗಸ್ಥಿತಪರಪದವಿತ್ತು ದೇವರ ಸೆರೆಬಿಡಿಸಿ
ಮರಳಿದಯೋಧ್ಯಕಪುಷ್ಪಕದಿಂ ಸೀತೆಯವರಿಸಿ
ಮೆರೆವತ್ಸಜರ ಜನನಿಯರ ಸಕಲರ ಸುಖಬಡಿಸಿ
ಸುರಮುನಿಜನರನು ಸಲಹಿದ್ಯೆ ಸಾಮ್ರಾಜ್ಯವನು ॥೬॥

ನಾಮದಮಹಿಮೆ ಹೊಗಳಲು ಶ್ರುತಿಗಳಿಗಳವಲ್ಲಾ
ಪ್ರೇಮದಿ ಸವಿದುಂಬುವ ಶಿವ ತಾಬಲ್ಲಾ
ನೇಮದಿಸುರನಂದಾನ್ನರ ಬವ ತರಿಸಿದರಲ್ಲಾ
ಕಾಮಿತದಾಯಕ ಗುರುಮಹಿಪತಿ ಪ್ರಭುಶಿರಿನಲ್ಲಾ ॥೭॥

--✿✿✿✿✿--

೬೯
ಜಯ ರಾಘವ ಜಯ ರಾಘವ ಜಯ ರಾಘವ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಜಯರಾಘವ ಜಯರಾಘವ ಜಯರಾಘವ ರಾಮಾ।
ಶ್ರಯಕಾರಣಸುಖಪೂರಣ ಭವತಾರಣ ನಾಮ ॥ಪ॥

ಜಗಪೋಷಣ ಮೃದುಭಾಷಣ ಸುರತೋಷಣಕಾರಿ।
ಅಘಶೋಷಣ ಕುಲಭೂಷಣ ಖರದೂಷಣಹಾರಿ ॥೧॥

ಅತಿಸುಂದರ ಗುಣಮಂದಿರ ದಶಕಂಧರ ಹರಣಾ।
ಧೃತಮಂದಿರ ಗಜೇಂದರ ಪ್ರಯಾಸಾಂದರ ಕರುಣಾ ॥೨॥

ಗಿರಿಜಾಪತಿ ವಾಣೀಪತಿ ದಿವಸಾಪತಿ ಧೇಯ।
ಗುರುಮಹಿಪತಿಸುತಸಾರಥಿ ಸೀತಾಪತಿರೇಯಾ ॥೩॥

--✿✿✿✿✿--

೭೦
ನಂಬು ದಯಾನಿಧಿ ರಾಮನಾ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ನಂಬು ದಯಾನಿಧಿ ರಾಮನಾ ॥ಪ॥

ಶಬರಿಯ ಭಾವಕೆ ಮೆಚ್ಚಿ ಉಂಡನು ಬದರಿಫಲಾ
ವಿಭು ನೀಡಿದನು ಪದಾಚಲಾ ॥೧॥

ತೃಣ ಪಶು ಪಿಪ್ಪೀಲಿಕಾ ನಗಾದಿಗಳಾ।
ಸುಗತಿಗೆ ವೈದನು ಘನನೀಲಾ ॥೨॥

ಗುರುಮಹಿಪತಿ ಪ್ರಭು ನೀರೊಳು ತಾರಿಸಿದ ಶಿಲಾ
ಚರಿತವದೋರಿದ ಸಿರಿಲೋಲಾ ॥೩॥

ನಂಬು ಮನವೆ ರಾಮಚಂದ್ರನಾ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ನಂಬು ಮನವೆ ರಾಮಚಂದ್ರನಾ ದ
ಯಾಂಬುನಿಧಿ ಸದ್ಗುಣಸಾಂದ್ರನಾ
ನಂಬಿದ ಭಕ್ತಕುಟುಂಬಿಯೆನಿಸುವ
ಅಂಬುಜನಾಭನ ಹಂಬಲವಿಡಿದು ॥ಪ॥

ದಶರಥ ಕೌಸಲ್ಯ ಬಸುರಿಲಿ ಬಂದು।
ಋಷಿಮುಖ ರಕ್ಷಿಸಿ ಶರದಿ
ಅಸುರೆಯ ಭಂಗಿಸಿ ನಡೆಯಲಿ ಮುನಿ
ಅಸಿತಳುದ್ಧರಿಸಿ ಉಂಗುಟದಲಿ
ಅಸಮಧನುವೆತ್ತಿ ವಸುಧೆಯ ಮಗಳ ವ
ರಿಸಿಕೊಂಡು ಬಂದನು ಕುಶಲವಿಶ್ರಮನಾ ॥೧॥

ಜನಕನ ವಚನಕ ಮನ್ನಿಸಿ ।ಸತಿ।
ಅನುಜನೊಡನೆ ವಿಹರಿಸಿ
ವನಚರ ಭೂಚರ ನೆರಹಿಸಿ ।ದಾಟಿ।
ವನಧಿಯೊಳಗ ಗಿರಿಬಂಧಿಸಿ ॥
ಮುನಿದು ಮರ್ದಿಸಿ ದಶಾನನಮುಖ್ಯ
ದನುಜರಾ ವನಸಿರಿ ಪದವಿ ವಿಭೀಷಣಗ ನೀಡಿದಾ ॥೨॥

ಸುರರಿಗೆ ನೀಡಿದಾನಂದನು ।ಸೀತೆ।
ವರಿಸಿ ಅಯೋಧ್ಯಕ ಬಂದನು
ಧರಿಸಿ ಸಾಮ್ರಾಜ್ಯದಿ ಪೊರೆದನು ।ಗುರು।
ವರ ಮಹಿಪತಿ ನಂದನೊಡೆಯನು
ಅರಿತು ಸದ್ಭಾವತಿಸರಿಸಲಿ ಸದ್ಗತಿ
ಸೆರೆವಿಡಿದೆಳೆತಹದರಿಯಲೋನಾಮಾ ॥೩॥

--✿✿✿✿✿--

೭೨

ನಮೋ ನಮೋ ನಮೋ ಎಂಬೆ ನಿನಗೆ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ನಮೋ ನಮೋ ನಮೋ ಎಂಬೆ ನಿನಗೆ ಸ್ವಾಮಿ ರಘುರಾಮಾ।
ಶಮಲಹಾರಿಸಿ ವಿಮಲಮತಿಯ ಕೊಡುವ ಪುಣ್ಯನಾಮ ॥ಪ॥

ಮುನ್ನಮಾಡಿದ ಕೋಟಿ ಜನುಮದಪುಣ್ಯ ಒದಗಿತೆಂದು
ನಿನ್ನ ಚರಣಕಮಲ ಕಂಡೆ ಧನ್ಯನಾದೆನಿಂದು ॥೧॥

ಪರಮಪುರುಷನೆಂಬುದರಿಯೆ ಮಾಡಿದಪರಾಧವ
ಕರುಣದಿಂದ ಕ್ಷಮಿಸಿ ಹೊರಿಯಬೇಕು ಪೂರ್ಣಬೋಧಾ ॥೨॥

ತಂದೆ ಮಹಿಪತಿ ಪ್ರಭು ಭಕ್ತವತ್ಸಲನೆಂದು
ಇಂದು ಮೊರೆಯಹೊಕ್ಕೆ ಸಲಹು ನಿಮ್ಮ ಸೇವೆಯಿಂದು ॥೩॥

--✿✿✿✿✿--

೭೩

ನಾಥ ದೀನಾನಾಥ ಸದ್ಗತಿದಾತ ನೋಡಿರೋ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ನಾಥದೀನಾನಾಥ ಸದ್ಗತಿದಾತ ನೋಡಿರೋ।ಭವ।
ಭೀತರ ಪತಿತರೆ ಪುನೀತಮಾಡುವನೀತನೆ।ರಘು। ॥ಪ॥

ಹವಣದಿ ತಾನಾರೆ ಸವಿದ್ಧಣ್ಣುಗಳನ್ನು।
ತವಕದಿ ಜಾನಕಿಗದರ್ಪಿತವೆನೆ।
ಅವನಿಲಿ ಶಬರಿಗೆ ಘಮಿಘಮಿಸುತ್ತಿಹ।
ಅವಿರಳ ಪದದನುಭವ ನೀಡಿದ ರಘು...... ॥೧॥

ದಾವನ ಶ್ರುತಿಗಳು ಭಾವಿಸಿ ನುಡಿಯಲು।
ದೇವನ ಹಿತಕುಜ ಕೇವಲ ವನಜರ।

ಜೀವರೊಳಾಡುತ ಸೇವೆಗೆ ನಲಿಯುತ।
ಕೈವಿಡಿದಿತ್ತನು ಕೈವಲ್ಯವ।ರಘು..... ॥೨॥

ಕುಂದದೆ ಬಾಂಧವ ನಿಂದಿಸಿ ನೂಕಲು।
ನೊಂದುವಿಭೀಷಣ ಬಂದರೆ ಶರಣವ।
ತಂದೆ ಮಹೀಪತಿನಂದನ ಪ್ರಭು ಆ।
ನಂದದ ಸ್ಥಿರಪದ ಹೊಂದಿಸಿದಾ।ರಘು..... ॥೩॥

--✿✿✿✿✿--

೭೪
ಪಾಲಿಸೋ ರಘುರಾಯಾ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಪಾಲಿಸೋ ರಘುರಾಯಾ ॥ಪ॥

ಜಾನಕೀ ಮನೋಹರಾ।
ಇನಕುಲಶೇಖರಾ ॥೧॥

ಭರತಾಗ್ರಜವರ।
ಸುರಸಂಕಟಹರ ॥೨॥

ದಶರಥನಂದನ।
ಖುಷಿಮಖಪಾಲನಾ ॥೩॥

ಪ್ರಮಥಾಧಿಪಧ್ಯೇಯ।
ವಿಮಲಗುಣಾಲಯಾ ॥೪॥

ತಂದೆ ಮಹಿಪತಿ।
ನಂದನ ಸಾರಥಿ ॥೫॥

--✿✿✿✿✿--

೭೫
ಜಯಜಯ ಜಯಜಯ ಜಯ ರಾಮಚಂದ್ರ
(ಖಾದ್ರಿಪುರೀಶ / ತಿಪ್ಪಣಾರ್ಯ / ೧೯ ಶ.ಪೂ ?)

ಜಯ ಜಯ ಜಯ ಜಯ
ಜಯರಾಮಚಂದ್ರ ಸಜ್ಜನ ಪಯೋನಿಧಿಚಂದ್ರ ॥ಪ॥

ಜಯರಾಘವೇಂದ್ರ ವಿಲಸತ್ ಸುಗುಣಸಾಂದ್ರ ॥ಅ.ಪ.॥

ಚತುರಾಸ್ಯನುತಿಪಾತ್ರ ಚಾರುನೀರಗಾತ್ರ
ಶತಪತ್ರದಳನೇತ್ರ ಸತ್ಯಚಾರಿತ್ರ
ಶತಮನ್ಯುಸುತಮಿತ್ರ ಸಾರತರಸುಪವಿತ್ರ
ಕ್ರತುಪಾಲ ಧೃತಸೂತ್ರ ಕಮಲಾಕಳತ್ರ ॥೧॥

ಸನಕಾದಿ ಮುನಿಪಕ್ಷ ಸರಸಗುಣಫಲಾಕ್ಷ
ವಿನುತ ಜಗದಧ್ಯಕ್ಷ ವಿಪ್ರಸಂರಕ್ಷ
ದನುಜಗಜ ಹಯಟ್ಚಕ್ಷ ಧರ್ಮರಕ್ಷಣದಕ್ಷ
ಕನಕಾಕ್ಷಮದ ಶೀಕ್ಷ ಕರುಣಾಕಟಾಕ್ಷ ॥೨॥

ಧೀರ ಸನ್ನುತನಾಮಧೇಯ ಘನಸಂಗ್ರಾಮ
ಧೀರ ದೇವಲಲಾಮ ದಿತಿಜಾಬ್ಜಸೋಮ
ಭೂರಿ ಸುಕವಿಸ್ತೋಮ ಮೋಕ್ಷ ಭಕ್ತಪ್ರೇಮ
ಕಾರುಣ್ಯಸೀಮ ಶ್ರೀ ಖಾದ್ರಿಪುರಿಧಾಮ ॥೩॥

--✿✿✿✿✿--

೭೬
ರಘುಪತಿಯಾ ತೋರಮ್ಮ
(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ರಘುಪತಿಯಾ ತೋರಮ್ಮಾ ।
ರಾಜೀವಾಂಬರೆ ಬಾರಮ್ಮಾ ॥ಪ॥

ಭಕುತರಾ – ಭೀಷ್ಟೆಯನು । ಪೂರಿಸುವನಾ
ಅನುದಿನ ಕಾವನಾ । ನಿನ್ನಯ ಜೀವನಾ ॥ಅ.ಪ॥

ಸರಸಾ ಕೋಕಿಲಾಲಾಪೆ । ಸಕಲಾ ಮಂಗಳರೂಪ ॥
ದುರಿತಭಂಜನಗೈವಾ । ಪುಣ್ಯನಾಮನಾ
ಸದ್ಗುಣಧಾಮನಾ । ದಶರಥರಾಮನಾ ॥೧॥

ವಸುಧಾಕಾಯಸಂಭೂತೆ । ವರದೇ ವೇದವಿಖ್ಯಾತೆ॥
ಅಸಮಧನು ವನತ್ತ್ಯಭಯವಿತ್ತನಾ
ನಿನಗೊಲಿದಾತನಾ। ರಘುಕುಲಜಾತನಾ॥ ॥೨॥

ಶರಣೆಂಬೆ ಮಹಾಮಾಯೆ ಸಲಹಬೇಕೆನ್ನತಾಯೆ
ಗುರುಮಹಿಪತಿ ಸ್ವಾಮಿ। ಜಗದಯ್ಯನಾ
ಪವನಜಪ್ರಿಯನಾ। ಸುರಮುನಿಧ್ಯೇಯನಾ ॥೩॥

--✿✿✿✿✿--

೭೭

ರಘುರಾಯ ಯನ್ನ ಮನವ ನಿಲಿಸಲಾಗದೇ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ – ೧೭೨೯)

ರಘುರಾಯ ಯನ್ನಮನವ ನಿಲಿಸಲಾಗದೇ
ನಿನ್ನ ಚರಣಕಮಲದಲಿದ್ದು ತನ್ನ ಹರಿಬೀಳದಂತೆ ॥ಪ॥

ಹನುಮನೊಡನೇಕಾಂತ ಮಾತಅನುವರದಲಿ ಆಡುತಿರಲು
ವನಧಿಘೋಷವನ್ನೆ ಕಂಡುವನಜಕರವನೆತ್ತಿಕೊಂಡು ನಿಲ್ಲಲು
ಎನಲು ತ್ಯಜಿಸಿ ತನ್ನದರ್ಪನು ಆಸ್ಥಳದಿ
ಧರೆಯದೋರಿ ಸುಮ್ಮನಿಪ್ಪನು
ಆಂದಿಗಿಂದಿಗಿನಿತು ವಾಕ್ಯ ಮೆರೆದಪ್ಪನು ॥೧॥

ಶರಧಿಮಥನದಲ್ಲಿ ಮುಣುಗುತಿರಲು ಗಿರಿಯನೆತ್ತಿ ನಿಳುಹಿ ।
ಪೊರೆದೆ ಸುರರ ಬಳಿಕಧರಣಿ ಹಿರಣ್ಯಾಕ್ಷ ಒಯ್ಯಲಾಗ

ವರಾಹರೂಪದಿಂದ ಮೂಡಿದೇ ಈ ಜಗವ
ಕೊರೆದಾಡಿಲೆತ್ತಿ ಆಡಿದ ಆ ಧ್ರುವನ
ತಿರುಗದಂತೆ ಅಢಳ ನೀಡಿದೆ ॥೨॥

ನಿನ್ನ ಕಥೆಯ ಶ್ರವಣಮಾಡಿ ನಿನ್ನ ನೋಡಿ ಕೂಡಿಪಾಡಿ
ನಿನ್ನ ನಿರ್ಮಾಲ್ಯ ಘ್ರಾಣಿಸುತಲಿ ನಿನ್ನದಾಸನೆನಿಸಿ
ಧನ್ಯಗತಿಯ ಪಡೆವ ತೆರದಲಿ ನಿಲಿಸಬೇಕು
ಎನ್ನ ಮನವ ಕರುಣದಿಂದಲಿ ಮಹಿಪತಿಸುತನ್ನ
ಸ್ವಾಮಿ ಸಲಹು ಜಗದಲಿ ॥೩॥

--✿✿✿✿✿--

೭೮
ರಾಮ ಬಂದನೇನೆ ಶ್ರೀರಘುರಾಮ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ರಾಮ ಬಂದನೇನೆ । ಶ್ರೀ ರಘು
ರಾಮ ಬಂದನೇನೆ ॥

ಪ್ರೇಮಿಕಜನರನು ಮೊರೆಯಲಾಗಿ ಶ್ರೀರಘು ॥ಪ॥

ಜಾನಕೀಸಹಿತ ಲಕ್ಷ್ಮಣರೊಡಗೂಡಿ ।
ಸ್ವಾನಂದದಿ ದಿಗ್ವಿಜಯಮಾಡಿ । ॥೧॥

ಈರೇಳುವರುಷಕೆ ಬರುವೆನೆಂದು ಮುನ್ನ ।
ಸಾರಿದ ನುಡಿ ಸತ್ಯಮಾಡಿದೋರಲು ॥೨॥

ಹಾರೈಸಿ ನೋಡಲು ಕಣ್ಣಿಗೆ ಹಬ್ಬ ।
ದೋರಲು ಮೋಹದ ಮುದ್ದುಮೊಗದಾ ॥೩॥

ಅವಧಿಯ ಮೀರಲು ಅಸುವ ತೊರೆವನೆಂದು ।
ತವಕದಿ ಭರತನ ಪಾಲಿಸಲಿಕ್ಕೆ ॥೪॥

ಸಾಕೇತಪುರಪತಿ ಸಾಮ್ರಾಜ್ಯಲೋಲನಾಗಿ ।
ಸಾಕುವ ಜಗದ್ಗುರು ಮಹೀಪತಿ ಪ್ರಭು ॥೫॥

--✿✿✿✿✿--

೭೯

ರಾಮ ರಘೂತ್ತಮ ಕೃಷ್ಣಘನ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ರಾಮ ರಘೂತ್ತಮ ಕೃಷ್ಣ ಘನ।
ಶಾಮಸುಂದರ ತ್ರಿಭುವನ ಜೀವನ ॥ಪ॥

ದಶರಥನಂದನ ಭೂಮಿಸುತಾಪತಿ।
ವಸುದೇವಸುತ ರುಕ್ಮಿಣೀರಮಣಾ ॥೧॥

ಋಷಿಮಖದಾಲನ ಸಾಂದೀಪತೋಷಣ।
ದಶಶಿರ ಕಂಸಾಸುರ ದಮನಾ ॥೨॥

ಅಹಲ್ಯೋದ್ಧಾರಣ ಕುಜಕೃತಪಾವನ।
ಮಹಿಪತಿಸುತಪ್ರಭು ಶುಭಚರಣಾ ॥೩॥

--✿✿✿✿✿--

೮೦

ರಾಮಚಂದ್ರನೇ ಪರದೈವನೋ ನಮ್ಮ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ರಾಮಚಂದ್ರನೇ ಪರದೈವನೋ ನಮ್ಮ
ಶ್ಯಾಮಸುಂದರ ಕೃಷ್ಣ ಪರದೈವನಯ್ಯ ॥ಪ॥

ರಾಮಭಕ್ತನಿದ್ದೆಡೆಗಾಗಿ ಯದುಕುಲ ।
ಸ್ವಾಮಿಯ ಶರಣನು ಬಂದ ಕೀರ್ತಿಸುತ ।
ಪ್ರೇಮದಲೀರ್ವರ ಭಕ್ತಿಯವಾದವು ।
ನೇಮದಿ ಬೆಳೆಯಿತು ಕೇಳಿ ಸಜ್ಜನರು ॥೧॥

ಚಿಕ್ಕತನದಿ ತಾಟಿಕೆಯನು ಕೊಂದು ಮುನಿಮಖ ।
ಅಖಿರದಲಿ ಕಾಯದನಾರು ಹೇಳಯ್ಯ ।
ಠಕ್ಕಿಸಿಬಂದ ಪೂತನಿ ಅಸುಹೀರಿಜ ।
ನಕ್ಕಭಯವಿತ್ತ ಕೃಷ್ಣ ನೋಡಯ್ಯ ॥೨॥

ಚರಣಸೋಕಿಸಿ ಶಿಲೆ ಹೆಣ್ಣವ ಮಾಡುತ ।
ಹರಧನು ಮುರಿದವನಾರು ಹೇಳಯ್ಯಾ ।
ಮರಗಳಾದವರನುದ್ಧರಿಸುತ ಕಂಸಾ ।
ಸುರಧನುಹಬ್ಬವ ಗೆದ್ದ ರಂಗಯ್ಯಾ ॥೩॥

ನೆರದಿಹ ದೇವದಾನವರೊಳುದ್ದಂಡದಿ ।
ಧರಣಿಜೆಯ ತಂದನಾರು ಹೇಳಯ್ಯಾ ।
ವರಚೈದ್ಯಘೋಷರ ಭಂಗಿಸಿ ರುಕ್ಮಿಣಿ ।
ಕರವಿಡಿದೊಯ್ದಿದ ಕೃಷ್ಣ ನೋಡಯ್ಯಾ ॥೪॥

ವನದೊಳು ಹಣ್ಣವನಿತ್ತಂ ಶಬರಿಗೆ ।
ಚಿನುಮಯ ಪದವಿತ್ತನಾರು ಹೇಳಯ್ಯಾ ।
ಅನುವರದಲಿ ದ್ರೌಪದಿಯ ಶಾಕದಳ ।
ವನೆ ಕೊಂಡು ಸುಖವಿತ್ತ ಕೃಷ್ಣ ನೋಡಯ್ಯಾ ॥೫॥

ಜಲನಿಧಿಯೊಳಗ ಸೇತುಗಟ್ಟಿಸಿ ವಾನರ ।
ದಳನಡಿಸಿದ ವೀರನಾರು ಹೇಳಯ್ಯಾ ।
ಗಳಿಗಿಯೊಳರಿಯದಂದದಿ ಮಧುರ ಜನ ।
ನೆಲೆಮಾಡಿ ನೀರೊಳಗಿಟ್ಟ ರಂಗಯ್ಯಾ ॥೬॥

---✿✿✿✿✿---

೮೧

ರಾಮಾಯೆನ್ನಿ ರಾಮಾಯೆನ್ನಿ ರಾಮಾಯೆನ್ನಿರೈ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ರಾಮಾಯೆನ್ನಿ ರಾಮಾಯೆನ್ನಿ ರಾಮಾಯೆನ್ನಿರೈ ।
ನೇಮದಿಂದ ನೆನೆವರಾ ಕಾಮಿತಾರ್ಥಫಲನೀವಾ ॥ಪ॥

ವಿಷವಾಧರಿಸಿ ಶೆಖೆಘಸಣೆಗಾರದೇ ಶಿವಾ ।
ವಸೆದು ಜಪಿಸಲು ನಾಮಾ ಸ್ವಖಾನಂದವನಿತ್ತಾ ॥೧॥

ಗಿಳಿಯ ನುಡಿಸುವ ನೆವದಲಿ ಗಣಿಕಾನನದಲಿ ।
ವಳಿದು ಬರಲು ನಿಂದಾಚಲಪದವಿಯಿತ್ತಾ ॥೨॥

ಒಂದುಗ್ರಾಮದಿ ದೈತ್ಯರಿಂದಾ ದಂಪತಿಗಳಾ ।
ಬಂದು ಬಾಧೆ ಬಿಡಿಸಿ ಛಂದದಿ ಸಲಹಿದಾ ॥೩॥

ಕುಂದುಕೊರತೆಗಳಾ ಬಂದು ನೋಡದೇ ಬಂಧು ।
ತಂದೆ ಮಹಿಪತಿಸ್ವಾಮಿ ಹೊಂದಿದ್ದವರ ಕಾವಾ ॥೪॥

--✿✿✿✿✿--

೮೨

ಶ್ರೀರಾಮ ನಾಮ ಸ್ಮರಸೀಕ್ಷಕಾರಿ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೮)

ಶ್ರೀ ರಾಮನಾಮ ಸ್ಮರಿಸೀಕ್ಷಕಾರಿ
ಘೋರಾವತಾಪಗಳದಾಗಳದಾ ಪುರಾರಿ
ಆರಾದರೇನು ಜಪಿಸಿ ಜಪಸೀದ ಯೋಗಿ
ಸಾರುವೆ ನೋಡಿ ಸುಖವಾ ಸುಖವನು ನೀಗಿ ॥೧॥

ಸೋಕಲು ರಾಮಪದವಾ ಪದವನು ನೀಗಿ
ತಾಕನ್ಯಳಾದಳರಿಯಾ ಅರಿಯಾದ ಹೋಗಿ
ನೀ ಕೇಳಿ ಕೇಳಿ ಮರವೇ ಮರವೇನೋ ನೀನು
ಲೋಕೇಶಗ್ಹೋಗುಶರಣಾ ಶರಣಾಗುವನು ॥೨॥

ಏನಿತ್ತಳಂದು ಶಬರಿ ಬರಿಯಹಣ್ಣಾ
ತಾನುಂಡುಕೊಟ್ಟು ಭವವಾಭವವಾರಿಸಣ್ಣಾ
ಅನಾಥಬಂದು ಮರಿಯಾಮರಿಯಾದಹೋಗಿ
ಸ್ವಾನಂದಸಾಖ್ಯಗರೆವಾಗರೆವಾಗೋವಲ್ಲಿ ॥೩॥

ಇಂದಿರೆ ಸುದ್ದಿ ಸುಧಿಯಾ ಸುಧಿಯಾದಲಿಂದಾ
ತಂದಾರಪದ್ಮಭವನಾ ಭವಸಾದರಿಂದಾ
ಆದನೇವೆ ಕೊಟ್ಟುಕರದೀ ಕರದೀಶನಾಥಾ
ಮುಂದಿನಭವ್ಯ ಹನುಮಾ ಹನುಮಾವಿಧಾತಾ ॥೪॥

ರಾಮೆಂದುಕೂಗಿ ಗಿಳಿಯಾ ಗಿಳಿಯಾಗಣಿಕೆ
ನೇಮದಲಿ ಮುಕುತಿಯಾ ಗತಿಯಾಬೇಕೆ
ಪ್ರೇಮದಿ ಮಾನವರ ತಾ ವರತಾತನೆಂದಾ
ಕಾಮಾರ್ಥನೀವ ಚೆಲುವಾ ಚೆಲುವಾ ಮುಕುಂದಾ ॥೫॥

ಸುಗ್ರೀವ ಬಂದು ಅಡಿಯಾ ಅಡಿಯಾಗಲೆಂದು
ಶೀಘ್ರದಿಶೀಳಿತರುವಾ ತರುವಾಯಲಿಂದು
ಅಗ್ರಜನೊತ್ತಿ ಅವನೀ ಅವನೀಯ ರಾಮಾ
ನುಗ್ರಹ ಮಾಡದರಿಯಾದರಿಯಾಗುವಾತ್ಮಾ ॥೬॥

ಶುಭವಾಕ್ಯ ದೂರಿದನು ಜಾಣನು ಜಾಣನಾಗಿ
ವಿಭೀಷಣಬಂದ ಕಣವೀಕ್ಷಣದಲಿ ಸಾಗಿ
ವಿಭುಕೊಟ್ಟ ಲಂಕಾಶ್ರಯವಾಶ್ರಯವಾಗಿ ರಾಮಾ
ಅಭಿವರ್ಣಿಸುದರಸನಾ ರಸನದಿ ನೇಮಾ ॥೭॥

ಸೇವೆಯನು ಮಾಡಿ ತಣಲೀತಣಲೀಯ ನೋಡಿ
ತಾವರಿ ಕೈಯ್ಯಳೆಳದಾಲೆಳದಾದಯಮಾಡಿ
ಭಾವಾರ್ಥಿಯಾದ ನರನಾ ನರನಾಥವೇಷಾ
ಕಾವನುಲೋಕಜನಕಾ ಜನಕಾತ್ಮಜೇಶಾ ॥೮॥

ರಾಮಾಷ್ಟಕಾದ ಕವಿತಾ ಕವಿತಾನೆ ಆಗೀ
ಶ್ರೀ ಮಹಿಪತಿವರದಾ ವರದಾತ ಯೋಗಿ
ನಾಮಕ್ಕೆ ಕುಂದ ಗುರುತಾಗುರುತಾತ ಮಾಡಿ
ನೇಮದಿ ಕಾವಕರುಣೀಕರುಣೀಯ ನೋಡಿ ॥೯॥

--✿✿✿✿✿--

೮೩

ರಾಮನಾಮವನು ನೆನಿಯಬಾರದೆ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ರಾಮನಾಮವನು ನೆನಿಯಬಾರದೆ ।
ನೇಮದಿ ಮನವೆ ಸದ್ಗತಿಯ ತೋರದೆ ॥ಪ॥

ಘೋರತರ ವೃತ್ತಾಪ ಸ್ಮರರಿಯಾ ।
ದೂರಮಾಡಿ ಶಾಂತಿಸುಖವಿತ್ತದರಿಯಾ ॥೧॥

ಜಲದೊಳು ತೇಲಿಸಿದನು ಅಚಲಗಳ ।
ಸುಲಭದುದ್ಧರಿಸಿತು ವಿಪಿನಚಾರಿಗಳಾ ॥೨॥

ಈ ಮಹಿಯೊಳು ಮಹಿಪತಿ ಪ್ರೀಯನಾ ।
ನಾಮನಿಧಾನಕ ಸರಿಯ ಕಾಣೆ ನಾ ॥೩॥

--✿✿✿✿✿--

೮೪

ರಾಮ ರಸಾಯನವಾ ಬನ್ನಿರಯ್ಯ ಸೇವಿಸುವಾ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ರಾಮರಸಾಯನವಾ । ಬನ್ನಿರಯ್ಯ ಸೇವಿಸುವಾ ॥ಪ॥

ಅವನಿಲಿ ನಾನಾವಿಪತ್ತದಪಡುವಾ ।
ಭವರೋಗಮೂಲ ಭೇದಿಸುವಾ ॥೧॥

ಭ್ರಮೆಗೊಂಡು ಮತ್ತೆ ಜನ್ಮಕೆ ಬಾರದಿರುವಾ
ಅಮರತ್ವವನು ಬ್ಯಾಗ ಪಡೆವಾ ॥೨॥

ಗುರುಮಹಿಪತೀ ಪ್ರಭುದಾಸರು ಮೆರೆವಾ
ವರಸಂಗದಲಿ ಸುಖಿಸುವಾ ॥೩॥

--✿✿✿✿✿--

ರಾಮ ಸಲಹಯ್ಯ ಪುಣ್ಯನಾಮ

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ರಾಮ ಸಲಹಯ್ಯ ಪುಣ್ಯನಾಮ ।
ಶ್ರೀ ರಾಘವೇಂದ್ರಾ ಪೂರಿತಕಾಮಾ ನೇಮಾ ।
ಶ್ಯಾಮ ಪರಮಾ ಗುಣರತ್ನಧಾಮಾ ॥ಪ॥

ವನಜಾಂಬಕ ಕುಂದರದನಾ ।
ಅನುಪಮ ಸುಂದರವದನಾ ।
ರಣದಲಿ ಜಿತದಶವದನಾ ।
ಅನಂತವದನಾ ಲಾವಣ್ಯಸದನಾ ॥೧॥

ಕರುಣಾ ಶರಣಾಭರಣಾ ।
ಧರಣೀ ಧರಣೋದ್ಧರಣಾ ।
ಸ್ಫುರಣಕಿರಣದೋರಣ ಚರಣಾ ।
ಅರುಣಾಂಬುಜಾಲಯ ರಮಣಾ ॥೨॥

ವೀರಾಗುಣಗಂಭೀರಾ ।
ಕ್ರೂರಾಸುರ ಸಂಹಾರಾ ।
ಶೂರಾ ಜನ್ಮವಿದೂರಾ ।
ಮಹಿಪತಿ ಧೀರಾ ಕೃಷ್ಣನೊಡೆಯ ಉದಾರಾ ॥೩॥

--✿✿✿✿✿--

೮೬

ಶೋಭಾನವೆನ್ನಿರಿ ಶುಭಕರ ಸಾವಿತ್ರೇರು

(ಮಹಿಪತಿಸುತ / ಕಾಖಂಡಕಿ ಕೃಷ್ಣರಾಯ / ೧೬೭೩ - ೧೭೨೯)

ಶೋಭಾನವೆನ್ನಿರೆ ಶುಭಕರಸಾವಿತ್ರೇರು
ಪ್ರಭುಗುರು ಆತ್ಮಾರಾಮಗ ॥ಪ॥

ರಾಮರಾವಣ ಕ್ರೋಧನಿಸ್ಸೀಮ ಕುಂಭಕರ್ಣಾದಿ
ತಾಮಸದವರಾ ಮದಮುರಿದು
ತಾಮಸದವರ ಮದಮುರಿದು ಹೃದಯಕ
ಪ್ರೇಮಜಯೋತ್ಸವದಿಂದೈತಂದಾ ॥೧॥

ಒಡನೆ ಶಾಂತಿಸೀತೆಯಾ ಬಿಡಿಸಿತಂದನು ಸೆರೆಯಾ
ದೃಢವಿಭೀಷಣನ ಸ್ಥಾಪಿಸಿದನು
ದೃಢವಿಭೀಷಣನ ಸ್ಥಾಪಿಸಿ ಆಶಾಪಾಶ
ಕಡಲಮಧ್ಯ ಪುರದೊಳು ಈಗ ॥೨॥

ವಿವೇಕ ಹರಿವಾಣದಿ ಭಾವದಾರತಿಯೊಳು
ತೀವಿದ ಸಮ್ಯಕ್‌ಜ್ಞಾನ ಜ್ಯೋತಿ
ತೀವಿದ ಸಮ್ಯಕ್‌ಜ್ಞಾನ ಜ್ಯೋತಿಯಿಂದ
ದೇವದೇವೇಶಗತಿಂದೀಗ ॥೩॥

ಅರಿಗಳ ಶಿಕ್ಷಿಸು ಶರಣರ ರಕ್ಷಿಸು
ಧರೆಯೊಳುಯೆಂದು ಹರಸುತ
ಧರೆಯೊಳುಯೆಂದು ಹರಸುತ ಮುತ್ತಿನ
ಪರಮತಾಶಯ ನೊಸಲೊಳಿಟ್ಟು ॥೪॥

ಇಹಪರ ಸುವಿಧಾತಾ ಬಾಹ್ಯಾಂತ್ರ ಸದೋದಿತಾ
ಮಹಿಪತಿಸುತ ಪ್ರಭು ರಘುನಾಥ
ಮಹಿಪತಿಸುತ ಪ್ರಭು ರಘುನಾಥ ನೆನೆವರ
ಸಹಕಾರಿ ನಮ್ಮ ಸದೋದಿತಾ ॥೫॥

--✿✿✿✿✿--

೮೭

ತಾರಮ್ಮಯ್ಯಾ ರಘುಕುಲ ರಾಮಚಂದಿರನ

(ಮೋಹನವಿಠಲ / ಮೋಹನದಾಸರು / ೧೭೩೦ - ೧೮೧೫)

ತಾರಮ್ಮಯ್ಯಾ ರಘುಕುಲ ರಾಮಚಂದಿರನ ॥ಪ॥

ಈರೇಳು ವರುಷವು ಮೀರಿ ಪೋಗುತಲಿದೆ
ಸೇರದನ್ನೋದಕ ಮಾರಪಿತನ ಕರೆ ॥ಅ.ಪ.॥

ಪರ್ಣಶಾಲೆಯಂತೆ ಅಲ್ಲಿ
ಸುವರ್ಣದ ಮೃಗವಂತೆ ॥
ಕನ್ಯೆ ಸೀತಾಂಗನೆ ಬಯಸಿದಳಂತೆ
ಸ್ವರ್ಣಾಂಬರ ಬೆನ್ಹತ್ತಿ ಪೋದನಂತೆ ॥೧॥

ಲಕ್ಷ್ಮಣ ಅಲ್ಲಿಂದ ಪೋಗಲು
ತಕ್ಷಣ ಖಳ ಬಂದ ॥
ಲಕ್ಷ್ಮಿಯಾಕೃತಿಯ ಕೊಂಡು ಪೋಗೆಕಮ
ಲೇಕ್ಷಣ ಪೊರಟನು ತೀಕ್ಷಣವಲ್ಲಿಗೆ ॥೨॥

ಅಂಜನೆಸುತ ಬಂದ ಹರಿಪದ
ಕಂಜಕೆರಗಿ ನಿಂದಾ ॥
ಕುಂಜರಗಮನೆಯ ಕುರುಹು ಪೇಳೆನೆ
ನಿರಂಜನಮೂರ್ತಿಗೆ ಅಂಜದೆ ಬೆಸಸಿದ ॥೩॥

ಶರಧಿಯನೇ ಹಾರಿ ಉಂಗುರ
ಧರಣಿಸುತೆಗೆ ತೋರಿ ॥
ತರು ಪುರ ಗೋಪುರ ಉರುಹಿ ಚೂಡಾಮಣಿ
ಹರಿಗೆ ಸಮರ್ಪಿಸಿ ಹರುಷದಲಿಹನಂತೆ ॥೪॥

ಸೇತುವಿಯನೆ ಕಟ್ಟಿ ಖಳಕುಲ
ನಾಥನ ತರಿದೊಟ್ಟಿ ॥
ಸೀತೆಸಹಿತ ಮೋಹನ್ನವಿಠ್ಠಲಜಗ
ನ್ನಾಥ ಹೊರಟನಂತೇ ಕಾಂತೆ ॥೫॥

--✿✿✿✿✿--

ಮರೆಯದಿರು ಮರೆಯದಿರು ಮಾರಮಣನೇ

(ವ್ಯಾಸವಿಠಲ / ಕಲ್ಲೂರು ಸುಬ್ಬಣ್ಣಾಚಾರ್ಯ / ಜ. ೧೬೯೦ – ಮ. ?)

ಮರೆಯದಿರು ಮರೆಯದಿರು ಮಾರಮಣನೇ ॥ಪ॥
ಗುರು ಸತ್ಯಬೋಧಾರ್ಯ ವರದ ರಘುರಾಮಾ ॥ಅ.ಪ.॥

ವನ ವನಂಗಳ ತಿರುಗಿ । ಹಣ್ಣು ಹಂಪಲ ಮೆದ್ದು
ದಣುವಾದ ಪಾಡು ನಿನಗರಿವಿಲ್ಲವೇ ॥
ದಿನದಿನದಿ ಚಿತ್ರವಿಚಿತ್ರ ಭೋಜ್ಯಗಳನ್ನು
ಕ್ಷಣಬಿಡದೆ ಕೈಕೊಂಬ । ಘನಗರ್ವದಿಂದೆನ್ನ ॥೧॥

ನಾರವಸ್ತ್ರವನುಟ್ಟು । ತಲೆ ಜಡೆಗಟ್ಟಿದುದು
ತೋರದೇನೊ ನಿನ್ನ ಮನಸಿಗಿಂದೂ ॥
ಮೇರೆಯಿಲ್ಲದ ಪದಕ । ವಜ್ರಮಣಿ ಮಕುಟಗಳ
ಭಾರವನು ನೀವಹಿಸಿ । ಬಹುಬಿಂಕವನೆ ತಾಳೀ ॥೨॥

ಅರ್ಭಕನ ತೆರನಂತೆ । ದರ್ಭೆ ಹಾಸಿಕೆ ಮೇಲೆ
ಗುಬ್ಬಿಯಂದದಿ ಮಲಗಿದುದು ಮರತೆಯಾ ॥
ಲಭ್ಯವಾದಾ ಹೇಮ ತೊಟ್ಟಿಲೊಳು ನೀ ಮಲಗಿ
ಉಬ್ಬಿ ಓಲಗಗೊಂಬ ಉತ್ಸಾಹದಿಂದೆನ್ನ ॥೩॥

ಹೆಂಡತಿಯ ಕಳಕೊಂಡು । ಕಂಡಕಂಡವರಿಗೇ
ಅಂಡಲಿದ ಮಾತುಗಳು ಅನಲೇತಕೇ ॥
ಮಂಡಿತಾದಾಭರಣ । ಮತ್ತೆ ಎಡದಲಿ ಸತಿಯು
ಕಂಡು ಸುಖಬಡುವಂಥ । ಕಳವಳಿಕೆಯಿಂದೆನ್ನ ॥೪॥

ಈಗಲೀ ಸತ್ಯಬೋಧರ ಬಳಿಯಲಿರಲಾಗಿ
ನೀಗಿ ಹೋಯಿತೆ ನಿನ್ನ ಪಡಿಪಾಟಲೂ ॥
ಆಗೀಗಲೆನ್ನದೇ ಕ್ಷಣಬಿಡದೆ ಕೈಕೊಂಡು
ವೈಭೋಗಬಡುವುದೂ ಮೊದಲಿಗಿದ್ದಿಲ್ಲ ॥೫॥

ನಮ್ಮ ಗುರುಗಳು ನಿಮಗೆ । ಈ ಪರೀಯುಪಚಾರ
ಘಮ್ಮನೇ ಮಾಡಲೂ ಘನತೆಯಿಂದಾ ॥
ನಮ್ಮ ಸಾಕದೆ ಇನಿತು ದೂರಮಾಳ್ಪುದು ನಿನಗೆ
ಧರ್ಮವಲ್ಲವೊ ಸ್ವಾಮಿ ದಯದಿಂದ ನೋಡೆಮ್ಮ ॥೬॥

ಸಾಕಾರರೂಪ ಸರ್ವೋತ್ತಮನೆ ವೈಕುಂಠ
ಬೇಕಾಗಲಿಲ್ಲ ಹೊಸಪರಿ ಭಾಗ್ಯವೂ ॥
ಯಾಕೆ ಭಕುತರ ಮಾತು ನಿರಾಕರಿಸಿ ಬಿಡುವುದೂ
ಶ್ರೀಕಾಂತ ಎರಗುವೆ ವ್ಯಾಸವಿಠಲರೇಯಾ ॥೭॥

--✿✿✿✿✿--

೮೯

ರಾಮನ ನೋಡಿರೈ ನಿಮ್ಮಯ ಕಾಮಿತ ಬೇಡಿರೈ

(ಜಗನ್ನಾಥವಿಠಲ / ಮಾನ್ವಿ ಶ್ರೀನಿವಾಸಾಚಾರ್ಯ / ೧೭೨೮ - ೧೮೦೯)

ರಾಮನ ನೋಡಿರೈ ನಿಮ್ಮಯ ಕಾಮಿತ ಬೇಡಿರೈ ॥ಪ॥

ತಾಮರಸಸಖ ಸುವಾಂಶಾಬ್ಧಿಶರ
ತ್ನೋಮಾ ಕಮಲಧೀಮ ॥ಅ.ಪ.॥

ಧಾತನನುಜ್ಞದಿ ದೇವತ್ವಷ್ಟ್ರ ನಿರ್ಮಿಸಿದಾ ಅಜ ಪೂಜಿಸಿದಾ
ಜ್ಯೋತಿರ್ಮಯ ಜಾಬಾಲಿಮುನಿಯತಪವರಿದಾ ಕಾಮಿತ ನೆರೆದಾ
ಭೂತಾಧಿಪನ ಭವನದೊಳರ್ಚನೆಗೊಂಡಾ ಧೃತಕೋದಂಡಾ
ಮಾತಂಗಾರಿ ವರೂಥಿಯ ಜನಕಮೇದಾಗಾರಕೆ ಪೋದಾ ॥೧॥

ಸೌಭರಿ ಮುನಿಪಗೆ ಸೌಖ್ಯವ ಕರುಣಿಸಿ ಕೊಟ್ಟ ಜಗಕತಿದಿಟ್ಟ
ನಾಭಿಜನ್ಮನಿಹ ನಗವರ ಸ್ಥಾನಕೆ ಬಂದ ಶುಭಗುಣ ವೃಂದಾ
ವೈಭವದಿಂದಲಯೋಧ್ಯಾ ನಗರದಿ ಮೆರೆದಾ ಕಾಮಿತವೆರೆದಾ
ಸ್ವಾಭಿಮಾನದಲಿ ಸತಿಯಳಿಗಿತ್ತನು ವರವಾ ದೇವರದೇವಾ ॥೨॥

ಜಾಂಬವಂತನಿಗೆ ಜಾನಕಿರಮಣನು ಇತ್ತ ತನ್ನಯಧ್ಯಾತ
ಸಂಭ್ರಮದಲಿ ವೇದಗರ್ಭನೊಡನಾಡ್ದಾ ಮುಕ್ತಿಯ ನೀಡ್ದಾ
ಕುಂಭೀಶ್ವರನ ಸುಕೋಶದಿ ಬಹುದಿನ ವಾಸವೆಸಗಿದನೀಶಾ
ನಂಬಿ ತುತಿಸಿದ ನರಹರಿ ಮುನಿಪಗೆ ಒಲಿದಾ ಮೋದದಿ ನಲಿದ ॥೩॥

ಅಲವಬೋಧಮುನಿ ಅತಿಮೋದದಲರ್ಚಿಸಿದ ಸಲೆ ಮೆಚ್ಚಿಸಿದ
ಇಳೆಯೊಳು ಬಹು ಯತಿಕರಪೂಜಿತನಾದ ಲೀಲಾವಿನೋದಾ
ಬಲುನಂಬಿದ ಭಕುತರ ಕಲಿಮಲಗಳ ಕಳೆದ ಮನದೊಳುಪೊಳೆದ
ಸುಲಲಿತ ಗುಣನಿಧಿ ವಸುಧೇಂದ್ರಾರ್ಯರ ಪ್ರೀಯ ಕವಿಜನಗೇಯ ॥೪॥

ವಾರಿಧಿಬಂಧನ ವಾನರ ನಾಯಕರಾಳ ದೈತ್ಯರ ಸೀಳ್ದಾ
ನಾರದಮುಖ ಮುನಿನಮಿತ ಪದಾಂಬುಜನೀತಾ ತ್ರಿಗುಣಾತೀತ
ಆರಾಧಿಪರಿಗೆ ಅಖಿಳಾರ್ಥಗಳನು ಕೊಡುವಾ ದುರಿತವ ತಡೆವ
ನೀರಜಾಕ್ಷ ಜಗನ್ನಾಥ ವಿಠ್ಠಲ ನಿಶ್ಚಿಂತಾ ಸೀತಾಕಾಂತ ॥೫॥

--✿✿✿✿✿--

೯೦

ರಾಮಾ ರಘುಕುಲ ರಾಮ

(ಜಗನ್ನಾಥವಿಠಲ / ಮಾನ್ವಿ ಶ್ರೀನಿವಾಸಾಚಾರ್ಯ / ೧೭೨೮ - ೧೮೦೯)

ರಾಮಾ ರಘುಕುಲರಾಮ ॥ಪ॥

ಸುರಸಾರ್ವಭೌಮ ಪಾಹಿ ಗುಣಧಾಮಾ ॥ಅ.ಪ.॥

ವೀಂದ್ರವಾಹನ ಫಣೀಂದ್ರಶಯನ ವರ
ದೇಂದ್ರನುತ ರಾಮಚಂದ್ರಾ ॥೧॥

ಚಂಡಬಾಣಕೋದಂಡಾ ವಿಧೃತದೋ
ರ್ದಂಡಾ ಲೋಕೈಕಶುಂಡಾ ॥೨॥

ಗೋಪ್ತಾ ಮೂಜಗದ್ವ್ಯಾಪ್ತಾದೋಷ ನಿ
ರ್ಲಿಪ್ತಾ ವಿಬುಧಜನರಾಪ್ತಾ ॥೩॥

ಘನ್ನಾ ಸೌಪರಿಛಿನ್ನ ಕಾಲಾತಿ
ಭಿನ್ನಜಗದ ಮೋಹನ್ನಾ ॥೪॥

ಅಂಬಾವಲ್ಲಭ ಬಿಂಬಾಸುರಮುನಿಕ
ದಂಬಾ ಸೇವೆ ಕೈಕೊಂಬಾ ॥೫॥

ಗಣ್ಯಾಗಣ್ಯನೆ ಶರಣ್ಯ ಸಲಹೋ ನಿ
ರ್ವಿಣ್ಣ ಸುರವರವರೇಣ್ಯ ॥೬॥

ಜ್ಞಾನಾನಂದಾದಿ ನಾನಾ ಗುಣಪೂರ್ಣ
ಶ್ರೀ ನಾರಾಯಣ ಸಮಾನಾ ॥೭॥

ಕಪಿಲಾಭಕ್ತರಿಗೆ ಸುಫಲಾದಾಯಕ
ಚಪಲಚಿತ್ತರಿಗೆ ಉಪಲಾ ॥೮॥

ಸೀತಾಪತೇ ಜಗನ್ನಾಥವಿಠಲ
ಖ್ಯಾತಾ ಭವವನನಿಧಿಪೋತಾ ॥೯॥

--✿✿✿✿✿--

೯೧

ರಾಮಾ ಸದ್ಗುಣಧಾಮಾ ನಿರ್ಜರ ಸಾರ್ವಭೌಮಾ

(ಜಗನ್ನಾಥವಿಠಲ / ಮಾನ್ವಿ ಶ್ರೀನಿವಾಸಾಚಾರ್ಯ / ೧೭೨೮ - ೧೮೦೯)

ರಾಮಾ ಸದ್ಗುಣಗಣಧಾಮಾ ನಿರ್ಜರ ಸಾರ್ವ
ಭೌಮಾ ದನುಜಕುಲಭೀಮಾ ಭೀಮಾ ರಘುಸದ್ವಂಶದೊಳು
ದ್ದಾಮಾ ಕಾದುಕೋ ನಿನ್ನ ಭಕ್ತ
ಸ್ತೋಮ ಮಂಗಳನಾಮ ಹನುಮ
ತ್ಪ್ರೇಮಾತಮ ಸೀತಾ ಮನೋಭಿರಾಮ ॥ಪ॥

ಸರಸಿಜೋದ್ಭವನ ಮಂದಿರದೊಳರ್ಚನೆಗೊಂಡು
ನಿರುತಾ ಪಾವನತರ ಚರಿತಾ
ಸರ್ವದೇವರ ದೇವ ಇಕ್ಷ್ವಾಕರ ರಸನ್ವಯನೃ
ಪರಕರವಾರಿರುಹ ಪೂಜಿತನಾಗಿ ದಶರಥಾ
ನರಸಿ ಜಠರದಿ ಜನಿಸಿ ಮೆರೆದಿಹ ರಾಮಾ ॥೧॥

ಗಾದಿ ನಂದನನ ಸುಮೇಧಾ ರಕ್ಷಿಸಿದಾ
ಗಾಧನಂದ ಬಲಬೋಧಾ
ಮೇದಿನಿ ಜಾತಳನೊಲಿಸಲು
ಮಾಧವನ ಧನುಮುರಿದ ನೀಲ ಪ
ಯೋಧರ ಶಾಮಲ ಸುಮನಸ ವಿ
ರೋಧಿ ಲೋಕಮಯ ಸದೆದ ರಘುರಾಮಾ ॥೨॥

ಚತುರವಿಂಶತಿ ದಶಶತ ಸಹಸ್ರ
ಜಿತಾದ್ಯಮಿತಾ ಆದ್ಯಮಿತರೂಪ ಜಗನ್ನಮಿತಾ
ಅತುಳಭುಜಬಲ ರಾವಣನ ಸಂ
ತತಿ ಸವರಿ ಲಂಕಾಧಿಪತ್ಯ
ನತವಿಭೀಷಣಗಿತ್ತಾ ವರದೇಂದ್ರ
ಯತಿ ವರದ ಜಗನ್ನಾಥವಿಠಲ ರಾಮಾ ॥೩॥

--✿✿✿✿✿--

೯೨

ಅಸುರ ಬಾಧಿಸುತಿರಲು ಋಷಿಗಳು ಸ್ತುತಿಮಾಡೆ

(ಜಗನ್ನಾಥವಿಠಲ / ಮಾನ್ವಿ ಶ್ರೀನಿವಾಸಾಚಾರ್ಯ / ೧೭೨೮ - ೧೮೦೯)

ಅಸುರ ಬಾಧಿಸುತಿರಲು ಋಷಿಗಳು ಸ್ತುತಿಮಾಡೆ
ದಶರಥನ ಗರ್ಭದಲಿ ಜನಿಸಿ ಬಂದೆ ॥೧॥

ಶಿಶುವಾಗಿ ಕೌಸಲೆಗೆ ಬಾಲಲೀಲೆಯ ತೋರ್ದು
ಕುಶಲದಿಂ ನಾಲ್ವರ ಕೂಡೆ ಬೆಳೆದೆ ॥೨॥

ಅಸುರರನೆ ಬಡಿದಟ್ಟಿ ಋಷಿಯ ಯಾಗವ ಕಾಯ್ದು
ವಸುಧೆಯೊಳು ಶಿಲೆಯನ್ನು ಸತಿಯ ಮಾಡಿ ॥೩॥

ಮಿಥಿಲಪಟ್ಟಣಕೈದಿ ಮೃಡನ ಧನುವನೆ ಮುರಿದು
ಶಶಿಮುಖಿ ಜಾನಕಿಯ ಕರವ ಪಿಡಿದು ॥೪॥

ಪಥದೊಳಗೆ ಬರುತ ಭಾರ್ಗವರೊಡನೆ ಹೋರಾಡಿ
ದಶರಥಗೆ ಏಕೀಭಾವವನೆ ತೋರಿ ॥೫॥

ಪರಮಹರುಷದಲಿ ಸಾಕೇತನಗರಿಗೆ ಬಂದು
ಕಿರಿಯಮಾತೆಯ ಕಠಿಣನುಡಿ ಕೇಳಿ ॥೬॥

ಚಿತ್ರಕೂಟಕೆ ಬಂದು ಕೃತ್ಯವೆಲ್ಲವ ನಡೆಸಿ
ಭ್ರಾತೃಭರತನಿಗೆ ಪಾದುಕೆಯನಿತ್ತು ॥೭॥

ವನದೊಳಗೆ ಸಂಚರಿಸಿ ಘನಕಾರ್ಯಗಳ ಮಾಡಿ
ಹನುಮನ ಕಳುಹಿ ಮುದ್ರಿಕೆಯ ಕೊಡಲು ॥೮॥

ಮಿತ್ರೆ ಜಾನಕಿಗರುಹಿ ರತ್ನಕೊಂಡುಬರಲು
ಅತ್ಯಂತ ಹರುಷದಲಿ ಶರಧಿ ಕಟ್ಟಿ ॥೯॥

ದುಷ್ಟರಾಕ್ಷಸ ಕುಲವ ಕುಟ್ಟಿ ಬೇರನೆ ಸವರಿ
ಸೃಷ್ಟಿಸುತೆ ಜಾನಕಿಯ ಅಗ್ನಿಹೊಗಿಸಿ ॥೧೦॥

ಪಟ್ಟಣಕೆ ಬಂದು ಭರತನಿಗೆ ಪೇಳೆ
ಅಷ್ಟಗಂಗೆ ಉದಕವನೆ ತಂದು ॥೧೧॥

ಅಷ್ಟಋಷಿಗಳು ಎಲ್ಲ ಕೂಡಿಕೊಂಡು
ಪಟ್ಟಾಭಿಷೇಕವನು ಮಾಡುತಿರಲಂದು ॥೧೨॥

ಸೃಷ್ಟಿಯೊಳು ಜಗನ್ನಾಥವಿಠಲನಿಗೆ ಪುಷ್ಪ
ವೃಷ್ಟಿಗಳನ್ನು ಕರೆದರಾಗ ॥೧೩॥

--✿✿✿✿✿--

೯೩

ಬಂದನೇನೆ ಸುಂದರ ಶ್ರೀರಾಮಚಂದಿರ

(ಶೇಷವಿಠಲ / ಬಾಗೇಪಲ್ಲಿ ಶೇಷದಾಸರು / ೧೮೬೫ - ೧೯೨೪)

ಬಂದನೇನೆ ಸುಂದರ ಶ್ರೀರಾಮಚಂದಿರ ||ಪ||

ಸಿರಿವತ್ಸಧಾರನು ಶ್ರಿತಜನೋದ್ಧಾರನು
ಮಾರಸುಂದರನು ಮಾಮನೋಹರನು ||೧||

ಕೋಮಲಗಾತ್ರನು ಕಮಲಕಳತ್ರನು
ಕಮಲಾಪ್ತತೇಜನು ವಿಮಲಸತ್ಪಾತ್ರನು ||೨||

ಸಾಸಿರನಾಮನು ಭಾಸುರವದನನು
ಈಶವಂದಿತನು ಶೇಷವಿಠ್ಠಲನು ||೩||

--✿✿✿✿✿--

೯೪

ರಾಮನ ನೋಡ ಬನ್ನಿರೆ ಭಾಮೆಯರೆಲ್ಲ

(ಪ್ರಾಣನಾಥವಿಠಲ / ಬಾಗೇಪಲ್ಲಿ ಶೇಷದಾಸರು / ೧೮೬೫ - ೨೯೨೪)

ರಾಮನ ನೋಡ ಬನ್ನಿರೆ ಭಾಮೆಯರೆಲ್ಲ ||ಪ||

ರಾಮನ ನೀವು ನೋಡ ಬನ್ನಿರೆ ಕಾಮಿತಾರ್ಥವಬೇಡಿಸುಖಿಸಿರೆ
ಸ್ವಾಮಿ ನೀನೆ ಗತಿ ಎಂದರೆ ಕಾಮಿತಾರ್ಥವನೀವ ದೊರೆಯನೆ ||ಅ.ಪ||

ಸೀತೆಗೋಸುಗ ಸೇತುವೆಯ ಕಟ್ಟಿ ಧೂರ್ತರಾವಣನ ಘಟ್ಟಿಸಿ
ಖ್ಯಾತಿಯಿಂದಲಿ ರಥವನೇರಿ ಸೀತೆಸಹಿತ ಬರುವನಂತೆ ||೧||

ಹರಿಯುನರನಾಗುತಲಿ ಬಂದು ವರ ಅಯೋಧ್ಯಾಪುರದಿ ನಿಂದು
ಮೆರೆವ ಸಿಂಹಾಸನವನೇರುತ ಹರುಷದಲಿ ತಾ ಕೂಡುವನಂತೆ ||೨||

ಮಾನನಿಧಿ ಪ್ರಾಣನಾಥವಿಠಲ ಸಾನುರಾಗದಿ ಭಜಿಸುವರ ಸುರ
ಧೇನುವಂದದಿ ಸಲಹುವನು ಮಾನಿನಿಯರು ಮನ್ನಿಸುತ ಬೇಗ ||೩||

ರಾಮನ ನೋಡಿರೋ ನಮ್ಮ ಸೀತಾರಾಮನ

(ಶ್ರೀಕೃಷ್ಣವಿಠಲ / ಎಚ್ ಭೀಮರಾವ್ / ಜನನ ? – ಮರಣ ೧೯೬೩)

ರಾಮನ ನೋಡಿರೋ ನಮ್ಮ ಸೀತಾರಾಮನ ನೋಡಿರೋ ॥ಪ॥
ರಾಮನನೋಡುತ ಪ್ರೇಮವ ಸುರಿಸುತ
ನಾಮವ ನುಡಿಯುತ ನೇಮದಿ ಬೇಡುತ ॥ಅ.ಪ.॥

ಅಜಭವಾದಿಗಳರಸನೀತಾ ಮತ್ತೆ
ನಿಜಭಕುತರಿಗೆ ಮುಕ್ತಿಪ್ರದಾತ
ತ್ಯಜಿಸಿ ದುಷ್ಟರಸಂಗ ಭಜಿಸಿ ಶಿಷ್ಟರಸಂಗ
ಭುಜಗಭವವೆಂದರಿತು ನಿಜಸುಖಮೆಲ್ಲಲು ॥೧॥

ನಿತ್ಯವೇದಗಳಿಂ ಪ್ರತಿಪಾದ್ಯ ಮತ್ತೆ
ನಿತ್ಯಾನಿತ್ಯ ಜಗಸೃಜಿಪ ದೇವದೇವೇಶ
ಮುಕ್ತಾಮುಕ್ತಾಶ್ರಯ ಸತ್ಯಪ್ರಾಣನ ಹೃಸ್ಥ
ಉತ್ತಮೋತ್ತಮನೆಂದು ಎತ್ತಿಕೈಗಳ ಮುಗಿದು ॥೨॥

ಭಕ್ತಿಯಿಂದಲಿ ನೋಡೆ ಸರ್ವಾಘಹರವೋ
ಮತ್ತೆಪಾಡಲು ಕಾಮಿತ ಕರಗತವೊ
ಹಸ್ತಿವರದನ ನೋಡೆ ಮತ್ತರಿಗೆ ಸಾಧ್ಯವೆ
ವತ್ತುತ ಗೃಹಕೃತ್ಯ ಬೇಗ ಉತ್ತಮರಲ್ಲಿ ॥೩॥

ಸುಲಭವಲ್ಲವೊ ಇಂಥಾ ಸಮಯ
ಫಳಿಸಿ ನೋಡಿದವನೆ ಕೃತಾರ್ಥ
ಕುಳಿತು ಹೃದಯದಿ ನಿತ್ಯ ಸಲಹುತ್ತಿರುವಂಥ
ಅಲವ ಮಹಿಮಾರ್ಣವ ಲಲನೆ ಲಕ್ಷ್ಮಿಯನಾಳ್ವ ॥೪॥

ಸರ್ವನಾಮಕನಿವನೂ ಮತ್ತೆ
ಸರ್ವಪ್ರೇರಕ ಬಲಖ್ಯಾತನಿಹನೂ
ಸರ್ವ ಸರ್ವಾಧಾರ ಸರ್ವೇಶ ಶಾಶ್ವತ
ಸರ್ವಗುಣಗುಣ ಪೂರ್ಣಸರ್ವವ್ಯಾಪ್ತನಾದ ॥೫॥

ಆರಿಲ್ಲ ಸಮವಧಿಕ ಇವಗೇ ಮತ್ತೆ
ಆರು ಕಾಣರು ನೆಲೆಯ ಸಾಕಲ್ಯ ಸತ್ಯ
ಸಾರವಿಲ್ಲದ ಜಗದಿ ಸಾರನೊಬ್ಬನೆ ಇವನು
ತೋರು ಪಾದಗಳೆಂದು ಸಾರಿಬೀಳುತ ಅಡ್ಡ ॥೬॥

ಶರಣೆಂದ ವಿಭೀಷಣಗೆ ಪಟ್ಟಕಟ್ಟಿದನೊ
ಕರುಣದಿಂದಲಿ ಶಬರಿಯ ಪೊರೆದವನು
ದುರುಳಪಾಪಿಯ ದೊಡ್ಡ ರವಿಯ ಮಾಡಿದ ಮಹಿಮ
ಪರಮಪಾವನ ಕೃಷ್ಣವಿಠಲ ಪರಾತ್ಪರಕರುಣ ಬೇಕಾದವರು ॥೭॥

--✿✿✿✿✿--

೯೬
ರಾಮನ ನೆನೆ ಮನವೇ – ಹೃದಯಾ
(ವರದವಿಠಲ / ಸರಗೂರು ವೆಂಕಟಾರ್ಯ / ಕಾಲ. ೧೯ ಶ.)

ರಾಮನ ನೆನೆ ಮನವೇ–ಹೃದಯಾ–ರಾಮನನೆನೆಮನವೇ ॥ಪ॥
ರಾಮನ ಜಗದಭಿರಾಮನ ಮೇಘಶ್ಯಾಮನ
ಸದ್ಗುಣಧಾಮನಾ ಸೀತಾ ॥ಅ.ಪ.॥

ದಶರಥನಂದನನಾ–ಧರಣಿಯೊಳಸುರರ ಕೊಂದವನ
ಪಶುಪತಿಚಾಪವ ಖಂಡಿಸಿಮುದದಿಂ
ವಸುಮತಿಸುತೆಯಂ ಒಲಿದೊಡಗೂಡಿದ–ರಾಮನ ॥೧॥

ತಂದೆಯ ಮಾತಿನಲಿ–ವನಕೈತಂದು ಸರಾಗದಲಿ
ಬಂದ ವಿರಾಧನ ಕೊಂದ ನಿಶಾಚರಿ
ಯಂದವಳಿದು ಖಳವೃಂದವ ಸವರಿದ ॥೨॥

ಸೀತೆಯನರಸುತಲಿ–ಕಬಂಧನ ಮಾತನು ಸರಿಸುತಲಿ
ವಾತನಮಗನೊಳು ಪ್ರೀತಿಯಿಟ್ಟು ಪುರುಹೂತನ
ಸುತನಂ ಘಾತಿಸಿದಾತನ–ರಾಮನ ॥೩॥

ತರಣಿತನಯನಿಂದ–ಕಪಿಗಳ ಕರೆಸಿ ವಿಲಾಸದಿಂದ
ತರುಣಿಯನರಸಲು ಮರುತನ ಮಗನಿಗೆ
ಬೆರಳುಂಗುರವನು ಗುರುತಾಗಿತ್ತನ–ರಾಮನ ॥೪॥

ಧರಣಿಜೆಯನು ಕಂಡು–ವನವನು ಮುರಿದು ಗುರುತುಕೊಂಡು
ಅರಿಪುರವನು ಸುಟ್ಟುರುಹಿದ ವಾನರ–
ವರನಿಗೆ ಸೃಷ್ಟಿಪಪದವಿತ್ತಾತನ–ರಾಮನ ॥೫॥

ಶರನಿಧಿಯನು ಕಟ್ಟಿ–ಶತ್ರುನಿಕರವನು ಹುಡಿಗುಟ್ಟಿ
ಶರಣನ ಲಂಕೆಗೆ ದೊರೆಯನು ಮಾಡಿ
ಸಿರಿಯನಯೋಧ್ಯಗೆ ಕರೆತಂದಾತನ–ರಾಮನ ॥೬॥

ಧರಣಿಯಪಾಲಿಸುತ–ಧರ್ಮದ ಸರಣಿಯ ಲಾಲಿಸುತ
ಶರಣಾಭರಣ ಪುಲಿಗಿರಿಯೊಳು ನೆಲೆಸಿದ
ವರದವಿಠ್ಠಲ ದೊರೆ ಪರಮೋದಾರನ–ರಾಮನ ॥೭॥

--✿✿✿✿✿--

೯೭

ತವ ದಾಸೋಹಂ ತವ ದಾಸೋಹಂ

(ವರದವಿಠಲ / ಸರಗೂರು ವೆಂಕಟಾರ್ಯ / ಕಾಲ. ೧೯ ಶ.)

ತವದಾಸೋಹಂ ತವದಾಸೋಹಂ ತವದಾಸೋಹಂ ದಾಶರಥೇ ॥ಪ॥

ದಶರಥಪುತ್ರಾಪಶುಪತಿಮಿತ್ರಶಶಿರವಿನೇತ್ರಾ–ದಾಶರಥೇ ॥೧॥

ವಿಧೃತಕೋದಂಡವಿಪುಲದೋರ್ದಂಡ ಕದನಪ್ರಚಂಡ–ದಾಶರಥೇ ॥೨॥

ತಾಟಕಾಹನನ ತಾಡಿತಕುಜನ ಹಾಟಕವಸನಾ–ದಾಶರಥೇ ॥೩॥

ಮನಸಿಜವೇಷ ಮಂಜುಳಭಾಷ ಮನುಜವಿಶೇಷ–ದಾಶರಥೇ ॥೪॥

ಶರದಾಭಗಾತ್ರ ಶರನಿಧಿಯಾತ್ರಾ ಕರಧೃತಗೋತ್ರ–ದಾಶರಥೇ ॥೫॥

ರಾವಣಹರಣಪಾವನಚರಣಶ್ರೀವಧೂರಮಣ–ದಾಶರಥೇ ॥೬॥

ರಕ್ಷಿತಲೋಕ ರಚಿತಸುಶ್ಲೋಕ ಶಿಕ್ಷಿತಕಾಕ-ದಾಶರಥೇ ॥೭॥

ವ್ಯಾಘ್ರಾರಿಶಮನವ್ಯಾಘ್ರಾರಿಗಮನ ವ್ಯಾಘ್ರಾದ್ರಿಸದನ-ದಾಶರಥೇ ॥೮॥

ಹರಿಹೃತ ಕುಟಿಲ-ಸರಿಸಿಜನಿಟಿಲ ವರದಾರ್ಯವಿಠಲ ದಾಶರಥೇ ॥೯॥

--✿✿✿✿✿--

೯೮

ರಾಮಭಜೇ ತೇ ಪದಯುಗಳಂ

(ವರದವಿಠಲ / ಸರಗೂರು ವೆಂಕಟಾರ್ಯ / ಕಾಲ. ೧೯ ಶ.)

ರಾಮಭಜೇ ತೇ ಪದಯುಗಳಂ-
ಸೀತಾರಾಮಭಜೇ ತೇ ಪದಯುಗಳಂ ॥ಪ॥

ರಾಮಸುಂದರ ಘನ ಶ್ಯಾಮರಘೂದ್ವಹ ॥ಅ.ಪ.॥

ದಶರಥ ಹೃದಯಾನಂದಕರಂ
ತ್ರಿದಶಗಣಚಿತ್ತಾಮೋದಕರಂ ॥೧॥

ಪೂರಿತ ಕೌಶಿಕಯಜನಂ
ಸಂತಾರಿತಗೌತಮ ಲಲನಾಂ ॥೨॥

ಖಂಡಿತ ಶಂಕರ ಚಾಪಂ ಪರಿ-
ದಂಡಿತ ಭಾರ್ಗವ ಕೋಪಂ ॥೩॥

ಸ್ವೀಕೃತ ಜಾನಕಿ ಹೃದಯಂ
ದೂರೀಕೃತ ಪಾತಕ ನಿಚಯಂ ॥೪॥

ಪಾಲಿತಮಾತಾಪಿತೃವಚನಂ
ಸಂಲಾಲಿತ ಮುನಿಜನ ಸ್ತುತಿರಚನಂ ॥೫॥

ಭರತ ಸಮರ್ಪಿತ ನಿಜರಾಜ್ಯಂ ಮುನಿವರ
ಭಾರದ್ವಾಜಾರ್ಪಿತ ಭೋಜ್ಯಂ ॥೬॥

ದಂಡಕಾರಣ್ಯಪಾವನಚರಣಂ
ಉದ್ದಂಡ ವಿರಾಧಪಾತಕ ಹರಣಂ ॥೭॥

ಕುಂಭಜಾರ್ಪಿತ ಶರಕೋದಂಡಂ
ಸಂರಂಭ ನಿರ್ಜಿತರಾಕ್ಷಸಷಂಡಂ ॥೮॥

ಪಂಚವಟೀತಟ ಕೃತವಾಸಂ
ದೃಗಂಚಲಧೃತಜಗದುಲ್ಲಾಸಂ ॥೯॥

ಶೂರ್ಪನಖೀವಚನಾಲೋಲಂ
ಸಹಜಾರ್ಪಿತ ವಿವಿಧಾಯುಧಜಾಲಂ ॥೧೦॥

ರೂಪನಿರ್ಜಿತ ಸುಮಬಾಣಾಂಗಂ
ವಿರೂಪಿತದುಷ್ಟ ಶೂರ್ಪನಖಾಂಗಂ ॥೧೧॥

ಖರತರ ಖರದೂಷಣಕಾಲಂ ಸುರ
ನರವರಮುನಿಗಣ ಪರಿಪಾಲಂ ॥೧೨॥

ಮಾಯಾಮೃಗಾರ್ಪಿತ ಬಾಣವರಂ-
ಜಟಾಯುಸಂಪಾದಿತ ಲೋಕವರಂ ॥೧೩॥

ರಾವಣಹೃತ ನಿಜಪತ್ನೀಕಂ
ಲೋಕಾವನಗತ ಕೋಪೋದ್ರೇಕಂ ॥೧೪॥

ಸಾಧಿತಶಬರೀ ಮೋಕ್ಷಕರಂ-ಕಬಂಧ
ಬಂಧನಮೋಚನ ಚತುರಂ ॥೧೫॥

ವಾತತನೂಭವ ಕೃತಸ್ತೋತ್ರಂ-
ಪಂಪಾತಟನಿರ್ಮಿತ ಸುಕ್ಷೇತ್ರಂ ॥೧೬॥

ಶಿಕ್ಷಿತ ಸಂಕ್ರಂದನ ತನುಜಂ-
ಸಂರಕ್ಷಿತ ಚಂಡಕಿರಣ ತನುಜಂ ॥೧೭॥

ಸೀತಾಲೋಕನ ಕೃತಕಾಮಂ-
ವಿಜಧೂತಾಮೋದನ ಸುಪ್ರೇಮಂ ॥೧೮॥

ನಿಜಕರಭೂಷಣ ದಾತಾರಂ
ಧುರವಿಜ ಯವನಾಲಯ ಪರಿವಾರಂ ॥೧೯॥

ಧೂತಾಹೃತ ಶುಭದೃಷ್ಟಾಂತಂ-
ವಿಜ್ಞಾತನಿಜಸ್ತ್ರೀ ವೃತ್ತಾಂತಂ ॥೨೦॥

ಭೀಷಣಜಲನಿಧಿ ಬಂಧಕರಂ-
ವಿಭೀಷಣಸಂರಕ್ಷಣ ಚತುರಂ ॥೨೧॥

ಶೋಷಿತ ರಾವಣ ಜಲದಿಂ-
ಸಂತೋಷಿತ ದೈವತ ಪರಿಧಿಂ ॥೨೨॥

ಸೀತಾ ಸಮಾಶ್ರಿತ ವಾಮಾಂಕ ಪರಿಭೂತ
ಪಾತಕ ನಿಜನಾಮಾಂಕಂ ॥೨೩॥

ಸ್ವೀಕೃತ ಸಾಕೇತವಾಸಂ-
ಅಂಗೀಕೃತ ಮಾನುಷ್ಯವಿಲಾಸಂ ॥೨೪॥

ವರವ್ಯಾಘ್ರಭೂಧರ ಕಲ್ಪತರುಂ-
ಶ್ರೀವರದ ವಿಠಲಮತಿಶಯ ರುಚಿರಂ ॥೨೫॥

--✿✿✿✿✿--

೯೯

ಎಂಥಾ ಪಾವನ ಪಾದವೋ ಶ್ರೀರಾಮನ

(ರಘುರಾಮವಿಠಲ / ಸುಬೋಧ ರಾಮರಾಯ / ೧೮೯೦ - ೧೯೭೦)

ಎಂಥಾ ಪಾವನ ಪಾದವೋ ಶ್ರೀರಾಮನ
ದೆಂಥಾ ಚೆಲುವ ಪಾದವೋ ॥ಪ॥

ಸಂತತವು ಸಜ್ಜನರ ಪಾಲಿಸೆ
ನಿಂತು ಧನುವನು ಧರಿಸಿ ಮೆರೆವ ॥ಅ.ಪ.॥

ಮುನಿಪತಿ ನುಡಿ ಮನ್ನಿಸಿ ತಪೋವನಕ್ಕನುಜನೊಡನೆ ಗಮಿಸಿ
ಮುನಿಯಾಜ್ಞೆಯಿಂ ಘೋರ ತಾಟಕಿಯನೆ ವಧಿಸಿ
ವಿನಯದಿ ಯಜ್ಞರಕ್ಷಣೆ ಮಾಡಿ ಮುದವಿತ್ತ ॥೧॥

ಮುನಿ ಗೌತಮನ ಪತ್ನಿಯ ಅಹಲ್ಯೆಯ ಘನಶಾಪವನು ಕಳೆಯೆ
ಮುನಿಯಾಜ್ಞೆಯಿಂ ಘನಶಿಲೆಯ ಮೇಲಡಿಯಿಟ್ಟು
ಘನತರ ಮಾನಿನಿಯನು ನಿರ್ಮಿಸಿ ಮೆರೆದ ॥೨॥

ಗುಹನು ಗಂಗೆಯ ತಟದಿ ದೋಣಿಯ ತಂದು ಗಹನ
ಶಂಕೆಯೊಳಂದು
ಸಹಜಭಕ್ತಿಯಲಿ ವಿರ್ಮಲಗಂಗೆಯುದಕದಿಂ
ದಹಹ ಪಾದರಜವನು ತೊಳೆಯಲೊಪ್ಪಿದ ॥೩॥

ಹರಧನುವನು ಭಂಗಿಸಿ ಮಿಥಿಲೆಯಲಿ ವರವಿಕ್ರಮವ ಮೆರೆಸಿ
ತರುಣಿ ಜಾನಕಿಯಂದು ಶಿರದಿ ನಿನ್ನಡಿಗಳಿ
ಗೆರಗಲು ಘನಶಂಕೆಯಿಂ ಮಾಲೆಯರ್ಪಿಸಿದ ॥೪॥

ದುರುಳದಾನವ ತಂಡವ ಸಂಹರಿಸು ವರಸಾಧುಗಳಪೊರೆಯೆ
ಚರಣಪಾದುಕೆಗಳ ಶರಣ ಭರತಗಿತ್ತು
ಬರಿಗಾಲಲಿ ನಡೆದ ರಘುರಾಮವಿಠಲನ ॥೫॥

--✿✿✿✿✿--

೧೦೦
ರಾಮನಾಮಕೆ ಸಮ ನಾಮವುಂಟೆ ?
(ರಘುರಾಮವಿಠಲ / ಸುಬೋಧ ರಾಮರಾಯ / ೧೮೯೦ – ೧೯೭೦)

ರಾಮನಾಮಕೆ ಸಮ ನಾಮವುಂಟೆ ಜಗದೀ
ಪಾಮರರಘನಾಶಕೆ ॥ಪ॥

ಕಾಮಾರಿಯು ತನ್ನ ಭಾಮೆಗೆ ಬೋಧಿಸಿದೀ
ನಾಮಕೆ ಸಮವುಂಟೇ ॥ಅ.ಪ.॥

ಕೌಸಲ್ಯಾದಶರಥರಿಂದವತರಿಸೀ
ಕೋಸಲಪತಿಯೆನಿಸೀ
ವಾಸವಾದಿ ದಿವಿಜರ ಪಾಲಿಸಲೆಳೆಸೀ
ಅಸುರೆಯಸಂಹರಿಸೀ
ಭಾಸುರಾಂಗ ಮುನಿಯಾಗದೊಳುಪಹರಿಸೀ
ದುರುಳರಪಹರಿಸೀ
ಶ್ರೀ ಸೀತಾಕರಪಲ್ಲವವನುಗ್ರಹಿಸೀ
ಮುನಿಸತಿಯನುದ್ಧರಿಸಿದ ॥೧॥

ಪಿತನ ಸತ್ಯವಾಕ್ಯವ ಪಾಲಿಸಲೆಳಸೀ
ಸತಿಯನುಜರ್ವೆರಸೀ
ಹಿತದಿಂ ಮುನಿ ವೇಷದೊಳಡವಿಗೆಗಮಿಸೀ
ದಿತಿಜರ ಕುಲವಳಿಸೀ
ಮತಿಮಾನ ವಾಯುಕುಮಾರನ ಸ್ವೀಕರಿಸೀ
ಸತಿಯಳ ನೆಲೆಯರಸೀ
ಕ್ಷಿತಿಧರಕುಲದಿಂ ಶರಧಿಯನುತ್ತರಿಸೀ
ದಿತಿಜಾಂತಕನೆನಿಸಿದ ॥೨॥

ರಾವಣ ಘಟಕರ್ಣಾದ್ಯರ ಸಂಹರಿಸೀ
ಶರಣನ ಪತಿಕರಿಸೀ
ಪಾವಕನೊಳು ಸತಿಶೀಲವನುದ್ಧರಿಸೀ
ನರನಾಟಕ ನಡೆಸೀ
ಪಾವಕನಿಂ ಭರತನ ಪ್ರಾಣವನುಳಿಸೀ
ಕರುಣಾನಿಧಿಯೆನಿಸೀ
ದೇವರದೇವ ರಘುರಾಮವಿಠಲನೆನಿಸೀ
ಜನವನು ಪಾಲಿಸಿದಾ ॥೩॥

--✿✿✿✿✿--

೧೦೧

ರಾಮಾ ನಿನ್ನೊರ್‍ರತನ್ಯರ ಕಾಣೆ

(ಸುಬೋಧ ರಾಮರಾಯ / ರಘುರಾಮವಿಠಲ / ೧೮೯೦ - ೧೯೭೦)

ರಾಮಾ ನಿನ್ನೊರ್‍ರತನ್ಯರ ಕಾಣೆ
ಪೊರೆ ನೀನೆನ್ನಾಣೇ ಶ್ರೀರಾಮಾ ॥ಪ॥

ಕಾಮಾಂತಕ ತನ್ನ ಭಾಮೆಗೊರೆದ ಶ್ರೀ
ರಾಮತಾರಕಮಂತ್ರವೆ ಗತಿ ಲೋಕಕೆ ರಾಮಾ ॥ಅ.ಪ.॥

ಮತಿವಂತ ದಶರಥ ಕೌಸಲ್ಯೆಯರ
ಸುತನಾಗ್ಯವತರಿಸಿ
ಅತಿಬಾಲ್ಯದಿ ಮುನಿಯೊಡನಡವಿಗೆ ನಡೆದು ಕಡು
ದುರುಳೆಯಸದೆದು
ಮತಿಹೀನ ರಕ್ಕಸರುಪಟಳವಳಿದು ಮುನಿಪತಿ
ಮಖ ಬೆಳೆದು
ಪತಿಸುತಸಖಹಿತ ಜನಪತಿ ಜೀವಿತ ಪಥದಾದರ್ಶವ
ಜಗತಿಗೆ ತೋರಿದೆ ॥೧॥

ಮುನಿಗೌತಮಸತಿ ತಾ ಶಿಲೆಯಂತಿರಲು
ಪದರಜದಿಂದುದ್ಧರಿಸಿ
ಘನ ಜಾಹ್ನವಿ ಚರಿತೆಯ ಕೇಳುತ ನಳಿದು
ಅನುಜಾತನ ಬೆರೆದು
ಜನನಾಥನ ಜನಕನ ಮಿಥಿಲೆಗೆ ನಡೆದು
ಹರಧನುವನುಪಡೆದು
ಅನುಪಮವೆನಿಪದ ನಡುವೊಳೆ ಖಂಡಿಸಿ ಜನಕಸುತೆಯ
ಕರಕಮಲವ ಪಿಡಿದೆ ॥೨॥

ಪರಶುಹಸ್ತರು ಮಾರ್ಗದಿ ಎದುರಾಗಿ
ಅಂಜಿಸೆ ಬೆರಗಾಗಿ

ಕರದಲ್ಲಾಟಿಕೆಯೊಲು ಧನುವದಗ್ರಹಿಸಿ
ಕ್ಷಣದಲ್ಲುಪಹರಿಸಿ
ಪರಮಾದರ ನೀಡಿದೆ ಬಾಂಧವ ಜನಕೆ ಹಿರಿಯರಿಗೆ
ದಶರಥನಿಗೆ
ಸುರನರರೆಲ್ಲರು ಪರಮಾನಚಿದದೊಳಿರುತಿರೆ ವಸಿದೆ
ಸುದತಿಯೊಡನೆ ರಘುರಾಮ ||೩||

ಹಿಂದೆ ನಾ ಬಹುಜನ್ಮಗಳಲಿ ಬಂದು
ನೊಂದೆನು ಈ ಭವದಿ
ಮುಂದೆ ಮಾರ್ಗವ ಕಾಣದೆ ನಿನ್ನಲಿ ಬಂದು
ನಿಂದೆ ಗತಿಯೆಂದು
ಸಂದೇಹವಿಲ್ಲ ನೀನೇ ಗುಣಸಿಂಧು ಜಗಕಾಪದ್ಬಂಧುತಂದೆ
ನೀನಿಂದೆನ್ನ
ಬಂಧನ ಬಿಡಿಸದೆಕೊಂದೆಯಾದರೆ ಕುಂದದು
ನಿನಗಪಯಶ ||೪||

ಆನಂದಮಯ ನೀನಾನಂದದಲ್ಲಿದ್ದೆ
ಆಶ್ಚರ್ಯವದೇಳು
ಆನಂದವನೊಂದು ಕುಂದದಲಿತ್ತೆ
ಜಗಕತಿಶಯವೇಳು
ಸಾನಂದದೊಳಿದ್ದರು ತವಸನ್ನಿಧಿಬಲದಿ
ಅತಿಶಯಮತ್ತೇಳು
ನೊಂದಜನಕೆ ಇಂದಾನಂದವ ನೀನ್ನೊಂದಿಸಿ ಪೊರೆ
ರಘುರಾಮವಿಠಲ ||೫||

--✿✿✿✿✿--

೧೦೨

ರಾಮಾ ಮನ್ಮನೋಹಾರಕ ಸೀತಾರಾಮ

(ಸುಬೋಧ ರಾಮರಾಯ / ರಘುರಾಮವಿಠಲ / ೧೮೯೦ – ೧೯೭೦)

ರಾಮಾ ಮನ್ಮನೋಹಾರಕ ಸೀತಾರಾಮ
ರಾಮಮನ್ಮನೋಹಾರಕ ||ಪ||

ರಾಮ ದಶರಥರಾಮ ಮಂಗಳನಾಮ ಶ್ರೀ ರಘುರಾಮ
ಗುಣಗಣಧಾಮ ಸಜ್ಜನಪ್ರೇಮ ಹೇ ಜಯರಾಮ
ಸೀತಾರಾಮ ರಘುವರ ॥ಅ.ಪ.॥

ಸುರಪತಿ ಮುನಿಸತಿಯ ಅಹಲ್ಯೆಯ ಮರೆಸಿ
ಕೂಡಲು ಕೋಪದಿ
ಗೌತಮಮುನಿ ತರಳೆಯ ಶಪಿಸಿರಲು
ಕಲ್ಲಾಗಿ ಬಿದ್ದಿರೆ
ಹಿರಿದುಕಾಲಕೆ ಮುನಿಯೊಡನೆ ರಘುವರ ನೀ
ಪಾದಗಳ ರಜದಿಂ
ತರುಣಿಯಾಗಿಸಿ ಪೊರೆದೆಯೆಂಬೀ ವರ
ಸುವಾರ್ತೆಯ ಕೇಳಿ ಬಂದಿಹೆ ॥೧॥

ಕಡುವೃದ್ಧೆ ಬೇಡತಿಯು ಅಡವಿಯೊಳಂದು
ಗಿಡ ಮರವಲೆದು
ತಂದು ಫಲಮೂಲಗಳನು ಒಡೆಯ ನೀ ಬರುವೆಯೆಂದು
ಕೇಳುತ ತಾನು ।
ಬಡವರೊಡೆಯ ನೀನೆಂದರಿತು ।ಕಡುಹಿತದೊಳೆಂಜಲ
ಫಲಗಳುಣಿಸಲು ।
ಬಿಡದೆ ಶಬರಿಯನು ಕಾಯ್ದೆಯೆಂದೊರೆದ
ವಾರ್ತೆಯ ಕೇಳಿ ಬಂದಿಹೆ ॥೨॥

ಬಲದಿ ಕೊಬ್ಬಿದ ವಾಲಿಯು ಸುಗ್ರೀವನ
ಛಲದಲೋಡಿಸಿ
ರಾಜ್ಯದಿಬಲುಹಿಂದಲವನ ಲಲನೆಯನಪಹರಿಸಿ
ಭೋಗಿಸುತಿರಲು
ಇಳೆಯರಸ ನೀನೆಂದು ನಂಬುತಗೆಳೆಯ
ಮಾರುತಿಯಿಂದಲರಿತು
ಮಿಳಿತು ವಾಲಿಯ ಕೊಲಿಸಿ ರಾಜ್ಯವ ಗಳಿಸಿದ್ವಾರ್ತೆಯ
ಕೇಳಿ ಬಂದಿಹೆ ॥೩॥

ಹಿರಿಯಣ್ಣ ದಶಮುಖನು ನಿನ್ನಯ ಸತಿ
ವರಪತಿವ್ರತೆ ಸೀತೆಯು
ಕದ್ದೊಯ್ದಿರೆ ಕಿರಿಯ ವಿಭೀಷಣನು
ಪರಿಪರಿಯಿಂದಲಿರದೆ
ಬೋಧಿಸಿ ಬೇಡಲು ದುರುಳ ರಾವಣನ ಭಂಗಿಸಿ
ಹೊರದೂಡಲವ
ನರಸಿ ನಿನ್ನಯ ಪರಮ ಪಾದಾಶ್ರಯವ ಬೇಡಲು
ಪೊರೆದ ವಾರ್ತೆಯ ಕೇಳಿ ಬಂದಿಹೆ ॥೪॥

ಪರಮಪುರುಷ ನೀನೆಂದು ನಂಬಿದೆ ಸಿರಿಯರಸ
ಪ್ರಭುವು ನೀನೆಂದು
ವಿರಂಚಾದಿಗಳೊಡೆಯ ನೀನೆಂದು ಚರಾಚರ ಗುರುವು
ಪ್ರಭುವು ನೀನೆಂದು
ನಂಬಿದೆನು ಇಂದು ತರಣಿಕುಲಮಣಿ
ಸಾರ್ವಭೌಮನೆ ಶರಣರಘ
ಕೋಟಿಗಳ ಕಳೆವನೆ ಶರಣ ಬಂದಿಹೆನೆನ್ನ
ಪಾಲಿಸದಿರುವರೇರಘುರಾಮ ವಿಠಲ ॥೫॥

--✿✿✿✿✿--

೧೦೩
ರಾಮಪಾದವೇ ಗತಿ ನೇಮನಿಷ್ಠೆಗಳರಿಯದ

(ಸುಬೋಧ ರಾಮರಾಯ / ರಘುರಾಮವಿಠಲ / ೧೮೯೦ - ೧೯೭೦)

ರಾಮಪಾದವೇ ಗತಿ ನೇಮನಿಷ್ಠೆಗಳರಿಯದ
ಪಾಮರ ಜನರಿಗೆಲ್ಲ ॥ಪ॥

ತಾಮಸಾಹಂಕಾರ ಪಂಕದಿ । ಕಾಮಮದಮತ್ಸರಗಳಿಂದಲಿ
ಹೇಮಕಾಮಿನಿಲಂಪಟದಿ ನಿ । ಸ್ಸೀಮರೆನಿಸುವ ತಾಮಸೌಘಕೆ ॥ಅ.ಪ.॥

ಸ್ನಾನ ಮೌನ ಜಪತಪಗಳನರಿಯದೆ
ಸ್ವಾಮಿ ನಿನ್ನನು ಮುಟ್ಟಿ ಪೂಜಿಸದೆ

ಸೀಮೆಯರಿಯದ ಕಾಮಕರ್ಮದಿ
ನೇಮವಿಲ್ಲದ ಕ್ಷುದ್ರಸ್ವಾರ್ಥದಿ
ತಾಮಸರ ಸಂಸರ್ಗದಿಂದ ವಿ
ರಾಮವರಿಯದ ಜನರ ಪಾಲಿಗೆ ||೧||

ಜ್ಞಾನ ಭಕ್ತಿ ವೈರಾಗ್ಯಗಳರಿಯದೆ
ಜ್ಞಾನಿಜನರ ಸಂಗವ ಬಯಸದೆ
ಹೀನದುಷ್ಕರ್ಮಗಳ ಮಾಡುತ
ನಾನು ತಾನೆಂಬ ಕೊಬ್ಬಿಲಿ
ಜಾನಕೀಪತಿ ನಿನ್ನ ಮಹಿಮೆಯ
ಕಾಣದಿಹ ದುಷ್ಕರ್ಮಿಜನರಿಗೆ ||೨||

ಶ್ರೀನಿಧಿ ನೀ ಕರುಣಿಸಿ ರಕ್ಷಿಸದಿರೆ
ದೀನಜನರ ಪಾಲಿಪರಾರೋ
ಸಾನುರಾಗದಿ ಬೇಡಲರಿಯದ
ಜ್ಞಾನಹೀನರ ತಪ್ಪನೆಣಿಸದೆ
ನೀನೆ ಕೈಪಿಡಿದೆತ್ತಿ ರಕ್ಷಿಸು
ಮಾನನಿಧಿ ರಘುರಾಮವಿಠಲ ||೩||

--✿✿✿✿✿--

೧೦೪

ನಾಮಧ್ಯಾನವ ಮಾಡಿರೋ ಶ್ರೀರಾಮನ

(ಅಂಕಿತವಿಲ್ಲ / ಬಿ. ವೆಂಕಟರಾವ್ / ಜ. ೧೮೮೬ – ಮ. ?)

ನಾಮಧ್ಯಾನವ ಮಾಡಿರೋ । ಶ್ರೀ ರಾಮನ
ನಾಮಧ್ಯಾನವ ಮಾಡಿರೋ ||ಪ||

ನಾಮಧ್ಯಾನವ ಮಾಡಿ । ಕಾಮಿತಾರ್ಥವ ಬೇಡಿ
ಶ್ಯಾಮಸುಂದರ ಸು । ಪ್ರೇಮಿ ಶ್ರೀ ರಾಮನ ||ಅ.ಪ.||

ಕಾಮಹರನಸತಿ । ಹೈಮವತಿಯು ಸದಾ
ಪ್ರೇಮದಿ ಜಪಿಸುವ । ರಾಮಚಂದ್ರನ ಗುಣ ||೧||

ಶಿವನ ಧನುವ ಮುರಿ । ದವನಿಜೆಗೊಲಿದಾ
ರವಿವಂಶಾಬುಧಿಸೋಮ । ಭುವನವಿಖ್ಯಾತನ ॥೨॥

ಕಡುಭಕ್ತಿಯಿಂದಿತ್ತ । ಶಬರಿಯುಚ್ಛಿಷ್ಟವ
ಬಿಡದೆ ಸ್ವೀಕರಿಸಿದ । ಪ್ರಭು ರಾಮಚಂದ್ರನ ॥೩॥

ಕರಗಳ ಕಡಿದು ಕ । ಬಂಧನ ಶಾಪವ
ಪರಿಹಾರಗೈದು ವ । ಸುಂಧರ ಪಾಲನ ॥೪॥

ಬ್ರಹ್ಮಪದವಿಯನ್ನು । ಅಂಜನೆಸುತಗಿತ್ತ
ಬ್ರಹ್ಮಾಂಡನಾಯಕ । ಕಂಜಾಕ್ಷರಾಮನ ॥೫॥

--✿✿✿✿✿--

೧೦೫
ವೈದೇಹೀಧವ ರಾಮನಿನ್ನ ಪಾದವ
(ಅಂಕಿತವಿಲ್ಲ / ಬಿ. ವೆಂಕಟರಾವ್ / ಜ. ೧೮೮೬ - ಮ. ?)

ವೈದೇಹೀಧವ ರಾಮನಿನ್ನ ।
ಪಾದವ ಬೇಡುವೆ ಪರಿಪಾಲಿಸೆನ್ನ ॥ಪ॥

ಜಗದಭಿರಾಮ । ಅಗಣಿತಮಹಿಮ
ಜಗವನುದ್ಧರಿಸುವ । ಘನ ಗುಣಧಾಮ ॥೧॥

ಕೌಸಲ್ಯಾರಾಮ । ಪಶುಪತಿಪ್ರೇಮ
ಕೌಶಿಕಮುಖಪರಿ । ಪಾಲಕ ರಾಮ ॥೨॥

ಪಾವನರಾಮ । ಶ್ರೀವರರಾಮ ।
ಪವನಜಸೇವಿತ । ರವಿಕುಲಸೋಮ ॥೩॥

ದಶರಥರಾಮ । ವಸುಧೀಶರಾಮ ॥
ಋಷಿಪತ್ನಿಯಹಲ್ಯೋ । ದ್ಧಾರಕ ರಾಮ ॥೪॥

ಅಸುರಾರಿ ರಾಮ । ಬಿಸಜಾಕ್ಷರಾಮ
ದಶಮುಖಭಂಜನ । ಕೋದಂಡರಾಮ ॥೫॥

--✿✿✿✿✿--

೧೦೬
ಇಂತಿರುವುದೇನು ಬಗೆ ರಾಮಾ ಹರಿ

(ಪ್ರಾಣೇಶವಿಠಲ / ಯೋಗಪ್ಪ / ೧೭೩೭ - ೧೮೨೨)

ಇಂತಿರುವುದೇನು ಬಗೆ ರಾಮಾ । ಹರಿ ಸ್ವ
ತಂತ್ರ ಶ್ರೀನಿಧಿಯೆಂದು ಪೊಗಳುತಿವೆ ವೇದ ॥ಪ॥

ವಿಧಿಗೆ ಪದವಿತ್ತವನೇ ವನವ ಚರಿಸುವದೇನೋ ।
ಪದುಮಸದನೆಯ ರಮಣ ಬಡವನಾಗಿಹದೇನೋ ॥
ಮದನಜನಕನೆ ಋಷಿಗಳಂತೆ ಆಗುವದೇನೋ ।
ಉದರದೊಳು ಬಹು ಜಗಗಳಿರಲೂ ಪತ್ರ
ಸದನವಾಶ್ರಯಿಸಿಕೊಂಡಿರುವಿ ಇದು ಏನೋ ॥೧॥

ನಿತ್ಯತೃಪ್ತನೆ ಶಬರಿಯೆಂಜಲುಂಬುವದೇನೋ ।
ಉತ್ತಮ ವಿಹಗವಿರಲು ಕಾಲ್ನಡಿಗೆಯಿದೇನೋ ॥
ಭೃತ್ಯರು ದಿವಿಜರು ನೀಂ ಚಾಪವ ಹೊರುವದೇನೋ ।
ನಿತ್ಯ ಶ್ರೀ ಹೃದಯದೊಳಗಿರಲು ನಿನ್ನ
ಪತ್ನಿ ಹೋದಳೆಂದು ಚಿಂತಿಸುವದೇನೋ ॥೨॥

ಸ್ವಾಮಿ ಅಹಿಶಯನ ತೃಣಶಾಯಿಯಾಗುವದೇನೋ ।
ಭೂಮಿ ನಿನ್ನೊಂದಂಘ್ರಿ ಸೇತು ಕಟ್ಟುವದೇನೋ ॥
ಈ ಮರುಳು ರಕ್ಕಸರು ನಿನಗೊಂದಿದೇನೋ ।
ತಾಮಸರ ಮೋಹಿಸುವದಕೆ, ಭಕ್ತ
ಪ್ರೇಮ ಪ್ರಾಣೇಶವಿಠ್ಠಲನೆ ಲೀಲೆಯೇನೋ ॥೩॥

--✿✿✿✿✿--

೧೦೭
ಉದ್ಧಾರಮಾಡಿದ ಶ್ರೀರಾಮ ಅಹಲ್ಯಾ
(ಪ್ರಾಣೇಶವಿಠಲ / ಯೋಗಪ್ಪ / ೧೭೩೭ - ೧೮೨೨)

ಉದ್ಧಾರಮಾಡಿದ ಶ್ರೀರಾಮ ಅಹಲ್ಯಾ । ಉದ್ಧಾರ ಮಾಡಿದ ॥
ಪದ್ಮಜಾಂಡದೊಳು ಪ್ರಸಿದ್ಧವಾದ ಮಾತಿದು ॥ಪ॥

ಮುನಿಶಾಪದಿಂದಲಿ ವನದಿ ಕಲ್ಲಾಗಿ ಬಲುದಿನ
ಚಿಂತಿಸುತಲಿಹ ।ವನಿತೆಯ ದಯೆಯಿಂದ ॥೧॥

ಮಂದಮತಿ ಮಾಟಕೀ ಇಂದುಮುಖಿಗೆ ಇಂಥ
ಕುಂದುಬಂತಲ್ಲಾ।ಎಂದು ಇಂದ್ರರ ಪ್ರಾರ್ಥಿಸುತಿರೆ ॥೨॥

ಮೌನಿಮಾತಿಗೆ ಪಾದರೇಣು ಸ್ಪರ್ಶವಿತ್ತು
ಮಾನಿನಿಯ ಮಾಡಿದಾ । ಪ್ರಾಣೇಶವಿಠಲನು ॥೩॥

--✿✿✿✿✿--

೧೦೮
ರಾಘವನಾಡಿದ ಮಾತಿಗಾಂಜನೇಯ
(ಪ್ರಾಣೇಶವಿಠಲ / ಯೋಗಪ್ಪ / ೧೭೩೭ - ೧೮೨೨)

ರಾಘವನಾಡಿದ ಮಾತಿಗಾಂಜನೇಯ ಬಿನ್ನವಿಸುವುದು
ಈಗ ಪೇಳುವೆ ಸಜ್ಜನರಾಲಿಸುವುದು ॥ಪ॥

ಆರವಿನಂದನನು ತಾ ಮೇರೆಮಾಡಿ ಅಟ್ಟಿದನು ।
ವಾನರರುಗಳನು ತಿಂಗಳು ಮೀರಿತಿಂದಿಗೆ ॥
ಮಾರುತಿಕೇಳೀ ಮಾತು ಇನ್ನಾರ ಕಾಣೆ ಬಲ್ಲಿದರ
ನಾರಿಯೆಲ್ಲಿಹಳೋ ವಾರ್ತೆ ತಾರೋ ನೀ ಪೋಗಿ ॥೧॥

ಸ್ವಾಮಿ ಪಾಲಿಸೋ ಅಪ್ಪಣೆ ನಾ ಮುಂಚೆ ಪೋಗುವೆ
ತಡವ ಮಾಡದೆ ಎಲ್ಲಿಗೆನ್ನ ಭೂಮಿಜಾರಮಣ

ಈ ಮುದ್ರೆಕೊಂಡು ಪೋಗೋ ಶ್ಯಾಮಲಾಪತಿದಿಕ್ಕಿಗೆ
ಸಮುದ್ರದಾಟಿ ವೇಗ ಪಾವಮಾನಿ ಕೇಳೋ ॥೨॥

ಭೂತಲಾಕಾಶ ಲೋಕಾದಿ ಪಾತಾಳದೊಳಗಿರಲಿ
ನಾತರುವೆನು ವಾರ್ತೆ ಜಗನ್ನಾಥ ಪರಾಕು
ಹೇ ತರಳ ತ್ರಿಲೋಕವಿಖ್ಯಾತನಾಗಿಹ ರಾವಣ
ಪಾತಕಕೊಂಡು ಪೋಗಿಹ ಸೀತೆಯ ಕೇಳು ॥೩॥

ಬುದ್ಧಿದೇವ ನೀ ಕೊಟ್ಟಂಥ ಬುದ್ಧಿಯಿದಲೇ ಅವನ
ಗುದ್ದಿ ಸರ್ವಬಲವನ್ನೂ ಒದ್ದುಬರುವೆನೊ
ಮುದ್ದುಕಂದ ರಕ್ಕಸರವಧ್ಯರೋ ವರಪಡೆದು
ರುದ್ರನಿಂದ ಮಾಡದಿರೊ ಗದ್ದಲ ಕೇಳೋ ॥೪॥

ತಂದೆ ರಾಮಾ ನಿನ್ನದಯೆಯಿಂದ ಈಡಲ್ಲವೊಯೆನಗೆ
ನಂದಿಧ್ವಜಾ ಈ ರಕ್ಕಸರೊಂದು ತೃಣವೋ
ಕಂದ ಈ ವೇಳೆಯೊಳೇನು ಬಂದುದನು ಭೋಗಿಸಿ ನಾನು
ಕೊಂದುಹಾಕುವ ದಿನವೂ ಮುಂದುಂಟು ಕೇಳೋ ॥೫॥

ದೇವಿಯ ನೋಡಿ ಬರುವಾಗ ತಾವಂತು ಕೆಣಕಲು
ದಾನವರು ಸುಮ್ಮನಿರಲೇನ ದೇವದೇವೇಶ
ಕೋವಿದಾಗ್ರೇಶನೆ ನೀನು ಸಾವಿರಾಳಿಗೆ ಒಬ್ಬನೇ
ಆ ವಿಚಾರ ಮನಕೆ ತರುವುದೇ ಕೇಳೋ ॥೬॥

ಹೇಳಿದ ಮಾತು ಕಟ್ಟಿದ ಕೂಳು ನಿಲ್ಲವೋ । ಆ ವನ
ದೊಲೇನಹದೊ ಬಲ್ಲೆನೇ ಪ್ರಾಣೇಶವಿಠ್ಠಲಾ
ಬಾಲಿಕ ಹನುಮಂತ ನಿನ್ನೊಳಗೆನ್ನಾ ರಾಣಿಯೆಲ್ಲಿ
ಹಳೋನೋಡಿ ಬರವುದಕಾಲಸ್ಯ ಕೇಳೋ ॥ ॥೭॥

--✿✿✿✿✿--

೧೦೯
ರಾಮ ಶ್ರೀರಘುನಂದನ ಶರಣು
(ಹೆಳವನಕಟ್ಟೆ ರಂಗ / ಹೆಳವನಕಟ್ಟೆ ಗಿರಿಯಮ್ಮ / ಕಾಲ. ಸು.೧೭೫೦)

ರಾಮ ಶ್ರೀ ರಘುನಂದನ । ಶರಣು
ಸಾರ್ವಭೌಮ ಭೂಸುರವಂದ್ಯನ
ಸೋಮಶೇಖರಮಿತ್ರಕಾಮಿತಫಲಪಾತ್ರ
ಕಾಮಧೇನು ವಿಶ್ವಭೀಮ ಸನ್ನುತಸೀತಾ ॥ಪ॥

ಕ್ರೂರದಾನವ ಸಂಹಾರ । ಕೌಸಲ್ಯಾಕುಮಾರ ಭೂ
ಭಾರಹರಭಜಕಜನೋದ್ಧಾರ ವೇದಾಂತಸಾರ
ಚಾರುವದನ ಮಣಿಹಾಸ ಕುಂಡಲಧಾರ
ವೀರರಾಘವ ವಿಶ್ವಾಧಾರಕರುಣ ಸೀತಾ ॥೧॥

ಪಾಪರಹಿತ ಪಾವನ ಅಹಲ್ಯಾ ಶಾಪಖಂಡಿತ
ಚರಣ ಚಿನುಮಯ ದಿವ್ಯರೂಪ ರಮಾರಮಣಾ
ತಾಪವಿಚ್ಛೇದನ ತಾಮಸಗುಣಹರನಾ
ದಯಾಪರ ಬ್ರಹ್ಮಸ್ವರೂಪ ಮೂರುತಿ ಸೀತಾ ॥೨॥

ಮದನಕೋಟಿ ಮೋಹನಾಂಗ । ಮಾಧವ ಪುಣ್ಯಚರಿತ
ಕರುಣಾಕೃಪಾಂಗ ಹೆಳವನಕಟ್ಟೆನಿಲಯ ಶ್ರೀರಂಗ
ಸದಾನಂದ ಸುಮತೀಂದ್ರ ಹೃದಯಪಂಕಜ ಭೃಂಗ
ಕದನವಿಕ್ರಮ ಬಾಹುಕೋದಂಡಧೃತ ಸೀತಾರಾಮ ॥೩॥

--✿✿✿✿✿--

೧೧೦
ರಾಜೀವದಳನೇತ್ರ ರಾಮಚಂದ್ರನೆ
(ಕಮಲನಾಭವಿಠಲ / ನಿಡುಗುರಕಿ ಜೀವೂಬಾಯಿ / ೧೮೯೭-೧೯೮೩)

ರಾಜೀವದಳನೇತ್ರ ರಾಮಚಂದ್ರನೆ ಶುಭ-
ನಾಮಧೇಯನೆ ನಿನಗಾನಮಿಸುವೆನು ॥ಪ॥

ರಾಮರಾಕ್ಷಸಕುಲ ಭಯಂಕರ
ರಾಮದಶರಥ ಪುತ್ರನೆ ವರ
ಸಾಮಗಾನ ವಿಲೋಲ ಶ್ರೀವರ
ರಾಮ ಭರತಶತ್ರುಘ್ನಪಾಲಕ ॥ಅ.ಪ.॥

ಸುರರೆಲ್ಲ ನೆರೆದು ಋಷಿವರರೆಲ್ಲ ಒಂದಾಗಿ
ವರಕ್ಷೀರಾಂಬುಧಿಯ ಸಾರುತ ವೇಗದಿ
ಪರಮಾತ್ಮ ನಿನಕಂಡು ಪರಿಪರಿ ಸ್ಮರಿಸುತ
ನೆರೆದರು ದೇವ ಗಂಧರ್ವ ನಾರದರೆಲ್ಲ
ಗರುಡಗಮನನೆ ಉರಗಶಯನನೆ
ಪರಮಪುರುಷನೆ ಪುಣ್ಯಚರಿತನೆ
ತ್ವರದಿ ಎಮ್ಮಯ ಮೊರೆಯ ಕೇಳೆಂದು
ಭರದಿ ಪ್ರಾರ್ಥನೆಮಾಡುತಿಹರು ॥೧॥

ಖೂಳದೈತ್ಯರು ನಮ್ಮ ಬಾಳಗೊಡರೊ ದೇವ
ಭಾಳವ್ಯಾಕುಲರಾಗಿ ದುಃಖಿಪೆವು
ಕೇಳಿ ತಡಮಾಡದೆ ಪಾಲಿಸಿ ಸಲಹಯ್ಯ
ಶ್ರೀಲೋಲ ಶ್ರೀವರ ಶ್ರೀವತ್ಸಲಾಂಛನ
ಶ್ರೀಶ ಶ್ರೀ ಭೂದೇವಿ ರಮಣನೇ
ಮಾತುಳಾಂತಕ ಮದನಜನಕನೆ
ವಾಸುದೇವನೆ ಭಜಿಪ ಭಕ್ತರ
ಸೋಸಿನಲಿ ರಕ್ಷಿಸುತ ಪೊರೆಯುವೆ ॥೨॥

ಭಕ್ತವತ್ಸಲ ಸ್ವಾಮಿ ಭಕ್ತರ ಸುರಧೇನು
ಯುಕ್ತಮಾತುಗಳಾಡಿ ಸಂತಯಿಸಿ
ಸತ್ಯಸಂಕಲ್ಪನು ಮತ್ತವರನು ಕಳುಹಿ
ಸತ್ಯಸಂಧನ ದಶರಥನುದರದಿ ಪುಟ್ಟಿ
ಮತ್ತೆ ವಿಶ್ವಾಮಿತ್ರ ಬರಲು
ಅರ್ಥಿಯಲಿ ಯಾಗವನೆ ನಡೆಸಲು
ಸುತ್ತಿಬರುವ ಅಸುರರನೆ ಸದೆದು
ಮತ್ತೆ ಯಾಗ ನಿರ್ವಿಘ್ನಮಾಡಿದ ॥೩॥

ಸೀತಾಸ್ವಯಂವರಕ್ಕಾಗಿ ಬರುತಿರಲಾಗವರು
ಗೌತಮಸತಿಯ ಶಾಪಹರಿಸಿ
ಪಾತಕಿತಾಟಕಿಯನು ಕೊಂದು ಹರುಷದಿ ನಿ-
ರ್ಭೀತನಾಗಿ ಮಿಥಿಲಾಪುರಕೆ ಸೇರಲು ಬಂದು
ಆತ ಲಕ್ಷ್ಮಣನೊಡನೆ ಶಿವಧನು
ನೀತಿಯಿಂದೆತ್ತುತಲಿ ಸೀತೆಯು
ಪ್ರೀತಿಯಲಿ ವನಮಾಲೆ ಹಾಕಲು
ಆಕೆಯ ಕೈಪಿಡಿದ ರಾಮನೆ ॥೪॥

ರಾಮಲಕ್ಷ್ಮಣ ಭರತ ಶತ್ರುಘ್ನರಿಗೆ ಲಗ್ನ
ನೇಮದಿಂದಲಿ ಮಾಡಿ ಕಳುಹಲಾಗ
ಸಾಮಜವರ ಅಯೋಧ್ಯಾಪುರದಿ ಭಕ್ತ-
ಸ್ತೋಮವನೆರಹಿ ರಾಜ್ಯಾಭಿಷೇಕವ ನಡಿಸೆ
ಆ ಮಹಾಮುನಿ ಸ್ತೋಮ ಸುರಗಣ
ರಾಮನಿಗೆ ಪಟ್ಟವೆನುತ ಹರುಷಿಸೆ
ಆ ಮಹಾಕೈಕೆ ವರವ ಬೇಡುತ
ರಾಮನಿಗೆ ವನವಾಸವೆನಲು ॥೪॥

ವನವನ ಚರಿಸುತ ಘನರಕ್ಕಸರ ಕೊಂದು
ವನಜಾಕ್ಷಿ ಮಾಯಾಮೃಗವೆ ಬೇಡಲು
ವನಮೃಗ ಬೆನ್ನಟ್ಟಿ ತರುವೆನೆನುತ ಪೋಗಿ
ಬಣಗುರಾವಣ ಸೀತಾಹರಣವ ಮಾಡಲು
ಕುರುಹುಕಾಣದೆ ಸೀತೆಯ ವನವನದಿ
ಚರಿಸುವ ಸಮಯದಲಿ ಕಪಿ
ವರರ ಸೈನ್ಯವ ಕಳುಹಿ ಮುದ್ರಿಕೆ
ಇತ್ತು ಜನಕೆಜಾತೆಯ ನೋಡಿಬರಲು ॥೫॥

ಕಡಲಕಟ್ಟುತ ಸೈನ್ಯನಡಿಸಿ ಯುದ್ಧವಮಾಡೆ
ಬಿಡದೆ ರಾವಣಸಹಿತೆಲ್ಲರನು ಕೊಂದು
ಕಡುಭಕ್ತನಿಗೆ ಲಂಕಾಪುರದಲಿ ಪಟ್ಟವ ಕಟ್ಟಿ
ಮಡದಿಸಹಿತ ಪುಷ್ಪಕವನೇರಿ ಬರುತಿರೆ

ಸಡಗರದಿ ಹನುಮಂತ ಭರತಗೆ
ಒಡೆಯ ಬರುತಿಹನೆಂದು ಪೇಳಲು
ಕಡುಹರುಷದಿ ಅಯೋಧ್ಯೆಯನಾಳಿದ
ಕಡಲೊಡೆಯ ಕಮಲನಾಭ ವಿಠ್ಠಲನೆ ॥೬॥

ಬಂದ ಶ್ರೀರಾಮಚಂದ್ರ ಭಾಗವತರ ಕೂಡಿ
ಇಂದಿರೆ ಜಾನಕಿ ಸೌಮಿತ್ರಿ ಸಹಿತದಿ

--✿✿✿✿✿--

೧೧೧

ರಾಮ ಶ್ರೀರಾಮ ಸೀತಾರಾಮ

(ಕಮಲನಾಭವಿಠಲ / ನಿಡುಗುರಕಿ ಜೀವೂಬಾಯಿ / ೧೮೯೭-೧೯೮೩)

ರಾಮ ಶ್ರೀರಾಮ ಸೀತಾರಾಮ ಶ್ರೀರಾಮ
ರಾಮನೆ ರವಿಕುಲಸೋಮ ಶ್ರೀರಾಮ ॥ಪ॥

ರಾಮ ರಾಮ ರಘುರಾಮನೆ ದಶರಥ
ರಾಮನೆ ಗುಣಗಣಧಾಮನೆ ಶ್ರೀರಘು ॥ಅ.ಪ.॥

ಕೌಸಲ್ಯಾದೇವಿಯ ಕಂದನೆ ರಾಮ
ಕೌಶಿಕಯಜ್ಞವ ಕಾಯ್ದ ಶ್ರೀರಾಮ
ಹಿಂಸಿಸಿದ ತಾಟಕಿಯನು ಕೊಂದರಾಮ
ಧ್ವಂಸಮಾಡಿದ ಶಿವಧನು ಮುರಿದು ರಾಮ
ಸಂಶಯವಿಲ್ಲದೆ ಸೀತೆಕರವ ಪಿಡಿದು
ತನ್ನಂಶದ ಪರಶುರಾಮನಿಗೊಲಿದನೆ ಶ್ರೀ ॥೧॥

ದಶರಥರಾಮ ನೀನರಸನಾಗೆನಲು
ಅಸುರಾವೇಶದಿ ಕೈಕೆ ವರವ ಯಾಚಿಸಲು
ಎಸೆವ ಸಿಂಹಾಸನ ತೊರೆದು ಪೊರಮಡಲು
ಶಶಿಮುಖಿ ಸೀತಾಲಕ್ಷ್ಮಣರ ಕೂಡಿ ಬರಲು

ಭರತಗೆ ಪಾದುಕೆ ಕೊಡುತಲಿ ಕಳುಹಿಸಿ
ಗುಹನ ಮನ್ನಿಸಿ ವನರಾಜ್ಯದೊಳ್ ಮೆರೆದೆ ॥೨॥

ವನದೊಳು ಮಾಯಾಮೃಗವ ಕಂಡು ಸತಿಯು
ಮನದಿ ಚಿಂತಿಸಿರಾಮ ತೆರಳೆ ರಕ್ಕಸನು
ವನಜಾಕ್ಷಿ ಸೀತೆಯ ಕಳವಿನಿಂ ತರಲು
ವನವನಚರಿಸಿ ಪುಡುಕೆ ಕಂಡು ಕಪಿವರನು
ಶರಧಿಲಂಘಿಸಿ ಸೀತೆಯನು ಕಂಡು ಹನುಮನು
ಕುರುಹುಪಡೆದು ಲಂಕೆದಹಿಸುತ ಬರಲು ॥೩॥

ಸೇತುಬಂಧನ ಮಾಡಿ ಕಪಿಗಳ ಕೂಡಿ
ನೀತಿ ಪೇಳಿದ ವಿಭೀಷಣಗಭಯ ನೀಡಿ
ಭೂತರಾವಣನ ದಶಶಿರ ಚೆಂಡಾಡಿ
ಸೀತಾಸಹಿತ ರಾಮ ಪುಷ್ಪಕವನೇರಿ
ಆತುರದಿಂದಿಹ ಭರತಗ್ವಾರ್ತೆಯ
ಪ್ರೀತಿಲಿ ಕಳುಹಿದ ಶ್ರೀ ರಘುರಾಮ ॥೪॥

ಬಂದ ಶ್ರೀರಾಮಚಂದ್ರ ಬಹುಪ್ರೀತಿಯಿಂದ
ಛಂದದಿಂ ಭರತನ ಮನ್ನಿಸಿ ಮುದದಿಂದ
ಕುಂದಣಮಯದ ಸಿಂಹಾಸನ ಚಂದ-
ದಿಂದಲೇರುತ ರಾಮ ನಸುನಗೆಯಿಂದ
ಇಂದಿರಾಸೀತಾ ಸಹಿತ ಅಯೋಧ್ಯದಿ
ಬಂದು ಪೊರೆವ ಕಮಲನಾಭವಿಠ್ಠಲನು ॥೫॥

--✿✿✿✿✿--

೧೧೨
ಮಂಗಳಂ ಜಯಮಂಗಳಂ ರಾಮ ಮುನಿಜನ

(ಕಮಲನಾಭವಿಠಲ / ನಿಡುಗುರಕಿ ಜೀವೂಬಾಯಿ / ೧೮೯೭-೧೯೮೩)

ಮಂಗಳಂ ಜಯಮಂಗಳಂ ರಾಮ ಮುನಿಜನ ಸ್ತೋಮ
ಮಂಗಳಂ ಲೋಕಾಭಿರಘುರಾಮ ಸದ್ಗುಣಸ್ತೋಮ ॥ಪ॥

ದಶರಥನ ವರಪುತ್ರ ನೀನಾಗಿ ಕೌಶಿಕನ ಯಜ್ಞದಿ
ಅಸಮಸಾಹಸ ದೈತ್ಯರನು ಗೆಲಿದಿ
ವಸುಧೆಯೊಳು ಗೌತಮನ ಸತಿಯಳನು ಉದ್ಧರಿಸಿ ತಾಟಕಿ
ಹೊಸಪರಿಯ ದೈತ್ಯರನು ಸಂಹರಿಸಿ
ಎಸೆವ ಮಿಥಿಲಾಪುರದಿ ಜಾನಕಿ
ಬಿಸಜನೇತ್ರೆಯ ಕೈಪಿಡಿದು ರನ್ನ
ಹೊಸಪರಿಯ ರಥದೊಳಗೆ ಪೊರಟು
ಸತಿಸಹಿತ ಅಯೋಧ್ಯೆಯಲಿ ಮೆರೆದಗೆ ॥೧॥

ದಶರಥನು ಪುತ್ರಗೆ ಪಟ್ಟವನು ಕಟ್ಟುವೆನು ಎನಲು
ದಶದಿಕ್ಕಿಗೆ ಪತ್ರವನು ಕಳುಹಿಸಲು
ಎಸೆವ ಮಂಗಳವಾದ್ಯ ಕೇಳುತಲೆ ಕೈಕೇಯಿ ಬರಲು
ಅಸದಳದವರ ಬೇಡಿ ಕಾಡಿಸಲು
ವಸುಧೆಗೀಶನ ವನಕೆ ಕಳುಹಲು
ಕುಶಲವಿಲ್ಲದೆ ಮರುಗೆ ದಶರಥ
ಮಿಸುಣಿಮಣಿ ಸಿಂಹಾಸನ ತ್ಯ-
ಜಿಸುತಲಿ ಪಿತೃವಾಕ್ಯವ ನಡೆಸಿದಗೆ ॥೨॥

ಮಡದಿ ಸೀತಾ ಲಕ್ಷ್ಮಣರ ಕೂಡಿ
ಬಿಡದೆ ದೈತ್ಯರನೆಲ್ಲ ಕಡಿದಾಡಿ
ಒಡತಿ ಸೀತೆಗೆ ಉಂಗುರವ ನೀಡಿ ಹನುಮಂತ ಬರಲು
ಕಡುಜವದಿ ಸಾಗರದಿ ಸೇತುವೆಯ ಮಾಡಿ
ತಡೆಯದಲೆ ರಾವಣನ ಮೂಲವ
ಕಡಿದು ಕಮಲನಾಭ ವಿಠ್ಠಲನು
ಮಡದಿಸಹಿತಾಯೋಧ್ಯೆ ಪುರದಲಿ
ಸಡಗರದಿ ಸಾಮ್ರಾಜ್ಯವಾಳ್ದಗೆ ॥೩॥

--✿✿✿✿✿--

೧೧೩

ಮಂಗಳಂ ಜಯಮಂಗಳಂ ರಾಮ ಸಜ್ಜನ ಪ್ರೇಮ

(ಕಮಲನಾಭವಿಠಲ / ನಿಡುಗುರಕಿ ಜೀವೂಬಾಯಿ / ೧೮೯೭-೧೯೮೩)

ಮಂಗಳಂ ಜಯಮಂಗಳಂ ರಾಮ ಸಜ್ಜನಪ್ರೇಮ
ಮಂಗಳಂ ಲೋಕಾಭಿರಘುರಾಮ ಪಟ್ಟಾಭಿರಾಮ ॥ಪ॥

ಮಂಗಳಂ ಶ್ರೀ ದಶರಥಾತ್ಮಜಗೆ
ಮಂಗಳಂ ಅಯೋಧ್ಯಾವಾಸಿಗೆ
ಮಂಗಳಂ ಜನಕಜಾಮಾತೆಗೆ
ಮಂಗಳಂ ಶ್ರೀ ರಾಮಚಂದ್ರಗೆ ॥ಅ.ಪ.॥

ದೇವದೇವೋತ್ತಮ ವೈಕುಂಠದೊಳಗೆ ಶ್ರೀ ಭೂಮೇರಿಂದ
ಸೇವೆಗಳ ಕೈಗೊಳ್ಳುತ ಮಲಗಿರಲು
ದೇವಋಷಿ ಬ್ರಹ್ಮೇಂದ್ರಾದಿಗಳು ಸಹಿತ ಶ್ರೀಧರನ ಸ್ತುತಿಸುತ
ರಾವಣಾಸುರನುಪಟಳ ವರ್ಣಿಸಲು
ಶ್ರೀ ವರನು ಸಂತೈಸಿ ಅವರನು
ಭೂಮಿಪತಿ ದಶರಥನ ಪ್ರೇಮ
ಕುಮಾರನಾಗುದಿಸುತಲಯೋಧ್ಯದಿ
ಪ್ರೇಮ ತೋರುತ ಮೆರೆದವಗೆ ಜಯ ॥೧॥

ದಶರಥನ ಸುತರಾಗಿ ಬೆಳೆಯುತಲಿ ಕೌಶಿಕನಯಜ್ಞವ
ಕುಶಲದಲಿ ರಕ್ಷಿಸುತ ಹರುಷದಲಿ
ಎಸೆವ ಧನುವನು ಮುರಿದು ನಿಮಿಷದಲಿ
ಶಶಿಮುಖಿಯ ಕೂಡುತಕುಶಲದಲಿ ವನವಾಸ ಚರಿಸುತಲಿ
ದಶಶಿರನು ಜಾನಕಿಯ ಕದಿಯಲು
ಶಶಿಮುಖಿಯನರಸುತಲಿ ವನವನ
ವಸುಧಿಪತಿ ಕಪಿಗಳ ಕಳುಹಿ ಸತಿ
ಕುಶಲ ತಿಳಿಯುತ ನಲಿದವಗೆ ಜಯ ॥೨॥

ಬಂದ ಕಪಿ ಕಟಕವನೆ ನೋಡುತ್ತ ಸಾಗರಕೆ ಸೇತುವೆ

ಒಂದೇ ನಿಮಿಷದಿ ರಚಿಸಿ ಶೀಘ್ರದಲಿ
ಮಂದಮತಿ ರಾಕ್ಷಸರ ವಧಿಸುತಲಿ ಅಂದಣವ ಕಳುಹಿ
ಮಂದಗಮನೆಯ ಕರೆಸಿ ಬೇಗದಲಿ
ಬಂದ ರಾಮನು ಎಂದು ಮಾರುತಿ
ಮುಂದೆ ಭರತಗೆ ಕುಶಲ ತಿಳಿಸಲು
ತಂದೆ ಕಮಲನಾಥವಿಠಲ
ಮುಂದೆ ಪ್ರಜೆಗಳ ಪೊರೆದವಗೆ ಜಯ ॥೩॥

--✿✿✿✿✿--

೧೧೪

ಕರುಣಿಸೈ ಶ್ರೀರಾಮ ಕೌಸಲ್ಯಾ ಪ್ರೇಮ

(ಗೋಪಾಲಕೃಷ್ಣ ವಿಠಲ / ಅಂಬಾಬಾಯಿ / ೧೯೦೨ - ೧೯೪೪)

ಕರುಣಿಸೈ ಶ್ರೀ ರಾಮ ಕೌಸಲ್ಯಾ ಪ್ರೇಮ
ಶರಣ ಜನಕನು ಪೊರೆವ ಕಾರುಣ್ಯಧಾಮ ॥ಪ॥

ದಶರಥಾತ್ಮಜ ಯಜ್ಞ ಕಾಯ್ದು ಸೀತೆಯ ವರಿಸಿ
ಕುಶಲದಿಂದಲಿ ಬಂದು ನಗರದಲ್ಲಿರಲೂ
ದಶರಥನ ಆಜ್ಞೆಯಲಿ ಸತಿ ಅನುಜಸಹ ವನದಿ
ನಸುನಗುತ ಚರಿಸಿ ರಕ್ಕಸರ ಸದೆಬಡಿದೆ ॥೧॥

ಸತಿಯೆ ಕಳೆದಿರೆ ಹನುಮ ಹಿತವಾರ್ತೆ ಬಿನ್ನೈಸೆ
ಹತಗೈದು ರಾವಣಾದಿಗಳನೆಲ್ಲ
ಹಿತದ ರಾಜ್ಯದ ವಿಭೀಷಣ ರವಿಜರಿಗೆ ಇತ್ತು
ವ್ರತ ಬಿಡಿಸಿ ಭರತನಿಗೆ ಧರಣಿಯಾಳಿದನೇ ॥೨॥

ಪಟ್ಟಾಭಿರಾಮ ಮಂಗಳನಾಮ ಕೃಪೆಯಿಂದ
ಇಷ್ಟಾರ್ಥವೀಯೊ ಸನ್ಮಂಗಳವನೂ
ದಿಟ್ಟ ಶ್ರೀ ಹನುಮವಂದಿತಚರಣ ನಮಿಸುವೆನು
ಶ್ರೇಷ್ಠ ಶ್ರೀ ಗೋಪಾಲಕೃಷ್ಣವಿಠ್ಠಲನೇ ॥೩॥

--✿✿✿✿✿--

೧೧೫

ಮಂಗಳಂ ಶ್ರೀರಾಮಚಂದ್ರನಿಗೆ

(ಗೋಪಾಲಕೃಷ್ಣ ವಿಠಲ / ಅಂಬಾಬಾಯಿ / ೧೯೦೨ - ೧೯೪೪)

ಮಂಗಳಂ ಶ್ರೀ ರಾಮಚಂದ್ರನಿಗೆ
ಕಂಗೊಳಿಪ ದೇವಗೆ ‖ಪ‖

ಬಿಟ್ಟು ಪಟ್ಟ ತೊಟ್ಟು ವ್ರತವ ಮೆಟ್ಟಿ ವನವನೂ
ದುಷ್ಟರನ್ನು ಕುಟ್ಟಿ ಬಂದು ಪಟ್ಟವಾಳ್ದ ಶ್ರೇಷ್ಠಮೂರ್ತಿಗೆ ‖೧‖

ಸೀತೆ ಅನುಜರೊಡನೆವೆರಸಿ ವಾತತನಯನ
ಪ್ರೀತಿಸೇವೆ ಕೊಳುತ ರಾಜ್ಯನೀತಿಯಿಂದ ನಡೆಸಿದವಗೆ ‖೨‖

ಶ್ರೇಷ್ಠಭಕ್ತರೊಡನೆವೆರಸಿ ದಿಟ್ಟತನದಲಿ
ಪಟ್ಟವಾಳಿ ಪ್ರಜರ ಪೊರೆದು ಇಷ್ಟಸಲಿಸಿ ಮುದವಿತ್ತವಗೆ ‖೩‖

ರಾಮನಾಮ ಪಠಿಪಜನರ ಕಾಮಿತಾರ್ಥವ
ಪ್ರೇಮದಿಂದ ಕೊಟ್ಟು ಪೊರೆವ ಸ್ವಾಮಿಸುಗುಣಧಾಮ ಹರಿಗೆ ‖೪‖

ಭೂಪರೊಳಗೆ ಶ್ರೇಷ್ಠ ರಾಮರೂಪ ಮಂಗಳಂ
ಗೋಪಾಲಕೃಷ್ಣವಿಠ್ಠಲಗೆ ದೀಪದಾರತಿಯ ಬೆಳಗಿ ‖೫‖

--✿✿✿✿✿--

೧೧೬

ರಾಮನಾಮದಿ ಪಾಮರರಿಗೆ

(ಗೋಪಾಲಕೃಷ್ಣ ವಿಠಲ / ಅಂಬಾಬಾಯಿ / ೧೯೦೨ - ೧೯೪೪)

ರಾಮನಾಮದಿ ಪಾಮರರಿಗೆ
ಪ್ರೇಮ ಪುಟ್ಟುವುದೆ? ‖ಪ‖

ಸ್ವಾಮಿ-ಭೃತ್ಯ ನ್ಯಾಯವರಿಯದ
ಕಾಮಿಗಿದರೊಳು ನೇಮ ಬಪ್ಪುದೆ ‖ಅ.ಪ.‖

ದಾಶರಥಿ ಎನಿಸಿ ಜಗದೊಳು
ಶ್ರೀಶನವತರಿಸೆ
ಕೌಶಿಕನ ಮಖ ಘಾಸಿಗೈಯ್ಯುವ
ದೋಷಿಗಳ ತಾ ನಾಶಗೈಸಿದ ॥೧॥

ಶಿಲೆಯ ಪೆಣ್ಗೈದು ಲಲನೆ ಸೀತೆಯ
ಒಲುಮೆಯಿಂ ವರಿಸಿ
ಕುಲವನಳಿದನ ಛಲವ ಭಂಗಿಸಿ
ಲಲನೆ ಸಹಿತದಿ ನೆಲಸೆ ಪುರದಲಿ ॥೨॥

ಮಾತೆ ವಚನದಿ ಸೀತೆ ಅನುಜ ಸ
ಹಿತ ವನಕೆ ಬರೆ
ಖ್ಯಾತಿ ರಾವಣನಾ ತಳೋದರಿ
ಪ್ರೀತಿಸಲು ವಿಘಾತಿಗೈಸಿದ ॥೩॥

ಮಾಯಾಮೃಗ ಕಂಡು ಪ್ರಿಯ ನೀಡೆನೆ
ಸಾಯಕವನೆಸೆಯೆ
ಕಾಯ ಬಿಡುತಿರೆ ಹೇಯ ರಾವಣ
ಪ್ರಿಯಳನುಯ್ಯೆ ನೋಯ್ದು ಮನದಲಿ ॥೪॥

ಬೆಟ್ಟವನೆ ಕಂಡು ಕುಟ್ಟಿ ವಾಲಿಯ
ಪಟ್ಟ ಕಪಿಗಿತ್ತು
ಶ್ರೇಷ್ಠ ಹನುಮಗೆ ಕೊಟ್ಟು ಉಂಗುರ
ಪಟ್ಟದರಸಿಗೆ ಮುಟ್ಟಿಸೆಂದ ॥೫॥

ಕೇಳಿ ಶ್ರೀ ವಾರ್ತೆ ತಾಳೀ ಹರುಷವ
ಬೀಳುಕೊಂಡಲ್ಲಿಂ
ತಾಳೆ ಕೋಪವ ಕೇಳಿ ವನಧಿ
ಸೀಳು ಆಗಲು ಶಿಲೆಯ ಬಿಗಿದ ॥೬॥

ದುಷ್ಟ ರಾವಣನ ಕುಟ್ಟಿ ಶಿರವನು
ಪಟ್ಟದರಸಿ ಕೂಡಿ
ಶ್ರೇಷ್ಠ ಭರತಗೆ ಕೊಟ್ಟು ದರ್ಶನ
ಪಟ್ಟವಾಳಿದ ದಿಟ್ಟಯೋಧ್ಯದಿ ॥೭॥

ರಾಮ ರಾಮನೆಂಬಾ ಹನುಮಗೆ
ಪ್ರೇಮದಿಂದೊಲಿದು
ಧಾಮ ಅಜಪದ ನೇಮಿಸಿ ಮುಂದೆ
ಸೋಮನೆನಿಸಿದ ಭಾನುವಂಶಕೆ ॥೮॥

ಬೆಟ್ಟದೊಡೆಯನ ಇಷ್ಟು ಮಹಿಮೆಯ
ಮುಟ್ಟಿಮನ ಭಜಿಸಿ
ದಿಟ್ಟ ಗೋಪಾಲಕೃಷ್ಣವಿಠ್ಠಲ
ಶ್ರೇಷ್ಠನೆನ್ನುವ ಶ್ರೇಷ್ಠಗಲ್ಲದೆ ॥೯॥

--✿✿✿✿✿--

೧೧೭
ಶ್ರೀರಾಮ ನಿನ್ನ ಪದಕೆರಗಿ

(ಗೋಪಾಲಕೃಷ್ಣ ವಿಠಲ / ಅಂಬಾಬಾಯಿ / ೧೯೦೨ - ೧೯೮೪)

ಶ್ರೀರಾಮ ನಿನ್ನ ಪದಕೆರಗಿ ನಮಿಸುವೆನು
ತೋರೆನಗೆ ನಿಜರೂಪ ಪರಿವಾರ ಸಹಿತ ॥ಪ॥

ಶ್ರೀ ಗುರುಗಳಿಗೆರಗಿ ಅವರ ಕರುಣಾಬಲದಿ
ಈಗ ಈ ಜನ್ಮದಲಿ ನಿನ್ನ ಭಜಿಪೆ
ನಾಗಶಯನನೆ ನಿನ್ನ ಜನ್ಮಕರ್ಮದ ದಿನದಿ
ಬೇಗ ಬಂದೆನ್ನೊಳಗೆ ನೆಲಸಿದೆಯೊ ದೇವ ॥೧॥

ನಿನ್ನ ದರುಶನಕೆಂದು ಘನ್ನ ಯೋಗಿಗಳು ಬರೆ
ಮನ್ನಿಸದೆ ಇರುತಿರಲು ದ್ವಾರಪಾಲಕರು
ಇನ್ನವರ ಶಾಪದಲಿ ದೈತ್ಯಕುಲದಲಿ ಜನಿಸೆ
ಮುನ್ನವರ ಪೊರೆಯಲು ಭೂಮಿಯೊಳು ಬಂದೆ ॥೨॥

ದಶರಥಗೆ ಸುತನಾಗಿ ತಾಟಕಿಯ ಸಂಹರಿಸಿ
ಅಸಮ ಮುನಿಯಜ್ಞವನು ಅನುಜ ಸಹ ಕಾಯ್ದು
ಕುಶಲದಿಂದಲಿ ಶಿಲೆಯ ಹೆಣ್ಣುಗೈಯುತ ಬಂದು
ಶಶಿಮುಖಿ ಸೀತೆಯನು ಕರಪಿಡಿದ ದೇವ ॥೩॥

ಧನುವ ಮುರಿದುದ ಕೇಳಿ ಜಮದಗ್ನಿ ಕುವರನು
ನಿನ ಸಂಗಡದಲಿ ಕಾಳಗಕೆ ಬರಲು
ದನುಜರಿಗೆ ಭ್ರಮೆಗೊಳಿಸಿ ಕನಲುತಿಬ್ಬರು ಕಾದಿ
ಘನಬಲ ಗೆಲಿದಂಥ ಅನುಗುಣನೆ ರಾಮ ॥೪॥

ಮಾತೆ ವಚನದಿ ಅನುಜ ಸೀತೆ ಸಹಿತದಿ ವನಕೆ
ಪ್ರೀತಿಯಿಂದಲಿ ಪೋದೆ ನೀತಿಯನು ತಿಳಿದು
ಪಾತಕವ ಹರಿಸುವ ಪರಮ ಪಾವನಮೂರ್ತಿ
ಈ ತೆರದ ಲೀಲೆಯನು ತೋರಿದೆಯೊ ಜಗಕೆ ॥೫॥

ಕಂಡು ಮಾಯಾಮೃಗವ ಅಂಡಲೆದು ಅದರೊಡನೆ
ಭಂಡ ರಾವಣ ಬಂದು ಭಿಕ್ಷುಕನ ತೆರದಿ
ಲಂಡತನದಲಿ ಸೀತೆಯನು ಕದ್ದು ಓಡಲು
ಕಂಡು ನಿರ್ಜನಗೃಹವ ಬೆಂಡಾದ ರಾಮ ॥೬॥

ಅನುಜನೊಡನೆ ವನವ ಅಲೆದಲೆದು ಕಂಗೆಟ್ಟು
ಘನಪಕ್ಷಿಯಿಂದಲಿ ವಾರ್ತೆ ತಿಳಿದು
ಹನುಮ ಸುಗ್ರೀವರಿಗೆ ಒಲಿದು ವಾಲಿಯ ಕೊಂದು
ವನಿತೆಸೀತೆಯನರಸೆ ವಾನರರ ಕಳುಹಿದೆ ॥೭॥

ಹನುಮನಿಂದಲಿ ಸುಟ್ಟು ದನುಜಪುರ ಉಂಗುರವ
ವನಿತೆಸೀತೆಗೆ ಕೊಟ್ಟು ವಾರ್ತೆ ತರಿಸಿ
ವನಧಿಗೆ ಸೇತುವೆಯ ಕಟ್ಟಿ ವಾನರರೊಡನೆ
ದನುಜರಾವಣ ಸಹಿತ ರಕ್ಕಸರ ಕೊಂದೆ ॥೮॥

ಅಗ್ನಿಯಿಂ ಸೀತೆಯನು ಶುದ್ಧಳೆನಿಸಿ ಗ್ರಹಿಸಿ
ವಿಘ್ನವಿಲ್ಲದ ಪದ ವಿಭೀಷಣನಿಗಿತ್ತು
ಮಗ್ನನಾಗಿರೆ ಭರತ ನಿನ್ನ ಪದಧ್ಯಾನದಲಿ
ಅಗ್ನಿಸಖಸುತನೊಡನೆ ವಾರ್ತೆ ಕಳುಹಿಸಿದೆ ॥೯॥

ಬಂದೆದುರುಗೊಳ್ಳೆ ಭರತನು ಸಕಲ ಪರಿವಾರ
ಬಂದಯೋಧ್ಯೆಗೆ ಸಕಲಸನ್ನಾಹದಿ
ಅಂದು ಸಿಂಹಾಸನದಿ ಪಟ್ಟಾಭಿಷೇಕಗೊಂಡು
ಬಂದ ಭಕ್ತರಿಗೆ ಇಷ್ಟಾರ್ಥಸಲಿಸಿದೆಯೊ ॥೧೦॥

ಕೊಟ್ಟುಕಪಿಗೆಬ್ರಹ್ಮಪಟ್ಟದ ಪದವಿಯನು
ಶ್ರೇಷ್ಠನೆನಿಸಿದೆಯೊ ಜಗಕೆ ಬೆಟ್ಟದೊಡೆಯ
ಇಷ್ಟ ಶ್ರೀ ಗೋಪಾಲಕೃಷ್ಣ ವಿಠಲ ಎನಗೆ
ಕೆಟ್ಟ ಸಂಸ್ಕೃತಿಯ ಬಿಡಿಸಿ ಕೊಟ್ಟಭಯ ಸಲಹೋ ॥೧೧॥

--✿✿✿✿✿--

೧೧೮

ಕಣ್ಣಾರೆ ನೋಡೆನ್ನ ಕರುಣಾಕಟಾಕ್ಷದಿ

(ವೆಂಕಟಕೃಷ್ಣ / ಯದುಗಿರಿಯಮ್ಮ / ೧೮೨೮ - ೧೯೦೮)

ಕಣ್ಣಾರೆ ನೋಡೆನ್ನ ಕರುಣಾಕಟಾಕ್ಷದೀ ಇಂದಿರಾ
ರಮಣಾ ಅರವಿಂದನೇತ್ರದಲಿ ॥ಪ॥

ಕೌಸಲ್ಯಾದೇವಿಗೆ ಮೋಹಪಡಿಸಿದ ನೇತ್ರ
ದಶರಥನಿಗೆ ದಿವ್ಯಪ್ರಾಣನೇತ್ರ
ಶಶಿಮುಖಿಸೀತೆಯ ಬಿಡದೆ ನೋಡುವ ನೇತ್ರ
ಶಶಿರವಿ ಕಾಂತಿಗೆ ಸಮನಾದ ನೇತ್ರ ॥೧॥

ಪಾರ್ವತೀರಮಣನ ಮೋಹಪಡಿಸಿದ ನೇತ್ರ
ಅಸುರರು ಮೋಹಿಸಿ ಭ್ರಮಿಸಿದ ನೇತ್ರ
ನಿರುತ ಪದ್ಮಿನೀ ರೂಪಿನಲಿ ಮಗ್ನವಾಗಿಹ ನೇತ್ರ
ಶ್ರೀನಿವಾಸನೆ ನಿಮ್ಮ ಕರುಣನೇತ್ರಗಳಿಂದಾ ॥೨॥

೧೧೯
ಪಾಲಯ ಮಾಂ ಶ್ರೀರಾಮ ಮೂಲ
(ಶಾಂತಿಪಾಲಿಪಗುರು / ನಾಡಿಘರ ಶಾಂತಿಬಾಯಿ / ೧೮೬೦ – ೧೯೦೧)

ಪಾಲಯ ಮಾಂ ಶ್ರೀರಾಮ ಮೂಲ ಸುಗುಣಶೀಲನೆ ||ಪ||

ನೀಳ್ಗರೆವ ಹೃದಯನಿವಾಸಾ ಕಾಲಾಂತಕ ಕರ್ಮನಾಶಾ
ಚಾಳಿಕ ಚಿನ್ಮಯ ಸುರೇಶ ಹರಿಲೋಲಗುಣಾತೀತನೇ ||೧||

ಚಂಡಕಿರಣ ಕುಲಜರಾಘವಾ ಸುಂದರ ಶ್ರೀಸೀತಾಧವಾ
ಚಂದ ನಿಜಾನಂದವೀಯುವಾ ಬಂದ ಭಯನಿವಾರಕನೇ ನೀ ||೨||

ದಶಮುಖರಾವಣ ನಿವಾರಣಾ ಅಸುರಾಸುರ ನಿಕ್ರಂದನಾ
ಕುಶಲವಿಭೀಷಣ ಪಾಲಯ ಸ್ವಾಮಿ । ಖುಷಿಯಾಗವ
ಕಾಯ್ದು ದೇವಾ ||೩||

ಅಂಬುಜಾಕ್ಷಾನಂತರೂಪಾ ತುಂಬಿಹ ಸದ್ಗುರು ಸ್ವರೂಪಾ
ನಂಬಿದ ಭಕ್ತರನೆ ಪಾಲಿಪಾ ಚಿದಂಬರ ಶಾಂತಿದಾಯಕಾ ||೪||

--✿✿✿✿✿--

೧೨೦
ರಾಮಾ ನಿನ್ನಯ ದಿವ್ಯನಾಮಾ ನೆನೆವೆನು
(ಶಾಂತಿಪಾಲಿಪಗುರು / ನಾಡಿಘರ ಶಾಂತಿಬಾಯಿ / ೧೮೬೦ – ೧೯೦೧)

ರಾಮಾ ನಿನ್ನಯ ದಿವ್ಯನಾಮ ನೆನೆವೆನು । ರಾಮಾ
ನಿನ್ನಯ ದಿವ್ಯನಾಮಾ
ಪ್ರೇಮವ ಕೊಟ್ಟೆನ್ನಾ ನೇಮದೊಳಿರಿಸೊ ನೀ ಕರುಣದಿ ||ಪ||

ಚಿತ್ತಶುದ್ಧವ ಮಾಡಿ । ಮತ್ತೆ ನಿನ್ನಯ ಪಾದ
ನಿತ್ಯದಿ ನೆನೆವಂತೆ ಭಕ್ತಿಯೊಳಿರಿಸೋ ನೀ ಎನ್ನನು ||೧||

ದಶರಥನುದರದಿ ಶಿಶುವಾಗಿ ಜನಿಸಿದೆ
ಹೊಸ ಆಭರಣವಿಟ್ಟು ಕುಲಮಾತೆಯ ॥೨॥

ಛಂದದಿಂದಲಿ ಆನಂದದೊಳಿಹ ರಾಮ
ಚಂದ್ರನ ಮೊಗ ಅತಿಸುಂದರವಾಗಿರುವವನೇ ॥೩॥

ಬಿಲ್ಲು ಬಾಣವಿಡಿದು ಎಲ್ಲದೈತ್ಯರ ಕೊಂದು
ಅಲ್ಲೆ ಕೌಶಿಕಯಾಗ ಎಲ್ಲ ಸಲಹಿದೆಧೀರನೇ ॥೪॥

ಮಿಥಿಲಾಪುರದಿ ಬಂದು ಅತುಳಧನುವ ಮುರಿದು
ಸತಿಸೀತಾ ಸಹಗೂಡಿ ಪಿತನ ಪಟ್ಟಣವನು ಸೇರಿದೆ ॥೫॥

ಮಾತೆಯವರ ಕೇಳಿ ನೀತಿಯಿಂದಲಿ ಅನು
ಜಾತನ ಒಡಗೂಡಿ ಖ್ಯಾತಿಯಿಂದಲಿ ಪೋದಂತಹ ॥೬॥

ಸರಯೂ ತೀರದಿ ಬಂದು ಪುರದ ಜನರ ಬಿಟ್ಟು
ಭರದಿ ನಾವೆಯನೇರಿ ತ್ವರಿತದಿಂ ದಾಟಿ ನೀ ಪೋದೆ ॥೭॥

ಭಕ್ತಿಯಿಂದಲಿ ಆಸಕ್ತ ಭರತನ ಕಂಡು
ಯುಕ್ತಿಯಿಂದಲಿ ತೇಜೋಯುಕ್ತಪಾದುಕೆಯನು ಕೊಟ್ಟೆ ನೀ ॥೮॥

ಪುಸಿಯತಿಯಾಗಿ ಸೀತೆಯ ಅಸುರ ಕೊಂಡೊಯ್ದನೆಂದು
ವ್ಯಸನದಿಂದಲಿ ಪೋಗಿ ಪಕ್ಷಿಯುದ್ಧರಿಸಿದೆ ಘಮ್ಮನೆ ॥೯॥

ಶಾಂತಮೂರುತಿ ಹನುಮಂತರೆಲ್ಲರು ಕೂಡಿ
ಅಂತರದಲಿ ಸೇತು ನಿಂತುನೋಡುವೆ ನೀ ಛಂದದಿ ॥೧೦॥

ಶರಣುಬಂದ್ವಿಭೀಷಣನ ಕರುಣದಿಂದಲಿ ಕಾಯ್ದೆ
ಸ್ಥಿರದಾ ಪಟ್ಟವಗಟ್ಟಿ ಹರುಷದೊಳ್ ನಿಲಿಸಿದೆ ಅವನನು ॥೧೧॥

ವಾನರರೊಡಗೊಂಡು ಸೇನೆ ಸಹಿತಲೇ ದಶಾ
ನನ ರಾವಣನ ಕೊಂದು ಮಾನಿನಿಸಹಿತನೀ ಬಂದಿಹೆ ॥೧೨॥

ಪುಷ್ಪಕವನೆ ಏರಿ ಅಕಸ್ಮಾತದಲಿ ಬಂದು
ಆಕ್ಷಣದಲಿ ಭರತರಕ್ಷಣ ಮಾಡಿದ ದೇವನೇ ||೧೩||

ಪಟ್ಟಣದಲಿ ಮಹಾಪಟ್ಟವನೇರಿಸಿ
ಶಿಷ್ಟ ಅಯೋಧ್ಯೆಯ ಪಟ್ಟಣವಾಳಿದೆ ರಾಮನೆ ||೧೪||

ಬ್ರಹ್ಮಮೂರುತಿ ರಾಮಾಗಮನ ಚರಣದಿ
ಸುಮ್ಮಾನದಲಿ ಶಾಂತಿ ತನ್ಮಯಗೊಳಿಸಾನಂದದಿ ||೧೫||

--✿✿✿✿✿--

೧೨೧

ಹರಿಬಾಬು ರಾಮಚಂದ್ರ ಸೀತಾಪತೇ

(ಶಾಂತಿಪಾಲಿಪಗುರು / ನಾಡಿಘರ ಶಾಂತಿಬಾಯಿ / ೧೮೬೦ - ೧೯೦೧)

ಹರಿಬಾಬು ರಾಮಚಂದ್ರ ಸೀತಾಪತೇ ||ಪ||

ದಶರಥನುದರದೊಳ್ ಶಿಶುವಾಗಿ ಪುಟ್ಟಿದೆ
ದಶಕಂಠನಾಶನೇ ನೀನೇವೋ ಹರಿ ಸೀತಾಪತೇ ||೧||

ತಾಪತ್ರಯಗಳಿಂದ ಪಾಪಿಯಾಗಿಹೆ ನಾನು
ತಾಪವಿದಾರನೇ ನೀನೇವೋಹರಿ ಸೀತಾಪತೇ ||೨||

ವಾಸುದೇವನೇ ನೀನು ದಾಸರ ಸಲಹುವ
ಭೂಷಣ ಪೋಷಿಪ ನೀನೇವೋಹರಿಸೀತಾಪತೇ ||೩||

ಆಶಾಪಾಶಗಳಿಂದ ಘಾಶಿಯಾದೆನು ನಾನು
ದೋಷವಿದಾರನೇ ನೀನೇವೋಹರಿಸೀತಾಪತೇ ||೪||

ಶಾಂತಿಪದದಲಿ ವಿಶ್ರಾಂತಿ ಕೊಟ್ಟನ್ನಾ
ಭ್ರಾಂತಿಯ ತೋರಿಸುವ ನೀನೇವೋಹರಿ ಸೀತಾಪತೇ ||೫||

--✿✿✿✿✿--

೧೨೨

ನೋಡಿದೆನು ಭದ್ರಾಚಲವಾಸನ

(ನರಸಿಂಹ ವಿಠಲ / ಓರೆಬಾಯಿ ಲಕ್ಷ್ಮೀದೇವಮ್ಮ / ೧೮೮೫ - ೧೯೫೦)

ನೋಡಿದೆನು ಭದ್ರಾಚಲವಾಸನ । ನೋಡಿದೆನು ಜಗದೀಶನು
ನೋಡಿದೆನು ಶ್ರೀ ಸೀತಾರಾವಣನ । ನೋಡಿದೆನು ಸರ್ವೇಶನಾ ॥ಪ॥

ಅಂಗನೇಯರ ಕೂಡಿ ನಾನು ಮಂಗಳಗಿರಿ ನೋಡಿದೆ
ಮಂಗಳಾಂಗಾ ನಾರಸಿಂಹಗೆ ತಂಪು ಪಾನಕ ನೀಡಿದೆ ॥೧॥

ಸಜ್ಜನರಿಂದ ಕೂಡಿ ನಾನು ಬೆಜ್ಜವಾಡವ ನೋಡಿದೆ
ಮೂರ್ಜಗ ಪಾವನಿಯ ಕೃಷ್ಣೆಯ ಮಜ್ಜನ ನಾ ಮಾಡಿದೆ ॥೨॥

ಮಾಧವನ ದಯದಿಂದ ನಾನು ಗೋದಸ್ನಾನ ಮಾಡಿದೆ
ಮೋದದಿಂದಲಿ ಬಂದು ವಿಮಾನ ರಾಮನ ನೋಡಿದೆ ॥೩॥

ನೇಮದಿಂದಲಿ ಬಂದು ನಾನಾ ರಾಮದಾಸನ ನೋಡಿದೆ
ವಾಮಭಾಗದಿ ಕುಳಿತ ಲಕ್ಷ್ಮಣಸ್ವಾಮಿ ದರುಶನ ಮಾಡಿದೆ ॥೪॥

ಸಪ್ತಋಷಿಗಳು ದಶರಥಾದಿ ಉತ್ತಮರ ನಾ ನೋಡಿದೆ
ಸುತ್ತುಮುತ್ತು ದೇವತೆಗಳನಾ ಮತ್ತೆ ಮತ್ತೆ ನಾ ನೋಡಿದೆ ॥೫॥

ದೋಷದೂರ ಭದ್ರಾಚಲದಿ ವಾಸ ರಾಮಚಂದ್ರನ
ಸೋಸಿ ನಿಂದಲಿ ಬಂದು ನಾ ವಿಶೇಷ ದರುಶನ ಮಾಡಿದೆ ॥೬॥

ಕಡುಹರುಷದಿಂದಲಿ ರಾಮನ ತೊಡೆಯಮ್ಯಾಲೆ ಒಪ್ಪಿದ
ಮಡದಿ ಸೀತಾದೇವಿಯನ್ನು ಸಡಗರದಿ ನಾ ನೋಡಿದೆ ॥೭॥

--✿✿✿✿✿--

೧೨೩

ರಘುನಾಯಕ ನಿನ್ನ ಹಗಲು ರಾತ್ರಿ ನೆನೆವೆ

(ನರಸಿಂಹ ವಿಠಲ / ಓರೆಬಾಯಿ ಲಕ್ಷ್ಮೀದೇವಮ್ಮ / ೧೮೯೫ - ೧೯೫೦)

ರಘುನಾಯಕ ನಿನ್ನ ರಾತ್ರಿ ಹಗಲು ನೆನೆವೆ
ರಾಘವಾ ಕೈಪಿಡಿದು ಸಲಹೆನ್ನನು ॥ಪ॥

ಸೀತಾಮನೋಹರಾ । ಶ್ರೀರಾಮಚಂದಿರಾ
ಪಾತಕಮೃಗವಳಿದು । ಪರಮಧೀರಾ ॥೧॥

ಶಬರಿಫಲಗಳ ತಿಂದು । ಶಾಶ್ವತ ಫಲವಿತ್ತು
ಅಗಣಿತಗುಣಧಾಮ । ಆನಂದರಾಮ ॥೨॥

ಸೀತಾ ಮಾರ್ಗದೊಳಿಂದ ಆತರಾವಣ ಕೊಂದ
ಸೀತೆಯನು ತಂದ ಪ್ರಖ್ಯಾತಮಹಿಮಾ ॥೩॥

ಲೋಕದೊಳು ನೇಮ ನಿನ್ನ । ಪಾಪಹರನಾಮ
ವಾಲ್ಮೀಕಿ ಜಪಿಸಿದಾ ಶ್ರೀರಾಮನಾಮ ॥೪॥

ಶ್ರೀಕಾಂತೆ ನರಸಿಂಹವಿಠಲಾ । ಸ್ವೀಕರಿಸೈ ಗಂಧವಾದೇವ

--✿✿✿✿✿--

೧೨೪

ಜಯ ಜಾನಕೀರಮಣ ಜಯ ಕೌಸ್ತುಭಾಭರಣ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜಯ ಜಾನಕೀರಮಣ ಜಯ ಕೌಸ್ತುಭಾಭರಣ ॥ಪ॥

ಜಯ ಪಾವನಚರಣ ಜಯ ಕೌಸಲ್ಯಾನಂದವರ್ಧನ
ಜಯಭಕ್ತಾಭರಣ ॥ಅ.ಪ॥

ಜಗದೋದ್ಧರಣ ಅಪಾರಕರುಣಾ ಅಗಜಾರ್ಚಿತಚರಣ
ಖಗೇಶಗಮನ ಜಲನಿಧಿಶಯನ ಸುರರಿಪುಸಂಹನನ ॥೧॥

ಸೂನೃತಪಾಲ ಜಾನಕೀಲೋಲ ದೀನಜನಾವಾಲ
ದಾನವಕಾಲಾ ಇನವಮಾಲಾ ಮಾನಿತಗುಣಶೀಲಾ ॥೨॥

ಶೇಷಗಿರೀಶ ಶ್ರಿತಪರಿತೋಷ ವಾಸವಪರಿತೋಷ
ದೋಷವಿನಾಶ ದಶಶಿರಧ್ವಂಸ ಮುನಿಜನಮಾನಸಹಾಸ ॥೩॥

--✿✿✿✿✿--

೧೨೫
ಜಯ ಮಂಗಳಂ ಶ್ರೀರಘುಕುಲಾಬ್ಧಿ ಚಂದ್ರ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜಯಮಂಗಳಂ ಶ್ರೀರಘುಕುಲಾಬ್ಧಿಚಂದ್ರ ಭವತು ತೇ
ಶುಭಮಂಗಳಂ ಶ್ರೀರಘುಕುಲಾಬ್ಧಿಚಂದ್ರ ॥ಪ॥

ಸುರರಿಪುಶಮನ । ಕ್ಷೀರಶರಧಿಶಯನಾ ।
ಕರಿವರ ನಮನ ಮುರಹರ ಶ್ರೀ ।
ಸುರವೈರಿಭಯಂಕರ ಮಾವರ ಶ್ರೀ
ಸರಸಿಜಾಕ್ಷ ಸಾಧುಪಕ್ಷ ದುರುಳಶಿಕ್ಷ ಶ್ರೀಕಟಾಕ್ಷ ॥೧॥

ಭವನುತಚರಣ ಭಾರ್ಗವಮದಹರಣ
ಭುವಿರಜಾರಮಣ ಭಯಹರ ।
ಪವನಾತ್ಮಜ ಸಂಸೇವಿತ ಪದಶ್ರೀ
ಕವಿಕುಲಾನ್ವಯಲಲಾಮ । ಕವಿಜನಾಳಿಪೂರ್ಣಕಾಮ ॥೨॥

ದಾಸಹೃದಯವಾಸ । ದಶಶಿರಧ್ವಂಸ
ಶಶಿನಿಭಹಾಸ । ದಶರಥಸುತ ಶ್ರೀ
ವಸುಮತೀಶ ಕುಲವಿಭೂಷ
ಶೇಷಶೈಲ ಶಿಖರಾವಾಸ ಜಯಮಂಗಳಂ ॥೩॥

೧೨೬
ಜಯಜಯ ರಾಘವೇಂದ್ರ ಸಜ್ಜನ ಪಯೋನಿಧಿ
(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜಯ ಜಯರಾಘವೇಂದ್ರ ಸಜ್ಜನಪಯೋನಿಧಿಚಂದ್ರ
ಜಯದೇವ ಭೂಸುರವೃಂದ ಸುಗುಣಸಾಂದ್ರ ॥ಪ॥

ಕೌಸಲ್ಯಾಪ್ರಿಯ ಬಾಲಕೌಶಿಕಕ್ರತುಪಾಲ
ದಶಕಂಠಕುಲಕಾಲ ದಾನಶೀಲ
ಶಶಿಮೌಳಿಧನುರ್ಭಂಗ ಭುವಿಜಾಮನೋಹರಾಂಗ
[ಋಷಿ] ಮನೋಂಬುಜಭೃಂಗ ಕರುಣಾಂತರಂಗ ॥೧॥

ಸಾಕೇತಪುರಧಾಮ ಪಾಕಾರಿನುತನಾಮ
ಲೋಕಮೋಹನಶ್ಯಾಮ ಕೋದಂಡರಾಮ
ಶ್ರೀಕಾಮಿನೀಸದನ ಭೂವೈಕುಂಠ [ಕಾರಣ]
ಶ್ರೀ ಕೌಸ್ತುಭಾಭರಣ ಶೇಷಗಿರಿರಮಣ ॥೨॥

--✿✿✿✿✿--

೧೨೭
ಜಯರಾಮ ಜಯರಾಮ ರಘುವಂಶಾಬ್ಧಿಸೋಮ
(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜಯರಾಮ ಜಯರಾಮ ರಘುವಂಶಾಬ್ಧಿಸೋಮ ॥ಪ॥

ವೈದೇಹಿಮನೋಹರ ವೇದವೇದ್ಯ ಶ್ರೀಕರ
ಸಾಧುಜನಸುಖಕರ ಮಾಧವ ಮುರಹರ
ಜಯಶೌರೇ ದಿತಿಜಾರೇ ಪರಿಪಾಹಿ ನೃಹರೇ ॥೧॥

ನೀರೇರುಹಲೋಚನ ಆನಂದಮಯ ಸದನ
ವಾರಾಶಿಬಂಧನ ಅಕ್ಷಯಸುವಚನ
ಸ್ಮರತಾತಾ ವರದಾತಾ ರಮಾಸಮೇತ ॥೨॥

ಶೇಷಾದ್ರಿನಿಕೇತನ ಆಶ್ರಿತಪರಿಪಾಲನ
ಕ್ಲೇಶಪಾಶವಿಮೋಚನ ವಾಸವಾರ್ಚಿತಚರಣ
ಶ್ರೀಸತ್ಯಭಾಮಾಧವ ಜಯದೇವಾದ್ಭುತಪ್ರಭವ ॥೩॥

--✿✿✿✿✿--

೧೨೮
ವೈದೇಹೀ ರಮಣನೆ ನಮೋ ನಮೋ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ವೈದೇಹೀರಮಣನೆ ನಮೋ ನಮೋ ॥ಪ॥

ವೇದವಿದಿತ ಭೇದರಹಿತ ವಿಶ್ವ ಸಂಸ್ತುತ
ಭದ್ರಾದ್ರೀಶ ಲೀಲಾಮಾನುಷ ॥ಅ.ಪ.॥

ವಾಸವವಂದಿತ ನಮೋ ನಮೋ
ಭಾಸ್ಕರಾನ್ವಯಲಲಾಮಜಯ ರಾಮಚಂದ್ರ
ಕೌಶೇಯ ಪೀತವಾಸಶೋಭಿತ ॥೧॥

ದುಷ್ಟದಾನವಾಂತಕ ನಮೋ ನಮೋ
ಶಿಷ್ಟರಕ್ಷಕ, ದೃಷ್ಟಿಸೆನ್ನ ಸೃಷ್ಟಿಕರ್ತನೆ
ಇಷ್ಟಾರ್ಥಗಳ ನೀ ಕೊಟ್ಟು ರಕ್ಷಿಸೈ ॥೨॥

ಶ್ರೀಶೈಲವರದನೇ ನಮೋ ನಮೋ
ಶೇಷಶಯನ ಕ್ಲೇಶನಾಶನ ಭೇಷಜಾನನ
ಶ್ರೀಶ ಸರ್ವೇಶ ನಿತ್ಯನಿರಂಕುಶ ॥೩॥

--✿✿✿✿✿--

೧೨೯
ಶರಣು ಶರಣು ಶ್ರೀರಾಮಚಂದ್ರನೆ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಶರಣು ಶರಣು ಶ್ರೀ ರಾಮಚಂದ್ರನೆ
ಶರಣು ಸುರಮುನಿವಂದ್ಯನೆ ॥ಪ॥

ಶರಣು ಶ್ರೀ ರಘುಕುಲಾಬ್ಧಿಚಂದ್ರನೆ
ಶರಣು ಸದ್ಗುಣಸಾಂದ್ರನೆ ॥ಅ.ಪ.॥

ಕಮಲನಾಭನೆ ಕಮಲನೇತ್ರನೆ
ಕಮಲಸಂಭವೆಯರಸನೆ
ಅಮರವಂದಿತ ವಿಮಲಚರಿತನೆ
ಕುಮುದ ಸುಖಸಮಾನ್ಯನೆ ॥೧॥

ಅಂಬುಜಾಸನ ಶಂಭುವಂದಿತ
ಶಂಬರಾರಿಯ ಜನಕನೆ
ಕಂಬುಕಂಧರ ನಂಬಿ ಭಜಿಸುವೆ
ಬೆಂಬಿಡದೆಲೆ ಪಾಲಿಸೈ ॥೨॥

ಪಕ್ಷಿವಾಹನ ರಕ್ಕಸಾಂತಕ
ಲಕ್ಷ್ಮೀರಮಣ ಶುಭಲಕ್ಷಣ
ಲಕ್ಷ್ಮಣಾಗ್ರಜ ಸತ್ಯವಿಕ್ರಮ
ರಕ್ಷಿಸೈ ಪುರುಷೋತ್ತಮ ॥೩॥

ಪರಮ ಪಾವನ ಶೇಷಗಿರಿಯೊಳು
ನಿರುತ ನೆಲಸಿಹ ಶ್ರೀಶಗೆ
ಶರಣಜನರ ಸಚ್ಚರಿತೆಯೋದೇವ
ವರವ ಪಾಲಿಸು ದೇವನೇ ॥೪॥

--✿✿✿✿✿--

೧೩೦

ಶ್ರೀರಾಮ ರಘುಕುಲಸೋಮ ಕಾಮಿತ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಶ್ರೀರಾಮ ರಘುಕುಲಸೋಮ ಕಾಮಿತ
ಶುಭಫಲದಾಯಕ ॥ಪ॥

ರಮಾರಮಣನೆ ಭೀಮಪರಾಕ್ರಮ ಸುಂದರ ॥ಅ.ಪ॥

ದಾನವಾಂತಕ ಶ್ರೀ ಜಾನಕೀನಾಯಕರಾಮ
ದೀನಾನಾಥ ಪರಿತ್ರಾಣ ಪ್ರಪನ್ನ ಜನಪ್ರಾಣ ॥೧॥

ವಾಸವಾನುಜ ಜಗದೀಶ ಪರೇಶ ಪರಾತ್ಪರ
ದಾಸಜನಾಶ್ರಯ ಶ್ರೀಶ ಸರ್ವೇಶ ದಯಾಸಾಗರ ॥೨॥

ಮಂಗಳಾತ್ಮಕ ಭವಭಂಗ ಶ್ರೀರಂಗನಾಯಕಿ ರಮಣ
ಅಂಗಜಜನಕ ಪಾಂಡುರಂಗ ಕರುಣಾಂತರಂಗ ॥೩॥

ನಾಗೇಶಪಾಲಕ ನಾಗೇಶವರತಲ್ಪನೆ ಶ್ರೀ
ನಾಗಾರಿವಾಹನ ವರನಾಗಾದ್ರಿನಿಕೇತನ ರಾಮಾ ॥೪॥

--✿✿✿✿✿--

೧೩೧
ಸಾಕೇತಾಧಿಪ ಸತ್ಯಸ್ವರೂಪ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ – ೧೯೮೨)

ಸಾಕೇತಾಧಿಪ ಸತ್ಯಸ್ವರೂಪ
ಶ್ರೀಕರರೂಪ ಜಿತಕೋಪ ॥ಪ॥

ಕರಧೃತಚಾಪ ಖಂಡಿತತಾಪ
ಪರಂತಪ ಪಾಹಿ ಕವಿಜನಾಲಾಪ ॥೧॥

ಅರಿಜನಭೀಕರ ಕರಿವರ ಶ್ರೀಧರ
ವರದಾಭಯಕರ ಪರಮಕೃಪಾಕರ ॥೨॥

ಇನಕುಲಮಂಡನ ಭಕ್ತಾರ್ತಿಭಂಜನ
ವನರುಹಲೋಚನ ಭವಬಂಧಮೋಚನ ॥೩॥

ಕ್ಷಿತಿನಾಥರಾಘವ ಸತತಸುವೈಭವ
ನುತ ಶೇಷಗಿರೀಧವ ವಿಜಿತಮನೋಭವ ॥೪॥

ನೋಡಿದ್ಯಾ ಶ್ರೀರಾಮನ ನೋಡಿದ್ಯಾ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ನೋಡಿದ್ಯಾ ಶ್ರೀರಾಮನ ನೋಡಿದ್ಯಾ ॥ಪ॥

ನೋಡಿದ್ಯಾ ನಯನವೆ, ಕೊಂಡಾಡಿದ್ಯಾ ಮನವೆ
ಪಾಡಿದ್ಯಾ ವದನವೆ ಬಾಗಿದ್ಯಾ ಶಿರವೇ ॥ಅ.ಪ.॥

ಕುವಲಯಶ್ಯಾಮ ಸುಂದರನ ಶ್ರೀ
ಭುವಿಜಾತೆಯರಸನ ರಾಘವನ (ವರ)
ಪವಮಾನಸುತ ಸಂಸೇವ್ಯನ
ಭುವಿಯೊಳಗರ್ಚಾವತಾರದಿ ಮೆರೆವಾ
ಸರ್ವವ್ಯಾಪಕ ಶ್ರೀ ರವಿಕುಲತಿಲಕನ
ಭುವನಮೋಹನ ವಿಗ್ರಹನಾ ॥೧॥

ಪಂಕ್ತಿರಥನಂದನನ ವರ
ಪಂಕೇರುಹ ಪತ್ರೇಕ್ಷಣನ ವರ
ಪಂಕಸಖನಿಭ ಭಾಸುರನ ಆಹಾ
ಪಂಕಜಾಸನನ ಪೆತ್ತಾತನ
ಶಂಕರಪ್ರಿಯ ಕೋದಂಡರಾಮನ ॥೨॥

ಕೌಶಿಕನೊಡನೈತಂದು
ದುಷ್ಟ ತಾಟಕಿಯನು ತಾ ಕೊಂದು
ಆ ಸುಬಾಹು ಮಾರೀಚರನಂದು ಶಿಕ್ಷಿಸಿ
ಕೌಶಿಕಮುಖ ಪಾಲಕನೆನಿಸಿ
ಬಿಸುಗಣ್ಣೆರೆಯನ ಸ್ತುತಿಯನಾದರಿಸಿ
ಎಸೆವ ಮಂಗಳಮೂರ್ತಿ ದಶರಥರಾಮನ ॥೩॥

ದೃಢದಿಯಹಲ್ಯೆಯ ಶಾಪಕಳೆದು ಬಂದು
ಮೃಡಧನುವನು ತಾ ಮುರಿದು

ಮೊಡವಿಜಾತೆಯ ಕೈಪಿಡಿದು
ತನ್ನಒಡಪುಟ್ಟಿದವರ ತನ್ನ
ಪಡೆದ ತಾಯ್ತಂದೆಯರ
ಒಡಗೂಡಿ ಮೆರೆದಂಥ ಒಡೆಯ ರಾಘವನ ॥೪॥

ವಾಸವಾನುಜನೆಂದೆನಿಸಿ ಮುನ್ನ
ಕಾಶ್ಯಪಸೂನುವೆನಿಸಿ ಬಂದು
ಮೋಸದಿಂ ದಾನವಂ ಯಾಚಿಸಿ ಬಲಿಯ ಭಕ್ತಿ
ಪಾಶದಿ ತಾ ಸಿಕ್ಕಿ ನಿರುತವು ತನ್ನ ನೆನೆಯುವ
ದಾಸರ ದಾಸನೆಂದೆನಿಸಿದಾತನ ॥೫॥

ಗರುಡವಾಹನ ಮುರಹರನ ವರ
ಶರಧಿಬಂಧನ ಕೋವಿದನ ತರಣಿನಂದನ ಸಂಸೇವ್ಯನ
ಪರಶುಧರ ಗರ್ವಹರನಾ ಆಹಾ
ವರಶೇಷಗಿರಿಯಲ್ಲಿ ಮೆರೆವ ವೆಂಕಟನಾ
ಶರಣಾಭರಣ ಶ್ರೀ ನರಹರಿ ರೂಪನ ॥೬॥

--✿✿✿✿✿--

೧೩೩
ಪಾಲಿಸೈ ಪದ್ಮಾಕ್ಷ ಪಾದವೇ ಗತಿಯೆನೆಗೆ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಪಾಲಿಸೈ ಪದ್ಮಾಕ್ಷ ಪಾದವೇ ಗತಿಯೆನಗೆ ರಾಮಚಂದ್ರಾ
ದೀನಪಾಲಕನೆಂಬೀ ಬಿರುದುಂಟು ನಿನ್ನೊಳು ರಾಮಚಂದ್ರ ॥ಪ॥

ಅನಿಮಿಷ ರೂಪದಿಂದಾಗಮವನು ತಂದ ರಾಮಚಂದ್ರ
ಘನಕೂರ್ಮರೂಪದಿಂ ಗಿರಿಯ ಬೆನ್ನೊಳಗಾಂತ ರಾಮಚಂದ್ರ
ಕನಕಾಕ್ಷನನು ಕೊಂದ ಧರಿಣೀದೇವಿಯ ರಮಣ ರಾಮಚಂದ್ರ
ಹಿರಣ್ಯಕನ ಕರುಳನು ಕೊರಳೊಳು ಧರಿಸಿದ ರಾಮಚಂದ್ರ ॥೧॥

ತರಳ ಪ್ರಹ್ಲಾದನ ಕರೆದಾದರಿಸಿದ ರಾಮಚಂದ್ರ
ವಟುರೂಪದಿಂ ಬಂದು ವಸುಧೆಯ ಬೇಡಿದ ರಾಮಚಂದ್ರ

ದಾನಕೊಟ್ಟವಗೆ ಪಾತಾಳಪಟ್ಟವ ಕಟ್ಟಿದ ರಾಮಚಂದ್ರ
ಕ್ಷತ್ರಿಯರ ಕುಲಬೇರ ಕತ್ತರಿಸಿದ ದೇವ ರಾಮಚಂದ್ರ ॥೨॥

ಧರಿತ್ರಿಯ ಭಾರವ ಪರಿಹರಿಸಿದ ದೇವ ರಾಮಚಂದ್ರ
ವಸುದೇವನಂದನನೆಂದೆನಿಸಿ ಮೆರೆದೆಯೋ ರಾಮಚಂದ್ರ
ಮತ್ತಕಾಮಿನಿಯರ ಚಿತ್ತವ ಕಲಕಿದ ರಾಮಚಂದ್ರ
ಉತ್ತಮಾಶ್ವವನೇರಿ ಕಲ್ಕಿಯೆನಿಸಿದ ರಾಮಚಂದ್ರ ॥೩॥

ಆದಿಮಧ್ಯಾಂತ ಸ್ವರೂಪ ಸುಂದರರೂಪ ರಾಮಚಂದ್ರ
ವೇದವೇದ್ಯನೆ ನಿನ್ನ ಪಾದವೇ ಗತಿಯೆನಗೆ ರಾಮಚಂದ್ರ
ರಘುಕುಲತಿಲಕನೆ ರಮ್ಯಚರಿತ್ರನೆ ರಾಮಚಂದ್ರ
ಅಘಹರ ಪುರವೈರಿಸಂಸ್ತುತಿಪಾತ್ರನೆ ರಾಮಚಂದ್ರ ॥೪॥

ಮಾನಾಭಿಮಾನ ನಿನ್ನಾಧೀನವೆಂಬೆನ್ನೈ ರಾಮಚಂದ್ರ
ಏನೋದನರಿಯದ ಅಜ್ಞಾನಿ ನಾನಯ್ಯ ರಾಮಚಂದ್ರ
ನೀನಲ್ಲದೆ ಮತ್ತನ್ಯರಾರಿಹರೈ ರಾಮಚಂದ್ರ
ದೀನಪಾಲಕ ನಿನ್ನುಳಿದಾರ ನೆರೆಯೆ ರಾಮಚಂದ್ರ ॥೫॥

--✿✿✿✿✿--

೧೩೪

ರಘುರಾಮ ನೀನೆನ್ನ ಪಾಲಿಸೈ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ರಘುರಾಮ ನೀನೆನ್ನ ಪಾಲಿಸೈ
ಜಗನ್ನಾಯಕ ಜಾನಕೀಪತೇ ॥ಪ॥

ಸಾಗರಶಯನ ಸಾರಸನಯನ
ನಾಗವೈರಿಗಮನ ಬಾಗಿ ನಮಿಪೆನಾ ॥೧॥

ಯಾಜ್ಞಸೇನಿಯಂದು ಯಾಚಿಸಲ್ಕೆ ನಿಂದು
ಅಕ್ಷಯವಸ್ತ್ರದಿಂ ರಕ್ಷಿಸಿದ ಬಂಧು ॥೨॥

ವಸುಧೆಯೊಳು ಬಂದು ಅಸುರರನ್ನೆ ಕೊಂದು
ವಾಸುದೇವನೆಂದು ಪೆಸರನಾಂತೆಯಂದು ॥೩॥

ಪಾಹಿರಾಮರಾಮ ಪಾಹಿಪೂರ್ಣಕಾಮ
ತ್ರಾಹಿ ಸತ್ಯಪ್ರೇಮ ತ್ರಾಹಿರಂಗಧಾಮ ॥೪॥

ಶೇಷಶೈಲನಿಲಯವಾಸ ವಾದಿಗೇಯ
ವಾಸುದೇವ ಸದಯ ಶ್ರೀಸತೀಪ್ರಿಯ ॥೫॥

--✿✿✿✿✿--

೧೩೫

ಶ್ರೀರಘುರಾಮ ಬಾರೋ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಶ್ರೀ ರಘುರಾಮ ಬಾರೋ ಪದವನು ತೋರೋ ॥ಪ॥

ದಶರಥಬಾಲ ದಶಮುಖಸುರ ಕಾಲ
ಕುಶಿಕಾತ್ಮಜಮುಖಪಾಲ ಶಶಾಂಕನಿಭಫಾಲ ॥೧॥

ಶತಪತ್ರಾಯತನೇತ್ರ ಶತಪತ್ರಾಪ್ತಜಮಿತ್ರ
ಶತಮನ್ಯುಸ್ತುತಿಪತ್ರ ಶತಯಾಗಸಹಜಾತ ॥೨॥

ವರಶೇಷಗಿರಿನಿಲಯ ಶರಣರಕ್ಷಕಸದಯ
ಗಿರಿಜಾಧವಪ್ರಿಯ ನತಸುರಸಮುದಾಯ ॥೩॥

--✿✿✿✿✿--

೧೩೬

ಲಾಲಿ ಮನುಕುಲತಿಲಕ ಮದನಾರಿವಿನುತ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಲಾಲಿ ಮನುಕುಲತಿಲಕ ಮದನಾರಿವಿನುತ
ಲಾಲಿ ಜನಕಜಾಮಾತ ಜಾನಕೀಸವೇತ ॥ಪ॥

ಕೌಸಲ್ಯಾಪ್ರಿಯಬಾಲ ಕನಕಮಯಚೇಲ
ಕೌಶಿಕಕ್ರತುಪಾಲ ಕರುಣಾಲವಾಲ
ಪೋಷಿತಾಮರಜಾಲ ಬಾಲೇಂದುನಿಭಪಾಲ
ದಶಕಂಠಮುಖಕಾಲ ಜಾನಕೀಲೋಲ ॥೧॥

ನಾಕೇಶನುತ ಚರಣ ನಕ್ತಂಚರಶಮನ
ಶ್ರೀಕಾಮಿನೀಸದನ ರಾಜೀವನಯನ
ಲೋಕನಾಯಕ ಸರ್ವಲೋಕಪಾಲಕದಿವ್ಯ
ಸಾಕೇತಪುರ ನಿಲಯ ಸನಕಾದಿಗೇಯ ॥೨॥

ಈಶಸನ್ನುತನಾಮ ನೀಲಮೇಘಶ್ಯಾಮ
ಶೇಷಾದ್ರಿ ಶಿಖರಧಾಮ ಶ್ರೀರಾಮನಾಮ
ಕೇಶಪಾಶವಿರಾಮ ವಿಶ್ವಜನಸುಪ್ರೇಮ
ಕೋಸಲಾಧಿಪರಾಮ ಪರಿಮಾರ್ಣಕಾಮ ॥೩॥

--✿✿✿✿✿--

೧೩೭

ಜಯ ಮಂಗಳಂ ನಿತ್ಯ ಶುಭಮಂಗಳಂ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜಯಮಂಗಳಂ ನಿತ್ಯ ಶುಭಮಂಗಳಂ ॥ಪ॥

ಸರಸೀರುಹಾಕ್ಷಾಯ ದುರುಳಮದಶಿಕ್ಷಾಯ
ಸುರಮೌನಿ ಪಕ್ಷಾಯಾಧೋಕ್ಷಜಾಯ
ಶರಣನರಕ್ಷಾಯ ಕರುಣಾಕಟಾಕ್ಷಾಯ
ಧರಣಿಜಾರಮಣಾಯ ರಾಮಭದ್ರಾಯ ॥೧॥

ದಶರಥಾತ್ಮಜಾತಂಗೆ ಕೌಶಿಕ ಕ್ರತುಪಾಲಕಗೆ
ಶಶಿವದನೆ ಜಾನಕಿಯ ಕೈಪಿಡಿದವಂಗೆ
ಶಶಿಮೌಳಿಚಾಪಮಂ ಮುರಿದ ಅಸಮಬಲನಿಗೆ
ದಶಕಂಠಕಾಲಂಗೆ ರಾಘವೇಂದ್ರನಿಗೆ ॥೨॥

ಕಾಕುತ್ಸ್ಥಕುಲಮಂಡನಗೆ ಕಮಲಾಪ್ತ ಕುಲದೀಪಂಗೆ
ಸಾಕೇತನಗರಾಧಿಪಗೆ ಲೋಕೇಶನಿಗೆ
ಪಾಕಶಾಸನಮುಖ್ಯ ನಾಕಪೂಜಿತಚರಣ
ವೈಕುಂಠನಾಯಕ ಶ್ರೀ ಶೇಷಗಿರಿವರಗೆ ॥೩॥

--✿✿✿✿✿--

೧೩೮
ಜಯ ಜನಕಜಾಮಾತ ಜಯ ಜಾನಕೀಕಾಂತ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜಯ ಜನಕಜಾಮಾತ ಜಯ ಜಾನಕೀಕಾಂತ
ಜಯದುರಿತ ಘನವಾತ ಮದನತಾತ ॥ಪ॥

ಜಲಜಾಪ್ತಸಂಕಾಶ ವಿಲಸದ್ಗುಣಾವೇಶ
ಲಲಿತ ಸನ್ಮೃದುಭಾಷ ಪರಮಪುರುಷ ॥೧॥

ನತಕಾಮ ಸುರದ್ರುಮ ದಿತಿಜಾಬ್ಜಕುಲಸೋಮ
ಕ್ಷಿತಿನಾಥ ರಘುರಾಮ ಸಮರಭೀಮ ॥೨॥

ಪಿತೃವಾಕ್ಯ ಪರಿಪಾಲ ಸತ್ಯವ್ರತ ಸುಶೀಲ
ಮೃತ್ಯುಂಜಯವಿನುತ ಮಹಿತ ಚರಿತ ॥೩॥

ಭವಭಯಾಂಬುಧಿ ಶರಣಭಕ್ತ ಭರಣ
ಪವನನಂದನ ಸೇವ್ಯ ದೇವದೇವ ॥೪॥

ಸುವಿಮಲ ಯಶಶ್ಚಂದ್ರ ರಾಮಚಂದ್ರ
ಪರಿಪಾಹಿ ಶ್ರೀ ಶೇಷಗಿರಿ ವಿಭೂಷ ॥೫॥

--✿✿✿✿✿--

೧೩೯

ನೀಲಮೇಘಶ್ಯಾಮ ನಿಖಿಲ ಸದ್ಗುಣಧಾಮ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ನೀಲಮೇಘಶ್ಯಾಮ ನಿಖಿಲಸದ್ಗುಣಧಾಮ
ಫಾಲಾಕ್ಷನುತನಾಮ ಪೂರ್ಣರಾಮ
ಸರಸಿಜಾಸನವಿನುತ ಸರಸ ಕರುಣಾಭರಿತ
ಪರಮಪಾವನ ಚರಿತ ಪುಣ್ಯಗಾತ್ರ ॥೧॥

ಭಾರ್ಗವಮದಾಪಹ ಭುವನಮೋಹಕ ದೇಹ
ಭಾರಕಾರ್ಮುಕಭಂಗ ಮಂಗಳಾಂಗ
ಇನಕುಲಾರ್ಣವಸೋಮ ತ್ರಿನಯನಮನಃಪ್ರೇಮ
ಜನನಿಲಯ ಸುವಿರಾಮ ದಿವ್ಯನಾಮ ॥೨॥

ಪಾಕಾರಿನುತನಾಮಪರಂಧಾಮರಾಮ
ಸಾಕೇತಪುರಧಾಮ ಕಾಕುತ್ಸ್ಥರಾಮ
ರಾಕೇಂದುನಿಭವದನ ದುರಿತದಮನ
ಶ್ರೀಕಾಂತ ಶೇಷಾದ್ರಿನಿಲಯ ಸದಯ ॥೩॥

--✿✿✿✿✿--

೧೪೦

ಕ್ಷೀರಾಬ್ಧಿಜಾರಮಣ ಕ್ಷೀರಾಂಬುನಿಧಿಶಯನ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಕ್ಷೀರಾಬ್ಧಿಜಾರಮಣ ಕ್ಷೀರಾಂಬುನಿಧಿಶಯನ
ಶ್ರೀರಮಾಮಣಿ ಸದನ ಗರುಡಗಮನ ॥ಪ॥

ನಿಟಿಲಾಕ್ಷನುತನಾಮ ಸಮರಭೀಮ ॥ಅ.ಪ॥

ಕಾಕುತ್ಸ್ಥವಂಶಾಬ್ಧಿ ರಾಕೇಂದು ಗುಣನಿಧಿ
ಪಾಕಾರಿಮುಖದೇವ ನಿಕರಜೀವ ॥೧॥

ಇಂದುಸನ್ನಿಭವದನ ಕುಂದಕುಟ್ಮಲರದನ
ಇಂದೀವರಸುನಯನ ಕನಕವಸನ ॥೨॥

ಕವಿಜನಮನೋಲ್ಲಾಸ ಶಶಿಸುಹಾಸ
ಪವನನಂದನ ಸೇವ್ಯ ದೇವದೇವ ॥೩॥

ಭವಭೀತಿಹರ ಶೇಷಶೈಲನಿಲಯ
ಸುವಿಮಲಯಶಶ್ಚಂದ್ರ ರಾಘವೇಂದ್ರ ॥೪॥

--✿✿✿✿✿--

೧೪೧

ಮಾತಿನೊಳು ಕಡುಜಾಣ ನೀತಿಯೆಂಬುದ ಕಾಣ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಮಾತಿನೊಳು ಕಡುಜಾಣ ನೀತಿಯೆಂಬುದ ಕಾಣ
ಪ್ರೀತಿಯಿಲ್ಲದ ಪ್ರಾಣನಾಥನಮ್ಮ
ಕಪಿಜನಗಳೊಡನಾಡಿ ಚಪಲಚಿತ್ತನುಮಾದ
ಕೃಪೆಯಿಲ್ಲವೆಳ್ಳನಿತು ಕೃಪಣನಕಟ ॥೧॥

ಸ್ತ್ರೀಹತ್ಯ ನರಹತ್ಯ ಬ್ರಹ್ಮಹತ್ಯವಗೈದ
ಸಾಹಸಿಯದೇನೆಂಬೆ ಘನನಿತಂಬೆ
ಪಕ್ಷಪಾತಿಗಳೊಳಗೆ ಈಕ್ಷಿಸಲು ಧರಯೊಳಗೆ
ದಕ್ಷನಿಗೆ ಸರಿಯೆ ಪೇಳೆ ಸಖಿಯೆ ॥೨॥

ಶರವೊಂದು ನುಡಿಯೊಂದರಿಂದ ನಲಿವ
ತಿರುಕ ಹಾರುವರೊಡನೆ ಚರಿಸುತಿರುವ
ಪರಮಸಾತ್ವಿಕ ಮೂರ್ತಿಯೆಂದು ನುಡಿವ
ವರಶೇಷಗಿರಿವಾಸನೆಂದುಮೆರೆವ ॥೩॥

--✿✿✿✿✿--

೧೪೨
ದೃಢಚಿತ್ತ ದೊಳಗೆನ್ನ ಒಡೆಯನೀತಗೆ ಮುನ್ನ
(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ದೃಢಚಿತ್ತದೊಳಗೆನ್ನ ಒಡೆಯನೀತಗೆ ಮುನ್ನ
ಪಡಿಯೆನಿಪರಿನ್ನುಂಟೆ ಪೊಡವಿಯಲ್ಲಿ
ಜನವಾರ್ತೆಯನೆ ಕೇಳಿ ವನಿತೆಯೊಳು ಖತಿತಾಳಿ
ಇನಿತು ಕಾಡಿದ ಚಾಳಿಯೊರೆವೆ ಕೇಳಿ ॥೧॥

ಮಡಿವಳನ ನುಡಿಗಾಗಿ ಕಡುಮೂರ್ಖ ತಾನಾಗಿ
ಅಡವಿಗಟ್ಟುವರೇನೆ ಮಡದಿಯನ್ನೆ
ಧರ್ಮಪತ್ನಿಯುಮಂತು ಪೂರ್ಣಗರ್ಭವನಾಂತ
ಅರ್ಧಾಂಗಿಯನ್ನುಳಿದ ನಿರ್ದಯಾತ್ಮ ॥೨॥

ದಯೆಯೆಂಬುದಿವನಲ್ಲಿ ತೋರದಿಲ್ಲಿ
ಪ್ರಿಯರಾರು ಮತ್ತಿವಗೆ ಧಾತ್ರಿಯಲ್ಲಿ
ಭಯವಿಲ್ಲ ಮಾತಿನೊಳು ನಯವದಿಲ್ಲ
ಜಯಶೇಷಗಿರಿವಾಸನೆನ್ನನಲ್ಲ ॥೩॥

--✿✿✿✿✿--

೧೪೩
ಜನಕನೇನುತೆನ್ನ ಘನವಂತನಿವನೆಂದು
(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಜನಕನೇನೆನುತೆನ್ನ ಘನವಂತನಿವನೆಂದು
ಮನದಂದು ಬಳಿಸಂದು ಕೊಟ್ಟನಿಂದು
ವೇಷವನು ನೋಡಿದೊಡೆ ಋಷಿಯಂದಮಾಗಿಹುದೆ
ಭಾಷೆಯಿಂ ಭಾವೆಯೊಲು ಭಾಸಮಹುದೆ ॥೧॥

ತೃಣದಿ ಶುಕ್ರನ ಕಣ್ಣನಿರಿದ ವರನೆ
ಅಣುರೇಣು ತೃಣಕಾಷ್ಠ ಪೂರ್ಣನಿವನೆ
ಪ್ರಣವ ಪ್ರತಿಪಾದ್ಯನೆನಿಸುವವನೆ
ಫಣಿತಲ್ಪಿ ಶೇಷಾದ್ರಿವಾಸ ತಾನೆ ॥೨॥

೧೪೪

ಧುರಧೀರನಿವನೆಂದು ನೆರೆವೆರೆಯಲೈತಂದು

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಧುರಧೀರನಿವನೆಂದು ನೆರೆವೆರೆಯಲೈತಂದು
ಮರುಳಾದೆ ನಾನಿಂದು ಮುಂದೆ ನಿಂದು
ನಾರ್ವಟ್ಟೆಯುಟ್ಟಿರುವ ಅರಣ್ಯದೊಳಗಲೆವ
ನಾರುಬೇರನೆ ಮೆಲುವ ಅರರೆ ಚೆಲುವ ||೧||

ಜನಪನಂದನನೆನಿಸಿ ಮುನಿಜನರ ತಾವೆರಸಿ
ವನವನದಿ ಸಂಚರಿಸುತಿರುವ ಸಹಿಸಿ
ಲಲನೆಯನು ಕರೆತರಲು ಪಲವು ಕಪಿಗಳನೆರೆದು
ಜಲಧಿಯನು ಬಂಧಿಸಿದನಲಘುಬಲನೆ ||೨||

ಇನಿತು ಸಾಹಸವುಳ್ಳ ಸುಗುಣನಿಧಿಗೆ
ಮನವೊಲಿದು ನಾ ಬಂದು ಮೋಸಪೋಗೆ
ಮಿಣುಕಿ ಫಲವೇನಿನ್ನು ಮಿಂಚಿದುದಕೆ
ಧಣಿಯೆನಗೆ ಶೇಷಾದ್ರಿವರನೆ ಸಾಕೆ ||೩||

--✿✿✿✿✿--

೧೪೫

ಬೇಡಿಕೊಂಬೆ ಹಸೆಗೇಳೆಲೈ

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಬೇಡಿಕೊಂಬೆ ಹಸೆಗೇಳೆಲೈ
ಗಾಡಿಪಂಥ ಮಾಡಬೇಡಲೈ ||ಪ||

ಮಾರುತಿಸೇವ್ಯನೆ ಧೀರದಾತಾರನೆ
ಕೋರಿಭಜಿಪೆ ಬೇಗಬಾರೈ ಸುಂದರ ||೧||

ನಾರಿಯರ್ನಿನ್ನನು ಸಾರಿಕರೆವರೈ
ಧಾರಣಿಜಾತೇಸಹ ಸಾರಿ ಬಾಬಾಬೇಗ ||೨||

ಭವಭಯದೂರನೆ ಭಕ್ತಮಂದಾರನೆ
ಭಾವಜಜನಕನೆ ದೇವಾದಿದೇವನೆ ॥೩॥

ಶೇಷಗಿರೀಶನೆ ದಾಸಜನಾಶ್ರಯನೆ
ವಾಸವವಂದಿತನೆ ಶ್ರೀ ವಾಸುದೇವನೆ ॥೪॥

--✿✿✿✿✿--

೧೪೬
ಬಾರೆಂದು ಹಸೆಗೆ ಕರೆವೆನು

(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಬಾರೆಂದು ಹಸೆಗೆ ಕರೆವೆನು ॥ಪ॥

ಕ್ಷೀರಾಬ್ಧಿಶಯನನೆ ಸಾರಸನಯನನೇಕ್ಷೀರಾಬ್ಧಿಜಾವರ ಮೇರುಗಂಭೀರನೆ
ನೀರಜಭವಪಿತ ಮಾರಹರಾರ್ಚಿತ
ಚಾರುನೀರದಗಾತ್ರ ಪರಮಪವಿತ್ರ ॥ಅ.ಪ.॥

ಧರಣೀಸುರರ ಮೊರೆಗಳನಾಲಿಸಿ
ಧರೆಯೊಳಗವತರಿಸಿ ನರರೂಪಧರಿಸಿ
ಧರಣಿಪ ದಶರಥತರಳನೆಂದೆನಿಸಿ
ಧರೆಯ ಭಾರವನಿಳಿಸಿ ಕರುಣಿಸು ಮನವೆರಸಿ ॥೧॥

ಅಸುರೆ ತಾಟಕಿಯ ಅಸುವನಳಿದು ದುಷ್ಟ
ನಿಶಿಚರರನು ಸದೆದು ಅನುಜನೊಡಗೊಂಡು
ಕುಶಿಕನಂದನನ ಕ್ರತುವನು ತಾ ಕಾಯ್ದು
ಅಸಮಶೂರನೆನಿಸಿ ಅಮರರ ಮನತಣಿಸಿ ॥೨॥

ಶಿಲೆಯ ಶಾಪವಕಳೆದು ಲಲನೆಯ ಪೂಜೆಗೊಲಿದು
ಬಲುಹಿನಿಂದಲೆ ಬಂದು ಹರಧನು ಮುರಿದು
ಲಲನೆ ಜಾನಕಿಯ ನಲವಿನಿಂ ಕೈಪಿಡಿದು
ಬಲುಗರ್ವಿತ ಭಾರ್ಗವ ಮದಮುರಿದೆ ಸಲಹೆನ್ನ ॥೩॥

ಈಶವಿನುತ ಶ್ರೀ ಶೇಷಾಚಲನಿಲಯನೆ
ದಾಸರಮನದೊಳು ವಾಸವಾಗಿಹನೇ
ವಾಸವಾದ್ಯಮರ ಪೋಷಕನೆನಿಸಿಹನೆ
ಭಾಸುರವದನನೆ ಶ್ರೀಸತೀಸದನನೆ ನೀಂ ನಲಿದು ॥೪॥

--✿✿✿✿✿--

೧೪೭
ಮಂಗಳಂ ರಘುರಾಮಗೆ ಜಯಮಂಗಳಂ
(ಶೇಷಗಿರೀಶ / ನಂಜನಗೂಡು ತಿರುಮಲಾಂಬಾ /೧೮೮೭ - ೧೯೮೨)

ಮಂಗಳಂ ರಘುರಾಮಗೆ ಜಯಮಂಗಳಂ ಗುಣಧಾಮಗೆ
ಮಂಗಳಂ ಮದನಾರಿವಂದ್ಯಗೆ ಮಂಗಳಂ ಮನ್ನಾಥಗೆ ॥ಪ॥

ರಾಮಗೆ ನತಕಾಮಗೆ ಘನಶ್ಯಾಮಗೆ ಸುಪ್ರೇಮಗೆ
ಕಾಮಿತಾರ್ಥಪ್ರದಾತಗೆ ವರರಾಮಣೀಯಕ ರೂಪಗೆ ॥೧॥

ಶ್ರೀಶಗೆ ಜಗದೀಶಗೆ ಭಯನಾಶಗೆ ಸರ್ವೇಶಗೆ
ದಾಸಜನಮನೋಲ್ಲಾಸ ಲಕ್ಷ್ಮೀಶಕೇಶವ ಮೂರ್ತಿಗೆ ॥೨॥

ಮಾರುತಾತ್ಮಜಪರಿಸೇವ್ಯಗೆ ನತಪಾರಿಜಾತ ಸಮಾನಗೆ
ವಾರಿಜಾಯತನೇತ್ರ ಶ್ರೀಶೇಷಶೈಲ ನಿವಾಸಗೆ ॥೩॥

--✿✿✿✿✿--

೧೪೮
ಕರುಣಾನಿಧಿ ಶ್ರೀರಾಮ ನಿನ್ನ
(ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ - ೧೯೮೨)

ಕರುಣಾನಿಧಿ ಶ್ರೀರಾಮ ನಿನ್ನ
ಚರಣಸೇವಿಪರಾನತಪ್ರೇಮ ॥ಪ॥

ಕರುಣ ತೋರುತ್ತೆನ್ನ ಪೊರೆ ರಾಮ ನಿನ್ನ
ಸ್ಮರಣೆ ನಿರುತ ನೀಡೆಲೊ ಶ್ರೀರಾಮ ॥ಅ.ಪ.॥

ಆಶ್ರಿತಜನರಿಗೆ ನೀನಲ್ಲದೆ ನಿ
ನ್ನಾಶ್ರಯಗೊಡದಿರೆ ಗತಿ ಕಾಣೆ
ಸ್ತೋತ್ರದಿ ಸ್ತುತಿಸುವೆ ನಿನ್ನಾಣೆ
ಜಗತ್ರಯ ಸಲಹೊ ಕೋದಂಡಪಾಣಿ ॥೧॥

ಭವಭಯಭಂಜನ ಶ್ರೀರಾಮ ಎನ್ನ
ಭಯವ ಬಿಡಿಸೊ ಜಾನಕೀರಾಮ
ಕವಿಗೇಯ ನೀನೆ ಜಗದಭಿರಾಮ ಎನಗೆ
ಜವನ ಬಾಧೆಯ ಬಿಡಿಸೊ ರಘುರಾಮ ॥೨॥

ತಂದೆ ಶ್ರೀ ಶ್ರೀನಿವಾಸ ನೀನೆ ಎನಗೆ
ಬಂದ ಕಷ್ಟದಿ ಸಲಹುವ ನೀನೆ
ಮುಂದೋರಿ ಸಲಹೋ ತಾಯಿ ಗುರು ನೀನೆ
ಇನ್ನು ಸಂದೇಹವಿಲ್ಲ ಕೇಳೆಲೊ ರಾಮ ॥೩॥

--✿✿✿✿✿--

೧೪೯
ರಘುರಾಮಗೆ ಬೆಳಗಿರೆ ಬೇಗ ಆರತಿ

(ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ – ೧೯೮೨)

ರಘುರಾಮನಿಗೆ ಬೆಳಗಿರೆ ಬೇಗ ಆರತಿ ॥ಪ॥

ದಶರಥಪುತ್ರಗೆ ಪಶುಪತಿಮಿತ್ರಗೆ
ಋಷಿಗಳ್ಯಾಗವ ಕಾಯ್ದವಗೆ
ಶಶಿಮುಖಿ ಅಹಲ್ಯೆ ಶಾಪವ ಕಳೆದ
ಅತುಳಮಹಿಮ ಶ್ರೀಹರಿಗೆ ॥೧॥

ಶಿವನ ಧನುವ ಮುರಿದವನಿಜೆಯಳ ತಂದು
ಜವದಿ ಪರಶುರಾಮನಿಗೆ
ತವಕದಿ ಗರ್ವವ ಮುರಿದವನೀಶಗೆ
ಕಮಲಾಕ್ಷಿಯರೀಗ ಬೇಗಾ ॥೨॥

ಅನುಜನವಡಗೂಡಿ ವನಿತೆ ಸಹಿತಲೀ
ವನಕೆ ಪೊರಟು ಆಂಜನೇಯ
ತನುಜನಗೂಡಿದನುಜನ ಮುರಿದ
ಘನದ ಶ್ರೀ ಶ್ರೀನಿವಾಸನಿಗೆ ॥೩॥

--✿✿✿✿✿--

೧೫೦

ರಾಮ ನಿನ್ನಯ ಚರಿತೆ ರಘು

(ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ - ೧೯೮೨)

ರಾಮ ನಿನ್ನಯ ಚರಿತೆ ರಘು
ರಾಮ ನಿನ್ನಯ ಚರಿತೆ ॥ಪ॥

ಪ್ರೇಮದಿ ಭಜಿಸಲು
ಕ್ಷೇಮವಹುದು ರಘುರಾಮ ॥ಅ.ಪ.॥

ದಶರಥಪುತ್ರ ಕೌಶಿಕನ್ಯಾಗಕರ್ತ
ಪಶುಪತಿಧನುಭರ್ಂಗ ಜಾನಕೀಪತಿ ರಘು ॥೧॥

ಪರಶುರಾಮನ ಗರ್ವಮುರಿದ
ವರಮಾತೆವಾಕ್ಯವ ಸಲಿಸೆ ಕಾನನಕೈದ ರಘುರಾಮ ॥೨॥

ದಶಶಿರ ಸೀತೆಯ ಕದ್ದೊಯ್ಯಲು ಅರಸುತ
ಭಾರತಿಂಗುಪತಿ ಹನುಮಂಗುಂಗುರವಿತ್ತ ಧೀರ ॥೩॥

ಶರಧಿಯ ಲಂಘಿಸಿ ವರಹನುಮನು ತನ್ನ
ಕರದಲಿಯುದ ವರಜಾನಕಿಗಿತ್ತ ॥೪॥

ಸತಿ ಚೂಡಾಮಣಿ ಮಾರುತಿಗೊಡೆ ಸೇತುವೆ
ಅತಿಶಯದಲಿ ಬಂಧಿಸಿ ದಶಶಿರನಳಿದಾ ರಘುರಾಮ ॥೫॥

ನಿನ್ನಡಿ ನೆನೆವರೆ ಧನ್ಯರು ನಿತ್ಯ
ಸನ್ನುತ ಚರಿತ ಶ್ರೀಶ್ರೀನಿವಾಸ ರಘುರಾಮ ॥೬॥

--✿✿✿✿✿--

೧೫೧

ಲಾಲಿ ರಘುಕುಲತಿಲಕ ಲಾವಣ್ಯ ಗುಣಧಾಮ

(ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ - ೧೯೮೨)

ಲಾಲಿ ರಘುಕುಲತಿಲಕ ಲಾವಣ್ಯ ಗುಣಧಾಮ ॥ಪ॥

ಲಾಲಿ ಸುರವರವಿನುತ ಲಾಲಿ ಸುಜನರಪಾಲ ॥ಅ.ಪ.॥

ಅಸುರಕುಲ ಬಾಧಿಸಲು ವಸುದೇವಸುತ ರಕ್ಷ
ಹಸನಾಗಿ ಪ್ರಾರ್ಥಿಸಲು ನಿನ್ನ ದೇವತೆಗಳಾಗ
ವಸುಧೆಭಾರವ ಇಳುಹೆ ಶಿಶುವಾಗಿ ದಶರಥಗೆ
ದಶದಿಗ್ವಲಯ ಬೆಳಗೆ ದಶಮ ಬಲರಾಮ ॥೧॥

ಶಿವನ ಧನುವನು ಮುರಿಯೆ ಅವನಿಜೆಯು ಹಾರವನು
ಜವದಿ ಹಾಕಲು ಪರಶುರಾಮನ ಗರ್ವ
ತವಕದಲಿ ಮುರಿದಯೋಧ್ಯೆಯ ಪಾವನ ಮಾಡೆಂ
ದವನಿ ಜಾಲವು ಕೂಗೆ ಸವಿಗಾನದಿಂದ ॥೨॥

ಮಾತೆ ವಾಕ್ಯವ ಕೇಳಿ ಸೀತೆ ಸಹಿತಲೆ ವನಕೆ
ಆತ ಲಕ್ಷ್ಮಣನೊಡನೆನೀತನೀ ತೆರಳೆ
ದೂತ ರಾವಣನಹತವಾತಸುತದೂತ ಸಹ
ಖ್ಯಾತಿಲಯೋಧ್ಯೆಗೆ ಬಂದ ಶ್ರೀನಾಥ ಶ್ರೀ ಶ್ರೀನಿವಾಸಾ ಲಾಲಿ ॥೩॥

--✿✿✿✿✿--

೧೫೨

ನೆನೆ ಮನವನನುದಿನ ಹನುಮನೀಶನ

(ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ - ೧೯೮೨)

ನೆನೆಮನವನುದಿನ ಹನುಮನೀಶನ
ಕನಸಿನಲಿ ತನುಸುಖವನು ಬಯಸದೆ ನೀ ॥ಪ॥

ಮನಸಿಜಪಿತನನೆ ನೆನೆನೆನೆದ್ಧಿಗ್ಗುತ
ನಿನ ಹೃದಯದಲ್ಲರಿಯನು ನಿಲಿಸುತಲೆ
ತನುಮನವರ್ಪಿಸೆ ಜನುಮಜನುಮದಘ
ವನು ಕಳೆವನು ರಾನನುಮಾನವೇಕೆ ॥೧॥

ಆರು ಅರಿಯದ ತೋರಿ ಭಕ್ತಿಯೇ
ಭಾರಿ ಪಾಶದಿ ಕಟ್ಟಿಹ ಹನುಮ
ವಾರಿಜನಾಭನು ಹಿಗ್ಗಿ ನಿಲುತಲೆ
ಚಾರುಸೇವೆಗೆ ಬಹೆ ಎನೆ ರಾಮನ ನೆನೆ ॥೨॥

ಕಲ್ಲಾಗಿದ್ದ ಅಹಲ್ಯೆಯ ರಾಮನು
ನಲ್ಲೆಯ ಮಾಡಿದನರಿಯೆಯ ಮನವೆ
ಚೆಲ್ಲುತ ಕರುಣವ ಶಬರಿಯ ಎಂಜಲನುಂಡ ರಮಾ
ವಲ್ಲಭ ಶ್ರೀಶ್ರೀನಿವಾಸ ಕರುಣಿಯೊ ನೆನೆ ॥೩॥

--✿✿✿✿✿--

೧೫೩

ನವರತ್ನ ಮಂಟಪದಿ ಮೆರೆವೊ ಸುಖಾಸನಕೆ

(ಶ್ರೀ ಶ್ರೀನಿವಾಸ / ಸರಸ್ವತೀಬಾಯಿ / ೧೯೦೦ - ೧೯೮೨)

ನವರತ್ನವ ಮಂಟಪದಿ ಮೆರೆವೊ ಸುಖಾಸನಕೆ ಈಗ
ನವಮೋಹನ ರಘುರಾಮನೆ ನೀನು ಬಾ ಬೇಗ ॥ಪ॥

ದಶರಥನುದರದಿ ಜನಿಸಿ
ಅಸುರ ತಾಟಕಿಯನು ಸಂಹರಿಸಿ ೧೫೬

ಋಷಿಗಳ್ಯಾಗವ ಕಾಯ್ದುದು ನೀನು
ಋಷಿಪತ್ನಿಯರನು ಉದ್ಧರಿಸೀ ||೧||

ಪತಿವ್ರತೆಯೆನಿಸಿದ ಅತುಳ
ಮಹಿಮ ಶ್ರೀರಾಮ
ಬಾಬೇಗ ಅತುಳಮಹಿಮ
ಶ್ರೀರಾಮ ಬಾ ಬೇಗ ||೨||

ಶಿವಧನುವೆತ್ತಿದ ಧೀರ ಸೀತಾದೇವಿಯ ಕರವನೆಪಿಡಿವಾ
ಜವದಿ ಪರಶುರಾಮನ ಗರ್ವವನು
ತವಕದಿ ಮುರಿದಯೋಧ್ಯೆಯಾಳಿದ
ಶ್ರೀ ಶ್ರೀನಿವಾಸನೆ ನೀನು ಬಾ ಬೇಗ ಸುಖಾಸನಕೆ ||೩||

--✿✿✿✿✿--

೧೫೪
ಎಲ್ಲ್ಯಾಡಿಲ್ಲಿಗೆ ಬಂದನೆ ಈತನು ಕೌಸಲಲ್ಯಾದೇವಿಯ
(ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ – ೧೯೦೩)

ಎಲ್ಲ್ಯಾಡಿಲ್ಲಿಗೆ ಬಂದನೆ ಈತನು ಕೌ
ಸಲ್ಯಾದೇವಿಯ ಕಂದನೆ
ಎಲ್ಲ್ಯಾಡಿಲ್ಲಿಗೆ ಬಂದ ಚೆಲ್ವೆ ಕೌಸಲ್ಯೆ ಕಂದ
ಫುಲ್ಲಲೋಚನೆ ಜಾನಕಿ ಲಕ್ಷ್ಮಣರನೆ ಕೂಡಿ ||ಪ||

ಸನಕಾದಿ ಸುರರ್ವಂದಿತ ಮಾಣಿಕ್ಯ ರತ್ನ ಪದಕಪಚ್ಚದಿಭೂಷಿತ
ಜನಕ ಜಾಹ್ನವಿ ಜಾನಕಿರಾಮರಿಬ್ಬರು
ಜನಕ ಬಂಧ್ವಾರಿಧಿ ಕಟ್ಟಿ ವಾನರನ ಕೂಡಲ್ಯಾಡಿಲ್ಲಿಗೆ ಬಂದನೆ ||೧||

ಕಂಡು ಶೂರ್ಪಣಖಿಯ ನಾಸಿಕಭಂಗ ಮಾಡಿ ಮಾರೀಚನ್ವಧೆ
ಮಂಡೋದರೀಪತಿ ಮರ್ದಕನಾಗಿದ್ದ
ಬಂದಯೋಧ್ಯವನಾಳಿ ಭಕ್ತರ ಸಲಹೊ ದಾತ್ಯೆಲ್ಲ್ಯಾಡಿಲ್ಲಿಗೆ ಬಂದನೆ ||೨||

ಬಿಲ್ಲುಪಿಡಿದು ನಿಂತನೆ ಭೀಮೇಶಕೃಷ್ಣ ಬಲ್ಲಿದ ಬಲವಂತನೆ
ಕಲ್ಲ್ಹೆಣ್ಣು ಮಾಡಿದ ಕರುಣಕೃಪಾಳೋ ಕೈ-
ವಲ್ಯದಾಯಕ ಸೀತಾವಲ್ಲಭೆಂದೆನಿಸುವೋನೆಲ್ಲ್ಯಾಡಿಲ್ಲಿಗೆ ಬಂದನೆ ॥೩॥

--✿✿✿✿✿--

೧೫೫

ಕಂದನೆಂದೆನಿಸಿದ ಕೌಸಲ್ಯಾದೇವಿಗೆ ರಾಮ

(ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ - ೧೯೦೩)

ಕಂದನೆಂದೆನಿಸಿದ ಕೌಸಲ್ಯಾದೇವಿಗೆ ರಾಮ ಎನಬಾರದೆ
ಇಂದಿರಾಪತಿ ರಾಮಚಂದ್ರಗೆ ಶ್ರೀರಘುರಾಮ ಎನಬಾರದೆ ॥೧॥

ಶಿಶುವಾಗಿ ಅವತಾರ ಮಾಡಿದ ದಶರಥನಲಿ ರಾಮ ಎನಬಾರದೆ
ಋಷಿಯಜ್ಞ ಸಲಹಿ ರಕ್ಕಸರನೆ ಕೊಂದ ಶ್ರೀರಾಮ ಎನಬಾರದೆ ॥೨॥

ನೀಟಾಗಿ ನೆನೆ ಭಾನುಕೋಟಿತೇಜ ಶ್ರೀರಾಮ ಎನಬಾರದೆ
ಸಾತ್ವಿಕದೈವವೆ ತಾಟಕಾಂತಕ ಶ್ರೀರಾಮ ಎನಬಾರದೆ ॥೩॥

ಪಾದನಖವು ಸೋಕಿ ಪಾದನಾಶನವಾಗೆ ರಾಮ ಎನಬಾರದೆ
ಶ್ರೀಪತಿ ಕರುಣದಿ ಶಿಲೆಯು ಸ್ತ್ರೀಯಾಗಲು ರಾಮ ಎನಬಾರದೆ ॥೪॥

ಸಕಲಸದ್ಗುಣ ಪೋಗಿ ಮಿಥಿಲಾಪಟ್ಟಣದಿ ರಾಮ ಎನಬಾರದೆ
ತ್ರಿಪುರಸಂಹಾರ ತ್ರಿನೇತ್ರನ ಧನುವೆತ್ತಿ ರಾಮ ಎನಬಾರದೆ ॥೫॥

ಚೆಲ್ವೆ ಜಾನಕಿ ಮಲ್ಲಿಗೆಯ ವನಮಾಲೆಯು ರಾಮ ಎನಬಾರದೆ
ವಲ್ಲಭಗ್ಹಾಕಲು ಫುಲ್ಲಲೋಚನೆ ಸೀತಾರಾಮ ಎನಬಾರದೆ ॥೬॥

ಮಂಗಳಮಹಿಮೆ ಸೀತಾಂಗನೆ ಕೊರಳಿಗೆ ರಾಮ ಎನಬಾರದೆ
ಮಾಂಗಲ್ಯಬನ್ಧನ ಮಾಡಿದ ಮಹಾತ್ಮನು ರಾಮ ಎನಬಾರದೆ ॥೭॥

ಜಗದೇಕ ಸುಂದರಿ ಜಾನಕಿಯನೆ ಗೆದ್ದ ರಾಮ ಎನಬಾರದೆ
ಜಗದೀಶ ಜನಕಗೆ ಜಾಮಾತನೆನಿಸಿದೆ ರಾಮ ಎನಬಾರದೆ ॥೮॥

ಮುದ್ದುಜಾನಕಿ ಕೂಡಿ ಅಯೋಧ್ಯಕೆ ಬರುತಿರೆ ರಾಮ ಎನಬಾರದೆ
ಮಧ್ಯಮಾರ್ಗದಿ ಬಂದಿದ್ದನು ಭಾರ್ಗವ ರಾಮ ಎನಬಾರದೆ ॥೯॥

ತನ್ನ ತಾನೇ ಗೆದ್ದು ಧನ್ಯನೆಂದೆನಿಸಿದಿ ರಾಮ ಎನಬಾರದೆ
ಬ್ರಹ್ಮ ಶಂಕರರಿಂದಿನ್ನು ಉತ್ತಮನಾದ ಎನಬಾರದೆ ॥೧೦॥

ಪಟ್ಟಗಟ್ಟಲು ಪರಮೋತ್ಸವಕಾಲಕ್ಕೆ ರಾಮ ಎನಬಾರದೆ
ದುಷ್ಟ ಕೈಕೆಯ ನಿಷ್ಠೂರ್ರವಚನವ ಕೇಳಿದ ರಾಮ ಎನಬಾರದೆ ॥೧೧॥

ಆ ಲಕ್ಷುಮಿಯ ಮಾತಲಕ್ಷ್ಯವ ಮಾಡದೆ ರಾಮಎನಬಾರದೆ
ಲಕ್ಷ್ಮಣ ಲಕ್ಷ್ಮಿ ಕೂಡ್ವನವಾಸ ತಿರುಗಿದ ರಾಮ ಎನಬಾರದೆ ॥೧೨॥

ಸೋಸಿಲಿಂದಲಿ ಸತಿ ಆದೇನೆಂದುಸುರೆಯ ರಾಮಎನಬಾರದೆ
ನಾಶರಹಿತ ಕಿವಿನಾಸಿಕನಳಿದ ಶ್ರೀ ರಾಮ ಎನಬಾರದೆ ॥೧೩॥

ದಂಡಕಾರಣ್ಯದಿ ಕಂಡು ಮಾರೀಚನ್ನ ರಾಮ ಎನಬಾರದೆ
ಹಿಂದ್ಹೋಗೆ ರಾಘವ ಬಂದ ರಾವಣನಲ್ಲೆ ರಾಮಎನಬಾರದೆ ॥೧೪॥

ಘಾತುಕ ರಾವಣ ಜಗನ್ಮಾತೆಯೊಯ್ಯಲು ರಾಮ ಎನಬಾರದೆ
ಸೋತು ಜಟಾಯು ಯುದ್ಧವಮಾಡಿ ತಾ ಬೀಳಲು
ರಾಮಯೆನಬಾರದೆ ॥೧೫॥

ಒಲಿದು ಸುಗ್ರೀವಗೆ ವಾಲಿವಧೆಯ ಮಾಡಿ ರಾಮ ಎನಬಾರದೆ
ವಾನರಗಳ ಕೂಡಿ ವಾರಿಧಿಕಟ್ಟಿದ ಶ್ರೀರಾಮ ಎನಬಾರದೆ ॥೧೬॥

ಲೋಕಮಾತೆಯ ಲಂಕಾನಾಥ ತಾ ಒಯ್ದಾಗ ರಾಮ ಎನಬಾರದೆ
ಸೀತಾಕೃತಿಯನಿಟ್ಟಶೋಕವನದೊಳು ರಾಮ ಎನಬಾರದೆ ॥೧೭॥

ಮಂಡೋದರಿಯ ಗಂಡನ್ನ ದಶಶಿರಗಳ ರಾಮ ಎನಬಾರದೆ
ಚೆಂಡನಾಡಿದ ಕೋದಂಡಪಾಣಿಯ ಶ್ರೀರಾಮ ಎನಬಾರದೆ ॥೧೮॥

ಪ್ರೀತಿಂದ್ವಿಭೀಷಣಗೆ ಪಟ್ಟವಗಟ್ಟಿ ರಾಮ ಎನಬಾರದೆ
ಸೀತಾಸಮೇತನಾಗಿ ಸಿಂಧುದಾಟಿದ ರಾಮ ಎನಬಾರದೆ ॥೧೯॥

ಆದಿಲಕ್ಷುಮಿ ಕೂಡಿ ಹೋದನಯೋಧ್ಯಕೆ ರಾಮ ಎನಬಾರದೆ
ಶ್ರೀದೇವಿಸಹಿತ ಪಟ್ಟಣ ಹೊಕ್ಕ ಪಟ್ಟಾಭಿರಾಮ ಎನಬಾರದೆ ॥೨೦॥

ಭರತ ಸುಮಿತ್ರ ಕೌಸಲ್ಯಗೆ ಸುಖವಿಟ್ಟ ರಾಮ ಎನಬಾರದೆ
ಮುಕ್ತಿದಾಯಕ ಮುಂದೆ ಬಿಡದೆ ಕಾಪಾಡುವ ರಾಮ ಎನಬಾರದೆ ॥೨೧॥

ಪತ್ನಿ ವಾರ್ತೆಯ ತಂದ ಪವನಸುತೆಗೆ ಒಲಿದ ರಾಮ ಎನಬಾರದೆ
ಸತ್ಯಲೋಕದ ಆಧಿಪತ್ಯವ ಕೊಟ್ಟ ಶ್ರೀ ರಾಮ ಎನಬಾರದೆ ॥೨೨॥

ರಾಮರಾಮನುಎಂದುಕರೆಯೆಭಕ್ತಿಯನೋಡಿರಾಮಎನಬಾರದೆ
ಪ್ರೇಮದಿ ತನ್ನ ನಿಜಧಾಮವ ಕೊಡುವೋನು ರಾಮ ಎನಬಾರದೆ ॥೨೩॥

ಅರಸಾಗಯೋಧ್ಯವನಾಳಿ ಯದುಕುಲದಲಿ ರಾಮ ಎನಬಾರದೆ
ಹರುಷದಿ ಭೀಮೇಶ ಕೃಷ್ಣನಾಗ್ಯುದಿಸಿದ ರಾಮ ಎನಬಾರದೆ ॥೨೪॥

--✿✿✿✿✿--

೧೫೬
ನರಸಖ ನಾರಾಯಣಕೆರೆ ಪುರವಾಸ

(ಭೀಮೇಶಕೃಷ್ಣ / ಹರಪನಳ್ಳಿ ಭೀಮವ್ವ / ೧೮೨೩ - ೧೯೦೩)

ನರಸಖ ನಾರಾಯಣಪುರಕೆರೆವಾಸ
ಕರದಿ ಪಿಡಿದು ಎನ್ನ ಕರಿ ಕಮಲೇಶ ॥ಪ॥

ಗರುಡಾರೂಢನು ಗಜವರದ ವೈಕುಂಠ
ಕೊಡುವ ಪಾಲಿಸಿ ಪಾಂಡವರ ಮನೆ ಭಂಟ ॥೧॥

ಪಕ್ಷಿವಾಹನ ರಾಕ್ಷಸಾರಿ ರಾವಣನ
ಶಿಕ್ಷಿಸಿ ವಿಭೀಷಣವ ರಕ್ಷಿಸಿದ ರಾಮ ॥೨॥

ವಿನತೆಸುತನ ಏರಿ ಘನತರುತ್ಸವದಿ
ಸವರಿದಿ ಸುರವಂದ್ಯ ಸುಜನಕ್ಕಾನಂದ ॥೩॥

ಹಕ್ಕಿಯ ಪಕ್ಕದಲ್ಲ್ಯರ್ಕಕೋಟಿತೇಜ ಜಾ-
ನಕ್ಕಿ ಸಹಿತಯೋಧ್ಯನಾಳುವ ರಾಮ ॥೪॥

ನಗಧರ ಖಗನ್ಹೆಗಲೇರಿ ಉಲ್ಲಾಸ
ನಗುವ ಭೀಮೇಶ ಕೃಷ್ಣ ಬರುವ ಜಗದೀಶ ॥೫॥

--✿✿✿✿✿--

೧೫೭
ರಾಮರಾಮ ಶ್ರೀರಘುರಾಮ ನೀಲಮೇಘ
(ಭೀಮೇಶಕೃಷ್ಣ / ಹರಪನಹಳ್ಳಿ ಭೀಮವ್ವ / ೧೮೨೩ - ೧೯೦೩)

ರಾಮ ರಾಮ ಶ್ರೀ ರಘುರಾಮ ನೀಲಮೇಘ-
ಶ್ಯಾಮ ನಿಸ್ಸೀಮ ಕಾಮಿತಾರ್ಥವಕರೆದತಿ-
ಪ್ರೇಮದಿಂದ ಪಾಲಿಸುವುದು ನಿನ್ನ ನಾಮ ॥ಪ॥

ಕಲ್ಲೋದ್ಧಾರಕ ಕರುಣಾಳು ರಾಮ
ಬಿಲ್ಲನೆತ್ತಿದ್ದ ಬಿರುದಾತ ರಾಮ
ಸೊಲ್ಲು ಸೊಲ್ಲಿಗಿರಲು ಹರಿನಾಮ
ಚೆಲ್ಲ್ಯಾಡುವ ದಯ ಅವರಲ್ಲಿ ಪ್ರೇಮ ॥೧॥

ಧೀರಪುರುಷನೆ ದಿಗ್ವಿಜಯ ರಾಮ
ವಾರಿಧಿಯ ಕಟ್ಟಿದ್ವನಜಾಕ್ಷ ರಾಮ
ಕ್ರೂರರಾಕ್ಷಸರನು ಕೊಂದು ಲಂಕಾ
ಸೂರೆಯನು ಮಾಡಿದಂಥ ನಿಸ್ಸೀಮ ॥೨॥

ದುಷ್ಟರಾವಣಶತ್ರು ಶ್ರೀರಾಮ
ಹುಟ್ಟಿ ಭಾನುವಂಶದಿ ಸೀತಾರಾಮ
ಮುಟ್ಟಿಭಜಿಸೆ ಸಜ್ಜನರಿಗೆ ಭೀಮೇಶ-
ಕೃಷ್ಣ ಕರೆದು ಕೊಡುವ ತನ್ನ ಧಾಮ ॥೩॥

೧೫೮

ಜಯ ಜನಕಜಾಪತೇ ರಾಮಾ ಜಯ

(ಶ್ರೀದವಿಠಲ / ದಾಸಪ್ಪ / ೧೭೪೦ - ೧೮೨೦)

ಜಯ ಜನಕಜಾಪತೇ ರಾಮಾ ಜಯ ॥ಪ॥

ಜನಕಜಾಪತೇ ಜಲದಶ್ಯಾಮಾ
ಜಯರಘುವಂಶಲಲಾಮ ॥ಅ.ಪ॥

ಮದನಜನಕ ಮಧುಕೈಟಭಭೀಮ
ಮದನಬಿಂಬಾರ್ಚಿತ ಕಾಮಾ ॥೧॥

ರಾಮಚಂದ್ರ ರಘುವೀರ ಜಾನಕೀರಾಮ
ರಾವಣವೈರಿ ಶ್ರೀರಾಮ ॥೨॥

ಸಾಮಜವರದ ವಿನುತಸೋಮ
ಶ್ರೀದವಿಠಲ ಗುಣಧಾಮ ॥೩॥

--✿✿✿✿✿--

೧೫೯

ನೋಡು ನೋಡೆಂಥಾ ರಘುವೀರ

(ಶ್ರೀದವಿಠಲ / ದಾಸಪ್ಪ / ೧೭೪೦ - ೧೮೨೦)

ನೋಡು ನೋಡೆಂಥಾ ರಘುವೀರ ದೀನೋದ್ಧಾರ ॥ಪ॥

ತನುಮನಧನಗಳ ತನಗೊಪ್ಪಿಸದೆ
ನೆನೆವ ಮನುಜರಿಗೆ ದೂರಾದೂರಾ ॥೧॥

ಸೇರಿದ ಸುಜನರ ಸೂರುವ ದುರುಳರ
ಬೇರಿಗೆರೆವ ಬಿಸಿನೀರಾ ನೀರಾ ॥೨॥

ಶ್ರೀದವಿಠಲ ನಿಜಪಾದಾಶ್ರಿತರಪ-
ರಾಧವ ಮನಸಿಗೆ ತಾರಾ ತಾರಾ ॥೩॥

೧೬೦

ದಾಶರಥೇ ದಯಮಾಡೋ ನಿನ್ನ

(ಶ್ರೀದವಿಠಲ / ದಾಸಪ್ಪ / ೧೭೪೦ - ೧೮೨೦)

ದಾಶರಥೇ ದಯಮಾಡೊ ನಿನ್ನ
ದಾಸರದಾಸನ ನೋಡೋ ॥ಪ॥

ನೀರಜಾಕ್ಷ ನಿಜಮಾಯಾ ಮಮತೆ ಸಂ-
ಸಾರಶರಧಿಯೊಳು ಬಿದ್ದು
ಪಾರಗಾಣದೆ ಸರಿದುಪೋಗುವೆನು
ತಾರಕ ನೀನೆನಗಿದ್ದು ಹರಿ ಹರಿ ॥೧॥

ತುಂಬಿದಬಂಡಿಗೆ ಮೊರ ಭಾರವೆ ಎನ-
ಗಿಂಬಿಲ್ಲವೆ ನಿನ್ನಲಿ
ನಂಬಿದಭಕ್ತರ ಸಲಹುವ ವಿಶ್ವಕು-
ಟುಂಬಿ ಎನಿಸಿಕೊಳುವಲ್ಲಿ ಹರಿ ॥೨॥

ಬಲ್ಲಿದರೊಳು ಬಡವರಿಗಾಶ್ರಯ ನೀ
ಬಲ್ಲೆ ಮತ್ತೆ ಎನಗೀಗ
ಎಲ್ಲಿದ್ದರ ಶ್ರೀದವಿಠಲ ಬಿಡ
ದಲ್ಲೊ ನಿನ್ನ ದಯ ಬೇಗ ॥೩॥

--✿✿✿✿✿--

೧೬೧

ರಘುರಾಮನ ಪಾದವ ಹಿಡಿ ಹಿಡೀ

(ಶ್ರೀದವಿಠಲ / ದಾಸಪ್ಪ / ೧೭೪೦ - ೧೮೨೦)

ರಘುರಾಮನ ಪಾದವ ಹಿಡಿಹಿಡೀ ॥ಪ॥

ಕಾಮ ಕ್ರೋಧ ಮದ ಮತ್ಸರಗಳೆಂಬೋ
ದುರಿತವ ಬ್ಯಾಗನೆ ಹೊಡಿ ಹೊಡೀ ॥೧॥

ಹೆಣ್ಣು ಹೊನ್ನು ಮಣ್ಣು ಮೂರರಾಶೆಯ ಮಾಡಿದೆ
ಅದರೊಳಗೇನಿದೆ ಹುಡಿ ಹುಡೀ ॥೨॥

ಶ್ರೀದವಿಠಲನ ಪಾದಸ್ಮರಣೆಯ
ಮರೆಯದೆ ಬೇಗನೆ ನುಡಿ ನುಡೀ ॥೩॥

--✿✿✿✿✿--

೧೬೨

ರಾಮಚಂದ್ರ ನೀನೇ ಪಾಲಿಸೋ

(ಶ್ರೀದವಿಠಲ / ದಾಸಪ್ಪ / ೧೭೪೦ - ೧೮೨೦)

ರಾಮಚಂದ್ರ ನೀನೇ ಪಾಲಿಸೊ ಸರೋಜನಾಭ
ಸಾಧುಸಂಗ ಶೀಘ್ರಕೂಡಿಸೊ ॥ಪ॥

ಎಷ್ಟುದಿನ ಕಷ್ಟಪಡುವದೋ ಈ ಭವದೊಳು
ಈಸಲಾರೆನಯ್ಯ ಹರಿಯೇ
ಇಷ್ಟುದಿನ ಇದ್ದಂತೆ ಇರಲಾರೆನೆಂದು ಕರವ
ಮುಟ್ಟಿ ಮುಗಿದು ಬೇಡಿಕೊಂಬೆ ಮುರಾರಿ ಕೃಷ್ಣ ನೀನೇಕಾಯೋ ॥೧॥

ಹರಿಹರರು ಸಮಾನರೆನ್ನದಾ ಈ ಸಜ್ಜನರಾ
ಸಂಗದಿಂದ ಹೀನಾ ನಾನಾದೆ
ಇನ್ನುಮ್ಯಾಲೆ ಇಲ್ಲವಯ್ಯ ಸೃಷ್ಟಿಗಧಿಕ ಶ್ರೀನಿವಾಸಾ
ಇನ್ನು ನಿನ್ನ ಸ್ಮರಣೆಯಿಂದ ಇರುವೆನಯ್ಯ ಮುಕುಂದ ॥೨॥

ಪೃಥ್ವಿಯಲ್ಲಿ ಪುಟ್ಟಿದಾ ಮೊದಲು ನಿನ್ನಾ ವೃತ್ತಾಂತ
ಒಂದುದಿನ ಮಾಡಲಿಲ್ಲವೋ
ಎಂದು ಎನ್ನ ಮ್ಯಾಲೆ ಕ್ರೂರದೃಷ್ಟಿಯಿಂದಾ ನೋಡಾದೀರು
ವಾಸುದೇವ ವೈಕುಂಠವಾಸ ಲಕ್ಷುಮೀರಮಣ ॥೩॥

ನಿತ್ಯದಲ್ಲಿ ವಿಪ್ರರಾ ವೃಂದಾದೊಳಗೆ ನಾ ಆ-
ಸಕ್ತನಾಗಿ ಇರುವೆ ಮುಕುಂದಾ

ಎಂಥ ಪಾಪಿ ಎಂದು ಉದಾಸೀನಮಾಡಿ ನೋಡಬೇಡ
ನಿನ್ನ ಕಂದಾನೆಂದು ತಿಳಿದು ಪಾಲಿಸಯ್ಯ ನಾರಾಯಣ ॥೪॥

ಹನುಮ ಭೀಮ ಮಧ್ವೇಶಾರಿಂದಾ ಸೇವಿತ ಪ್ರಿಯಾ
ಶಾಂತಮೂರ್ತಿ ಶ್ಯಾಮವರ್ಣನೇ
ಶ್ರೀದವಿಠಲೇಶಾ ನಿನ್ನಾ ದಾಸನೆಂದು ಪಾಲಿಸೆನ್ನ
ಸಾರಿ ಬೇಡಿಕೊಂಬೆನಯ್ಯ ರಾಮಚಂದ್ರ ರಾವಣಾಚಾರಿ ॥೫॥

--✿✿✿✿✿--

೧೬೩

ನೋಡಿರಯ್ಯ ಶ್ರೀರಾಮನ ಮೂರ್ತಿಯ

(ಸಿರಿವತ್ಸಾಂಕಿತ / ಚಿಕ್ಕೋಡಿಆಚಾರ್ಯ / ೧೯ ಶ ಅಂತ್ಯ - ೨೦ಶ ಆದಿ)

ನೋಡಿರಯ್ಯ ಶ್ರೀರಾಮನ ಮೂರ್ತಿಯ
ಪಾಡಿರೊ ಮಹಿಮೆಯನು ॥ಪ॥

ಅಗಣಿತಮಹಿಮನು ತ್ರಿಗುಣವರ್ಜಿತನು
ಸುಗುಣೇಂದ್ರತೀರ್ಥರಿಂದ ಬಗೆಬಗೆ ಪೂಜೆಗೊಂಬ ॥೧॥

ಸಂಜೀವವನು ತಂದ ಅಂಜನಸುತನಯ್ಯ
ನಂಜನಗೂಡೊಳಿಪ್ಪ ಕಂಜಾಕ್ಷಕರುಣಿಯ ॥೨॥

ವಾರಿಜ ಭವಪಿತ ಮಾರುತ ಗತಿಪ್ರಿಯ
ವಾರಿಧಿಬಂಧಕ ಶ್ರೀರಮಾಧವನನ್ನು ಮಂಗಳಪುರದೊಳು ॥೩॥

ಮಂಗಳವಾರದಿ ಮಂಗಳದಿ ಮೆರೆದನಂಗನಪಿತನನು ವರ
ರಾಘವೇಂದ್ರರಕರುಣಾಗ್ರೇಸರಶ್ರೀವತ್ಸಾಂಕಿತನಾದಅರವಿಂದನನು ॥೪॥

--✿✿✿✿✿--

೧೬೪

ರಾಮ ರಕ್ಷಿಸೋ ಸೀತಾರಾಮ ಪಾಲಿಸೋ

(ಸಿರಿವತ್ಸಾಂಕಿತ / ಚಿಕ್ಕೋಡಿಆಚಾರ್ಯ / ೧೯ ಶ ಅಂತ್ಯ - ೨೦ಶ ಆದಿ)

ರಾಮ ರಕ್ಷಿಸೋ ಸೀತಾರಾಮ ಪಾಲಿಸೋ ॥ಪ॥

ಕಾಮನಪಿತನಿಸ್ಸೀಮ ಸಾಹಸಗುಣಧಾಮ ಮ-
ಹಾತ್ಮ ಸುಧಾಮರಮಣನೆ ॥ಅ.ಪ॥

ದಶರಥ ಪ್ರಥಮಪುತ್ರ ತ್ರಿದಶಸ್ತುತಿಗೆ ಪಾತ್ರ
ಕುಶಲವರು ನಿನ್ನ ಹಸುಮಕ್ಕಳು ಪೂರ್ಣ
ಶಶಿಮುಖಿ ಸೀತೆ ನಿನ್ನ ವಶವಾದವಳು ॥೧॥

ಕೋಸಲಾಧಿಪನೊ ಹೇ ದೇವ ನೀ
ಕೌಸಲ್ಯಜಠರಜನೊ ಶೇಷನ ಪೂರ್ವಜ
ನಾಶರಹಿತ ಅಶೇಷ ಮುನಿಗಣಕೆ ತೋಷಪೂರಿತನಾದಿ ॥೨॥

ದುಷ್ಟರಸಂಹಾರ ಮಾಡಿದಿ ನೀ
ಶಿಷ್ಟರ ಉದ್ಧಾರ ಸೃಷ್ಟಿಯೊಳಗೆ ಲೇಶ
ಕಷ್ಟವಿಲ್ಲದೆ ನೀನು ಸುಷ್ಠುಮಾಡಿ ಅಖಿಳೇಷ್ಟಪ್ರದನಾದಿ ॥೩॥

ದೀನರಕ್ಷಕ ನೀನು ಮಹಾತ್ರಾಣಿ ಇಂದ್ರನ
ಸೂನು ವಾನರಾಧಿಪಹನು
ಮನಮಾತನು ಮಾನಿಸಿದಿಯೊ ನೀನು ॥೪॥

ದೇವಶ್ರೇಷ್ಠ ನೀನು ಉದ್ಧರಿಸಿದ
ಮಾವ ಜನಕನನ್ನು ಕಾವಲಾಗಿರು ಯನಗಾವಾಗ್ಯನು
ಶ್ರೀವತ್ಸಾಂಕಿತ ವೆಂಕಟಪತಿಯೆ ॥೫॥

--✿✿✿✿✿--

೧೬೫
ಚರಣಕಮಲವನು ತೋರೋ
(ಸಿರಿವತ್ಸಾಂಕಿತ / ಚಿಕ್ಕೋಡಿಆಚಾರ್ಯ / ೧೯ ಶ ಅಂತ್ಯ - ೨೦ಶ ಆದಿ)

ಚರಣಕಮಲವನು ತೋರೋ ॥ಪ॥

ಮನವೆಂಬ ಮನೆಯನು ನಿರ್ಮಲಗೊಳಿಸು
ತನುಮನಧನದಾಶೆಯ ನೀ ಬಿಡಿಸೋ ॥೧॥

ಆರುಮಂದಿಯು ಯನ್ನ ಗಾರುಮಾಡುವರು
ಪಾರಗಾಣಿಸು ಬೇಗ ಶ್ರೀ ರಾಮದೇವ ॥೨॥

ದಶರಥಸುತ ನೀನು ಶಶಿಮುಖಕಾಂತನು
ಶಶಿಧರನುತನೀ ಅಸಮಸಾಹಸನ ॥೩॥

ಮೂರಾವತ್ಸೇಗಳು ದೂರಾಪೋಗದೆ ನೀ
ಕಾರುಣ್ಯದಿಂದ ಯೆನ್ನ ಸೇರಿರು ಹರುಷದಿ ॥೪॥

ಸಿರಿವತ್ಸಾಂಕಿತ ನೀನು ತರಣಿಸುತನ ಸರವ
ಕರಕರೆ ಬಿಡಿಸಲು ಸುರರ ವೃಂದವಬಿಟ್ಟು ॥೫॥

--✿✿✿✿✿--

೧೬೬
ಎಂಥಾದ್ದು ರಾಮನ ರೂಪಿನ್ನೆಂಥಾದ್ದು
(ನರಸಿಂಹ ವಿಠಲ / ಕುಂಚೂರ ಹನುಮಂತಾಚಾರ್ಯ / ೧೯ ಶ.)

ಎಂಥಾದ್ದು ರಾಮನ ರೂಪಿನ್ನೆಂಥಾದ್ದು ॥ಪ॥

ನಿಂತು ಭಜಿಪತ್ಯಾನಂದಗೊಳಿಪಾ
ಸಂತ ಕುಮುದಮಿತ್ರನು ತಾನೆನಿಪಾ ಆಹಾ
ಚಿಂತಿಪರ ಜಗತ್ರತ್ತಿವಾಸರು ನಿರುತದಿ
ಅಂತರಂಗದ ಜ್ಞಾನಚಕ್ಷು ಗೋಚರ ರೂಪಿನ್ನೆಂಥದ್ದು ॥೧॥

ಸುಷ್ಠುವಾದನಿಷ್ಟಗಳು ಎಷ್ಟು ಬಳಲಿಪವು ಪಗಲಿರುಳು
ಕಷ್ಟಬಡುತಿಹವಷ್ಟಾಂಗಗಳು ಆಹಾ
ದೃಷ್ಟಿಗೋಚರ ಸ್ವಾಮಿ ಕಷ್ಟಕಳೆದು ನಮ್ಮ
ನಿಷ್ಟಪೊಯ್ದೋಡಿಸೆ ತುಷ್ಟಿಗೊಳಿಪ ರೂಪಿನ್ನೆಂಥಾದು ॥೨॥

ಸ್ಥಿರಮೂರ್ತಿ ನೀನಹುದಲ್ಲೆ ಸುರವೃಂದಕೆ ನೀ ಚೆಂದನಲ್ಲೆ
ನರಪೊಗಳಲು ಸುಳಿಯುವಲ್ಲೆ ಆಹಾ
ಮರುಳುಮನುಜ ನಾನು ಮರೆದು ಬಳಲಿಪೆನು
ನರಸಿಂಹವಿಠಲ ಕರವ ಮುಗಿವೆ ತೋರಂಥಾದು ॥೩॥

--✿✿✿✿✿--

೧೬೭
ಶ್ರೀರಾಮನಾ ಅಡಿವಿಡಿವೆನು

(ನರಸಿಂಹ ವಿಠಲ / ಕುಂಚೂರ ಹನುಮಂತಾಚಾರ್ಯ / ೧೯ ಶ.)

ಶ್ರೀರಾಮನಾ ಅಡಿವಿಡಿವೆನು ನಾ ಶ್ರೀರಾಮನಾ ॥ಪ॥

ನುಡಿಯಂತೆ ಮಾತೆಯಾ ಮಡದಿಯಿಂದೊಡಗೂಡಿ
ಬಿಡದೆ ನಡೆದನವನಡವಿ ವಾಸಕೆ ॥೧॥

ಕನಕಮೃಗವ ತೋರಿ ಸೋಣಕ ರಾವಣ ತಾನು
ಜನಕಸುತೆಯ ನಿಜವನಕೆ ಕೊಂಡು ಪೋದಾ ॥೨॥

ಕಾಣಾದೆ ಸತೀಯಳೇ ಮಾಣಾದೆ ಪುಡುರೆದಾ (?)
ದಾನವನೆಡೆ ಪೇಳ್ದ ಮಾನಿಜಟಾಯು ॥೩॥

ಲಂಕಾಪತ್ತನಕೆ ತಾ ಹುಂಕಾರಿಯುರಿ ಇರ್ಕೆ
ಬಿಂಕದಿ ತಾ ರಾಮನಂಘ್ರಿಗೆರಗಿದಾ ॥೪॥

ಹರಿಗಳೆಲ್ಲರು ಕೂಡಿ ಶರಧಿಹಾದಿಯ ಮಾಡಿ
ವರರಾಮನೊಡಗೂಡಿ ಲಂಕೆಗೆ ನಡೆದರು ॥೫॥

ಜಗದೀಶ ರಾಮಾನೆಂದು ಮುಗುದಾ ಹನುಮ ಕರಾ
ಜಗಜ್ಜನನಿಗೆ ಇತ್ತ ಸೊಗಲು ಪುಂಗುರಾ ॥೬॥

ದಶಶಿರಾನನ್ವಯ ಉಸುಕಿಲ್ಲದಳಿದು
ದಶರಥಸುತನಿಗೆ ವಸುಧೆಯೊಳ್ಸಮರಾರು? ॥೭॥

ಅನಲಾಮುಖದಿ ತಾನು ವನಿತೆಯ ಕೂಡಿದಾ
ಘನಮಹಿಮನ ಲೀಲೆ ಮನುಜರರಿವರೇ ॥೮॥

ಮನಮುಟ್ಟಿ ಭಜಿಸಿದ ಮನುಜಗೊಲಿದ ನಿಜ
ಘನಮಹಿಮನು ಶ್ರೀ ನರಸಿಂಹವಿಠ್ಠಲಾ ॥೯॥

--✿✿✿✿✿--

೧೬೮
ವನಜಾಂಡಾಧಿಪನ ವನಿತೆಯು ಜನಕಸುತೆ

(ನರಸಿಂಹ ವಿಠಲ / ಕುಂಚೂರ ಹನುಮಂತಾಚಾರ್ಯ / ೧೯ ಶ.)

ವನಜಜಾಂಡಾಧಿಪನ ವನಿತೆಯು ಜನಕಸುತೆ
ಭೂಮಿಜೆಯು ಸೀತೆಯು
ಜನನಿಗರ್ಭವವಡೆದು ಬಂದಳು ದನುಜವಧಕೆಂದೇ ॥ಪ॥

ವಸುಧಿಮೇಲತಿ ದುರುಳದನುಜರು
ಪೆಸರು ರಾವಣ ಕುಂಭಕರ್ಣರು
ಋಷಿಜನಂಗಳ ಮಖವ ಕೆಡಿಸುತ್ತ ಮೆರೆಯುತಿರೆ ಕೇಳು ॥೧॥

ಭವದ ಭಟ ಶ್ರೀರಾಮಚಂದ್ರನು
ಮೂವರನುಜರ ಕೂಡಿ ಜನಿಸಿದಾ
ಭುವನಭಾರವ ಪರಿಹರಿಪೆನೆಂದಭಯ ತೋರುತಲೀ ॥೨॥

ಸಿರಿಲಕುಮಿ ನಿಜವರನು ಜನಿಸಿದ-
ನರಿತು ಪರಮಾನಂದದಲಿ ತಾ
ಭರದಿ ಮೈದೋರಿದಳು ಹರಿಗೆ ತಾನರಸಿ ಎನಿಸಿದಳು ॥೩॥

ವಾನರರ ಸೇನಾಧಿಪನು ಪವ
ಮಾನ ಸೂನು ಶ್ರೀಹನುಮನೆರೆಯವನು
ದಾನವಾರಿ ಶ್ರೀರಾಮಚಂದ್ರಗೆ ಭೃತ್ಯನೆನಿಸಿದನು ॥೪॥

ವಿಪಿನ ಚಿರವ್ಯಾಜದಲಿ ರಕ್ಕಸ
ರಪರಿಮಿತ ಕೆಡಹಿದನು ಧರಣಿಗೆ
ವಿಪರೀತ ಬತ್ತದ ಶರಧಿಯನು ಹನುಮಂತ್ಪಾರಿದನು ॥೫॥

ಪ್ರತಿಭಟಿಸಿ ಶ್ರೀರಾಮಚಂದ್ರನು
ಅತಿಮೆರೆವ ರಾಮನ ಮಡುಹಿದಾ
ಮತಿವಂತ ಹನುಮನಿಗೆ ಇತ್ತ ಚತುರವದನ ಪದಾ ॥೬॥

ಧರಣಿಮಗಳಾ ಕೂಡಿ ರಾಮನು
ಧರೆಯನೆಲ್ಲವನಾಳಿ ನ್ಯಾಯದಿ
ಸ್ವರಗವಾಸಕೆ ತೆರಳಿದನು ನರಸಿಂಹವಿಠಲನು ॥೭॥

--✿✿✿✿✿--

೧೬೯
ರಾಮಚಂದ್ರನೇ ರಘುಕುಲೋತ್ತಮನೇ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ - ೧೯೪೧)

ರಾಮಚಂದ್ರನೇ ರಘುಕುಲೋತ್ತಮನೇ।
ಕಾಮಿತಫಲದಾಯಕನೇ ಏಳೈ - ಬೇಗನೇ ॥ಪ॥

ಜಾನಕೀದೇವಿಯು ಪನ್ನೀರ್ತುಂಬಿದ
ಚಿನ್ನದ ಕಲಶವನ್ನು ಧರಿಸಿ ಹರಿ।
ನಿನ್ನಯ ಸನ್ನಿಧಿಯಲ್ಲಿ ನಿಂತಿಹಳು
ಇನ್ನಾದರೂ ಮುಖವನ್ನು ತೊಳೆಯಲೇಳೊ ॥ಅ.ಪ॥

ದುಷ್ಟ ರಾವಣನ। ಕುಟ್ಟಿ ಕೆಡಹಿದಾ। ಸೃಷ್ಟಿಶನೇ ಏಳೋ।
ಕಷ್ಟಾಗಿರುವದು। ಯುದ್ಧದಿ ನಿನಗೆ ದಯಾಳೋ।

ಪಟ್ಟವನೇರಲು। ಇಟ್ಟಿಹುದು ಮುಹೂರ್ತ।
ಇಂದಿನ ದಿನದೊಳು।ಕೆಂಪಾಯಿತು। ಮೂಡಲೊಳು।
ಅಷ್ಟೈಶ್ವರ್ಯಾದಿ ಪಟ್ಟಕೆ ಸಿಂಗರಿಸಿಟ್ಟು।
ವಶಿಷ್ಠಾದಿಗಳು। ವಿಶಿಷ್ಟರು।
ಶ್ರೇಷ್ಠನಾದ ಹನುಮೇಶವಿಠಲ ನೀ
ಬರುವದಷ್ಟೇ ನೋಡುತ ಕುಳಿತಿಹರೋ ॥೧॥

--✿✿✿✿✿--

೧೭೦
ಜಗದಭಿರಾಮನಿಗೆ ಮಿಗಿಲಾರು ಲೋಕದೊಳಗೆ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ - ೧೯೪೧)

ಜಗದಭಿರಾಮನಿಗೆ । ಮಿಗಿಲಾರು ಲೋಕದೊಳಗೆ ॥ಪ॥

ವರ ವಾಲ್ಮೀಕಿ ಮುನಿಯು । ಮುರನೆಂದು ಸ್ಮರಿಸಿದದಕೆ ।
ಕರುಣಾಳು ನೀನಾವದಕೆ । ತ್ವರ ಕೃಪೆಯ ಮಾಡಿದದಕೆ ॥೧॥

ಪರಮಾಂಜನೆಯ ಸುತಗೆ । ಸ್ಥಿರ ಪದವಿಯನಿತ್ತದದಕೆ ।
ಧರಣೀಶ ತವಚರಣಕೆ ಶಿರಬಾಗಿ ಬೀಳ್ವದದಕೆ ॥೨॥

ನಿನ್ನ ಪಾದ ಸೋಂಕಿದದಕೆ । ಘನಶಿಲೆ ವನಿತೆಯಾದದಕೆ ।
ಹನುಮೇಶವಿಠಲನೆಂಬೋದಕೆ । ಅನುಮಾನ ಬಾರದದಕೆ ॥೩॥

--✿✿✿✿✿--

೧೭೧
ಕರುಣಿಸಯ್ಯಾ ರಘುವರನೇ ಸೇವಕನಾ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ - ೧೯೪೧)

ಕರುಣಿಸಯ್ಯಾ । ರಘುವರನೇ ಸೇವಕನಾ
ಮೊರದೀ ನೋಡದೇ

ಹೆಂಡತಿ ಮಕ್ಕಳ ಭ್ರಾಂತಿಯೊಳನ್ಯರ
ದಂಡಿಸಿ ಧನವ ಹರಿಸಿದೆ ।
ಭಂಡತನದಲಿ ಪ್ರಚಂಡನಾದೆನೋ ಹರಿ
ಪುಂಡರೀಕಾಕ್ಷನೇ ॥೧॥

ಕಾಮನಬಾಧೆಯಿಂ ಕಾಮಿನಿಯರ ಕೂಡಿ ।
ತಾಮಸನಾಗಿ ನಾದಿನಗಳೆದೆ ।
ಹೇ ಮಹಾಭಾವನೇ ಪಾಮರನಾದೆ ಯನ್ನ ।
ನೀ ಮಮತೆಯಿಂದಲಿ ॥೨॥

ಅಟ್ಟ ಮೇಲೆ ವಲೇನೆಟ್ಟಗುರೀವಂದದಿ ।
ಕೆಟ್ಟಮೇಲೆಚ್ಚರ ಹುಟ್ಟಿತೆನಗೆ ।
ಮುಟ್ಟಿಭಜಿಪೆ ದಯವಿಟ್ಟು ಕಾಯೋ ಹನುಮೇಶ
ವಿಠಲ ನೀ ದಯವೇ ॥೩॥

--✿✿✿✿✿--

೧೭೨

ಪೊಡವಿಯಪತಿಯೇ ನಿನ್ನಾ ಅಡಿಗಳಿಗೆರಗುವೆ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ – ೧೯೪೧)

ಪೊಡವಿಪತಿಯೇ ನಿನ್ನಾ । ಅಡಿಗಳಿಗೆರಗುವೆ ।
ಕೊಡು ಭಕ್ತಿ ನಿನ್ನೊಳು ರಾಘವಾ ।
ತಡೆಯಲಾರೆನೋ । ಈ ಕಡುತಾಪದಿಂದೆನ್ನಾ ।
ಕಡೆಗ್ಹಾಯಿಸೆನ್ನ ಶ್ರೀ ರಾಘವಾ ॥ಪ॥

ಧರಣೀಶಾ ನಿನ್ನಯ ಚರಣವೇ ಗತಿ ಎಂದು ।
ಸ್ಮರಿಸುತ್ತಲಿರುವೆನೋ ರಾಘವಾ ॥
ಸ್ಥಿರಭಕುತಿಯ ನಿನ್ನೊಳಿರಿಸಿ ಸತ್ವರದಿಂದ ।
ಕರುಣಿಸಿ ಸಲಹೈಯ್ಯಾ ರಾಘವಾ ॥೧॥

ಪುಟ್ಟಿದುದಕೆ । ನೀ ಹೊಟ್ಟೆಗೆ ಸಾಕಷ್ಟು
ಕೊಟ್ಟು । ಕಾಪಾಡೊ ಶ್ರೀ ರಾಘವಾ ।
ಇಟ್ಟು ತವಸ್ಮರಣೆಯ ।
ಕೊಟ್ಟೆನ್ನ ಪುಷ್ಟನಮಾಡೋ ಶ್ರೀ ರಾಘವಾ ॥೨॥

ತನುಧನ ನೀನೇ । ಜನನಿ ಜನಕನು ನೀನೇ
ವನಿತೆಸುತರೂ ನೀನೇ । ರಾಘವಾ ॥
ಹನುಮೇಶ ವಿಠಲನೇ । ದಿನಗಳಿಯದೇ ತ್ವರ ।
ಮನದಘಬಿಡಿಸೋ ಶ್ರೀ ರಾಘವಾ ॥೩॥

--✿✿✿✿✿--

೧೭೩

ಹರಿ ಶ್ರೀ ರಘುರಾಯಾ ಸಂಸಾರ ಮಾಯಾ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ - ೧೯೪೧)

ಹರಿ ಶ್ರೀ ರಘುರಾಯಾ।ಸಂಸಾರ ಮಾಯಾ।
ಬಿಡಿಸೋ ಭವ ಜೀಯಾ। ತೋರೋ ನಿನ್ನಯ ದಿವ್ಯಕಾಯಾ।
ಕೊಡು ನೀ ಸುಮತಿಯಾ ॥ಪ॥

ಗರುಡವಾಹನಾ । ಪರಮಪಾವನಾ। ಶಿರಿಯ ಸುಖದಿ।
ಮರೆಯಬ್ಯಾಡೋ । ಚರಣದಾಸನಾ ॥೧॥

ಇಷ್ಟದಾಯಕಾ । ಕಷ್ಟತಾರಕಾ । ಸೃಷ್ಟಿಪತಿಯೇ ।
ಕೊಟ್ಟು ಸಲಹೋ । ಮೋಕ್ಷದಾಯಕಾ ॥೨॥

ನಾಶರಹಿತನೇ । ವಾಸುದೇವನೇ ।ಪೋಷಿಸೋ ತವ
ದಾಸನಾ । ಹನುಮೇಶ ವಿಠಲನೇ ॥೩॥

--✿✿✿✿✿--

೧೭೪

ರಾಮ ರಾಮ ಸೀತಾರಾಮಾ ರಘುಕುಲೋತ್ತಮಾ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ - ೧೯೪೧)

ರಾಮಾ ರಾಮಾ ಸೀತಾರಾಮಾ ।
ರಘುಕುಲೋತ್ತಮಾ । ಶ್ರೀರಾಮಾ। ॥ಪ॥

ರಾವಣಾರಿಯಾದ ರಾಮಾ।
ಮಾಯಾರಕ್ಕಸಗೊಲಿದ ರಾಮಾ ।
ವಾಯುತನಯಗೊಲಿದ ರಾಮಾ ।
ಕೋದಂಡರಾಮಾ ಶ್ರೀರಾಮ ॥೧॥

ಜನಕನ ಜಾಮಾತರಾಮ ।
ಜಾನಕೀವಲ್ಲಭ ಶ್ರೀರಾಮಾ ।
ಕ್ಷೋಣಿಗಭಿಮಾನಿರಾಮಾ ।
ಕೌಸಲ್ಯಾರಾಮಾ ಶ್ರೀರಾಮಾ ॥೨॥

ಇನಕುಲೋತ್ಪನ್ನ ರಾಮಾ ।
ದಿನಕರಸುತ ತೇಜರಾಮಾ ।
ಹನುಮೇಶ ವಿಠಲ. ರಾಮಾ ।
ಪುನೀತರಾಮಾ ಶ್ರೀರಾಮಾ ॥೩॥

--✿✿✿✿✿--

೧೭೫

ಸರ್ವೇಶಾ ಪಾಹಿ ರಮೇಶಾ

(ಹನುಮೇಶವಿಠಲ / ಹನುಮಂತ ರಂಗರಾವ್ / ೧೮೫೪ - ೧೯೪೧)

ಸರ್ವೇಶಾ ಪಾಹಿರಮೇಶಾ
ಜಗದಭಿರಾಮನಿಗೆ ಮಿಗಿಲಾರು ಲೋಕದೊಳಗೆ ॥ಪ॥

ವರವಾಲ್ಮೀಕಿಮುನಿಯು ಮರನೆಂದು ಸ್ಮರಿಸಿದುದಕೆ
ಕರುಣಾಳು ನೀನಾವದಕೆ ತ್ವರ ಕೃಪೆಯಮಾಡಿದದಕೆ ॥೧॥

ಪರಮಾಂಜನೆಯ ಸುತಗೆ ಸ್ಥಿರಪದವಿಯನಿತ್ತದದಕೆ
ಧರಣೀಶ ತವಚರಣಕೆ ಶಿರಬಾಗಿ ಬೀಳ್ವದದಕೆ ॥೨॥

ನಿನ್ನಪಾದ ಸೋಕಿದಂದಕೆ ಘನಶಿಲೆ ವನಿತೆಯಾದದಕೆ
ಹನುಮೇಶವಿಠಲನೆಂಬೋದಕೆ ಅನುಮಾನ ಬಾರದದಕೆ ॥೩॥

--✿✿✿✿✿--

೧೭೬
ದಾಶರಥೇ ದಯಮಾಡು ನಿನ್ನ ದಾಸದಾಸನ

(ಇಂದಿರೇಶ / ಪಾಂಡುರಂಗ ಹುಚ್ಚಾಚಾರ್ಯ / ಕಾಲ ೧೯ ಶ.)

ದಾಶರಥೇ ದಯಮಾಡು ನಿನ್ನ ದಾಸದಾಸನ ನೋಡು
ದಾಸದಾಸನ ನೋಡು ಮುದ್ದು ದಾಶರಥೇ ದಯಮಾಡು ॥ಪ॥

ನೀರಜಾಕ್ಷ ನಿಜಮಾಯ ಮಮತೆ ಸಂಸಾರ ಶರಧಿಯೊಳು ಬಿದ್ದು
ಪಾರುಗಾಣದೆ ಬರಿದೆ ಪೋಗುವಾ ತಾರಕಬ್ರಹ್ಮನೀನೆಂದೂ ॥೧॥

ತುಂಬಿದಬಂಡಿಗೆಮೊರಭಾರವೆಯೆನಗಿಂಬಿಲ್ಲವೆನಿನ್ನಲ್ಲಿನಂಬಿದ
ವಿಶ್ವಕುಟುಂಬನೆ ಎನ್ನಾ ಇಂಬುಗೊಡದೆಯೆಲ್ಲರ್ಗಲ್ಲಿ ॥೨॥

ಇಂದಿರೇಶ ಮುಚುಕುಂದ ವರದಮುನಿವಂದ್ಯನೆ ದಶರಥ ಕಂದಾ
ಚಂದದಿ ನಿನ್ನ ಪದದ್ವಂದ್ವಗಳನುದಿನ ವಂದಿಸುವೆನು ಮುದದಿಂದಾ ॥೩॥

--✿✿✿✿✿--

೧೭೭
ರಾಮೇತಿ ಮಂಗಳಂ ದಿವ್ಯನಾಮಾ

(ಇಂದಿರೇಶ / ಪಾಂಡುರಂಗ ಹುಚ್ಚಾಚಾರ್ಯ / ಕಾಲ ೧೯ ಶ.)

ರಾಮೇತಿ ಮಂಗಳಂ ದಿವ್ಯನಾಮಾ
ಪ್ರೇಮದಿಂದಲಿ ಪಾಡುವರ ಕಾಯೋ ಕರುಣಾಳೋ ॥ಪ॥

ಚಿತ್ರಚರಿತಾಂಬುಜ ಪುತ್ರ ದಶರಥಬಾಲಾ
ಉತ್ತಮನಾಮದವನೆ ಭಕ್ತಿಯಿಂದ
ನಿತ್ಯ ಪಠಿಸಲು ನಿಜಭಕ್ತರಿಗೆ ಸಂಸಾರ
ಮೃತ್ಯುಸಖ ಹರಿಮೋಕ್ಷ ಇತ್ತು ಪಾಲಿಸುವ ॥೧॥

ಶಬರಿ ಸಾಕ್ಷಿಇದಕೆ ಶರಭಂಗ ಋಷಿಸಾಕ್ಷಿ
ಶಿಲೆಯು ಸಾಕ್ಷಿ ಸುತನ ಕಪಿಯು ಸಾಕ್ಷಿ
ಶಿವನ ಸಾಕ್ಷಿಯು ಸೂರ್ಯಸುತ ಮುಖ್ಯವಾಹನರ
ಗೋಚರನರಾಕ್ಷಸರಸಾಕ್ಷಿ ನರಸಾಕ್ಷಿ ॥೨॥

ದಾಶರಥೇ ಸಕಲ ಮುನಿಪೋಷಕನು ಲಂಕಾದಿ
ಪ್ರೇಶನಾಶಕ ಭೃಗುಜ ತೋಷಿತಾಶಾ
ಶ್ರೀಚರಿಯ ತೀರದಲೆ ಸೀತೆ ಸಿಂಧೆ ಇಂದಿರೇಶ
ಪಾಹತ ಸದ್ಗುಣತ ವಿಭೀಷಣ ತ್ರಾತಾ ॥೩॥

--✿✿✿✿✿--

೧೭೮

ವಂದಿಸುವೆನು ರಘುವರನಾ ಸುರವಂದಿತ

(ಇಂದಿರೇಶ / ಪಾಂಡುರಂಗ ಹುಚ್ಚಾಚಾರ್ಯ / ಕಾಲ ೧೯ ಶ.)

ವಂದಿಸುವೆನು ರಘುವರನಾ ಸುರ
ವಂದಿತಚರಣಾಂಬುಜನ ॥ಪ॥

ತಂದೆಮಾತಿಗೆ ವನಕ್ಹೋಗೆ ಬಂದವನಾ
ಸುಂದರಸಹ ಸೀತೆಯಿಂದ ಅನುಜನಾ ॥ಅ.ಪ॥

ಮುನಿಯ ಸತಿಯ ಕಾಯ್ದವನ ಋಷಿ
ವನಿತೆಯರ ಪಾಲಿಸಿದವನಾ
ಮನಸಿಜ ರಿಪುಹರ ಚಾಪಭಂಜಕನಾ ॥೧॥

ವಾರಿಧಿಸೇತುಬಂಧಕನಾ ಸೀತಾ
ಚೋರನ ಶಿರವಳಿದವನಾ

ಚಾರುಸಿಂಹಾಸನವೇರುತ ಸರಯೂ-
ತೀರದ ಅಯೋಧ್ಯಾವಿಹಾರ ಸುಂದರನಾ ॥೨॥

ಕೇಸರಿಸುತಗೆ ತನುಧನಮನಾ
ಆಶ್ರಯವನು ಜನರಿಗೆ ಮೋಕ್ಷವನಿತ್ತವನಾ
ಇಂದಿರೇಶಸುಖಾತ್ಮ ನಿರ್ದೋಷಪುರುಷನಾ ॥೩॥

--✿✿✿✿✿--

೧೭೯
ಶ್ರೀ ಜಾನಕಿಯ ರಮಣ ನಾಮ ಸನ್ನುತ ಚರಣ
(ಐಹೊಳೆ ವೆಂಕಟೇಶ / ಭೀಮರಾವ್ ಕುಲಕರ್ಣಿ / ೧೮೩೫ - ೧೯೧೫)

ಶ್ರೀ ಜಾನಕಿಯ ರಮಣ ನಾಮಸನ್ನುತ ಚರಣ
ರಾಜಕುಲಸಂಹರಣ ರವಿಕೋಟಿ ಶತಕಿರಣನೇ
ರಾಜಶೇಖರ ವಿನುತ ಲಲಿತಪದ ಪಂಕೇಜ
ಹೇ ಜನಾರ್ದನ ಸಲಹೋ ಮಾಂ ನಿರುತದೀ ॥೧॥

ತಾಮರಸ ಸಂಭವನ ಪೊಕ್ಕಳಿಂದಲಿ ಪಡೆದ
ವ್ಯೋಮಗಂಗೆಯ ಜನಕ ಯೋಗಿಹೃದ್ವಾಸಾ
ಸ್ವಾಮಿ ನೀನೆಮಗಾದ ಕಾರಣದಿ ಕರಪುಟದಿ
ನೇಮದಲಿ ಬಿನ್ನೈಪೆ ನಿಗಮಗೋಚರನೆ ॥೨॥

ಕಲಿಯು ಪ್ರಾಪ್ತಿಸಲಾಗಿ ಸಜ್ಜನರ ಸಲಹುದಕೆ
ವಲಿದು ವೃಷಭಾಚಲದಿ ನೀ ನಿಲ್ಲುತಾ
ಸಲೆ ಅಯ್ಯಹೊಳೆನಿಲಯ ಜೀವದುತ್ತಮನೊಡೆಯ
ಚೆಲುವ ವೆಂಕಟನೆನಿಸಿ ಮೆರೆದೊ ಹರಿಯೆ ॥೩॥

--✿✿✿✿✿--

೧೮೦
ಪರಮ ಮಂಗಳಧಾಮಾ ಶ್ರೀರಾಮಾ

(ಗದುಗಿನ ವೀರನಾರಾಯಣ / ಹುಯಿಲಗೋಳ ನಾರಾಯಣರಾಯ / ೧೮೭೪-೧೯೭೦)

ಪರಮ ಮಂಗಳಧಾಮಾ ಶ್ರೀರಾಮಾ ||ಪ||

ಕರುಣಾಮೃತಸಾಗರ ನಿಸ್ಸೀಮಾ
ಚರಣಕೆರಗುವೆ ಸಾಸಿರನಾಮಾ ||೧||

ಶರಣಾಗತರನು ಕರವಿಡಿವುದು ನೇಮಾ
ಶರಣುಬಂದೆನಯ್ಯ ರಘುಕುಲ ಸೋಮಾ ||೨||

ವಚನವ ಪಾಲಿಪ ಸುಚರಿತನೈ ನಿಮ್ಮ
ಅಚಲ ಭಕ್ತಿಕೊಡು ಮೇಘಶ್ಯಾಮಾ ||೩||

ಗದುಗಿನ ವೀರನಾರಾಯಣ ಪ್ರೇಮಾ
ವೊದಗಿಸಿ ಕಾಯೋ ವೀರಲಲಾಮ ||೪||

--✿✿✿✿✿--

೧೮೧
ರಾಮಚಂದ್ರ ನೀ ದಯಮಾಡೊ

(ಗದುಗಿನ ವೀರನಾರಾಯಣ / ಹುಯಿಲಗೋಳ ನಾರಾಯಣರಾಯ / ೧೮೭೪-೧೯೭೦)

ರಾಮಚಂದ್ರ ನೀ ದಯಮಾಡೊ
ಪ್ರೇಮದಿಂದಲಿ ಹರಕೆಯ ನೀಡೋ ||ಪ||

ನಿನ್ನ ಜನುಮದ ದಿನವಿದು ನೋಡೊ
ಘನ್ನತರದ ಸಂತೋಷ ನೀಡೊ
ಬನ್ನವನ್ನು ನೀನಿಂತೀಡಾಡೊ
ಮನ್ನಿಸಿ ಎನ್ನನು ದಯದಿ ಕಾಪಾಡೊ ||೧||

ವನಿತೆ ಅಹಲ್ಯೆಯ ಶಾಪವ ಹರಿದೆ
ದನುಜರುಪಟಳ ತಾಪವ ತರಿದೆ
ಮನುಜರೆಲ್ಲರ ಧರ್ಮದಿ ಪೊರೆದೆ
ಘನಸೌಖ್ಯವ ಭೋಗಿಸುವಂತಿರದೆ ॥೨॥

ಕುಣಿಯುವುದು ಮುದದಲಿ ಭಕ್ತರಗಡಣ
ದಣಿಯದು ನೋಡ್ಯೆ ಸೀತಾರಮಣ
ಗುಣಿಸೆ ಸುಖವ ಕೊಡು ಕರುಣಾಭರಣ
ಮಣಿವೆ ಗದುಗಿನ ವೀರನಾರಾಯಣ ॥೩॥

--✿✿✿✿✿--

೧೮೨
ಸ್ಮರಿಸುವುದು ರಘುನಂದನನ

(ಗದುಗಿನ ವೀರನಾರಾಯಣ / ಹುಯಿಲಗೋಳ ನಾರಾಯಣರಾಯ / ೧೮೭೪-೧೯೭೦)

ಸ್ಮರಿಸುವುದು ರಘುನಂದನನ ॥ಪ॥

ನಿರುತವು ಬೆಳಗಿನೊಳೆದ್ದು ಭಕುತಿಯಲಿ ॥ಅ.ಪ॥

ಜನಪತಿ ದಶರಥನುದರದಿ ಜನಿಸಿದ
ವನಿತೆ ಅಹಲ್ಯೆಯ ತಾನುದ್ಧರಿಸಿದ
ಘನಶಂಕರಧನುವ ಭಂಗಿಸಿದ
ಜನಕಸುತೆಯ ವರಿಸಿದ ಶ್ರೀರಾಮನ ॥೧॥

ತಾಯಿ ಕೈಕೇಯಿಯ ಮಾತು ನಡೆಸಿದ
ನೋಯದೆ ವನವನು ಸತಿಸಹ ಸೇರಿದ
ಮಾಯಾಮೃಗದಾಶೆಗೆ ಸತಿಯಾವಗಲಿದ
ರಾಯ ಲಕ್ಷ್ಮಣನಣ್ಣ ಶ್ರೀರಾಮನ ॥೨॥

ದಂಡಕದೊಳು ಸತಿಯನು ಶೋಧಿಸಿದ
ಚಂಡಹನುಮಗೆ ತಾ ದೊರೆಯಾದ

ಪುಂಡಜಲಧಿಯ ದಾಟಿಸಿದ
ಹೆಂಡತಿ ಯಿರವನು ತಿಳಿದ ಶ್ರೀರಾಮನ ||೩||

ಜಲಧಿಗೆ ಸೇತುವೆ ನಿಂತು ಬಿಗಿಸಿದೆ
ಖಲರಾವಣನ ರಣದೊಳು ಕೆಡಹಿದ
ಒಲಿದು ವಿಭೀಷಣನನು ತಾ ಪೊರೆದ
ನೆಲದೊಳು ಸುಖಬೀರಿದ ಶ್ರೀರಾಮನ ||೪||

ಧರುಮವ ನೆಲೆಸಲು ದುಷ್ಟರ ತರಿದ
ಧರೆಯೊಳು ಶಿಷ್ಟರ ಪೊರೆಯಲು ಬಯಸಿದ
ಸಿರಿಪತಿ ಗದುಗಿನ ವೀರನಾರಾಯಣ
ನರನಾಗವತರಿಸಿದ ಶ್ರೀರಾಮ ||೫||

--✿✿✿✿✿--

೧೮೩
ಶ್ರೀರಾಮ ಸೀತಾರಮಣ ಮಾಂ ಪಾಹಿ

(ಪ್ರಸನ್ನ ಶ್ರೀನಿವಾಸ / ಶ್ರೀನಿವಾಸದಾಸ / ೧೯೦೦ – ೧೯೮೦)

ಶ್ರೀರಾಮ ಸೀತಾರಮಣ ಮಾಂ ಪಾಹಿ ||ಪ||

ಉರುಜ್ಞಾನ ಸುಖರೂಪ ನಮೋ ವಾಸುದೇವ ||ಅ.ಪ||

ಶ್ಯಾಮರಮಣೀಯ ಉರು ಆಮ್ನಾಯಕೂ ಅಮಿತ
ರಮೆ ಸೀತಾಯುತ ನಮೋ ಹನುಮಾದಿ ಸೇವ್ಯ
ವಾಮಹಸ್ತದಿ ಚಾಪ ಚಿನ್ಮುದ್ರೆ, ಶರಬಲದಿ
ಅಮಿತಾರ್ಕಸೋಮ ಸ್ವಕಾಂತಿ ಶ್ರೀರಾಮ ||೧||

ಪರಮೇಶ ಏಕಾತ್ಮ ಅರದೂರ ಪರಿಪೂರ್ಣ
ಉರು ಸುಗುಣವಾರಿನಿಧಿ ನೀನೇ ಸ್ವತಂತ್ರ
ಅರವಿಂದಜಾಂಡಾದಿ ಜಗತ್ಸರ್ವ ಕರ್ತಜ
ಸುರರ ಮೊರೆ ಕೇಳಿ ದಶರಥನ ಸುತನಾದೆ ||೨||

ಚತುರ್ವದನ ಸಂಸೇವ್ಯ ಹಯವದನ ಷಡ್ರೂಪ
ಚತುರ್ವಿಂಶಾಕ್ಷರ ಸುಮಂತ್ರ ಪ್ರತಿಪಾದ್ಯ
ತಾತ ಪ್ರೇರಕಸ್ವಾಮಿ ರಾಮನೇ ಎಂದರಿತು
ಸಂಧ್ಯಾಸುಮಂತ್ರ ಋಷಿ ಬಂದು ಪ್ರಾರ್ಥಿಸಿದ ॥೩॥

ಸುದುಪಾಸ್ಯ ನಿನ್ನ ಋಷಿ ಆಶ್ರಮಕೆ ಕರದೊಯ್ಯೆ
ಶ್ರೋತವ್ಯ ಮಂತವ್ಯ ನಿಧಿಧ್ಯಾಸಿತವ್ಯ
ಪ್ರತ್ಯಕ್ಷ ಅವತಾರರೂಪ ನೀನೆಂದರಿತು
ಸಿದ್ಧರು ಭಕ್ತಿಯಿಂದಲಿ ವಂದಿಸಿದರು ॥೪॥

ತತ್ರ ತತ್ರ ಸ್ಥಿತೋ ವಿಷ್ಣುಃ ತಚ್ಛಕ್ತಿ ಬೋಧಯನ್
ಅಸ್ತ್ರದೇವತೆಗಳೀ ತತ್ವವನು ಅರಿತು
ಸತ್ತಾದಿ ದಾತನೇ ಶಾಸ್ತ್ರಸ್ವಾಮಿ ವಿಷ್ಣೋ
ಪ್ರತ್ಯಗಾತ್ಮನೆ ರಾಮ ನಿನಗೆ ನಮಿಸಿದರು ॥೫॥

ಯಜ್ಞಗೆ ಯಜ್ಞಗೆ ವಿಶ್ವಾಮಿತ್ರಗೆ ನಮೋ
ಯಜ್ಞಭುಕ್ ಯಜಮಾನ ಯಜ್ಞಯಜ್ಞೇಶ
ಇಜ್ಯ ಪೂಜ್ಯಗೆ ಸ್ವಾಮಿ ಮನ್ಮನೋವಾಕ್ಸಂಸ್ಥ
ಯಜ್ಞಸ್ಥಯಜ್ಞಮಾಂ ಪಾಹಿ ನಮೋ ನಮಸ್ತೇ ॥೬॥

ವೇದವತಿ ತ್ವದಧೀನೆ ಸರ್ವಜಗದಾಧಾರೆ
ಭೂದೇವಿ ಸುಖಪೂರ್ಣೆ ಅಜೆ ನಿತ್ಯಮುಕ್ತ
ವೈದೇಹಿ ಜಾನಕಿ ಸೀತಾನಾಮದಿ ತಾನೆ
ಈ ಧರೆಯೊಳು ತೋರಿಹಳು ನಿನ್ನನನುಸರಿಸಿ ॥೭॥

ಸುರಾಜಗಜ ಇಕ್ಷುಜಲ್ಲೆಯನು ಮುರಿವಂತೆ
ಪರ ಫಲಿ ಬಲಿ ನೀನು ಶಿವಚಾಪ ಮುರಿಯೆ
ಸುರರು ನರವರರು ಹರುಷದಿಂದಲಿ ನೋಡೆ
ಸಿರಿಸೀತೆ ವರಮಾಲೆ ನಿನಗೆ ಹಾಕಿದಳು ॥೮॥

ಶರಭಂಗ ಶಬರಿ ಜಟಾಯು ಮೊದಲಾದವರ
ವರಭಕ್ತಿಗೆ ಮೆಚ್ಚಿ ಯೋಗ್ಯಗತಿಯಿತ್ತೆ
ಮಾರುತಿಗೆ ಪ್ರಿಯರೆಂದು ರವಿಜಗೆ ವಿಭೀಷಣಗೆ
ಕರುಣಿಸಿದೆ ನಿರಪೇಕ್ಷ ನೀ ಪೂರ್ಣಕಾಮ ॥೯॥

ಕ್ರೂರ ಪೌಲಸ್ತ್ಯಾದಿ ರಕ್ಕಸರ ತರಿದು ನೀ
ಧರೆಯಲಿ ಸುಕ್ಷೇಮ ಧರ್ಮ ಸ್ಥಾಪಿಸಿದೆ
ಸರಸಿಜಾಸನ ಲೋಕದಂತಾಯಿತೀ ಲೋಕ
ವರವಿಷ್ಣುಭಕ್ತಿಯು ಸೌಖ್ಯ ಎಲ್ಲೆಲ್ಲೂ ॥೧೦॥

ಸರಸಿಜಾಸನಪಿತ ಪ್ರಸನ್ನ ಶ್ರೀನಿವಾಸನೆ
ಸರಿ ಮಿಗಿಲು ನಿನಗಿಲ್ಲ ಯಾರು ಎಂದೆಲ್ಲೂ
ಸಿರಿಸೀತಾಯುತರಾಮ ಎಂದೂನು ಎಲ್ಲೆಲ್ಲೂ
ಮಾರುತಿ ಸೌಮಿತ್ರಿ ಭರತಾದಿ ಸೇವ್ಯ ॥೧೧॥

--✿✿✿✿✿--

೧೮೪
ಅಚ್ಯುತಪ್ರೇಕ್ಷ ಕರಾರ್ಚಿತ ರಾಮ
(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ - ೧೮೯೩)

ಅಚ್ಯುತಪ್ರೇಕ್ಷ ಕರಾರ್ಚಿತ ರಾಮ
ರಕ್ಷಿಸು ಚಂದನಚರ್ಚಿತ ರಾಮ ॥ಪ॥

ದಾಸಾಗ್ರಣಿ ಭೀಮಸೇನನ ಮನ
ಸದಾಸೆ ಪೂರಿಪೆನೆಂದು ಬಂದಿಲ್ಲಿ ॥೧॥

ವಾಸವಾಗಿಹೆ ತುಂಗಾತೀರದಿ ಜಾನ
ಕೀಶ ನಿನ್ನನುಕಂಡೆ ಮೋದದಿ ॥೨॥

ಶ್ರೀರಾಮ ದುರಿತಾಬ್ಧಿವಾರಣ
ದೋರೊ ಮುಂದಕೆ ಫಲಪೂರಣ ॥೩॥

ಕೀಶಗೆ ಕಪಿರಾಜ್ಯ ಕೊಡಿಸಿದಿವಿ
ಭೀಷಣನು ತೋಷಗೊಳಿಸಿದಿ ॥೪॥

ಶೇಷಾದ್ರಿ ಶಿಖರದಿ ನಿಲಿಸಿದಿ ನೀನೆ
ಪೋಷಿಪನೆಂದಿಗು ನಿರುತದಿ ॥೫॥

--✿✿✿✿✿--

೧೮೫
ಕಂಡಿರೆ ನಾಟಿ ಕೋದಂಡರಾಮನ

(ಶೇಷಗಿರಿವರ ಇತ್ಯಾದಿ / ತುಫಾಕಿ ವೆಂಕಟರಮಣ / ೧೮೧೦ - ೧೮೯೩)

ಕಂಡಿರೆ ನಾಟಿ ಕೋದಂಡರಾಮನ ಪದ್ಮ-
ಜಾಂಡದಿ ನಾಯಕನಾ
ಕುಂಡಲ ಕಟಕ ಕಿರೀಟಧಾರಿ ಮಾ-
ರ್ತಾಂಡ ಕೋಟಿಪ್ರಭನಾ ॥ಪ॥

ಭೂತಳದೊಳಗೆ ವಿಖ್ಯಾತರಾಗಿಹ ರಘು-
ನಾಥ ಒಡೆಯರ ಮೇಲೆ
ಪ್ರೀತಿಯಿಂದಲಿ ಬಂದ ಪವಮಾನವಂದಿತ-
ನೀತನು ನಿಜಜನರ
ಭೀತಿಯ ಬಿಡಿಸುವೆನೆಂದು ಬಿಲ್ಲಂಬುಗ-
ಳಾಂತು ಕರಾಬ್ಜದಲಿ
ಪಾತಕಗಳ ಪರಿಹಾರಗೈದರಿಗಳ
ಘಾತಿಸುವನು ಜವದಿ ॥೧॥

ಕಡುಪರಾಕ್ರಮಿ ವಾಯಿನು ಧಿಕ್ಕರಿಸಿ ಕೈ
ಪಿಡಿದಂತೆ ರವಿಜನಸು
ಬಡವರ ಭಕ್ತಿಯ ದೃಢಕೆ ಮೆಚ್ಚುತ ಜಗ
ದೊಡೆಯನು ಸಂತಸದಿ
ಒಡೆಯ ನೀ ಸಲಹೆಂದು ವಂದಿಸಿ ತುಲಸಿಯ
ನಿಡಲು ಪಾದಾಬ್ಜದಲಿ

ಕೊಡುವನು ಕರುಣಾಕಟಾಕ್ಷದಿ ಪುರುಷಾರ್ಥ
ತಡೆಯದೆ ತವಕದಲಿ ॥೨॥

ಎರಡು ಭಾಗದಿ ಭಕ್ತ ಗರುಡ ಮಾರುತಿಯರ-
ನಿರಿಸಿ ಕೊಂಡವನುದಿನದಿ
ನಿರವಧಿ ಸೇವೆಯ ಕೈಕೊಂಡು ಜಾನಕಿ-
ವರನಿಹನೀಪುರದಿ
ಸಿರಿವರ ವೆಂಕಟಗಿರಿ ರಾಜನಿವನೆಂದು
ನೆರೆನಂಬಿ ಸೇವಿಪರಾ
ಪರಿಕಿಸಿ ತನ್ನಯ ಚರಣಸೇವೆಯನಿತ್ತು
ಪೊರೆವನು ಕರುಣಾಕರ ॥೩॥

--✿✿✿✿✿--

೧೮೬
ಕಾಮಿತಾರ್ಥದಾಯಿ ಸೀತಾರಾಮ

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ – ೧೮೯೩)

ಕಾಮಿತಾರ್ಥದಾಯಿ ಸೀತಾರಾಮರಾಜರಾಜ
ಸ್ವಾಮಿಯೆನ್ನ ಕಾಯೊ ಖಳನಿರ್ನಾಮ ಭಕ್ತಕಲ್ಪಭೂಜ ॥ಪ॥

ಸಾಕೇತಪುರದಿವಾಸಪ್ರಾಕೃತ ಲೀಲಾವಿಲಾಸ
ಸ್ವೀಕೃತ ರಕ್ಷಾವಿಭೂಷ ಯಾಕೆನ್ನೊಳುಪೇಕ್ಷೆ ಶ್ರೀಶ
ಬೀಕೃತಿಗಳ ದೂರೀಕರಿಸುವ ಕರು
ಣಾಕರಭಕ್ತ ಪರಾಕ ಪರಾತ್ಪರ ॥೧॥

ಪಾತಕಿ ಜನೋದ್ಧಾರೈಕ ಹೇತುವ ತೋರುವೆನೆಂದು
ಸೇತುವ ನಿರ್ಮಿಸಿದ ರಘುನಾಥ ನೀನೆ ದೀನಬಂಧು
ವಾತಜಾತನಿಗೊಲಿದು ಸಂಪ್ರೀತಿಯೊಳಂಬುಜ
ಜಾತನಪದವಿಯನಾತಗೆ ಸಲಿಸಿದ ॥೨॥

ಪಾಮರಪಾವನದಿವ್ಯನಾಮದೇವ ಸಾರ್ವಭೌಮ
ಸೀಮಾಹಿತಸದ್ಗುಣೈಕಧಾಮಾ ಸೀತಾಪೂರ್ಣಕಾಮಾ
ತಾಮರಸಾಸನವಂದ್ಯ ಶೇಷಗಿರಿ
ಧಾಮ ದಯಾಂಬುಧಿ ದಶರಥ ರಾಮಾ ॥೩॥

--✿✿✿✿✿--

೧೮೭
ಜಯಮಂಗಳಂ ನಿತ್ಯ ಶುಭಮಂಗಳಂ

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ - ೧೮೯೩)

ಜಯಮಂಗಳಂ ನಿತ್ಯ ಶುಭಮಂಗಳಂ
ಮಂಗಳಂ ಮಾರುತಿಯ ಪೆಗಲೇರಿ ಬರುವನಿಗೆ ॥ಪ॥

ಮಂಗಳಂ ಮಾರೀಚ ವೈರಿಹರಿಗೆ
ಮಂಗಳಂ ಸೀರಜಾ ಮುಖಪದ್ಮಶೃಂಗನಿಗೆ
ಮಂಗಳಂ ವೀರರಾಘವದೇವಗೆ ॥ಅ.ಪ॥

ರಾವಣಾದಿಗಳಿಂದ ಆಹವದಿ ಬಹು ನೊಂದ
ದೇವತೆಗಳನು ಬೇಗ ಕಾವೆನೆಂದು
ತಾ ಒಲಿದು ಕೌಸಲ್ಯಾದೇವಿ ಗರ್ಭದಿ ಬಂದು
ಸಾವಧಾನದಿ ಸಕಲಸಜ್ಜನರ ಸಲಹಿದಗೆ ॥೧॥

ಮಂದಮತಿಗಳೊಳಧಿಕ ತುಂಡಿಲನು ಮಾತ್ಸರ್ಯ
ದಿಂದ ಮಾಡಿರುವ ಪ್ರತಿಬಂಧಕವನು
ಇಂದಿಲ್ಲಿ ಬರಲು ಸಂಬಂಧಗೈಸದೆ ದಾಸ
ನೆಂದೆನ್ನ ಮೇಲೆ ದಯದಿಂದಲೊಲಿದವಗೆ ॥೨॥

ಇಂಗಿತಾಭೀಷ್ಟದ ಕುರಂಗಮರ್ದನ ರಾಮ
ಶೃಂಗರಿಸಿ ಸರ್ವಪರಿವಾರ ಸಹಿತಾ
ಮಂಗಳಾರತಿ ಕೊಂಡು ಮಂಗಳವ ಬೆಳೆಸುವ ಭು
ಜಂಗರಾಜೇಂದ್ರ ಗಿರಿಶೃಂಗನಾಥನಿಗೆ ॥೩॥

೧೮೮
ತಂದೆ ನೀನಹುದೆಂಬುದೆಂದಿಗು ದಿಟವಯ್ಯ
(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ – ೧೮೯೩)

ತಂದೆ ನೀನಹುದೆಂಬುದೆಂದಿಗು ದಿಟವಯ್ಯ
ಇಂದಿರೆಯರಸ ಜೀಯಾ
ಕುಂದುಕೊರತೆಗಳನೊಂದು ನೋಡದೆ ಕೃಪೆ
ಯಿಂದ ನಿನ್ನಂತೆ ರಕ್ಷಿಪರುಂಟೆ ರಘುರಾಯ ॥ಪ॥

ತನಗನುವಾಗಿರೆ ತೋಷಬಡುವ ತಾತ
ಕೊನರಿಕೊಂಬುವ ಕಷ್ಟಕಾಲದಲಿ
ವನರುಹದಳನೇತ್ರ ವಾರ್ಧಿಬಂಧನ ನೀನು
ನೆನೆದಭೀಷ್ಟವ ಕೊಟ್ಟು ನಿರ್ಮಲ ಪದವೀವಿ ॥೧॥

ಅಘಟತಾಘಟಕನೆ ಆದಿಪುರುಷಮಹ–
ದಘನಿವಾರಣ ಶಕ್ತ ಗುಣವಾರಿಧೇ
ಸ್ವಗತಮಾನಸ ಶಬರಿಯ ಸಲಹಿದ ನಮ್ಮ
ರಘುಕುಲತಿಲಕ ರಾವಣವೈರಿ ಸುಖಕಾರಿ ॥೨॥

ಮುಪ್ಪುರಹರ ಜಪಿಸುವ ಮೂಲಮಂತ್ರೇಶ
ಅಪ್ಪ ನೀನಹುದೆಂಬ ನಿರ್ಣಯವ
ತಪ್ಪದೆ ಬಿನ್ನಹ ಒಪ್ಪಿಲ್ಲಿ ನೆಲೆಯಾಗು
ಸರ್ಪಾದ್ರಿನಿಲಯಾ ತಿಮ್ಮಪ್ಪ ಚಿಂತಿತದಾತ ॥೩॥

--✿✿✿✿✿--

೧೮೯
ಬೇಗ ಬಾರೋ ಕರುಣಾವಾರಿಧೇ
(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ – ೧೮೯೩)

ಬೇಗ ಬಾರೊ ಕರುಣಾವಾರಿಧೇ
ಕೃಪೆ ತೋರೊ ನಿನ್ನನು ಸೇರಿದೆ ॥ಪ॥

ಜನಕನ ವಲಿಸಿದ ಜಾನಕೀವರದ
ಕನಕವಿಭೂಷಣ ಕಲ್ಮಷಹರ ಬೇಗ ॥೧॥

ದಶಮುಖಭಂಜನ ದೈವತರಂಜನ
ಶಶಿಮುಖ ಸೀತಾರಮಣ ನಿರಂಜನ ॥೨॥

ಅರಿಗಣಕರ್ಷಣ ಅದ್ಭುತದರ್ಶನ
ಪರಮಪುರುಷ ಶೇಷಗಿರಿಯ ಭೀಮರ್ಶನ ॥೩॥

--✿✿✿✿✿--

೧೯೦

ರಾಮಾ ನಿನ್ನಯ ದಿವ್ಯನಾಮವೇ ಗತಿಯೆಂಬೆ

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ - ೧೮೯೩)

ರಾಮ ನಿನ್ನಯ ದಿವ್ಯನಾಮವೇ ಗತಿಯೆಂಬೆ
ಪಾಮರನೆಂದೆನ್ನ ಪಾಲಿಸು ತಂದೆ ॥ಪ॥

ಸುರರಾಜನಂಗಸಂಗವಗೈದು ಶಿಲೆಯಾದ
ವರಮುನಿ ಗೌತಮನರಸಿಯು ನಿನ್ನ
ಚರಣಾರವಿಂದ ಸಂಸ್ಪರ್ಶಮಾತ್ರದಿ ದಿವ್ಯ
ತರುಣಿಯಾಗಿಹಳೆಂಬ ಪರಿಯ ನಂಬಿದೆನು ॥೧॥

ಪ್ರಥಮವರ್ಣವು ಪಾಪತತಿಗಳ ತರಿವುದು
ಜತನ ಮಾಡುವುದನ್ಯವರ್ಣವೆಂದೆನುತ
ಸ್ಮೃತಿಗಳು ನಿತ್ಯ ಸಂಸ್ತುತಿಮಾಳ್ಪುದರಿಂದಾ-
ಶ್ರಿತ ಕಲ್ಪತರು ನೀನೆ ಗತಿಯೆಂಬೆ ನಿರುತಾ ॥೨॥

ನಿನ್ನ ನಾಮಾಮೃತವನ್ನೇ ಕುಡಿಸಿ ನಿತ್ಯ
ಘನ್ನಪಾತಕಗಳ ನಿರ್ನಾಮಗೊಳಿಸು
ಪನ್ನಗಾಚಲನಾಥ ಪರಿಪೂರ್ಣಕೃಪೆಯಿಂದ
ಮನ್ನಿಸಿ ಮನಸನ್ನು ನಿನ್ನಲ್ಲಿ ಇರಿಸು ॥೩॥

೧೯೧

ರಾಮಾ ರಘುವೀರ ನಾಮಾಮೃತವ ಪಾಲಿಸು

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ – ೧೮೯೩)

ರಾಮಾ ರಘುವೀರ ನಾಮಾಮೃತವ ಪಾಲಿಸು
ವಾಮಾಂಗೀಕೃತರಾಮ ಸೋಮಧರ ಕಾಮದ
ಕೈರವಧಾಮ ನಿರಾಮಯ ॥ಪ॥

ಕಾಮಧೇನು ಕಲ್ಪತರು ಚಿಂ–
ತಾಮಣಿ ನೀನಪ್ಪ
ತಾಮಸಜನನಿರ್ಧೂಮ ಜನಕಜಾ
ಕಾಮ ಸಕಲಗುಣಧಾಮಾಧೀಶ್ವರ ॥೧॥

ಕಂಜಾಯತನಯನ ಗುರು ಪಾ–
ಭಂಜನಿ ಭುಜಗಮನ
ಮಂಜುಳ ಸಿಂಜನ್ಮಂಜೀರದ್ವಯ
ರಂಜಿತ ಪದ ಭಕ್ತಾಂಜಲಿ ಫಲದಾ ॥೨॥

ಮಂಗಲತರರೂಪ ಸೀತಾ–
ಲಿಂಗನ ಹೃತ್ತಾಪ
ಇಂಗಿತ ಫಲದ ಭುಜಂಗಮಹೀಧರ
ಶೃಂಗವಾನ ಮಾತಂಗ ಭಯಾವಹ ॥೩॥

--✿✿✿✿✿--

೧೯೨

ಲಾಲಿ ರಘುಕುಲವೀರ ರಾಕ್ಷಸಗಣಾರಿ

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ – ೧೮೯೩)

ಲಾಲಿ ರಘುಕುಲವೀರ ರಾಕ್ಷಸಗಣಾರಿ
ಲಾಲಿ ಜಗದೇಕಸುಂದರ ಸೇತುಕಾರಿ
ಲಾಲಿ ನಗಚಾಪ ಹೃತ್ಕಮಲಸಂಚಾರಿ
ಲಾಲಿ ಸುಗುಣಾಂಬುನಿಧಿ ಸುಜನಾರ್ತಿಹಾರಿ ॥ಪ॥

ಧರಣಿಭಾರವನು ಬೇಗಿಳುಹಬೇಕೆಂದು
ಸರಸಿಜಾಸನ ಮುಖ್ಯ ಸುರರು ನಡೆತಂದು
ಸಿರಿವರನೆ ನಿನ್ನ ಪ್ರಾರ್ಥನೆ ಮಾಡಲಂದು
ಧರೆಯೊಳವತರಿಸಿ ರಾಜಿಸಿದೆ ಗುಣಸಿಂಧು ॥೧॥

ಧರಚಕ್ರ ಶೇಷರನು ಸರಿಯಾಗಿ ತನ್ನಾ
ವರಜಪದವೈದುತವತರಿಸಿರಲು ಮುನ್ನ
ಭರತ ಶತ್ರುಘ್ನ ಲಕ್ಷ್ಮಣರೆಂಬರನ್ನ
ಚರಣಸೇವಕರೆನಿಸಿ ಪೊರೆದೆ ಗುಣರನ್ನ ॥೨॥

ಶ್ರೀ ರಾಮ ಸೀತಾವರಾಶ್ರಿತ ಪ್ರೇಮ
ಮಾರುತಿಗೆ ವಿಧಿಪದವನಿತ್ತ ಗುಣಧಾಮ
ಘೋರರಾವಣ ಮುಖ್ಯ ದಿತಿಜನರ್ಧೂಮ
ಭೂರಮಣ ಶೇಷಗಿರಿವರ ಪೂರ್ಣಕಾಮ ॥೩॥

--✿✿✿✿✿--

೧೯೩

ವಿಜಯಸಾರಥಿ ವಿಶ್ವಾಧೀಶ್ವರ

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ - ೧೮೯೩)

ವಿಜಯಸಾರಥಿ ವಿಶ್ವಾಧೀಶ್ವರ
ವಿಜಯ ಪಾಲಿಸು ಸತತಂ
ವಿಜಯಧ್ವಜ ವೆಂಕಟಗಿರಿನಾಯಕಿ
ಅಜಿತ ಸಕಲಸುರವೈರಿವಿದಾರಣ ॥ಪ॥

ವೀರಾಗ್ರಣಿ ರಘುವೀರ ವಿದಾರಿತ
ಘೋರದಿತಿಜ ಪರಿವಾರ
ನೀರಜಾಕ್ಷ ವಾರಾಂಬುಧಿ ಬಂಧನ
ಶೌರಿ ಮನೋರಥ ಕಾರಣ ಧಾರಣ
ಸೀರಜಾನನ ಮುಖಾರವಿಂದ ಮಧು
ಪೂರಿತವದನ ಖರಾರಿ ಕೃಪಾಕಾರಣ ॥೧॥

ಲಕ್ಷ್ಮಣಪೂರ್ವಜ ಋಕ್ಷವಿನುತ ಕಮ
ಲಾಕ್ಷ ಶೂರ್ಪನಖಿ ಶಿಕ್ಷಾ
ದಕ್ಷಿಣ ದುರಿತಾರಣ್ಯ ರಮಾಸ್ಪದ
ವಕ್ಷಸ್ಥಳ ವಿಭವೈಕನಿಭಲಕ್ಷವಿಘಾತಿ
ಕಟಾಕ್ಷದಾಯಿ ಶುಭಲಕ್ಷಣ
ಜಯ ದ್ವಿದಶಾಕ್ಷವಿಘಾತನ ॥೨॥

ರಾಮಾಭಿದ ರಮಣೀಯ ಗುಣಾರ್ಣವ
ಕಾಮಿತ ಫಲದಾವನಭೂಮಾ
ನಾಮಾಮೃತರತ ಚಂದ್ರಲಲಾಮ
ಭವಾಮಯಹರ ಭಜಕಾಶ್ರಯಧಾಮಾ
ಶ್ರೀಮಹೀಶ ಶೇಷಾಚಲವಾಸ
ಮಮಾಲಯಗತಮಾರುತಿಕೃತ ಕಾಮಾ ॥೩॥

--✿✿✿✿✿--

೧೯೪

ಸೈ ಸೈ ಶರಣಾಗತವತ್ಸಲ ನೀ

(ಶೇಷಗಿರಿವರ ಇತ್ಯಾದಿ / ತುಘಾಕಿ ವೆಂಕಟರಮಣ / ೧೮೧೦ – ೧೮೯೩)

ಸೈ ಸೈ ಶರಣಾಗತವತ್ಸಲ ನೀ
ನೋಯಿಸಬಂದಸುರೆಗೆ ನಿರ್ಮಲ ಸುಖವಿತ್ತಿ ॥ಪ॥

ಬೆನ್ನಿನ ಮೇಲೆ ಬೆಟ್ಟವ ಹೊರಿಸಿದ ಸುರ–
ರನ್ನು ಕಾಪಾಡಿ ಸುಧೆಯನುಣಿಸಿದಿ ನೀ ॥೧॥

ಹಂಜಿಯಂದದಿ ತಲೆ ನರೆತಿಹ ಬ್ಯಾಡತಿ
ಯೆಂಜಲ ಸವಿದ ನಿರಂಜನ ಮೂರುತಿ ॥೨॥

ಅಟ್ಟಿಬರುತ ನಿನ್ನ ಕಟ್ಟಿದ ಗೋಪೆಗೆ
ಹೊಟ್ಟೆಯೊಳಿಹ ಸರ್ವಲೋಕವ ತೋರಿದಿ ॥೩॥

ಅಗ್ರಜ ಭಾರ್ಯಾಳನುಳುಪಿ ಕೊಲ್ಲಿಸಿದಂಥ
ಸುಗ್ರೀವನ ಕೂಡೆ ಸಖ್ಯವ ಬೆಳಸಿದಿ ॥೪॥

ಭೂಮಿಯೊಳಿನ ಸರ್ವಪಾತಕಿಪತಿಯಾದ-
ಜಾಮಿಳನನು ತನ್ನ ನಿಲಯಕೆ ಕರೆಸಿದಿ ॥೫॥

ವಿಧವಿಧದನ್ನವ ಕುರುಪತಿಯಲಿ ಬಿಟ್ಟು
ವಿದುರನ ಮನೆಯಲಿ ಕುಡುತೆ ಪಾಲುಂಡುವ ॥೬॥

ಕಂಡವರನು ಕೊಂದಿಹ ಕ್ರೂರನ ಮುನಿ
ಮಂಡಲದಲಿ ಪ್ರಚಂಡನೆಂದೆನಿಸಿದಿ ॥೭॥

ಕುಂತಿಯ ಕುವರನ ಕುದುರೆಯ ನಡೆಸುತ
ಅಂತರಂಗ ಸಖ್ಯವ ಬೆಳೆಸಿದಿ ನೀ ॥೮॥

ಖುಲ್ಲಚೇಷ್ಟೆಯ ಮಾಡಿ ಕಲ್ಲಾಗಿ ಬಿದ್ದ ಆ
ಹಲ್ಯೆ ಪತಿವ್ರತೆ ಎಂಬ ಬಿರುದ ಕೊಟ್ಟೆ ॥೯॥

ತಂದೆಯ ಕೊಲ್ಲಬೇಕೆಂದು ಸನ್ನಹಗೈದ
ಕಂದನ ಸ್ವಾಂಕದೊಳಂದು ಕುಳ್ಳಿರಿಸಿದಿ ॥೧೦॥

ಎಷ್ಟೊ ಪಾಪಗಳಟ್ಟುಳಿ ಬಿಡಿಸಿರೆ
ಭ್ರಷ್ಟನೆಂದೆನ್ನೊಳು ನಿಷ್ಠುರವ್ಯಾತಕೆ ॥೧೧॥

ಮುನ್ನಿನ ಬಿರುದುಗಳನ್ನು ಬೇಕಾದರೆ
ಎನ್ನನು ರಕ್ಷಿಸು ಪನ್ನಗ ಗಿರಿವರ ॥೧೨॥

--✿✿✿✿✿--

೧೯೫

ಶ್ರೀರಾಮ ಜಯರಾಮ ಜಯತು

(ಲಕ್ಷ್ಮೀನಾರಾಯಣ / ಪಾವಂಜಿ ಲಕ್ಷ್ಮೀನಾರ್ಣಪ್ಪಯ್ಯ / ೧೮೫೪ - ೧೯೨೪)

ಶ್ರೀರಾಮ ಜಯರಾಮ ಜಯತು ಜಯತು ಸೀತಾರಾಮ ರಾಮ ಚರ
ಣಾರವಿಂದದ ಭಕ್ತಿ ದೃಢವಾಗಿ ಕೊಡು ಜಯರಾಮ ರಾಮ

ಕ್ರೂರಕಾಮಾದಿಗಳ್ಳೂರೆಗೊಂಬರು ಸೀತಾರಾಮ ರಾಮ ರಾವ-
ಣಾರಿ ನೀನಲ್ಲದೆ ಯಾರಿಲ್ಲ ಗತಿ ಜಯರಾಮ ರಾಮ ॥೧॥

ಬುದ್ಧಿ ಜ್ಞಾನ ಶಕ್ತಿ ಸಿದ್ಧಿದಾಯಕ ಸೀತಾರಾಮ ರಾಮ ಗುಣ-
ವೃದ್ಧಿಕಾರಣ ಭಕ್ತಿಶ್ರದ್ಧೆಯ ಕೊಡು ಜಯರಾಮ ರಾಮ
ಬಿದ್ದೆನಜ್ಞಾನಸಮುದ್ರಮಧ್ಯದಿ ಸೀತಾರಾಮ ರಾಮ ಎನ್ನ-
ನುದ್ಧರಿಸುವರೆ ಪ್ರಸಿದ್ಧ ನೀನೆ ಜಯರಾಮ ರಾಮ ॥೨॥

ನಿನ್ನ ನಾಮವೆ ಪ್ರಸನ್ನಪಾವನ ಸೀತಾರಾಮ ರಾಮ ಸ-
ರ್ವೋನ್ನತ ಮಹಿಮವರೇಣ್ಯ ಶಾಶ್ವತ ಜಯರಾಮ ರಾಮ
ನಿನ್ನಾಧೀನವು ನಿಖಿಲ ಜಗವು ಸೀತಾರಾಮ ರಾಮ ಪರಿ-
ಪೂರ್ಣಾತ್ಪೂರ್ಣವರೇಣ್ಯ ಶಾಶ್ವತ ಜಯರಾಮ ರಾಮ ॥೩॥

ಸ್ವಾಂತರಂಗಭಕ್ತಿಚಿಂತಾಮಣಿ ಸೀತಾರಾಮ ರಾಮ ಆತ್ಮ-
ತಂತ್ರನಿಯಂತ್ರ ಸರ್ವಾಂತರಾತ್ಮಕ ಜಯರಾಮ ರಾಮ
ಭ್ರಾಂತಿ ತ್ಯಜಿಸುವುದಕೆಂತುಪಾಯವು ಸೀತಾರಾಮ ರಾಮ ಏ-
ಕಾಂತಸ್ಮರಣೆಯ ನಿರಂತರ ಕೊಡು ಜಯರಾಮ ರಾಮ ॥೪॥

ಮುಖ್ಯಸಚಿವ ಮಹಾಮುಖ್ಯಪ್ರಾಣನು ಸೀತಾರಾಮ ರಾಮ ದುಷ್ಟ-
ರಕ್ಕಸಾಳಿಯ ಸೊಕ್ಕಡಗಿತು ಜಯರಾಮ ರಾಮ
ಕರ್ಕಶಕಲಿಕಾಲ ಮಿಕ್ಕಿ ಬಂದುದು ಸೀತಾರಾಮ ರಾಮ ಮನ-
ಸೊಕ್ಕಿ ಮೋಹದ ಬಲೆಗೆ ಸಿಕ್ಕಿಬಿದ್ದುದು ಜಯರಾಮ ರಾಮ ॥೫॥

ದಾಸಜನರ ಹೃದಯಸ್ಥಿತ ಸೀತಾರಾಮ ರಾಮ ಶ್ರೀನಿ-
ವಾಸ ನಿನ್ನವರಭಿಲಾಷೆಯ ಕೊಡು ಜಯರಾಮ ರಾಮ
ವಾಸವ ಮುಖ್ಯ ವಿಬುಧಾಸುರನುತ ಸೀತಾರಾಮ ರಾಮ ಸಾಧು-
ವಾಸಸಂತೋಷ ಪ್ರಕಾಶವ ಕೊಡು ಜಯರಾಮ ರಾಮ ॥೬॥

ಜ್ಞಾನವಜ್ಞಾನವು ಭಾನುತಿಮಿರ ಸೀತಾರಾಮ ರಾಮ ಸತ್ಯ-
ಜ್ಞಾನ ಭಕ್ತಿಭಾಗ್ಯ ನೀನಿತ್ತು ಪೊರೆ ಜಯರಾಮ ರಾಮ
ಹೀನರೈವರು ಸ್ವಾಧೀನಗೊಂಬರು ಸೀತಾರಾಮ ರಾಮ ಪವ-
ಮಾನವಾಹನ ನಿನ್ನ ಧ್ಯಾನವ ಕೊಡು ಜಯರಾಮ ರಾಮ ॥೭॥

ಚಿತ್ತಕೆ ನಿಲವಿಲ್ಲ ಚಿಂತೆ ಹಲವು ಸೀತಾರಾಮ ರಾಮ ತವ
ಭೃತ್ಯನಾಗಿರುವ ಸದ್ಭಕ್ತಿಯ ಕೊಡು ಜಯರಾಮ ರಾಮ
ಬತ್ತಿಹೋಗಲಿ ಮೋಹದುತ್ತುಂಗಾರ್ಣವ ಸೀತಾರಾಮ ರಾಮ ಪರ-
ವಸ್ತುತ್ವದೇಕಾಸಕ್ತಿಯ ಕೊಡು ಜಯರಾಮ ರಾಮ ॥೮॥

ಆದಿವ್ಯಾಧಿ ಭವಾಂಬೋಧಿಕುಂಭಜ ಸೀತಾರಾಮ ರಾಮ ತವ
ಪಾದಾಂಭೋಜಪ್ರಸಾದಪಾಲಿಸು ಜಯರಾಮ ರಾಮ
ಸಾಧುಸಂಗಸುಖಬೋಧೆಯ ಕೊಡು ಸೀತಾರಾಮ ರಾಮ ಕಲಿ-
ಬಾಧೆ ಪರಿಹರಿಪ ಹಾದಿ ತೋರಿಸು ಜಯರಾಮ ರಾಮ ॥೯॥

ಧ್ಯಾನವಿರಲಿ ಎನ್ನ ಮಾನಸದಲ್ಲಿ ಸೀತಾರಾಮ ರಾಮ ವಿಷ
ಯಾನುಭವದಿ ಬಲು ಹಾನಿಯಾದೆನು ಜಯರಾಮ ರಾಮ
ದೀನಜನರ ಕಾಮಧೇನು ರಘುವರ ಸೀತಾರಾಮ ರಾಮ ಖಲ-
ದಾನವಾರಣ್ಯಕೃಶಾನು ಮಾನದ ಜಯರಾಮ ರಾಮ ॥೧೦॥

ದುಷ್ಟರ ಸಂಗದಿಂದೆಷ್ಟೋ ನೊಂದೆನು ಸೀತಾರಾಮ ರಾಮ ಸುವಿ
ಶಿಷ್ಟರ ಸಂಗವ ಕೊಟ್ಟು ಸಲಹೊ ಜಯರಾಮ ರಾಮ
ಭ್ರಷ್ಟ ಪ್ರಕೃತಿಯನ್ನು ಕುಟ್ಟಿ ಕಳಚು ಸೀತಾರಾಮ ರಾಮ ಪರ-
ಮೇಷ್ಠ್ಯಾದಿ ಸುಮನಸರಿಷ್ಟದಾಯಕ ಜಯರಾಮ ರಾಮ ॥೧೧॥

ತನ್ನ ಕೇಡು ತಾನರಿಯದಾದೆ ಸೀತಾರಾಮ ರಾಮ ಸುಪ್ರ
ಸನ್ನ ನಿನ್ನ ಸ್ಮರಣೆಯನಿತ್ತು ಪೊರೆ ಜಯರಾಮ ರಾಮ
ಹಣ್ಣೆಂದು ದೀಪವ ತಿನ್ನ ಪೋದೆನು ಸೀತಾರಾಮ ರಾಮ ಹೆಣ್ಣು
ಹೊನ್ನಿಗಾಗಿ ಪರವನ್ನು ಮರೆತೆ ಜಯರಾಮ ರಾಮ ॥೧೨॥

ನಿತ್ಯ ನಿನ್ನ ದಾಸ್ಯವಿತ್ತು ರಕ್ಷಿಸು ಸೀತಾರಾಮ ರಾಮ ಯಾವ-
ಚಿತ್ತ ತವಧ್ಯಾನದಿ ತೃಪ್ತಿಯಾಗಲಿ ಜಯರಾಮ ರಾಮ
ಸತ್ಯಾತ್ಮರ ಸಂಗಸತ್ವ ವರ್ಧಿಸು ಸೀತಾರಾಮ ರಾಮ ಪರ-
ಮಾರ್ಥವಿಚಾರ ಸತ್ತತ್ತ್ವವರುಹು ಜಯರಾಮ ರಾಮ ॥೧೩॥

ಕರ್ತಾಕಾರಯಿತನು ಭರ್ತಾರನು ಸೀತಾರಾಮ ರಾಮ ಪುರು-
ಷಾರ್ಥರೂಪ ತವ ಭಕ್ತಿ ಪ್ರಾರ್ಥನೆ ಜಯರಾಮ ರಾಮ
ಪ್ರತ್ಯಗಾತ್ಮ ಮನೋವೃತ್ತಿಯೊಳಿರು ಸೀತಾರಾಮ ರಾಮ ಸ್ವಾಮಿ-
ನೃತ್ಯನ್ಯಾಯದಿ ನಿಯಮಿಸುತ್ತ ನಡೆಸು ಜಯರಾಮ ರಾಮ ॥೧೪॥

ಅಕುಟಿಲ ಗುಣಗಳ ಪ್ರಕಟಿಸೆನ್ನೊಳು ಸೀತಾರಾಮ ರಾಮ ವಾಯು-
ಸಖಸ್ಪರ್ಧಾತ್ಮಕ ಸಾಧುಪ್ರಕೃತಿಪಾಲಿಸು ಜಯರಾಮ ರಾಮ
ಲಕ್ಷುಮಿನಾರಾಯಣ ತ್ರಿಕರಣಕುದ್ಧಾರನೆ ಸೀತಾರಾಮ ರಾಮಬ್ರಹ್ಮಾ-
ದ್ಯಖಿಳ ಚೇತನಾತ್ಮಕ ಸರ್ವೋತ್ತಮ ಜಯರಾಮ ರಾಮ ॥೧೫॥

--✿✿✿✿✿--

೧೯೬
ನೀಲಮೇಘಶ್ಯಾಮ ರಾಮ

(ಲಕ್ಷ್ಮೀನಾರಾಯಣ / ಪಾವಂಜಿ ಲಕ್ಷ್ಮೀನಾರ್ಣಪ್ಪಯ್ಯ / ೧೮೫೪ - ೧೯೨೪)

ನೀಲಮೇಘಶ್ಯಾಮ ರಾಮ
ನಿಖಿಳಲೋಕ ಕ್ಷೇಮಧಾಮ ॥ಪ॥

ಪಾಲಿಸೊಲಿದು ಹನುಮಪ್ರೇಮ
ಪಾವನಾತ್ಮ ಸೀತಾರಾಮ ॥ಅ.ಪ॥

ಸತ್ಯಸಂಕಲ್ಪಾನುಸಾರ
ಚಿತ್ತಚಿನ್ಮಯಾತ್ಮ ಶ್ರೀಧರ
ನಿತ್ಯಮುಕ್ತ ಪುಣ್ಯನಾಮ
ಪ್ರತ್ಯಗಾತ್ಮ ಪೂರ್ಣಕಾಮ ॥೧॥

ಕಮಲನಾಭ ರವಿಶತಾಭ
ಸುಮನಸಾರ್ಚಿತಾಂಘ್ರಿಶೋಭ
ಅಮಿತವಿಕ್ರಮ ಸಮರಭೀಮ
ಶಮಲಶಮನ ಸಾರ್ವಭೌಮ ॥೨॥

ಶಾರದೇಂದುಸನ್ನಿಭಾನನ
ಮಾರುತಿಹೃದಯೈಕಸದನ
ಧೀರಲಕ್ಷ್ಮೀನಾರಾಯಣ
ಸೂರಿಜನೋದ್ಧರಣನಿಪುಣ ॥೩॥

--✿✿✿✿✿--

೧೯೭
ಪಾಲಿಸೋ ಪಂಕಜನೇತ್ರ ರಘು

(ವಿಶ್ವೇಂದ್ರತೀರ್ಥ / ರಾಜೇಶ ಹಯಮುಖ / ೧೮ ಶ. – ೧೯ ಶ.)

ಪಾಲಿಸೋ ಪಂಕಜನೇತ್ರ ರಘು
ಕುಲಾಂಬುಧಿಚಂದ್ರ ಶ್ರೀ ರಾಮಚಂದ್ರ ॥ಪ॥

ಒಂದೇ ಭಾಷಣ ನಿನಗೊಂದೇ ಮಾರ್ಗ ಸಾಕು
ಒಂದೇ ಸ್ಥಾನದೊಳಾಶ್ರಿತರನೇ ನಿಲ್ಲಿಸುವಿ
ಒಂದೇ ಬಾರಿಯೆ ಕೊಟ್ಟುದ್ಧರಿಸುವೆ ಭೃತ್ಯರ
ಒಂದೇ ಪತ್ನಿಯು ನಿನಗೆಂಬುದು ಬಿರುದು ॥೧॥

ನಿನ್ನ ತಮ್ಮನು ನಿನ್ನ ರಾಣಿಯ ಭೃತ್ಯನು
ನಿನ್ನಂಥ ಭಾಗ್ಯ ಮತ್ತೆಲ್ಲಿ ತೋರುವುದು
ಘನ್ನಮಹಿಮ ನೀನು ಮಲತಾಯಿ ನುಡಿಯಲು
ತನ್ನ ರಾಜ್ಯಗಳನ್ನು ತಮ್ಮನಿಗೊಪ್ಪಿಸಿದೆ ॥೨॥

ಭರತನು ನಿನ್ನಡಿಗಾಗಿ ಬೇಡಿದರೂ ನೀ
ಹರುಷದಿಂದಲಿ ಕಾಲಾಂತರವ ಪೇಳಿರುವಿ
ಮರಳಿ ರಾಜ್ಯದಿ ಬಂದು ರಾಜೇಶ ಹಯಮುಖ
ಕರುಣಿಸಿ ಪಟ್ಟಾಭಿಷಿಕ್ತನಾಗಿರುವಿ ॥೩॥

--✿✿✿✿✿--

೧೯೮
ರಾಮನಾಥಸ್ವಾಮಿ ಪಾಲಿಸೋ
(......?......./ ಗೋವಿಂದದಾಸ / ೧೯೦೨ – ೧೯೫೯)

ರಾಮನಾಥಸ್ವಾಮಿ ಪಾಲಿಸೋ ।
ರಘುನಾಥಸ್ವಾಮಿ ಪಾಲಿಸೋ ॥ಪ॥

ಪಾಮರನಾದೆನ್ನಪರಾಧವ ।
ಪ್ರೇಮದ ಪಾಲಿಸಿಕೊಳ್ಳೋ ದೇವಾ
ಭೂಮಿಜೆ ಸೀತೆಗೆ ।
ಪ್ರೇಮನೆಂದೆನಿಸಿದ ॥೧॥

ನಿನ್ನನು ನಂಬಿದ ನಾಥನನೂ ।
ಮನ್ನಿಸದಿರೆ ಕೇಳ್ವರ್‍ಯಾರೋ ಇನ್ನೂ ॥
ಸನ್ನುತ ಗುಣಾಕರನೆನ್ನುವ ಬಿರುದನು ।
ಎನ್ನೊಳು ತೋರಿಸೊ ರಾಮ ನೀನೂ ॥೨॥

ಎಂದಿಗೆ ನಿನ್ನಯ ಪಾದವನೂ ।
ಪೊಂದುವ ಸುಖವನು ಪೇಳೋ ನೀನೂ ।
ಮಂದರಧರ ಗೋವಿಂದನೆ ನಿನ್ನಯ ।
ಸುಂದರಚರಣಕೆ ನಮಿಸುವೆನೂ ॥೩॥

--✿✿✿✿✿--

೧೯೯
ಬಾರೋ ಬೇಗ ಬಾರೋ ರಾಮ
(ರಮಾಪತಿ / ವಾಸುದೇವ ಪ್ರಭು / ೧೯ ಶ.)

ಬಾರೋ ಬೇಗ ಬಾರೋ ರಾಮ
ಬಾರೋ ನೀ ಮೊಗದೋರೋ ರಾಮ ॥ಪ॥

ಅಗಣಿತಮಹಿಮ ರಘುಕುಲೋದ್ಧಾಮ
ನಿಗಮಾಗಮಪೂಜಿತ ಶ್ರೀರಾಮ ॥೧॥

ಕುಜನಕುಠಾರೀ ಸುಜನೋದ್ಧಾರೀ
ಭಜಕನಿಕರ ದುರಿತಾರಿ ರಾಮ ॥೨॥

ಪಂಕಜನಯನ ವೆಂಕಟರಮಣ
ಸಂಕಟಹರಣ ರಮಾಪತಿ ಚರಣ ॥೩॥

--✿✿✿✿✿--

೨೦೦
ರಾಮಾ ರಾಮ ಎಂಬ ನಾಮ ಜಿಹ್ವೆಯೊಳಿರುವ
(ಕೆಳದಿರಾಮೇಶ / ಕೆಳದಿವೆಂಕಣ್ಣ / ಸು. ೧೭೭೫)

ರಾಮಾ ರಾಮಾ ಎಂಬ ನಾಮ ಜಿಹ್ವೆಯೊಳಿರುವ
ನೇಮವನೆ ಸ್ಥಿರನಿಜವ ಮಾಡೋ ರಾಮ
ರಾಮ ದಶರಥರಾಮ ಪಟ್ಟಾಭಿರಾಮ ರಘು
ರಾಮ ಸೀತಾರಾಮ ರಾಮ ರಾಮ ॥ಪ॥

ಬಾಲತನವೆಂಬುದೆಂತು ಲೀಲೆಯಿಂದಲಿ
ಸಂತು ಮೇಲೆಯೌವನವು ಬಂತೋ ರಾಮ
ಲೋಲಲೋಚನೆಯರ ವಿಶಾಲ ರತಿಸುಖದೊಳಗೆ
ವೋಲಾಡುತಿದ್ದೆನಲ್ಲೋ ರಾಮ
ಕಾಳುಜರೆ ಮುಸುಕಿ ಕೈಕಾಲು ಕಸದಿಂ ಮುರುಪಿ
ನಾಲಿಗೆಯ ಧೃತಿತಪ್ಪಿತೋ ರಾಮ
ಕಾಲನವರಿಗೆ ಕರುಣವಿಲ್ಲ ನೀ ಕೈಬಿಟ್ಟಮೇಲೆ
ರಕ್ಷಿಸುವರಿಲ್ಲಾ ರಾಮ ರಾಮ ॥೧॥

ಹೆತ್ತತಾಯಿ ಮೊಲೆವಾಲನುಂಡುದಕೆ ಪಡಿಗೆಟ್ಟಿ
ಸಪ್ತಶರನಿಧಿ ಸಾಲದೋ ರಾಮ
ಸತ್ತುಹುಟ್ಟಿದ ದೇಹದಸ್ಥಿಗುಪಮಿಸೆ
ಮೇರು ಮಸ್ತಕಕ್ಕತ್ಯಧಿಕವೋ ರಾಮ
ಚಿತ್ರಗುಪ್ತರು ಕರ್ಮಗಳನು ಬರೆಬರೆದು
ಬೇಸತ್ತು ಬೆಂಡಾದರಲ್ಲೋ ರಾಮ

ಅತ್ಯಂತ ಕರುಣರಸವೆನ್ನ ಮೇಲೆ ನಿನಗಿದ್ದರೆ
ಮುಕ್ತಿಯನು ಕೊಟ್ಟು ಸಲಹೋ ರಾಮ ॥೨॥

ತಂದೆ ತಾಯ್ಗಳು ನೀನೆ ಬಂಧುವರ್ಗವು ನೀನೆ
ಮುಂದೆ ರಕ್ಷಿಪನು ನೀನೆ ರಾಮ
ಮುಂದುಗಾಣದೆ ಬಹು ಮದಾಂಧತನದಲಿ
ನಡೆದು ಮಂದಮತಿಯಾಗಿದ್ದೆನೋ ರಾಮ
ಮುಂದಾದರೂ ತಂದೆ ತಾಯಿಯ ಜಠರದಿ
ಬಾರದಂದವನು ಮಾಡಿ ಸಲಹೋ ರಾಮ
ಚಂದ್ರಶೇಖರ ಕೆಳದಿ ರಾಮೇಶ್ವರನು ನೀನೆ
ಎಂದು ನಾನಿಂದು ತಿಳಿದೆ ರಾಮ ॥೩॥

--✿✿✿✿✿--

೨೦೧
ರಾಮಚಂದ್ರನೇ ನಿನ್ನ ಪದಯುಗ
(ವರದೇಶವಿಠಲ / ಸ್ವಾಮಿರಾಯ / ೧೮೦೭-೧೯೧೮)

ರಾಮಚಂದ್ರನೆ ನಿನ್ನ ಪದಯುಗ ತಾಮರಸ ನೆರೆನಂಬಿದೆ
ಸೋಮಶೇಖರ ಪೂಜಿತಾಂಘ್ರಿಮಹಾಮಹಿಮಪೊರೆಯೆನ್ನನು ॥ಪ॥

ಜನನ ಮರಣವಿದೂರ ನೀನಾಜನಪತಿಯ
ತನುಜಾತನೆಅನಿಮಿಷೇಶರಿಗೊಡೆಯನೆನಿಸಿದೆ ॥೧॥

ಶ್ರೀರಮಣಿಯನಾದಿಕಾಲದಿ ನಾರಿಯನಿಪಳು ನಿನಗೆ
ಮಾರಹರಶರಮುರಿದು ಹರುಷದಿ ವಾರಿಜಾಕ್ಷಿಯ ವರಿಸಿದೆ ॥೨॥

ಮೂಜಗತ್ಪತಿಯಂದಿಗೆಂದಿಗು ರಾಜ್ಯತೊಲಗಿದನೆನಿಸಿದೆ
ಈ ಜಗದೊಳಿಹ ಅಜ್ಞಜನರಿಗೆ ಸೋಜಿಗವ ನೀ ತೋರಿದೆ ॥೩॥

ಶ್ರೀಲಕುಮಿಪತೇ ನಿನ್ನ ಮಹಿಮಾಜಾಲದಿವಿಜರು ತಿಳಿಯರು
ನೀಲಮೇಘಶ್ಯಾಮ ಶಿಲೆಬಾಲೆ ಮಾಡಿದು ಚೋದ್ಯವೆ ॥೪॥

ಮುತ್ತುರತ್ನ ಕಿರೀಟ ಶಿರದಲಿ ಇತ್ತಿಹ್ಯರ್ಕಶತಪ್ರಭಾ
ನೆತ್ತಿಯಲಿ ಜಡೆಧರಿಸಿ ವಲ್ಕಲ ಪೊತ್ತು ತಿರುಗುವುದುಚಿತವೇ ॥೫॥

ಕುಜಭವ ಭವರರ್ಪಿಸಿದ ಎಡೆ ಭುಂಜಿಪುದು ನೀವಿರಲವೋ
ಅಂಜಿಕಿಲ್ಲದೆ ಭಿಲ್ಲಹೆಂಗಳೆಯೆಂಜಲವ ನೀ ಮೆದ್ದಿಯಾ ॥೬॥

ಮಂಗಳಾಂಘ್ರಿಯ ಭಜಿಪಯೋಗಿಜನಂಗಳಿಗೆ ನೀನಿಲುಕದೆಹಿಂ
ಗದತಿ ವನವನವ ಚರಿಸುವ ಮಂಗಗಳಿಗೆ ನೀನೊಲಿದಿಯಾ ॥೭॥

ಹಾಟಕಾಂಬರ ತಾಟಕಾರಿ ವಿರಾಟ ಮೂರುತಿ ಎನ್ನಯ
ಕೋಟಲೆಯ ಕಡುತಾಪದಿಂ ಕಡೆದಾಟಿಸೆನ್ನನು ಜವದಲಿ ॥೮॥

ಭಾರವಿಲ್ಲದೆ ಅಖಿಲಜಗಸಂಹಾರ ಮಾಡುವಿಯನುದಿನ
ಕ್ರೂರರಾವಣ ಮುಖ್ಯದನುಜರಹೀರಿ ಬಿಸುಟಿದು ಚೋದ್ಯವೆ ॥೯॥

ಹರಿಯೆ ನಿನ್ನಯ ನಾಮಧ್ಯಾನದಿ ಹರನು ಶಾಂತಿಯಪೊಂದಿದ
ಧರಿಯ ದನುಜರ ಮೋಹಿಸಲು ನೀ ಹರನ ಪೂಜೆಯಗೈದಿಯಾ ॥೧೦॥

ವಾರಿಜಾಭವ ಮುಖ್ಯದಿವಿಜರು ಪಾರುಗಾಣದೆ ಮಹಿಮನೆ
ಸಾರಿ ಭಜಿಸುವ ಭಕ್ತರಿಗೆ ಕೈವಾರಿಯಂದದಿ ತೋರುವಿ ॥೧೧॥

ತಾಮಸರ ಸಂಗದಲಿ ನೊಂದೆನು ಕಾಮಕ್ರೋಧದಿ ಬೆಂದೆನು
ಈ ಮಹಿಗೆ ನಾ ಭಾರವಾದೆನು ಪ್ರೇಮದಿಂದಲಿ ಪಾಲಿಸು ॥೧೨॥

ನಿನ್ನಧ್ಯಾನವ ತೊರೆದು ನಾ ಬಲು ಅನ್ಯವಿಷಯದಿ ರಮಿಸಿದೆ
ಎನ್ನ ದೋಷಗಳೆಣಿಸದಲೆ ಕಾರುಣ್ಯಸಾಗರ ಕರುಣಿಸು ॥೧೩॥

ಹೀನವಿಷಯಾಪೇಕ್ಷೆ ಬಿಡಿಸಜ್ಞಾನತಿಮಿರವ ನೋಡಿಸು
ಮೌನಿಮಧ್ವಾರ್ಯರ ಮತದ ವಿಜ್ಞಾನತತ್ವವ ಬೋಧಿಸು ॥೧೪॥

ಸಾಮಗಾನವಿಲೋಲ ರಘುಜನೆ ನೇಮದಿಂದಲಿ ನೀಯನ್ನ
ನಾಮವನೆ ಪಾಲಿಪುದು ಸಚ್ಚಿದ್ಧಾಮ ವರದೇಶ ವಿಠಲನೆ ॥೧೫॥

೨೦೨

ರಾಮಹರೇ ಹರೇರಾಮ ಹರೇಕೃಷ್ಣ

(ವರದೇಶವಿಠಲ / ಸ್ವಾಮಿರಾಯ / ೧೮೦೭-೧೯೧೮)

ರಾಮಹರೇ ಹರೇರಾಮ ಹರೇಕೃಷ್ಣ
ಹರೇಹರೇ ಕೃಷ್ಣಹರೇ
ರಾಮರಾಮ ಹರೇಹರೇ ಹರೇಕೃಷ್ಣ
ಕೃಷ್ಣಹರೇ ಹರೇಹರೇ ॥ಪ॥

ಕೌಸಲ್ಯಾ ವರವಂಶೋದ್ಭವ ಸುರ
ಸಂಸೇವಿತ ಪದರಾಮ ಹರೇ
ಕಂಸಾದ್ಯಸುರರ ಧ್ವಂಸಗೈದಯದು
ವಂಶೋದ್ಭವ ಶ್ರೀ ಕೃಷ್ಣ ಹರೇ ॥೧॥

ಮುನಿಮುಖರಕ್ಷಕ ದನುಜರಶಿಕ್ಷಕ
ಫಣಿಧರ ಸನ್ನುತರಾಮಹರೇ
ಘನವರ್ಣಾಂಗ ಸುಮನಸರೊಡೆಯ ಶ್ರೀ-
ವನಜಾಸನಪಿತ ಕೃಷ್ಣ ಹರೇ ॥೨॥

ಶಿಲೆಯ ಪಾದರಜದಲಿ ಸ್ತ್ರೀ ಮಾಡಿದ
ಸುಲಲಿತ ಗುಣನಿಧಿ ರಾಮ ಹರೇ
ಬಲುವಕ್ರಾಗಿದ್ದ ಬಾಲೆಯ ಕ್ಷಣದಲಿ
ಚೆಲುವೆಯ ಮಾಡಿದ ಕೃಷ್ಣ ಹರೇ ॥೩॥

ಹರಧನುಭಂಗಿಸಿ ಹರುಷದಿಜಾನಕಿ
ಕರವಪಿಡಿದ ಶ್ರೀರಾಮ ಹರೇ
ಸಿರಿರುಕ್ಮಿಣಿಯನು ತ್ವರದಲಿ ವರಿಸಿದ
ಶರಣರಪಾಲಕ ಕೃಷ್ಣ ಹರೇ ॥೪॥

ಜನಕ ಪೇಳೆ ಲಕ್ಷ್ಮಣ ಸೀತಾಸಹ
ವನಕೆ ತೆರಳಿದ ರಾಮ ಹರೇ

ವನಕೆ ಪೋಗಿ ತನ್ನಣುಗರೊಡನೆ ಗೋ-
ವನು ಪಾಲಿಪ ಶ್ರೀ ಕೃಷ್ಣ ಹರೇ ॥೫॥

ತಾಟಕೆ ಖರ ಮಧುಕೈಟಭಾರಿಪಾ
ಪಾಟವಿ ಸುರಮುಖ ರಾಮಹರೇ
ಆಟದಿ ಫಣಿಮೇಲ್ ನಾಟ್ಯವನಾಡಿದ
ಖೇಟವಾಹ ಶ್ರೀ ಕೃಷ್ಣ ಹರೇ ॥೬॥

ಚದುರೆ ಶಬರಿಯಿತ್ತ ಬದರಿಯ ಫಲವನು
ಮುದದಿ ಸೇವಿಸಿದ ರಾಮ ಹರೇ
ವಿದುರನ ಕ್ಷೀರಕೆವದಗಿ ಪೋದ ಶ್ರೀ
ಪದುಮನಾಭ ಜಯ ಕೃಷ್ಣ ಹರೇ ॥೭॥

ಸೇವಿತ ಹನುಮ ಸುಗ್ರೀವನಸಖಜಗ-
ತ್ಪಾವನ ಪರತರ ರಾಮಹರೇ
ದೇವಕಿ ವಸುದೇವರ ಸೆರೆಬಿಡಿಸಿದ
ದೇವದೇವ ಶ್ರೀ ಕೃಷ್ಣ ಹರೇ ॥೮॥

ಗಿರಿಗಳಿಂದ ವರಶರಧಿ ಬಂಧಿಸಿದ
ಪರಮಸಮರ್ಥ ಶ್ರೀರಾಮ ಹರೇ
ಗಿರಿಯ ತನ್ನ ಕಿರಿಬೆರಳಳಲೆತ್ತಿ ಗೋ-
ಪರನ ಕಾಯ್ದ ಶ್ರೀ ಕೃಷ್ಣ ಹರೇ ॥೯॥

ಖಂಡಿಸಿದಶಶಿರನ ಚಂಡಾಡಿದ ಕೋ-
ದಂಡಪಾಣಿ ಶ್ರೀರಾಮ ಹರೇ
ಪಾಂಡುತನಯರಿಂ ಚಂಡಕೌರವರ
ದಿಂಡುಗೆಡಹಿಸಿದ ಕೃಷ್ಣ ಹರೇ ॥೧೦॥

ತವಕದಯೋಧ್ಯಾಪುರಕೈದಿದ ತ-
ನ್ಯುವತಿಯೊಡನೆ ಶ್ರೀ ರಾಮ ಹರೇ
ರವಿಸುತತನಯಗೆ ಪಟ್ಟವಗಟ್ಟಿದ
ಭವತಾರಕ ಶ್ರೀ ಕೃಷ್ಣ ಹರೇ ॥೧೧॥

ಭರತನು ಪ್ರಾರ್ಥಿಸಲರಸತ್ವವ ಸ್ವೀ-
ಕರಿಸಿದ ತ್ವರದಲಿ ರಾಮ ಹರೇ
ವರಧರ್ಮಾದ್ಯರ ಧರಿಯೊಳು ಮೆರೆಸಿದ
ಪರಮಕೃಪಾಕರ ಕೃಷ್ಣ ಹರೇ ॥೧೨॥

ಧರೆಯೊಳಜ್ಞಜನರನು ಮೋಹಿಪುದಕೆ
ಹರನ ಪೂಜಿಸಿದ ರಾಮ ಹರೇ
ಹರನ ಪ್ರಾರ್ಥಿಸಿ ವರವನು ಪಡೆದಾ
ಚರಿತೆಯಗಾಧವು ಕೃಷ್ಣ ಹರೇ ॥೧೩॥

ಅತುಳಮಹಿಮ ಸದ್ಯತಿಗಳ ಹೃದಯದಿ
ಸತತ ವಿರಾಜಿಪರಾಮಹರೇ
ಸಿತವಾಹನ ಸಾರಥಿಯೆನಿಸಿದ
ಸುರತತಿಪೂಜಿತ ಪದ ಕೃಷ್ಣ ಹರೇ ॥೧೪॥

ರಾಮ ರಾಮ ಯೆಂದ್ನೇಮದಿ ಭಜಿಪರ
ಕಾಮಿತಫಲದ ಶ್ರೀರಾಮಹರೇ
ಪ್ರೇಮದಿ ಭಕ್ತರ ಪಾಲಿಪ ಶ್ರೀ ವರ-
ದೇಶವಿಠಲ ಶ್ರೀಕೃಷ್ಣ ಹರೇ ॥೧೫॥

--✿✿✿✿✿--

೨೦೩
ಶ್ರೀರಾಮ ಜಯರಾಮ ಜಯ ಜಯತು ರಾಮ
(ವರದೇಶವಿಠಲ / ಸ್ವಾಮಿರಾಯ / ೧೮೦೭-೧೯೧೮)

ಶ್ರೀರಾಮ ಜಯರಾಮ ಜಯ ಜಯತು ರಾಮ
ಶ್ರೀರಾಮ ಜಯರಾಮ ಜಯ ಜಯತು ರಾಮ ॥ಪ॥

ನಮೋ ರಾಮಚಂದ್ರ ಸದಾಪೂರ್ಣಾನಂದ
ನಮೋ ಸುಗುಣಸಾಂದ್ರ ಕೌಸಲ್ಯಾಕಂದ
ನಮೋ ರಾಘವೇಂದ್ರ ಸೀತಾಕುಮುದಚಂದ್ರ
ನಮೋ ಅಜಭವೇಂದ್ರಾದ್ಯಖಿಲ ಸುರವಂದ್ಯ ॥೧॥

ನಿನ್ನ ಉದಯದಿ ರವಿಯು ಉನ್ನತಿಯನ್ನೈದಿಹನು
ಘನ್ನತೆಯ ಪೊಂದಿಹರು ಕೌಸಲ್ಯದಶರಥರು
ನಿನ್ನ ಅನುಜರು ಜಗದಿ ಪರಮಪಾವನ್ನರು
ನಿನ್ನರಸಿ ಶ್ರೀಸೀತೆ ತ್ರೈಲೋಕ್ಯಮಾತೆ ॥೨॥

ನಿನ್ನ ಕರುಣದಿ ಹನುಮ ಬ್ರಹ್ಮತ್ವವೈದಿದನು
ನಿನ್ನ ನಾಮದಿ ವ್ಯಾಧ ವಾಲ್ಮೀಕನಾದ
ನಿನ್ನ ಪದರಜಸೋಂಕಿ ಶಿಲೆಯಬಲೆಯಾದುದು
ನಿನ್ನ ಪ್ರೇರಣೆಯಿಂದ ಪ್ರಣವೆ ಜ್ವಾಲಾಯಿತು ॥೩॥

ನಿನ್ನ ಪ್ರೇಮದಿ ಶಬರಿ ಮುನ್ನ ಸವಿನೋಡಿ ಫಲ
ನಿನ್ನ ಪದಕರ್ಪಿಸಲು ಘನಪದವಿಯಿತ್ತೆ
ನಿನ್ನ ಸಖ್ಯವನೆ ಬೆರಸಿದವ ಸುಗ್ರೀವನು
ಧನ್ಯವಾಗಿರುತಿಪ್ಪನಿಹಪರಂಗಳಲಿ ॥೪॥

ನಿನ್ನ ದಾಸ್ಯವನ್ನೈದಿ ಅನಂತ ಕಪಿವರರು
ಉನ್ನತೋನ್ನತ ಯೋಗ್ಯತೆಗಳ ಪಡೆದಿಹರು
ನಿನ್ನ ದ್ವೇಷದಿ ರಾವಣಾದಿಗಳು ಮಡಿದರು
ನಿನ್ನ ಪೊಂದಿದ ವಿಭೀಷಣ ರಾಜ್ಯಪಡೆದ ॥೫॥

ಚತುರಾಸ್ಯಮುಖ ಸುರರು ಕೃತಪುಟಾಂಜಲಿಯಲ್ಲಿ
ಸ್ಥಿತರಾಗಿ ಇರುತಿಹರು ನಿನ್ನಾಜ್ಞದಿ
ಇತರಮನುಜರ ತೆರದಿ ಪಿತನಾಜ್ಞೆ ಪಾಲಿಸಲು
ವ್ರತವನೇ ಕೈಕೊಂಡು ವನಕೈದಿದೆ ॥೬॥

ಜಾನಕಿಯು ಅವಿಯೋಗಿ ನಿನ್ನ ಬಳಿಯಿರುತಿರಲು
ವಾನರರ ಭಲ್ಲೂಕಗಳ ಸೇನೆನೆರಹಿ
ಕಾನನವ ಸಂಚರಿಸಿ ಖಳರನ್ನು ಮೋಹಿಸಿದೆ
ಶ್ರೀನಿಧಿಯೆ ತವ ಲೀಲೆ ಬಹು ಚೋದ್ಯವು ॥೭॥

ತಾಮಸರ ಸಂಹರಿಸಿ ಭೂಮಿಭಾರವನಿಳಿಸಿ
ನೇಮದಿಂ ಕೈಕೊಂಡು ರಾಜ್ಯವನ್ನು
ಪ್ರೇಮದಿಂ ಪಾಲಿಸಿದೆ ಪ್ರಜೆಗಳನು ವಿಧವಿಧದಿ
ತಾಮರಸಜನ ಪ್ರಾರ್ಥನೆಯ ಮನ್ನಿಸಿ ॥೮॥

ನಿನ್ನ ರಾಜ್ಯವೆ ಸಕಲಸುಖದ ಸಾಮ್ರಾಜ್ಯವು
ನಿನ್ನ ಯಜ್ಞವೆ ವೇದವಾಣಿಯಿಂದಧಿಕವು
ನಿನ್ನನಂತವತಾರಗಳ ಚರಿತೆ ಸೋಜಿಗವು
ನಿನ್ನಯವತಾರಕ್ಕು ಮೂಲಕ್ಕಭೇದವು ॥೯॥

ನಿನ್ನ ಮಹಿಮಾ ಜಲಧಿಯೊಳು ರಮೆಯು ಮುಳುಗಿಹಳು
ನಿನ್ನ ಸ್ತುತಿಗೈವ ನಾಲ್ಮೊಗನು ನಾಲ್ಮೊಗದಿಂ
ನಿನ್ನಧ್ಯಾನದಿ ಸದಾ ಮೋದಿಪನು ಮಾರುತನು
ನಿನ್ನನೇ ಪಾಡುವರು ಅಜಪವನ ಪತ್ನಿಯರು ॥೧೦॥

ನಿನ್ನ ನಾಮವ ಸವಿದು ಭವನು ನಲಿನಲಿಯುತಿಹ
ಪನ್ನಗನು ಖಗರಾಜರತಿವರ್ಣಿಸುವರು
ಚನ್ನೆ ಪಾರ್ವತಿಯು ವಾರುಣಿಯು ಸೌಪರ್ಣಿಯು
ಚನ್ನಾಗಿ ಪಾಡುವರು ನಿನ್ನ ಗುಣಗಳನು ॥೧೧॥

ಇಂದ್ರಾದಿ ಸುರರು ನಾರದಾದಿ ಋಷಿವರರು
ವಂದಿಸುತ ಭಕ್ತಿಯಲಿ ನಿನ್ನ ಪದಗಳಿಗೆ
ಅಂದದಲಿ ವೀಣಾ ಸುಗಾನ ಸಂಗೀತದಲಿ
ಒಂದೊಂದೇ ಮಹಿಮೆಗಳ ಪೊಗಳಿ ಕುಣಿಯುವರು ॥೧೨॥

ಸುಖತೀರ್ಥಮುನಿರಾಜ ಗುರುರಾಘವೇಂದ್ರಾರ್ಯ
ಅಕಳಂಕ ವರದೇಂದ್ರ ಯತಿಸಾರ್ವಭೌಮರು
ಮುಕುತಿದಾಯಕ ನಿನ್ನ ಪದಕಮಲ ಪೂಜಿಸುತ
ಪ್ರಖರಕಿರಣದಿ ಜಗವ ಬೆಳಗುತ್ತಲಿಹರು ॥೧೩॥

ತಾಳತಂಬೂರಿ ಸಮ್ಮೇಳದಿಂದಲಿ ಕೂಡಿ
ಕಾಲುಗೆಜ್ಜೆಯ ಕಟ್ಟಿ ಮೇಲುಸ್ವರದಿಂದ
ಶ್ರೀಲೋಲ ಪರನೆಂದು ಹರಿದಾಸವರ್ಯರು
ಮೇಲಾದ ಭಕ್ತಿಯಲಿ ವಾಲ್ಗೈಸುತಿಹರು ॥೧೪॥

ನಿನ್ನ ಲೀಲೆಯ ಕಥೆಯು ಮುಕ್ತಿಗೆ ಸತ್ಪಥವು
ನಿನ್ನ ನಾಮದ ಮಹಿಮೆ ನಿಗಮಗಮ್ಯ
ನಿನ್ನ ಚರಣೋದಕವು ತ್ರಿಜಗಪಾವನ್ನವು
ನಿನ್ನ ನೇಮವೇ ಸೃಷ್ಟಿ ಸ್ಥಿತಿಲಯಕೆ ಕಾರಣವು ॥೧೫॥

ನಿನ್ನ ನಾಮದಿ ಭರದಿ ಶುಕನು ಕುಣಿದಾಡುತಿಹ
ನಿನ್ನ ಧ್ಯಾನದಿ ಯೋಗಿವೃಂದ ಸಂದಿಪುದು
ನಿನ್ನ ತೋಷದಿ ತೃಣವು ಬ್ರಹ್ಮನಿಂದಧಿಕವು
ನಿನ್ನ ರೋಷದಿ ಅಜಭವಾದ್ಯರು ತೃಣರು ॥೧೬॥

ನಿನ್ನ ಸುಂದರಮೂರ್ತಿ ಕಣ್ಣಿಗಹ್ಲಾದಕರ
ನಿನ್ನಂಘ್ರಿಸೇವೆ ಸಾಮ್ರಾಜ್ಯಗಿಂ ಪರತರವು
ನಿನ್ನ ನಾಮದಘೋಷ ಕಿವಿಗೆ ಸಂತೋಷವು
ನಿನ್ನ ನಾಮದ ರುಚಿಯು ಅಮೃತಕಿಂತಧಿಕ ॥೧೭॥

ನಿನ್ನ ಧ್ಯಾನವೆ ಸಕಲಸಾಧನದ ಸಾರವು
ನಿನ್ನ ಗುಣಗಾನವೆ ಶಾಸ್ತ್ರಗಳ ಭೂಷಣವು
ನಿನ್ನ ಮಹಿಮಾರಹಿತ ಕಾವ್ಯವಗ್ರಾಹ್ಯವು
ನಿನ್ನ ಲೀಲಾರಹಿತ ಶಾಸ್ತ್ರವೆ ಕುಶಾಸ್ತ್ರ ॥೧೮॥

ನಿನ್ನ ನಾಮಧ್ಯಾನವೇ ದೇಹಸಾರ್ಥಕವು
ನಿನ್ನ ನಾಮವೆ ವಿವಿಧ ರೋಗನಿರ್ಮೂಲಕವು
ನಿನ್ನ ನಾಮವೆ ದುರಿತರಾಶಿಗೆ ಪಾವಕವು
ನಿನ್ನ ನಾಮವೆ ಸಕಲಭವಬಂಧ ಮೋಚಕವು ॥೧೯॥

ನಿನ್ನ ವ್ಯಾಪ್ತತೆಯು ಅಣುರೇಣುತೃಣಕಾಷ್ಠದಲಿ
ನಿನ್ನ ದಯಪರಮೇಷ್ಠಿಯಿಂದಿರುವೆಗಳಲಿ
ನಿನ್ನ ಪ್ರೇಮದಿ ನಲಿದ ಮಂದಮತಿ ವಂದ್ಯನು
ನಿನ್ನಲ್ಲಿ ಮಮತೆಯಿಲ್ಲದವ ದೂಷಿತನು ॥೨೦॥

ಅಜಭವಗಿರೀಶ ಭಜಕಜನದಾಸ
ಸುಜನಮನತೋಷ ಕುಜನಮನಕ್ಲೇಶ
ದ್ವಿಜತತಿಯ ಪೋಷ, ರಜನಿಚರನಾಶ
ರಜತಪುರಧೀಶ, ಭುಜಗಗಿರಿವಾಸ ॥೨೧॥

ತಂದೆತಾಯಿಯು ನೀನೆ, ಬಂಧುಬಳಗವು ನೀನೆ
ಹಿಂದುಮುಂದು ನೀನೆ, ಎಂದೆಂದು ನೀನೆ
ಬಂದಭಯ ಪರಿಹರಿಸಿ ಕುಂದದಲೆ ಕಾಯ್ವಸಂ-
ಬಂಧಿಗನು ಆಪ್ತಗೋವಿಂದ ನೀನೆ ॥೨೨॥

ಸೃಜಿಸಿದವನು ನೀನೆ ಪೋಷಿಸಿದವನು ನೀನೆ
ನಿಜಗತಿಯ ಜೀವರಿಗೆ ನೀಡುವವನು ನೀನೆ
ಆಪಿತನೆ ನಿನ್ನಪದ ಭಜನೆಮಾಳ್ಪವರನ್ನು
ನಿಜವಾಗಿ ಕಾಪಾಡಿ ಪೊರೆವಪ್ರಭು ನೀನೆ ॥೨೩॥

ಕೊಡುವವನು ನೀನೆ ಕೊಳುವವನು ನೀನೆ
ಅಡಿಗಡಿಗೆ ಸುಖದುಃಖ ನೀಡುವವ ನೀನೆ
ಕೊಡುವದಾತನು ನೀನೆ ಕೊಟ್ಟದ್ದು ಕೊಂಡರೆ
ಹೊಡಕೊಂಡು ಅಳುವದ್ಯಾತಕೆ ಮೂಢಪ್ರಾಣಿ ॥೨೪॥

ಪೊಡವಿಯೊಳು ಮೊದಲು ನಾನು ಬಹುಕಾಲದಿ
ಕೌಪೀನ ಸಹ ಯನ್ನ ಸಂಗಡಿರಲಿಲ್ಲ
ಈ ಪೊಡವಿಯನು ಬಿಟ್ಟು ನಾ ಪೋಪಕಾಲಕ್ಕು
ಈ ಪರಿಯೆ ಪೋಪೆನೆಂಬುದು ಸಟಿಯು ಅಲ್ಲ ॥೨೫॥

ಗಾಡಿ ವಾಜಿಯು ಮತ್ತೆ ಬೆಡಗಿನವಸನಗಳು
ಕೇಡುಯಿಲ್ಲದವಾಭರಣ ವಸ್ತುಗಳು
ನಾಡಿನೊಳು ಬಹುಮನ್ನಣೆಯು ಯೆಂಬರೆಲ್ಲೆನ್ನ
ಕೂಡೆಬರಬಹುದಾದುದೊಂದುಯಿಲ್ಲ ॥೨೬॥

ಎಷ್ಟುಗಳಿಸಿದರೆನ್ನ ಹೊಟ್ಟೆಗೊಂದೇ ರೊಟ್ಟಿ
ಸೃಷ್ಟಿಪತಿ ನಿನ್ನಂಘ್ರಿನಿಷ್ಠೆ ತೊರೆದು
ಕಷ್ಟನಷ್ಟಗಳನ್ನು ಸಹಿಸಿ ನಿಷ್ಠುರನಾಗಿ
ದುಷ್ಟತನದಿಂದ ನಾನಿಷ್ಟುಪರಿ ಗಳಿಸಿ ॥೨೭॥

ದಾನಧರ್ಮಗಳಿಲ್ಲ ವ್ರತನೇಮಗಳುಯಿಲ್ಲ
ಆನಮಿಸಿಕೊಡಲಿಲ್ಲ ಮಾನಿವಿಪ್ರರಿಗೆ
ಧೇನುಪಾಲನೆ ನಿನ್ನಧ್ಯಾನವನ್ನೇ ಮರೆದು
ಶ್ವಾನನಂದದಿ ಕಾದುಕೊಂಡು ಕುಳಿತಿಪ್ಪೆ ॥೨೮॥

ವಾರನಾರಿಯರಲ್ಲಿ ವೇಷಧಾರಿಗಳಲ್ಲಿ
ಸೂರೆಮಾಡಿದೆ ಕರ್ಣನೆನಿಸಬೇಕೆಂದು
ಶ್ರೀರಮಾಪತಿ ನಿನ್ನ ಚರಣಕಮಲಗಳನ್ನು
ಆರಾಧಿಪರಿಗೆ ನಾರುವ್ವಿ ಕೊಡಲಿಲ್ಲ ॥೨೯॥

ಸತಿಸುತರು ಹಿತದವರು ಹಿತವ ಮೆಲ್ತೋರಿದು-
ರ್ಗತಿಗೆನ್ನ ಗುರಿಮಾಡುತಿಪ್ಪರಲ್ಲದಲೇ
ಕ್ಷಿತಿಪತಿಯೆ ನಿನ್ಹೊರತು ಹಿತವ ನಿಜತೋರಿ ಪರ-
ಗತಿಗೆ ಸಾಧನ ತೋರ್ಪರಾರು ಯನಗಿಲ್ಲ ॥೩೦॥

ಈ ಮಹಾಜ್ವರದಿಂದ ನೊಂದು ನಿನ್ನನು ನೆನೆವೆ
ನಾ ಮಹಾಭಕ್ತಿಯಲಿ ನಂಬಿದವನಲ್ಲ
ನಾ ಮಾಡಿದ ಪಾಪರಾಶಿಗಳ ಪರಿಹರಿಸಿ
ಪ್ರೇಮದಿಂದಲಿ ಪೊರೆಯೋ ಪರಮಕರುಣಿ ॥೩೧॥

ರೋಗವನೆ ಹೆಚ್ಚಿಸದೆ ನಿರೋಗಿಯನು ಮಾಡು ಭವ
ರೋಗದಿಂದಗತಿಕಡೆದಾಂಟಿಸು
ಯೋಗಿವರ ನಿನ್ನಿಚ್ಛೆ ಹೇಗೆಮಾಡಿದರು ಸರಿ
ಆಗದೆಳ್ಳಿನಿತು ಸಂಕೋಚವೆನಗೆ ॥೩೨॥

ನೀಕೊಟ್ಟಕವಚವಿದು ನೀ ತೆಗೆದುಹಾಕಲ್ಕೆ
ನಾಕೆಟ್ಟುದುದುಯೇನು ಕರುಣಾಳುವೆ
ಈ ಕವಚ ಕೆಲಕಾಲ ಬಿಟ್ಟಮಾತ್ರಕೆ ಮುಂದೆ
ನೂಕಬೇಡೆನ್ನಮನ ಪಾಪಗಳ ಕಡೆಗೆ ॥೩೩॥

ತನುಮನವು ನಿನ್ನದು ಧನಧಾನ್ಯ ನಿನ್ನದು
ವನಿತೆ ನಿನ್ನವಳು ಮನೆಮಾರು ನಿನ್ನದು ದೇವ
ಎನಗಾಪ್ತರೆಂಬುವರು ನಿನ್ನದಾಸರು ರಾಮ
ಎನದೆಂಬ ವಸ್ತುವೆಲ್ಲವು ನಿನ್ನದಯ್ಯಾ ॥೩೪॥

ನಿನ್ನ ನಂಬಿದಯೆನಗೆ ಪಾಪದಂಜಿಕೆಯಿಲ್ಲ
ಪುಣ್ಯದಾಶೆಯು ಇಲ್ಲ ಪರಮಪುರುಷ
ನಿನ್ನ ಪ್ರೇರಣೆಯಿಂದ ಯನ್ನಿಂದ ಮಾಡಿಸುವ
ಪುಣ್ಯಪಾಪದ ಫಲವು ನಿನ್ನದಯ್ಯಾ ॥೩೫॥

ನೀನೆ ಸರ್ವೇಶ ಪವಮಾನನೆ ಪರಮಗುರು
ಪೂರ್ಣಪ್ರಜ್ಞರ ಮತವೆ ಸ್ಥಿರವೆಂಬ ಮತಿಯ
ಸಾನುರಾಗದಿ ರಾಘವೇಂದ್ರರಾಯರು ಮೇಣ್
ಜ್ಞಾನಿ ವರದೇಂದ್ರಾರ್ಯ ಗುರುಗಳಲಿ ಭಕುತಿ ॥೩೬॥

ಗುರುಪರಕ್ಷೆಪರವಾಗಿ ದಾಸವರ್ಗದಲೆನಗೆ
ಸ್ಥಿರಮತಿಯ ಪಾಲಿಸೊ ಸರಸಿಜಾಕ್ಷ
ವರಗುರು ಪ್ರಾಣೇಶದಾಸರಾಯರೆ ಯನಗೆ
ಪರಮಗುರುವೆಂಬ ಮತಿ ನೆಲೆಗೊಂಡುಯಿರಲಿ ॥೩೭॥

ಮುಂದೆ ಹೌದೆಂದೆನ್ನ ಹಿಂದೆ ಜನ ನಿಂದಿಸಲಿ
ಇಂದಿರೇಶನೆ ನಿನ್ನ ಕರುಣ ಮಾತ್ರಿರಲಿ
ಮಂದಜಾಸನಜನಕ ಇಂದಿರಾಪತಿಯಾಪ-
ದ್ಬಂಧು ನೀನೆಂದು ಮನಕರಿಕೆ ಇರಲಿ ॥೩೮॥

ದೇಶವನೆ ತೊಲಗಿಸು ವಿದೇಶದೊಳಗೆ ಕಳಿಸು
ಗಾಸಿಯನು ಮಾಡಿಯಪಹಾಸಗೊಳಿಸು
ದಾಶರಥೆಯೆನ್ನದೊಂದೇ ಪ್ರಾರ್ಥನೆಯು ನಿನ್ನ
ದಾಸ್ಯವೊಂದೆನಗೆ ಕೊಟ್ಟಾಶೆ ಬಿಡಿಸು ॥೩೯॥

ನಿನ್ನ ದಾಸಸಂಗ ಸರ್ವದಾ ದೊರಕಲಿ
ನಿನ್ನ ಸೇವೆಯೊಳೆನ್ನ ದೇಹವೇ ಕೊರಗಲಿ
ನಿನ್ನ ನಾಮದಲೆನ್ನ ಜಿಹ್ವೆ ನಲಿದಾಡಲಿ
ಎನ್ನ ಹೃದಯದಿ ನಿನ್ನರೂಪಸ್ಥಿರವಿರಲಿ ॥೪೦॥

ರಾಮಸುಸ್ತವಕವನುಜಾಡ್ಯದಲಿ ಶ್ರೀ ಕುಪ್ಪೀ
ಭೀಮನುತ ವರದೇಶ ವಿಠಲ ನುಡಿಸಿದುದು
ಪ್ರೇಮದಿಂದೆಮ್ಮಗುರು ಪ್ರಾಣೇಶದಾಸಾರ್ಯ
ರಾಮಹಾಗುರುವರ್ಯರಿಗೆ ಸಮರ್ಪಿಸುವೆ ॥೪೧॥

--✿✿✿✿✿--

೨೦೪
ಸ್ಮರಿಸುವೆ ಸದ್ಭಕ್ತಿಯಲಿ ಶ್ರೀರಾಮನ

(ವರದೇಶವಿಠಲ / ಸ್ವಾಮಿರಾಯ / ೧೮೦೭-೧೯೧೮)

ಸ್ಮರಿಸುವೆನು ಸದ್ಭಕ್ತಿಯಲಿ ಶ್ರೀರಾಮನ ಗುಣಧಾಮನ
ಸಿರಿವಿರಿಂಚಾದ್ಯಮರಗಣ ಸಂಸ್ತುತ್ಯನ ಸಂತೃಪ್ತನಾ ॥ಪ॥

ಆದಿಯಲಿ ಝುಷನಾಗಿ ನಿಗಮವ ತಂದನ ಮುನಿವಂದ್ಯನ
ಭೂಧರಾಧರ ದಿವಿಜರಿಗೆ ಸುಧೆಗರೆದನ ಸುರವರದನ

ಕಾದು ಕೀಟರೂಪದಲಿ ಭೂಮಿಯ ತಂದನ ಗುಣವೃಂದನ
ಬಾಧಿಸಿದ ರಕ್ಕಸನ ತರಿದು ಪ್ರಹ್ಲಾದನ ತಾ ಪೊರೆದನ ॥೧॥

ಪೊಡವಿ ಮೂರಡಿಮಾಡಿಬಲಿಯನು ತುಳಿದನ ಅವಗೊಲಿದನ
ಕೊಡಲಿಪಿಡಿದಾ ಕ್ಷತ್ರಿಕುಲವಿರಾಮನ ಭೃಗುರಾಮನ
ಮೃಡನೊಂದಿ ಯುನ್ಮತ್ತದೈತ್ಯರು ಬಾಧಿಸೆ ಧರೆ ಪ್ರಾರ್ಥಿಸೆ
ಜಡಜ ಪೀಠಾದ್ಯಮರರಾ ಮೊರೆ ಕೇಳ್ದನ ಧರೆಗಿಳಿದನ ॥೨॥

ದಶರಥನ ಸತಿಯುದರದಲಿಯವತರಿಸಿದ ಮುದಗರಿಸಿದ
ಬಿಸರುಹಾಪ್ತನ ವಂಶವನು ಉದ್ಧರಿಸಿದ ಮೈಮರಸಿದ
ದಶದಿಶದಿ ಸುರರೆಲ್ಲ ಪೂಮಳೆಗರೆದರು ಸುಖಸುರಿದರು
ಅಸಮಲೀಲೆಯ ತೋರ್ದ ರಘುಕುಲಚಂದ್ರನ ಸುಖಸಾಂದ್ರನ ॥೩॥

ಗಾಧಿಸುತನಧ್ವರವ ಕಾಯ್ದ ಸಮರ್ಥನ ಜಗಕರ್ತನವೇದಧನು
ಮೊದಲಾದ ಕಲೆಗಳ ತಿಳಿದನ ಮುನಿಗೊಲಿದನ
ಹಾದಿಯಲಿ ಶಿಲೆಯಾದ ಅಹಲ್ಯಳ ಪೊರೆದನ ಸಿರಿವರದನ
ಮೋದದಲಿ ಹರಧನು ಮುರಿದ ಗಂಭೀರನ ಬಹುಶೂರನ ॥೪॥

ಜನಕಭೂಪತಿ ತನುಜಳೆನಿಸಿದ ಸೀತೆಯ ಭೂಜಾತೆಯಾ
ಘನಹರುಷದಲಿ ವಲಿಸಿಕರವನು ಪಿಡಿದನ ಯಶಪಡೆದನ
ದನುಜರುಪಟಳತೋರಲಾಕ್ಷಣ ಸೀಳ್ದನ ಸುರರಾಳ್ದನ
ತನಗೆ ತಾನೇ ಸೋಲಿಸಿದ ಜನಮೋಹನ ಖಗವಾಹನ ॥೫॥

ಜನಕನಾಜ್ಞವ ಪಾಲಿಸಿದ ದಯವಂತನ ಅಘಶಾಂತನ
ಅನುಜಸತಿಸಹ ಪುರದಿ ತಾ ಪೊರಮಟ್ಟನ ಅತಿ ದಿಟ್ಟನ
ವನದಿ ಬಹು ಮುನಿಗಳ ಕರಾರ್ಚಿತನಾದನ ಸುಪ್ರಸಾದನ
ಅನುಜ ಭರತಗೆ ದಯದಿ ಪಾದುಕೆ ಕೊಟ್ಟನ ಸಂತುಷ್ಟನ ॥೬॥

ಮನುಜರಂದದಿ ಸತಿವಿಯೋಗವ ತೋರ್ದನ ಕುಜನಾರ್ದನ
ವನಿತೆಯೆಂಜಲಫಲಗಳನು ತಾಮೆದ್ದನ ಶ್ರುತಿಸಿದ್ಧನ

ದನುಜರಿಪು ಹನುಮಂತನನು ಸಾರೆಗರೆದನ ಕರುಣಿಸಿದನ
ವನಜಸಖಸುತನೊಡನೆ ಸಖ್ಯವ ಮಾಡ್ಡನ ವರನೀಡ್ಡನ ॥೭॥

ಲೀಲೆಯಿಂದಲಿ ತಾಳಮರಗಳ ಸೀಳ್ದನ ನೆರೆಬಾಳ್ದನ
ವಾಲಿಯನು ಸಂಹರಿಸಿದತಿಬಲವಂತನ ಶ್ರೀಕಾಂತನ
ಮೇಲೆನಿಪ ರಕ್ಕಸರನೆಲ್ಲರ ತುಳಿದನ ಅಸುಸೆಳೆದನ
ಶ್ರೀಲತಾಂಗಿಯ ಕ್ಷೇಮವಾರ್ತೆಯ ಕೇಳ್ದನ ಮುದತಾಳ್ದನ ॥೮॥

ಗಿರಿಗಳಿಂದಲಿ ಶರಧಿಯನು ಬಂಧಿಸಿದನ ಸಂಧಿಸಿದನ
ಹರಿಗಳೆಲ್ಲರ ಕೂಡಿಲಂಕೆಯ ಸಾರ್ದನ ರಣದಿರ್ದನ
ಉರುಪರಾಕ್ರಮಿ ರಾವಣನ ಶಿರಕಡಿದನ ಹುಡಿಗೆಡೆದನ
ವರವಿಭೀಷಣ ಭಕ್ತಗಭಿಷೇಚಿಸಿದನ ಪೋಷಿಸಿದನ ॥೯॥

ಸಿರಿಸಹಿತ ಪುಷ್ಪಕವನೇರಿದ ಚೆಲುವನ ಅತಿ ಪೊಳೆವನ
ತ್ವರದಿಶೃಂಗರಿಸಿದ ಅಯೋಧ್ಯಗೆ ಬಂದನ ಅಲ್ಲಿ ನಿಂದನ
ಭರತ ಪ್ರಾರ್ಥಿಸಲಾಕ್ಷಣದಿ ಮೊರೆ ಕೇಳ್ದನ ಧರಿಯಾಳ್ದನ
ಸರಸಿಜಾಸನ ಪ್ರಮುಖರಾರ್ಚನೆ ಕೊಂಡನ ಕೋದಂಡನ ॥೧೦॥

ಮರುತಸುತನಿಗೆ ಅಜನ ಪದವಿಯನಿತ್ತನ ಬಹುಶಕ್ತನ
ಚರಣಸೇವಕ ಜನಕಭೀಷ್ಟದಾತನ ವಿಖ್ಯಾತನ
ನಿರುತ ಸನ್ಮುನಿಹೃದಯಮಂದಿರವಾಸನ ಜಗದೀಶನ
ಸ್ಮರಣೆಮಾತ್ರದಿ ದುರಿತರಾಶಿಯ ತರಿದನ ಸುಖಗರೆವನ ॥೧೧॥

ದೇವಕೀ ವಸುದೇವಸುತನೆಂದೆನಿಪನ ಜಗಕಧಿಪನ
ಮಾವನನು ಸಂಹರಿಸಿ ಶಕಟನ ಕೊಂದನ ಆನಂದನ
ಗೋವು ಕಾಯುತ ಗಿರಿಯ ಬೆರಳಲಿ ಆಂತನ ಬಹುಶಾಂತನ
ಗೋವ್ರಜದಿ ಗೋಪಿಯರ ವಸನವ ಕಳೆದನ ಅಹಿತುಳಿದನ ॥೧೨॥

ಲೋಕನಾಥನು ಪಾರ್ಥಸಾರಥಿಯಾದನ ಸುಪ್ರಮೋದನ
ನೇಕ ಪರಿಭಗವತ್ಸುಗೀತೆಯ ಪೇಳ್ದನ ತಮಸೀಳ್ದನ

ಆ ಕುರುಕುಲವ ತರಿದ ಪಾಂಡವಪ್ರಾಣನ ಸುಪ್ರವೀಣನ
ಆಕುರುಪ ಭೀಷ್ಮನಿಗೆ ಮುಕ್ತಿಯ ಕೊಟ್ಟನ ಅತಿಶ್ರೇಷ್ಠನ ॥೧೩॥

ಕಪಟನಾಟಕ ನಗ್ನರೂಪದಿ ನಿಂತನ ನಿಶ್ಚಿಂತನ
ತ್ರಿಪುರದಲಿ ಜಲಜಾಕ್ಷಿಯರ ವ್ರತಭಂಗನ ನಿಸ್ಸಂಗನ
ಕೃಪಣವತ್ಸಲ ತುರಗವೇರಿ ತಾನಡೆದನ ಅಸಿಪಿಡಿದನ
ಅಪರಿಮಿತ ಬಹುಕ್ರೂರ ಯವನವಿಘಾತನ ಪ್ರಖ್ಯಾತನ ॥೧೪॥

ಈ ವಿಧದಿ ಬಹುಲೀಲೆಗೈವ ಸುಚರಿತನ ಜಗಭರಿತನ
ಭಾವಶುದ್ಧಿಲಿ ಭಜಿಸುವವರಘಕಡಿವನ ಗತಿಕೊಡುವನ
ಪಾವಮಾನಿ ಮತಾಣುಗರ ಕರಪಿಡಿವನ ಭವತಡೆವನ
ದೇವತತಿ ಸದ್ವಿನುತ ವರದೇಶವಿಠಲನ ನಿಷ್ಕುಟಿಲನ ॥೧೫॥

--✿✿✿✿✿--

೨೦೫

ಎಂಥ ಶೂರನೋ ರಾಮ ಎಂಥ ಧೀರನೋ

(ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? – ಮ. ೧೯೫೪)

ಎಂಥ ಶೂರನೋ ರಾಮ ಎಂಥ ಧೀರನೋ ॥ಪ॥

ಕಂತುಹರನ ಧನುವನೆತ್ತ
ಪಂಥದಿಂದ ಮುರಿದು ಬಿಸುಟ ॥ಅ.ಪ॥

ಹಲವು ಶೂರರಾಜರದನು
ಚಲಿಸಲಾಗದ ಧನುವ
ಸುಲಭದಿಂದಲೆತ್ತಿ ಮುರಿದು
ಲಲನೆ ಸೀತೆಯೊಲಿಸಿದವನು ॥೧॥

ಸಕಲ ಕ್ಷತ್ರಿಯರನು ಗೆಲಿದು
ಪ್ರಕಟನಾದ ಪರಶುರಾಮ
ಶಕುತಿಯನ್ನು ತಾನು ಪರಮ
ಯುಕುತಿಯಿಂದ ಗೆಲಿದು ಬಂದ ॥೨॥

ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದವ
ಪಾಂಡವರೋಲೆಕಾರನಾದೆಯಾಕೆ
ನಿನಗಾಗಿ ನೀನು ಬವಣೆಪಡಲಿಲ್ಲವೊ ದೇವ
ನಿನ್ನ ಭಕುತರ ಪೊರೆಯಲೋಸುಗವೆಂಬುದ ನಾ ಬಲ್ಲೆ
ನಿನ್ನ ದಯಕೆಣೆಯುಂಟೆ ಎನ್ನಪ್ಪ ರಂಗೇಶವಿಠಲ ॥೩॥

--✿✿✿✿✿--

೨೦೬
ಬಂದನು ರಘುವೀರ ರಣಧೀರ

(ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? – ಮ. ೧೯೫೪)

ಬಂದನು ರಘುವೀರ ರಣಧೀರ ॥ಪ॥

ತಡೆ ಭರತನೆ ಮುಂದಡಿಯಿಡಬೇಡ
ದುಡುಕಿ ಬೀಳದಿರು ಬಡಜನ ಮುಖಕೆ ॥೧॥

ಸೀತಾನಾಥನ ದೂತನಾದೆನ್ನ
ಮಾತನು ಕೇಳು ಆತುರಪಡದೆ ॥೨॥

ಭ್ರಾತನ ನೋಡಲು ಕಾತರನಾಗಿ
ವಾತವೇಗದೊಳು ಆತನು ಬರುತಿಹ ॥೩॥

ಅದೊ ನೋಡದೊ ನೋಡದರ ದೆಶೆಯಲಿ
ವಿದುಶತಕಿಲ್ಲದಗದಿರದದ್ಯುತಿಯ ॥೪॥

ಅದೊ ಪುಷ್ಪಕವು ಅದರ ಪ್ರಭೆ ನೋಡು
ಅದರಿರವ ನೋಡು ಒದಗಿ ಬರುತಿದೆ ॥೫॥

ಆ ಮಹಕಾಂಚನಧಾಮ ಮಧ್ಯೆ ನಿ
ಸ್ಸೀಮ ನಿಮ್ಮಣ್ಣ ರಾಮನ ನೋಡು ॥೬॥

ವಾಮದಿ ಸೀತಾಭಾಮೆ ಕುಳ್ಳಿಹಳು
ಪ್ರೇಮದಿ ಲಕ್ಷ್ಮಣ ಚಾಮರ ಬೀಸುವ ॥೭॥

ಬಲದಿ ಸುಗ್ರೀವ ನೆಲೆಸಿಹ ನೋಡು
ಕೆಲದಿ ವಿಭೀಷಣ ನಲಿಯುತ ನಿಂತಿಹ ॥೮॥

ಅಂಗದ ತನ್ನಯ ಜಂಘೆಲಿ ದೇವನ
ಮಂಗಳಚರಣವ ಹಿಂಗದೆ ಸೇವಿಪ ॥೯॥

ವೃದ್ಧಜಾಂಬವ ಗದ್ದುಗೆ ಮುಂದಿಹ
ಯುದ್ಧಪ್ರವೀಣರು ಸಿದ್ಧರಾಗಿಹರು ॥೧೦॥

ಉಳಿದ ಕಪಿ, ದನುಜದಳಗಳು ಹಿಂದೆ
ಕಲಕಲಮಾಡುತ ಉಲಿಯುತಲಿಹವು ॥೧೧॥

ಅರರೆ ವಿಮಾನವು ತಿರುಗಿತು ನೋಡು
ಧರಣಿಗೆರಗುತಿದೆ ಭರದೊಳು ನೋಡು ॥೧೨॥

ಭಳಿರೇ ರಾಮನು ಇಳಿದನು ನೋಡು
ಕಳವಳವೆಲ್ಲವ ಕಳೆಯುತ ನೋಡು ॥೧೩॥

ಬಂದನು ಅದಕೊ ಬಂದೇ ಬಂದನು
ಇಂದುಮುಖಿಯ ತಾ ಹಿಂದಿಟ್ಟುಕೊಂಡು ॥೧೪॥

ಮುಂದೆ ಬರುವ ಕಪಿಯನು ಉಳಿದು
ಸುಂದರಮುಖವು ಕುಂದಿದೆ ನೋಡು ॥೧೫॥

ನಡೆದುಬರುತಿಹ ಮಡದಿಯೊಡಗೂಡಿ
ತಡಮಾಡದಿರು ಪೊಡಮಡು ಹೋಗು ॥೧೬॥

ಇಂತು ನುಡಿದು ಧೀಮಂತನಾದ ಹನು-
ಮಂತ ಚಿಗಿದು ಖಗನಂತೆ ಬಂದಿಳಿದ ॥೧೭॥

ವಾತಸುತನ ಸವಿಮಾತಲಿ ಭರತನು
ಪ್ರೀತಿಲಿ ತಿರುಗಿದನಾತುರದಿಂದ ॥೧೮॥

ನೋಡುತ ರಾಮನ ಓಡುತ ಬಂದೀ
ಡಾಡಿದ ತನುವ ಬಾಡಿದಮುಖದಿ ॥೧೯॥

ಅನುಜನ ನೋಡಿ ದನುಜಾರಿಯಾಗ
ಮನ ಮರುಗಿದ ಬಲು ಕನಿಕರದಿಂದ ॥೨೦॥

ರಂಗೇಶವಿಠಲ ಕಂಗಳ ಜಲದೊಳು
ಮಂಗಳಯುತನಾಲಿಂಗನಗೈದ ॥೨೧॥

--✿✿✿✿✿--

೨೦೭
ಮಾತುಮಾತಿಗೆ ಮರೆಯಬೇಡ ಸೀತಾರಾಮನ
(ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? – ಮ. ೧೯೫೪)

ಮಾತುಮಾತಿಗೆ ಮರೆಯಬೇಡ ಸೀತಾರಾಮನ ॥ಪ॥

ಮಾತರಿಶ್ವನಾಥನು ಪ್ರೀತನಾಗುವ ॥ಅ.ಪ॥

ಹನುಮ ತಾನು ಭಕ್ತಿಯಿಂದ ನೆನೆದು ಸುಖಿಸುತ
ವನಜಸಂಭವ ಪದವಿಹೊಂದಿದ ಘನತರನ ಮಾತ ॥೧॥

ಅಬಲೆಯನ್ನು ಕುಲಕೆ ತಂದ ಪ್ರಬಲನ ಮಾತ
ಶಬರಿಯೆಂಬ ಭಕ್ತಳಿಗೆ ಅಭಯವಿತ್ತನ ಮಾತ ॥೨॥

ಅಂಗಜವೈರಿ ಶ್ರೀ ಶಿವನು ಹಿಂಗದೆ ಭಜಿಪ
ರಂಗೇಶವಿಠಲನೆಂಬುವ ಮಂಗಳನ ಮಾತ ॥೩॥

--✿✿✿✿✿--

೨೦೮
ರಾಮನ ನೋಡಿರೆ ರಘುಕುಲತಿಲಕನ
(ರಂಗೇಶವಿಠಲ / ಅರಕೆರೆ ಸಂಜೀವರಾವ್ / ಜ. ? – ಮ. ೧೯೫೪)

ರಾಮನ ನೋಡಿರೆ ರಘುಕುಲತಿಲಕನ
ಕೋಮಲಕಾಯ ಕೌಸಲ್ಯಾತನಯನ ॥ಪ॥

ತಾಮಸದೈತ್ಯರ ಲೀಲೆಯಲಿ ಕೊಂದು
ಭೂಮಿಭಾರವನಿಳುಹಿದ ನಿಸ್ಸೀಮನ ॥ಅ.ಪ॥

ತಾಟಕಾದಿಗಳ ಘೋರಾಟವಿಯಲಿ
ಪಾಟುಪಡಿಸಿದ ಹಾಟಕಾಂಬರನ
ತೋಟಿಗೊದಗಿದ ಮಾರೀಚಾದಿಗಳ
ಆಟವನಾಡಿಸಿದ ನೀಟುಗಾರ ॥೧॥

ಹಲವುಕಾಲದಿ ಶಿಲೆಯಾಗಿರ್ದ
ಲಲನೆ ಅಹಲ್ಯೆಯ ಶಾಪವ ಹರಿಸಿ
ಕಲುಷವ ಕಳೆಯುತ ಕುಲಸತಿ ಮಾಡಿದ
ಚೆಲುವ ಮೂರುತಿ ನಳಿನನಯನನ ॥೨॥

ಹರನಧನುವನು ಸ್ಮರನಧನುವಿನಂತೆ
ತ್ವರದಿ ಮುರಿದುನಿಂದ ಸುಕುಮಾರನ
ಧರಣಿಪಜನಕನ ಭಕ್ತಿಗೆ ಒಲಿದು
ಧರಣಿಜೆಯ ವರಿಸಿ ಹರುಷವಿತ್ತನ ॥೩॥

ತಾತನ ಭಾಷೆಯ ಪ್ರೀತಿಯಿಂ ಸಲಿಸೆ
ಸೀತೆಸಹಿತ ಭ್ರಾತಲಕ್ಷ್ಮಣವೆರಸಿ
ಆತುರದಿಂದಲಿ ಅರಣ್ಯವನೈದಿ
ಕೌತುಕತೋರುತ ಚರಿಸಿದವನ ॥೪॥

ಖರದೂಷಣ ತ್ರಿಶಿರಾದಿ ರಕ್ಕಸರ
ಅರೆಕ್ಷಣದಲಿ ತರಿದು ಬಿಸುಟವನ
ಹಿರಣ್ಯಮೃಗವ ಬೆನ್ನಟ್ಟಿ ಕೆಡಹುತ
ವರಜಟಾಯು ಶಬರಿಗೆ ಒಲಿದವನ ||೫||

ವಾತಸುತನ ಕಂಡಾತನ ಪದುಳಿಸಿ
ಆ ತರಣಿಸುತಗೆ ಅಭಯವನಿತ್ತ
ಜಾತವೇದನೆದುರಲಿ ಸಖ್ಯವಮಾಡಿ
ಘಾತಕ ವಾಲಿಯ ನಿಗ್ರಹಿಸಿದನ ||೬||

ಕೋತಿ ಕರಡಿಗಳ ಹಿಂಡನು ಕೂಡಿಸಿ
ಸೇತುವೆಗಟ್ಟಿಸಿ ಜಲಧಿಯ ದಾಟಿ
ಪಾತಕಿ ರಾವಣನ ಶಿರಗಳ ಕಡಿದು
ಸೀತೆಯ ಸೆರೆಯನು ಬಿಡಿಸಿದಾತನ ||೭||

ಮೊರೆಯನು ಪೊಕ್ಕಾ ವರ ವಿಭೀಷಣನ
ಕರುಣದಿ ಕರೆದು ಕರವನು ಪಿಡಿದು
ಧರೆಯಿದು ಸ್ಥಿರವಾಗಿರುವ ಪರಿಯಂತ
ದೊರೆತನ ಮಾಡೆಂದ್ಧರಸಿದಾತನ ||೮||

ಅಕ್ಕರೆಯಿಂದಲಿ ಅರ್ಚಿಸುವರಿಗೆ
ತಕ್ಕಂತೆ ವರಂಗಳ ನೀಡುತಲಿ
ಮಿಕ್ಕು ರಾಜಿಸುತಿಹ ಪಂಪಾಪುರದ
ಚಕ್ರತೀರ್ಥದಿ ನೆಲೆಸಿಹನ ||೯||

ಕಂತುವೈರಿ ವಿರೂಪಾಕ್ಷಗೆ ತಾರಕ
ಮಂತ್ರ ನಾಮಕನಾಗಿರುತಿರ್ಪನ
ಯಂತ್ರೋದ್ಧಾರನಾಗಿರುವ ಹನುಮನ
ಮಂತ್ರಿಯ ಮಾಡಿಕೊಂಡು ರಾಜಿಪನ ||೧೦||

ದುಷ್ಟರಕ್ಕಸರ ದಮನವ ಮಾಡಿ
ಶಿಷ್ಟ ಜನರುಗಳಿಷ್ಟವ ಸಲಿಸುತ
ಸೃಷ್ಟಿಗೊಡೆಯನೆನಿಸಿ ಮೆರೆಯುತಲಿರುವ
ದಿಟ್ಟ ಶ್ರೀ ರಂಗೇಶವಿಠಲನ ॥೧೧॥

--✿✿✿✿✿--

೨೯

ಆರೈದು ಸಲಹೋ ಎನ್ನಶ್ರೀರಾಮಚಂದ್ರ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)

ಆರೈದು ಸಲಹೋ ಎನ್ನ - ಶ್ರೀ ರಾಮಚಂದ್ರ ॥ಪ॥

ಆರೈದು ಸಲಹೋ ಎನ್ನ - ಸಾರಿದೆ ನಿನ್ನ ಚರಣ
ವಾರಿಜಯುಗಳವನ್ನು - ಶ್ರೀ ರಾಮಚಂದ್ರ ॥ಪ॥

ಕಕ್ಕಸಭವದೊಳು - ದಿಕ್ಕೆಟ್ಟು ತುಕ್ಕೆ ಬಲು
ದುಃಖಿಸುತಿಹೆನು ಕೇಳು - ಶ್ರೀರಾಮಚಂದ್ರ ॥೧॥

ತಂದೆತಾಯಿಯು ನೀನೆ - ಬಂಧುಬಳಗ ನೀನೇ
ಎಂದೆಂದು ಗತಿ ನೀನೆ - ಶ್ರೀ ರಾಮಚಂದ್ರ ॥೨॥

ಕರುಣಾವಲೋಕನ ಬೀರದೆ - ಭವ ಬನ್ನ ಈ
ಪರಿಯರೋಷವೊ ಘನ್ನ - ಶ್ರೀ ರಾಮಚಂದ್ರ ॥೩॥

ಘೋರತಾಪದ ನೋವ - ಪಾರಗಾಣಿಸೋ ದೇವ
ದೂರನೇ ನಾ ನಿನ್ನ - ಶ್ರೀ ರಾಮಚಂದ್ರ ॥೪॥

ಯಾಕೆ ಬಾರದೋ ದಯ - ಶ್ರೀಕಾಂತ ಎನ್ನಯ
ವಾಕುಸೋಕದೆ ಕಿವಿಯ - ಶ್ರೀರಾಮಚಂದ್ರ ॥೫॥

೨೧೧

ಏನೆಂದು ಪೇಳಲೋ ರಾಮ ನಿನ್ನಾ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)

ಏನೆಂದು ಪೇಳಲೋ ರಾಮ ನಿನ್ನಾ
ದೀನವತ್ಸಲತೆಯ ಆಶ್ರಿತ ಪ್ರೇಮ ॥ಪ॥

ಕಲ್ಲಾಗಿ ಪಥದಲ್ಲಿ ಬಿದ್ದ । ಮುನಿ
ವಲ್ಲಭೆಯನು ಸಲಹಿದ ಸುಪ್ರಸಿದ್ಧ
ಕಲ್ಲೆದೆಯವ ನಾನು ಸಿದ್ಧ । ಎನ್ನ
ಸೊಲ್ಲುಲಾಲಿಸಿ ಪೊರೆಯಯ್ಯ ಅನಿರುದ್ಧ ॥೧॥

ಪಶುಜಾತಿ ಸುಗ್ರೀವ ಮುಖರ ।ನೀ
ಹಸನಾಗಿ ಪೊರೆದದ್ದು ಕೇಳಿದೆ ವಿವರ
ವಶವಲ್ಲದಿಂದ್ರಿಯನಿಕರವುಳ್ಳ
ಪಶುಪ್ರಾಯ ನಾನಯ್ಯ ರಕ್ಷಿಸೋ ಚತುರ ॥೨॥

ಸುರಕುಲಕೆ ತಿಲಕನಹ ನರಹರಿಯ ಪಣೆಯಲ್ಲಿ
ತರುಣಿ ಕಸ್ತುರಿಯ ತಿಲಕವನಿಟ್ಟಳು
ಸ್ಮರಜನಕ ಸದ್ಗುಣಾಭರಣ ಶ್ರೀಧರಗೆ ಆ-
ಭರಣಗಳಂಕರಿಸಿ ಹಿಗ್ಗುತಿಹಳು ॥೩॥

ತ್ರಿದಶರಿಗೆ ಸುಧೆಯನೆರೆದವನಿಗುಣಬಡಿಸಿ
ಭಕ್ತಿ ಮುಕ್ತಿದಾತಂಗೆ ಬುತ್ತಿಯನಿತ್ತು
ಪರಮ ಸ್ವತಂತ್ರನಹ ಶ್ರೀಕಾಂತನಿಂಗೆ
ತುರುಗಾಹೆ ಬೆಸನಿತ್ತಳಾನಂದಗೋಪಿ ॥೪॥

--✿✿✿✿✿--

೨೧೧

ಜಯಜಯತು ಶ್ರೀರಾಮ ಜಯಜಯತು

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)

ಜಯಜಯತು ಶ್ರೀರಾಮ - ಜಯಜಯತು ಘನಶ್ಯಾಮ
ಜಯಜಯತು ಮುನಿಪ್ರೇಮ - ರಿಪು ಭೀಮ
ಜಯಜಯತು ಸುರಸ್ತೋಮ - ವಿನಮಿತ ಮಂಗಳನಾಮ
ಜಯತು ಸದ್ಗುಣಧಾಮ - ರಘುರಾಮ ||೧||

ಆನಂದಜ್ಞಾನದನೆ - ಆನಂದಮಾಸದನೆ
ಆನಂದಸಿದ್ಧಿದನೆ - ಅನಘನೇ
ಆನಂದಮಂದಿರನೆ - ಆನಂದಚಂದಿರನೆ
ಆನಂದಸುಂದರನೆ - ಅನಘನೇ ||೨||

ಸುರಾರಿದರ್ಪಹರ - ಪುರಾರಿ ಮಿತ್ರವರ
ದರಾರಿ ಅಭಯಕರ - ಸುಕುಮಾರ
ಕಾರುಣ್ಯಾಪಾಂಗವರ - ಲಾವಣ್ಯರೂಪಧರ
ವರೇಣ್ಯನಿಕರ - ಸಿರಿಕಾಂತ ||೩||

--✿✿✿✿✿--

೨೧೨

ಜಯಮಂಗಳ ನಾಮ ಶ್ರೀರಾಮ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)

ಜಯಮಂಗಳ ನಾಮ ಶ್ರೀರಾಮ
ಜಯ ಜಯ ಸದ್ಗುಣಧಾಮ ನಿಸ್ಸೀಮ ||ಪ||

ಭಾನುವಂಶಪಯೋನಿಧಿಚಂದ್ರ
ದೀನರಕ್ಷಣಪರ ಹೇ ದಯಾಸಾಂದ್ರ ||೧||

ದಾನವಹರ ಸುರಕಾರ್ಯವಿಚಾರ
ವಾನರತತಿ ಸುಮಾವೃತಧೀರ ||೨||

ಭರತ ಶತ್ರುಹನ ಲಕ್ಷ್ಮಣ ಭ್ರಾತ
ಮರುತನಯನುತ ಶ್ರೀಲಕ್ಷ್ಮೀಕಾಂತ ॥೩॥

--✿✿✿✿✿--

೨೧೩
ಪರತರ ಪಾವನ ಶ್ರೀರಾಮ ಜಯ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ – ೧೯೪೦)

ಪರತರ ಪಾವನ ಶ್ರೀರಾಮ ಜಯ ॥ಪ॥

ಶರಣ ಜನಾವನ ಶ್ರೀರಾಮ ಜಯ ॥ಅ.ಪ॥

ಖರತರ ನಿಶಾಚರ ದಹನ ಪರಾವೃತ
ಸರಸಿಜಭವನುತ ಶ್ರೀರಾಮಜಯ ॥೧॥

ಸೀತಾಲಕ್ಷ್ಮಣ ಭರತ ಶತ್ರುಹನ
ವಾತಜಸೇವಿತ ಶ್ರೀರಾಮ ಜಯ ॥೨॥

ಸ್ವಾಂತ ಧ್ವಾಂತ ನಿಕೃಂತ ಲಕ್ಷ್ಮೀ-
ಕಾಂತ ನಮೋ ನಮೋ ಶ್ರೀರಾಮ ಜಯ ॥೩॥

--✿✿✿✿✿--

೨೧೪
ಮರೆವರೇನೊ ರಾಮ ನಿನ್ನ ಚರಣಸೇವಕನನ್ನು

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ – ೧೯೪೦)

ಮರೆವರೇನೊ ರಾಮ ನಿನ್ನ ಚರಣಸೇವಕನನ್ನು
ಪರರಿಗೊಪ್ಪಿಸಿ ಹೀಗೆ ॥ಪ॥

ಪರಮ ದಯಾನಿಧಿ ಅಲ್ಲವೆ ಮುನ್ನ
ಶರಣರ ಪಾಲಿಸಲಿಲ್ಲವೆ ಇದು
ಸರಿಯೇನೋ ಜನ ನಗರೇನೋ ಇನ್ನು
ಧರಣಿಯೊಳು ನಾನೇನು ಭಾರವೆ ದೂರವೆ ॥ಅ.ಪ॥

ಗತಿಹೀನರಿಗೆ ನೀ ಗತಿಯೆಂದು ! ನೀನೆ
ಪತಿತರ ಪತಿಕರಿಸುವನೆಂದು
ಕೇಳಿ ಬಂದೆನ್ನೈ ಭವದಿ ನೊಂದೆನ್ನೈ ಮುಂದೆ
ಗತಿದೋರೆಂದು ಸಾರಿದೆ ಚೀರಿದೆ ದೂರಿದೆ ॥೧॥

ದೋಷರಾಶಿಗಳೆಲ್ಲ ಅಳಿಸಯ್ಯ
ವಿಷಯವಾಸನೆ ವಿಷವೆಂದು ತಿಳಿಸಯ್ಯ । ನಿನ್ನ
ದಾಸಾನುದಾಸ ದಾಸನು ಎನಿಸಿ । ಪರಿ-
ಪೋಷಿಸಬೇಕಯ್ಯ ದಮ್ಮಯ್ಯ ಎಮ್ಮಯ್ಯ ॥೨॥

ಏನು ಸಾಧನವನ್ನು ನಾ ಕಾಣೆ ! ನಿನ್ನಾ
ಧೀನದವನು ನಾ ನಿನ್ನಾಣೆ
ದೀನಬಂಧುವೆ ದಯಾಸಿಂಧುವೆ
ನಿನ್ನ ಪರಮಾನಂದ ಮೂರ್ತಿಯ ತೋರೋ ಶ್ರೀಕಾಂತನೆ ॥೩॥

--✿✿✿✿✿--

೨೧೫
ಮಾಡುವುದೊ ಕೃಪೆ ದಾಸನೊಳು ರಾಮ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ – ೧೯೪೦)

ಮಾಡುವುದೋ ಕೃಪೆ ದಾಸನೊಳು ರಾಮ
ಮಾಡುವುದೋ ಕೃಪೆ ದಾಸನೊಳು ॥ಪ॥

ನೋಡ ನೋಡುತ ಕೈಯ್ಯ ಬಿಡುವರೆ
ಬೇಡ ಬೇಡಿಕೊಂಬೆನು
ರೂಢಿಯೊಳು ನಿನ್ನಂಥ ಕರುಣಿಯ
ನೋಡಲಿಲ್ಲವೋ ಎಲ್ಲಿಯು ॥ಅ॥

ಬಂದೆನೋ ನಾನಾ ಜನ್ಮದಲೀ । ರಾಮ
ನೊಂದೆನೋ ನಾ ಬಹುಬವಣೆಯಲಿ
ದ್ವಂದ್ವದುಃಖದಿ ಕಂದಿಕುಂದುತ ಮುಂದುಗಾಣದೆ ಕೆಟ್ಟೆನೊ
ಕಂದನೆನ್ನುತ ಬಂದು ಪೊರೆ ಪರಮಾತ್ಮ ನಂಬಿದೆ ನಿನ್ನನು ॥೧॥

ದಾನಧರ್ಮಗಳ ನಾನರಿಯೆ । ರಾಮ
ಮೌನಮಂತ್ರಗಳ ನಾನರಿಯೆ
ಧ್ಯಾನಧಾರಣ ಜ್ಞಾನಸಾಧನವೇನೊಂದನು ಅರಿಯೆ
ಹಾನಿಯಿದ ನಾನೇನನೊರೆಯಲಿ ಮಾನನಿಧಿ ನಿನ್ನವನು ನಾ ॥೨॥

ಕಾಮಿನಿ ಕಾಂಚನ ಭೂಮಿಗಳ । ರಾಮ
ಕಾಮಕೆ ಸಿಕ್ಕಿದೆನೋ ಬಹಳ
ನೇಮ ನಿಷ್ಠೆಗಳೇನೂ ಇಲ್ಲದೇ ತಾಪದಿ ನಾ ಕೆಟ್ಟೆನೋ
ನಾಮಸುಧೆಯಪಾನ ಕರುಣಿಸು ಪ್ರೇಮದಲಿ ಶ್ರೀಕಾಂತನೇ ॥೩॥

--✿✿✿✿✿--

೨೧೬
ರಾಮ ಸದ್ಗುಣಧಾಮ ನಿಸ್ಸೀಮ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)

ರಾಮ ಸದ್ಗುಣಧಾಮ ನಿಸ್ಸೀಮ
ಸುಮನೋರಮ ॥ಪ॥

ಕಾಮಾರಿಸ್ತುತ ಮಂಗಳನಾಮ ॥ಅ॥

ಸರಸಾಕಾರ ದುರಿತವಿದೂರ
ಕರುಣಾಕರ ಸುಂದರ ಗಂಭೀರ ॥೧॥

ದೀನೋದ್ಧಾರ ವಿಪಿನವಿಹಾರ
ದಾನವಹರ ಸುರಕಾವ್ಯ ವಿಚಾರ ॥೨॥

ಸೀತಾನಾಥ ವಾನರಯೂಥ
ವಾತಾತ್ಮಜನುತ ಶ್ರೀ ಲಕ್ಷ್ಮೀಕಾಂತ ॥೩॥

--✿✿✿✿✿--

ಸಡಿಲ ಬಿಡದೆ ಕೈಯಪಿಡಿದು ಉದ್ಧರಿಸಯ್ಯ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ – ೧೯೪೦)

ಸಡಿಲ ಬಿಡದೆ ಕೈಯ ಪಿಡಿದು ಉದ್ಧರಿಸಯ್ಯ
ಬಡವನು ನಾನಯ್ಯ – ಕೊಡು ನಿನ್ನ ಸೇವೆಯ ||ಪ||

ಒಡಲಿಗೋಸುಗ ಪರರಡಿಗಳ ಪಿಡಿಯುತೆ
ಕಡುನೊಂದೆನೊ ಭವದ ಕಡಲಿನೊಳಗೆ ||ಅ||

ಪಡೆದು ವರಗಳನು ಕಡು ಖೂಳರಾವಣ
ನಡುಗಿಸಿ ಸುರನರ ಭುಜಗರೊಡೆಯರನ್ನು
ಹಿಡಿದು ಮುನೀಶರ ಹೊಡೆದು ಬಡಿದು ಹಿಂಸೆ-
ಪಡಿಸುತ್ತ ಯುವತೇರ ದುಡುಕು ಮಾಡುತ್ತಲಿರೆ
ಗಡಣೆಗಾರದೆ ಪಾಲಕಡಲತಡಿಗೆ ಬಂದು
ದೃಢಭಕ್ತಿಯಲಿ ನಿಂದು ಜಡಜಭವಾದ್ಯರು
ಪೊಡಮಟ್ಟು ಬೇಡಲು ಕೊಡುತೆ ಅಭಯವನು
ಮಡದಿಯನೊಡಗೂಡಿ ಪೊಡವಿಗಿಳಿದು ಬಂದೆ ||೧||

ದಶರಥನೃಪಸತಿ ಕೌಸಲ್ಯಾದೇವಿಯ
ಬಸುರೊಳು ಸಂಜನಿಸಿ ದಶದಿಶದೊಳು ಯಶ
ಪಸರಿಸಿ ಅಸುರೆಯ ಅಸುವನು ಹಾರಿಸಿ
ಕುಶಿಕಸುತನ ಯಜ್ಞಹಸನಾಗಿ ಪಾಲಿಸಿ
ನಸುನಗುತಲಿ ಪದಸರಸಿಜ ಸೋಕಿಸಿ
ಅರುಣಾಂಭೋರುಹಲೋಚನ ಸುರಗಂಗೋದಿತ ಚರಣ
ಕರಿರಾಜವರದಾಚ್ಯುತ ಸ್ವರತಾ ಸ್ವತಂತ್ರ ಸುಚರಿತ||೨||
ಜಯ ಜಯ ವೇದೋದ್ಧಾರಕ ಜಯ ಮಂದರಗಿರಿಧಾರಕ
ಜಯ ಕಾಂಚನನಯನಾಂತಕ ಜಯ ಮನುಜಮೃಗೇಂದ್ರ
ಜಯ ವೈರೋಚನಿದರ್ಪಹರ ಜಯ ಭೂಮಿಭುಜದಲ್ಲಣ
ಜಯರಾಮಕೃಷ್ಣ ನಿಪುಣಕಲ್ಕಿ ಹಾ ಶ್ರೀಕಾಂತ ಜಯಜಯ ||೩||

--✿✿✿✿✿--

ಶ್ರೀರಾಮ ಎನ್ನಿರೋ ಶ್ರೀರಾಮ ಎನ್ನಿರೋ

(ಶ್ರೀಕಾಂತ / ದಾಸರ ಲಕ್ಷ್ಮೀನಾರಾಯಣ / ೧೮೮೦ - ೧೯೪೦)

ಶ್ರೀರಾಮ ಎನ್ನಿರೋ ಶ್ರೀರಾಮ ಎನ್ನಿರೋ ॥ಪ॥

ದುರಿತಪರ್ವತಕ್ಕೆ ವರವಜ್ರವೆನಿಪುದು ಜಗವರಿಯೆ ॥ಅ.ಪ॥

ಶರಣರ ನಿತ್ಯ ಪೊರೆಯುವ ಸತ್ಯ
ತಾರಕನಾಮಕೆ ಮತ್ತೊಂದು
ಸರಿಯೆ ಸಾರ ಸಹಸ್ರನಾಮಕೆ
ಶ್ರೀರಘುನಾಥನ ನಾಮವೆಂತೆಂದು
ಸಾರಿ ಮಹೇಶನು ಸುರನರವಂದ್ಯನು
ಗಿರಿಜೆಗೆ ಪ್ರೇಮದಿ ಪೇಳಿದನು
ಮರುತಾತ್ಮಜನು ನಿರುತದಿ ಭಜಿಪನು
ಪರಿಪರಿ ಪಾಡಿ ಸುಖಗೂಡಿ ॥೧॥

ಪತಿತಪಾವನ್ನ ಸತತ ಈ ನಾಮ
ಗತಿಯಿಲ್ಲದವರಿಗೆ ಗತಿ ಈವ ನಾಮ
ಹತವೆ ಮಾಡುತಲಿದ್ದ ಕಿತವನಿಗೊಲಿದು
ಕ್ಷಿತಿಯೊಳು ಮುನಿಪತಿ ಎನ್ನಿಸಿತು
ಪಥದಿ ಪಾಷಾಣವ ಪೆಣ್ಣನು ಮಾಡಿದ
ಅತುಳಮಹಿಮನ ಹಿತನಾಮ ॥೨॥

ಕುಲಶೀಲಗಳನ್ನು ಎಂದೂ ಎಣಿಸನೊ
ಸುಲಭರೊಳಗೆ ಬಲು ಸುಲಭನು ಇವನು
ಕಲುಷದಿ ದೂರನು ಶಬರಿಯ ಫಲವನು
ಮೆಲ್ಲುತೆ ಮುಕ್ತಿಯನಿತ್ತಿಹನು
ಲಲನೆಯ ಕದ್ದೊಯ್ದ ಖಳನ ತಮ್ಮನಿಗೆ
ನೆಲವಿತ್ತ ದಯವಂತ ಶ್ರೀಕಾಂತ ॥೩॥

--✿✿✿✿✿--

೨೧೯
ಎಂಥಾ ಸ್ಥಿತಿಯೊ ಶ್ರೀರಾಮಗೆ
(ಕರಿಗಿರೀಶ / ವರವಣಿ ರಾಮರಾಯ / ೧೮೯೯ - ೧೯೫೪)

ಎಂಥಾ ಸ್ಥಿತಿಯೊ ಶ್ರೀರಾಮಗೆ ॥ಪ॥

ಚಿಂತಿತಫಲದಗೆ ಚಿಂತಾಪ್ರಾಪ್ತಿಯೆ ॥ಅ.ಪ॥

ಲೋಕೈಕನಾಥಗೆ ಈ ಕಪಿನಾಥನು ಸು-
ಗ್ರೀವನು ನಾಥನೆಂದೆನಿಸುವ ಪರಿಯೆ ॥೧॥

ಸಕಲಲೋಕ ಶರಣ್ಯಗೆ
ಕಕುಲತೆಯಿಂದನ್ಯರಲ್ಲಿ ದೈನ್ಯವೆ ॥೨॥

ಯಾವನನುಗ್ರಹ ಬೇಡುವರು
ಈ ವಿಭುವಿಗೆ ಸುಗ್ರೀವನ ದಯವೆ ॥೩॥

ಎಲ್ಲರ ದುಃಖವ ಪರಿಹರಿಸುವನಿಗೆ
ಇಲ್ಲಿ ಸುಗ್ರೀವನೊಳು ದೈನ್ಯದ ಮೊರೆಯೆ ॥೪॥

ಕರಿಗಿರೀಶನ ಕಾರ್ಯಕೆ ಕಪಿವರ
ನೆರವಾಗುವ ಪರಿ ಮಾಡಿಸುವುದೆ ॥೫॥

--✿✿✿✿✿--

೨೨೦
ಏಕಬಾಣ ಬಿಟ್ಟನು ಜಾಣ
(ಕರಿಗಿರೀಶ / ವರವಣಿ ರಾಮರಾಯ / ೧೮೯೯ - ೧೯೫೪)

ಏಕಬಾಣ ಬಿಟ್ಟನು ಜಾಣ ॥ಪ॥

ಏಕಬಾಣ ತಾನೇಕ ಗುರಿಯಲಿ
ಏಕಸಂಕಲ್ಪದಿ ಏಕವಾಕ್ಯವನು ॥ಅ.ಪ॥

ಏಕದೈವ ಲೋಕೈಕ ಮಹಿಮ ಜಗ-
ದೇಕ ಕಾರಣ ಭಕ್ತಶೋಕನಿವಾರಣ
ಶ್ರೀಕರ ಶುಭಗುಣ ಸೀತಾರಮಣ ಪೂರ್ಣ
ರಾಕೇಂದುವದನ ದಿವಾಕರಕುಲಭೂಷಣ ॥೧॥

ಕಾಕುಜನರಬಲುಶೋಕಕಾರಣ ಕರು
ಣಾಕರ ಶರಣಾಗತ ಜನರಕ್ಷಣ
ಶ್ರೀಕಮಲೇಕ್ಷಣ ಲೋಕವಿಲಕ್ಷಣ
ಲೋಕವಿನುತ ಶ್ರೀ ಕರಿಗಿರಿನಿಕೇತನ ॥೨॥

--✿✿✿✿✿--

೨೨೧
ನೀರಜಾಕ್ಷರಾಮ ಲೋಕಾಭಿರಾಮ
(ಕರಿಗಿರೀಶ / ವರವಣಿ ರಾಮರಾಯ / ೧೮೯೯ - ೧೯೫೪)

ನೀರಜಾಕ್ಷರಾಮ ಲೋಕಾಭಿರಾಮ ॥ಪ॥

ನೀರದನಿಭಶ್ಯಾಮ ನಿತ್ಯಮಂಗಳ ನಾಮ ॥ಅ.ಪ॥

ನಿನ್ನ ಬಿಟ್ಟು ನಾನು ಅನಾಥನು
ಸನ್ನುತ ಗುಣರನ್ನ ಸತ್ಕೀರ್ತಿ ಸಂಪನ್ನ ॥೧॥

ದೇಶಕೊಡೆಯ ನೀನು ದಾಸ ನಿನಗೆ ನಾನು
ಕೌಸಲ್ಯಾವರಪುತ್ರ ಕೋಮಲ ಶುಭಗಾತ್ರ ॥೨॥

ನಿನ್ನ ಸನ್ನಿಧಿವಾಸ ಪುಣ್ಯಫಲವಿಶೇಷ
ಘನ್ನ ಕರಿಗಿರೀಶ ಗಂಭೀರ ಗುಣಭೂಷ ॥೩॥

--✿✿✿✿✿--

೨೨೨
ಎಲೆ ಮಹಾತ್ಮರೇ ನೀವು ರಾಜರ್ಷಿಗಳ ತೆರದಿ
(ಕರಿಗಿರೀಶ / ವರವಣಿ ರಾಮರಾಯ / ೧೮೭೯ – ೧೯೫೪)

ಎಲೆ ಮಹಾತ್ಮರೇ ನೀವು ರಾಜರ್ಷಿಗಳ ತೆರದಿ
ಬೆಳಗುವಿರಿ ನೋಡೆ ದೇವಕುವರರಂತಿಹಿರಿ
ಧೀರ ಗಂಭೀರತರಭಾವ ತೋರ್ಪುದು ಮುಖದಿ
ನಾರುವಸ್ತ್ರವ ಧರಿಸಿ ತಿರುಗುವಿರಿ ವನದಿ ॥೧॥

ಕಂದರ್ಪನನು ಪೋಲ್ವ ಕಮನೀಯವಿಗ್ರಹರು
ಬಂದಿ ಹಿನ್ನಡೆಯಲಿ ವೈರಿನಿಗ್ರಹರು ।
ಪುಟಕ್ಕಿಟ್ಟ ಚಿನ್ನದಂತೆ ಕಾಂತಿರಂಜಿತರು
ಪಟುತರಂಗರು ಗಹನಅಟವಿಲಿ ಪರಿವ್ರಾಜಕರು ॥೨॥

ಆಜಾನುಬಾಹುಗಳು ಆಜಾನುಜಂಘೆಗಳು
ಆ ಜಟಾಮಂಡಲವು ರಾಜಿಸುತಲಿಹವು
ದೃಢವಾದ ನಿಮ್ಮಡಿಗಳಿಡುವ ಧ್ವನಿಗಳ ಕೇಳಿ
ಅಡವಿಯೊಡೆತನ ಪಡೆದ ಸಿಂಹಗಳು ನಡುಗುವುವು ॥೩॥

ಧರೆಗಿಳಿದು ಬಂದಿರ್ಪ ರವಿಚಂದ್ರರಂದದಲಿ
ನೆರೆ ಪ್ರಕಾಶಿಕರಾಗಿ ಕಂಗೊಳಿಸುತಿಹಿರಿ
ಗುರುತರದ ಕಾರ್ಯತತ್ಪರರಾಗಿ ಬಂದಿರುವ
ನೆರೆಭಾವ ತೋರುವುದು ಕರಿಗಿರೀಶನ ದಯದಿ ॥೪॥

--✿✿✿✿✿--

೨೨೩
ಕುಶಲವರೆ ಲಾಲಿಸಿರಿ ಕಥೆಯನೆಲ್ಲ ಪೇಳ್ವೆ
(ಕರಿಗಿರೀಶ / ವರವಣಿ ರಾಮರಾಯ / ೧೮೭೯ – ೧೯೫೪)

ಕುಶಲವರೆ ಲಾಲಿಸಿರಿ ಕಥೆಯನೆಲ್ಲವ ಪೇಳ್ವೆ
ಕುಶಲಮತಿಗಳೇ ನಿಮ್ಮ ಕೌತುಕವು ಸಹಜವಲೆ ॥೧॥

ಬಿಸರುಹಾಕ್ಷನ ಚರಿತೆ ಚಿತ್ರತರಮಹುದಲ್ತೆ
ಉಸುರುವೆನು ಪೂರ್ವವೃತ್ತಾಂತವನು ನಾ ಮೊದಲೆ ॥೨॥

ಅಸುರರುಪಟಳದಿಂದ ವಸುಧೆ ಭಾರವು ಹೆಚ್ಚೆ
ಬಿಸಜಭವಮುಖ ಸುರರ ಮೊರೆ ಕೇಳಿ ಮನಮೆಚ್ಚೆ ॥೩॥

ಬಿಸಜನೇತ್ರನು ತಾನು ದಶರಥನ ಸುತನೆನಿಸಿ
ವಸುಮತಿಯಲುದಿಸಿ ಸಜ್ಜನರ ಸಂತಸಗೊಳಿಸಿ ॥೪॥

ಹಸುಳೆತನದಲಿ ಅಸುರೆ ತಾಟಕಿಯ ಸಂಹರಿಸಿ
ಕುಶಿಕಸುತನಧ್ವರವ ಕಡುರಕ್ಷಣೆಯ ಮಾಡಿ ॥೫॥

ಅಶಮವಾಗಿದ್ದಹಲ್ಯೆಯ ತಾನುದ್ಧರಿಸಿ
ಅಸಮಾಕ್ಷಚಾಪವನು ಲೀಲೆಯಲಿ ತುಂಡರಿಸಿ ॥೬॥

ವಸುಮತಿಸುತೆ ಸೀತೆ ಕರಪದ್ಮವನ್ನು ಗ್ರಹಿಸಿ
ಎಸೆವೆರಡು ರೂಪದಲಿ ಘನಲೀಲೆ ಪ್ರಕಟಿಸಿ ॥೭॥

ಕುಶಲದಿಂ ಯುವರಾಜ ಪಟ್ಟಕ್ಕೆ ಸನ್ನಾಹ
ವೆಸೆದಿರಲು ವಿಧಿಲೀಲೆಯೇನೆಂಬನಾಹ ॥೮॥

ದಶರಥನ ಕಿರುಮಡದಿ ಪಡೆದ ವರಕನುವಾಗಿ
ಅಸಮ ಸತ್ಯಾತ್ಮಕನು ಸತಿ ಅನುಜಸಹಿತನಾಗಿ ॥೯॥

ವಸುಮತಿಯೊಳವತರಿಸಿ ಬಂದಕಾರ್ಯವ ನೆನೆದು
ಅಸಮನಾಟಕ ಸೂತ್ರಧಾರಿ ಅಡವಿಗೆ ನಡೆದು ॥೧೦॥

ಎಸೆವ ಗಂಗೆಯ ದಾಟಿ ಗುಹನ ಧನ್ಯನಗೈದು
ಋಷಿ ಭರದ್ವಾಜರಿಂ ಸತ್ಕಾರವನ್ನು ಪಡೆದು ॥೧೧॥

ವಸುಮತೀಧರ ಚಿತ್ರಕೂಟದಲ್ಲಿ ನಿಂತಿರಲು
ಅಸಮಭಕ್ತವರೇಣ್ಯ ಭರತ ತಾನೈತರಲು ॥೧೨॥

ಬಿಸಜಾಂಘ್ರಿ ಸಂಪೂತವರಪಾದುಕೆಗಳನಿತ್ತು
ಕುಶಲಮತಿ ತಾನವನ ಕಳುಹಿ ಯೋಚಿಸಿ ಮತ್ತು ॥೧೩॥

ಪೆಸರಾಂತ ದಂಡಕಾವನ ಪ್ರವೇಶವ ಮಾಡಿ
ಅಸುರರನೇಕರು ಅಂತಕನ ಬಳಿದೂಡಿ ॥೧೪॥

ಋಷಿವರ್ಯ ಶರಭಂಗಗೀಕ್ಷಣದಿ ಸುಗತಿಯನು
ಹಸನಾಗಿ ಕರುಣಿಸಿದ ಬಳಿಕ ಕುಂಭೋದ್ಭವನು ॥೧೫॥

ಒಸಗೆಯಿಂದಿತ್ತ ದಿವ್ಯಾಸ್ತ್ರಂಗಳ ಸಂಗ್ರಹಿಸಿ
ಪಸರಿಸಿಹ ವಿಲಸಿತದ ಪಂಚವಟಿಯಲಿ ನೆಲಸಿ ॥೧೬॥

ಒಸಗೆಯಿಂದಿರೆ ಬಂದ ಶೂರ್ಪನಖಿಗತಿಭಂಗ
ವೆಸಗಿ ಸೋದರನಿಂದ ಶೋಭಿಸೆ ಶುಭಾಂಗ ॥೧೭॥

ದಶಕಂಠ ಕಳುಹಿಸಿದ ಮಾಯಾಮೃಗಾಕಾರ
ದಸುರ ಮಾರೀಚನಂ ಸಂಹರಿಸಿ ರಘುವೀರ ॥೧೮॥

ಅಸಮ ಸೋದರ ಸಹಿತ ಆಶ್ರಮಕ್ಕೈತಂದು
ದೆಸೆದೆಸೆಯೊಳರಸೆ ತನ್ನರಸಿ ಕಾಣದಿರಲು ॥೧೯॥

ಹುಸಿವೇಷದಿಂ ಬಂದ ಖಳಕುಲಾಗ್ರಣಿಯಿಂದ
ಶಶಿಮುಖಿಯು ಹಗರಣವಾಗಿರಲು ನಿತ್ಯಾನಂದ ॥೨೦॥

ದೆಸೆಗೆಟ್ಟವನ ಪರಿಯಲತಿಶಯದಿ ಶೋಕಿಸುತ
ದೆಸೆದೆಸೆಯೊಳರಸುತ್ತಾ ಬಸವಳಿದು ತಾ ಬರುತ ॥೨೧॥

ಎಸೆವವರ ಋಷ್ಯಮೂಕಮತಂಗಾಶ್ರಮದಿ
ಬಿಸಜಾಪ್ತಸುತನ ಕಂಡವನೊಡನೆ ತಾ ಮುದದಿ ॥೨೨॥

ಉಸುರಿ ವಾಲಿಯ ವಧೆಗೈವೆನೆಂದಭಯವನು
ಎಸೆವ ವಿಲಸಿತಮಹಿಮ ಕರಿಗಿರೀಶನು ತಾನು ॥೨೩॥

೨೨೪

ಪಾದುಕೆಗಳ ದಯಪಾಲಿಸು ಪರಮ

(ಕರಿಗಿರೀಶ / ವರವಣಿ ರಾಮರಾಯ / ೧೮೯೯ – ೧೯೫೪)

ಪಾದುಕೆಗಳ ದಯಪಾಲಿಸು ಪರಮ
ಪಾವನಮಹಿಮ ಸುದೇವಲಲಾಮ ॥ಪ॥

ನೀ ದಯದಿಂ ತವಪಾದ ಪಯೋಜಗ
ಳಾದರದಲಿ ಕೊಡು ಹೇ ದಯಧಾಮ ॥ಅ.ಪ॥

ಅಜನವ್ಯಯನಪ್ರಾಕೃತ ಮಹಿಮನು
ಅಜನಪಿತನು ತನ್ನಿಚ್ಛೆಯೊಳು
ಅಜಸುತ ದಶರಥ ಸುತನೆಂದೆನಿಸಿದ
ತ್ರಿಜಗ ನೋಡೆ ಆಶ್ಚರ್ಯದೊಳು ॥೧॥

ತುಂಗಮಹಿಮ ತವ ಮಂಗಳಕರ ಚರ
ಣಂಗಳು ಈ ತ್ರಿಜಗಂಗಳ ಪಾಲಿಪುವು
ಅಂಗಜಕೋಟಿ ಶುಭಾಂಗನೆ ತವಪದ
ಶೃಂಗನೆನಿಸಿ ಕೃಪಾಪಾಂಗದಿ ಈಕ್ಷಿಸೊ
ಮಂಗಳಕರ ರಘುಪುಂಗವ ಕರಿಗಿರಿ
ರಂಗ ನೃಸಿಂಹ ಸೀತಾಂಗನೆಯರಸ ॥೨॥

--✿✿✿✿✿--

೨೨೫

ಬಂದಾ ಸುಂದರವದನ ಮಂದಹಾಸದಿ

(ಕರಿಗಿರೀಶ / ವರವಣಿ ರಾಮರಾಯ / ೧೮೯೯ – ೧೯೫೪)

ಬಂದಾ ಸುಂದರವದನ ಮಂದಹಾಸದಿ ರಘು
ನಂದನ ಧನುಬಳಿಗೆ ॥ಪ॥

ವಂದಿಸಿ ಕೌಶಿಕಗೆ ತಂದೆಯ ನೆನೆದು ಆ
ನಂದಮನದಲ್ಲಿ ಮುಂದೆ ಮುಂದಕೆ ನಡೆದು

ಚಂದದಿ ಬರುತಿಹ ಅಂದನೋಡಿ ಮುನಿ
ವೃಂದ ಮನದೊಳಾನಂದವ ಹೊಂದುತ
ಇಂದಿರೇಶನಿವನೆಂದು ತಿಳಿದು ಭೂ
ನಂದನೆ ಇವನವಳೆ ಎಂದು ಪೇಳುತಿರೆ ॥ಅ.ಪ॥

ಸಿಂಧುಶಯನ ಭಜಕಮಂದಾರ ಮುನಿಜನ
ವೃಂದ ಕುಮುದಚಂದ್ರ ಮಂದಜಾಸನ ವಂದ್ಯ
ಸಿಂಧುಸುತಾಲೋಲ ಸಿಂಧೂರಪರಿಪಾಲ
ಸಿಂಧೂರಗಮನದಿ ಸಿಂಧೂಗಂಭೀರ ಬರೆ
ಇಂದುವದನೆಯರು ಚಂದವ ನೋಡುತ
ಇಂದೀವರಗೆ ಜಯವೆಂದು ನುಡಿಯುತಿರೆ
ಇಂದುಧರನ ಧನುಬಂಧನಮಾಡಲು
ಇಂದಿರೇಶ ಶ್ರೀ ಕರಿಗಿರಿ ಮಂದಿರ ॥೧॥

--✿✿✿✿✿--

೨೨೬
ರಘುವೀರನ ಕಂಡನು ಕಪಿವೀರ

(ಕರಿಗಿರೀಶ / ವರವಣಿ ರಾಮರಾಯ / ೧೮೯ - ೧೯೫೮)

ರಘುವೀರನ ಕಂಡನು ಕಪಿವೀರ ಕಲಿಕಲ್ಮಷದೂರ ॥ಪ॥

ಅಘವರ್ಜಿತ ಪನ್ನಗಶಯನನೆಂದು
ಬಗೆದು ಮನದಿ ಕರಮುಗಿದನು ದೂರದಿ ॥ಅ.ಪ॥

ಶಿರಭಾಗದಿ ಮೆರೆವ ಜಟಾಮಕುಟ । ಚಿಕುರಾಳಿಯಿಂದ
ಪರಿಶೋಭಿಪ ಸುಂದರ ಲಲಾಟ । ಕಮಲಾಕ್ಷಿಗಳಲಿ
ಕರುಣಾರಸಭರಿತ ಶುಭನೋಟ । ನಾಸಿಕ ಬಲು ಮಾಟ
ಸ್ಮರಲಾವಣ್ಯ ಧಿಕ್ಕರಿಸುವ ಸುಂದರ
ನರರೂಪಾನ್ವಿತ ಶರಧಿಗಂಭೀರನ ॥೧॥

ಆಜಾನುಬಾಹುಗಳತಿ ಪ್ರಶಸ್ತ ।ಸುರಚಾಪದಂತೆ

ರಾಜಿಪ ಧನುವ ಧರಿಸಿದ ಹಸ್ತ । ವಿಶಾಲವಕ್ಷಕೆ
ಈ ಜಗದೊಳಗುಪಮೇಯದೆತ್ತ । ದೋಷನಿರಸ್ತ
ಮೂಜಗದೊಳಗತಿ ಸೋಜಿಗನೆನಿಪ ಸು
ತೇಜದಿ ರಾಜಿಪ ರಾಜಕುಮಾರನ ॥೨॥

ಸುಂದರ ತ್ರಿವಳಿಗೊಪ್ಪುವ ಉದರ । ನೆರೆ ಗಂಭೀರ
ಚಂದದಿ ಶೋಭಿಪ ನಾಭಿಕುಹರ । ಚೀರಾಂಬರಧರ
ಬಂಧುರಕಟಿತಟ ಬಲುರುಚಿರ । ನೋಳ್ಪರ ಚಿತ್ತಹರ
ಕುಂದಿಲ್ಲದ ಪದದ್ವಂದ್ವ ಸುಶೋಭಿತ
ಸುಂದರಾಂಗ ಶ್ರೀ ಕರಿಗಿರೀಶನ ॥೩॥

--✿✿✿✿✿--

೨೨೭
ರಾಮ ರಮಾರಮ ರಾಮ ಶ್ರೀರಾಮ

(ಕರಿಗಿರೀಶ / ವರವಣಿ ರಾಮರಾಯ / ೧೮೯೯ - ೧೯೫೪)

ರಾಮ ರಮಾರಮ ರಾಮ ಶ್ರೀರಾಮ ॥ಪ॥

ರಾಮ ಸೀತಾರಾಮ ರಾಮ ಜಯರಾಮ ॥ಅ.ಪ॥

ಶ್ರೀ ರಘುವಂಶಲಲಾಮನೆ ರಾಮ
ತಾರಕ ಮಂಗಳರಾಮನೆ ರಾಮ
ನೀರದನಿರ್ಮಲಶ್ಯಾಮನೆ ರಾಮ
ಸಾರಸಲೋಚನ ಸೌಮ್ಯನೆ ರಾಮ ॥೧॥

ಕೌಸಲ್ಯಾದೇವಿಕುಮಾರಕ ರಾಮ
ಕೋಸಲ ದೇಶಾನಂದಕ ರಾಮ
ಆಸುರೀತಾಟಕ ಶಿಕ್ಷಕರಾಮ
ಕೌಶಿಕ ಯಜ್ಞಸಂರಕ್ಷಕ ರಾಮ ॥೨॥

ಮುನಿಪತಿ ಶಾಪವಿಮೋಚಕ ರಾಮ
ಅನಲಾಕ್ಷ ಕಾರ್ಮುಕಭಂಜಕ ರಾಮ

ಜನಕಸುತಾನಂದವರ್ಧಕ ರಾಮ
ಅನುಪಮ ಲೀಲಾದ್ಯೋತಕ ರಾಮ ॥೩॥

ಸತ್ಯಪರಾಕ್ರಮ ಸಾತ್ವಿಕ ರಾಮ
ಪಿತೃವಾಕ್ಯ ಪರಿಪಾಲಕ ರಾಮ
ಉತ್ತಮಚರಿತಾದರ್ಶಕ ರಾಮ
ಚಿತ್ರಕೂಟಾದ್ರಿ ನಿವಾಸಕ ರಾಮ ॥೪॥

ಕಾಕುತ್ಸ್ಥವಂಶ ಸುಧಾರಕ ರಾಮ
ಲೋಕೇಶಲೋಕ ಮನೋಹರ ರಾಮ
ಶ್ರೀಕರಾಶ್ರಿತಜನ ಮಂದಾರ ರಾಮ
ಶ್ರೀ ಕರಿಗಿರೀಶ ಸುಂದರ ರಾಮ ॥೫॥

--✿✿✿✿✿--

೨೨೮
ಲಾಲಿಸಿ ರಘುವರನ ಚರಿತೆಯ ಸಾರ

(ಕರಿಗಿರೀಶ / ವರವಣಿ ರಾಮರಾಯ / ೧೮೯೯ – ೧೯೫೮)

ಲಾಲಿಸಿ ರಘುವರನ ಚರಿತೆಯ ಸಾರ
ಪೇಳುವೆ ಸುಖನಾಥನ ॥ಪ॥

ಶ್ರೀ ಲಲಾಮನು ಸುರರ ಮೊರೆಯನು
ಕೇಳಿ ಧರಣಿಯ ಭಾರಹರಿಸಲು
ಲೀಲೆಯಲು ದಶರಥನೃಪಾಲನ
ಬಾಲನೆನಿಸುತ ಅವತರಿಸಿದನು ॥ಅ.ಪ॥

ಕುಶಿಸುತನ ಯಜ್ಞವ ರಕ್ಷಿಸಿ ಪಥದಿ
ಋಷಿಪತ್ನಿಯ ಶಿಲಾರೂಪವ ಬಿಡಿಸಿದ ದೇವ
ಪಶುಪತಿಯ ಕೋದಂಡ ಖಂಡಿಸಿ
ಶಶಿವದನೆ ಜಾನಕಿಯ ಕರವನು
ಕುಶಲದಲ್ಲಿ ಪರಿಗ್ರಹಿಸಿ ಲೀಲೆಯ
ನಸಮಭಾರ್ಗವನೊಡನೆ ತೋರಿದ ॥೧॥

ತಂದೆವಾಕ್ಯವ ಪಾಲಿಸೆ ತಾ ಧರಣಿಗೆ
ಬಂದಕಾರ್ಯವ ಸಲ್ಲಿಸೆ ಋಷಿಗಳಾಸೆ
ತಂದು ತಾ ಮನಗಂಡು ವನಕೆ
ಬಂದು ಸತಿ ಸೋದರರ ಸಹಿತದಿ
ಮುಂದೆ ಗಂಗೆಯ ದಾಟಿ ಭರದ್ವಾಜ
ನಿಂದ ಸತ್ಕಾರವನು ಕೊಂಡನು ॥೨॥

ಚಿತ್ರಕೂಟದಲಿರಲು ವಿನಯದಿ ಬಂದು
ಭಕ್ತಭರತನು ಬೇಡಲು ಪಾದುಕೆಯಿತ್ತು
ಮತ್ತೆ ದಂಡಕವನ ಪ್ರವೇಶಿಸಿ
ದೈತ್ಯರನು ಸಂಹರಿಸಿ ಶರಭಂಗ
ಗಿತ್ತು ಮುಕ್ತಿಯ ಕುಂಭಸಂಭವ
ನಿತ್ತ ದಿವ್ಯಾಸ್ತ್ರಗಳ ಪಡೆದನು ॥೩॥

ವರಪಂಚವಟಿಯೊಳಗೆ ಶೂರ್ಪನಖಿಯು
ದುರುಳಬುದ್ಧಿಯೊಳು ಬರೆ ಕಿವಿಮೂಗ ಕೊಯ್ಸಿ
ಹರಿಣರೂಪದಿ ಬಂದ ದೈತ್ಯನ
ಹರಣಗೈದಾಶ್ರಮಕೆ ತಿರುಗಲು।
ಧರಣಿಸುತೆಯನು ಕಾಣದೆಲೆ ತಾ
ನರರ ಪರಿಯಲಿ ಹಂಬಲಿಸಿದನು ॥೪॥

ವನಜಾಕ್ಷಿ ವೈದೇಹಿಯ ಪುಡುಕುತ ಪಂಪಾ
ಸನಿಹಕ್ಕೈತಂದು ವಾಲಿಯ ಸಂಹರಿಸ್ಯವನ
ಅನುಜ ಸುಗ್ರೀವನಿಗೆ ಹರುಷದಿ
ವಿನುತ ವಾನರರಾಜ್ಯದೊಡೆತನ
ವನು ಕರುಣಿಸಿದ ಬಳಿಕ ಜಾನಕಿ
ಯನು ಪುಡುಕೆ ಕಳುಹಿದನು ಕಪಿಗಳ ॥೫॥

ಸ್ವಾಮಿಯ ಸ್ತುತಿಗೈಯುತ ಶ್ರೀ ಹನುಮಂತ
ಆ ಮಹೋದಧಿಯ ದಾಟುತ ಲಂಕೆಯ ಪೊಕ್ಕು
ಭೂಮಿಜಾತೆಯ ಕಂಡು ರಾಮನ

ಕ್ಷೇಮವಾರ್ತೆಯ ತಿಳುಹಿ ಬಹುಜನ
ತಾಮಸರ ಸದೆಬಡಿದು ರಾವಣ
ನಾ ಮಹಾನಗರಿಯನು ದಹಿಸಿದ ||೬||

ಮರಳಿ ರಾಮನ ಬಳಿಗೆ ಬೇಗದಿ ಬಂದು
ಮರುತಸುತನು ರಾಮಗೆ ಸೀತೆಯ ಕ್ಷೇಮ
ವರುಹಿ ಚೂಡಾಮಣಿಯ ನೀಡಲು
ಕರದಿ ಕೈಕೊಂಡದನು ನೋಡುತ
ನರರ ಪರಿಯಲಿ ಹರುಷಬಾಷ್ಪವ
ಸುರಿಸಿದನು ಶ್ರೀ ಕರಿಗಿರೀಶನು ||೭||

--✿✿✿✿✿--

೨೨೯
ಸಾರಸನಯನ ಶ್ರೀರಾಮಚಂದ್ರನ ಚರಿತೆ
(ಕರಿಗಿರೀಶ / ವರವಣಿ ರಾಮರಾಯ / ೧೮೯೯ - ೧೯೫೪)

ಸಾರಸನಯನ ಶ್ರೀರಾಮಚಂದ್ರನ ಚರಿತೆ
ಸಾರ ಪೇಳುವೆ ಕೇಳಿ ಸಾರಹೃದಯ ಶ್ರೀ ||ಪ||

ಸಾರಸಭವ ಮುಖರರ ಮೊರೆಯ ಕೇಳಿ
ಧಾರುಣಿಯೊಳಗವತಾರ ಮಾಡಿದನಮ್ಮಾ ||ಅ.ಪ||

ದಶರಥಸುತನೆನಿಸಿ ವಸುಧೆಯೊಳವತರಿಸಿ
ಕುಶಿಕಸುತನ ಯಜ್ಞವ ನೆರೆಪಾಲಿಸಿ
ಅಶಮವಾಗಿದ್ದ ಅಹಲ್ಯೆಯ ಶಾಪ ಪರಿಹರಿಸಿ
ವಸುಧೀಶ ಜನಕನಾಸ್ಥಾನ ಪ್ರವೇಶಿಸಿ
ಪಶುಪತಿಯ ಕೋದಂಡ ಖಂಡಿಸಿ
ಶಶಿವದನೆ ಜಾನಕಿಯನೊಲಿಸಿ
ಅಸಮಭಾರ್ಗವನೊಡನೆ ಸರಸವ
ನೆಸಗಿ ಜಗದೊಳು ಲೀಲೆ ತೋರಿದ ||೧||

ಜನಕನಾಜ್ಞೆಯ ತಾಳಿ ಜನಕಸುತೆಯ ಸಹಿತ
ಅನುಜನೊಡನೆ ಹೊರಟು ವನವಾಸಕೆ
ಘನಭಕ್ತಿಭರಿತ ಶ್ರೀ ಭರತಗೆ ಪಾದುಕೆ
ನೀನು ಕರುಣಿಸಿ ಮುಂದೆ ವನದಂಡಕವ ಪೊಕ್ಕು
ಅನುಜ ದುರುಳವಿರಾಧಮುಖರನು
ಹನನಗೈದಾ ಬಳಿಕ ಶರಭಂಗ
ಮುನಿಗೆ ಸದ್ಗತಿಯಿತ್ತಗಸ್ತ್ಯನ
ವಿನುತ ಅಸ್ತ್ರಗಳನ್ನು ಪಡೆದನಾ ॥೨॥

ಪಂಚವಟಿಯೊಳಗೆ ಸಂಚುಗೈಯುತ ಬಂದ
ಕಾಂಚನಮೃಗವನು ಪಂಚಕಗೊಳಿಸಿ
ಕುಂಚಿತಮತಿಯ ದ್ವಿಪಂಚಶಿರನು ಬರಲು
ವಂಚನೆಯಿಂದಪರಿಹರಿಸಲು ಸೀತೆಯ
ಸಂಚುಕಾಣದೆ ವನವನದೊಳು
ಸಂಚರಿಸುತಲಿ ಶೋಕತೋರುತ
ಪಂಚಶರಹತನಂತೆ ಬಳಲುತ
ಪಂಚಶರಪಿತ ಬಂದ ಪಂಪೆಗೆ ॥೩॥

ಮಾರುತಸುತನ ವಿನಯಭರಿತ ವಾಕ್ಯಕೆ ಮೆಚ್ಚಿ
ತರಣಿಸುತನ ಕೂಡೆ ಸಖ್ಯವ ಬೆಳೆಸಿ
ದುರಿತವಗೈದ ವಾಲಿಯ ನಿಗ್ರಹಿಸಿ ಕಪಿ
ವರ ಸುಗ್ರೀವಗೆ ರಾಜ್ಯಕರುಣಿಸಿದಾ ಬಳಿಕ
ಪರಮ ವಜ್ರಶರೀರಿ ಪವನಜ
ಶರಧಿಯ ಲಂಘಿಸಿ ಧರಣಿತನಯಳಿ
ಗರುಹಿ ಕುಶಲವ ಮುದ್ರಿಕೆಯನಿತ್ತು
ಉರುಹಿ ಲಂಕೆಯ ಬರಲು ಒಲಿದನು ॥೪॥

ಭಕ್ತ ವಿಭೀಷಣನಿಗೆ ಇತ್ತು ಅಭಯವನು
ಮೊತ್ತವಾನರ ಸಹಿತ ಶರಧಿಬಂಧಿಸಿ ದಾಟಿ
ಹತ್ತುತಲೆಯವನ ಪುರವ ಪ್ರವೇಶಿಸಿ
ದೈತ್ಯಶೂರರನ್ನೆಲ್ಲ ಮೃತ್ಯುವಶವಮಾಡಿ

ಮತ್ತೆ ಕುಂಭಕರ್ಣೇಂದ್ರಜಿತು ಮುಖ್ಯ
ದೈತ್ಯರನು ಸಂಹರಿಸಿ ರಣದೊಳು
ಶತ್ರುಭಯಂಕರನಾಗಿ ಮೆರೆದನು
ಸ್ತುತ್ಯ ಮಹಿಮ ಶ್ರೀ ಕರಿಗಿರೀಶನು ॥೫॥

--✿✿✿✿✿--

೨೩೦
ಶರಣಾಗ್ರಣಿ ರಾಮಚರಣಾಂಬುಜ ಬಿಡೆ

(ವಾಸುದೇವ ವಿಠಲ / ವ್ಯಾಸತತ್ವಜ್ಞ / ೧೭೦೪ - ೧೮೦೦)

ಶರಣಾಗ್ರಣಿ ರಾಮಚರಣಾಂಬುಜ ಬಿಡೆ
ತರಳ ನಳಿನ ಷಟ್‌ಚರಣ ಬಿಡಬಲ್ಲನೆ ॥ಪ॥

ಹನುಮನ ಭಜನೆಂಬ ಘನವಾರಿ ಪೂರಿತ
ಮನ ಸರೋವರ ಅಯನವಾಗಿಪ್ಪಾ
ಜನಕಸುತೆ ಹರಿಸಿ ಮನಸ್ತಾಪ ಹಾರಿ
ದಿನಕರನ್ವಯದಿಂದ ವಿನುತವಾಗಿಪ್ಪ ॥೧॥

ಅಮರರೋತ್ತಮರೆಂಬ ಭ್ರಮರರಾ ರವಗಳ
ಸಮಯೋಚಿತ ಸಾಮಭಿಸೇವಿತ
ವಿಮಲಾತಮದಿಂದ ಸಾಂದ್ರ ಶಮಲಾತಿ ದೂರ
ಕಮಲಾಸನಪ್ರಿಯ ಕಮಲೋತ್ತಮ ಪಾದ ॥೨॥

ಶಿಲೆಯ ಬಾಲೆಯ ಮಾಡಿ ಮಲವಳಿದು ಮುನಿ
ಕುಲವಗೆಡಿಸಿ ಸತ್ಕುಲನೆನಿಸಿದೆ
ಜಲಧಿಯೊಳಗೆ ಸೇತುನಿಲಿಸಿ ಸಜ್ಜನರಿಗೆ
ನೆಲೆ ವಾಸುದೇವವಿಠಲದೇವ ಪಾದಪದುಮ ॥೩॥

--✿✿✿✿✿--

೨೩೧
ನಾಲಿಗೆ ತುದಿಯಲ್ಲಿರಾಮ ಎಂಬೊ ನಾಮ
(ವಾಸುದೇವ ವಿಠಲ / ವ್ಯಾಸತತ್ವಜ್ಞ / ೧೭೦೪ - ೧೮೦೦)

ನಾಲಿಗೆ ತುದಿಯಲ್ಲಿ ರಾಮ ಎಂಬೊ ನಾಮ
ವ್ಯಾಳಿಗೆ ಒದಗಿಸೊ ಹರಿಯೆ ಮರಿಯೆ ॥ಪ॥

ಕಾಲನದೂತರು ಕಠಿಣರೆ ಸರಿ
ವ್ಯಾಳಿಯು ಕೇಳಿ ಹೇಳಿಬರುವುದಿಲ್ಲ
ಆಲಯದವರ ಶಕುತಿಯಲ್ಲೇನೋ
ಲಾಲಿಸಬೇಕೇನೊ ಎನ್ನ ಬಿನ್ನಪ ॥೧॥

ಕಾಲನ ಸ್ಥಿತಿಯೆಂತು ಮೇಷದ ಗುಂಪಿಗೆ
ತೋಳದ ಪರಿಯೆಂದು ನಾ ಕೇಳಿ ಬಲ್ಲೆ
ಕಾಳು ಕಪಟಿ ತಿಂಬ ಮೂಷಕಗಳನ್ನು
ಕಾಲಭುಜಂಗದಂತೆ ಕಂಡು ಬಲ್ಲೆನೊ ॥೨॥

ಹೇಸಿ ವಿಷಯವೆಂಬಾ ಮಡುವಿನೊಳಗೆವೈದು
ಮೋಸಗೊಳಿಸುವ ಸ್ಥಿತಿಯು ಮನಸಿನ
ವಾಸುದೇವವಿಠಲ ಈ ಪರಿ ತಿಳಿದಿನ್ನು
ಈ ಸಮಯಕ್ಕೆ ನಾಮ ಒದಗಿಸಯ್ಯ ॥೩॥

--✿✿✿✿✿--

೨೩೨
ಅನುದಿನ ನೆನೆಯಲೊ ಹನುಮಗತಿಪ್ರಿಯ
(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ - ೧೯೬೯)

ಅನುದಿನ ನೆನೆಯಲೊ ಹನುಮನಿಗತಿಪ್ರಿಯ
ಪರಮಪಾವನ ರಾಮನಾಮ ॥ಪ॥

ಇನಕುಲಭೂಷಣ ಮುನಿಜನ ತೋಷಣ
ಜಾನಕೀರಮಣನ ನಾಮ ॥ಅ.ಪ॥

ಗೌತಮಸತಿಯಾ ಪುನೀತಳ ಮಾಡಿ ಪ್ರ-
ಖ್ಯಾತಿ ಹೊಂದಿದ ದಿವ್ಯನಾಮ
ಶೀತಲಕಿರಣ ಭೂಷಣನ ಧನುವ ಮುರಿದು
ಸೀತೆಯ ಪೊಂದಿದ ನಾಮ ॥೧॥

ಜನಕನ ವಚನವನುಳಿಸುವ ನೆವದಲಿ
ವನವಾಸ ಮಾಡಿದನ ನಾಮ
ವನದಲಿ ಖರದೂಷಣ ಮುಖದನುಜರ
ಹನನ ಮಾಡಿದ ದಿವ್ಯನಾಮ ॥೨॥

ಶರಭಂಗಮುನಿಗೆ ಪರಮಪದವನಿತ್ತ
ಪರಮಪವಿತ್ರನ ನಾಮ
ವರಿಸಲು ಬಂದ ಶೂರ್ಪಣಖಿ ನಾಸಿಕ ಕರ್ಣ
ಮುರಿಸಿದವನ ಶುದ್ಧನಾಮ ॥೩॥

ಭೂಮಿಜೆಯನು ಮೋಸದಿಂದ ಅಗಲಿಸಿದ
ಮಾರೀಚನ ಕೊಂದ ನಾಮ
ಸ್ವಾಮಿಯ ಪ್ರೇಮಕ್ಕೆ ಮಡಿದ ಜಟಾಯುಗೆ
ಅಭಯಹಸ್ತವನಿತ್ತ ನಾಮ ॥೪॥

ಆ ಮಹಾಹನುಮನ ಕಾಮಿತದಂತೆ
ಮಹೇಂದ್ರಸುತನ ಕೊಂದ ನಾಮ
ಕೋಮಲಕಮಲ ಸುಹೃದತನಯನಿಗೆ
ಸಾಮ್ರಾಜ್ಯವನಿತ್ತ ನಾಮ ॥೫॥

ಪರಿಪರಿವಾರದಿಂ ಶರಧಿಯೊಳು ಸೇತು
ಬಂಧನವ ಮಾಡಿದ ರಾಮನಾಮ
ದುರುಳರಾವಣ ಮುಖರಕ್ಕಸರನೆ ಕೊಂದು
ಧರಣಿಸುತೆಯ ಕಂಡ ನಾಮ ॥೬॥

ಶರಣವ ಹೊಂದಿದ ಭಕುತವಿಭೀಷಣಗೆ
ಕರುಣವ ತೋರಿದ ನಾಮ
ತರುಣಿಸೀತೆ ಲಕ್ಷ್ಮಣರಿಂದ ಕೂಡಿ ಪು
ಷ್ಪಕವನೇರಿದ ಸಾಧು ನಾಮ ॥೭॥

ಉರುತರ ತಪದಲಿ ನಿರತನಾದ ತಮ್ಮ
ಭರತನ ಉಳಿಸಿದ ನಾಮ
ದೊರೆತನವೊಂದಿ ಸಕಲ ಸುಜನರುಗಳಿಗೆ
ಪರತರ ಸುಖವಿತ್ತ ನಾಮ ॥೮॥

ತನ್ನ ಭಕುತರೊಳು ಉನ್ನತನೆನಿಸಿದ
ಘನ್ನಮಾರುತಿಗೊಲಿದ ನಾಮ ಪ್ರ
ಸನ್ನನಾಗಿ ಸಂತತ ಇವನಿಗೆ ತನ್ನ
ಸಹಭೋಗಸುಖವಿತ್ತ ನಾಮ ॥೯॥

--✿✿✿✿✿--

೨೩೩
ಕೋಸಲಾಧಿಪ ಶುಭವನು ದಾಶರಥೇ
(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ – ೧೯೬೯)

ಕೋಸಲಾಧಿಪ ಶುಭವನು ದಾಶರಥೇ ॥ಪ॥

ದಾಸನಲ್ಲಿ ಕೃಪಾಲೇಶವ ಬೀರೆಲೊ ॥ಅ.ಪ॥

ಹರನ ಚಾಪವ ಮುರಿದು ಸ್ವಯಂ
ವರದಿ ಜಾನಕಿಕರವ ಪಿಡಿದು
ಸುರನರರನು ಹರುಷಪಡಿಸಿದ
ಸರಸಿಜಲೋಚನ ಕಾಯೋ ಕರುಣದಲಿ ॥೧॥

ವನವ ಸೇರಿ ಮುನಿಗಳ ಶಂ
ಸನವ ಹೊಂದಿದ ಜಾನಕೀಪತಿ
ಮುನಿದು ದುರುಳರ ಹನನ ಮಾಡಿದ
ಹನುಮನಿಗೆ ದರುಶನವಿತ್ತ ॥೨॥

ವಾನರಬಲದಿಂದ ಕೂಡಿ
ವನದಿ ಬಂಧಿಸಿ ಲಂಕೆ ಸೇರಿದಶಾ
ನನ ಮುಖರನು ಕೊಂದು
ಜಾನಕಿಯಲಿ ಪ್ರಸನ್ನನಾದ ॥೩॥

--✿✿✿✿✿--

೨೩೪
ಗಾನಕೆ ಸುಲಭವು ರಾಮನಾಮವು
(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ - ೧೯೬೯)

ಗಾನಕೆ ಸುಲಭವು ರಾಮನಾಮವು
ಗಾನಕೆ ಅತಿಸುಲಭ ॥ಪ॥

ದೀನಜನಕೆ ಬಲು ಸಾನುರಾಗನಾದ
ಜಾನಕಿನಾಥನ ದಿವ್ಯನಾಮವು ॥ಅ.ಪ॥

ತಾಳ ತಂಬೂರಿ ಮೃದಂಗಗಳಿಂದಲಿ
ಹೇಳುವವರಿಗೆ ರಘುಮೌಳಿಯ ನಾಮವು ॥೧॥

ಘೋರಕಲುಷಗಳ ಪಾರಗಾಣಿಸಿ ಮನ
ಕೋರಿಕೆಗಳನೀವ ತಾರಕನಾಮವು ॥೨॥

ತಾಪಸಸತಿಯಳ ಶಾಪವ ಬಿಡಿಸಿದ
ಭೂಪದಾಶರಥಿ ದಿವ್ಯನಾಮವು ॥೩॥

ಲಂಕೆಯ ಹೊಕ್ಕು ನಿಶಾಚರನೆ ಕೊಂದು
ಪಂಕಜಾಕ್ಷಿಯಾತಂಕ ಕಳೆದ ನಾಮ ॥೪॥

ಎನ್ನವರೆಲ್ಲರು ಬನ್ನಿರಿ ಎನ್ನುತ
ತನ್ನೊಡನೊಯ್ದ ಪ್ರಸನ್ನರಾಮನ ನಾಮ ॥೫॥

--✿✿✿✿✿--

೨೩೫
ಮಂಗಳಂ ಶ್ರೀರಂಗಪುಂಗವನಿಗೆ ಜಯ

(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ – ೧೯೬೯)

ಮಂಗಳಂ ಶ್ರೀರಂಗಪುಂಗವನಿಗೆ ಜಯ
ಮಂಗಳಂ ಜಾನಕೀವಲ್ಲಭನಿಗೆ ಶುಭ ॥೧॥

ಶಿಷ್ಟಜನಗಳಿಗೆ ಇಷ್ಟಾರ್ಥಗಳೀವ
ವೃಷ್ಣಿವರೇಣ್ಯ ಶ್ರೀ ಕೃಷ್ಣಮೂರುತಿಗೆ ॥೨॥

ಸಚ್ಚಿದಾನಂದ ಸ್ವರೂಪಗೆ ಮಂಗಳಂ
ಸತ್ಯವತಿ ಸುಕುಮಾರಗೆ ಮಂಗಳಂ ॥೩॥

ಹೇಮಕಶಿಪುನ ತನಯನಿಗೊಲಿದ
ನಾಮಗಿರೀಶ ಶ್ರೀ ಸ್ವಾಮಿನೃಸಿಂಹಗೆ ॥೪॥

ತನ್ನ ಭಕುತರಿಗೆ ಹೊನ್ನಮಳೆಗರೆವ
ಪನ್ನಗಶಯನ ಪ್ರಸನ್ನವಿಠಲಗೆ ॥೫॥

--✿✿✿✿✿--

೨೩೬
ರಕ್ಷಿಸೋ ಜಾನಕೀಕಾಂತ ಶಾಂತ

(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ – ೧೯೬೯)

ರಕ್ಷಿಸೊ ಜಾನಕೀಕಾಂತ ಶಾಂತ ॥ಪ॥

ತಕ್ಷಣದಲಿ ಉಪೇಕ್ಷೆಯ ಮಾಡದೆ ॥ಅ.ಪ॥

ದಕ್ಷ ನಾನಲ್ಲವೊ ಪೊಗಳಲು ಶಾಸ್ತ್ರ ವಿ
ಚಕ್ಷಣೆಯರಿಯೆನೋ ಲಕ್ಷ್ಮೀನಾಥ ॥೧॥

ಸಂತತಪಡುತಿಹ ಚಿಂತೆಯ ಬಿಡುತಲಿ
ಶಾಂತಿಯ ಪೊಂದುವ ತಂತ್ರವ ತೋರುತ ॥೨॥

ಬೇಡುವ ವಿಧದಲಿ ರೂಢಿಯಿಲ್ಲದೆ ಬಲು
ಪಾಡುಪಡುತಿಹೆನೋ ನೀಡುತ ಕರವನು ॥೩॥

ಕ್ಷೀಣಿಸೆ ಉರುತರ ತಪಗಳಿಂ ತನುವನು
ತ್ರಾಣವಿಲ್ಲವೋ ರಮಾಪ್ರಾಣನಾಥನೆ ॥೪॥

ಕೆಟ್ಟಯೋಚನೆ ಎನ್ನ ಮುಟ್ಟದೆ ಮನವನು
ಘಟ್ಟಿಯ ಮಾಡುತ ಶಿಷ್ಟಪ್ರಸನ್ನನೇ ॥೫॥

--✿✿✿✿✿--

೨೩೭

ರಾಮಭಜನೆ ಮಾಡೋ ಮನುಜ

(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೯ - ೧೯೬೯)

ರಾಮಭಜನೆ ಮಾಡೋ ಮನುಜ
ರಾಮಭಜನೆ ಮಾಡೋ ॥ಪ॥

ರಾಮ ರಾಮ ಜಯ ರಾಘವಸೀತಾ
ರಾಮನೆಂದು ಸುಸ್ವರದಲಿ ಪಾಡುತ ॥ಅ.ಪ॥

ತಾಳವನು ಬಿಡಬೇಡ ಮೇಳವನು ಮರೆಬೇಡ
ತಾಳಮೇಳಗಳ ಬಿಟ್ಟು ನುಡಿದರೆ
ತಾಳನು ನಮ್ಮ ಇಳಾಸುತೆಯರಸನು ॥೧॥

ಚಿತ್ತವನು ಚಲಿಸದಿರು ಭೃತ್ಯ ಮನೋಭಾವದಲಿ
ಸತ್ಯಜ್ಞಾನ ಅನಂತ ಬ್ರಹ್ಮನು
ಹೃದ್ಗತನೆಂದರಿಯುತ ಭಕುತಿಯಲಿ ॥೨॥

ಭಲರೆ ಭಲರೆಯೆಂದು ತಲೆದೂಗುವ ತೆರದಿ
ಕಲಿಯುಗದಿ ವರಕೀರ್ತನೆಯಿಂದಲಿ
ಸುಲಭದಿ ಹರಿಯೆ ಪ್ರಸನ್ನತೆ ಪಡೆಯಲು ॥೩॥

--✿✿✿✿✿--

೨೩೮
ರಾಮ ರಾಜೀವಲೋಚನ

(ಪ್ರಸನ್ನ / ಶ್ರೀವಿದ್ಯಾ ಪ್ರಸನ್ನತೀರ್ಥ / ೧೮೯೬ - ೧೯೬೯)

ರಾಮ ರಾಜೀವಲೋಚನ
ಶ್ಯಾಮಲಾಂಗ ನಿರಂಜನ ॥ಪ॥

ಕಾಮಾರಿ ಚಾಪಭಂಜನ
ಮಾಮನೋಹರ ಮಾಂ ಪಾಹಿ ಗುಣಾಕರ ॥ಅ.ಪ॥

ಶೂರ ರಘುವೀರ ದಶರಥ ಕು
ಮಾರ ಮುನಿವೃಂದ ವಿನುತಪದ
ಸಾರಸಾ ಫಲವದೂರ ದಯಾ
ಕರ ಮಾಂ ಜಾನಕೀ ಮನೋಹರ ॥೧॥

ವಾನರಾಧಿಪ ಪ್ರಾಣವಿಠ್ಠಲ ದ
ಶಾನನಾಂತಕ ಪೂರ್ಣಸುಖ
ದಾನವ ಕುಲಭಂಗ
ಭಾನುಕುಲೋತ್ತುಂಗ ದೇಹಿ ಸುಭಕ್ತಿಂ ॥೨॥

ನೀಲಜಲದ ತನು ನೀಲಸುಮಣಿ ವನ
ಮಾಲ ಸುಜನ ಪೋಷಣಶೀಲ
ಪಾಲಯ ಮುನಿಹೃದ
ಯಾಲಯ ತ್ವಯಿ ಮಾಂ ಪ್ರಪನ್ನಂ ಪ್ರಸನ್ನಂ ಶುಭದ ॥೩॥

--✿✿✿✿✿--

೨೩೯
ರಾಮಚಂದ್ರ ಪ್ರೇಮದಿ ಬಾ ಜನಕ

(ನರಹರಿ / ಪ್ರದ್ಯುಮ್ನತೀರ್ಥ / ೧೮೯೦ - ೧೯೨೫)

ರಾಮಚಂದ್ರ ಪ್ರೇಮದಿ ಬಾ ಜನಕ ॥ಪ॥

ಕೋಮಲಾಂಗನೆ
ಕಾಮಿತದಾತನೆ ಕರುಣಾವಾರಿಧಿ ರಾಮ ॥೧॥

ಸಾರಸಾಕ್ಷನೆ
ತೋರಿಸು ಚರಣವ ಪೂರೈಸೆನ್ನ ಮನಸುರಾಮ ॥೨॥

ಶ್ರೀನಿವಾಸನೆ
ಶ್ರೀ ನರಹರಿ ಭವಕಾನನಾನಲನುಪಮ ॥೩॥

--✿✿✿✿✿--

೨೪೦
ಕರುಣಿಸೆಲೊ ಮುಕುಂದಮಾಧವ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೭೦)

ಕರುಣಿಸೆಲೊ ಮುಕುಂದ ಮಾಧವ
ಶ್ರೀರಾಮ ಧರಣೀಧರನೆನಿಸಿ ನಿಮ್ಮ ದಾಸ್ಯವ ॥ಪ॥

ಅಂಬುಜಾಕ್ಷ ಕಂಬುಕಂಧರ
ಶ್ರೀರಾಮ ಜಂಬಭೇದಿ ವಿನುತಮುರಹರ
ಶಂಬರಾರಿಜನಕ ಗಿರಿಧರ
ಶ್ರೀರಾಮ ಕುಂಭಿಣೀಶ ಶೌರಿ ಶುಭಕರ ॥೧॥

ಇನಕುಲೇಶ ಚಾರು ಸುಚರಿತ
ಶ್ರೀರಾಮ ವನಜನಾಭ ಮುನಿವಂದಿತ
ದನುಜಗರ್ವ ಸಂಹಾರಾಚ್ಯುತ
ಶ್ರೀರಾಮ ಅನಘ ಕನಕವಸನಭೂಷಿತ ॥೨॥

ಪನ್ನಗೇಂದ್ರಶಯನ ವಾಮನ
ಶ್ರೀರಾಮ ಉನ್ನತಾಂಗ ಉದಧಿ ಬಂಧನ
ಹೆನ್ನೆಪುರನಿಲಯ ಜನಾರ್ದನ
ಶ್ರೀರಾಮಯೆನ್ನ ಮೊರೆಯ ಕೇಳಿ ಬೇಗನೆ ॥೩॥

--✿✿✿✿✿--

೨೪೧

ದಶರಥನಂದನ ದೀನ ದಯಾಪರ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ದಶರಥನಂದನದೀನದಯಾಪರ
ಶಶಿಮುಖ ಜಾನಕೀರಮಣ
ವಸುಧೆಯೊಳಗೆ ನಿಮ್ಮ ಭಜನೆಯ ಮಾಡುವರ
ಶಿಶುವುಯೆಂದು ತಿಳಿದು ಶೀಘ್ರದಿ ರಕ್ಷಿಸೊ ॥ಪ॥

ಪಶುಪತಿರಕ್ಷಕ ಪಾವನಮೂರ್ತಿ
ಪಶುಪಾಲಕನಾದ ಪರಮಾತ್ಮ
ಕುಸುಮಜನನು ಅತಿಕರುಣದಿ ನೀನು
ಕುಶಲದಿ ಪಡೆದ ಗುಣವಂತಾ
ಹಸಮೀರಿನಡೆವಂತ ಅನೇಕ ದುಷ್ಟ
ಅಸುರರ ಭೇದಿಸಿದ ಬಲವಂತಾ

ದಶದಿಕ್ಕಿನೊಳಗದಾರನು ಕಾಣೆನೊ
ದಶವಂತನು ನಿನಗಾರು ಸರಿಯಾರೊ ॥೧॥

ಪಿತೃವಾಕ್ಯ ಪರಿಪಾಲನೆ ಮಾಡಿದ
ಪುತ್ರನು ಅನಿಸಿದ ಪುಣ್ಯನಿಧಿ
ಸತಿಪತಿಧರ್ಮವ ಸರ್ವದಾ ನಡೆಸುವ
ಸತ್ಯಮೂರ್ತಿ ಸೌಭಾಗ್ಯನಿಧಿ
ಶತದ್ರೋಹಿಯಾಗಿ ಸೀತೆಯ ಒಯ್ದನ
ಶತಮಖನಯ್ಯನ ಸಂಹರಿಸಿದಿ
ಸತತ ವಿಭೀಷಣ ಭಕ್ತಿಯಿಟ್ಟ
ಸಲುವಾಗಿ ಲಂಕೆಯ ಧಾರೆಯನೆರದೀ ॥೨॥

ಯಾದವ ಕುಲಪತಿ ಯಶೋದೆನಂದನ
ವ್ಯಾಧನ ರಕ್ಷಿಸಿದ ವಿಶ್ವೇಶ
ಬಾಧಕ್ಕೆ ಒಳಗಾಗಿ ಕರಿಕೂಗಲು ಮಕರಿ
ಬಾಧೆಯ ತಪ್ಪಿಸಿದ ಪರಮೇಶಾ
ಸಾಧುಸಜ್ಜನ ಸರ್ವರ ಸಲಹುವ
ಸಾಧುಗುಣಾನಂದ ಸರ್ವೇಶಾ
ಮಾಧವ 'ಸಿರಿಹೆನ್ನೆವಿಠಲ' ನಿನ್ನಯ
ಮೋದವ ತೋರೋ ಜಗದೀಶಾ ॥೩॥

--✿✿✿✿✿--

೨೪೨
ದಶರಥ ರಾಮ ಹರೇ ಸೀತಾಪತೇ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)

ದಶರಥರಾಮಹರೇ ಸೀತಾಪತೇ
ದಶರಥರಾಮ ಸುಧಾಕರವದನ
ಪರಶುರಾಮ ಬಾಹುಪರಾಕ್ರಮ ಜಿತಶ್ರೀ ॥ಪ॥

ಸುರಮುನಿಸೇವಿತ ಶುಭಕರಚರಿತ
ಭಾಸುರ ಕೀರ್ತಿಸಾಂದ್ರ ಕೌಸ್ತುಭಶೋಭಿತ
ವರವಿಶ್ವಾಮಿತ್ರಾಧ್ವರ ಪರಿಪಾಲನ
ಖರದೂಷಣ ರಾಕ್ಷಸ ಬಲಖಂಡನ ॥೧॥

ವಾಲಿಮರ್ದನ ಭಕ್ತವತ್ಸಲ ಮಾಧವ
ಫಾಲಲೋಚನ ವಿನುತಪಾದಪದ್ಮ
ನೀಲನೀರದ ಸನ್ನಿಭಗಾತ್ರ ಪರಮದಯಾಳು
ನಾರಾಯಣಲೀಲಾ ಮಾನುಷವೇಷ ॥೨॥

ಸಿಂಧುಬಂಧನಪಂಕ್ತಿ ಕಂಧರಾಂತಕ
ಗೋವಿಂದ ಮುಕುಂದಾರವಿಂದೋದರ
ಇಂದಿರಾಧಿಪ ಶ್ರೀ ಹೆನ್ನೆಪುರ ನಿಲಯಾ
ನಂದವಿಗ್ರಹ ಜಗದ್ವಂದ್ಯ ಮಂದಹಾಸ ॥೩॥

--✿✿✿✿✿--

೨೪೩
ರಾಮ ರಮಣಾ ರಘು
(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ರಾಮ ರಮಣಾ ರಘು ॥ಪ॥

ಸುಂದರವದನಾ ಸುರಮುನಿಪಾಲಕ
ಮಂದರಧರ ಶ್ರೀಮಾಧವ ಕೃಷ್ಣ ಹರಿ ॥೧॥

ಕುಂಡಲೀಶಶಯನ ಕೋದಂಡಧರ ಘನ
ಮಂಡಲಾಧಿಪತಿ ಮಹಾಮಹಿಮ ರಘುಪತಿ ॥೨॥

ಶ್ರೀಜಗನ್ನಾಯಕನೆ ಶ್ರಿತಜನಪೋಷಕ
ರಾಜಧಿರಾಜ ಮರ್ತ್ಯರಾಜನೆನಿಸಿಹ ॥೩॥

ವೆಂಕಟರಮಣ ಅಕಳಂಕಮಹಿಮ
ಪಂಕಜೋದ್ಭವನಯ್ಯಾ ಪರಮಭಕ್ತರಪ್ರಿಯ ॥೪॥

ಹೆನ್ನೆರಂಗಬಿಲವಾಸ ಹೆನ್ನೆ
ಚಿನ್ಮಯರೂಪ ಶ್ರೀಚಿತ್ತಜನಯ್ಯ ಭೂಪ ॥೫॥

--✿✿✿✿✿--

೨೪೪

ರಾಮ ರಾಮ ರಾಮ ಎಂದು ಸ್ಮರಿಸೋ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ರಾಮ ರಾಮ ರಾಮ ಎಂದು ಸ್ಮರಿಸೋ ನೀ ಮನಾ
ಪ್ರೇಮದಿಂದ ಜಾನಕೀಪತಿಯ ಅನುದಿನಾ ॥ಪ॥

ಇಂದುಶೇಖರವಂದ್ಯ ಗೋವಿಂದದೇವನಾ
ಮಂದರಾದ್ರಿ ಗಿರಿಯನೆತ್ತಿದ ಮಹಾಮಹಿಮನ
ಕಂದ ಕೂಗಲು ಕಂಬದಿ ಬಂದ ಕರುಣಾಸಾಗರನ
ಚಂದದಿಂದ ಚಲನೆಯಿಲ್ಲದೆ ಚೆಲುವ ಕೃಷ್ಣನಾ ॥೧॥

ಕುಲಸತಿಯ ಕುಚದಲ್ಲಿಟ್ಟ ಕೋಮಲಾಂಗನ
ಒಲಿದು ಧ್ರುವಗೆ ಪಟ್ಟವನಿತ್ತ ವಾರಿಜನಾಭನಾ
ಜಲದಿ ಬಂಧಿಸಿ ದೈತ್ಯರನ ಛೇದಿಸಿದಾತನಾ
ಸುಲಭದಿಂದ ಹೃದಯದಲ್ಲಿ ಸ್ತುತಿಸೊ ನೀ ಇನ್ನಾ ॥೨॥

ಸಿಂಧುಶಯನ ಶ್ರೀನಿವಾಸ ಸಕಲಕರ್ತನಾ
ನಂದದಿಂದ ಹೆನ್ನವಿಠ್ಠಲ ಇಂದಿರೇಶನ
ಹೊಂದಿ ಪಾದದ್ವಂದ್ವ ಭಜಿಸಿ ಹರುಷದಿ ಮನಾ
ಕುಂದುಯಿಲ್ಲದೆ ಕಾಯ್ವ ಭಾನುಕೋಟಿ ತೇಜನಾ ॥೩॥

--✿✿✿✿✿--

೨೪೫

ರಾಮ ರಾಮ ರಾಮ ರಾಮಯೆಂದು

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ರಾಮ ರಾಮ ರಾಮ ರಾಮಯೆಂದು
ರಾತ್ರಿ ಹಗಲು ನಿರುತ ಪ್ರೇಮದಿಂದ
ಇಲ್ಲಿ ಬಂದು ಪ್ರತಿಗತಿಪಡಿಸಿಯಿಂದೂ ॥ಪ॥

ಕಾಮಿತಫಲದಾಯಕನೆಂದೂ
ಕಮಲಗರ್ಭನ ಪಿತನೀತೆಂದೂ
ಸ್ವಾಮಿರಕ್ಷಕನೆಂದೂ ನೇಮನಿತ್ಯಕರ್ಮದಿಂದ ॥೧॥

ಒಂದುನಿಮಿಷ ಮರೆಯದೆಂದು ವಾಸುದೇವಾನಂದನೆಂದೂ
ಬಂಧುಬಳಗ ಭಾಗ್ಯವೆಂದೂ
ಛಂದ ನಿಮ್ಮನಾಮ ನೆರೆ ತಂದೂ ॥೨॥

ಸುಂದರಾಂಗ ಸುಜನಪೋಷ ಸಿಂಧು
ಶಯನ ಶ್ರೀನಿವಾಸ
ಕುಂದು ಇಲ್ಲದೆ ಪೊರೆವಾ ದಾಸರಿಂದು
"ಹೊನ್ನವಿಠ್ಠಲೇಶಾ" ॥೩॥

--✿✿✿✿✿--

೨೪೬

ರಾಮ ರಾಮ ರಾಮ ಶ್ರೀರಾಮನೆನ್ನಿರೋ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ರಾಮ ರಾಮು ರಾಮ ಶ್ರೀರಾಮನೆನ್ನಿರೊ
ಪ್ರೇಮದಿಂದ ಶ್ರೀ ಜಾನಕೀಪ್ರೇಮನ ನೆನೆಯಿರೊ ॥ಪ॥

ಅಂದದಿಂದ ಈ ದಶರಥನಂದನೆಂದು
ಚಂದದಿಂದ ಚಲನೆಯಿಲ್ಲದೆ ಚಿತ್ತಸ್ವಸ್ಥದಿ
ಒಂದು ಘಳಿಗೆ ಕಾಲ ಕಳೆಯ
ಹೊಂದಿ ದೇವರ ಚರಣಕಮಲಾ
ನಂದ ಅರ್ಚಿಸುವ ಮಂದಿರದಿ ಭಜಿಸಿರೊ ॥೧॥

ಕಾಮನಯ್ಯನ ಕಡಲೊಳಾಳ್ದನ
ಕೂರ್ಮರೂಪ ವರಾಹನಾದನ ಸ್ವಾಮಿ ನರಹರಿ
ವಾಮನ ಪರಶುರಾಮನಾದನಾ
ರಾಮಕೃಷ್ಣ ಬೌದ್ಧಕಲ್ಕಿ ನಾಮವುಳ್ಳ ನಾರಾಯಣನ
ನೇಮದಿಂದ ನಿತ್ಯದಲ್ಲಿ ನಾಮ ಸ್ಮರಿಸಿರೊ ॥೨॥

ಪಿತೃವಾಕ್ಯ ಪಾಲಿಸಿದವನು
ಸತತ ಭಕ್ತರ ಸಲಹುತಿಹನು
ಕ್ಷಿತಿಗೆ ಒಡೆಯನಾದ ದೇವನು 'ಶ್ರೀ ಹೊನ್ನ ವಿಠಲಾ'
ನತಿಶಯದಿಂದಲಿ ಹೃದಯನಂಬಿ ಇರುವ ನರರಿಗೆ
ಪತಿಕರಿಸೋನೀಸದ್ಗತಿಯ ತೋರುವನಧಿಕ ಸಂಪನ್ನ ॥೩॥

--✿✿✿✿✿--

೨೪೭
ರಾಮ ರಾಮ ರಾಮ ಹರೇ ರಘು

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)

ರಾಮ ರಾಮ ರಾಮ ಹರೇ ರಘು ॥ಪ॥

ರಾಮ ಜಾನಕೀಪ್ರೇಮ ಕೃಪಾಂಬುಧಿ ಸ್ವಾಮಿ
ಪರಂಧಾಮ ಸಾರುಚಿವರದಾ ॥೧॥

ಪತಿತಪಾವನದೇವಾ ಸದ್ಭಕ್ತರ
ಸತತ ಬಿಡದೆ ಕಾಯುವಾ ಮಹಾನುಭಾವ-
ನತಿಶಯದಲಿ ಮನಹಿತದಲಿ ಅನುದಿನ
ಸ್ತುತಿಯನು ಮಾಡುವರಿಗೆ ಗತಿ ಕಾಣಿಸುವಂಥ ॥೨॥

ಅಂಡಜವಾಹನನೆ ಅನೇಕ ಭೂ
ಮಂಡಲನಾಳುವನೆ ಮಣಿಯ ಮುಕುಟಧರನೆ
ಪುಂಡರೀಕಾಕ್ಷ ಕೋದಂಡಪಾಣಿ
ಉದ್ದಂಡ ರಕ್ಕಸರಳಿದ ಚಂಡಪರಾಕ್ರಮಿ ॥೩॥

ಪನ್ನಗಾದ್ರಿಯವಾಸಾ ಭಜಕರ ಘೋಷಾ
ಹೆನ್ನೆರಂಗವಿಠ್ಠಲ ವೇಷಾ ಪರಮೋಲ್ಲಾಸಾ
ಚಿನ್ಮಯಮೂರುತಿ ಶ್ರೀಗೌರೀವರಪ್ರಿಯ
ಮನ್ನಿಸಿ ಸಲಹೋ ಎನ್ನ ಮದನಜನಕ ಹರೇ ॥೪॥

--✿✿✿✿✿--

೨೪೮

ರಾಮ ರಾಮ ರಾಮ ರಾಮ ಸೀತಾರಾಮ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ರಾಮರಾಮ ರಾಮ ರಾಮಸೀತಾರಾಮ
ದಶರಥನಂದನ ರಾಮ ದಯಮಾಡು ಶ್ರೀರಾಮ
ಪಶುಪತಿಪಾಲಕ ರಾಮ ಪಾಲಿಸೊಯೆನ್ನನು ಶ್ರೀರಾಮ ॥ಪ॥

ಭಕ್ತವತ್ಸಲರಾಮ ಪಾಂಡವ ಪಕ್ಷಕರಾಮ
ಮುಕ್ತಿದಾಯಕರಾಮ ಮುನಿಗಣವಂದ್ಯರಾಮ
ಯುಕ್ತ ಜಗತ್ಕರ್ತರಾಮ ಇನಕುಲಭೂಷಣರಾಮ
ಮೌಕ್ತಿಕಮಣಿಗಣರಾಮ ಮಾಣಿಕ್ಯಮುಕುಟಧರರಾಮ ॥೧॥

ಅಹಿಪಶಯನ ಶ್ರೀರಾಮ ಅನೇಕಚರಿತರಾಮ
ಅಹಲ್ಯಾರಕ್ಷಕ ರಾಮ ಅಮಿತಪರಾಕ್ರಮ ರಾಮ
ಇಹಪರಬಾಂಧವ ರಾಮ ವಿಶ್ವಕುಟುಂಬಿ ರಾಮ
ಮಹಾಮಹಿಮ ಶ್ರೀರಾಮ ಮನುಜಾಧಿಪತಿರಾಮ ॥೨॥

ಭೂತದಯಾಪರರಾಮ ಪುಣ್ಯಪುರುಷ ಶ್ರೀರಾಮ
ಪಾತಕಭಯಹರರಾಮ ಪತಿತಪಾವನ ರಾಮ
ನಾಥಜಗತ್ರಯರಾಮ ಅನಾಥರಕ್ಷಕರಾಮ
ಸೇತುಬಂಧನ ರಾಮ ಶಾಶ್ವತವಿಗ್ರಹರಾಮ ॥೩॥

ಮಂಗಳಮೂರುತಿ ರಾಮ ಮಧುಸೂದನ ಶ್ರೀರಾಮ
ಗಂಗಾಪಿತಹರಿರಾಮ ಗೌರೀವಲ್ಲಭರಾಮ
ಶೃಂಗಾರಾಂಗ ರಾಮಾಶ್ರಿತಜನಪೋಷಿತರಾಮ
ರಂಗನಾಯಕ ರಾಮ ರಾಜೀವನಯನ ರಾಮ ॥೪॥

ಸತ್ಯವಾಕ್ಯ ಶ್ರೀರಾಮ ಸದಾನಂದ ರಾಮ
ನಿತ್ಯನಿರಂಜನ ರಾಮ ನಿರ್ವಿಕಲ್ಪ ಶ್ರೀರಾಮ
ಭೃತ್ಯಕೋಟಿಸಂಘರಾಮ ಪುಣ್ಯಪ್ರಭಾವ ಶ್ರೀರಾಮ
ದೈತ್ಯಾಂತಕ ಶ್ರೀರಾಮ ತಾಟಕಮರ್ದನ ಶ್ರೀರಾಮ ॥೫॥

ಕಪಟನಟವರರಾಮ ನವನೀತಹೃದಯರಾಮ
ಕೋಟಿಭಾನುತೇಜ ರಾಮ ಕರುಣಾಸಾಗರರಾಮ
ಹಾಟಕಾಂಬರಧರ ರಾಮ ಆದಿನಾರಾಯಣ ರಾಮ
ಕೋಟಿಕಂದರ್ಪರೂಪ ರಾಮ ಕೋಮಲಗಾತ್ರರಾಮ ॥೬॥

ಯದುಕುಲಾಬ್ಧಿಚಂದ್ರ ರಾಮ ಯಶೋದಾನಂದನ ರಾಮ
ಮೃದುಮಧುಭಾಷಣರಾಮ ಮೂಲರೂಪ ಶ್ರೀರಾಮ
ಗದಾಧರವಂದ್ಯರಾಮ ಘನಗಂಭೀರರಾಮ
ಪದುಮನಾಭ ಶ್ರೀರಾಮ ಪರಮಕೃಪಾಳುರಾಮ ॥೭॥

ಸರಸಿಜಭವನುತರಾಮ ಸದ್ವಿಲಾಸ ಶ್ರೀರಾಮ
ಕರಿರಾಜಪಾಲಕ ರಾಮ ಕಲ್ಮಷಪರಿಹರ ರಾಮ
ಸುರಪತಿವಂದ್ಯ ರಾಮ ಸುಜನಾಂತರ್ಯಾಮಿ ರಾಮ
ಶರಧಿಶಯನ ಶ್ರೀರಾಮ ಶಾರ್ಙ್ಗಪಾಣಿ ರಾಮ ॥೮॥

ಕಮಲೋದರ ರಾಮ ಘನಗುಣಶಾಂತ ರಾಮ
ಕಮಲಜನಕ ರಾಮ ಕಿರೀಟಸಾರಥಿ ರಾಮ
ಕಮಲಮನೋಹರ ರಾಮ ಗರುಡವಾಹನ ರಾಮ
ಕಮಲಾಪ್ತ ಶಶಿನೇತ್ರ ಕರ್ಮಸಾಕ್ಷಿಭೂತರಾಮ ॥೯॥

ಈಶಜಗತ್ರಯ ರಾಮ ವಿಷ್ಣುಸರ್ವೋತ್ತಮ ರಾಮ
ವಾಸುದೇವಕೃಷ್ಣ ರಾಮ ವಸುದೇವನಂದನ ರಾಮ
ಭೂಸುರಪ್ರಿಯ ಶ್ರೀರಾಮ ಸರ್ವಪೂಜಿತರಾಮ
ವಸುಗಿರಿವಾಸರಾಮ ವೈಕುಂಠನಿಲಯ ರಾಮ ॥೧೦॥

ನೀಲಮೇಘವರ್ಣ ರಾಮ ನಿಖಿಲವೈಭವರಾಮ
ಬಾಲಗೋಪಾಲ ರಾಮ ಪುಂಡರೀಕವರದ ರಾಮ
ಫಾಲಲೋಚನಪ್ರಿಯ ರಾಮ ಪಾಂಡುರಂಗ ಶ್ರೀರಾಮ
ಕಾಲಿಯಾಮರ್ದನ ರಾಮ ದ್ವಾರಕಾವಾಸ ರಾಮ ॥೧೧॥

ವೇಣುನಾದ ಶ್ರೀರಾಮ ವೆಂಕಟರಮಣ ರಾಮ
ಗಾನಲೋಲ ಶ್ರೀರಾಮ ಕಂಬುಕಂಧರರಾಮ
ಮಾನಿತತ್ರಿಭುವನರಾಮ ಮಂದರಧರ ಶ್ರೀರಾಮ
ಧೇನುಪಾಲಕ ರಾಮ ದೇವಾಧಿದೇವ ರಾಮ ॥೧೨॥

ಕುಂಭಿನೀಧವ ರಾಮ ಕುಶಲವಜನಕರಾಮ
ನಂಬಿದೆ ನಿನ್ನ ಪಾದರಾಮ ರಕ್ಷಿಸೋ ಬಿಡದಲೆ ರಾಮ
ಅಂಬರಧ್ರುವನಂತೆ ರಾಮ ಅಜಮಿಳನಂತೆ ರಾಮ
ಸ್ತಂಭದೊಳಗೆ ಬಂದ ರಾಮ ತರುಳನ ಪೊರೆದಂಥ ರಾಮ ॥೧೩॥

ತಾಪತ್ರಯದಲಿ ರಾಮ ನಾ ತಪಿಸುತಿರುವೆ ರಾಮ
ಈಪರಿ ತಾಪವ ರಾಮ ಹೆದರಿಸಿ ಕಳೆಯೋ ರಾಮ
ಭೂಪ ನೀನಲ್ಲದೆ ರಾಮ ಭೂಮಿಯೊಳಧಿಕ ನೀನಲ್ಲವೆ ರಾಮ
ಕಾಪಾಡುವ ಭಾರ ರಾಮ ಕರ್ತನು ನೀನೆ ರಾಮ ॥೧೪॥

ನಿಗಮಗೋಚರ ರಾಮ ನಿತ್ಯಕಲ್ಯಾಣ ರಾಮ
ಅಘನಾಶನ ಶ್ರೀರಾಮ ಅನಂತನಾಮ ರಾಮ
ಜಗದೊಳಗಧಿಕನಾದ ರಾಮ ಜಯ ಹೆನ್ನೆವಿಠ್ಠಲ ರಾಮ
ಮಗುವು ನಾನೊಂದರಿಯೆ ಶ್ರೀರಾಮ ಮನ್ನಿಸಿ ಸಲಹೋರಾಮ ॥೧೫॥

--✿✿✿✿✿--

೨೪೯
ಶ್ರೀರಾಮ ಜಯರಾಮ ಶ್ರೀರಾಮರಾಮ
(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ಶ್ರೀರಾಮ ಜಯರಾಮ ಶ್ರೀರಾಮರಾಮ
ಕಾರುಣ್ಯನಿಧಿರಾಮ ಕೌಸಲ್ಯಾ ರಾಮ ॥ಪ॥

ಜಾನಕೀಪತಿರಾಮ ಜಯರಘುರಾಮ
ಜಾಹ್ನವೀಪಿತರಾಮ ಸರ್ವೇಶರಾಮ ॥೧॥

ಭಯನಿವಾರಣರಾಮ ಪಾವನರಾಮ
ನಯಗುಣ ಶ್ರೀರಾಮ ನರಹರೇ ರಾಮ ॥೨॥

ತ್ರಿಜಗಮೋಹನ ರಾಮ ದಿವಿಜೇಶರಾಮ
ಅಜಭವನುತ ರಾಮ ಆನಂದರಾಮ ॥೩॥

ಭುವನಪಾಲಕ ರಾಮ ಭೂಪತೇ ರಾಮ
ಸವನರಕ್ಷಕ ರಾಮ ಶತ್ರುಘ್ನ ರಾಮ ॥೪॥

ಸವನಸೇವಿತರಾಮ ಪರಮಾತ್ಮ ರಾಮ
ಭವವಿಮೋಚನ ರಾಮ ಪದ್ಮಾಕ್ಷ ರಾಮ ॥೫॥

ವೈದೇಹಿಪತಿ ರಾಮ ವೈಕುಂಠರಾಮ
ವೇದಗೋಚರ ರಾಮ ವೆಂಕಟೇಶ ರಾಮ ॥೬॥

ಮಂಗಳಾತ್ಮಕರಾಮ ಮಾಧವರಾಮ
ಶೃಂಗಾರಶೇಖರ ರಾಮ ಶ್ರೀರಾಮರಾಮ ॥೭॥

ದಶರಥಸುತ ರಾಮ ದನುಜಾರಿ ರಾಮ
ಕುಶಲವಪಿತ ರಾಮ ಕೋದಂಡರಾಮ ॥೮॥

ಕರುಣಸಾಗರ ರಾಮ ಕಾಕುತ್ಸ್ಥ ರಾಮ
ಶರಧಿಶಯನ ರಾಮ ಶಾಶ್ವತ ರಾಮ ॥೯॥

ಶ್ರೀಕರಾವ್ಯಯರಾಮ ಶ್ರೀಧರರಾಮ
ಪಾಕಾರಿಸುತ ರಾಮ ಪರಮೇಶರಾಮ ॥೧೦॥

ಮಧುರಭಾಷಣರಾಮ ಮಧುವೈರಿರಾಮ
ಮದನಾರಿನುತರಾಮ ಮೌನೀಶರಾಮ ॥೧೧॥

ಗೌತಮಸತಿ ಶಾಪಖಂಡನರಾಮ
ಪಾತಕಹರ ರಾಮ ಪ್ರಖ್ಯಾತರಾಮ ॥೧೨॥

ರಾಮ ಗರ್ವವಿರಾಮ ರಾಮಾಭಿರಾಮ
ಸೌಮಿತ್ರಿವರರಾಮ ಸೌಂದರ್ಯರಾಮ ॥೧೩॥

ಸುಗ್ರೀವಸಖರಾಮ ಶುಭಕರರಾಮ
ಅಗ್ರಜಾಧಿಪರಾಮ ಅಮಿತಬಲರಾಮ ॥೧೪॥

ಅನ್ಯಮಾನಸರಾಮ ರಘುರಾಮ
ಇನಕುಲೇಶ್ವರ ರಾಮ ವಿಬುಧೇಂದ್ರರಾಮ ॥೧೫॥

ಚಾರುಚರಿತ ರಾಮ ಜಯಜಯ ರಾಮ
ಮಾರುತಾತ್ಮಜವಂದ್ಯ ಮಾನಿತರಾಮ ॥೧೬॥

ವಾಲಿಮರ್ದನರಾಮ ವರದಶ್ರೀರಾಮ
ಫಾಲಾಕ್ಷಸಖರಾಮ ಭದ್ರಶ್ರೀರಾಮ ॥೧೭॥

ಸೇತುಬಂಧನ ರಾಮ ಚಿನ್ಮಯರಾಮ
ಸೀತಾಪತೇ ರಾಮ ಜಿತದೈತ್ಯ ರಾಮ ॥೧೮॥

ನತವಿಭೀಷಣರಾಮ ನಗಧರ ರಾಮ
ಚತುರಾಸ್ಯಪಿತ ರಾಮಚಂದ್ರ ಶ್ರೀರಾಮ ॥೧೯॥

ಮಾರೀಚಮದಭಂಗ ಮಹಾದೇವರಾಮ
ವೀರಾಗ್ರಣೀರಾಮ ವಿಶ್ವೇಶರಾಮ ॥೨೦॥

ರಾಮರಾಮ ರಾಮರಾಮ ಶ್ರೀರಾಮ
ಕಾಮಿತಾರ್ಥಪ್ರದಕಲ್ಯಾಣರಾಮ ॥೨೧॥

ಅಗಣಿತಮಹಿಮವಿಲಾಸ ಶ್ರೀರಾಮ
ನಿಗಮಗಾನವಿನೋದ ನಿತ್ಯ ಶ್ರೀರಾಮ ॥೨೨॥

ಕಂಬುಕಂಧರ ರಾಮ ಘನತರರಾಮ
ಕುಂಭಕರ್ಣಾಂತರ ಗೋವಿಂದರಾಮ ॥೨೩॥

ಸುಜನಹೃತ್ಕಮಲಭಾಸುರ ಸೂರ್ಯರಾಮ
ನೀಲನೀರದವರ್ಣ ನೃಪತಿ ಶ್ರೀರಾಮ ॥೨೪॥

ಲೀಲಾ ಮನುಜವೇಷ ರಿಪುಜೈತ್ರರಾಮ
ಪ್ರಕಟಪರಾಕ್ರಮ ರಾಮರಾಮ ಶ್ರೀರಾಮ ॥೨೫॥

ಅಕಲಂಕ ನಿರುಪಮಾನ ಸಹಾಯ ರಾಮ
ಭಕ್ತವತ್ಸಲ ದೀನಬಂಧು ಶ್ರೀರಾಮ ॥೨೬॥

ಮುಕ್ತಿದಾಯಕರಾಮ ಪೂಜಿತರಾಮ
ದಶಕಂಠಮರ್ದನ ತಾರಕನಾಮ ॥೨೭॥

ಶಶಿಬಿಂಬವದನ ದಾಶರಥಿ ಶ್ರೀರಾಮ
ನಾರಾಯಣಾಚ್ಯುತಾನಂತ ಶ್ರೀರಾಮ ॥೨೮॥

ವಾರಿಜೋದರ ಶ್ರೀನಿವಾಸ ಶ್ರೀರಾಮ
ಹರಧನುರ್ಭಂಗ ದಯಾನಿಧೇ ರಾಮ ॥೨೯॥

ಪುರುಷೋತ್ತಮ ಪುರಾಣಪುರುಷ ಶ್ರೀರಾಮ
ಸರ್ವಲೋಕಶರಣ್ಯ ಸೌಭಾಗ್ಯರಾಮ ॥೩೦॥

ಶರ್ವರೀಚರಹರಕ್ಷ್ಮಾಪತೇರಾಮ
ಸರಸಿಜನಾಭ ದಾಶಾರ್ಹ ಶ್ರೀರಾಮ ॥೩೧॥

ಶರಣಾಗತ ತ್ರಾಣ ಶರಣು ಶ್ರೀರಾಮ
ಮುದನೂರ ಗೋಪಾಲಮೂರ್ತಿ ಶ್ರೀರಾಮ ॥೩೨॥

ಬುಧಜನಾಧಾರ ಸರ್ವೋತ್ತಮರಾಮ
ವರ ಹೆನ್ನೆಪುರನಿವಾಸ ಶ್ರೀರಾಮ ॥೩೩॥

ನರಸಿಂಹಭಕ್ತ ಚಿಂತಾಮಣಿ ರಾಮ
ಇಷ್ಟದಾಯಕ ಹೆನ್ನೆವಿಠಲ ರಾಮ ॥೩೪॥

ಕಷ್ಟ ರಕ್ಷಿಸುಯೆನ್ನ ಶ್ರೀರಾಮರಾಮ
ಕುಜನವನಕುಠಾರ ಕೋವಿದ ರಾಮ ॥೩೫॥

--✿✿✿✿✿--

೨೫೦
ಶ್ರೀರಾಮ ರಾಮ ರಾಮಾ ರಘುಕುಲ ಅಬ್ಧಿಸೋಮಾ

(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ – ೧೮೬೦)

ಶ್ರೀರಾಮ ರಾಮ ರಾಮಾ ರಘುಕುಲ
ಅಬ್ಧಿಸೋಮಾ ॥ಪ॥

ದಶರಥನಂದನ ರಾಮಾ ಜಗದೇಕ ರಾಮಾ
ರಾಮ ಜಾನಕೀಪ್ರೇಮ ಸುರಕ್ಷಕ ಸುದಾಮಾ
ಸಕಲಲೋಕ ಸ್ವಾಮಿ ಜಗನ್ನಾಥ ॥ಅ.ಪ॥

ದಂಡಿ ದಾನವರ ಕುಲತರಿದೂ ದಶಶಿರನಳಿದೂ ಭೂ
ಮಂಡಲ ಮಾತೆ ಸೀತೆತಂದಾ ಅತಿ ಶರತಿನಿಂದಾ
ಹಿಂಡು ವಾನರ ಬಹುದಂಡನೆ ಕೂಡಿಸಿ
ಪುಂಡ ರಕ್ಕಸರೆದೆ ಗುಂಡಿಗೆ ಮುರಿದಾ ||೧||

ವೀರಾಧಿವೀರರಲಿ ಗಂಭೀರಾ ಸುಂದರಾಕಾರಾ
ಧೀರಾ ವಿಜಯರಣಶೂರಾ ಪೋಷಿತಾಮರ
ಸಾರ ಜಗಗಳೊಳು ಮೀರಿದವರ ಗರ್ವ
ಕಾರಿಸಿ ಮುರಿದಾ ಹೋ ಧೀರ ಮಹಾನುಭಾವಾ ||೨||

ಪನ್ನಗಾದ್ರಿಯವಾಸಾ ಈಶಾ ಭಕ್ತರಪೋಷಾ
ಚಿನ್ಮಯರೂಪ ಜಗದೀಶಾ ಚಿದ್ವಿಲಾಸಾ-
ಪನ್ನ ಶರಣ್ಯ ಶ್ರೀ ಹೆನ್ನೆ ವಿಠ್ಠಲ
ಎನ್ನ ಮರೆಯದಲೆ ಇನ್ನು ರಕ್ಷಿಸೋ ||೩||

--✿✿✿✿✿--

೨೫೧
ಶ್ರೀರಾಮ ರಾಮನ ಭಜಿಸಿರೊ
(ಹೆನ್ನೆರಂಗವಿಠಲ / ಹೆನ್ನೆರಂಗದಾಸ / ೧೮೦೦ - ೧೮೬೦)

ಶ್ರೀರಾಮ ರಾಮನ ಭಜಿಸೋ
ಮನದಲಿ ಶ್ರೀಕೃಷ್ಣನ ಸ್ಮರಿಸೊ
ಪರಾಭವಾರೂರ್ಧ್ವಪವಾಸಗಳಿಂದ
ಪತಿತಪಾವನ ಶ್ರೀಗೋವಿಂದ ||ಪ||

ಧರಾಧರ ಧರ ಜಗದೋದ್ಧಾರ
ತಾರಕ ರಘುವೀರಾ
ಶರಾದಿಬಂಧಿಸಿ ಸೈನ್ಯವು ನಡೆಸಿ
ತ್ವರಾ ಲಂಬಿಣಿ ಭೇಧಿಸಿ
ಸರಾಗದಿಂದಾಲಂಕಾಪುರಾದಿ
ರಾಕ್ಷಸರಾಗೆಲ್ಲರನೊಯ್ದಡಿಕ್ಕಿ

ಪುರಾಧಿಪತಿ ಮಹಾ ರಕ್ಕಸಾ ರಾವಣನ
ಶಿರಾಗಳತ್ತನೆ ಛಂಡಿಸಿ ಹರೆದನಾ ॥೧॥

ಶರಾಣೆಂದು ಬಂದರು
ನಗಾನಂದ ಕರುಣಿಸು ಚಂದಾ
ಸ್ಥಿರಾ ಲಂಕೆ ಪಟ್ಟ ಹರುಷದಲಿಕೊಟ್ಟ
ಯಾರು ಎಂದ್ಹೇಳಿದಿರಾ ವೀರಾಧಿವೀರ
ಶೌರ್ಯ ಶೂರ ಪ್ರಚಂಡರು ಧೀರ
ಹನುಮದೇವರು ಆರಾಮದಲಿತ್ತ
ಆರಾಮಿಯಾರಥನೇರಿ ಶಿಕಾರ
ತಂದೆ ಕಾಂತೆ ಜಗನ್ನಾಥ ॥೨॥

ರಾಮಾಯೆಂದು ಭಯಭಕ್ತಿಯಿಂದಾ
ಸ್ಥಿರಚಿತ್ತದಿಂದಾ ಸ್ಮರಣೆ ಮಾಡುತ
ಶ್ರೀಹರಿಯು ನಿನ್ನಲಿ ನೆಲಸಲಿ ಎನುತ
ನಿರಾಳ ಮನ ಕವಿತಾ
ಇರುತಲಿಪ್ಪವರಿಗೆ ಸಂಪತ್ಕರವು
ಧರೆಯೊಳು ಹೆನ್ನೆತೀರವಾಸ
ದೊರೆ ಹೆನ್ನೆವಿಠ್ಠಲ ರಾಯನ ॥೩॥

--✿✿✿✿✿--

೨೫೨

ರಾಮನ ನೋಡಿರೈ ಮಂಗಳನಾಮನ ಪಾಡಿರೈ

(ಕಾರ್ಪರ ನರಹರಿದಾಸ / ಕೊಪ್ಪರ ಗಿರಿಯಾಚಾರ್ಯ / ೧೮೮೭ - ೧೯೭೯)

ರಾಮನ ನೋಡಿರೈ ಮಂಗಳನಾಮನ ಪಾಡಿರೈ ॥ಪ॥

ಭೂಮಿಯೊಳಾರ್ಯ ಅಕ್ಷೋಭ್ಯರ ಮಠದಿ
ಪೂಜಿತನ ಸೀತಾನ್ವಿತನ ॥ಅ.ಪ॥

ತಾಮರಸ ಭವಾದ್ಯಮರ ಗಣ ಪ್ರಾರ್ಥನದಿ।
ದಶರಥಗೃಹದಿ
ಶ್ರೀಮನೋಹರನವತರಿಸಿ ಭೂಭಾರವನಿಳುಹಿ।
ಸುಜನರ ಸಲಹಿ
ಪ್ರೇಮದಿ ಕುಶಲವರನುದಿನ ಪೂಜಿಪೆವೆಂದು।
ಬೆಸಗೊಳಲಂದು
ರಾಮನು ಸ್ಮರಿಸಲು ವೈಕುಂಠದಿ ಬಂದಿಹನು।
ಸೀತಾವರನಾ ॥೧॥

ಚಿಂತಿಸು ರಾಮನ ಶುಭಲಕ್ಷಣಗಳನೇಕ।
ಕರ್ಮವಿಪಾಕ
ಗ್ರಂಥದೊಳಷ್ಟಮ ಕಾಂಡದಿ ಚತುರಧ್ಯಾಯ।
ದೊಳಗೀವಿಷಯಾ
ದ್ಯಂತವಾಗಿ ವರ್ಣಿತವೆಂಬುವದನೆ।
ಖರೆಯ ಯತಿಕುಲವರ್ಯ
ಕಾಂಕರಜ ರಘುದಾಂತ ಕರಾರ್ಚಿತ।
ಚರಣ ಸುಜನೋದ್ಧರಣ ॥೨॥

ಘನ ಶೋಭಿಸುವ ಕುಂದಣ ಮಣಿಮಯದ।
ಕಿರೀಟಯುಕ್ತಲಲಾಟ
ಚಿನ್ಮಯಗಾತ್ರದಿ ಮಿನುಗುವ ರತ್ನಾಭರಣ ಜಿತರವಿಕಿರಣ
ಮನದೊಳು ಬಿಡದೆ ತನ್ನನು ಧೇನಿಪರಘ।
ಹರಣ ಕರುಣಾಪೂರ್ಣ
ಮುನಿ ಸರ್ವಜ್ಞಕರಾಗತ ಲಕ್ಷ್ಮಣಯುತನಾ।
ರಿಪುಕುಲಮಥನಾ ॥೩॥

ಮಂದಹಾಸ ಮುಖದಿಂದೊಪ್ಪುವ।
ಶುಭಕಾಯಾ ಕವಿಜನಗೇಯಾ
ಸುಂದರ ಹೇಮಮಂಟಪದೊಳು ಪೂಜೆಯ।
ಕೊಳುವ ಮನದೊಳು ಹೊಳೆವ

ನಿಂದಿರುವುದು ದ್ವಿಜ ವೃಂದ ಪಠಿಸುತಲಿ।
ವೇದಾ ಮನಕತಿ ಮೋಜಾ
ಹಿಂದಕೆ ಮಳಖೇಡ ಮಂದಿರವೆನಿಪ ಜಯಾರ್ಯ।
ಮುನಿಸಂಸೇವ್ಯ ॥೪॥

--✿✿✿✿✿--

೨೫೩
ಆನಂದ ಆನಂದಪ್ರದವೋ ದಾಶರಥಿ ಧ್ಯಾನಾ

(ಶಾಮಸುಂದರವಿಠಲ / ಗುಂಡಾಚಾರ್ಯ / ೧೮೭೩ - ೧೯೫೩)

ಆನಂದ ಆನಂದಪ್ರದವೋ ದಾಶರಥಿ ಧ್ಯಾನಾ ॥ಪ॥

ಭಕ್ತಿಯುಕ್ತನಾಗಿ ಮನದಿ ನಿತ್ಯಪಾಡೋ ರಾಮಚರಣ ॥ಅ.ಪ॥

ಕಾಲನಪುರ ಭಯವಿಲ್ಲವೋ। ವಾಲ್ಮೀಕಿಯು ಸಾಕ್ಷಿ ಇದಕೆ
ಬಾಲಧ್ರುವನು ವನದಿ ಭಜಿಸಿ। ಮೇಲುನಭದಿ ಮೆರೆವಾ ನೋಡೋ ॥೧॥

ಶ್ರೀ ರಾಮನಾಮದಿಂದ। ಮಾರುತಿಯು ಬ್ರಹ್ಮನೆನಿಪ
ಮಾರಹರನು ತನ್ನ ಸತಿಯಾ। ಸೇರಿ ಸತತ ಭಜಿಪ ಕೇಳೋ ॥೨॥

ಹಿಂದೆ ಮಾಡಿದ ನಿನ್ನ ದುರಿತ। ವೃಂದವೆಲ್ಲ ಭೇದಿಸುವುದು
ಒಂದೆ ಭಾವದಿಂದ ಶಾಮಸುಂದರನ ನಾಮ ಪಾಡೋ ॥೩॥

--✿✿✿✿✿--

೨೫೪
ರಘುರಾಮ ರಘುರಾಮ ಮುಗಿವೆ

(ಶಾಮಸುಂದರವಿಠಲ / ಗುಂಡಾಚಾರ್ಯ / ೧೮೭೩ - ೧೯೫೩)

ರಘುರಾಮಾ ರಘುರಾಮಾ
ಮುಗಿವೆ ಕರವ ಎನ್ನಘ ಓಡಿಸಿ ಪೊರೆ ॥ಪ॥

ಕ್ಷಿತಿಭಾರಕೆ ಖಳತತಿ ಸಂಹರಿಸಲು
ದ್ವಿತೀಯ ಯುಗದಿ ದಶರಥಸುತನೆನಿಸಿದೆ ॥೧॥

ಶಿಲೆಯಾದ ಅಹಲ್ಯೆಯ ತುಳಿದ ಪಾದದಿಂ
ಕಲುಷಿತ ಕಳೆದುಸಿರದೆ ಸಲುಹಿದ ಕರುಣಿ ॥೨॥

ಧನುಮುರಿದು ಕ್ಷೋಣೀ ಕುಮಾರಿಯ
ಪಾಣಿ ಹಿಡಿದ ಮೂರುತಿಯೇ ॥೩॥

ಪ್ರೀತಿಯಿಂದ ರವಿಜಾತನ ಭ್ರಾತಗೆ
ಭೀತಿಯ ಬಿಡಿಸಿದೆ ವಾತಜ ನಮಿತ ॥೪॥

ದುರುಳ ದುಶ್ಶಾಸನನ ಧುರದಿ ತರಿದು ಘನ
ಸುರರಿಗೆ ಸೌಖ್ಯವಗರೆದ ಮಹಾತ್ಮ ॥೫॥

ನಿನ್ನ ದರುಶನದಲೆನ್ನ ಜನ್ಮ ಪಾ
ವನ್ನವಾಯಿತ್ತೈ ಸನ್ನುತಮಹಿಮಾ ॥೬॥

ಶಿಂಧ ಶತಪುರ ಮಂದಿರ ಶಾಮ
ಸುಂದರವಿಠ್ಠಲ ಬಂಧುರ ಚರಿತ ॥೭॥

--✿✿✿✿✿--

೨೫೫
ಮಂಗಳಗಾನ ವಿಲೋಲಾ ಮುನಿಪಾಲಾ

(ಶಾಮಸುಂದರವಿಠಲ / ಗುಂಡಾಚಾರ್ಯ / ೧೮೭೩ - ೧೯೫೩)

ಮಂಗಳಗಾನ ವಿಲೋಲಾ। ಮುನಿಪಾಲಾ ಫಣಿಮಾಲಾ
ಮುನಿಪಾಲಾ ಫಣಿಮಾಲಾನಂತ ಶೀಲಾನಂತ ಶೀಲಾ ॥ಪ॥

ಬಲಿಮದಭಂಜನಾ ಕುಲಿಶಧರಾರ್ಚಿತ
ಯಲರುಣಿತಲ್ಪ ಸುಶಯನ ಸುಶಯನಾ
ಶಶಿವದನಾ ವಿಪಗಮನಾ ॥೧॥

ಘನಗುಣನಿಧಿ ವನಜಾಸನ ಜನಕಾ
ದಿವ್ಯಕೋಟಿ ಪ್ರಕಾಶ ಅಘನಾಶಾ
ಜಗದೀಶಾ ಜಗದೀಶಾ ಶ್ರೀನಿವಾಸಾ ॥೨॥

ಸಾಮಜ ಭಯಹರ ರಾಮ ಶ್ರೀರಾಮಾ
ಶಾಮಸುಂದರ ರಘುವೀರಾ ಭವದೂರಾ
ಮುರಹರ ಮುರಹರಾ ಸುಕುಮಾರಾ ॥೩॥

--✿✿✿✿✿--

೨೫೬
ಮನುಜಾವತಾರ ಶ್ರೀರಾಮನೆಂಬುದು ನಿಜವೆ
(ತಿರುಪತಿ ವೆಂಕಟ / ತಿಮ್ಮಪ್ಪಯ್ಯ / ೧೭೭೦ - ೧೮೩೦)

ಮನುಜಾವತಾರ ಶ್ರೀ ರಾಮನೆಂಬುದು ನಿಜವೆ ।
ಮುನಿಮನಕೆ ನಿಲುಕದವನು ॥
ಅನುಪಮನು ನಿಜಜನರನುದ್ಧರಿಸಬೇಕೆಂದು ।
ತನುವಿಡಿದು ತೋರಿಸಿದನು । ತಾನು ॥ ॥ಪ॥

ದಶರಥಗೆ ಸುತನೆಂಬುದದು ವರವನಿತ್ತುದಕೆ ।
ಸಸಿನೆ ಬಿಡೆ ಮುಕ್ತಿಪಥಕೆ ॥
ಯಿಯಿಎಸೆದು ವನದೊಳು ಹೊಳೆದುದದು ಮುನಿಗಳೆಲ್ಲರಿಗೆ ।
ವಶವಾದನೆಂಬ ನೆವಕೆ ॥
ಶಶಿಮುಖಿಯನಗಲಿದುದು ನಿಜಭಕ್ತ ರಾವಣನ ।
ಅಸುರಜನ್ಮದ ಭಂಗಕೆ ॥
ಕುಸುಮಶರ ವಶನಾದ ವಾಲಿವಧೆಯವನಘವ ।
ನಶಿಸಿ ನಿಜವೀವದಕ್ಕೆ । ನಿಲುಕೆ ॥ ॥೧॥

ಸುಗ್ರೀವ ಮೊದಲಾದ ವಾನರರ ನೆರಹಿದುದು ।
ಸ್ವರ್ಗದವರವರಾಗಲು ॥
ದುರ್ಗತಿಸ್ಥ ಕಬಂಧ ಮೊದಲಾದವರ ಶಾಪ ।
ನುಗ್ಗುನುಸಿಯಾಗುತಿರಲು ।

ದುರ್ಗರೂಪದ ಮೋಕ್ಷಭಜಕರಿಗೆ ವಶವೆಂದು ।
ಮಾರ್ಗಸೇತುವ ತೋರಲು ॥
ನುಗ್ಗಿ ಲಂಕಾದ್ವೀಪದೊತ್ತಿನಲ್ಲಿ ನಿಂದು ಅಪ- ।
ವರ್ಗಧಸಿಗೆಯ ಮಾಡಲು । ಕೊಡಲು ॥ ॥೨॥

--✿✿✿✿✿--

೨೫೭

ರಾಮ ರಕ್ಷ ಮಾಂ ರಾಮ ರಕ್ಷ ಮಾಂ

(ತಿರುಪತಿ ವೆಂಕಟ / ತಿಮ್ಮಪ್ಪಯ್ಯ / ೧೭೭೦ – ೧೮೩೦)

ರಾಮ ರಕ್ಷ ಮಾಂ ರಾಮ ರಕ್ಷ ಮಾಂ ।
ರಾಮ ರಕ್ಷ ಮಾಂ । ರಾಮರಕ್ಷ ಮಾಂ ।
ರಾಮ ರಕ್ಷ ಮಾಂ ।ಕಾಮಿತಾರ್ಥದ ।
ಪ್ರೇಮಸಾಗರ । ಶ್ರೀ ಮನೋಹರ ॥ ॥ಪ॥

ದಶರಥಾತ್ಮಜ ದಾನವಾಂತಕ।
ಶಶಿನಿಭಾನನ ಶತಮಖಾರ್ಚಿತ ।
ಕುಶಿಕನಂದನ ವಶಮಖಾವನ।
ಶಶಿಮುಖೀ ತನೋಃ ಶಮಲವಾರಣ॥ ॥೧॥

ಹರಶರಾಸನ ಹರಧರಾಸುತಾ।
ಕರ ಪರಿಗ್ರಹಾರಾಮ ನಿಗ್ರಹ ।
ಗುರುನಿಯೋಜಿತ ಗುಹಸುಪೂಜಿತ।
ವರವನಾಶ್ರಿತ ಭರತಪ್ರಾರ್ಥಿತ॥ ॥೨॥

ಮೃಗನಿಷೂದನ ಖಗಪಪಾಲನ।
ಅಗಳಭಂಜನ ಶಬರಿಪಾವನ ।
ಸುಗತಿದಾಯಕ ವಾಲಿಶಿಕ್ಷಕ।
ಮೃಗಪರಕ್ಷಕ ರಾಜ್ಯದಾಯಕ ॥ ॥೩॥

ಶರಧಿಬಂಧನ ಪುರವಿಮರ್ದನ।
ವರವಿಭೀಷಣ ಭಯನಿವಾರಣ।
ಧುರಧುರಂಧರ ದುಷ್ಟ ಖಳ ಸಹೋ।
ದರ ಶಿರೋಹರ ದೈತ್ಯಸಂಹರ ॥ ॥೪॥

ಧರಣಿಜಾನ್ವಿತ ದುರಿತವಾರಕ।
ಭರತವಂದಿತ ಪುರವರಸ್ಥಿತ ।
ವರಮುನಿಸ್ತುತ ಸುರಸಮಾಶ್ರಿತ ।
ತಿರುಪತೀಶ್ವರ ವೆಂಕಟೇಶ್ವರ ॥ ॥೫॥

--✿✿✿✿✿--

೨೫೮
ಜಗದ್ಗುರೋ ರಾಮ ತ್ರಾಹಿ ಶ್ರೀ ರಾಮಚಂದ್ರ

(ತಿರುಪತಿ ವೆಂಕಟ / ತಿಮ್ಮಪ್ಪಯ್ಯ / ೧೭೭೦ – ೧೮೬೦)

ಜಗದ್ಗುರೋ ರಾಮ ತ್ರಾಹಿ । ಶ್ರೀ ರಾಮಚಂದ್ರ ।
ಜಗದ್ಗುರೋ ರಾಮ ತ್ರಾಹಿ ॥ ॥ಪ॥

ದಶರಥನಂದನ ದನುಜವಿಮರ್ದನ ।
ಪಶುಪತಿನುತ ಗುಣರವಿನಯನ ॥ ॥೧॥

ಕೌಸಲ್ಯಾತ್ಮಜ ಕಮನೀಯಾನನ ।
ಕೋಮಲ ಕುವಲಯದಳವರ್ಣ ॥ ॥೨॥

ವನಚರಪೋಷಕ ಸೇತುವಿಧಾಯಕ
ಘನಧನುಃಶರಧರ ಧೃತಲೋಕ ॥ ॥೩॥

ಜಯಜಯ ರಾಘವ ಜಾನಕೀವಲ್ಲಭ ।
ಭಯಗಣನಾಶನ ಭಾನುನಿಭ ॥ ॥೪॥

ದಶಮುಖನಂದನ ಮಾನವಿಭಂಜನ ।
ಬಿಸಜಜಪೂಜಿತ ಪದನಳಿನ ॥ ॥೫॥

ಮುನಿಮಖಪಾಲಕ ತಾಟಕೀಶಿಕ್ಷಕ ।
ಮುನಿಸತಿದಾಯಕ ಮುನಿತಿಲಕ ॥ ॥೬॥

ತರಣಿಕುಲೋದ್ಭವ ತಿರುಪತಿಗಿರಿವರ ।
ಸ್ಥಿರಸ್ಥಿತ ವೆಂಕಟ ಸುಖಸಾರ ॥ ॥೭॥

--✿✿✿✿✿--

೨೫೯
ಬಿಟ್ಟಿರಲಾರೆ ನಿನ್ನ ಪಟ್ಟಾಭಿರಾಮಮೂರ್ತಿ

(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ಬಿಟ್ಟಿರಲಾರೆ ನಿನ್ನ
ಪಟ್ಟಾಭಿರಾಮಮೂರ್ತೇ ಬಿಟ್ಟಿರಲಾರೆ ನಿನ್ನ ॥ಪ॥

ಕಷ್ಟಂಗಳನೆಲ್ಲ ನಷ್ಟಗೊಳಿಸಿ ಫಲ
ವೃಷ್ಟಿಗರೆಯುತಿಹ ಇಷ್ಟಮೂರುತಿ ರಾಮ ॥೧॥

ಅಂಗಜಜನಕ ಶುಭಾಂಗನೆ ನೀಯೆನ್ನ
ಭಂಗವ ಪರಿವ ಭುಜಂಗಶಯನ ರಾಮ ॥೨॥

ಮಣಿಮಯಮಕುಟ ಕನಕಕುಂಡಲಧರ
ದಿನಕರಭಾಸುರ ದೀನವತ್ಸಲ ರಾಮ ॥೩॥

ದಶರಥನುದರದಿ ಶಿಶುರೂಪದಿ ಪುಟ್ಟ
ದಶಕಂಠನ ಕೊಂದು ಶಶಿಮುಖಿಯ ತಂದ ರಾಮ ॥೪॥

ಸದಯಹೃದಯ ಭಕ್ತ ಬದಿಯೊಳು ನೀ ನಿಂದು
ಚೆದರದಿರುವ ಸ್ಥಿರಪದವ ಕೊಡುವೆ ರಾಮ ॥೫॥

ನೀರದನಿಭ ತನು ನಿರುಪಮ ವೈಭವ
ನಾರದಾದಿನುತ ನರವರ ಶ್ರೀರಾಮ ॥೬॥

ತರುಣ ನಾಗಪುರ ವರದೊಳು ಕರುಣದಿ
ಮರೆಹೊಕ್ಕ ದಾಸನ ನಿರತ ಪೊರೆವ ರಾಮ ॥೭॥

--✿✿✿✿✿--

೨೬೦
ಮಂಗಳಂ ಮಂಗಳಂ ದಾಶರಥಿಗೆ

(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ಮಂಗಳಂ ಮಂಗಳಂ ದಾಶರಥಿಗೆ
ಮಂಗಳಂ ಮಂಗಳಂ ॥ಪ॥

ರಘುಕುಲದೊಳು ಪುಟ್ಟಿ ರಾಮಚಂದ್ರನೆಂದು
ಅಘಹರ ನಾಮವ ತಾಳಿದಗೆ
ಸುಗುಣಿ ಅಹಲ್ಯಾಶಾಪವ ಪಾದದಿಂ ತಿದ್ದಿ
ಅಗಜಾವಲ್ಲಭ ಧನುವಮುರಿದ ಜಾನಕೀಪತಿಗೆ ॥೧॥

ವನದೊಳು ಚರಿಸಿ ವಾಲಿಯ ಸಂಹರಿಸಿ ಬೇಗ
ವನಧಿಯ ದಾಟಿ ಲಂಕೆಯ ಪೊಕ್ಕು
ಘನಪರಾಕ್ರಮಿ ದಶಕಂಠನ ಕೊಂದವ
ನನುಜಗೆ ಲಂಕೆಯನಿತ್ತ ಸೀತಾಪತಿಗೆ ॥೨॥

ಹರುಷಿತನಾಗಿ ಅಯೋಧ್ಯಾಪುರಕೆ ಬಂದು
ಧರಣಿಜೆ ಸಹ ಸಿಂಹಾಸನವೇರ್ದಗೆ
ತರಳ ನಾರಾಯಣದಾಸನ ರಕ್ಷಿಪ
ಗುರು ವಾಸುದೇವರೂಪಿನ ವೆಂಕಟೇಶಗೆ ॥೩॥

--✿✿✿✿✿--

೨೬೧

ರಾಘವಂ ಸ್ಮರಾಮಿ ಸತತಂ ರಾಘವಂ

(ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)

ರಾಘವಂ ಸ್ಮರಾಮಿ ಸತತಂ ರಾಘವಂ ||ಪ||

ಭೋಗಮೋಕ್ಷಪ್ರದಂ ಶ್ರೀಶಂ
ಭೋಗೀಶಶಯನ ಸರ್ವೇಶಂ ||ಅ.ಪ||

ದಶರಥ ಸುಕುಮಾರಂ ದಂಡಿತ ದೈತ್ಯಶರೀರಂ
ವಸುಧಾತ್ಮಜಾವಿಹಾರಂ ವಾರಿಧಿಸದೃಶ ಗಂಭೀರಂ ||೧||

ಕರಧೃತಶರಚಾಪಂ ಕಂದರ್ಪಕೋಟಿಸ್ವರೂಪಂ
ಪರಿಹೃತಭಕ್ತತಾಪಂ ಪಂಡಿತಹೃನ್ಮಂದಿರದೀಪಂ ||೨||

ನಾರದಾದಿಸ್ತುತಪಾತ್ರಂ ನಳಿನೀದಳಸುನೇತ್ರಂ
ನೀರದಸಮಾನಗಾತ್ರಂ ನಿರುಪಮಸುಸ್ಮಿತವಕ್ತ್ರಂ ||೩||

ತರುಣತುಲಸೀಮಾಲಂ ತಾಪಸಜನಾನುಕೂಲಂ
ವರಮೃಗಮದಫಾಲಂ ವಂದಕೌಘಪಾಲನಶೀಲಂ ||೪||

ತರುಣನಾಗಪುರೀಶಂ ಗುರು ವಾಸುದೇವವೇಷಂ
ವರಚುಂಚಸೇತುವಾಸಂ ತಿರುಪತಿ ಶ್ರೀ ವೆಂಕಟೇಶಂ ||೫||

--✿✿✿✿✿--

೨೬೨

ರಾಮ ದಯಾಳೂ ರಾಮ ದಯಾಳೂ

(ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)

ರಾಮ ದಯಾಳೂ ರಾಮ ದಯಾಳೂ
ಕಾಮಿತಫಲದ ಶ್ರೀರಾಮ ದಯಾಳೂ ||ಪ||

ದಶರಥನಂದನ ರಾಮ ದಯಾಳೂ
ವಸುಧಾಪಾಲನ ರಾಮ ದಯಾಳೂ ॥೧॥

ಮಣಿಮಯಮಕುಟ ಶ್ರೀರಾಮ ದಯಾಳೂ
ಸನಕಾದಿವಂದಿತ ರಾಮ ದಯಾಳೂ ॥೨॥

ಮಕರಕುಂಡಲಕರ್ಣ ರಾಮ ದಯಾಳೂ
ಮದನಮೋಹನ ವೇಷ ರಾಮ ದಯಾಳೂ ॥೩॥

ಮುಕುರಕಪೋಲ ಶ್ರೀರಾಮ ದಯಾಳೂ
ಪ್ರಕಟಿತಮಹಿಮನ ರಾಮ ದಯಾಳೂ ॥೪॥

ನೀಲಾಳಕಜಾಲ ರಾಮ ದಯಾಳೂ
ಫಾಲಲೋಚನಸಖ ರಾಮ ದಯಾಳೂ ॥೫॥

ಮೃಗಮದತಿಲಕ ಶ್ರೀರಾಮ ದಯಾಳೂ
ಅಗಣಿತಗುಣಗಣ ರಾಮ ದಯಾಳೂ ॥೬॥

ಸುಭ್ರೂಯುಗಳ ಶ್ರೀರಾಮ ದಯಾಳೂ
ಸುರಸಂಘಸುಖದ ರಾಮ ದಯಾಳೂ ॥೭॥

ನೀರಜಲೋಚನ ರಾಮ ದಯಾಳೂ
ನಿರುಪಮವಿಗ್ರಹ ರಾಮ ದಯಾಳೂ ॥೮॥

ಚಾರುನಾಸಾಪುಟ ರಾಮ ದಯಾಳೂ
ಚತುರಾಸ್ಯಪೂಜಿತ ರಾಮ ದಯಾಳೂ ॥೯॥

ಅರುಣಾಧರ ಶ್ರೀರಾಮ ದಯಾಳೂ
ಆರ್ತಸಂರಕ್ಷಕ ರಾಮ ದಯಾಳೂ ॥೧೦॥

ಕುಂದರದನ ಶ್ರೀರಾಮ ದಯಾಳೂ
ಮಂದಸ್ಮಿತಾನನ ರಾಮ ದಯಾಳೂ ॥೧೧॥

ಅಂಗದಭೂಷಿತ ರಾಮ ದಯಾಳೂ
ಮಂಗಳದಾಯಕ ರಾಮ ದಯಾಳೂ ॥೧೨॥

ಆಜಾನುಬಾಹು ರಾಮ ದಯಾಳೂ
ಅಸುರಾಂತಕ ಶ್ರೀರಾಮ ದಯಾಳೂ ॥೧೩॥

ಕರಧೃತಶರಚಾಪ ರಾಮ ದಯಾಳೂ
ಖರದೂಷಣಹರ ರಾಮ ದಯಾಳೂ ॥೧೪॥

ಕಂಬುಕಂಧರ ಶ್ರೀರಾಮ ದಯಾಳೂ
ಕೈವಲ್ಯಪ್ರದ ರಾಮ ದಯಾಳೂ ॥೧೫॥

ಶ್ರೀವತ್ಸವತ್ಸ ಶ್ರೀರಾಮ ದಯಾಳೂ
ಶ್ರಿತಲೋಕಪಾಲಕ ರಾಮ ದಯಾಳೂ ॥೧೬॥

ಹಾರಕೌಸ್ತುಭಧರ ರಾಮ ದಯಾಳೂ
ಹರ್ಷವೃದ್ಧಿತ ಶ್ರೀರಾಮ ದಯಾಳೂ ॥೧೭॥

ವಾರಿಜನಾಭ ಶ್ರೀರಾಮ ದಯಾಳೂ
ಮಾರಜನಕ ಶ್ರೀರಾಮ ದಯಾಳೂ ॥೧೮॥

ಕಟಿಧೃತಕಾಂಚೀ ರಾಮ ದಯಾಳೂ
ಖಂಡಿತಹರಚಾಪ ರಾಮ ದಯಾಳೂ ॥೧೯॥

ಪೀತಾಂಬರಧರ ರಾಮ ದಯಾಳೂ
ಪಾತಕಹರ ಶ್ರೀರಾಮ ದಯಾಳೂ ॥೨೦॥

ಭರತಪೂಜಿತನಾದ ರಾಮ ದಯಾಳೂ
ಭವಭಯಹರಣ ಶ್ರೀರಾಮ ದಯಾಳೂ ॥೨೧॥

ರಾವಣಮರ್ದನ ರಾಮ ದಯಾಳೂ
ರಕ್ಷಿತಮುನಿಜನ ರಾಮ ದಯಾಳೂ ॥೨೨॥

ಜಾನಕೀವಲ್ಲಭ ರಾಮ ದಯಾಳೂ
ಮೌನಿಮಾನಸಗಮ್ಯ ರಾಮ ದಯಾಳೂ ॥೨೩॥

ಲಕ್ಷ್ಮಣಪೂರ್ವಜ ರಾಮ ದಯಾಳೂ
ಶಿಕ್ಷಿತದುರ್ಜನ ರಾಮ ದಯಾಳೂ ॥೨೪॥

ಹನುಮತ್ಸೇವಿತ ರಾಮ ದಯಾಳೂ
ಮನಸಿಜಹರನುತ ರಾಮ ದಯಾಳೂ ॥೨೫॥

ನೀಲಮೇಘಶ್ಯಾಮ ರಾಮ ದಯಾಳೂ
ನಿತ್ಯನಿರಾಮಯ ರಾಮ ದಯಾಳೂ ॥೨೬॥

ಭಕ್ತವತ್ಸಲ ಶ್ರೀರಾಮ ದಯಾಳೂ
ಭಾನುವಂಶಜ ಶ್ರೀರಾಮ ದಯಾಳೂ ॥೨೭॥

--✿✿✿✿✿--

೨೬೩
ರಾಮ ಪಾಲಯ ಮಾಂ ಕೋದಂಡಪಾಣಿ

(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ರಾಮ ಪಾಲಯ ಮಾಂ ಕೋದಂಡಪಾಣಿ
ರಾಮ ಪಾಲಯ ಮಾಂ ॥ಪ॥

ರಾಮರಾಮ ರಣಭೀಮಪರಾಕ್ರಮ
ಕಾಮಿತದಾಯಕ ಕರುಣಾಜಲಧೇ ॥ಅ.ಪ॥

ದಶರಥನಂದನ ದಾನವಮರ್ದನ
ಪಶುಪತಿಪ್ರಿಯಸಖ ಫಣಿಪತಿಶಯನ ॥೧॥

ಕುಶಿಕಜಸಹಚರ ಕುವಲಯಪಾಲನ
ಶಶಿರವಿಲೋಚನ ಶಶಿಧರಮೂರ್ತೇ ॥೨॥

ವಾಲಿವಿನಾಶಕ ವನಚರತೋಷಕ
ಪಾಲಿತ ಸುರಮುನಿಜಾಲ ಸುಶೀಲ ॥೩॥

ಸೇತುವಿಧಾಯಕ ಸೀತಾನಾಯಕ
ವಾತಾತ್ಮಜನುತ ವರಮೃದುಚರಣ ॥೪॥

ತರುಣ ನಾಗಪುರವರಮಧ್ಯಸ್ಥಿತ
ಗುರು ವೆಂಕಟಪತೇ ಪರಮ ದಯಾಳೂ ॥೫॥

--✿✿✿✿✿--

೨೬೪
ಬಾರೋ ಬಾರೋ ಭಾಗ್ಯನಿಧಿಯೇ
(ನಾರಾಯಣ / ನಾರಾಯಣದಾಸ / ೧೮೧೨ – ೧೯೦೨)

ಬಾರೊ ಬಾರೊ ಭಾಗ್ಯದ ನಿಧಿಯೆ
ಬಾರೋ ಭಾಗ್ಯದ ನಿಧಿಯೆ ॥ಪ॥

ಭರತಾಗ್ರಜನೆ ಭವಭಯಹರನೆ
ಕರುಣಾಕರನೆ ಕಂದರ್ಪಜನಕನೆ ॥ಅ.ಪ॥

ದಿನಪಕುಲೇಶ ದಿವಿಜರತೋಷ
ದೀನಜನೋದ್ಧಾರ ದಿವ್ಯಪ್ರಕಾಶ ॥೧॥

ದಶರಥಬಾಲ ದಶಮುಖಕಾಲ
ಶಶಿಮುಖಿ ಸೀತಾವಿಹರಣ ಲೋಲ ॥೨॥

ವಾಲಿವಿನಾಶ ವರಮುನಿವೇಷ
ಪಾಲಿತ ಗೌತಮಯೋಷಾ ಸರ್ವೇಶ ॥೩॥

ವಾರಿಧಿಶಯನ ವಾರಿಜನಯನ
ದೂರೀಕೃತಪಾತಕ ವರಚರಣ ॥೪॥

ತಿರುಪತಿವಾಸ ಶ್ರೀ ವೆಂಕಟೇಶ
ಶರಣಾಗತ ನಾರಾಯಣದಾಸಪೋಷ ॥೫॥

--✿✿✿✿✿--

೨೬೫
ಲಾಲಿ ರಘುಕುಲಸೋಮ ರಾಜೇಂದ್ರರಾಮ
(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ಲಾಲಿ ರಘುಕುಲಸೋಮ ರಾಜೇಂದ್ರರಾಮ
ಲಾಲಿ ಅಘಹರಭೀಮ ಅಮಿತಗುಣಸೀಮ ॥ಪ॥

ಲಾಲಿ ದಶರಥಪುತ್ರ ದಿವಿಜನುತಿಪಾತ್ರ
ಲಾಲಿ ಪಶುಪತಿಮಿತ್ರ ಪದ್ಮದಳನೇತ್ರ
ಲಾಲಿ ದಶಮುಖಗೋತ್ರದಳನ ಶುಭಗಾತ್ರ
ಲಾಲಿ ಸುಸ್ಮಿತವಕ್ತ್ರ ಸೀತಾಕಳತ್ರ ॥೧॥

ಲಾಲಿ ವನನಿಧಿಶೋಷ ವಾಲ್ಮೀಕಿತೋಷ
ಲಾಲಿ ಮಣಿಮಯಭೂಷ ಮಂಜುತರಭಾಷ
ಲಾಲಿ ವನಚರವೇಷ ವಾತಸುತಪೋಷ
ಲಾಲಿ ಮುನಿಹೃತ್ಕಲುಷಮರ್ದನ ಸಹರ್ಷ ॥೨॥

ಲಾಲಿ ಕರಧೃತಚಾಪ ಕಾರುಣ್ಯರೂಪ
ಲಾಲಿ ತರುಣೀಶಾಪತರಣ ಪ್ರತಾಪ
ಲಾಲಿ ಧರಣೀತಾಪದಾರಣ ಸುರೂಪ
ಲಾಲಿ ಪರಿಜನಪಾಪಹರ ರಾಮಭೂಪ ॥೩॥

--✿✿✿✿✿--

೨೬೬
ಸಾಕೇತಾಧಿಪ ರಾಮ
(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ಸಾಕೇತಾಧಿಪ ರಾಮ
ಸರಸಿಜಲೋಚನ ರಾಮ
ನಾಕಾಧಿಪನಂದದಿ ಚಾಮೇಂದ್ರನ
ನೀ ಕರುಣದಿ ಸಂರಕ್ಷಿಸು ನಿರುತವು ||ಪ||

ದಶರಥನಂದನ ರಾಮ
ದಾನವಮರ್ದನ ರಾಮ
ವಸುಧಾಪಾಲಕನಾಗಿ ಸುರೌಘವ
ನಸುನಗುತಲೆ ಸುಖವಿತ್ತು ಸಲಹಿದೆ ||೧||

ಸೀತಾವಲ್ಲಭ ರಾಮ
ಶ್ರಿತಜನಪೋಷಕ ರಾಮ
ವಾತಾತ್ಮಜಸೇವ್ಯನೆ ನೃಪವರನನು
ಪ್ರೀತಿಯಿಂದಲೆ ವರಗಳನಿತ್ತು ಸಲಹೈ ||೨||

ನಾರದಸನ್ನುತ ರಾಮ
ನರವರರೂಪನೆ ರಾಮ
ಧಾರುಣಿಯೊಳು ನಾರಾಯಣ
ಕೋರಿದಿಷ್ಟವನಿಪ್ಪ ವೆಂಕಟರಮಣ ||೩||

--✿✿✿✿✿--

೨೬೭
ಸಾಕೇತಪುರವಾಸ ಸರ್ವಲೋಕಶರಣ್ಯ
(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ಸಾಕೇತಪುರವಾಸ ಸರ್ವಲೋಕಶರಣ್ಯ
ಸರಸಿಜಾಕ್ಷ ಮುಕುಂದನೇ ||ಪ||

ನಾಕಚರಪತಿವಂದ್ಯ ನರನಾಥನಾಗಿ ನೀ
ನರಲೋಕದೊಳು ಮೆರೆಯುವೆ ಸ್ವಾಮಿ ॥ಅ.ಪ॥

ವಸುಮತಿಯ ಭಾರವನು ಪರಿಹರಿಸಬೇಕೆನುತ
ದಶರಥನ ಸತಿಯುದರದಿ
ಶಿಶುರೂಪದಿಂ ಜನಿಸಿ ರಾಮಚಂದ್ರನು ಎಂದು
ಪೆಸರ ನೀ ತಾಳಿ ಮುದದಿ
ಕುಶಿಕಜನ ಜೊತೆಯಲ್ಲಿ ಹೋಗಿ ವಿದ್ಯವ ಕಲಿತು
ಅಸುರೆ ತಾಟಕಿಯ ವಧಿಸಿ
ಕುಸುಮಶರಪಿತನೆ ಮುನಿಕ್ರತುವ ರಕ್ಷಣೆಗೈದು
ಋಷಿಸತಿಯ ಶಾಪವಳಿದೆ ಸ್ವಾಮಿ ॥೧॥

ಮಿಥಿಲಾಪುರಕೆ ಪೋಗಿ ಮುರಿದು ಹರಚಾಪವನು
ಮೈಥಿಲಿಯ ಕರವ ಪಿಡಿದು
ಪಥದಿ ನೀ ಬರುತಿರಲು ಪರಶುರಾಮನ ಕಂಡು
ಪರಮಶಕ್ತಿಯನ್ನು ಸೆಳೆದು
ಸತಿಯಿಂದಲೊಡಗೂಡಿ ಪುರವ ಸೇರಲು ಕೈಕೆ
ಪತಿಯ ವರವನು ಕೇಳಲು
ವಿತತ ಚಿಂತಿತನಾಗಿ ನುಡಿದ ತಂದೆಯ ಮಾತ
ನತಿ ಹರುಷದಿಂ ತಾಳಿದೆ ಸ್ವಾಮಿ ॥೨॥

ಜನನಿಗೆರಗುತ ಆಕೆ ಮಾಡಿದಾಶೀರ್ವಾದ
ವನು ಶಿರದೊಳಾಂತು ಬಂದು
ಧನಕನಕ ವಸ್ತು ಗೋವುಗಳ ಬ್ರಾಹ್ಮರಿಗಿತ್ತು
ಮುನಿವೇಷವನ್ನು ಧರಿಸಿ
ಅನುಜಲಕ್ಷ್ಮಣ ಸೀತೆಸಹಿತ ಪುರವನು ಬಿಟ್ಟು
ವನವಾಸಕಾಗಿ ತೆರಳಿ
ಮುನಿವರರ ಆಶ್ರಮಂಗಳ ಪೊಕ್ಕು ಭರತನಿಗೆ
ಘನಪಾದುಕೆಯನಿತ್ತೆಯ್ಯೆ ॥೩॥

ತೆರಳಿ ಬಂದನಸೂಯೆ ಅತ್ರಿಗಳಿಗಭಿನಮಿಸಿ
ತರುಣಿಸಹ ಪೂಜೆಗೊಂಡು
ಚರಿಸುತ್ತ ವನದೊಳು ವಿರಾಧವಧೆಯಂಗೈದು
ಸುರಲೋಕಕವನ ಕಳುಹಿ
ಶರಭಂಗನಿಗೆ ದರ್ಶನವ ಕೊಡಲು ತನುವ ಬಿಡೆ
ಪರಮಪದವಿತ್ತಾತಗೆ
ಗುರು ಅಗಸ್ತ್ಯಾಶ್ರಮದೊಳೌತಣವ ಸ್ವೀಕರಿಸಿ
ವರ ಪಂಚವಟಿಗೈದಿದೆ ಸ್ವಾಮಿ ॥೪॥

ಪರಮಘೋರಾಕಾರೆ ಶೂರ್ಪನಖಿ ಕಿವಿಮೂಗ
ಪರಿಹರಿಸಿ ಅನುಜನಿಂದ
ಖರದೂಷಣಾದಿಗಳ ಸಂಹರಿಸಿ ಜಗದೊಳಗೆ
ಉರುಮಹಿಮೆಯನು ತೋರಿಸಿ
ಬರಲು ಕಾಂಚನಮೃಗವು ವನಿತೆ ತರಬೇಕೆನಲು
ತರಹೋಗಿ ಅದನು ಕೊಂದು
ಭರದಿ ರಾವಣ ಬಂದು ಜಾನಕಿಯ ಕೊಂಡೊಯ್ಯ
ಬಹಳ ಚಿಂತೆಯ ತಾಳಿದೆ ಸ್ವಾಮಿ ॥೫॥

ಪರಮಭಕ್ತ ಜಟಾಯುವಿಗೆ ಮೋಕ್ಷವನು ಕೊಟ್ಟು
ತರಿದು ದುಷ್ಟ ಕಬಂಧನ
ಸ್ಥಿರಪದವನಿತ್ತವಗೆ ಶಬರಿಪೂಜೆಯ ಕೊಂಡು
ಬರುತಲಾ ಮಾರ್ಗದಲ್ಲಿ
ವರ ಜಲಜ ಪಂಪಾಸರೋವರದ ತೀರದಲಿ
ಹರಿವರನು ಇರಲು ಕಂಡು
ತ್ವರೆಯಿಂದ ಸುಗ್ರೀವ ಸ್ನೇಹ ಮಾಡಿಯೆ ಸಪ್ತ
ತಾಳತರುಗಳ ತರಿದಯ್ಯ ಸ್ವಾಮಿ ॥೬॥

ಶರವೊಂದರಿಂ ವಾಲಿಯನ್ನು ಮಥಿಸಿ ಅಂಗದನ
ಕರುಣದಿಂ ಪರಿಪಾಲಿಸಿ
ವರಲಗ್ನದೊಳು ಪಟ್ಟಗಟ್ಟಿ ಸುಗ್ರೀವನಿಗೆ
ಪರಮಭಾಗ್ಯವನ್ನು ಕೊಟ್ಟು

ಕರೆದು ವಾತಾತ್ಮಜನ ಕರದಿ ಮುದ್ರಿಕೆಯಿತ್ತು
ತರುಣಿಗದ ಕೊಡಪೇಳಲು
ಭರದಿ ಲಂಕೆಗೆ ಹೋಗಿ ಜನಕಜೆಗೆರಗಿ ಕಥೆಯ
ನರುಹಿ ಉಂಗುರವಿತ್ತನೈ ಸ್ವಾಮಿ ॥೭॥

ಮರುದಾತ್ಮಜನು ಲಂಕೆಯನು ದಹಿಸಿ ಬೇಗದಲಿ
ಶರಧಿಯನು ದಾಟಿ ಬಂದು
ಪರಮಪುರುಷನೆ ನಿನ್ನ ಕರದಿ ಮಣಿಯನ್ನಿತ್ತು
ಅರುಹಲಾಕ್ಷೇಮವನ್ನು
ಹರುಷದಿಂ ಸೇನೆಗಳನೊಡಗೊಂಡು ವಾರಿಧಿಗೆ
ವರಸೇತುವೆಯ ನಿರ್ಮಿಸಿ
ಸರಭಸದಿ ಬಲಸಹಿತ ಸರ್ವಾತ್ಮಕನು ನೀನು
ಸಾರಿ ಲಂಕೆಗೆ ಮುತ್ತಿದೆ ಸ್ವಾಮಿ ॥೮॥

ಅನುಜನಿಂದತಿಕಾಯ ಇಂದ್ರಜಿತುಗಳನೆಲ್ಲ
ಅತಿಲೀಲೆಯಿಂದ ವಧಿಸಿ
ಘನಪರಾಕ್ರಮರಾದ ರಾವಣಾದಿಗಳ ನೀ
ಹನನವಂಗೈದು ಮುದದಿ
ದಿನಪಕುಲಪತಿ ನೀನು ದೀನವತ್ಸಲನೆಂದು
ದಿವಿಜರಿಂ ಸ್ತುತಿಯಕೊಂಡು
ಪ್ರಣತನಾದ ವಿಭೀಷಣನಿಗೆ ಪಟ್ಟವ ಕಟ್ಟಿ
ಚಿನುಮಯತ್ವವ ಹರಹಿದೆ ಸ್ವಾಮಿ ॥೯॥

ಧರಣಿಸುತೆಯೊಡಗೂಡಿ ದಿವ್ಯ ಪುಷ್ಪಕವೇರಿ
ತೆರಳಿ ಸುರಪಥದಿ ನೀನು
ಬರುತ ಮುನಿವರ ಭರದ್ವಾಜರಾಶ್ರಮದಲ್ಲಿ
ಪರಮ ಸತ್ಕಾರಗೊಂಡು
ಭರತನಿಗೆ ಬಂದರೆಂದರುಹುವರೆ ಹರಿವರನ
ಕರೆದು ಭರದಿಂದ ಕಳುಹಿ
ಕರುಣದಿಂ ಬಂದು ಅನುಜನ ಅಂಕದೊಳು ಧರಿಸಿ
ಕರಗಳಿಂದಪ್ಪಿಕೊಂಡೆ ಸ್ವಾಮಿ ॥೧೦॥

ಶಿರದೊಳಗೆ ಧರಿಸಿದ್ದ ಜಟೆಯ ಶೋಧನೆಗೈದು
ವರ ರಥವನೇರಿ ಹೊರಟು
ಪರಿಪರಿಯ ಭೇರೀಮೃದಂಗ ಕಹಳಾದಿಗಳ
ಪರಮಶಬ್ದಗಳಿಂದ
ಪರಮೋತ್ಸವದಿವೆರಸಿ ವನಚರರ ರವಗೂಡಿ
ಪುರವ ನೀ ಸೇರೆ ಮುದದಿ
ಮೊರೆದವವು ದುಂದುಭಿಯ ವಾದ್ಯಗಳು ದಿವಿಜರಿಂ
ಸುರಿದವಾ ಪುಷ್ಪವೃಷ್ಟಿ ಸ್ವಾಮಿ ॥೧೧॥

ಜನನಿಗೆರಗುತ ಮಂಗಳಸ್ನಾನವನ್ನು ಮಾಡಿ
ಕನಕವಸ್ತ್ರಗಳ ಧರಿಸಿ
ವನಚರರುಗಳ ಕಳುಹಿ ಉದಧಿ ನಾಲ್ಕರ ಜಲಗ
ಳನು ತರಿಸಿ ತರುಣಿ ಸಹಿತ
ಘನರತ್ನಮಯವಾದ ಸಿಂಹಾಸನವನೇರಿ
ಅನುಜರಿಂ ಸೇವೆಗೊಳುತ
ಅನುನಯದಿ ಗುರುವಸಿಷ್ಠಾದಿಗಳ ಕರಗಳಿಂ
ದಭಿಷೇಕವನ್ನು ಪಡೆದೆ ಸ್ವಾಮಿ ॥೧೨॥

ತರಣಿಕೋಟಿಪ್ರಭೆಯ ಬೆಳಗುತ್ತ ಪೀಠದಲಿ
ಧರಣಿಜೆಯ ಸಹಿತ ನೀನು
ಸ್ಮರಶತದ ಲಾವಣ್ಯದಿಂದ ಕುಳಿತಿರಲಾಗ
ವರಭಟರು ಹೊಗಳುತಲಿರಲು
ಹರಿವರನು ಪಾದವನೊತ್ತುತಿರೆ ಹಾರವನು
ತರುಣಿಯಿಂದವಗೆ ಕೊಡಿಸಿ
ಧರಣೀಸುರಾದಿ ಜನಗಳ ದಿವ್ಯಭೋಜನದಿ
ಪರಮತೃಪ್ತಿಯಗೊಳಿಸಿದೆ ಸ್ವಾಮಿ ॥೧೩॥

ಪರಮಾತ್ಮ ನೀ ರಾಜ್ಯವನ್ನಾಳಿ ದುಷ್ಟರನು
ಪರಿದು ಸುಖವಿತ್ತೆ ಧರೆಗೆ
ಹರುಷದಿಂದೀ ಕಥೆಯ ಕೇಳಿ ಪೇಳಿದರವರ್ಗೆ
ಪರಮ ಪದವಿಯನೀಯುವೆ

ಗುರು ವಾಸುದೇವಾರ್ಯ ರೂಪವನು ಧರಿಸಿ ನೀ
ತರುಣ ನಾಗನಗರದಲ್ಲಿ
ಕರವಿಡಿದು ನಾರಾಯಣಾಖ್ಯ ದಾಸನ ನಿರತ
ಪೊರೆಯುತಿಹೆ ವೆಂಕಟೇಶ ಸ್ವಾಮಿ ॥೧೪॥

--✿✿✿✿✿--

೨೬೮
ಸೀತಾಪತೇ ರಾಮ ಸೀತಾಪತೇ ರಾಮ
(ನಾರಾಯಣ / ನಾರಾಯಣದಾಸ / ೧೮೧೨ - ೧೯೦೨)

ಸೀತಾಪತೇ ರಾಮ ಸೀತಾಪತೇ ರಾಮ
ಸೀತಾಪತೇ ರಾಮ ಶ್ರೀರಘುರಾಮ ॥ಪ॥

ದಶರಥನೃಪಬಾಲ ದಾನವಕುಲಕಾಲ
ಧರಣಿಜಾಲೋಲ ದಾನಸುಶೀಲ ॥೧॥

ಕರಧೃತಶರಚಾಪ ಕಂದರ್ಪಶತರೂಪ
ದರಹಸಿತಾಲಾಪ ತರಣಿಪ್ರತಾಪ ॥೨॥

ರಘುಕುಲಾಂಬುಧಿಸೋಮ ರಾಕ್ಷಸಕುಲಭೀಮ
ರಣಚಂಡವಿಕ್ರಮ ರಾಜಲಲಾಮ ॥೩॥

ಸಾರಸದಳನೇತ್ರ ಸನಕಾದಿನುತಿಪಾತ್ರ
ನೀರದನಿಭಗಾತ್ರ ನಿರುಪಮ ಕ್ಷಾತ್ರ ॥೪॥

ಸದ್ಗುಣಗಣ ಭೂಷ ಸರ್ವಭೂತಾವಾಸ
ಸಜ್ಜನ ಪರಿಪೋಷ ಸಕಲಲೋಕೇಶ ॥೫॥

ವನಜನಿರ್ಮಿತಮಾಲ ವಾನರಕುಲಪಾಲ
ಕನಕಾಂಚಿತಚೇಲ ಕರುಣಾಲವಾಲ ॥೬॥

ಶ್ರೀ ತಿರುಪತಿವಾಸ ಶ್ರಿತದಾಸ ಪರಿತೋಷ
ಶ್ರೀಗುರುವರವೇಷ ಶ್ರೀ ವೆಂಕಟೇಶ ॥೭॥

--✿✿✿✿✿--

೨೬೯
ಬಾರೈಬೇಗ ಶ್ರೀರಾಮ ನಮೋ
(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೭೮ - ೧೯೪೧)

ಬಾರೈ ಬೇಗ ಶ್ರೀರಾಮ ನಮೋ
ಭಾನುಕುಲಾಂಬುಧಿಸೋಮ ನಮೋ
ತೋರಿಸು ತವಪದಕಮಲ ನಮೋ
ನೀರದಶ್ಯಾಮಲವದನ ನಮೋ ॥ಪ॥

ಅಜಹರಪ್ರಾರ್ಥಿತಮೋದ ನಮೋ
ಅಯೋಧ್ಯಾನಗರಾವತಾರ ನಮೋ
ಸುಜನಪಾಲ ಕುಜನಾರಿ ನಮೋ
ಸನ್ಮುನಿಯಾಶ್ರಮವಿಹಾರ ನಮೋ ॥೧॥

ಸರಯೂತೀರ ಸಂಚಾರ ನಮೋ
ಸತ್ಯಪರಾಕ್ರಮಸ್ವಾಮಿ ನಮೋ
ಪರಮಪುರುಷ ಪದ್ಮಾಕ್ಷ ನಮೋ
ಪತಿತೋದ್ಧಾರ ಪರಮಾತ್ಮ ನಮೋ ॥೨॥

ಕ್ರೂರತಾಟಕಧ್ವಂಸ ನಮೋ
ಮಾರೀಚಾದಿವಿಚ್ಛೇದ ನಮೋ
ಕಾರ್ಮುಕವಿದ್ಯಾಧುರೀಣ ನಮೋ
ಕೌಶಿಕಮುಖಸಂರಕ್ಷ ನಮೋ ॥೩॥

ಗೌತಮಸತಿಯಘಭಂಗ ನಮೋ
ಕಾಂತೆಯಹಲ್ಯಾಸ್ತೌತ್ಯ ನಮೋ
ಮಾತಾಪಿತಗುರುವೇ ನಮೋ
ಮಮುದ್ಧರಿಸು ಮಹಾತ್ಮ ನಮೋ ॥೪॥

ಕ್ರೂರನು ಕುಟಿಲನು ಕುಮತಿ ನಮೋ
ಕಲುಷಾರ್ಜಿತದುಷ್ಕರ್ಮಿ ನಮೋ
ಸಾರರಹಿತ ಸಂಸಾರಿ ನಮೋ
ಸರ್ವದೋಷಪರಿಹಾರ ನಮೋ ॥೫॥

ಕೌಸಲೇಯಕನಕಾಂಬ ನಮೋ
ದಾಶರಥೇ ದನುಜಾರಿ ನಮೋ
ಶ್ರೀಶಚನ್ನಪುರಿಧಾಮ ನಮೋ
ದಾಸವೈಷ್ಣವಕುಲಪ್ರೇಮ ನಮೋ ॥೬॥

ರಾಮರಾಮಜಯರಾಮ ನಮೋ
ರಾಮತುಲಸೀದಳಧಾಮ ನಮೋ
ರಾಮತುಲಸೀಗುರುಸ್ವಾಮಿ ನಮೋ
ರಂಗಸ್ವಾಮಿದಾಸೇಶ ನಮೋ ॥೭॥

--✿✿✿✿✿--

೨೭೦
ರಾಮಬಾರೋ ಪರಂಧಾಮ ಬಾರೋ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ರಾಮಬಾರೋ ಪರಂಧಾಮ ಬಾರೋ
ಕೋಮಲಾಂಗ ಕವಿಕುಲಾಬ್ಧಿಸೋಮ ಬಾರೋ ॥ಪ॥

ಕೇಶವ ನಾರಾಯಣ ಮಾಧವ ಗೋವಿಂದ ಬಾರೋ
ದಾಶರಥೇ ದಯಾಸಮುದ್ರ ಬೇಗ ಬಾರೋ ॥೧॥

ವಿಷ್ಣು ಮಧುಸೂದನ ತ್ರಿವಿಕ್ರಮ ವಾಮನ ಬಾರೋ
ಶಿಷ್ಟಜನರ ತಾಯಿತಂದೆ ಸ್ವಾಮಿ ಬಾರೋ ॥೨॥

ಶ್ರೀಧರ ಹೃಷೀಕೇಶ ಪದ್ಮನಾಭ ಬಾರೋ
ಆದಿಮಧ್ಯಾಂತರಹಿತ ಶೌರಿ ಬಾರೊ ॥೩॥

ದಾಮೋದರ ಸಂಕರ್ಷಣ ವಾಸುದೇವ ಬಾರೋ
ಕಾಮಕಮಲಜ ಕುಶಲವ ಗಂಗಾಜನಕ ಬಾರೋ ॥೪॥

ಪ್ರದ್ಯುಮ್ನ ಅನಿರುದ್ಧ ಪುರುಷೋತ್ತಮ ಬಾರೋ
ಮುದ್ದುಪಾದ ಸೇವೆಕೊಟ್ಟು ಪಾಲಿಸು ಬಾರೋ ॥೫॥

ಅಧೋಕ್ಷಜ ಶ್ರೀನಾರಸಿಂಹ ಅಚ್ಯುತ ಬಾರೋ
ಅಧಮನು ಆರನು ವಂದಿಪರ ಪತಿತೋದ್ಧಾರ ಬಾರೋ ॥೬॥

ಜನಾರ್ದನ ಉಪೇಂದ್ರ ಹರಿ ಶ್ರೀಕೃಷ್ಣ ಬಾರೋ
ಅನಾಥಪಾಲಕಾಪದ್ಬಾಂಧವ ಅಘಹರ ಬಾರೋ ॥೭॥

ಗುರುವರ ತುಲಸೀರಾಮಸ್ವರೂಪ ಭೂಪ ಬಾರೊ
ಧುರರಂಗಸ್ವಾಮಿದಾಸ ಜೀವೋದ್ಧಾರ ಬಾರೋ ॥೮॥

--✿✿✿✿✿--

೨೭೧
ರಾಮನಾಮವೆನ್ನು ಮನವೆ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ – ೧೯೪೧)

ರಾಮನಾಮವೆನ್ನು ಮನವೆ ನಿನ್ನ
ಪಾಮರಪಾತಕನಾಶನವೆ ಬರಿ
ನೇಮವ್ರತಗಳು ನಿಷ್ಫಲವೆ
ಪರಂಧಾಮ ಭಜನೆ ಮೋಕ್ಷಪ್ರದವೆ ॥ಪ॥

ಶೀಲತನವು ನೀ ಬಿಡಬೇಡಾ ನಾ
ಶೀಲನೆಂದು ನೀ ಹೇಳಬೇಡಾ ಶ್ರೀ
ಲೋಲನ ಸ್ಮರಣವ ಮರಿಬೇಡಾ
ಇಹ ಜಾಲಿಮನಸಿನಲಿ ತರಬೇಡಾ ॥೧॥

ಕಾಲದೇಶವನನುಸರಿಸಿ ನೀನು
ಲೀಲೆಯಾಗಿ ಕ್ರಮದಲಿ ನಡೆಸಿ ಶ್ರೀ
ಫಾಲಯನಸ್ತುತ ಘನತೆನಿಸೀ
ಏವೇಳೆಯು ಶ್ರೀರಾಮನ ಜಪಿಸಿ ॥೨॥

ಕುಲಧನಯೌವನ ಬಲದಿಂದಾ ನಿಜ
ತಿಳಿಯದೆ ಸುಮ್ಮನೆ ಮದಬಂಧದಲಿ
ಸಿಲುಕದೆ ಸುಜ್ಞಾನದಿಂದಾ ಗುರಿ
ತಿಳಿದುಭಯಭೇದಸ್ಥಿತಿ ಚಂದಾ ॥೩॥

ವಿಮಲತುಲಸೀರಾಮನೆನ್ನುವದು
ರಂಗಸ್ವಾಮಿದಾಸನಿಗೆ ಪ್ರಾಪ್ತವದು
ಸಮರಸ ಸದ್ಗುಣ ಲಭಿಸುವದು
ಸರ್ವಶೇಷೈಕ್ಯವು ಒಂದಾಗುವದು ॥೪॥

--✿✿✿✿✿--

೨೭೨
ರಾಮಾ ರಾಜೀವನಯನ ಜಯರಾಮ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ರಾಮಾ ರಾಜೀವನಯನ ಜಯರಾಮ ॥ಪ॥

ರಾಮಜಲಧರಶ್ಯಾಮ ಸದ್ಗುಣ ಸೋಮ
ರಾಮತುಳಸೀದಳಧಾಮ ಶೌರಿಗುರು ॥೧॥

ಹೈಮವತೀನುತನಾಮ ಭಕ್ತಜನ
ಪ್ರೇಮ ದೈತ್ಯರಣಭೀಮ ಶೌರಿಗುರು ॥೨॥

ಸರಸಿಜ ಹಲಕುಲಿಶಾಂಕುಶಧ್ವಜ
ಅರಿದರ ಪತಾಕವಿರಚಿತ ತಪದ ॥೩॥

ವರಕಿರೀಟ ಕೇಯೂರ ಕೌಸ್ತುಭ
ಭರಣ ದುರಿತಚಯಹರಣ ಕೃಪಾಂಬುಧಿ ॥೪॥

ಹಾಟಕಾಂಬರ ಕಿರೀಟ ಸೂತ ಖಗ
ಘೋಟಕ ತುಳಸೀತೋಟಾಲಯ ಸ್ಥಿರ ॥೫॥

ದೇಶಿಕಾಂಗಧರ ತುಳಸೀರಾಮ ಚರ
ಣಾಶ್ರಿತ ರಂಗಸ್ವಾಮಿದಾಸಾವನ ಜಯ ॥೬॥

--✿✿✿✿✿--

೨೭೩
ದಾಸನಾಗಬೇಕು ರಂಗಸ್ವಾಮಿಗುರು

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೭೮ - ೧೯೪೧)

ದಾಸನಾಗಬೇಕು ರಂಗಸ್ವಾಮಿಗುರು
ದಾಸನಾಗಬೇಕು ॥ಪ॥

ದಾಸನಾಗಬೇಕು ಕ್ಲೇಶಪಂಚಕವಳಿದು
ಆಸೆಯಲ್ಲಿ ಮನಸೂಸದೆ ಸರ್ವದಾ ॥ಅ.ಪ॥

ಮನದ ಕಲ್ಮಷ ಕಳೆದು ಮಹಾರಾಮಕೋಟಿಗಳ
ಸನುಮಹಿಮೆಗಳನ್ನು ತಿಳಿದು
ಇನಿತು ಈ ಜಗವೆಲ್ಲ ಶ್ರೀರಾಮಮಯವೆಂದು
ಘನವಾದ ಮೋಹದಾ ಗಡಿಯನ್ನು ದಾಂಟುತ್ತಾ ॥೧॥

ತನುವು ಅಸ್ಥಿರವೆನ್ನುತಾ ತಿಳಿದು ಈ ದುರ್ವ್ಯಾಧಿ
ಎನುವ ಪ್ಲೇಗು ಭಯವ ಬಿಡುತಾ
ಘನವಾದ ರಾಮಕೋಟಿಯಲಿ ನೆಲೆಸುತಾ
ಬಿನಗುಸಂಸಾರದ ಮಮತೆಯ ಬಿಡುತಾ ॥೨॥

ಆರುಚಕ್ರದಿಮೆರೆವ ಅಖಂಡನಾಮದ
ಮೂರುಗುಣವ ತಿಳಿಪ
ಆರುಮೂರದಿನಾರು ತತ್ವಾತೀತ ನಿಜ
ತೋರಿ ರಾಮಕೃಷ್ಣದಾಸನುದ್ಧರಿಸಿದರು ॥೩॥

--✿✿✿✿✿--

೨೭೪
ರಾಮಚಂದ್ರ ರಘುಕುಲಾಬ್ಧಿಸೋಮ ಪೊರೆಯೊ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ರಾಮಚಂದ್ರ ರಘುಕುಲಾಬ್ಧಿಸೋಮ ಪೊರೆಯೊ
ಸಾಮಜೇಂದ್ರ ಭಯವಿದೂರ ಪ್ರೇಮದಿನೋಡ ॥ಪ॥

ನಾಮೊರೆಯ ಕೇಳೊ ನಾಗಾರಿವಾಹನ
ಕಾಮಮದವಿದೂರವಿನುತ ಕಮಲಲೋಚನ ॥೧॥

ಸರಸಿಜಭವಜನಕ ಸವ್ಯಸಾಚಿಸಾರಥೇ
ಪರಮಪುರುಷ ಪದ್ಮನಾಭ ಕಮಲಜಲನಿಧೇ ॥೨॥

ದುರಿತಾರ್ಜಿತದ ದುರ್ಜನನು ದೀನಪೋಷಕ
ಶರಣಾಗತ ಪತಿತಜನರ ಪೊರೆವ ಬಿರುದು ನಿನದಲ್ಲವೇ ॥೩॥

ಸ್ನಾನ ಸಂಧ್ಯಾ ಜಪತಪ ಸುಜ್ಞಾನಹೀನನು
ನಿನ್ನ ಕರುಣೆಯನೆಂದು ಇಡುವೆಯೆನ್ನೆಡೆಗೆ ॥೪॥

ನನಮಾತಾಪಿತಾದಿ ಬಂಧು ನೀನೆ ಮಾಮನೋಹರ
ನಿನಗೆ ಸಮಾನ ಯಾರು ಕಾಣೆ ನಿಗಮಗೋಚರ ॥೫॥

ಅಪರಾಧಿ ನಾನಾದೆ ಬೇಗ ಆಧರಿಸಿ ಪೊರೆಯೊ
ಕೃಪೆಯ ತೋರಿಸಯ್ಯ ಬೇಗನೆ ಸ್ಥಿರಮತಿದೊರೆಯೆ ॥೬॥

ಗುರುವು ತುಳಸೀರಾಮಚರಣ ಸರಸಿಜಾಶ್ರಿತ
ಚಿರವುರಂಗಸ್ವಾಮಿದಾಸ ಕರುಣಪಾಲಿತ ॥೭॥

--✿✿✿✿✿--

೨೭೫
ರಾಮನಾಮವ ಧ್ಯಾನಿಸಿದರೆ ಭವರೋಗ ಹೊಂದದು

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ರಾಮನಾಮವ ಧ್ಯಾನಿಸಿದರೆ ಭವರೋಗ ಹೊಂದದು ಮನಸೇ ॥ಪ॥

ಈ ಮಹಾಮಹಿಮಾತಿಶಯವ ಗಮನದಲಿರಿಸು ಮನಸೇ ॥ಅ.ಪ॥

ಜ್ಞಾನವೆಷ್ಟೆಂದು ನೋಡುವೆ ನಿಜಜ್ಞಾನವೆಷ್ಟೆಂದು ತಿಳಿಯುವೆ
ನಾನೆಂಬ ಭ್ರಾಂತಿಸೂಕ್ಷ್ಮ ಮರೆಯುವೆ ದೃಢಮನಸೊಂದುವೆ ॥೧॥

ದೃಶ್ಯವಾದ ಪ್ರಪಂಚವೆಲ್ಲ ನಶ್ವರವೆಂಬುದನರಿಯುವೆ
ವಿಶ್ವಸಹಿತಂ ವಿಶ್ವರಹಿತಂ ಶಾಶ್ವತ ಅಖಂಡವೆನ್ನುವೆ ॥೨॥

ಯಾರಿಂದ ಜನಿಸುವುದು ಜಗವು ಯಾರಿಂದ ಪೋಷಿಸುತಿದೆ
ಯಾರಿಂದ ಲಯವಹುದು ಎಲ್ಲಿಯಾರಿಹರೆಂದರಿಯುವೆ ॥೩॥

ಅಕ್ಷರದ್ವಯದಲ್ಲಿ ಕರ್ಮಮುಳುಗಿ ಮುಕ್ತಿಯನು ಸೇರುವೆ
ಅಕ್ಷಯದಲ್ಲಿ ಮೋಕ್ಷವೆಂತಿಹುದೊ ಅಮರವಾಗಿ ಯೋಚಿಸುವೆ ॥೪॥

ಭೂತಕೋಟಿಯಲಿ ಹಂಸಭಾವವು ಬಹಳವಾಗಿ ತಿಳಿಯುವೆ
ಭೂತಸಮರಸ ಪ್ರಾಜ್ಞಗೊಲಿದರೆ ಭಯದ ಶೂನ್ಯತೆ ಹೊಂದುವೆ ॥೫॥

ಘನವಾಗಿ ಸದ್ಗುರುವಿನ ಕೃಪೆಯೊಳು ಜ್ಞಾನದೃಷ್ಟಿ ನಿಲ್ಲಿಸು
ಅನುಮಾನಿಸಲಸಾಧ್ಯವು ಪರಮಾತ್ಮ ಎಲ್ಲೆಡೆ ಇರುವನು ॥೬॥

ಸರ್ವರಿಗಾಧಾರ ಚೇತನನಾಗಿರುವನು ಇತರರಕಾಣೆನು
ನಿರ್ವಿಕಲ್ಪಸಮಾಧಿ ಹೊಂದಿದನಿವನಲ್ಲದೆ ಬೇರೆ ಕಾಣೆನು ॥೭॥

ಭರತಪುರಿ ಶ್ರೀತುಳಸೀರಾಮಗುರುವಿನ ಧ್ಯಾನವಂತಿಹುದು
ಧುರನುರಂಗಸ್ವಾಮಿದಾಸಗೆ ತತ್ವಬೋಧಾಮೃತವಿದು ॥೮॥

--✿✿✿✿✿--

೨೭೬
ತಾರಮ್ಮಯ್ಯ ರವಿಕುಲ ರಾಮಚಂದ್ರಯ್ಯ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ತಾರಮ್ಮಯ್ಯ ರವಿಕುಲ ರಾಮಚಂದ್ರಯ್ಯ ॥ಪ॥

ಈರೇಳು ಜಗಗಳಲ್ಲಿ ಏಕವಾಗಿ ವ್ಯಾಪಿಸಿರುವ
ತಾರಕಬ್ರಹ್ಮವೆಂದು ವೇದಮೂಲ ಪೊಗಳುತಿವೆ ॥ಅ.ಪ॥

ಆಧಾರ ಮೊದಲು ಕೊನೆಗೆ ಅನಿತರೊಳು ನೀವೆ ಸೇರಿ
ಆಧಾರಭೂತನೂ ಅಜಪಮಂತ್ರವು ನೀವೆ ॥೧॥

ಅಜಹರೇಂದ್ರಸುರರು ಅಖಿಲಭೂತದಲೆಲ್ಲ
ನಿಜವಾಗಿ ಅಹರ್ನಿಶವು ಭಜನೆಮಾಡುತಿಹರು ॥೨॥

ದಿನಮೇಕವಿಂಶತಿ ಸಹಸ್ರಷಟ್ ಶತಸಂಖ್ಯಾ
ಜ್ಞಾನಿಗಳಗಣಿತದಿ ಕಾಣುತಿರುವ ಹಂಸತತ್ವವು ನೀವೆ ॥೩॥

ಭಾರತೀ ಸಾವಿತ್ರೀ ಹೆಸರಿನಿಂದ ತಿರುಗುತಿರುವ ಓಂ
ಕಾರನಾದಕ್ಕು ಮೂಲಬೀಜ ನೀವೇ ಅಲ್ಲವೇ ॥೪॥

ಪಾರಮಾರ್ಥಿಕವ ಬ್ರಹ್ಮವೇತ್ತರಿಗೆ ಬಿಟ್ಟು
ಸಾರವಾದೀ ಜಪದ ಮರ್ಮವೊಂದನೆ ತಿಳಿಯಿರೊ ॥೫॥

ಧರ ಶ್ರೀತುಳಸೀರಾಮ ಗುರುಕಟಾಕ್ಷದಿಂದ
ದೊರಕಿತು ರಂಗಸ್ವಾಮಿದಾಸನಿಗೆ ಈ ಮರ್ಮ ॥೬॥

ನರರು ಶ್ರೀರಾಮನಾಮದ ಸತ್ಯತಿಳಿಯದೆ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ನರರು ಶ್ರೀರಾಮನಾಮದ ಸತ್ಯತಿಳಿಯದೆ
ನರಕಬಾಧೆಗೆ ಇಳಿವರು ||ಪ||

ನಿರುಪಮ ಶ್ರೀರಾಮನಾಮದ ಸ್ಮರಣ ಸ್ವಾಭಾವಿಕವನರಿತರೆ
ಪರಮಪದವಿಲ್ಲೆ ಇಪ್ಪುದು ಅರೆಮನಸೇಕೆ ನಿಜನಂಬು ||ಅ.ಪ||

ಯೋಗಿಗಳನ್ನು ನಿತ್ಯ ಭೋಗಿಗಳನು ಮಹಾ
ತ್ಯಾಗಿಗಳನು ಧರ್ಮೋದ್ಯೋಗಿಗಳನು
ಆಗಮ ಶ್ರುತಿಗಳ ದೂರುವವರನು ರಾಗದ ವ್ಯಭಿಚಾರಿಗಳನೂ
ಭೋಗಿಶಯನರಾಮ ಎಂದೊಮ್ಮೆ ಪಲುಕೆ ಮೋಕ್ಷಕೊಪ್ಪುವನ ||೧||

ವರವಿಪ್ರರಾಜರು ವೈಶ್ಯಾದಿಶೂದ್ರಶ
ಬರರು ಪಶುಮೃಗಗಳು ಪಕ್ಷಿಜಾತಿಗಳು
ದುರಿತರು ಸುರಸ್ತ್ರೀ ಮ್ಲೇಚ್ಛರು ಹೂಣಾದಿಶ್ವಪಚರು
ಅರಿ ಯಾರಾದರೇನು ರಾಮಸ್ಮರಣೆ ಮಾಡಿದರೆ ಸಾಕು ಮುಕ್ತಿಗೆ ||೨||

ಗೋವಿಪ್ರ ಸ್ತ್ರೀಶಿಶು ಗುರುವಧೆಯ ಮಾಡುವ ಕರ್ಮದವನು
ದೈವಭಕ್ತಿವಿಹೀನನು ಪರಧನಕನಕ
ಆವನಪಹರಿಸುವನವನು
ಯಾವಿಧದಲು ರಾಮ ಎಂದುಲಿಯುತಿರೆ ಮೋಕ್ಷಮಪ್ಪುದು ||೩||

ಗಮನವಿದ್ದು ಸುಳ್ಳು ಕಪಟವಾಡುವವರು
ಕುಮತಿಯವರು ಜೂಜುಕೋರರು ದುಷ್ಟರು
ಯಮಪುರಿಯಲಿರುವರು ನರಕಕೂಪವನನುಭವಿಪರು
ಅಮಿತ ಪಾಪಾರ್ಜಿತರು ಒದಗುವರು ಮೋಕ್ಷಕೆ ರಾಮ ಎಂದರೆ। |೪||

ಧರಣೀಧರಜಾಪತಿಯ ಧ್ಯಾನಿಸುವ ನಾಮಗಳು
ಹರಿಸುವವೊಡನೆ ಅಘಗಳೊಂದೂ ಇಲ್ಲದಂತೆ
ಗುರುತುಳಸೀರಾಮ ಬೋಧೆಯ ತಿಳಿದು ರಂಗಸ್ವಾಮಿದಾಸನು
ನಿರತಿಶಯ ನಾಮಪ್ರಭಾವದ ಸ್ಮರಣೆಯ ನುತಿಸಿದ ದೃಢವಾಗಿ ॥೫॥

--✿✿✿✿✿--

೨೭೮
ಸತ್ಯಂಜ್ಞಾನಮನಂತಂ ಸೂಕ್ಷ್ಮಂಸತ್ಯಾಸತ್ಯ

(ರಂಗಸ್ವಾಮಿದಾಸ / ಮಳಗೆರಂಗಸ್ವಾಮಿ / ೧೮೬೮ - ೧೯೪೧)

ಸತ್ಯಂಜ್ಞಾನಮನಂತಂ ಸೂಕ್ಷ್ಮಂಸತ್ಯಾಸತ್ಯವಿವೇಕದಿಂದ
ನಿತ್ಯಾನಂದನ ಬೆರೆತರೆ ಪ್ರತ್ಯಯದಂತೆ ಗುರುಕೃಪೆಯು ॥ಪ॥

ಶರೀರವೆಂಬ ದೇಗುಲದಲ್ಲಿ ಸಹಸ್ರಾರ ಕಮಲದ ಪೀಠದಲ್ಲಿ
ತುರೀಯವೆಂಬ ಜನನ ಮರಣ ಕಳೆವ ಸಂತೋಷವೆ ಆತ್ಮಾರಾಮ ॥೧॥

ವ್ಯೂಹದಿಂದ ಬ್ರಹ್ಮಾನುಭವವಾದವರು ಉತ್ಕೃಷ್ಟವಾದರ್ಚನೆಯಿಂದ
ಸೋಹಂಭಾವದಿ ಕರ್ಮೇಂದ್ರಿಯ ಸೇವಾಪಾತ್ರರಾಗಿಹರು ॥೨॥

ವಿಶದವಾಗಿ ಉಪಚಾರ ಭಟರಾಗಿಸಿ ದಶವಿಧ ಪ್ರಾಣಗಳನು
ಅಶೇಷ ಗಂಗಾ ಯಮುನಾ ನಾಡಿಗಳನೆ ಅತಿನಿರ್ಮಲ ಜಲವಾಗಿ ॥೩॥

ಷಟ್ಕಮಲಗಳ ಪುಷ್ಪಗಳಾಗಿ ಜಠರಾಗ್ನಿಯೆ ಧೂಪವಾಗಿ
ಪಟುತರವಾದ ಚಿತ್ಕಳೆ ದೀಪಗಳಾಗಿ ಬ್ರಹ್ಮಾನಂದವೆ ನೈವೇದ್ಯವಾಗಿ ॥೪॥

ರವಿಶಶಿ ಜ್ಯೋತಿಗಳೆ ಆರತಿಯಾಗಿ ರಮ್ಯವಾದ ರಾಮಾರ್ಚನೆಗೆ
ಭುವಿತುಳಸೀರಾಮಾರ್ಯನಕೃಪೆಯಲಿವಿವರಿಸಿದೆ ಮನಸಿಗೆ ತಿಳಿದಂತೆ ॥೫॥

--✿✿✿✿✿--

ಪಂಕಜಾಕ್ಷ ಮನಪಂಕ ಕಳೆಯೋ

(ಗುರು ಗೋವಿಂದವಿಠಲ / ಎಂ. ಗೋವಿಂದರಾವ್ / ೧೮೭೪ - ೧೯೮೩)

ಪಂಕಜಾಕ್ಷ ಮನ । ಪಂಕ ಕಳೆಯೋ ಎನ್ನ ।
ಕರುಣಾರಸಪೂರ್ಣ ॥ಪ॥

ಲಂಕೇಶನನು ಜಗ್ವೊಲಿದ ಹರಿಯೇ ।
ಆಶ್ರಿತರಿಗೆ ದೊರೆಯೇ ॥ಅ.ಪ॥

ನವಗ್ರಹ ಪೂಜೆಗಳೊಪ್ಪಿತ್ತೇನೊ ನಿನಗೇ ।
ಸರ್ವಾಧಾರಕಗೇ ।
ತವ ಚರಣಾಬ್ದ ಸ್ತವನ ಮಾಳ್ಪನರನೂ । ಭವವಿಮುಕ್ತನಹನೂ ।
ಕವಿಜನನುತ ಸತ್ತ್ರವರ ನಿನ್ನ ಲೀಲಾ ।
ಲೋಕ ಶಿಕ್ಷೆಗನುಕೂಲ ।
ತವಕದಿ ಗೈದೆ ವಿವಿಧ ಪೂಜೆಗಳನ್ನ ।
ನವ ಪಾಷಾಣಗಳನ್ನ ॥೧॥

ಸರ್ಪಶಯನ ಪರಿವಾರದೊಡನೆ ಬಂದು ।
ಶರಧಿತೀರದಿ ನಿಂದು ।
ಅಪ್ಪಣೆ ನಡೆಸದ ಸಿಂಧುಪತಿಯ ನೋಡೀ ।
ದರ್ಭಶಯನ ಮಾಡೀ ।
ಕಪ್ಪುಗೊರಳಸಖ ಕುಪಿತನಾಗೆ ನೀನೂ ।
ಬೆದರಿ ಬಿನ್ನವಿಸಿದನೂ ।
ಒಪ್ಪಿ ಬಂಧಿಸಿದೇ ಸೇತುವೆಯನ್ನಾ ಭಕ್ತರಿಗೆ ಪ್ರಸನ್ನಾ ॥೨॥

ಘಾತಿಸುತಲಿ ಬಲು ಯಾತುಧಾನರನ್ನಾ ।
ರಾವಣಾದಿಗಳನಾ ।
ಸೀತೆಯೊಡವೆರಸಿ ತೆರಳಿ ನೀನೂ ।
ಸಲಹಿದೆ ಅನುಜನನೂ ।

ಸೇತುಬಂಧ ಸಿರಿಮಾಧವ ಶ್ರೀನಲ್ಲಾ ।
ಗುರುಗೋವಿಂದ ವಿಠ್ಠಲ ।
ಮಾತು ಮಾತಿಗೆ ಕೊಡು ತವ ಲೀಲಾ ।
ಉಚ್ಚರಿಸುವ ಸೊಲ್ಲಾ ॥೩॥

--✿✿✿✿✿--

೨೮೦
ಕ್ಷಿತಿಭಾರಹರಣನೇ ಶ್ರೀಜಾನಕೀಪತಿಯೇ

(ಗುರು ಗೋವಿಂದವಿಠಲ / ಎಂ. ಗೋವಿಂದರಾವ್ / ೧೮೬೪ - ೧೯೮೩)

ಕ್ಷಿತಿಭಾರಹರಣನೇ ಶ್ರೀಜಾನಕೀಪತಿಯೇ ।
ಶಿತಿಕಂಠಸಖ ಹರಿಯೇ ॥ಪ॥

ಅತಿ ವಿಮಲನಂತಾರ್ಕನಿಭ ಪದಾ
ಗತಿವಹನೆ ಮೊರೆ ಶ್ರೀರಾಮಚಂದ್ರನೇ ॥ಅ.ಪ॥

ಪರಮ ಮಂಗಳನಾಮ । ಪರಿಹರಿಸಿ ಸಂಸೃತಿಯ
ನಿರುತ ಮಹದಾನಂದ । ಪದವೆನಿಪುದೋ ॥
ಮರುತಾಂತರಾತ್ಮ ತವ । ನಾಮಸುಧೆ ಸುಖಸವಿದು
ಇರುವಂತೆ ಮಾಡಯ್ಯ । ಕರುಣಾನಿಧಿಯೇ ॥೧॥

ಕಮಲಸಂಭವನಯ್ಯ । ಸುಮನಸರಿಗತಿಪ್ರಿಯ
ಕಮಲದಳನೇತ್ರನೇ । ಕಾಮಿತಪ್ರದನೇ ॥
ಭ್ರಮೆ ಮೂರ ಪರಿಹರಿಸೋ । ಕಮಲಾಪ್ತಕುಲಜನೇ
ಶಮದಮಾನ್ವಿತನೆನಿಸಿ । ವಿಮಲಮತಿ ಈಯೋ ॥೨॥

ದಶಕಂಠಹರ ನಿನ್ನ । ಯಶವನ್ನೆ ಹೊಗಳಲು
ಶೇಷ ವಿಪ್ರ ರುದ್ರಾದಿ । ಗಸದಳವು ಇಹುದೂ ।
ಕಸರುಕರ್ಮಾದಿಗಳ । ಕೆಸರು ಕಳೆ ಪ್ರಾರ್ಥಿಸುವೆ
ಅಸಮಮಹಿಮನೆ ಗುರು । ಗೋವಿಂದ ವಿಠಲಾ ॥೩॥

--✿✿✿✿✿--

ಸಮಾಸಮಳೆ ಸೀತೆ ಹರಿಗೆಭುವಿಜಾತೆ

(ಗುರು ಗೋವಿಂದವಿಠಲ / ಎಂ. ಗೋವಿಂದರಾವ್ / ೧೮೭೪ - ೧೯೮೩)

ಸಮಾಸಮಳೆ ಸೀತೆ । ಹರಿಗೆಭುವಿಜಾತೆ
ಬ್ರಹ್ಮೋದ್ಭವನ ಧನು । ಹಮ್ಮೀನ ನೃಪಮಂದಿ
ದಮ್ಮು ಹಿಡಿದು ಎತ್ತೇ । ಹಮ್ಮು ಅಡಗಿತು ॥ಪ॥

ಅಮ್ಮಾ ನಿಮ್ಮಯ್ಯನ । ಒಮ್ಮನ ಪಣವನು
ಬ್ರಹ್ಮರ್ಷಿ ವಿಶ್ವಮಿತ್ರ । ಹಿಮ್ಮೇಳನಾಗಿ ಬಂದ
ರಮ್ಮೆರಮಣ ರಾಮ । ಒಮ್ಮೇಲಿ ಪೂರೈಸಿದ ॥ಅ.ಪ॥

ಬಾಲೆರಡಬಲ । ಮೇಳವಿಸಿ ಬರೆ
ಮಾಲೆ ಪೂವಿನ । ಕೈಲಿ ಧರಿಸುತ
ನೀಲವೇಣಿ ವಿ । ಶಾಲಕೀರ್ತಿಯ
ಬಾಲ ಕೊರಳೊಳು । ಹಾಕಿನಿಂತಳು ॥೧॥

ಕೃತಿವಾಸನಾ । ದತ್ತಧನು ಮೇ
ಲೆತ್ತಲಾಗದ । ಹೊತ್ತು ಮುರಿದುದ
ಇತ್ತ ಹರ ಕೇ ।ಳುತ್ತ ಯುದ್ಧಕೆ
ವತ್ತಿ ಬರೆ ಕ್ಷಣದೃಷ್ಟಿಗವ ಸ್ಥಾಣು ॥೨॥

ಮಾರ್ಗನಡು ಬರೆ । ಭಾರ್ಗವನು ರಣ
ಮಾರ್ಗವ್ಯಾಜ ಅ । ಮಾರ್ಗ ಅತುಳನ್ನ
ಮಾರ್ಗಣದಿ ಹನ । ಗೈದು ಸುಜನಕೆ
ಭಾರ್ಗವೈಕ್ಯವ । ತೋರ್ದ ತನ್ನೊಳಗೆ ॥೩॥

ಕಾನನಕೆ ಪಿತ । ನಾಣತಿಗೆ ರಾಮ
ಮಾಣದಲೆ ಸತಿ । ಸಾನುಜ ಹೊರಟ
ಏಣತೆರ ಕ್ರೂರ । ಕಾಣಿಸಲು ಸತಿ
ತಾನಪೇಕ್ಷಿಸೆ ।ಬಾಣ ಪಿಡಿದ್ಹೋದ ॥೪॥

ಮಾರೀಚ ವಂಚಿಸಿ । ಚೀರೆ ಲಕ್ಷ್ಮಣನ
ದೂರುತ್ತ ಕಳಿಸಿ । ರಾಮನಾ ಬಳಿಗೇ
ಕ್ರೂರ ಯತಿವೇಷ । ಧಾರಕನು ಬಂದು
ನಾರಿ ಸೀತಾಕೃತಿ । ಸೇರಿ ಮುರಕೊರಟ ॥೫॥

ವಾತ ಅಬ್ಧಿ ವೇ ।ಗಾತಿಶಯ ಹಾರಿ
ಮಾತೆಗುಂಗುರವಿತ್ತು । ವಾರ್ತೆ ಪೇಳೆ ಪ್ರಭು
ಗೋವಿದಾಂಪತಿ ಗುರು । ಗೋವಿಂದ ವಿಠಲನೆ
ನೀವೊಲಿಯದಿನ್ನಾರು । ಕಾವರನು ಕಾಣೆನಯ್ಯಾ ॥೬॥

--✿✿✿✿✿--

೨೮೨

ಚಿಂತಯಾಮಿ ರಘುರಾಮಂ

(ಗುರು ಗೋವಿಂದವಿಠಲ / ಎಂ. ಗೋವಿಂದರಾವ್ / ೧೮೬೪ - ೧೯೮೩)

ಚಿಂತಯಾಮಿ । ರಘುರಾಮಂ । ಸುತ ಕೌಸಲ್ಯೋದರಜಂ ।
ಸಂತತ ಶರಣರ ಕೃಪಾ । ಪಾಂಗವೀಕ್ಷಾ ಹಸಿತಂ ॥ಪ॥

ಸರಿ ಗ ಸರೀ । ಮಪ ಧಪ ಧಾ ।
ರಿಸ ನಿಧ ನಿಧ । ಪಮ ಗರಿ ಸದ
ದ್ರುತ - ಸರಿಮಾ ಗರಿ । ಮಪ ದಾಪಮ ।
ಪಧಸಾ ನಿಧ । ನಿಧ ಪದಪಧ ॥
ಗರಿ ಸಧ ! "ರಿ ಸ ಧಾ ಸ ।
ಧಾ ಗ ರಿ ನಿಧಮ । ಗರಿಸದ ।

ರಾಗ - ನಾಟಕುರಂಜಿ

ರವಿ ಕುಲಾನ್ವಯತಿಲಕಂ । ಋಷಿ ವಿಶ್ವಾಮಿತ್ರ ಕೃತ
ಹವನ ಹೋಮ, ಬಾಧಾಗ್ರಸ್ತ । ವಿಮೋಚನ, ಶೀಲಂ
ಅವನಿಜೆ ವೈವಾ, ಹಕ್ಕಾನೀತಂ ।
ಲಕ್ಷ್ಮಣ ಸಹ, ವಿಧಿಲಾಗಹೀನಂ ।

ಶಿವಧನುವಂ, ಮುರಿದು ರಾಜ ।
ರುಗಳ ಗರ್ವಹರ । ಶ್ರೀರಾಮಂ ॥೧॥

ಚಿಟ್ಟೆಸ್ವರ

ಮಗ ಸಾ ನಿದ ।ನಿಸಾ ರಿಗಮ ।
ನಿಧ ಮಾಗರಿ । ಗಮ ಪಗರಿಸ
ದ್ರುತ – ನಿಧನಿಸ ರಿಗಮ ಧನಿಪಧ ।
ನಿಸ ನಿಧ ನಿಸರಿಗ ಮಗಸನಿ ॥
ಗರಿಸಧ, ರಿಸ ಧಾ, ಸ ಧಾಅ, ಗರಿ ॥ ನಿದಮ । ಗರಿಸಧ ॥

ರಾಗ – ಧನ್ಯಾಸಿ :

ಕನ್ಯಾಮಣಿ । ಪಾಣಿಗ್ರಹ । ಅಹಲ್ಯಾ
ಶಾಪಹಂ ।ಭಾರ್ಗವನಿಂ । ಪ್ರಕಟೈಕ್ಯ
ಅಯೋಧ್ಯಾ । ಗಮನಂ । ಪಿತೃವಚನ । ಅನುಸರಿಸುತ
ವನಗಮನಂ ।ಅನುಜ ಸತಿಸಹ । ವನವಾಸಂ ।
ನಿಶಿಚರ ಹನನ । ಶೂರ್ಪನಖಿ । ನಾಸಾಭೇದಂ । ಚ್ಚರಿತಂ ॥೨॥

ಚಿಟ್ಟೆಸ್ವರ

ರಾಗ : ಧಾನಿಸಿ : ನಿಸ ಗಾಮ ಪ ।
ಗಮ ಪಾನಿಸ ! ರಿಸ ರಿನಿ ಸಪ । ಧಪಗಾರಿಸ
ನೀ ಸ ಗ ಮಪ ಗಾ ಮಪನಿಸ ।
ಪಾ ನಿಸ ಗರಿ ಸನಿಧಪ ನಿಸ
ಗರಿಸಧಾ, ಆರಿಸ ಧಾಸ, ಧಾ, ಗರಿ ನಿಧಮ ಗರಿಸದ ॥

ರಾಗ –

ಮೋಹನ ವಿರಾಧಾದಿ ।ಶಾಪ ವಿಮೋಚನ ।
ತರಳೆ ಶಬರಿ ಅನುಗ್ರಹ

ಮರಳಿ ಮಾರೀಚನ ವಂಚನ । ದುರುಳನಿಂ । ಸೀತಾಪಹರಂ
ಶರದ್ಯೋಲ್ಲಂಘಿಸಿ । ಸೀತಾ ವಾರ್ತಾನೀತರೆ ।
ಹನುಮಂತಾಲಿಂಗನ ಪರ । ಮಾನುಗ್ರಹ ಶೀಲಂ ರಾಮಂ ॥೩॥

ಚಿಟ್ಟೆಸ್ವರ

ಗಾ ಪ ಗರಿ, ಗರಿ ಸಧಸರಿ ।
ಗಾಪ ದಸದಪ ಗರಿ ಸರಿ
ಗಪಗಗ, ರಿಸ । ರಿಗ, ರಿರಿಸ ಧ ।
ಸರಿಗರಿ ನಪಗಪ ಧಪಧಸ ।
ಗರಿಸಧಾ, ಆರಿಸ ಧಾ, ಸದಾ, ಗರಿನಿಧಮ, ಗರಿಸದ ॥

ರಾಗ ಪೂರ್ವಕಲ್ಯಾಣಿ :

ಲೇಸು ಕಪಿಗಳ ನಿಚಯ ।
ಸೀತಾಕೃತಿ ಹುಡುಕುತ ।
ಆ ಸಮೀರನು । ವಾರಿಧಿಯನು ।
ಹಾರಿ ಲಂಕೆಯ ಪುರದಲ್ಲಿ
ಅಣುರೂಪದಿ ಹುಡುಕುತ ।
ಸೀತಾಕೃತಿಯ । ಕಂಡನು
ದೇಶ ಪುಚ್ಛಾಗ್ನಿಯಲಿ । ದಹಿಸಿ ಸೀತೆ ।
ವಾರ್ತೆ ಪೇಳಿದನು ॥೪॥

ಚಿಟ್ಟೆಸ್ವರ

ಗಾಮಗರಿಸ । ಧ ಸರಿ ಗಮ ।
ಪಾ ಧಪಸ । ನಿಧಪ ಮಗರಿ ।
ಗಮಪ ಮಾಪಗಾ ।
ಮರೀಗ । ಸಾರಿಗಆಮ ಪಧ ಪಸಾ ನಿ ।
ಗರಿಸಧಾ, ಆಸಧಾ ಸಧಾ ಗರಿ ನಿಧ ಮ ಗರಿಸದ ॥

ರಾಗ : ಮುಖಾರಿ :

ಅನಘ ಹರಿ । ಸಖನೊಡನೆ । ಕಪಿವೆರಸಿ । ಬರುತಿರಲು
ಸೇತು ಬಂಧಿಸಿ । ಹನುಮನೊಡವೆರಸಿ । ಅರಿಪುರಸಾರ್ದ್ದ ।
ಘನ ಸುಯದ್ದವಿ ।ದಶಶಿರನ ಸಂಹರಿಸುತ । ಸೀತಾ ಕೃತಿ
ನನಿತೆ ಸತಿ ಪರಿವಾರ ಪುಷ್ಪಕವಿ । ಸ್ವಪುರ ಕ್ಕೊರಟ ॥೫॥

ಚಿಟ್ಟೆಸ್ವರ

ಪಾ ಮಗರಿ । ಸಾ ನಿಧ ಸರಿ । ಮಾಗರಿಸ ।
ರಿಮ ಪದ ನಿಧ ಸಾ ಸನಿ ಧಪ ಪಾ ।
ಮಗರಿಸ । ನಿಧಸರಿ ಮಪನಿಧ ಮಪದಸ ॥
ಗರಿಸಧಾ ಆರಿಸ ಧಾಅಸ । ಧಾಅ ಗರಿ ನಿಧಮ ಗರಿಸಧ ॥

ರಾಗ ಮಧ್ಯಮಾವತಿ :

ಭರತನಿಗೆ । ವಾರ್ತೆ ಕಳುಹಿ । ಸ್ವಪುರ ಸೇರಿ । ಮಾತೆ
ಗೊಂದಿಸಿ ಪುರವಲಂಕೃತ । ಮಂತ್ರಿಯಿಂದ । ಸುರರು ವೇದ ।
ಪಠಿಸುತಿರೆ
ಪಟ್ಟಾಭಿಷಕ್ತ । ಪುರದಿ ಸಂಭ್ರಮ
ದಿಂದ ಜನರು ಶಂಸಿಸಿ ಹನುಮಗ ಸಹ ಭೋಗವಿತ್ತು ।
ಭೂ ಭಾರ ಕಳೆದರು ಗೋವಿಂದ ವಿಠಲ ॥೬॥

ಚಿಟ್ಟೆಸ್ವರ

ರೀ ಮರಿ ಮಪ । ನೀ ಪಮ ಪನಿ ಸಾ ರಿಸನಿ ।
ಪಪ ಮಮರಿ ಸ ॥ ರೀಪಮ ರಿಸನಿಪ ರಿಮಪಾ ॥

ರಾಗ : ಪೂರ್ವಕಲ್ಯಾಣಿ ॥ ಧಪ ಸಾ ನಿಧಪಮ । ಮಪಗರಿ
ರಾಗ : ಮೋಹನ ॥ ಸರಿಮಾ ಗರಿ ಸರಿಗಾ । ಪಗರಿ ಸರಿ
ಪದಸ

ರಾಗ : ಮುಖಾರಿ । ರೀ ಸದಾ ಪದಪ ಗಾರಿ ಸ
ರಾಗ : ನಾಟಿಕುರಂಜಿ ॥ ನಿಸ ಮಗ ಧನಿ ಪಧನಿಸ
ರಾಗ : ಸಾವೇರಿ ॥ ಗರಿ ಸದಾ ರಿಸ ಧಾ ಸ । ಧಾ ಗ ರಿ
ನಿದಮ ಗರಿಸದ

--✿✿✿✿✿--

೨೮೩
ಚರಣದಾಸರ ಸದುಹೃದಯನಿವಾಸನೆ
(ಶ್ರೀರಾಮ / ಬಡೇರಾಮದಾಸ / ೧೮೮೨ – ೧೯೪೦)

ಚರಣದಾಸರ ಸದುಹೃದಯನಿವಾಸನೆ ಸಿರಿರಾಮ
ಪರಮಪಾವನೆ ವರಜಾಹ್ನವಿಜನಕನೆ ಸಿರಿರಾಮ ॥ಪ॥

ಶರಣಜನರ ಮೇಲ್ನುಡಿಯೊಳ್ಸುಚಾರನೆ ಸಿರಿರಾಮ
ನೆರೆನಂಬಿ ಭಜಿಪರ ಭವಮಲಹರಣನೆ ಸಿರಿರಾಮ
ಕರುಣದೊಂದು ಯುವತಿಕುಲವನುದ್ಧರಿಸಿದನೆ ಸಿರಿರಾಮ
ವರದ ವಾಸುಕಿಶಾಯಿ ಜಗದೇಕ ಬಂಧುವೇ ಸಿರಿರಾಮ ॥೧॥

ಧುರಧೀರವಾಲಿಯ ಗರುವನಿವಾರನೆ ಸಿರಿರಾಮ
ಮರೆಬಿದ್ದ ಸುಗ್ರೀವನ ದು:ಖಪರಿಹಾರನೆ ಸಿರಿರಾಮ
ಪರಮಭಕ್ತ್ಹನುಮಗೆ ಕರವಶನಾದನೆ ಸಿರಿರಾಮ
ಶರಣುಬಂದಸುರಗೆ ಸ್ಥಿರಪಟ್ಟವಿತ್ತನೆ ಸಿರಿರಾಮ ॥೨॥

ಶರಧಿಮಥನಮಾಡಿ ಸುರರ ರಕ್ಷಿಸಿದನೆ ಸಿರಿರಾಮ
ಹರನಕೊರಳ ಉರಿ ಕರುಣದ್ಹಾರಿಸಿದನೆ ಸಿರಿರಾಮ
ವರಗಿರಿನಂದನೆಮನಸೂರೆಗೈದನೆ ಸಿರಿರಾಮ
ಸರುವದೇವರದೇವ ಅದ್ಭುತಮಹಿಮನೆ ಸಿರಿರಾಮ ॥೩॥

ಕರಿಯರಕ್ಷಣೆಗಾಗಿ ಕಾಸಾರಕ್ಕಿಳಿದನೆ ಸಿರಿರಾಮ
ತರುಣಿಮೈಗಾವಗೆ ಚರನಾಗಿ ನಿಂತನೆ ಸಿರಿರಾಮ
ಚರಣದಾಸರಮನೆ ತುರಗವ ಕಾಯ್ದನೆ ಸಿರಿರಾಮ
ಪರಮಭಾಗವತರನರೆಲವ ಬಿಟ್ಟಿರನೆ ಸಿರಿರಾಮ ॥೪॥

ಅನುಪಮ ವೇದಗಳಗಣಿತಕ್ಕೆ ಮೀರಿದನೆ ಸಿರಿರಾಮ
ಸನಕಸನಂದಾದಿ ಮನುಮುನಿ ವಿನಮಿತನೆ ಸಿರಿರಾಮ
ವನರುಹ ಬ್ರಹ್ಮಾಂಡ ಬಲುದರದಿಟ್ಟಾಳ್ವನೆ ಸಿರಿರಾಮ
ಮನಮುಟ್ಟಿ ಭಜಿಪರ ಘನಮುಕ್ತಿ ಸಾಧ್ಯನೆ ಸಿರಿರಾಮ ॥೫॥

--✿✿✿✿✿--

೨೮೪
ದೀನದಯಾಪರ ಜಾನಕೀನಾಥ
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ದೀನದಯಾಪರ ಜಾನಕೀನಾಥ
ನೀನೆ ದಯಾರ್ಣವ ಅನಾಥಜನಾಪ್ತ ॥ಪ॥

ಘನತರ ಭವತಾಪವನು ಪರಿಹರಿಸೊ
ಕನಿಕರಯುತ ನೀನೆ ಮನುಮುನಿವಿನುತ ॥೧॥

ಲಾಖಚೌರ್‍ಯೈಂಸಿಜನ್ಮ ಸಾಕಾದೆ ತಿರುತಿರುಗಿ
ಕಾಕುಬವಣೆ ಸಾಕೋ ಲೋಕೇಶ ಕೃಪಾ ದೇ ॥೨॥

ಭಕುತಾಭಿಮಾನಿ ನೀ ನಿಖಿಲಜಗಸೂತ್ರ
ಭಕುತನ ಮೊರೆ ಕಾಯೊ ಭಕುತಾಭಿರಾಮ ॥೩॥

--✿✿✿✿✿--

೨೮೫
ನಾ ಮಾಡಿದಪರಾಧ ನನ್ನನ್ನು ಕಾಡಲು
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ನಾ ಮಾಡಿದಪರಾಧ ನನ್ನನ್ನು ಕಾಡಲು
ನೀ ಮಾಡುವದೇನೊ ಜಾನಕೀನಾಥ ॥ಪ॥

ಕಾಮಕ್ರೋಧಗಳಳಿದು ತಾಮಸಂಗಳು ನೀಗಿ
ನೇಮನಿತ್ಯದಿ ಹರಿನಾಮ ಭಜಿಸಲಿಲ್ಲ ॥೧॥

ಪರನಿಂದೆ ಪರನಾರಿಯರ ಮೋಹ ತೊರೆಯದೆ
ಗುರುಹಿರಿಯರ ಜರಿದು ನರಕಕ್ಕೆ ಗುರಿಯಾದೆ ॥೨॥

ತಂದೆ ಶ್ರೀರಾಮನೆ ಕಂದನ ತಪ್ಪು ದಯ
ದಿಂದ ಕ್ಷಮಿಸಿ ಇನ್ನು ಚೆಂದದಿಂ ಸಲಹಯ್ಯ ॥೩॥

--✿✿✿✿✿--

೨೮೬
ನಿನ್ನಯ ಬಲವೊಂದಿದ್ದರೆ ಸಾಕಯ್ಯ
(ಶ್ರೀರಾಮ / ಬಡೇರಾಮದಾಸ / ೧೮೮೨ – ೧೯೪೦)

ನಿನ್ನಯ ಬಲವೊಂದಿದ್ದರೆ ಸಾಕಯ್ಯ ಸೀತಾನಾಥ ಮಿಕ್ಕ
ಅನ್ಯರ ಬಲವಿನ್ಯಾಕೆ ಬೇಕಯ್ಯ ಸೀತಾನಾಥ ॥ಪ॥

ತನ್ನ ಮುಖವ ಕಂಡ ಜನರಿಂ ಕೇಳ್ವುದಕಿಂತ ಸೀತಾನಾಥ
ತನು ಉನ್ನತವಾದಂಥ ಕನ್ನಡ್ಯೊಂದೇ ಸಾಕು ಸೀತಾನಾಥ
ತನ್ನಿಷ್ಟಗರೆವಂಥ ಸುರಧೇನೊಂದೆ ಸಾಕು ಸೀತಾನಾಥ ಮತ್ತು
ಇನ್ನು ಬನ್ನಬಡುತಾನಂತಾಕಳ್ಯಾಕೊ ಸೀತಾನಾಥ ॥೧॥

ವರ ಹೆಣ್ಣು ಹೊನ್ನ ಮಣ್ಣಿನಕಿಂತ ಸೀತಾನಾಥ
ಸ್ಥಿರ ಸ್ಮರಿಸಿದನ್ನೀವಂಥ ಸುರತರೊಂದೆ ಸಾಕು ಸೀತಾನಾಥ
ಪರಮ ಚಿಂತಾಮಣಿಯ ಸಾಧ್ಯವೊಂದೆ ಸಾಕು ಸೀತಾನಾಥ
ಪರಿಪರಿ ಮಂತ್ರತಂತ್ರದಿ ಸಿದ್ಧಿಗಳ್ಯಾಕೊ ಸೀತಾನಾಥ ॥೨॥

ಪಾಮರ್ಥಲವು ಬಂಧುಬಳಗ ಬಲದಕ್ಕಿಂತ ಸೀತಾನಾಥ ಮಹಾ
ಸ್ವಾಮಿ ಪ್ರೇಮವೆಂಬ ಪರುಷವೊಂದೆ ಸಾಕೊ ಸೀತಾನಾಥ
ಕಾಮಿಸ್ಥಲವು ದೈವ ಭಜಿಸಲಿನ್ಯಾತಕೊ ಸೀತಾನಾಥ ಶ್ರೀ
ರಾಮ ನಿಮ್ಮಯ ನಿಜ ಧ್ಯಾನವೊಂದೆ ಬೇಕೊ ಸೀತಾನಾಥ ॥೩॥

--✿✿✿✿✿--

೨೮೭
ನೀನೆ ದಯಾಸಂಪನ್ನನೆಲೊ
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ನೀನೆ ದಯಾಸಂಪನ್ನನೆಲೊ
ದೀನನಾಥ ಜಾಹ್ನವೀ ತಾತ ॥ಪ॥

ಕಮಲಕ್ಕಿಂತ ಮೃದು ನಿನ್ನ
ವಿಮಲಹೃದಯಭಕ್ತಿ ಜನಕೆ
ನಮಿಪೆ ನಿನ್ನ ಪಾದಕಮಲ
ವಿಮಲಸುಖದ ಪಥದೋರೋ ॥೧॥

ಕೊಟ್ಟು ಎನಗೆ ಶಿಷ್ಟಸಂಗ
ಇಟ್ಟು ನಿನ್ನ ಭಜನಾನಂದ
ನಿಷ್ಠ ನಿನ್ನ ಭಕುತಿಪಾದ
ದಿಟ್ಟದಾಸನೆನಿಸಿ ಕಾಯೋ ॥೨॥

ರಾಕ್ಷಸಾದಿ ಎನ್ನ ಮನದ
ಪೇಕ್ಷ ಪೂರ್ತಿನೋಡಿ ಮೊರೆವ
ಮೋಕ್ಷಪುರಿಗೆ ತಲ್ಪಿಸೆನ್ನ
ಮೋಕ್ಷದಾಯಕ ಶ್ರೀರಾಮ ಪ್ರಭೋ ॥೩॥

--✿✿✿✿✿--

೨೮೮
ನೀನೆ ಭಕುತಾಭಿಮಾನಿ ಕರುಣಿ
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ನೀನೆ ಭಕುತಾಭಿಮಾನಿ ಕರುಣಿ ॥ಪ॥

ಮರೆಬಿದ್ದ ಭಕುತರ ಪೊರೆಯಲು ತವಸಮ
ಕರುಣಿದೇವರ ಕಾಣೆ ಧರೆ ಎರಡೇಳರೊಳು ॥೧॥

ಶಿಲೆಯನು ಪೆಣ್ಣೆನಿಸಿ ಕುಲದೊಳು ಕಲೆಸಿದಿ
ಸಲಹಿದಿ ಗಜನ ಮಹವಿಲಸಿತಮಹಿಮ ಪ್ರಭು ॥೨॥

ಮೊರೆಯಿಟ್ಟು ಸ್ಮರಿಸುವ ಚರಣದಾಸನ ಆಸೆ
ಕರುಣದಿಂ ಪೂರೈಸು ಪರತರ ಶ್ರೀರಾಮ ॥೩॥

--✿✿✿✿✿--

೨೮೯
ಭಾಗವತರ ಭಾಗ್ಯನಿಧಿಯೆ ಭೋಗಿಶಯನ

(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ಭಾಗವತರ ಭಾಗ್ಯನಿಧಿಯೆ ಭೋಗಿಶಯನ ಭೋ ಶ್ರೀರಾಮ ॥ಪ॥

ವೇದಾಗಮಕೆ ಸಿಲುಕದಂಥ ನಾದಬ್ರಹ್ಮಾಯೋಧ್ಯಾ ರಾಮ
ಸಾಧುಜನಸಂಪ್ರೀತ ಭವರೋಗ್ವೈದ್ಯ ಸಾಧನ
ಸಾಧ್ಯ ರಾಮ ॥೧॥

ರಾಧಾಕೃಷ್ಣಾಗಾಧಮಹಿಮ ಭೇದ ಹರಿಸು ಬೋಧ ರಾಮ
ಪೋದ ವೇದ ಸಂಪಾದಿಸಿದನೆ ನಾದಪ್ರಿಯ
ಮಹದಾದಿ ರಾಮ ॥೨॥

ಹರಿವಿರಿಂಚಾದ್ಯಖಿಲಸುರರ ಪರರ ಕಂಟಕದೂರ ರಾಮ
ಪರಕೆಪರಮ ಪರಮಪುರುಷ ಸರುವ
ಜಗದಾಧಾರ ರಾಮ ॥೩॥

ಹತ್ತು ಅವತಾರೆತ್ತಿ ಭೂಭಾರ್ಹೊತ್ತು ಇಳುಹಿದ ಸತ್ಯ ರಾಮ
ಮರ್ತ್ಯದ ಮಹ ಕೃತ್ರಿಮರ ಮುರಿದೊತ್ತಿದೈ
ಜಗತ್ಕರ್ಮ್ಮ ರಾಮ ॥೪॥

ದಾಸಜನರಭಿಲಾಷೆಯನು ಪೂರೈಸಲೋಸುಗ ಈಶ ರಾಮ
ಶೇಷಾಚಲನಿವಾಸನಾದ ದಾಸಗಣ
ಸಂತೋಷ ರಾಮ ॥೫॥

ಅಸಮ ಪಾದಕುಸುಮಗಳನಿಟ್ಟೊಸುಧೆ ವೈಕುಂಠೆನಿಸಿ ರಾಮ
ಪಸರಿಸಿದ ಮಹ ಅಸಮಮಹಿಮೆಗಳ ವಸುಧೆ
ಜನರಿಂಗೊಸೆದು ರಾಮ ॥೬॥

ಬ್ರಹ್ಮಾದಿಗಳ ಹಮ್ಮನಳಿದ ಕರ್ಮಚರ ಪರಬ್ರಹ್ಮ ರಾಮ
ಸುಮ್ಮನಲ್ಲ ತವ ಮರ್ಮ ತಿಳಿಯಲು ಬ್ರಹ್ಮನಯ್ಯ
ಸುಖಧಾಮ ರಾಮ ॥೭॥

ಮಾತೆ ನೀನೆ ತಾತ ನೀನೆ ನಾಥ ಬಂಧು ದಾತರಾಮ
ಪ್ರೀತಿಬಂಧು ವಿಖ್ಯಾತ ನೀನೆ ನೀತಿಬೋಧ
ಗುರುನಾಥ ರಾಮ ॥೮॥

ತತ್ವದರ್ಥ ಉತ್ತರಿಸೆನ್ನ ಕಟ್ಟುಮಾಡೊ ಶಿಷ್ಟರಾಮ
ಮರ್ತ್ಯದ ಸುಖ ವ್ಯರ್ಥವೆನಿಸಿ ಗುರ್ತುತೋರು
ತವಮೂರ್ತಿ ರಾಮ ॥೯॥

ಹುಟ್ಟಿಬರುವ ಕಷ್ಟದ್ವಾದಿ ಕಟ್ಟುಮಾಡೊ ಶಿಷ್ಟರಾಮ
ನಿಷ್ಠೆಯಿಂ ನಿಮ್ಮ ಮುಟ್ಟಿ ಭಜಿಪ ಪಟ್ಟಗಟ್ಟೆಲೊ
ದಿಟ್ಟ ರಾಮ ॥೧೦॥

ದಾಸಜನರ ವಾಸದಿರಿಸೊ ಕೇಶವ ಜಗದೀಶ ರಾಮ
ದೋಷರಾಶಿ ನಾಶಗೈದು ಪೋಷಿಸೆನ್ನ
ನುಮೇಶ ರಾಮ ॥೧೧॥

ವೇದ ವಿದ್ಯದ್ವಾದಿಸಾಧನ ಬೋಧಿಸೆನಗ್ವಿನೋದ ರಾಮ
ಪಾದಭಕ್ತಿ ಮೋದದಿತ್ತು ಭವಬಾಧೆಯಳಿ
ಸುಖಸ್ವಾದ ರಾಮ ॥೧೨॥

ಮಾಯವೆನಿಪ ಕಾಯಗುಣ ಸಮುದಾಯಕಳಿ ಮಮ
ಜೀವ ರಾಮಬಾಯಿ ಬಿಡಿಪ ಹೇಯಸಂಸಾರ ನೋವು
ಬಿಡಿಸೆನ್ನಯ ರಾಮ ॥೧೩॥

ಮತ್ತೆ ಮತ್ತೆ ಪೃಥ್ವಿ ಮೇಲೆ ಸತ್ತು ಹುಟ್ಟಿ ಬೇಸತ್ತೆ ರಾಮ
ಕರ್ತು ನಿನ್ನ ಗುರ್ತು ಅರಿಯದನರ್ಥವಾದೆ
ನಾತ್ಮ ರಾಮ ||೧೪||

ಆಸೆಯೆಂಬ ಪಾಶದಿಂದ ಘಾಸಿಯಾದೆ ಭವನಾಶ ರಾಮ
ದೋಷದೂರನ್ನ ಕ್ಲೇಶಗಳನು ನಾಶಿಸೈ
ದಯಭೂಷ ರಾಮ ||೧೫||

ಅರಿದು ಅರಿದು ಉರಿವದೀಪದೆರಗುವ ಹುಳದಿರವು ರಾಮ
ಧರೆಯ ಸುಖಕೆ ಮರುಳನಾಗಿ ಮರಣಹೊಂದುವೆ
ಸಿರಿಯ ರಾಮ ||೧೬||

ಮರೆದು ನಾನು ಧರೆಗೆ ಬಿದ್ದು ದುರಿತದೊಳಗೆ ಬೆರೆದೆ ರಾಮ
ಮರವೆ ಹರಿಸಿ ಅರಿವು ನಿಲಿಸಿ ಕರುಣದಿಂದ
ಪೊರೆಯೊ ರಾಮ ||೧೭||

ಕಂದನ ಕೈ ದಯದಿಂದ ಪಿಡಿದಾನಂದಕರುಣಿಸುತ
ತಂದೆ ರಾಮಮಂದಮತಿತನ ಚಿಂದಿಸೀಭವಬಂಧನವ
ಬಯಲ್ಗರಿಸು ರಾಮ ||೧೮||

ಮಾನ ಅಭಿಮಾನ ನಿನ್ನದು ಧ್ಯಾನಿಪರ ಸುರಧೇನು ರಾಮ
ಜ್ಞಾನವಿತ್ತು ಮಾನದಿಂದ ನೀನೆ ಪೊರೆ
ಜಗತ್ರಾಣ ರಾಮ ||೧೯||

ಭಿನ್ನವಿಲ್ಲದೆ ನಿನ್ನ ನಂಬಿ ಧನ್ಯನಾದೆನಿನ್ನು ರಾಮ
ಎನ್ನ ಮನಸಿಗಿನ್ನು ಸಂತಸವನ್ನು ಕೊಡು
ಪಾವನ್ನ ರಾಮ ||೨೦||

ಭೃತ್ಯನ ಮಹ ಚಿತ್ತಭ್ರಮೆ ಮುರಿದೊತ್ತಿ ಕರಪಿಡಿದೆತ್ತು ರಾಮ
ಭಕ್ತಿಯುಕ್ತಿ ಮುಕ್ತಿ ಸುಖವನಿತ್ತು ಪೊರೆ
ಗುರುದತ್ತ ರಾಮ ||೨೧||

ನಿಖಿಲವ್ಯಾಪಕ ಅಖಿಲರಕ್ಷಕ ಸಕಲಬಲ ನೀನೇಕ ರಾಮ
ಮುಕುತಿಸಂಪದ ಸಿದ್ಧಿ ನೀನೆ ಭಕುತಪ್ರಿಯ
ಲೋಕೈಕ ರಾಮ ॥೨೨॥

ಭಿನ್ನವಿಲ್ಲದೆ ನಿನ್ನ ನಾಮವನ್ನು ಹೊಗಳುವರಿನ್ನು ರಾಮ
ಮಾನ್ಯರಾಗನನ್ಯ ಸುಖಸಂಪನ್ನರೆನಿಪ
ನನ್ಯ ರಾಮ ॥೨೩॥

ಉದಯದೆದ್ದು ಪದುಳದೀನಾಮ ಓದಿಕೇಳಲು ಸದಾ ರಾಮ
ಸದಮಲ ಸಂಪದನಿತ್ತು ಮುದದಿ ಕಾಯುವ
ಸದಯ ರಾಮ ॥೨೪॥

ನಿತ್ಯ ನಿತ್ಯ ಭಕ್ತಿಯಿಂ ಬರೆಯುತ್ತ ಪಠಿಸಲು ಕರ್ತುರಾಮ
ಮುಕ್ತಿಯೆಂಬ ಸಂಪತ್ತನಿತ್ತು ಬಿಡದ್ಹತ್ತಿರಿರುವನು
ಸತ್ಯ ರಾಮ ॥೨೫॥

--✿✿✿✿✿--

೨೯೦
ರಾಮ ನಿಮ್ಮನಾಮಧ್ಯಾನ
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ರಾಮ ನಿಮ್ಮ ನಾಮಧ್ಯಾನ
ಪಾಮರನ ಜಿಹ್ವೆ ಮೇಲೆ ನಿಲಿಸು ॥ಪ॥

ಜಗದಭಿಮಾನ ಬಿಡಿಸಿ
ಸುಗುಣ ಸಂತಸಂಗ ಪಾಲಿಸಿ
ಸುಗುಣಾಂತರಂಗ ನಿನ್ನ
ಸಗುಣ ಪೊಗಳಿಸೆನ್ನ ಮುಖದಿ ॥೧॥

ಮದಮತ್ಸರಗಳನು ಬಿಡಿಸಿ
ಸದಮಲ ಜ್ಞಾನಾನಂದದಿರಿಸಿ

ಸದಮಲಾತ್ಮ ನಿಮ್ಮ ಮೂರ್ತಿ
ಸದಾಯೆನ್ನ ನೇತ್ರದೊಳ್ನಿಲಿಸು ॥೨॥

ಕಾಮಿತಂಗಳ ಕಡೆಹಾಯ್ಸಿ
ಭೂಮಿ ಸೀಮೆ ಮೋಹ ತೊರೆಸಿ
ಸ್ವಾಮಿ ಮಮಪ್ರಾಣದಾರ್ಯ ಶ್ರೀ
ರಾಮದಾಸನೆನಿಸು ಒಲಿದು ॥೩॥

--✿✿✿✿✿--

೨೯೧
ರಾಮರಾಮ ಹರಿರಾಮ ರಾಮಸೀತಾ
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ರಾಮರಾಮ ಹರಿರಾಮ ರಾಮಸೀತಾ
ರಾಮರಾಮ ನುತಪ್ರೇಮ ರಾಮ ಓಂ ॥ಪ॥

ರಾಮ ರಾಮ ಪುಣ್ಯನಾಮ ಪಾಪವಿ
ರಾಮ ಕುಜನಕುಲ ಭೀಮ ರಾಮ ಓಂ ॥ಅ.ಪ॥

ಶ್ಯಾಮಸುಂದರ ಸುಖಧಾಮ ದಾಮೋದರ
ಕಾಮಿತದಾಯಕ ಸ್ವಾಮಿ ಶ್ರೀರಾಮ ಓಂ
ಸೋಮಕಸಂಹರ ಕಾಮಜನಕ ತ್ರೈ
ಭೂಮಿಪಾಲಯ ನಿಸ್ಸೀಮರಾಮ ಓಂ ॥೧॥

ಕಡಲಮಥನ ಪಾಲ್ಗಡಲನಿಲಯ ಮಹ
ಕಡಲಬಂಧಕ ದಯಗಡಲ ರಾಮ ಓಂ
ಜಡಜನಾಭ ಭವತೊಡರು ನಿವಾರಣ
ಕಡಲಸುತೆಯ ಪ್ರಾಣದೊಡೆಯ ರಾಮ ಓಂ ॥೨॥

ದೋಷವಿನಾಶನ ಶೇಷಶಯನ ದಯ
ಭೂಷಣ ಕೇಶವ ರಾಮರಾಮ ಓಂ

ಭಾಸುರಕೋಟಿಪ್ರಕಾಶ ಅಪ್ರಮೇಯ
ಸಾಸಿರನಾಮಕ ರಾಮ ರಾಮ ಓಂವ ॥೩॥

ಭಕ್ತಾಂತರ್ಗತ ಭಕ್ತವತ್ಸಲ
ನಿತ್ಯ ನಿರ್ಮಲಾತ್ಮ ರಾಮ ರಾಮ ಓಂ
ಸತ್ಯ ಸರ್ವೋತ್ತಮ ಮೃತ್ಯುವಿಜಯ ನಿಜ
ಸತ್ಯಸಂಕುಲಧಾಮ ರಾಮ ರಾಮ ಓಂ ॥೪॥

ಜಾನಕೀರಮಣ ದೀನಪಾಲನ
ದಾನವಾಂತಕ ಹರಿ ರಾಮ ಓಂ
ಧ್ಯಾನದಾಯಕ ಜಗತ್ರಾಣ ಪ್ರವೀಣ ಮಮ
ಪ್ರಾಣೇಶ ಶ್ರೀರಾಮ ನಮ: ನಮ: ಓಂ ॥೫॥

--✿✿✿✿✿--

೨೯೨
ರಾಮಾಯನಮಃ ಎನ್ನೋ ರಾಮಾಯನಮಃ

(ಶ್ರೀರಾಮ / ಬಡೇರಾಮದಾಸ / ೧೮೮೨ – ೧೯೪೦)

ರಾಮಯನಮ: ಎನ್ನೋ ರಾಮಾಯನಮ:
ನಾಮವರಿತದ್ದೇ ರಾಮಾಯನಮ: ॥ಪ॥

ಬಂದದ್ದು ಬಾರದ್ದು ರಾಮಾಯನಮ:
ತಂದದ್ದು ತಾರದ್ದು ರಾಮಾಯನಮ:
ಅಂದದ್ದು ಆಡದ್ದು ರಾಮಾಯನಮ:
ಮಿಂದದ್ದು ಮೀಯದ್ದು ರಾಮಾಯನಮ: ॥೧॥

ಉಂಡದ್ದು ಉಟ್ಟದ್ದು ರಾಮಾಯನಮ:
ಕೊಂಡದ್ದು ಕೊಟ್ಟದ್ದು ರಾಮಾಯನಮ:
ಕಂಡದ್ದು ಕಾಣದ್ದು ರಾಮಾಯನಮ:
ಬಂಡಾದದ್ದಾಗದ್ದು ರಾಮಾಯನಮ: ॥೨॥

ಇದ್ದದ್ದು ಇಲ್ಲದ್ದು ರಾಮಾಯನಮ:
ಮೆದ್ದದ್ದು ಮೆಲ್ಲದ್ದು ರಾಮಾಯನಮ:
ಬಿದ್ದದ್ದು ಬೀಳದ್ದು ರಾಮಾಯನಮ:
ಕದ್ದದ್ದು ಕದಿಯದ್ದು ರಾಮಾಯನಮ: ॥೩॥

ಬಿತ್ತಿದ್ದು ಬೆಳೆದದ್ದು ರಾಮಾಯನಮ:
ಎತ್ತಿದ್ದು ಎತ್ತದ್ದು ರಾಮಾಯನಮ:
ಸುತ್ತಿದ್ದು ಮುತ್ತಿದ್ದು ರಾಮಾಯನಮ:
ಅತ್ತದ್ದು ಹೊತ್ತದ್ದು ರಾಮಾಯನಮ: ॥೪॥

ಭಕ್ತಿ ಭಾವನೆಯೆಲ್ಲ ರಾಮಾಯನಮ:
ಯುಕ್ತಿ ಯೋಚನೆಯೆಲ್ಲ ರಾಮಾಯನಮ:
ಯುಕ್ತಾಯುಕ್ತವು ರಾಮಾಯನಮ:
ಮುಕ್ತಿ ಸಾಧ್ಯ ಶ್ರೀ ರಾಮಾಯನಮ: ॥೫॥

--✿✿✿✿✿--

೨೯೩
ರಾಮಾಯನಮಃ ರಾಮ ಸದಾ ಓಂ

(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ರಾಮಾಯನಮ: ರಾಮ ಸದಾ ಓಂ
ರಾಮಾಯನಮ: ರಾಮ ॥ಪ॥

ವೇದಾದಿರಾಮ
ವೇದಾಂತರಾಮ
ವೇದಾಂತ ವೇದಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧॥

ವೇದಮಯ ರಾಮ
ವೇದ ನಿರ್ಮಾಯ ರಾಮ

ವೇದ ವೇದಾತೀತಕಾದಿ ರಾಮ ಮಹ
ದಾದಿಗಾದಿರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೨॥

ನಾದಯುತಾದಿ ರಾಮ
ನಾದರಹಿತಾದಿ ರಾಮ
ನಾದಾತೀತಾದ್ಯನಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೩॥

ಆದಿಗಾದಿರಾಮ ಅ
ನಾದಿಗಾದಿರಾಮ
ಆದಿ ಅನಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೪॥

ಸತ್ಪಥದಾದಿರಾಮ ಸ
ಚ್ಚಿತ್ತದಾದಿರಾಮ
ಉತ್ಪತ್ತಿ ಸ್ಥಿತಿಲಯಕಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೫॥

ಅರ್ಘ್ಯ ಅರ್ಘ್ಯಾದಿ ರಾಮ
ಸ್ವರ್ಗಭೋಗಾದಿ ರಾಮ
ದೀರ್ಘಕ್ಕೆ ದೀರ್ಘಾದಿಗಾದಿ ರಾಮ ಮಹ
ದಾದಿಗಾಗಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೬॥

ಜಪತಪದಾದಿ ರಾಮ
ಗುಪಿತ ಗುಪ್ತಾದಿ ರಾಮ

ಅಪರೋಕ್ಷ ಪರೋಕ್ಷಾದಿಗಾದಿರಾಮ ಮಹ
ದಾವಿಗಾವಿ ರಾಮ ಸದಾ ಓಂ ಮಹ
ಹಾದಿಗಾದಿ ರಾಮ ॥೭॥

ಮಂತ್ರಮಯಾದಿ ರಾಮ
ಮಂತ್ರ ನಿರ್ಮಾಯ ರಾಮ
ಮಂತ್ರ ತಂತ್ರಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೮॥

ಮಾಯಮಯಾದಿ ರಾಮ
ಮಾಯ ನಿರ್ಮಾಯ ರಾಮ
ಮಾಯ ಮಾಯಾದಿಗಾಗಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೯॥

ಕಾಲಕಾಲದಿ ರಾಮ
ಕಾಲಮೂಲಾದಿ ರಾಮ
ಕಾಲಕಾಲನಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೦॥

ದಶರಥರಾಮ
ದಶರಥಗಾದಿರಾಮ
ದಶವಿಧೌತಾರದಾದಿಗಾದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೧॥

ದಿವ್ಯಮಹಿಮಾದಿ ರಾಮ
ಭವ್ಯಚರಿತಾದಿ ರಾಮ

ದಿವ್ಯದೇವರ ದೇವರಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾಗಿ ರಾಮ ॥೧೨॥

ಬ್ರಹ್ಮನೆಯಾದಿ ರಾಮ
ನಿರ್ಮಲಾತ್ಮಾದಿ ರಾಮ
ಬ್ರಹ್ಮ ಬ್ರಹ್ಮಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೩॥

ಸತ್ಯ ಸತ್ಯಾದಿ ರಾಮ
ನಿತ್ಯ ನಿತ್ಯಾದಿ ರಾಮ
ತತ್ವ ಪಂಚದಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೪॥

ಭುವಿತ್ರಯದಾದಿ ರಾಮ
ಭವಭವದಾದಿ ರಾಮ
ದಿವನಿಶಿಗಳಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾಗಿ ರಾಮ ॥೧೫॥

ಬೋಧಾದಿಮಯ ರಾಮ
ಬೋಧಾದಿಗಾದಿ ರಾಮ ಸ
ಸಾಧನ ಸಿದ್ಧಿಯಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾಗಿ ರಾಮ ॥೧೬॥

ನಿರುಪಮ ರಾಮ
ನಿರ್ನಾಮ ರಾಮ

ನಿರ್ಗುಣ ನಿರಂಜನಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೭॥

ಭಕ್ತಾಭಿರಾಮ
ಮುಕ್ತೀಶ ರಾಮ
ನಿತ್ಯ ನಿರ್ಮಲ ಜಗದಾದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೮॥

ಚಿನುಮಯ ರಾಮ
ಚಿದ್ರೂಪ ರಾಮ
ಜನನಮರಣಹರಣಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೧೯॥

ರಮಾಧವ ರಾಮ
ಕ್ಷಮೆಯುತ ರಾಮ
ಸುಮಾನಸ ಭಕ್ತಾಧೀನ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೨೦॥

ಜಯ ಜಯ ರಾಮ
ಜಯ ಶ್ರೀರಾಮ
ಜಯವೆಂದು ನೂರೆಂಟು ಪೊಗಳಲಿ ನಾಮ
ದಯದೀಯ್ವಮುಕ್ತಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ॥೨೧॥

--✿✿✿✿✿--

೨೯೪
ರತುನ ಸಿಕ್ಕಿದೆ ತಮ್ಮ ಇದು ಬಹುಜತನೆಲೋ
(ಶ್ರೀರಾಮ / ಬಡೇರಾಮದಾಸ / ೧೮೮೨ - ೧೯೪೦)

ರತುನ ಸಿಕ್ಕಿದೆ ತಮ್ಮ ಇದುಬಹು
ಜತನೆಲೋ ನಿಸ್ಸೀಮ ರತುನ ಸಿಕ್ಕಿದೆ ॥ಪ॥

ನಿನ್ನ ಸುಕೃತದ ಫಲದಿಂದ
ಪತಿತ ಪಾವನ ಸಿರಿಪತಿ ವಿಮಲ ನಾಮ ॥ಅ.ಪ॥

ದುರಿತ ದಾರಿದ್ರ್ಯವಿಲ್ಲದ ಈ ರತ್ನದಿಂ
ಜರಾಮರಣಂಟಿಲ್ಲ
ನರಹರಿ ವರಪಾದ ಶರಣರು ಪರಕ್ಕೆ
ಪರಮ ಗೌಪ್ಯದಿಂದ ಶೋಧಿಸುತಿರುವಂಥ ॥೧॥

ತಾಪತ್ರಯಗಳಿಲ್ಲ ಈ ರತ್ನದಿಂ
ಪಾಪ- ಶಾಪವಿಲ್ಲ
ಪಾಪಿ ಯಮದೂತರ ಲೋಪಗೈದ ಭಯ
ಅಪಾರ ಪರಲೋಕ ಸೋಪಾನಕ್ಹಚ್ಚುವ ॥೨॥

ಧರ್ಮಕೆ ಕೊಡುನದರ ಈ ರತ್ನದ
ಮರ್ಮ ತಿಳಿಯೆ ಚದುರ
ಬ್ರಹ್ಮ ಬ್ರಹ್ಮಾದಿಗಳೊಮ್ಮನದ್ಹೊಗಳುತ
ನಿರ್ಮಲಾಗುನ ಪರಬ್ರಹ್ಮ ಶ್ರೀರಾಮನೆಂಬ ॥೩॥

--✿✿✿✿✿--

೨೯೫
ಏನು ಮಾಡಲಿ ಎನ್ನ ರೋಗಕೆ ರಾಮ
(ಕವಿ ಪರಮದೇವ / ಕೋಣೆಲಕ್ಷ್ಮೀನಾರಾಯಣ / ೧೭೨೧ - ೧೮೦೫)

ಏನ ಮಾಡಲಿ ಎನ್ನ ರೋಗಕೆ ರಾಮ
ಧ್ಯಾನದಮೃತವುಂಡು ಪೋಗಬೇಕಲ್ಲದೆ ॥ಪ॥

ಗೂಡಿನೊಳಗೆ ಜರೆ ಮುತ್ತಿತು ಅದಕೆ ಬಲ
ಗೂಡಿ ರೋಗವು ಮತ್ತೆ ಪುಟ್ಟಿತು
ಕಾಡಿನೌಷಧಿಯಕೊಂಡು ತೀರಿತು ನಿತ್ಯ
ಮಾಡುವ ಜಪತಪ ನಿಂತಿತು ॥೧॥

ಯಾರಾರೇನೆಂದುದೆಲ್ಲವ ಮಾಡಿತು ಅದು
ಸಾರ ನಿಸ್ಸಾರವಾಗಿ ಹೋಯಿತು
ಮಾರುದೂರನಡೆಯೆಕಾಲುಬತ್ತಿತು
ಶರೀರದೊಳಗೆ ಕ್ಷೀಣವಾಯಿತು ॥೨॥

ವಾಂತಿ ಭ್ರಾಂತಿಗಳೆರಡಾಯಿತು ರೋಗ
ಶಾಂತಿಯಿಲ್ಲದೆ ಚಿಂತೆ ಬಂದಿತು ಮುಖದ
ಕಾಂತಿಕಮಲಕುಂದಿತು ಕಾಲ
ಬಂತೊ ಎಂಬಂತೆ ಮನವಾಯಿತು ॥೩॥

ಹಿಂದೆ ಮಾಡಿದ ಪಾಪ ಬಂದಿತು ಈಗ
ಳೊಂದುರುಪಾಗಿ ಎನ್ನ ಕಾಡಿತು ಎಂದು
ಮನದಿಹಂಬಲವಾಯಿತು ಇನ್ನು
ಎಂದನೆಂದರೆ ದನಿ ಕುಂದಿತು ॥೪॥

ಕಾಮನಯ್ಯನ ಚಿಂತೆ ಬಂದಿತು ರೋಗ
ನಾಮಸ್ಮರಣೆಯಿಂದ ಹೋಯಿತು
ಕ್ಷೇಮ ಕುಶಲಕೆಲ್ಲಭೀಮನ ಕೋಣೆಲಕ್ಷ್ಮೀ
ರಮಣನಪ್ಪಣೆಯಿದ್ದಂತಾಯಿತು ॥೫॥

--✿✿✿✿✿--

೨೯೬
ಕಾಕುತ್ಸ್ಥ ರಘುನಾಥ ಶ್ರೀರಾಮಚಂದ್ರ

(ಚೆನ್ನಕೇಶವ / ಕರ್ಕಿ ಕೇಶವದಾಸ / ೧೬೦೦ – ೧೬೭೫)

ಕಾಕುತ್ಸ್ಥ ರಘುನಾಥ ಶ್ರೀರಾಮಚಂದ್ರ
ಭೂಕಾಂತೆ ಸಿರಿವಂತೆ ಜನಕಾತ್ಮಜೇಂದ್ರ ॥ಪ॥

ಪಾಕಶಾಸನ ಕಾಯ್ದ ದಶರಥ ಕಂದ
ಲೋಕನಾಯಕ ಸ್ವಾಮಿ ಭಕ್ತರಾನಂದಾ ॥ಅ.ಪ॥

ನಂಬಿದೆ ಹರಿ ನಿನ್ನ ಚರಣಯುಗ್ಮಗಳ
ನಂಬಿದ ಶ್ರೀ ಹರಿ ದಿವ್ಯರೂಪಗಳಾ
ನಂಬಿದೆ ನಿನ್ನ ಹರಿಲೀಲೆ ಮಹಿಮಾ ಕೀರ್ತಿಗಳ
ನಂಬಿದೆ ಪಾಲಿಸೋ ತರಿದು ಕಷ್ಟಗಳ ॥೧॥

ಸ್ಮರಿಸುವೆ ಭಜಿಸುವೆ ಶುಭನಾಮಗಳ
ಪರಿಪರಿ ಪೊಗಳುವೆ ನಮಿಸುವೆ ಹರಿಯ
ನಿರುತದಿ ಪಾಡುವೆ ನಿನ್ನ ಸ್ತೋತ್ರಗಳ
ವಿರಚಿಸಿ ಮಾಡುವೆ ಹರಿ ಕೀರ್ತನೆಗಳ ॥೨॥

ಭಕ್ತನ ಲಾಲಿಸೋ ದಾನವಾಂತಕನೇ
ಭಕ್ತಿಯ ಪಾಹಿಸೂಕರರೂಪಧರನೇ
ಭಕ್ತನ ಪಾಲಿಸೋ ದೇವನಿರ್ಮಲನೇ
ಮುಕ್ತಿಯ ಪಾಲಿಸೋ ಚೆನ್ನಕೇಶವನೇ ॥೩॥

--✿✿✿✿✿--

೨೯೭
ರಾಮಕೃಪಾಕರ ರಾಮದಯಾಪರ

(ಚೆನ್ನಕೇಶವ / ಕರ್ಕಿ ಕೇಶವದಾಸ / ೧೯೦೦ - ೧೯೭೫)

ರಾಮಕೃಪಾಕರ ರಾಮ ದಯಾಪರ
ರಾಮದಿವಾಕರ ರಾಮ ರಾಮ ॥ಪ॥

ದಶರಥನಂದನ ಋಷಿಕುಲ ಪಾವನ
ದಶಶಿರಭಂಜನ ರಾಮ ರಾಮ ರಾಮ ॥೧॥

ಜನಕನಜೀವನ ಮುನಿಗಣಪಾಲನ
ಧನುಜನಿವಾರಣ ರಾಮ ರಾಮ ರಾಮ ॥೨॥

ವಾಲಿಯಮರ್ದನ ವಾಲಿಜರಕ್ಷಣ
ಬಾಲಸುಪೋಷಣ ರಾಮ ರಾಮರಾಮ ॥೩॥

--✿✿✿✿✿--

೨೯೮
ರಾಮ ರಾಮಯೆಂದು ನೇಮದಿಂದಲಿ

(ಚೆನ್ನಕೇಶವ / ಕರ್ಕಿ ಕೇಶವದಾಸ / ೧೯೦೦ - ೧೯೭೫)

ರಾಮ ರಾಮಯೆಂದು ನೇಮದಿಂದಲಿ ಪಾಡಿ
ಪ್ರೇಮದಿ ನಮಿಸಿರಿ ಕಾಮನ ಪಿತನ ॥ಪ॥

ಭಾಮೆಗಕ್ಷಯವಿತ್ತು ಪ್ರೇಮದಿ ಸಲಹಿದ
ನಾಮವ ಭಜಿಸಿ ರಾಮನ ಪಾದ ಸೇರಿ ॥೧॥

ತನುಮನ ಧನದಿಂದ ಚನ್ನಕೇಶವನನ್ನು
ಅನುದಿನ ಭಜಿಸಿ ಚಿನ್ಮಯಪಾದ ಸೇರಿ ॥೨॥

ವರದೂರ್ವಾಪುರದಲ್ಲಿ ನಿರುತನಾಗಿದ್ದು ತಾ
ಕರುಣದಿ ಭಕ್ತರ ಮೊರೆವ ಕೇಶವನ ॥೩॥

--✿✿✿✿✿--

೨೯೯
ರಾಮವಂದಿಪೆ ಗುಣಧಾಮಾ

(ಚೆನ್ನಕೇಶವ / ಕರ್ಕಿ ಕೇಶವದಾಸ / ೧೯೦೦ - ೧೯೭೫)

ರಾಮವಂದಿಪೆ ಗುಣ
ಧಾಮ ವಂದಿಪೆ ಘನ
ಶ್ಯಾಮವಂದಿಪೆ ರಘುರಾಮ ರಾಮ ರಾಮ ॥ಪ॥

ಬೋಧಪ್ರದಾಯಕ
ಸಾಧುಜನಾವಳಿ
ವೇದಾಂಗನುತ ರಘುರಾಮ ರಾಮ ರಾಮ ॥೧॥

ಇಂದ್ರಾದಿನುತ ಗುಣ
ಸಾಂದ್ರಾನತಾವಳಿ
ಮಂದಾರಧರ ಹರಿರಾಮ ರಾಮ ರಾಮ ॥೨॥

ದಶರಥನಂದನ
ದಶಶಿರಭಂಜನ
ಶಶಿಕಲರಂಜನ ರಾಮ ರಾಮ ರಾಮ ॥೩॥

ಸುಜನರ ಪಾಲನೆ
ಕುಜನರ ಕಾಲನೆ
ಭಜಕರ ಲೋಲನೆ ರಾಮ ರಾಮ ರಾಮ ॥೪॥

ಅಂಬುಜನಯನನೆ
ಅಬುಜೆರಮಣನೆ
ನಂಬಿದೆ ತಾತನೆ ರಾಮ ರಾಮ ರಾಮ ॥೫॥

ಪನ್ನಗಶಯನನೆ
ಚಿನ್ಮಯರೂಪನೆ
ಚನ್ನಕೇಶವ ರಾಮ ರಾಮ ರಾಮ ॥೬॥

--✿✿✿✿✿--

೩೦೦
ರಾಮನಾಮವ ಪ್ರೇಮದಿ ಭಜಿಸಲು

(ಚೆನ್ನಕೇಶವ / ಕರ್ಕಿ ಕೇಶವದಾಸ / ೧೯೦೦ - ೧೯೭೫)

ರಾಮನ ನಾಮವ ಪ್ರೇಮದಿ ಭಜಿಸಲು
ರಾಮನು ವಲಿಯುವಾ ಬಿಡದೆ ಪಾಲಿಸುವಾ ॥ಪ॥

ಕಾಮಿತ ವರಗಳನೀಯುತ ಭಜಕರ
ಸ್ವಾಮಿಯು ವಲಿದೆಮ್ಮ ನಿರುತ ಪಾಲಿಸುವಾ ॥ಅ.ಪ॥

ತರಳರಮಾತಿಗೆ ಸೈಯೆಂದು ನುಡಿಯುತ್ತಾ
ಪರಮಸಾಮ್ರಾಜ್ಯದ ಪದವಿಯ ಕೊಡುತ್ತಾ
ಸರಳರ ಹೃದಯವನೀಕ್ಷಿಸಿ ಜವದೊಳು
ಕರೆದು ಸಾಯುಜ್ಯದ ಪದವಿಯ ಕೊಡುವಾ ॥೧॥

ದುರುಳರ ಸುಖಗಳಿಗಂತಕನಾಗುತ
ಶರಣರ ಪಿಡಿದು ಶಿಷ್ಟರನು ಕಾಯುತ್ತ
ಧರೆಯೊಳು ದುಷ್ಟರು ಶಿಷ್ಟರ ದಣಿಸಲು
ಭರದಿಂದ ಸುಜನರ ಕಷ್ಟವ ತರಿವಾ ॥೨॥

ಕೌಸಲ್ಯೆಗರ್ಭದಿ ಬಂದ ಶ್ರೀಹರಿ ತಾನು
ವಾಸುಕಿ ಭಾರವನಿಳುಹಲಿಕ್ಕೆ
ವಾಸಮಾಡುವನೀಗ ವರ ದೂರ್ವಾಪುರದಲ್ಲಿ
ದಾಸನ ಸಲಹುವ ಕೇಶವನೆಂಬ ॥೩॥

--✿✿✿✿✿--

೩೦೧
ಶ್ರೀರಾಮ ರಘುರಾಮ ಭಾರ್ಗವ ರಾಮ
(ಚೆನ್ನಕೇಶವ / ಕರ್ಕಿ ಕೇಶವದಾಸ / ೧೯೦೦ - ೧೯೭೫)

ಶ್ರೀ ರಾಮ ರಘುರಾಮ ಭಾರ್ಗವರಾಮಾ
ವಿರಚಿತಕಾಮ ಮೇಘಶ್ಯಾಮ ರಾಮಾ ರಾಮಾ ॥ಪ॥

ದಶರಥರಾಮ ಶ್ರೀರವಿಕುಲಸೋಮಾ
ದಶರೂಪಧರ ರಾಮ ಕೌಸಲ್ಯಾರಾಮಾ ರಾಮಾ ॥೧॥

ಸಾಮಗಾನಪ್ರೇಮ ಕಾಂಚನಧಾಮಾ
ರಾಮನಿಸ್ಸೀಮಾ ಶ್ರೀ ಹಲಧರರಾಮಾ ರಾಮಾ ॥೨॥

ರಾಮ ಸೀತಾರಾಮ ಸದ್ಗುಣಧಾಮಾ
ರಾಮ ಶ್ರೀ ಚೆನ್ನಕೇಶವನೆಂಬ ರಾಮಾ ರಾಮಾ ॥೩॥

೩೦೨
ಶ್ರೀರಾಮಚಂದ್ರ ಧುರ ಧೀರಾವನೀಂದ್ರ
(ಚೆನ್ನಕೇಶವ / ಕರ್ಕಿ ಕೇಶವದಾಸ / ೧೯೦೦ - ೧೯೭೫)

ಶ್ರೀ ರಾಮಚಂದ್ರ ಧುರ
ಧೀರಾವನೀಂದ್ರವರ
ಕಾರುಣ್ಯರೂಪ ರಘುರಾಮ ರಾಮ ರಾಮ ॥ಪ॥

ಲೋಕೈಕಪಾಲಕ
ಶೋಕವಿನಾಶಕ
ನಾಕಾಧಿಪತಿನುತರಾಮ ರಾಮ ರಾಮ ॥೧॥

ಸುಂದರರೂಪಶ್ರೀ
ಮಂದಾರಪದನುತ
ಬೃಂದಾರಕಾ ಸೀತಾರಾಮ ರಾಮ ರಾಮ ॥೨॥

ಪಾವನಚರಿತನೆ
ಭಾವಜ್ಞ ನರಹರಿ
ಶ್ರೀವತ್ಸಲಾಂಛನರಾಮ ರಾಮ ರಾಮ ॥೩॥

ದೂರ್ವಾಪುರೀಶನೆ
ದೂರ್ವಾಸವಂದಿತ
ಸರ್ವೇಶ ಕೇಶವರಾಮ ರಾಮ ರಾಮ। ।೪॥

--✿✿✿✿✿--

೩೦೩
ಅಜಸುರಸನ್ನುತ ಸುಜನವಂದಿತ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೩೩ - ೧೯೩೭)

ಅಜಸುರಸನ್ನುತ ಸುಜನವಂದಿತ ಹರೇ
ಭಜಿಸುವೆ ನಿನ್ನನು ಭುಜಗಭೂಷಣಪ್ರಿಯ ॥ಪ॥

ಅತಿಶಯಕಾಮದಿ ಸತಿಯನಪಹರಿಸಿದ
ಪತಿತರಾವಣನನು ಖತಿಯಲಿ ಕೊಂದೆ ನೀಂ ॥೧॥

ತರಳಭಾವದಪರಿ ತರಳನಭಾರ್ಯೆಯ
ವರಿಸಲು ವಾಲಿಯ ತರಿದೆಯೋ ಶರದಿಂದ ॥೨॥

ದಶರಥನುದರದಿ ದಶರಥನಾಗಿಯು
ಪಶುಪತಿಮಿತ್ರನೆ ಜನಿಸಿದೆ ಕರುಣದಿ ॥೩॥

ಮಾನವರೂಪನೆ ಮಾನವ ಜಿತಾಸುರ
ಮಾನವವಂಶಜ ಮಾನವರೂಪನೆ ಪೊರೆ ॥೪॥

ಧೇನುನಗರಪತಿ ದಾನವಖಂಡನ
ಧ್ಯಾನಸ್ವರೂಪನೆ ಜ್ಞಾನವ ಪಾಲಿಸು ॥೫॥

--✿✿✿✿✿--

೩೦೪
ಇದು ಈಗ ಸಮಯ ಸೀತಾರಾಮ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೩ - ೧೯೩೭)

ಇದು ಈಗ ಸಮಯ ಸೀತಾರಾಮ ॥ಪ॥

ಇದು ಈಗ ಸಮಯವು ಪದುಮದಳಾಕ್ಷನೆ
ಸದಯದಿ ನಿಂದೆನ್ನ ಒದಗಿ ಕಾಯ್ವ ಶ್ರೀರಾಮ ॥ಅ.ಪ॥

ಖಾಸವು ತುಂಬೆ ಕಂಠದಿ ಶ್ವಾಸವು ನಿಲ್ಲೆ
ಘಾಸಿಯಾಗಲು ಘುರುಘುರುಕೆಂದು ಬೋರಿಡೆ
ಸಾಸಿರಚೇಳು ಕಡಿದಂತಾಗುವಾಗ ॥೧॥

ಕಾಲವು ಸಲ್ಲೆ ಪಂಚೇಂದ್ರಿಯಂಗಳು ಸಡಿಲೆ ಈ ದೇಹದಿ
ಲಾಲಾ ಮೂತ್ರವು ಮಲ ಜೋಲಿಬೀಳುತಲಿರೆ
ಕಾಲನದೂತರು ಬಂದು ಬಿಡದೆಳೆಯುತಿರುವಾಗ ॥೨॥

ನಂದನಾದಿಗಳು ನಿಂದು ಗೋಳಿಡುತಿರೆ ಬಂಧುಬಳಗಗಳು
ಒಂದನು ನೋಡಿದೆ ಕುಂದುತ್ತ ಚಿತ್ತದಿ ನಿಂದಿರಲು
ತಂದೆ ಧೇನುಪುರಿನಾಥ ಬಂದೆನ್ನ ಕಾಯೊ ಹೋಗುವಾಗ ॥೩॥

--✿✿✿✿✿--

೩೦೫

ಏಕೆ ನಿರ್ದಯವೊ ಓ ರಾಮ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)

ಏಕೆ ನಿರ್ದಯವೊ ಓ ರಾಮ ಶ್ರೀ ರಘುರಾಮ ॥ಪ॥

ಸ್ಮರಿಸಿ ಸ್ಮರಿಸಿ ನಾನು ಕರಗಿ ಬೆಂಡಾದೆನೊ
ಕರುಣವಿಲ್ಲವೆ ನಿನಗೆ ಶ್ರೀ ರಘುರಾಮ
ಕರುಣವಿಲ್ಲವೆ ನಿನಗೆ ॥೧॥

ಪಾವನಚರಿತನೆ ಪಾವನಮಹಿಮನೆ
ಪಾವನರೂಪನೆ ಬಾ ಶ್ರೀ ರಘುರಾಮ
ಪಾವನರೂಪನೆ ಬಾ ॥೨॥

ಮೌನೀಶವಂದ್ಯನೆ ಮಾನವಸೇವ್ಯನೆ
ಧೇನುಪುರೀಶನೆ ಬಾ ಶ್ರೀ ರಘುರಾಮ
ಧೇನುಪುರೀಶನೆ ॥೩॥

--✿✿✿✿✿--

೩೦೬

ಜಾನಕೀಪತೇ ಪೊರೆ ಸೂನಬಾಣ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)

ಜಾನಕೀಪತೇ ಪೊರೆ ಸೂನಬಾಣ ಕೋಟಿರೂಪ
ಮಾನವಾಗ್ರಗಣ್ಯ ಭೂಪ ॥ಪ॥

ರಾವಣಾದಿ ದನುಜ ಹೃದಯಜೀವಮಕರ ಧೀವರೇಶ
ಪಾವಮಾನಿ ಚಿತ್ತಕಮಲ ಭಾವಸೂರ್ಯ ರಾಮಚಂದ್ರ ॥೧॥

ಸೂರ್ಯಕೋಟಿ ಭಾಸಮಾನ ಧೈರ್ಯಜಲಧಿ ದನುಜಸಂಘ
ಶೌರ್ಯ ವಾರಿವಾಹವಾತ ಸೂರ್ಯವಂಶ ಸುಪ್ರಕಾಶ ॥೨॥

ಇಂದುಕಾಂತಿ ಕೋಮಲಾಸ್ಯ ಕುಂದರದನ ಮಂದಹಾಸ
ದಿಂದ ಧೇನುನಗರಪತಿಯೆ ಬಂದು ಪಾಲಿಸೈ ಶ್ರೀಹರಿಯೆ ॥೩॥

--✿✿✿✿✿--

೩೦೭
ದಿವ್ಯಸುಂದರ ವಿಗ್ರಹ ಜಯಜಯ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೩೩ - ೧೯೩೭)

ದಿವ್ಯಸುಂದರ ವಿಗ್ರಹ ಜಯ ಜಯ
ಸರ್ವಮಂಗಳಸಾರ ಜಯ ಜಯ
ಭವ್ಯ ಸಚ್ಚಿದಾನಂದ ಜಯ ಜಯ ಶ್ರೀರಾಮ ॥೧॥

ವೇದವೇದಾಂತವೇದ್ಯ ಜಯ ಜಯ
ಬೋಧಸ್ನೈಕಸುಖ ಜಯ ಜಯ
ವಾದದೂರವರ ಜಯ ಜಯ ಶ್ರೀರಾಮ ॥೨॥

ಸತ್ಯಸಂಕಲ್ಪೇಶ್ವರ ಜಯ ಜಯ
ನಿತ್ಯನಿರ್ಗುಣ ನಿರಂಜನ ಜಯ ಜಯ
ತತ್ವತಾರಕ ಮಂತ್ರ ಜಯ ಜಯ ಶ್ರೀರಾಮ ॥೩॥

ಈ ಮಂತ್ರ ಮಹಿಮೆಯನು ಪ್ರಹ್ಲಾದ ತಾ ಬಲ್ಲ ಸ್ವಾಮಿ
ಶಂಕರ ಪದ್ಮಪಾದ ಲಕ್ಷ್ಮೀಯರು
ಪ್ರೇಮದಿಂ ಜಪಗೈವ ವರದೀಕ್ಷಿತಂ ಗರಿವು
ಭೂಮಿಯೊಳಗೀ ಮಂತ್ರ ಸರ್ವ ಸಾಧನವು ॥೪॥

ಮಂಗಳಂ ಲಕ್ಷ್ಮೀಶ ನರಸಿಂಹ ದೇವರಿಗೆ
ಮಂಗಳಂ ಭಕ್ತಾರ್ತಿನಾಶ ಮುರಹರಗೆ
ಮಂಗಳಂ ಯೋಗೀಶ ಪುಂಡರೀಕಾಕ್ಷನಿಗೆ
ಮಂಗಳಂ ಧೇನುಪುರ ವಿಷ್ಣುವಿಗೆ ॥೫॥

--✿✿✿✿✿--

೩೦೮
ಪರಿಭಾವಿಸೆ ತಾವಕರೂಪಂ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೭ - ೧೯೩೭)

ಪರಿಭಾವಿಪೆ ತಾವಕರೂಪಂ
ಕರುಣಾರಸಮಾರ್ಜಿತ ಸಂತಾಪಂ ॥ಪ॥

ವನಮಾಲಿಕಾ ಭಾಸಿತದೇಹಂ
ಮುನಿಮಾನಸಪೂಜಿತ ನಿರ್ಲೇಪಂ
ವನರುಹಾಸನ ಮುಖ್ಯವಂದಿತ ಗೌರವಂ ನರಪುಂಗವಂ
ಮನುಕುಲಾರ್ಚಿತ ಪಾದಪಂಕಜ ರಾಘವಂ ಸುರಧೇನುವಂ ॥೧॥

ದಶಕಂಧರ ಕಂಧರ ದಿಶಿ
ಶೋಭಿತಪಾವನ ಕೀರ್ತಿಯುತಂ
ಪಶುಪತಿಪ್ರಿಯಮವ್ಯಯಂ ಸುರಪೂಜಿತ ಗುಣಭೂಷಿತಂ
ಶಶಧರಾನನೆ ಜಾನಕೀಪ್ರಿಯ ಭಾಸುರಂ ಕರುಣಾಕರಂ ॥೨॥

ಖರದೂಷಣ ಶಾಸಕದೇವಂ
ಶರಣಾಗತಸಂರಕ್ಷಣನಿರತಂ
ಚರಣಪಲ್ಲವನುನ್ನ ದುಂದುಭಿಕಾಯಂ ಅಕ್ಷಯಂ ಅದ್ವಯಂ
ಸುರವರಂ ವರಧೇನುನಾಮಕ ನಗರನಾಯಕಂ ಹಾಯಕಂ ॥೩॥

--✿✿✿✿✿--

೩೦೯
ರಘುಕುಲಾಂಬುಧಿ ಚಂದ್ರನೆ ಪೊರೆ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೩ - ೧೯೩೭)

ರಘುಕುಲಾಂಬುಧಿ ಚಂದ್ರನೆ ಪೊರೆ ನೀಂ
ಅಘಹರ ಧರಣೀಂದ್ರನೆ ॥ಪ॥

ಜಾನಕೀಮುಖಪಂಕಜ ಭಾಸ್ಕರದೀನಹೃದಯ
ಕುಮುದಾಳಿಸುಧಾಕರ ಅಘಹರ ಧರಣೀಂದ್ರನೆ ॥೧॥

ರಾವಣಾಂತಕ ಪಾವನರೂಪನೆ ಪಾವಮಾನಿ
ಸಂಪೂಜಿತರಾಮನೆ ಅಘಹರ ಧರಣೀಂದ್ರನೆ ॥೨॥

ನೀಲಮೇಘಸಮಾನ ಸುಂದರದೇಹ ವಾಲಿ
ಪ್ರಾಣಾವಳಿ ಕಾಲಹವ್ಯವಾಹ ಅಘಹರ ಧರಣೀಂದ್ರನೆ ॥೩॥

ಭಂಡರಾಕ್ಷಸಖಂಡನನಿರ್ಮಲಚಂಡಪರಾಕ್ರಮಿ
ಚಾಪವಿಲೋಲ ಅಘಹರ ಧರಣೀಂದ್ರನೆ ॥೪॥

ರಾಮರಘುಪತಿ ಲಕ್ಷ್ಮಣವಂದಿತ ಶ್ಯಾಮಸುಂದರರೂಪ
ಧೇನುಪರಾಧಿಪ ಅಘಹರ ಧರಣೀಂದ್ರನೆ ॥೫॥

--✿✿✿✿✿--

೩೧೦
ರವಿಕುಲಾಂಬುಧಿ ಸೋಮನೆ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೩ - ೧೯೩೭)

ರವಿಕುಲಾಂಬುಧಿಸೋಮನೆ ಭುವನಪಾವನ ರಾಮನೆ ॥ಪ॥

ಕವಿವರಾರ್ಚಿತಭೂಮನೆ ದಿವಿಜಸನ್ನುತನಾಮನೆ ॥ಅ.ಪ॥

ಕಂಡೆನು ದೇವಿಯ ಲಂಕೆಯೊಳು
ಚಂಡರಾವಣನುಪವನದೊಳು
ಚಂಡರಕ್ಕಸಿಯರ ಮಧ್ಯದೊಳು
ಚಂದ್ರಮಂಡಲಾಸ್ಯೆ ಇರುವಳು ॥೧॥

ಸುಂದರಿ ನಿನ್ನನು ಧ್ಯಾನಿಪಳು
ಕುಂದುತ್ತ ಚಿತ್ತದಿ ಶೋಕಿಪಳು
ಮಂದಮಂದವಾಗಿ ಕಣ್ಣೀರ
ಬಿಡುವಳು ಬಂಧನದೊಳಿರುವಳು ॥೨॥

ಮಾಸಿದ ಸೀರೆಯನುಟ್ಟಿಹಳು
ದೂಸರವೇಣಿಯ ಸುತ್ತಿಹಳು
ಭೂಷ ವಿಶೇಷದೊಳಾಸೆಯನಿಡಳುಪ
ವಾಸವನೆ ಗೈವಳು ॥೩॥

ಕಾಮಿನಿತಾಪವ ಹೊಂದಿಹಳು
ತಾಮರಸಾಕ್ಷಿಯು ನೊಂದಿಹಳು
ಭಾಮೆಯು ಶ್ರೀರಾಮ ಭಾವದೊಳಿರುವಳು
ರಾಮ ರಾಮೆನ್ನುವಳು ॥೪॥

ಮಾನಿನಿ ಯೋಗಿನಿಯಾಗಿಹಳು
ಜ್ಞಾನ ವಿಜ್ಞಾನವ ಹೊಂದಿಹಳು
ಜಾನಕೀಪತಿ ಭಕ್ತಿದೇವಿಯಾಗಿರುವಳು
ಧೇನುಪುರೀಶ ಕೇಳು ॥೫॥

--✿✿✿✿✿--

೩೧೧
ರವಿಕುಲಾಂಬುಧಿ ಪೂರ್ಣಚಂದ್ರ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)

ರವಿಕುಲಾಂಬುಧಿ ಪೂರ್ಣಚಂದ್ರ
ಕರುಣಾಕರ ಧರಣೀಧರೇಂದ್ರ ॥ಪ॥

ದಶರಥಸುಪುತ್ರ ಶಶಧರಸುವಸ್ತ್ರ
ಪಶುಪತಿಮಿತ್ರನೆ ಪೊರೆಯೊ ಎನ್ನನು ॥೧॥

ವನರುಹದಳಾಕ್ಷ ಧನುಭುಜವಿಪಕ್ಷ
ಮುನಿಜನಸುರಕ್ಷ ರಕ್ಷಿಸೆನ್ನನು ದೇವನೆ ॥೨॥

ಸುರಜನಸುಘೋಷ ಖರಹರ ಸುರೇಶ
ನಿರತವು ನಾ ನಿನ್ನ ನಮಿಸುವೆನ್ನೈ ಹರೇ ॥೩॥

ದಾನವಖಂಡನ ಧೇನುಪುರೀಶನೆ
ಮಾನವಪುಂಗವದೇವನೆ ಪೊರೆಯೈ ॥೪॥

--✿✿✿✿✿--

೩೧೨
ರಾಮ ನಿನ್ನ ಭಜನೆಗೈಯುವೆ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೩೩ - ೧೯೩೭)

ರಾಮ ನಿನ್ನ ಭಜನೆಗೈಯುವೆ ಕಾಮಾರಿಮಿತ್ರ
ರಾಮ ನಿನ್ನ ಭಜನೆಗೈಯುವೆ ॥ಪ॥

ರಾಮ ನಿನ್ನ ಭಜನೆಯನ್ನು ಪ್ರೇಮದಿಂದ ಮಾಳ್ಪ ಜನಕೆ
ಕಾಮಿತಾರ್ಥವಿತ್ತು ಸುಖವ ಪ್ರೇಮದಿಂದ ಕರುಣಿಸುವವನೆ ॥೧॥

ಜಾನಕಿಯರಮಣ ನಿನ್ನ ಧ್ಯಾನಮಾಳ್ಪೆನಯ್ಯ ಸತತ
ಸಾನುರಾಗದಿಂದ ಸಲಹು ಭಾನುವಂಶ ಜಲಧಿಚಂದ್ರ ॥೨॥

ಇಂದಿರೇಶ ನಿನ್ನ ಪಾದವಿಂದು ಪೂಜೆಗೈವೆ ನಾನು
ತಂದೆ ಸಲಹೊ ರಾಗದಿಂದ ಸುಂದರಾಂಗ ಸುಪ್ರಸನ್ನ ॥೩॥

ಹಾರಕುಂಡಲಾದಿಭೂಷ ಚಾರುಮಕುಟಧರಸುಶೋಭ
ಸಾರಸಾಕ್ಷ ರವಿಜವರದ ತೋರೋ ಮುಖವ ರಾಘವೇಂದ್ರ ॥೪॥

ರಾವಣಾದಿ ಸಕಲದನುಜಜೀವಹರಣ ರಘುಕುಲೇಶ
ಪಾವಮಾನಿ ಪೂಜಿತಾಂಘ್ರಿ ಧೇನುಪುರನಿವಾಸದೇವ ॥೫॥

--✿✿✿✿✿--

೩೧೩

ರಾಮ ರಘುಕುಲ ಲಕ್ಷ್ಮಣಾಗ್ರಜ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೭ - ೧೯೩೭)

ರಾಮರಘುಕುಲ ಲಕ್ಷ್ಮಣಾಗ್ರಜ
ಸೋಮವಂಶಜಾಸಮೇತ ಪೊರೆಯೇ ಕರುಣದಿ ॥೧॥

ಬ್ರಹ್ಮರುದ್ರರು ಹರಿಸುರೇಂದ್ರರು
ಕರ್ಮವಶದಿ ನಿನ್ನ ರೂಪಿನಿಂದ ಶೋಭಿಪರು ॥೨॥

ಸತ್ವಮೂರ್ತಿಯೆ ತತ್ವರೂಪಿಯೆ
ನಿತ್ಯಹೃದಯಕಮಲದಲ್ಲಿ ನಿನ್ನ ಭಾವಿಪೆ ॥೩॥

ತಾಟಕಾಂತಕ ಕೋಟಿಭಾಸ್ಕರ
ಕೋಟಿರೂಪ ನಿನ್ನ ಪಾದವನ್ನು ನಂಬಿದೆ ॥೪॥

ಕಮಲನೇತ್ರನೆ ವಿಮಲಗಾತ್ರನೆ
ಕಮಲಮುಖವನು ನೋಡಿ ನಾನು ಧನ್ಯನಾಗುವೆ ॥೫॥

ಪ್ರೀತಿವಚನದಿ ನೀತಿಯಿಂ ಭವ
ಭೀತಿಯನ್ನು ಧೇನುನಗರಪತಿಯೆ ಭಂಜಿಸೈ ॥೬॥

--✿✿✿✿✿--

೩೧೪
ಶ್ರೀಕಾಂತ ನಿನ್ನ ನಂಬಿದೆ ನಾಕೇಶವಂದ್ಯ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೩ - ೧೯೩೭)

ಶ್ರೀಕಾಂತ ನಿನ್ನ ನಂಬಿದೆ ನಾಕೇಶವಂದ್ಯ
ಸಾಕೇತಪುರನಿವಾಸ ಲೋಕಕಂಟಕ ಹರಣ ॥ಪ॥

ಪಂಕ್ತಿಸ್ಯಂದನಚಿತ್ತ ಪಂಕೇರುಹಾರ್ಕರೂಪ
ಪಂಕ್ತಿಕಂಧರಹರಣ ನಾಕೇಶವಂದ್ಯ ॥೧॥

ಸೀತಾಹೃದಯಪ್ರಿಯ ವಾತತನಯಸೇವ್ಯ
ಭೀತಾರ್ತಿ ವೀತಿಹೋತ್ರನೆ ನಾಕೇಶವಂದ್ಯ ॥೨॥

ಮಂಗಳರೂಪನೆ ಅಂಗಜಪಿತಹರೇ
ತುಂಗದಾನವಭಂಜನ ನಾಕೇಶವಂದ್ಯ ॥೩॥

ಕೋದಂಡಖಂಡಿತಾರೇ ಭೇದವಿವರ್ಜಿತ
ನಾದವಿನೋದಸುಖದ ನಾಕೇಶವಂದ್ಯ ॥೪॥

ಭಾನುವಂಶಜ ದಿವ್ಯಜಾನಕೀವಲ್ಲಭ
ಧೇನುನಗರಪತಿಯೆ ನಾಕೇಶವಂದ್ಯ ॥೫॥

--✿✿✿✿✿--

೩೧೫
ಸಲೈ ಸೀತಾಪತೇಲೋಲ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೩ - ೧೯೩೭)

ಸಲಹೈ ಸೀತಾಪತೇಲೋಲ ಮುಕ್ತಾಫಲ
ಹಾರಶೋಭಿತಮುಖ
ತೋರೋ ಗುಣಾಕರ ಸಾರಸಲೋಚನ ॥ಪ॥

ಇಂದುವಂಶಜಾ ದಿವ್ಯಕಂಧರದಲಿ
ತೋರ್ಪ ಸುಂದರಬಾಹುಯುಗ
ಕಂದರ್ಪಶತಕೋಟಿ ಸುಂದರವಿಗ್ರಹ ಮಂದಹಾಸದಿ
ಬಂದು ಕಂದನ ಪೊರೆಯ್ಕೆ ॥೧॥

ಪಂಕಜಾಸನಮುಖ್ಯ ಶಂಕರಪೂಜಿತ
ಸಂಕಟಪರಿಹರಿಸೈಲಂಕಾಪತಿಯ
ತಮ್ಮನಂಕವ ಹೊಂದಲುಶಂಕೆಯಿಲ್ಲದೆ
ಸ್ಥಿರಲಂಕಾರಾಜ್ಯವನಿತ್ತೆ ॥೨॥

ಜನನಮರಣಗಳ ಘನಪರಿವಾಹದಿ
ನೆನೆದು ಶೋಕಿಪೆ ದೇವನೆ
ವನರುಹಲೋಚನ ತವ ತಾರಕಮಂತ್ರವ
ವಿನಯದೊಳೀವುದೈ ಧೇನುಪುರಪತೇ ॥೩॥

--✿✿✿✿✿--

೩೧೬

ರಾಮ ಕಥಾಸುಧಾರಸಪಾನ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೩೦ - ೧೯ ಶ.)

ರಾಮ ಕಥಾಸುಧಾರಸಪಾನ ಮುಕ್ತಿ । ರಾಜ್ಯವನೀವುದು ॥ಪ॥

ಭಾಮಾಮಣಿ ಜಾನಕೀ ಸೌಮಿತ್ರೀ ।
ಭರತಾದಿಗಳಿಂದ ರಾಜಿಸುತಿಹ ॥ಅ.ಪ॥

ಧರ್ಮಾದಿಗಳ ಸಾರ । ತೋರ್ಪುದು ಮನವೆ
ಧೈರ್ಯಾನಂದಭಾಗ್ಯ । ನಿಕೇತನವು
ಕರ್ಮಬಂಧಾನಲ । ವಾರ್ಧಿಪಾಪವ
ಹರಿಸುವುದು ತಾನೆಂದು । ಭಾವಿಸುತಿರು ಹೇ ಮನವೆ ॥೧॥

--✿✿✿✿✿--

೩೧೭
ಚೆಂಡನಾಡಿದ ರಘುಕುಲ ನಂದನಾಶ್ರಿತವತ್ಸಲ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೩ - ೧೯೩೭)

ಚೆಂಡನಾಡಿದ ರಘುಕುಲ ನಂದನಾಶ್ರಿತವತ್ಸಲ ॥ಪ॥

ಇಂದುಮುಖಿ ಸೀತಾದೇವಿ ಸುಂದರ ಕರಕಮಲಾರ್ಪಿತಮಾದ ॥ಅ.ಪ॥

ಮರುಗ ಮಲ್ಲಿಕಾ ಜಾಜಿ ವರಪಾರಿಜಾತತತಿ ಸುರಗಿ
ಸೇವಂತಿ ಪರಿಚಿತಮಾದ
ಸುರಸಗುಂಭಿತ ಪರಮಶೋಭಾನ್ವಿತ ಸುರುಚಿರ
ಮಾಲ ವಿರಚಿತಮಾದ ॥೧॥

ಕಿಂಕಿಣಿ ಝುಣರಲು ಕಂಕಣವಲುಗಲು
ಪಂಕಜನೇತ್ರಿಯು ಶಂಕಿಸದಿರಲು
ಅಂಕದೊಳುರೆಯೊಗೆದ ಪಂಕಜಾಕಾರದ ಶಂಕರ
ಪೊಗಳಲು ಚಂಪಕದರಳಿನ ॥೨॥

ಮಾನಿನಿಯರು ಪಾಡೆ ಮೌನೀಶರಾಗ ನೋಡೆ ಗಾನದಿ
ಸುರಜಾಲ ಜಯಜಯವೆನ್ನಲು
ಸಾನುರಾಗದಿ ಸೀತಾಮಾನಿನಿಯೊಡಗೂಡಿ
ಧೇನುನಗರ ಶ್ರೀ ರಾಮನು ಮುದದಿ ॥೩॥

--✿✿✿✿✿--

೩೧೮
ದೃಷ್ಟಿತಾಕಿತೆ ನಿನಗೆ ಶ್ರೀರಾಮ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೩ - ೧೯೩೭)

ದೃಷ್ಟಿತಾಕಿತೆ ನಿನಗೆ ಶ್ರೀರಾಮ ॥ಪ॥

ಸುಂದರತರ ಮುಖಚಂದ್ರನ ನೋಡುತಲಿ
ಸುಂದರಿಯರೆಲ್ಲ ಬಂದು ಕಂದ ನಿನ್ನ ಮುದ್ದಿಡಲು ॥೧॥

ಬಾಲನೆ ನಿನ್ನವರ ನೀಲ ಶುಭಕುಂತಲವ
ನೀಲವೇಣಿಯರು ತಿದ್ದಿ ಲಾಲಿಸಿದ ಕಾರಣದಿಂ ||೨||

ಮಂಗಳವಾದ ನಿನ್ನ ಕಂಗಳ ಥಾಳವನ್ನು
ಅಂಗನೆಯರೆಲ್ಲ ನೋಡಿ ಹಂಗಿಸಿದ ಕಾರಣದಿಂ ||೩||

ಮಾರಸುಂದರ ಸುಕುಮಾರ ವರರೂಪವನು
ಸಾರಸಾಕ್ಷಿಯರು ಕೂಡಿ ಮೀರಿಮಾತನಾಡಿದರಿಂ ||೪||

ಮಾನವವಂದಿತನೆ ಮೌನಿಕುಲಸೇವಿತನೆ
ಧೇನುಪುರ ವೆಂಕಟೇಶ ಶ್ರೀನಿವಾಸ ಪಾಲಿಸಲಿ ||೫||

--✿✿✿✿✿--

೩೧೯
ಮಂಗಳಂ ಶ್ರೀರಾಮಚಂದ್ರ ಭಂಗಿತಾಸುರೇಂದ್ರನೆ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೭ - ೧೯೩೭)

ಮಂಗಳಂ ಶ್ರೀರಾಮಚಂದ್ರ ಭಂಗಿತಾಸುರೇಂದ್ರನೆ ವೀರ ||ಪ||

ರಾಜಕಾಂತಿ ಕೋಮಲಾಸ್ಯ ರಾಜರಾಜಪೂಜಿತ
ರಾಜವಂಶಜಾಸಮೇತ ರಾಜಹೃದಯಮಿತ್ರನೆ ||೧||

ಶಂಕರಾದಿ ಹೃದಯವಾಸ ಪಂಕಜಾನನ
ಲಂಕಾನಗರ ಸಂಕಟಾರ್ತಿ ಶಂಕರಾಯ ಮಾಣ ದೇವ ||೨||

ಧೇನುನಗರ ಪಾಲವೀರ ದಾನವಾಂತಕ
ಕಾನನವಿನೋದ ಶ್ರೀದ ವಾನರಾದಿ ಗೀಯಮಾನ ||೩||

--✿✿✿✿✿--

೩೨೦
ಮಂಗಳಂ ಶ್ರೀರಾಮಚಂದ್ರ ಮಂಗಳಾಂಗಗೆ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)

ಮಂಗಳಂ ಶ್ರೀರಾಮಚಂದ್ರಗೆ ಮಂಗಳಾಂಗಗೆ ॥ಪ॥

ಶೃಂಗವೇಣಿ ಜನಕಜಾಂತರಂಗಲೋಲಗೆ ॥ಅ.ಪ॥

ರಾವಣಾದಿ ದನುಜಮಥನ ಕಾಲರೂಪಗೆ
ಪಾವಮಾನಿ ಹೃದಯಕಾಮುದ ಪೂರ್ಣಚಂದ್ರಗೆ ॥೧॥

ದೇವತಾಳಿ ಗೀಯಮಾನ ದಿವ್ಯಚರಿತಗೆ
ಭೂವಧೂ ಪರಿಪಾಲನೈಕ ಧರ್ಮನಿರತಗೆ ॥೨॥

ಮೌನಿಹೃದಯದಿವ್ಯಕಮಲ ಹಂಸರೂಪಗೆ
ಧೇನುನಗರನಾಥ ವೆಂಕಟೇಶರೂಪಗೆ ॥೩॥

--✿✿✿✿✿--

೩೨೧
ಮಂಗಳಂ ಸುಗುಣಾಭಿರಾಮಗೆ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)

ಮಂಗಳಂ ಸುಗುಣಾಭಿರಾಮಗೆ ಮಂಗಳಂ ಶ್ರೀರಾಮಗೆ ॥ಪ॥

ಮಂಗಳಂ ಲೋಕಾಭಿರಾಮಗೆ ಮಂಗಳಂ ಗುಣಧಾಮಗೆ ॥ಅ.ಪ॥

ದಶರಥನ ಸುತನಾಗಿ ಮುನಿವರ ಕುಶಿಕಯಜ್ಞವ ಪಾಲಿಸಿ
ಶಶಿಮುಖಿಯ ಸೀತೆಯನು ಒಲಿಸಿದ ದಿಶಿಸುಭಾಸುರ ನಾಮಗೆ ॥೧॥

ತಂದೆಯಾಜ್ಞೆಯ ಪೊಂದುತಾಗಲೆ ಬಂದು ವನದಲಿ ನೆಲಸಿದ
ಛಂದದಿಂದಲಿ ಕಂದಭರತನಿಗಂದು ಪಾದುಕೆ ಇತ್ತಗೆ ॥೨॥

ದಂಡಕಾವನದಲ್ಲಿ ನೆಲಸುತ ಖಂಡಿಸುತ ರಾಕ್ಷಸರನು
ಭಂಡರಾವಣ ಹರಿಸೆ ಸೀತೆಯ ಚಂಡಹನುಮನ ಕಂಡಗೆ ॥೩॥

ವೀರವಾಲಿಯ ಕೊಂದು ರಾಜ್ಯವ ಸೂರ್ಯಸುತನಿಗೆ ಪಾಲಿಸಿ
ವಾರಿಜಾಕ್ಷಿಯ ಪುಡುಕಲೋಸುಗ ವೀರರನು ಕಳುಹಿಸಿದಗೆ ॥೪॥

ಮಾರುತಾತ್ಮಜನಿಂದ ಸೀತಾ ನೀರಜಾಕ್ಷಿಯ ವಾರ್ತೆಯಂ
ಸಾರಿ ಮದನು ಹೊಂದಿ ದಯದಿಂ ವೀರ ಕಪಿವರಗೊಲಿದಗೆ ॥೫॥

ಧೀರರಾವಣನನ್ನು ಕೊಂದು ನಾರಿ ಸೀತೆಯನೊಲಿಸುತ
ಸಾರಿ ಸಾಕೇತವನ್ನು ಮುದದಿಂ ವೀರಪಟ್ಟವನಾಳ್ದಗೆ ॥೬॥

ಜಾನಕಿಲಕ್ಷ್ಮೀಸಮೇತಗೆ ಮೌನಿವರಗಣಸೇವ್ಯಗೆ
ಮಾನವಾಂಬುಧಿ ಪೂರ್ಣಚಂದ್ರಗೆ ಧೇನುಪುರ ಶ್ರೀರಾಮಗೆ ॥೭॥

--✿✿✿✿✿--

೩೨೨
ರಘುನಂದನ ಬಾರೈ ಹಸೆಗೆ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೩ - ೧೯೩೭)

ರಘುನಂದನ ಬಾರೈ ಹಸೆಗೆ
ನಿಗಮಾಗಮಾವಳಿ ಸನ್ನುತ ॥ಪ॥

ಸುಗುಣಾಭಿರಾಮನೆ ರಾಮನೆ
ಶ್ರೀ ಮೃಗಲೋಚನೆ ಶ್ರೀ ಜಾನಕಿಸಹಿತ ॥ಅ.ಪ॥

ಸುರವೈರಿ ವೈರಿಕುಲಭಂಜನ
ಪರಮೇಶವರಚಾಪಖಂಡನ
ಕರುಣಾಕರ ಖರದೂಷಣಾದಿ
ಹರನಾಶ್ರಿತ ವರಲೋಕಪಾಲ ॥೧॥

ನವಕೋಟಿಕಾಮ ನವಮೋಹನಾಂಗ
ನವನೀರದಾಭ ನವಸುಂದರ
ನವಶಕ್ತಿಸಂಯುತಭಾವನ್ಯೆಕ
ನವಗೋಚರ ನವಮೀಸಂಜಾತ ॥೨॥

ವರಧೇನುಪರಿಪರಿಪಾಲಲೋಲ
ಶರಣಾಗತಭರಣಾಧೃತ
ಚರಣಾರವಿಂದ ಸುರಲೋಕಬೃಂದ
ಪರಿವಾರಿತ ವರರಾಮಚಂದ್ರ ॥೩॥

--✿✿✿✿✿--

೩೨೩

ರಘು ರಾಮಚಂದ್ರ ಬಾರೈ ಹರೇ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೩ - ೧೯೩೭)

ರಘುರಾಮಚಂದ್ರ ಬಾರೈ ಹರೇ ದಿವ್ಯರತ್ನಪೀಠಕೆ ॥ಪ॥

ದೇವತಾಳಿನುತಿಯ ಕೇಳಿ ಭಾವದಲ್ಲಿ ಮುದವ ತಾಳಿ
ರಾವಣಾದಿ ದನುಜವೃಂದವ ಸೀಳಿ ಜಗವ ಪೊರೆದ ವಿಭುವೆ ॥೧॥

ಮಂದಹಾಸ ಮುಖವಿಲಾಸ ಇಂದುಸುಂದರ ಫಾಲರಾಮ
ಇಂದುವಂಶಜಲೋಲ ದಶರಥನಂದನಾಶ್ರಿತವತ್ಸಲ ವಿಭುವೆ ॥೨॥

ಪಲ್ಲವಾರುಣ ಪಾಣಿಪಂಕಜ ಮಲ್ಲಿಕಾಕುಸುಮಾಳಿ ಭಾಸುರ
ಪುಲ್ಲಚಂಪಕಮಾಲಕರಂಜಿತ ಉಲ್ಲಸನ್ಮೃದುವಾಣಿ ವಿಭುವೆ ॥೩॥

ಭಕ್ತಹೃದಯ ಕುಮುದಚಂದ್ರ ಶಕ್ತಿವಿಜಿತ ರಾಕ್ಷಸೇಂದ್ರ
ಭಕ್ತಿಯಿಂದ ಭಾವಿಸುವೆನು ಭುಕ್ತಿಮುಕ್ತಿದಾಯಕ ವಿಭುವೆ ॥೪॥

ಮಾನವೇಂದ್ರ ಸುರೇಂದ್ರ ವಂದಿತಸೂನ ಶರಸಹಸ್ರಸುಂದರ
ಮೌನಿಹೃದಯ ಚಕೋರಚಂದ್ರನೆ ಧೇನುನಗರ ಶ್ರೀರಾಮ ವಿಭುವೆ ॥೫॥

೩೨೪
ರಾಮಪೀಠಮಾಶ್ರಯ ಕಾಮಕೋಟಿ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೭ - ೧೯೩೬)

ರಾಮಪೀಠಮಾಶ್ರಯ ಕಾಮಕೋಟಿ ಮೋಹನಾಂಗಕ ಶ್ರೀ ॥ಪ॥

ಸೂರ್ಯಕುಲಮಾಲಿಕಾಮಣಿ
ಆರ್ಯವಂಶ ದಿವ್ಯಮೌಕ್ತಿಕ ಶ್ರೀ ॥೧॥

ಇಂದುವಂಶ ನಂದಿನೀಯುತ
ಇಂದು ಸುಂದ ರರಾಜ್ಯ ರಾಘವ ಶ್ರೀ ॥೨॥

ವೈರಿವನ ದಾವಪಾವಕ ವೀರ
ವರರಘುನಂದನ ಶ್ರೀ ॥೩॥

ಭೂಮಿಸುತ ಪ್ರಾಣನಾಯಕ,
ಕಾಮಿತಾರ್ಥ ಫಲದಾಯಕ ॥೪॥

ಭಾನುಶತಕೋಟಿಭಾಸುರ
ಧೇನುಪುರನಾಥ ಶ್ರೀಕರ ॥೫॥

--✿✿✿✿✿--

೩೨೫
ಲಾಲಿ ರವಿಕುಲಕಲಶ ಜಲಧಿವರ
(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೭೭ - ೧೯೩೬)

ಲಾಲಿ ರವಿಕುಲಕಲಶಜಲಧಿವರಚಂದ್ರ
ಲಾಲಿ ದಶರಥತನಯ ರಘುರಾಮಚಂದ್ರ ಲಾಲಿ ॥ಪ॥

ಕುಶಿಕಸುತವರ ಯಾಗರಕ್ಷಣ ಸುದೀಕ್ಷಾ ಪಶುಪತಿ ಸು
ಕೋದಂಡಖಂಡನ ಸುದೀಕ್ಷಾ
ಶಶಿವಂಶಜಾಹೃದಯ ಕಮಲಸುಮಮಿತ್ರಾ
ಋಷಿ ಪರಶುರಾಮಬಲವಿದಳನ ಚರಿತ್ರಾ ॥೧॥

ಸಾಕೇತನಗರಜನಸನ್ನುತ ಸುಮೂರ್ತೇ
ಕೈಕೆಯೀವರಯುಗಳ ಸಾರ್ಥಕಸುಕೀರ್ತೇ
ಲೋಕರಕ್ಷಣ ದಿವ್ಯಶರಚಾಪ ಸಾಕೇತ
ಮುಖ್ಯನುತವರ ಸುಪ್ರತಾಪ ಲಾಲಿ ॥೨॥

--✿✿✿✿✿--

೩೨೬
ನೀರೆಯರು ಸಾರುತ್ತ ಮುದದಿ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೬ - ೧೯೩೭)

ನೀರೆಯರು ಸಾರುತ್ತ ಮುದದಿ ನೀರೆಯರಾರತಿ ಬೆಳಗಿದರು ॥ಪ॥

ಸೇರಿ ಸೀತಾ ನಾರೀಮಣಿಯಿಂ ರಾರಾಜಿಪ ಶ್ರೀರಾಮಗೆ ॥ಅ.ಪ॥

ಕಂದರ್ಪಕೋಟಿ ಸುಂದರಾಂಗನಿಗೆ
ಕಂದರ್ಪಸತಿ ಸುಂದರಾಂಗಿಗೆ
ಇಂದುಮಿತ್ರಕುಲನಂದನ ರಾಮಗೆ
ಇಂದುವಂಶನಂದಿನಿ ಸೀತಗೆ ॥೧॥

ಪಾಕಶಾಸನಾದಿ ಲೋಕವಂದಿತೆಗೆ
ಶ್ರೀಕರಾಂಬಕಿ ಲೋಕವಂದ್ಯೆಗೆ
ಲೋಕನಾಥ ಶ್ರೀಕರರಾಮನಿಗೆ
ಲೋಕಮಾತೃ ಮಾತೆಗೆ ಸೀತೆಗೆ ॥೨॥

ಮಾನವೇಂದ್ರ ವಂಶಮಾನಿತರತ್ನಗೆ
ಮೌನಿ ಚಿತ್ತಮಿತ್ರೆ ಮೀನನೇತ್ರಗೆ
ದಾನವಾಂಧಕಾರ ಭಾನುರಾಮನಿಗೆ
ಧೇನುನಗರನಾಥಗೆ ಸೀತೆಗೆ ॥೩॥

--✿✿✿✿✿--

೩೨೭
ಇಂದ್ರಾದಿ ಸುರರಾಧಿತ ಇನವಂಶ ಸಂಜಾತಾ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಇಂದ್ರಾದಿಸುರರಾರಾಧಿತ ಇನವಂಶಸಂಜಾತಾ
ಚಂದ್ರಧರಪ್ರಿಯ ಶ್ರೀರಾಮಚಂದ್ರಾ ಎಚ್ಚರಿಕೆ ॥೧॥

ಅರುಣಾತ್ಮಜ ಮುಕ್ತಿಪ್ರದ ಕರುಣಾಸಮುದ್ರಾ
ಭರತಾಗ್ರಜ ಭವಹರರಾಮಭದ್ರಾ ಎಚ್ಚರಿಕೆ ॥೨॥

ಘಟಸಂಭವಮುಖಸಂಯಮಿ ಕಟಕಾರ್ಚಿತಚರಣಾ
ಕುಟಲಾರಿ ಶ್ರೀ ಗುರುರಾಮವಿಠಲಾ ಎಚ್ಚರಿಕೆ ॥೩॥

--✿✿✿✿✿--

೩೨೮
ಇದ್ದೀಯಯ್ಯ ಎನ್ನೊಳಗೆ ನೀ ಇನಕುಲರಾಯ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಇದ್ದೀಯಯ್ಯ ಎನ್ನೊಳಗೆ ನೀ ಇನಕುಲರಾಯ ॥ಪ॥

ಇದ್ದೀಯೈ ಸತ್ವರ ಹೃದ್ಗುಹೆಯೆಂತೆಂಬ
ಪದ್ಮದೊಳಗೆನೀನು ಪದುಮೆಯಿಂದೊಡಗೂಡಿ ॥ಅ.ಪ॥

ಮರುತಾತ್ಮಜ ನಿನ್ನ ಚರಣವನೊತ್ತಲು
ಸರಸಿಜಭವ ಮುಖ್ಯ ಪರಿವಾರಸಹಿತನು ॥೧॥

ಮೂರುಲೋಕದ ವ್ಯಾಪಾರ ನಡೆಸುತ್ತ
ಯಾರಿಗು ತಿಳಿಸದೆಯೆಲ್ಲೆಲ್ಲಿಯು ನೀನೆ ॥೨॥

ಪ್ರೇಮದಿಂದಲಿ ಭಕ್ತಸ್ತೋಮವೋಲೈಸುವುದು
ಸ್ವಾಮಿಯಾಗಿ ಗುರುರಾಮವಿಠಲ ತಂದೆ ॥೩॥

೩೨೯
ಜಯ ಜಾನಕೀನಾಥ ಜಯ ಕುಶೀಲವ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಜಯ ಜಾನಕೀನಾಥ ಜಯ ಕುಶೀಲವ ತಾತ
ಜಯತುಲಕ್ಷ್ಮಣಭ್ರಾತ ಜನಕಜಾಮಾತ ॥ಪ॥

ಜಯಭಕ್ತ ಸಂತ್ರಾತ ಜಯ ಭುವನವಿಖ್ಯಾತ
ಜಯಜಯತು ಸುಖದಾತ ಜಯ ಜಗನ್ನಾಥ ॥ಅ.ಪ॥

ಮರುತಸಂಭವಪಕ್ಷ ಮಹನೀಯ ಸುಕಲಾಕ್ಷ
ಸರಸಿಜದಳನಿಭಾಕ್ಷ ಸಾಧುಸಂರಕ್ಷಾ
ಶರಧಿಬಂಧನದಕ್ಷ ಶಾತ್ರವನಿಕರಶಿಕ್ಷ
ವರವಿಶಾಲಸುವಕ್ಷ ವಂದ್ಯಫಾಲಾಕ್ಷ ॥೧॥

ದಾರಕಾಸುರನಿಕರ ದಾಸಜನಮಂದಾರ
ಘೋರಪಾಪವಿದೂರ ಕುಜನಸಂಹಾರ
ಮಾರಶತಶೃಂಗಾರ ಮಮಸ್ವಾಮಿ ರಘುವೀರ
ಸಾರತತ್ವವಿಚಾರ ಸದಸದ್ವಿಹಾರ ॥೨॥

ಶಿವವಿನುತ ಶುಭನಾಮ ಜೀಮೂತನಿಭಶ್ಯಾಮ
ನವತುಳಸೀದಳಧಾಮ ನತಜನಪ್ರೇಮ
ಅವನಿಪಾಲಲಲಾಮ ಅಖಿಳಾಮರಸ್ತೋಮ
ಕವಿಗೇಯ ಗುರುರಾಮವಿಠಲ ರಿಪುಭೀಮ ॥೩॥

--✿✿✿✿✿--

೩೩೦
ಜಾನಕೀವರ ತೇ ಜಯಮಂಗಲಂ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಜಾನಕೀವರ ತೇ ಜಯಮಂಗಳಂ ॥ಪ॥

ಮಾನವಾಧಿಪ ತೇ ಮಂಗಳಂ ॥ಅ.ಪ॥

ರಾವಣಾನುಜಮಿತ್ರ ರಮಣೀಯಸುಚರಿತ್ರ
ದೇವಾಧಿದೇವ । ತೇ ಮಂಗಳಂ ॥೧॥

ಕಪಿಗಣಪೂಜಿತ ಕಾಮಿತಫಲದಾತ
ಅಪವರ್ಗಪ್ರದ । ತೇ ಮಂಗಳಂ ॥೨॥

ಖರದೂಷಣನಿಹಂತ ಕರಧೃತಶರಚಾಪ
ಗುರುರಾಮವಿಠಲ । ತೇ ಮಂಗಳಂ ॥೩॥

--✿✿✿✿✿--

೩೩೧
ಜಾನಕೀಮನೋಹರ ಪ್ರಭೋ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಜಾನಕೀಮನೋಹರ ಪ್ರಭೋ
ಜರಾಮರಣವಿದೂರ ರಾಮ ॥ಪ॥

ನಾನಾವತಾರ ಚಿದಾ
ನಂದಾತ್ಮ ಶರೀರ ॥ಅ.ಪ॥

ಧರಾತ್ಮ ಸತ್ಯಸಂಧ
ದಿನಕರ ವಂಶಾಬ್ಧಿಚಂದ್ರ ॥೧॥

ಶಬರಿದತ್ತ ಫಲಭೋಜನ
ಶಾಶ್ವತ ತ್ರಿಜಗನ್ಮೋಹನ ॥೨॥

ಶಿವಚಾಪಖಂಡನ ಆ
ಶ್ರಿತಲೋಕಮಂಡನ ॥೩॥

ರಾವಣಾದಿದನುಜಮಂಥನ
ದೇವಪರಾತ್ಪರ ರಘುವರ ॥೪॥

ತಾಮಸಗುಣವಿರಹಿತ ಗುರು
ರಾಮವಿಠಲ ನಮೋ ನಮೋ ॥೫॥

--✿✿✿✿✿--

೩೩೨
ನಿತ್ಯ ಪರಿಪೂರ್ಣಕಾಮ ಪಟ್ಟಾಭಿರಾಮ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ನಿತ್ಯಪರಿಪೂರ್ಣಕಾಮ ಪಟ್ಟಾಭಿರಾಮ
ತನ್ನ ಸ್ಮರಿಸುವ ಜನಕೀವನು ಕ್ಷೇಮ ॥ಪ॥

ಧರಣಿಜಾರಮಣ ಭಾಸ್ಕರವಂಶಭೂಷಣ
ತರಣಿಜಮಿತ್ರ ಭವ್ಯಚರಿತ್ರ । ದಾಶರಥೀ
ಕರುಣಾಳು ಸರೋಜನೇತ್ರ ॥ಅ.ಪ॥

ಉಡತೆಭಕ್ತಿಗೆ ಮೆಚ್ಚಿಕೊಡಲಿಲ್ಲವೆ ಅಭಯ
ಜಡಮತಿಯಾದರೂ ಇವನ । ಮರೆಯಾ ಇನ್ನು
ದೃಢಮತಿಗೆ ತನ್ನನೇ ಕೊಡುವನಯ್ಯಾ ॥೧॥

ಬ್ರಹ್ಮಾಂಡಕಿವರಾಜ ಬ್ರಹ್ಮಾದಿಸುರ ಸಮಾಜ
ತಮ್ಮೊಳು ತಾವು ತಿಳಿದು । ಭಜಿಸುವರು ಇನ್ನು
ಹೆಮ್ಮೆಯ ಮಾತುಗಳು ಬಿಡಿರಿ ಜನರು ॥೨॥

ರಾಮನು ನರನೆಂಬ ಪಾಮರನ ಬಾಯಲಿ ಮಣ್ಣು
ಸೋಮಶೇಖರ ತನ್ನ ಸತಿಗೆ । ಪೇಳಿದ ಇವನ
ನಾಮದ ಮಹಿಮೆ ಕುಣಿಕುಣಿದು ॥೩॥

ಮರ ಮರ ಎಂದ ವ್ಯಾಧ ಪರಮಋಷಿಯೆನಿಸಿದ
ನಿರುತಾ ಹೊಗಳುವವಿವನ ವೇದ । ಇವನಾ
ಚರಣೆ ಸಜ್ಜನರಿಗೆ ಬಲುಸ್ವಾದ ॥೪॥

ಸೇತುವೆ ಕಟ್ಟುವುದುಂಟೆ ಕೋತಿದಂಡುಗಳೆಲ್ಲಾ
ಸ್ವಾತಿಯ ಮುತ್ತಾಗುವುದಂತೆ । ದೇವ
ವ್ರಾತ ರಹಸ್ಯವೇತಕೆ ಚಿಂತೆ ॥೫॥

ಹೊರಗಿನ ಕಣ್ಣಿಂದ ಅರಿಯಲು ಸಾಧ್ಯವಲ್ಲಾ
ನೆರೆ ಒಳಗಣ್ಣಲಿ ನೋಡಬೇಕು । ಸ
ದ್ಗುರುಕಟಾಕ್ಷವಾದವಗೆ ಜೋಕು ॥೬॥

ಪ್ರತ್ಯಕ್ಷವಾದಿಗಳಿಗೆ ಮೃತ್ಯುವಿನ ಬಾಯೊಳು
ಸತ್ತು ಹುಟ್ಟುವುದು ತಪ್ಪುವುದಿಲ್ಲಾ ! ಆ
ಪತ್ತು ಇದೇ ದುರ್ಜನರಿಗೆಲ್ಲಾ ॥೭॥

ಮಗನು ಬ್ರಹ್ಮನು ಮೊಮ್ಮಗನು ರುದ್ರನು ಮೂ
ಜಗವನಾಳುವ ನಾರಾಯಣನಿವನು । ತಾನು
ಮಗುವಾಗಿ ದಶರಥಗುದಿಸಿದನು ॥೮॥

ಮುನಿಯಾಗವ ಪಾಲಿಸಿ ವನಿತೆಯ ಶಾಪಬಿಡಿಸಿ
ವನದೊಳಗಿದ್ದ ತಮ್ಮನು ತಾನು । ಸೀತೆಯನು
ತನ್ನೊಳಗಿಟ್ಟು ತಾ ಹುಡುಕಿದನು ॥೯॥

ನರನಾಗಿ ದೈತ್ಯರ ಮುರಿದು ದೇವತೆಗಳಿಗೆ
ಪರಮಹರುಷಪಡಿಸಿ ರಾಜ್ಯವಾಳಿ । ದ ಧರೆ
ಗರಸನಾಗಿ ಸಾಕೇತಪುರದಿ ಪೊಳೆದ ॥೧೦॥

ಹರಿಸರ್ವೋತ್ತಮ ಶ್ರೀಗುರುರಾಮವಿಠಲನ
ನರನು ಪಾಮರನು ಹ್ಯಾಗೆ ತಿಳಿಯುವನು । ಸಂಸೃತಿ
ಶರಧಿಯೊಳು ಬಿದ್ದು ಬಳಲುವನು ॥೧೧॥

೩೩೩
ನಿದ್ರೆ ಗೈಯ್ಯುವ ನಮ್ಮ ಸ್ವಾಮಿ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ನಿದ್ರೆಗೈಯ್ಯುವ ನಮ್ಮ ಸ್ವಾಮಿ । ರಾಮ
ಭದ್ರ ಮೂಜಗದಂತರ್ಯಾಮಿ ॥ಪ॥

ಸದ್ದು ಮಾಡದಿರಿನ್ನು ಸಾರಸಾಕ್ಷಿಯರೆಲ್ಲಾ
ಮುದ್ದುಸೀತೆ ಸಹಿತ ಹುವ್ವಿನ ಮಂಚದಿ ಮಲಗಿ ॥ಅ.ಪ॥

ಹೋಗಿ ನಿಮ್ಮಯ ಸದನಗಳಿಗೇ । ಉದಯ
ವಾಗೋದು ಬನ್ನಿ ಸನ್ನಿಧಿಗೇ
ಯೋಗೀಜಾಣರು ಪರಮಭಾಗವತೋತ್ತಮರು
ಸಾಗಿಹೋದರು ನಿಜಾಶ್ರಮಗಳಿಗೆಲ್ಲರು ॥೧॥

ತುಂಬುರನಾರದಾದಿಗಳು । ವೀಣೆ
ತಂಬೂರಿ ದಿವ್ಯನಾದದೊಳು
ಗಂಭೀರ ಸ್ವರದಿಂದಾ ಗಾಯನಗಳ ಮಾಡೆ
ಸಂಭ್ರಮದಲಿ ಇತರ ಹಂಬಲ ಮರೆತೀಗ ॥೨॥

ಹದಿನಾಲ್ಕು ಲೋಕಾವನಾಳಿ । ತಾ ದ-
ಣಿದೆನೆಂದು ಜನರಿಗೆ ಪೇಳಿ
ಸದಮಲಾತ್ಮಕ ಶ್ರೀ ಗುರುರಾಮವಿಠಲ ನಂ-
ಬಿದವರಿಗಭಯವ ಕೊಡುವ ಇಚ್ಛೆಯಿಂದ ॥೩॥

--✿✿✿✿✿--

೩೩೪
ಪರಮಪುರುಷ ರಾಘವ ಪಾಲಿಸೊ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಪರಮಪುರುಷ ರಾಘವ ಪಾಲಿಸೊ
ಸುರಮುನಿವರ ಪೂಜಿತ ॥ಪ॥

ಸರಸಿಜಾಪ್ತವಂಶಾಬ್ಧಿ ಚಂದ್ರಮ ನಿನ್ನ
ಹೊರತು ಪೊರೆವರನ್ಯರ ಕಾಣೆನೊ ॥ಅ.ಪ॥

ಕಂಜದಳಾಕ್ಷ ನಿರಂಜನ ಶುಭಕರ
ಆಂಜನೇಯಪ್ರಿಯ ಆದರಿಸೈ ॥೧॥

ಮೃತ್ಯಪರಿಹರಿಸೆನುತ್ತ ಬೇಡಲು ನಿನ್ನ
ಭಕ್ತಜನರಿಗಭಯ ಕೊಡುವನೆ ॥೨॥

ಸಾಮಜವರದ ಮಹಾಮಹಿಮನೆ ನಮ್ಮ
ಸ್ವಾಮಿ ನೀನೆ ಗುರುರಾಮವಿಠಲ ॥೩॥

--✿✿✿✿✿--

೩೩೫

ಪರಮಪುರುಷ ರಘುವೀರ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಪರಮಪುರುಷ ರಘುವೀರ ॥ಪ॥

ಪಾಹಿಮಾಂ ದಶರಥ ಸುಕುಮಾರ ॥ಅ.ಪ॥

ದುರಿತಸಂಹಾರ ದುರ್ಜನದೂರ
ಅಗಣಿತ ಸುಗುಣಗಂಭೀರ ॥೧॥

ರವಿಸುತಮಿತ್ರ ರಾಜೀವನೇತ್ರ
ಪ್ರವಿಮಲ ಭವ್ಯಚರಿತ್ರ ॥೨॥

ಗುರುರಾಮವಿಠ್ಠಲ ಸುರಮುನಿಪಾಲ
ತುಲಸೀಶೋಭಿತ ವನಮಾಲ ॥೩॥

--✿✿✿✿✿--

ರಾಮಚಂದ್ರ ಸೀತಾ ಮನೋಹರನೆ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ರಾಮಚಂದ್ರ ಸೀತಾ ಮನೋಹರನೆ ಸ್ವಾಮಿಯೆನ್ನ
ಕಾಯೋನೀನೆ ಕರುಣದಿ ॥ಪ॥

ಆ ಮಹೇಶ್ವರನು ನಿನ್ನ ದಿವ್ಯಸಿರಿ ನಾಮಮಹಿಮೆ
ತನ್ನ ಸತಿಗೆ ಪೇಳ್ದನು
ರಾಮರಾಮಯೆಂದು ಪೊಗಳುವನು ಮಹಾರಾಜ ಸಾರ್ವಭೌಮ
ಪೂರ್ಣಕಾಮನೆ
ಸಾಮಜರಾಜವರದ ಕೃಪಾಕರ ಸತ್ವಲೋಕವಂದಿತ ಪರಾತ್ಪರ
ಕಾಮಕೋಟಿಲಾವಣ್ಯ ರವಿಕುಲಸೋಮ
ದಶರಥಾವನೀಶಕುಮಾರ ॥೧॥

ದೇವದೇವನೆ ಕೃಪಾವಲೋಕನದಿ ದೀನಜನರ ನೋಡೊ
ನೀ ದಯಮಾಡೊ
ದೇವಿಸಹಿತ ಎನ್ನ ಹೃದಯದಲಿ ನಿನ್ನ ದಿವ್ಯದರ್ಶನವ
ನೀಡೋಯೆನ್ನ ದುರಿ-
ತಾವಳಿಗಳ ಪರಿಹರಿಸುವದು ಪತಿತಪಾವನಾ ಪ್ರಮೇಯ
ಜಯಜಯ ಪ್ರಭೋ
ರಾವಣಾದಿ ದನುಜಭಂಜನ ಜಗಜೀವನ ನತಜನ ಸಂಜೀವನ
ಸುಗ್ರೀವಮಿತ್ರ ಶುಭಚರಿತ್ರ ಋಷಿಗಣಭಾವಿತ
ಕುಶೀಲವರತಾತ ಸುಪ್ರೀತ ॥೨॥

ಸರಸಿಜೋದ್ಭವಾದ್ಯಮರನಾಯಕ ಸಾಧುರಕ್ಷಸ್ಸದ್ಧರ್ಮಪಾಲಕ
ತರುಚರಾಧಿನಾಥದಾತ ಪುರುಷೋತ್ತಮ ಸಮೀರಜಾತ
ರಂಗಮಂದಿರ
ತರಣಿ ಚಂದ್ರನಯನ ನೃಪವರೇಣ್ಯ ದಾಸಪೋಷ ಮಾಯಾ
ಮನುಜವೇಷ

ಪರಮಾತ್ಮ ನಾರದ ಗಾನಲೋಲ ಗುರುರಾಮವಿಠಲ
ದುರ್ಜನಕಾಲ
ಖರಸೂದನ ಶರಧಿಸೇತುಬಂಧನ ಕಂಜೇಕ್ಷಣ
ಮಾಂ ಪಾಹಿ ರಘುವೀರ ॥೩॥

--✿✿✿✿✿--

೩೩೭

ರಾಮನಾಮ ಕೀರ್ತನೆ ಮಾಡೊ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ರಾಮನಾಮ ಕೀರ್ತನೆ ಮಾಡೊ ಮುದಗೊಡೊ ॥ಪ॥

ಹೃತ್ತಾಮರಸದಿ ನೋಡೋ ಕೊಂಡಾಡೊ ॥ಅ.ಪ॥

ಮರಮರ ಎಂದಾ ವಾಲ್ಮೀಕನ
ವರಋಷಿ ಎನ್ನಿಸಿದಾತನ
ಧರಣಿಸುತೆಯಳ ಸಮೇತನ
ಮರುತಾತ್ಮಜಾದಿನುತನ ಸುಚರಿತನ ॥೧॥

ದಶರಥಗೆ ಮಗನಾದನ
ಪಶುಪತಿಚಾಪವ ಮುರಿದನ
ಅಸುರರನೆಲ್ಲ ಸಂಹರಿಸಿದನ
ಬ್ರಹ್ಮಾದಿದೇವ ವಂದ್ಯನಾ ರಾಜೇಂದ್ರನ ॥೨॥

ಭರತ ಶತ್ರುಘ್ನ ಲಕ್ಷ್ಮಣ ಸೇವ್ಯನ
ಸರಸಿಜಗಾಪ್ತಜ ಭಾವ್ಯನ
ಪರಮಾತ್ಮ ಗುರುರಾಮವಿಠ್ಠಲನ
ನೃಪಾಗ್ರಗಣ್ಯನಾದನ ವಿನೋದನ ॥೩॥

--✿✿✿✿✿--

೩೩೮
ರಾಮ ಜಾನಕಿಮನೋಹರ ಮಾರ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ರಾಮಜಾನಕೀಮನೋಹರ ಮಾರಕೋಟಿಸುಂದರ ॥ಪ॥

ಸೋಮಶೇಖರಾದಿ ಸುರಸ್ತೋಮನುತ ನಾಮ ॥ಅ.ಪ॥

ವಾಯುಸುತ ಮುಖ್ಯಕಪಿನಾಯಕ ವಿನುತಾಮೋಘ
ಸಾಯಕ ಶ್ರೀದಾಯಕ ನಿರ್ಮಾಯ ರಘುರಾಯ ॥೧॥

ಅಪ್ರಾಕೃತಶರೀರ ಗೋವಿಪ್ರಜನಪಾಲ ನಿನ್ನ
ಸುಪ್ರಭಾವ ಹೊಗಳಲು ಸರ್ಪಾಧಿಪಗಳವೇ ॥೨॥

ದೇವ ಗುರುರಾಮವಿಠಲಾ ವನಜನೇತ್ರ ನೂತ-
ನಾವರಣಪುರಿವಾಸ ಕಾವುದೆಮ್ಮನು ಸರ್ವೇಶಾ ॥೩॥

--✿✿✿✿✿--

೩೩೯
ರಾಮರಾಜೀವಾಕ್ಷ ಬೇಗ ಬಾರೊ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ರಾಮರಾಜೀವಾಕ್ಷ ಬೇಗಬಾರೊ ॥ಪ॥

ಕಾಮಿತವರಗಳನು ಬೀರೊ ॥ಅ.ಪ॥

ದಶರಥನೃಪ ಸುಕುಮಾರ
ದಶವಿಧ ದಿವ್ಯಶರೀರ ॥೧॥

ಸೀತಾದೇವಿಹೃದಯಾಬ್ಜಮಿತ್ರ
ಚೇತೋಹರನುತಿಪಾತ್ರ ॥೨॥

ಗುರುರಾಮವಿಠಲೇಶ ನೀನೆ
ಶರಣರ ಪರಿಪಾಲಕನೆ ॥೩॥

೩೪೦
ಶ್ರೀರಾಮ ಮಂಗಳಂ ಘೋರಾಘಮರ್ದನ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧ಲ೫೦ - ೧೯೧೫)

ಶ್ರೀರಾಮ ಮಂಗಳಂ ಘೋರಾಘಮರ್ದನ ॥ಪ॥

ಸ್ಮರಕೋಟಿಲಾವಣ್ಯ ವಾನರ ಪರಿ-
ವಾರ ಜಾನಕೀಮನೋಹರ ॥ಅ.ಪ॥

ಪಾಂಡವಪಾಲನ ಅಂಡಜವಾಹನ
ಕುಂಡಲೀಶಯನ ರಿಪುಮಂಡಲವಿ-
ಖಂಡನ ಬ್ರಹ್ಮಾಂಡನಾಯಕ ॥೧॥

ವೆಂಕಟರಮಣ ಸಂಕಟಹರಣ
ಪಂಕಜನಯನ ಬಿರುದಾಂಕ ಹರಿ
ಶಂಖಧರ ಕಿಂಕರಪ್ರಿಯ ॥೨॥

ಮರುತಾತ್ಮಜಾರ್ಚಿತ ಪುರವೈರಿಭಾವಿತ
ಸುರನಾಥಸೇವಿತ ಮಹಿಮಾನ್ವಿತ
ಗುರುರಾಮವಿಠಲ ಶುಭಚರಿತ ॥೩॥

--✿✿✿✿✿--

೩೪೧
ಶ್ರೀರಾಮ ಮನೋಹರ ಕೃಪಾಸಾಗರ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧ಲ೫೦ - ೧೯೧೫)

ಶ್ರೀರಾಮ ಮನೋಹರ ಕೃಪಾಸಾಗರ ॥ಪ॥

ಸಾರಸಾಪ್ತವಂಶಭೂಪ ಸಾಧುಪೋಷಕ
ಮಾರುತಾತ್ಮಜ ಪೂಜಿತ ॥ಅ.ಪ॥

ಗಾಧಿತನಯ ಯಾಗರಕ್ಷಗಾಧಮಹಿಮನೇ
ವೇದವೇದ್ಯ ಬೋಧರೂಪ ಬುಧಜನಪ್ರಿಯಾ
ವೇದವಂದ್ಯ ವಿಶ್ವವಲ್ಲಭಾ ॥೧॥

ರಾವಣಾದಿದನುಜಭಂಜನಾನತರ ಕಾವನೆ
ಭಾವಜಾರಿ ಚಾಪಭಂಗ ಭಾಸುರಾಂಗನೆ
ದೇವದೇವ ದೀನರಕ್ಷಕಾ ॥೨॥

ಭೂಮಿಗಧಿಕ ನೂತನಪುರಿಧಾಮ ನೀನಲಾ
ಕಾಮಿತಾರ್ಥದಾತ ಸಾಮಗಾನ ಲೋಲ
ಕ್ಷೇಮವೀವ ಗುರುರಾಮವಿಠ್ಠಲ ॥೩॥

--✿✿✿✿✿--

೩೪೨
ಶ್ರೀ ರಘುವರ ತೇ ನಮೋ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)

ಶ್ರೀ ರಘುವರ ತೇ ನಮೋ ನಮೋ ॥ಪ॥

ಆಶ್ರಿತಪರಿಪಾಲ ತೇ ನಮೋ ನಮೋ ॥ಅ.ಪ॥

ಸರಸಿಜಭವಪಿತ ಸರಸಿಜಲೋಚನ
ಪರಮಪುರುಷ ಖಗಪತಿಗಮನ
ಸುರಕಿನ್ನರ ಭೂಸುರನರವರನುತ
ಸೂರಿಜನಪ್ರಿಯ ತೇ ನಮೋ ನಮೋ ॥೧॥

ಮದನಕೋಟಿಲಾವಣ್ಯ ಶರಣ್ಯ ನಾ–
ರದ ವೀಣಾಗಾನ ವಿಲೋಲ
ಮುದತೀರ್ಥವರದ ಮುನಿಜನಪಾಲಕ
ಸದಮಲಾತ್ಮಕ ತೇ ನಮೋ ನಮೋ ॥೨॥

ರಾಮಭೂವರ ವಿರಾಧಾಂತಕಬಲ-
ರಾಮಾನುಜ ರಘುರಾಮವಿಭೋ
ಸೋಮಸೂರ್ಯನಯನ ಶುಭ-
ತಮ ಶ್ರೀ ಗುರುರಾಮವಿಠ್ಠಲ ತೇ ನಮೋ ॥೩॥

--✿✿✿✿✿--

೩೪೩

ಸಲಹೋ ಎನ್ನನು ಸ್ವಾಮಿ ಸರ್ವಾಂತರ್ಯಾಮಿ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಸಲಹೋ ಎನ್ನನು ಸ್ವಾಮಿ ಸರ್ವಾಂತರ್ಯಾಮಿ ॥ಪ॥

ಜಲಜಾಪ್ತಕುಲಭೂಷಾನತಜನ ಪ್ರೇಮಿ ॥ಅ.ಪ॥

ದಶರಥನಂದನ ದಾನವಹರಣ
ಪಶುಪತಿಮುಖ ಸುರಪೂಜಿತಚರಣ ॥೧॥

ಭಕ್ತಮಾನಸಹಂಸ ಭವರೋಗವೈದ್ಯ
ಮುಕ್ತಿಪ್ರದಾಯಕ ನಿಗಮಾಂತವೇದ್ಯ ॥೨॥

ಸೀತಾಮನೋಹರಾ ಶ್ರಿತಪರಿಪಾಲ
ವಾತಸಂಭವಪ್ರಿಯ ಗುರುರಾಮವಿಠಲ ॥೩॥

--✿✿✿✿✿--

೩೪೪

ಸರೋಜದಳೇಕ್ಷಣ ಸಲಹೋ ಯೆನ್ನ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಸರೋಜದಳೇಕ್ಷಣಾ ಸಲಹೋಯೆನ್ನ । ವಿಧಿ ॥ಪ॥

ಪುರಾರಿನುತಚರಣಾ ನಾರಾಯಣಾ ॥ಅ.ಪ॥

ಸರಸಿಜಾಪ್ತ ಕುಲಚಂದ್ರಮ ರಾಮ । ಮ-
ಹಾರಾಜ ರಾಜಲಲಾಮ ನಿಸ್ಸೀಮ ॥೧॥

ಎನ್ನಪರಾಧಗಳೇನಿದ್ದರು ಸರಿ
ಮನ್ನಿಸುವರು ನೀನಲ್ಲದಾರು ॥೨॥

ಅಜಿತಾದ್ಯನಂತರೂಪಾಪ್ರಮೇಯ
ಭಜಕಪೋಷ ಗುರುರಾಮವಿಠ್ಠಲರಾಯಾ ॥೩॥

--✿✿✿✿✿--

೩೪೫

ಸೀತಾಮನೋಹರ ಬಾರೋ ಸ್ವಾಮಿ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಸೀತಾಮನೋಹರ ಬಾರೊ । ಸ್ವಾಮಿ ॥ಪ॥

ಸೀತಾಮನೋಹರ ಶ್ರಿತಲೋಕೋದ್ಧಾರ ರಘು ।
ನಾಥ ಪ್ರಖ್ಯಾತದಾತ ಬಾರೋ ॥ಅ.ಪ॥

ನಂಬಿದಭಕ್ತರ ಬೆಂಬಿಡದೆ ಪೊರೆವ
ಅಂಬುಜಲೋಚನ ಬಾರೋ ॥೧॥

ನೀನು ಮಾಡಿಸಿದಂತೆ ನಾನು ಮಾಡುವೆನೆಂಬ ಸು ।
ಜ್ಞಾನವ ಪಾಲಿಸೆ ಬಾರೋ ॥೨॥

ಅಂತಃಪ್ರೇರಕನಾಗಿ ನಿಂತು ಜೀವರನೆಲ್ಲ
ಸಂತೈಸುತಿಹ ದೇವ ಬಾರೋ ॥೩॥

ಬಾಗಿ ನಮಿಸುತಿರ್ಪ ಭಾಗವತರ ಭವ-
ರೋಗಕ್ಕೆ ವೈದ್ಯ ನೀನೆ ಬಾರೋ ॥೪॥

ಪರಮನಿಷ್ಕಾಮಿಯಾದ ಮರುತಾತ್ಮಜಾಂತರ್ಗತ ಶ್ರೀ
ಗುರುರಾಮವಿಠಲ ಬೇಗಬಾರೋ ಸ್ವಾಮಿ ॥೫॥

--✿✿✿✿✿--

೩೪೬
ಸೀತಾಪತಿಮಮಲಂ ವಂದೇಹಂ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಸೀತಾಪತಿಮಮಲಂ ವಂದೇಹಂ ॥ಪ॥

ವಾತಾತ್ಮಜರವಿಜಾತಾದಿ ವಾನರ
ವ್ರಾತನಮಿತಪಾದಂ ನತಮೋದಂ ॥ಅ.ಪ॥

ರವಿಕುಲದೀಪಂ ರಮಣೀಯರೂಪಂ
ಕರಧೃತ ಶರಚಾಪಂ ಬಲಕೋಪಂ ॥೧॥

ದಶರಥಬಾಲಂ ಧರ್ಮಾನುಕೂಲಂ
ದಶಶಿರಮದಹರಣಂ ಜಿತಮರಣಂ ॥೨॥

ಗುರುರಾಮವಿಠಲಂ ಸುರಮುನಿಪಾಲಂ
ತುಳಸೀವನಮಾಲಂ ಸುಶೀಲಂ ॥೩॥

--✿✿✿✿✿--

೩೪೭
ಹಸೆಗೆ ಬಾರೈ ರಾಮಾ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಹಸೆಗೆ ಬಾರೈ ರಾಮಾ ॥ಪ॥

ಬಿಸಜಾಪ್ತವಂಶಲಲಾಮ ॥ಅ.ಪ॥

ಮಾನಸಪೀಠಕೆ ಜಾನಕೀದೇವಿ ಸಹಿತಾ
ಆನತರಿಗೆ ಸೌಖ್ಯವ ಬೀರುತಲಿ ॥೧॥

ಬ್ರಹ್ಮಮಹೇಶ್ವರ ಸುಮ್ಮಾನದಿ ಕೈಕೊಡಲು
ಧರ್ಮಸ್ಥಾಪಿಸಿ ಧರಣಿಮಂಡಲದಿ ॥೨॥

ಹನುಮಂತ ಜಾಂಬವ ಇನತನಯಾಂಗದಾದಿ
ಘನಕಪಿವೀರರು ಕಾದುಕೊಂಡಿರುವರು ॥೩॥

ಕಾಮಾದಿವರ್ಗಂಗಳ ನಿರ್‌ನಾಮವಾಗಿ ಪೋಪಂತೆ
ನೀಮನವೊಲಿದನುಗ್ರಹಿಸಿ ಬೇಗದಿ ॥೪॥

ಅಂತಃಕರುಣಸಿದ್ಧಿಯಂ ತವಕದಿ ಕೊಟ್ಟು
ಅಂತರಾತ್ಮಕ ಗುರುರಾಮವಿಠಲನೆ ॥೫॥

--✿✿✿✿✿--

೩೪೮
ಹಸೆಗೆ ಬಾರೈ ಶ್ರೀರಾಮ ಹನುಮ ಪ್ರೇಮ
(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಹಸೆಗೆ ಬಾರೈ ಶ್ರೀರಾಮ ಹನುಮಪ್ರೇಮ ॥ಪ॥

ದಶರಥಕುಮಾರ ದಶವಿಧಶರೀರ ॥ಅ.ಪ॥

ಪರಮಾತ್ಮ ಶುಭಚರಿತ ಸೂರ್ಯವಂಶಾ
ಶರಧಿಗೆ ಚಂದ್ರಮನೆ ಕರುಣದಿ ಬೇಗನೆ ॥೧॥

ಅಚ್ಯುತಾ ಅನಂತ ಅಗಣಿತ ಗುಣವ್ರಾತ
ಚಿತ್ಸುಖಾಪ್ರದಾತ ಜಾನಕೀಸಮೇತಾ ॥೨॥

ದುರಿತಾನಲಸಲಿಲ ದೈತ್ಯನಿಕರಕಾಲ
ಗುರುರಾಮವಿಠಲ ತರಣಿಜಪಾಲ ॥೩॥

೩೪೯

ಭೋಜನ ಮಾಡೈಯ್ಯ ಶ್ರೀರಾಮಚಂದ್ರ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ಭೋಜನ ಮಾಡೈಯ್ಯ ಶ್ರೀರಾಮಚಂದ್ರ ॥ಪ॥

ರಾಜೀವನಯನ ಸ್ವರಾಜಾನುಜ ಮಹಾ
ರಾಜವಂದಿತ ರಾಜಾರಾಜ ಸಭಾರ್ಚಿತ ॥ಅ.ಪ॥

ಉಪ್ಪು ಉಪ್ಪಿನಕಾಯಿ ಪಚ್ಚಡಿಗಳು ಗೊಜ್ಜು
ಹಪ್ಪಳ ಸಂಡಿಗೆ ಶಾಖಗಳೂ
ಒಪ್ಪುವರಸ ಕೂಟು ಹುಳಿ ಪಳಿದ್ಯವು ಸೂಪ
ತುಪ್ಪ ಶಾಲ್ಯೋದನ ಚಿತ್ರಾನ್ನಗಳನ್ನು ॥೧॥

ಹೋರಿಗೆ ಶಷ್ಕುಲಿ ಹೋಳಿಗೆ ಕಡುಬು ಮು-
ಚ್ಚೋರೆಯು ಅತಿರಸ ಹೊಯ್‌ಗಡಬೂ
ಕೀರು ಆಂಬೊಡೆ ಬೋಂಡ ಶಾವಿಗೆ ಹುಳಿದೋಸೆ
ಕ್ಷೀರ ಶರ್ಕರ ಜೇನು ತುಪ್ಪವೆ ಮೊದಲಾಗಿ ॥೨॥

ಮಂಡಿಗೆ ಲಾಡು ಚಿರೋಟಿ ಘೀವರು ಪೇಣಿ
ಬೆಂಡು ಸೋಮಾಶಿ ಬತ್ತಾಸು ಫೇಡಾ
ಖಂಡಶರ್ಕರೆ ಕಬ್ಬು ಖರ್ಜೂರ ದ್ರಾಕ್ಷಿಗ-
ಳುಂಡು ತ್ರಿಲೋಕಗಳುದ್ಧರಿಸುವ ಸ್ವಾಮಿ ॥೩॥

ಪನಸು ಜಂಬೂ ಕದಳಿ ನಾರಂಗ ಎಳನೀರು
ಪಾನಕ ತಕ್ರ ಬೆಣ್ಣೆಯು ಮೊಸರೂ
ಅನುವಾದ ಸ್ವಾದೋದಕ ಮೊದಲಾಗಿ ಶ್ರೀ
ಯರ್ಪಿಸುವಳು ಭಕ್ತಿಯಿಂದಾ ಕೈಕೊಂಡು ನೀ ॥೪॥

ನಿತ್ಯತೃಪ್ತ ನಿರಾಮಯಗೆ ನಿರಂತರ
ಸತ್ವರಜಸ್ತಮೋಗುಣಗಳೆಂಬ
ಸತ್ಯತಾಂಬೂಲವರ್ಪಿಸಲು ಯಥಾಶಕ್ತಿ
ವಿತ್ತಸಮೇತವಾದಿದನು ಕೈಕೊಂಡು ನೀ ॥೫॥

ಪೂಗ ಲವಂಗ ಜಾಜಿಕಾಯಿ ಏಲಕ್ಕಿ
ನಾಗವಲ್ಲಿ ದಳಗಳು ಸಹಿತ
ಭೋಗದ್ರವ್ಯವು ಮುಕ್ತಚೂರ್ಣ ದಕ್ಷಿಣೆ ಸಹ
ಈಗ ತಾಂಬೂಲವೊಪ್ಪಿಸಲು ಕೈಕೊಂಡು ನೀ ॥೬॥

ನವ್ಯಸುಗಂಧ ಪುನರ್ಧೂಪವರ್ಪಿಸಿ
ಕಾವ್ಯನಾಟಕಸ್ತುತಿಕಥೆಗಳಿಂದ
ಸೇವ್ಯಸೇವಕನಾಗಿ ಸೇವೆ ಕೈಕೊಳ್ಳೆಂದು
ಭವ್ಯಚರಿತ ನಿನ್ನ ಹೊಗಳುತ್ತ ಕುಣಿವರು ॥೭॥

ಅವ್ಯಯಾನಂತ ಜಗದ ಬದುಕು ನೀನೆಂದು
ಸೇವ್ಯಸೇವಕನಾಗಿರುವೆ ಎಂದು
ಭವ್ಯಚರಿತರು ಪೊಗಳುವರೈ ನಿನ್ನ
ಸವ್ಯಸಾಚಿಯ ಸೂತ ಗುರುರಾಮವಿಠಲನೆ ॥೮॥

--✿✿✿✿✿--

೩೫೦
ಮಂಗಳಂ ಸೀತಾಮನೋಹರ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)

ಮಂಗಳಂ ಸೀತಾಮನೋಹರ ॥ಪ॥

ಮಂಗಳಂ ಜಗದೇಕಸುಂದರ ॥ಅ.ಪ॥

ಮಂಗಳಂ ವಿಧಿರುದ್ರಮುಖ ಸುರವಿನುತ ಪದಯುಗಳ
ಮಂಗಳಂ ಸೂರ್ಯಕುಲಭೂಷಣ
ಮಂಗಳಂ ಮರುತಾತ್ಮಜಪ್ರಿಯ ಮಂಗಳಂ
ಮಂಗಳಾರತಿಯು ಗುರುರಾಮ ವಿಠಲಗೆ ॥೧॥

ಪರಾತ್ಪರಾನಂತ ಗುಣಾರ್ಣವ ಪ್ರಭೋ
ಅಜೇಶವಂದ್ಯಾಮಲ ಪಾದಪಂಕಜ
ಸರೋಜಮಿತ್ರಾನ್ವಯ ಪೂರ್ಣಚಂದ್ರಮಾ
ನಮಾಮ್ಯಹಂ ತೇ ಗುರುರಾಮವಿಠ್ಠಲ ॥೨॥

ನಮ್ಮ ತಂದೆಯು ರಾಮನು

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)

ನಮ್ಮ ತಂದೆಯು ರಾಮನು
ಜಾನಕಿಯು ನಮ್ಮಮ್ಮ
ನಮಗೆ ಭಯವೇನು ॥ಪ॥

ಬ್ರಹ್ಮಾದಿದಿವಿಜರು ಬಂಧುವರ್ಗಂಗಳು
ಪವಮಾನತನಯನು ಪಾಲಿಪ ಗುರುವಯ್ಯಾ ॥ಅ.ಪ॥

ಕಾಲಕಾಲದಿ ತಪ್ಪದೆ । ಭತ್ಯವ ಹಾಕಿ
ಬಾಲಲೀಲೆಗಳಾಡಿಸಿ
ಮೇಲೆ ತುಡುಗಾಟವಾಡಿದರೆ ಕೆನ್ನೆಯ ಹಿಂಡಿ
ಹಾಲಕುಡಿಸಿ ಮಕ್ಕಳರ್ಥಿಯ ನೋಡುವ ॥೧॥

ಇತರ ಮಕ್ಕಳಿಗೆಲ್ಲಾ । ಅವರ ಮಾತಾ
ಪಿತರು ವಡವೆಗಳಿಟ್ಟು
ಮತಿಹೀನರಾಗಿ ಕಳೆಯಲು ಶಿಕ್ಷೆಗೈವರು
ಮಿತಿಯಿಲ್ಲದೆ ಬೈದು ಬಲು ಚಿಂತೆಯಪಡುವರು ॥೨॥

ಕಳ್ಳರಿಗೆ ಸಿಕ್ಕದಯ್ಯ । ನಮ್ಮೊಡವೆಗಳ
ಕಳಚುವುದಕೆ ಬಾರದು
ಒಳ್ಳೆವಸ್ತ್ರವ ಉಡಿಸಿ ಉಚಿತತಿಂಡಿಯ ಕೊಡಿಸಿ
ಸುಳ್ಳಾಡದಂದದಿ ಸ್ತುತಿಸಿ ನಗುವರು ॥೩॥

ಓದುಬರಹವ ಕಲಿಸಿ । ನಮ್ಮನ್ನು ಕೆಲವು
ಹೊತ್ತು ಆಟಗಳಾಡಿಸಿ
ಆದರಿಸುತ ಜನ್ಮಜನ್ಮಗಳಲಿ ಬಿಡದೆ ಕಾದು
ಕೊಂಡಿರುವರು ಕಡೆಗೂ ನಮ್ಮಗಲರು ॥೪॥

ಇಂತಹ ನಮ್ಮವರ ಬಿಟ್ಟು । ಬರಿದೇ ಲೋಕ
ಸಂತೆಯವರನು ನಂಬುವರೆ
ಎಂತಾದರೂ ಗುರುರಾಮವಿಠಲನ ನಾಮ
ಸ್ವಂತವಾದರೆ ಮುಕ್ತಿಸ್ವಾಧೀನವಾಗುವುದು ॥೫॥

--✿✿✿✿✿--

೩೫೨
ಚೆಂಡನಾಡಿದನು ಶ್ರೀರಘುವರ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)

ಚೆಂಡನಾಡಿದನು ಶ್ರೀರಘುವರ ॥ಪ॥

ಚೆಂಡನಾಡಿದನು ಮಾರ್ತಾಂಡ ವಂಶೋದ್ಭವ
ಪುಂಡರೀಕಾಕ್ಷನು ಭೂಮಿಸುತೆಯ ಸಹಿತ ॥ಅ.ಪ॥

ಸರಸಿಜದಳದಂತೆ ಮೆರೆಯುವ ಹಸ್ತದಿ
ಪರಿಪರಿ ಪುಷ್ಪಗಳ ಪಿಡಿದು ಸಂಭ್ರಮದಿಂದ ॥೧॥

ಸರಸದಿ ಸೀತೆಯ ಸಿರಿಮೊಗ ನೋಡುತ
ವರರತ್ನಮುಕ್ತ ಭಾಸುರ ಪುಷ್ಪಮಯವಾದ ॥೨॥

ಕಾಮಕೋಟಿಲಾವಣ್ಯ ಕಾಂತೆಯೊಡನೆ ಬಲು
ಪ್ರೇಮದಿಂದಲಿ ಗುರುರಾಮವಿಠಲ ತಾನು ॥೩॥

--✿✿✿✿✿--

೩೫೩
ಕರುಣ ಬರುವುದೆಂದಿಗೆ ಶ್ರೀರಾಮಚಂದ್ರಾ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ – ೧೯೧೫)

ಕರುಣ ಬರುವದೆಂದಿಗೆ ಶ್ರೀರಾಮಚಂದ್ರಾ ॥ಪ॥

ದುರಿತಶರಧಿಯೊನೊತ್ತರಿಸಿ ನಿನ್ನಯಾ ದಿವ್ಯ
ಚರಣ ಸೇವೆಯೊಳಿರಿಸಿ ಪಾಲಿಸೋ ದೇವ ||೧||

ಈಷಣತ್ರಯವೆನ್ನಾ ಆಶೆಪಡಿಸುತಿದೆ
ಮೋಸಗೊಳಿಸದಿರೊ ಶ್ರೀಶ ಶ್ರೀನಿವಾಸಾ ||೨||

ಪರಮತತ್ವಾಧಿಕಾರಿ ಸುರಮುನಿಸುತಾ ಶೌರಿ
ಗುರುವು ತುಲಸೀರಾಮಾ
ದೊರೆಯ ನಂಬಿದೆನೆಲ್ಲೋ ಕರುಣ ||೩||

--✿✿✿✿✿--

೩೫೪
ನಾ ನಿಮ್ಮ ದಾಸನಯ್ಯ ಸೀತಾರಾಮ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ನಾ ನಿಮ್ಮ ದಾಸನಯ್ಯ ಸೀತಾರಾಮ ||ಪ||

ನಾ ನಿಮ್ಮ ದಾಸನಹುದೊ
ನೀನ ಯೀಜಗದೀಶನಹುದೊ
ಭಾನುಕೋಟಿಪ್ರಕಾಶನೇ ಸಂಗೀತ
ಗಾನ ವಿನೋದರಂಗಾ ||೧||

ಮತಿಹೀನ ನಾನಾದೆನೈ ಶಾಶ್ವತನಾ ಸ
ದ್ಗತಿಯ ನೋಡದೆ ಹೋದೆನೈ
ಹಿತವ ಪಾಲಿಸಬೇಕೊ ಓಂ ಶ್ರೀ
ಪತಿತಪಾವನ ರಂಗನಾಯಕ ||೨||

ಸತಿಶಿರೋಮಣಿ ಪರಮಸೀತಾ
ಪತಿಯೆ ನಾನಿನ್ನ ಸುತನು ಕಾಣೈ
ಕಂದಯ್ಯಗಾರುಗತಿ ನಿನ್ನಯ ಚೆಲ್ವ
ಚಂದಗಾದವೆ ಶ್ರುತಿ ||೩||

ಹಿಂದೆ ಮಾಡಿದ ಕೊಲೆಗಳಂ ಬೆನ್ನ
ಮುಂದೆ ಬಾರದಂತದ ಹರಿಯೋ
ಇಂದಿರೇಶ ಮುಕುಂದ ಪರಮಾ
ನಂದ ತುಲಸೀರಾಮ ದೇಶಿಕಾ ॥೩॥

--✿✿✿✿✿--

೩೫೫

ರಾಮನಾಮವ ಪಾಡೆಲೊ ಮನುಜಾ

(ಗುರುರಾಮವಿಠಲ / ಬಾಗೇಪಲ್ಲಿ ಸುಬ್ರಹ್ಮಣ್ಯದಾಸ / ೧೮೫೦ - ೧೯೧೫)

ರಾಮನಾಮವ ಪಾಡೆಲೊ ಮನುಜಾ ॥ಪ॥

ರಾಮನಾಮವ ಪಾಡಿ ಈ ಸಭೆಯೆಲ್ಲಾ ನೋಡಿ
ಕಾಮಾಕಲಭೀಮಾತನ ಕಾಮಿನಿಗೇಳಿದ ಸೀತಾ ॥೧॥

ಸಾಧಿಸಿದಾರೊಳು ನೀ ಸಂಭ್ರಮವಾಗೊ ಯೆಲೊ
ಶೋಧಿಸಿ ನಿನ್ನೊಳು ನಿಜಸಾಧನ ಕೇಳುವ ಸೀತಾ ॥೨॥

ಇಂತೀಪರಿಯೊಳು ಮಹದಂತರವಿಹುದಿದಾ
ಹಂತವರ ಕಂಡು ನೀ ವೇದಾಂತದೊಳು ನಿಂದು ಸೀತಾ ॥೩॥

ಭರತಪುರೀಶನನ್ನು ಮರೆತರಾಗುವುದುಂಟೆ
ಅರಿತು ನೋಡಿಕೊಂಡು ನೀ ಪರಮತತ್ವವಿದೆಂದು ಸೀತಾ ॥೪॥

--✿✿✿✿✿--

೩೫೬

ಕಂಡುಕೊಂಡೆನೊ ಕೋದಂಡಧಾರಿಯ

(ಜಾಜೀಶ / ಶಾಮಶರ್ಮದಾಸ / ೧೮೯೪ - ೧೯೭೨)

ಕಂಡುಕೊಂಡೆನೊ ಕೋದಂಡಧಾರಿಯ ॥ಪ॥

ಪುಂಡರಾದಿ ರಾಗದಿ ದೈತ್ಯರನ್ನು
ತುಂಡುಗೈದ ವಿಭೀಷಣವರದನ್ನ ॥ಅ.ಪ॥

ಸೀತಾ ಸೌಮಿತ್ರಿ ಭರತರನ್ನು ಕೂಡಿ
ವಾತಾತ್ಮಜಾತ ಪಾದಪಿಡಿಯುತ
ಖ್ಯಾತರಾದ ಸುಗ್ರೀವ ಜಾಂಬವರಿಂ
ಸ್ತೋತ್ರಗೊಳ್ಳುತಿಹ ಜಾಜೀಶನನ್ನು ॥೧॥

--✿✿✿✿✿--

೩೫೭
ನೀನೇ ಸಕಲವೆನಗೆ ರಾಮಚಂದ್ರ
(ಜಾಜೀಶ / ಶಾಮಶರ್ಮದಾಸ / ೧೮೯೪ - ೧೯೭೨)

ನೀನೇ ಸಕಲವೆನಗೆ ಶ್ರೀರಾಮಚಂದ್ರ
ನೀನೇ ದೊರೆಯರಸನೊ ॥ಪ॥

ಶ್ರೀನಿಧಿಯೆ ನಿನ್ನವರು ಸತತ ಸಾನುರಾಗದ ಬಳಗವಹುದೈ
ದೀನಜನಮಂದಾರ ನೇಹಂ ಶ್ರೀನಿಕೇತನ ಸತ್ಯಸಾರ ॥ಅ.ಪ॥

ರಾಮ ನೀಯೆನ್ನಾತ್ಮನು ಈ ಮಹಾಸೀತಾದೇವಿಯೆ
ತಾ ಮತಿಯು ಶ್ರೀ ಮನೋಹರ ಸಹಜರೆಲ್ಲ ಪ್ರೇಮ ಪಂಚ
ಪ್ರಾಣಗಳು ನಿಧಿ ಭೀಮಬಲ ಮಾರುತಿಯ ಮನಸಿಗೆ
ರಾಮರೂಪವ ತೋರ್ಪನಾಡಿಯು ॥೧॥

ಧನ್ಯ ಶರೀರವು ಮಾನ್ಯಗೆ ತಾಮಸದ ಸ್ವಗೃಹವೂ
ಪುಣ್ಯಮೂರತಿ ಪೂಜೆಭೋಗ್ಯವು
ಕಣ್ಣನಿದ್ರೆಯು ಯೋಗಮುದ್ರೆಯು
ಚೆಣ್ಣನ ಸಂಚರಂಗಳು ಸ್ವಾಮಿ ನಿನಗೆ ಪ್ರದಕ್ಷಿಣೆ ॥೨॥

ಬಾಲನ ಮಾತುಗಳು ವೇದೋಕ್ತ ಸುಶೀಲನ ಸ್ತೋತ್ರಗಳು
ಕಾಲಂಕಾಲಗಳಲ್ಲಿ ಗೈಯುವ ಕಾರ್ಯಗಳು ಪರಮಾತ್ಮ ಸೇವೆಯು
ಶ್ರೀಲತಾಂಗಿಯಲೋಲ ಧ್ಯಾನಿಪೆ ಪಾಲಿಸೈ ಜಾಜೀಶ ಕೇಶವ ॥೩॥

೩೫೮

ರಾಘವದೇವ ಬಿಡಬೇಡ ಕೈಬಿಡಬೇಡ

(ಜಾಜೀಶ / ಶಾಮಶರ್ಮದಾಸ / ೧೮೯೪ - ೧೯೭೨)

ರಾಘವದೇವ ಬಿಡಬೇಡ ಕೈಬಿಡಬೇಡ ||ಪ||

ಆಗಮಾರ್ಚಿತ ಪಾದಪದ್ಮಪಿಡಿದೆ
ಬಿಡಬೇಡ ಕೈಬಿಡಬೇಡ ||ಅ.ಪ||

ಸೀತಾಕಾಂತನೆ ನಿನ್ನ ಭ್ರಾತಲಕ್ಷ್ಮಣನಂತೆ
ಪ್ರೀತಿಸುತೆನ್ನ ಸನಾಥನೆನಿಸು ||೧||

ನಂಬಿಬಂದ ವಿಭೀಷಣನನು ಬಲು
ಸಂಭ್ರಮದೊಳು ಲಂಕಾರಾಜನ ಗೈದ ||೨||

ಹನುಮನಂದದಿ ಸೇವೆಮಾಡಿ ಮೆಚ್ಚಿಸಲಾರೆ
ಕನಿಕರದೆನ್ನೊಳು ಘನಮನ ಮಾಡು ||೩||

ದುಷ್ಟಜನಕೆ ಭಯ ಶಿಷ್ಟಜನಕೆ ಜಯ
ಕೊಟ್ಟು ಭಕ್ತರಕಾವ ದಿಟ್ಟಹೆಜ್ಜಾಜೀಶ ||೪||

--✿✿✿✿✿--

೩೫೯

ರಾಮಚಂದ್ರನು ಶೋಭಿಪನಿಂದು

(ಜಾಜೀಶ / ಶಾಮಶರ್ಮದಾಸ / ೧೮೯೪ - ೧೯೭೨)

ರಾಮಚಂದ್ರನು ಶೋಭಿಪನಿಂದು ಸದ್ಭಕ್ತಬಂಧು ||ಪ||

ಸಾರಸಾಕ್ಷನು ಸಾಮಜವರದನು
ಭೂರಿಫಲಪ್ರದ ಭೂಮಿಜೆಯುತನು ||ಅ.ಪ||

ಧರೆಯಭಾರವ ತಾಕಳೆಯಬಂದು ಕಾರುಣ್ಯಸಿಂಧು
ನರರೂಪವ ಧರಿಸುತ್ತ ನಿಂದು ಕೋದಂಡವ ಪಿಡಿದು
ದುರುಳದೈತ್ಯರ ಶಿರವನೆ ತರಿದು
ಪರಿಪರಿ ವಿಧದಲಿ ಶರಣರಿಗೊಲಿಯುತ
ದುರಿತಸಂಕುಲವ ಪರಿಹರಿಸಿ ಪೊರೆವ ಶ್ರೀ ||೧||

ಸೂರ್ಯಸುತನ ಸೈನ್ಯದವರ ಸುಮನಸರ
ಧೈರ್ಯದಿಂ ಸಮರಗೈದವರ ವೀರಾಧಿವೀರರ
ಕಾರ್ಯವ ಸಾಧಿಸಿದ ವಾನರರ
ಪಾರವಶ್ಯರನು ಪರಮೇಷ್ಠಿಯಿಂದ
ಧಾರೆಯನೆರದಮೃತದಿ ಬದುಕಿಸಿದ ಶ್ರೀ ||೨||

ಘನವಂತ ವಿಭೀಷಣಂಗೆ ಅನುವನು ತೋರಿ ಸಾರಿ
ಅನುಜಾತ ಭಕುತಂಗೆ ಅನುಗ್ರಹಬೀರಿ ಆನಂದವೇರಿ
ಜನನಿಯರಾಶೀರ್ವಚನವ ಪಡೆದು
ಸನುಮತದಿಂ ಪುರಜನರೊಲುಮೆಯಲಿ
ದಿನಕರಪ್ರಕಾಶ ಜಾನಕಿನಂದ ಜಾಜಿಶ್ರೀಶ ಶ್ರೀ ||೩||

--✿✿✿✿✿--

೩೬೦
ರಾಮಕೋಟಿ ನಾಮಭಜನಾ
(ಜಾಜೀಶ / ಶಾಮಶರ್ಮದಾಸ / ೧೮೯೪ - ೧೯೭೨)

ರಾಮಕೋಟಿ ನಾಮಭಜನಾ ನೇಮದಿಂದ ಮಾಳ್ಪನು ಧನ್ಯ ||ಪ||

ಪ್ರೇಮಪಾಶದಿಂದ ಬಿಗಿದು ಸ್ವಾಮಿಯೆನ್ನ ಹೃದಯದಿ ನೆನೆದು ||ಅ.ಪ||

ಶಂಭು ತನ್ನ ಮನದಿನಿತ್ಯ ಇಂಬಿನಿಂದ ಧ್ಯಾನಿಸುತ್ತ
ಅಂಬಿಕೆಗನುಮೋದಿಸುತ್ತ ಸಂಭ್ರಮದಿಂದೊರೆದ ಸತ್ಯ ||೧||

ರಾಮ ರಾಮ ಶ್ರೀರಾಮಯೆಂದು ನೇಮದಿ ಕಾರ್ಯವನು ಬಗೆದು
ಆ ಮಹಾಸಾಗರವ ನೆಗೆದು ಭೂಮಿಜಾತೆಯ ಕಂಡವಗೊಲಿದ ||೨||

ಶರಣುರಾಘವಶರಣುಯೆಂದುಕರುಣಾಮೂರುತಿಯೊಲುಮೆವಡೆದು
ಹರುಷದಿ ಲಂಕೆಯನು ಪಡೆದ ಪರಮಪುಣ್ಯ ವಿಭೀಷಣ ಒರೆದ ॥೩॥

ಭರತಭೂಮಿಯೊಳಗೆ ಜನಿಸಿ ಹರಿಯ ಭಕ್ತಗಣ್ಯರೆನಿಸಿ
ವರಪುರಂದರ ಕನಕದಾಸರು ಕರುಣದೊರೆದ ಭವತಾರಕವಾ ॥೪॥

ಸಾಸಿರನಾಮವ ಪಠಿಸಿ ವಾಸುದೇವನಿಗೆ ವಂದಿಸಿ
ಭೂಸುರರಾನಂದಿಸುವ ಕೇಶವ ಜಾಜೀಶನ ತೋರ್ಪ ॥೫॥

--✿✿✿✿✿--

೩೬೧
ಆರತಿ ಬೆಳಗುವೆ ನಿನಗೆ ಶ್ರೀರಾಮ
(ಜಾಜೀಶ / ಶಾಮಶರ್ಮದಾಸ / ೧೮೮೪ - ೧೯೭೨)

ಆರತಿ ಬೆಳಗುವೆ ನಿನಗೆ ಶ್ರೀರಾಮ
ಸಾರಸಾಕ್ಷ ಹರಿ ಮೇಘಶ್ಯಾಮ ॥ಪ॥

ಪೀತಾಂಬರಧರ ತುಲಸೀಮಾಲ
ಪಾತಕವಿದಳನ ಸೀತಾಲೋಲ ॥೧॥

ಕಿರೀಟಕುಂಡಲ ಮೃಗಮದತಿಲಕ
ನಿರುಪಮಸುಂದರ ಮನ್ಮಥಜನಕ ॥೨॥

ಭರತಶತ್ರುಘ್ನರ ಚಾಮರಸೇವ
ಹರುಷದಿ ತೋರುವ ಪರಮಪ್ರಭಾವ ॥೩॥

ಸೋದರಲಕ್ಷ್ಮಣ ಹನುಮಸಮೇತ
ಮೋದದಿ ಮಾತೆಯರನು ಪೊರೆದಾತ ॥೪॥

ನಾರದ ಶುಕಮುನಿನುತ ಶುಭನಾಮ
ವಾರಿಜಭವಪತಿ ಪೂರ್ಣಸುಕಾಮ ॥೫॥

ಶರಣಾಗತ ಪರಿಪಾಲಕ ಶೌರಿ
ಕರುಣಾಕರ ಕುಲವೈರಿ ಮುರಾರಿ ॥೬॥

ಜಾಜೀಶ ಚನ್ನಕೇಶವಮೂರ್ತಿ
ರಾಜಿಸುತಿದೆ ನಿನ್ನ ಅಗಣಿತಕೀರ್ತಿ ॥೭॥

--✿✿✿✿✿--

೩೬೨
ತವದಾಸೋಹಂ ತವ ದಾಸೋಹಂ

(ವರದವಿಠಲ / ವೆಂಕಟವರದಾರ್ಯ / ೧೮೨೦ - ೧೯೦೦)

ತವದಾಸೋಹಂ ತವದಾಸೋಹಂ
ತವದಾಸೋಹಂ ದಾಶರಥೇ ॥ಪ॥

ದಶರಥಪುತ್ರ ಪಶುಪತಿಮಿತ್ರ
ಶಶಿರವಿನೇತ್ರ ದಾಶರಥೇ ॥೧॥

ವಿಧೃತಕೋದಂಡ ವಿಪುಲದೋರ್ದಂಡ
ಕದನಪ್ರಚಂಡ ದಾಶರಥೇ ॥೨॥

ತಾಟಕಾಹನನ ತಾಡಿತಕುಜನ
ಹಾಟಕವಸನಾ ದಾಶರಥೇ ॥೩॥

ಮನಸಿಜವೇಷ ಮಂಜುಳಭಾಷ
ಮನುಜವಿಶೇಷ ದಾಶರಥೇ ॥೪॥

ಶರದಾಭಗಾತ್ರ ಶರನಿಧಿಯಾತ್ರಾ
ಕರಧೃತಗೋತ್ರ ದಾಶರಥೇ ॥೫॥

ರಾವಣಹರಣ ಪಾವನಚರಣ
ಶ್ರೀವಧೂರಮಣ ದಾಶರಥೇ ॥೬॥

ರಕ್ಷಿತಲೋಕ ರಚಿತಸುಶ್ಲೋಕ
ಶಿಕ್ಷಿತಕಾಕ ದಾಶರಥೇ ॥೭॥

ವ್ಯಾಘ್ರಾಘಶಮನ ವ್ಯಾಘ್ರಾರಿಗಮನ
ವ್ಯಾಘ್ರಾದ್ರಿಸದನ ದಾಶರಥೇ ॥೮॥

ಪರಿಹೃತಕುಟಿಲ ಸರಸಿಜನಿಟಿಲ
ವರದಾರ್ಯವಿಠಲ ದಾಶರಥೇ ॥೯॥

--✿✿✿✿✿--

३೬३

ರಾಮನ ನೆನೆ ಮನವೆ

(ವರದವಿಠಲ / ವೆಂಕಟವರದಾರ್ಯ / ೧೮೭೦ – ೧೯೦೦)

ರಾಮನ ನೆನೆ ಮನವೆ ಹೃದಯಾರಾಮನ ನೆನೆ ಮನವೆ ॥ಪ॥

ರಾಮ ಜಗದಭಿರಾಮನ ಮೇಘಶ್ಯಾಮನ
ಸದ್ಗುಣಧಾಮನ ಸೀತಾ ॥ಅ.ಪ.॥

ದಶರಥನಂದನನಾ ಧರಣಿಯೊಳಸುರರ ಕೊಂದವನ
ಪಶುಪತಿಚಾಪವ ಖಂಡಿಸಿ ಮುದದಿಂ
ವಸುಮತೀಸುತೆಯಂ ಒಲಿದೊಡಗೂಡಿ ॥೧॥

ತಂದೆಯ ಮಾತಲಿ ವನಕೈತಂದು ಸರಾಗದಲಿ
ಬಂದ ವಿರಾಧನ ಕೊಂದು ನಿಶಾಚರಿ
ಯಂದವಳಿದು ಖಳವೃಂದವ ಸವರಿದ ॥೨॥

ಸೀತೆಯನರಸುತಲಿ ಕಬಂಧನ ಮಾತನನುಸರಿಸುತ
ಲಾತನಮಗನೊಳು ಪ್ರೀತಿಯಿಟ್ಟು ಪುರ
ಹೂತನಸುತನ ಘಾತಿಸಿದಾತನ ॥೩॥

ತರಣಿತನಯನಿಂದ ಕಪಿಗಳ ಕರಿಸಿ
ವಿಲಾಸದಿಂದ ತರುಣಿಯನರಸಲು
ಮರುತನ ಮಗನಿಗೆ ಬೆರಳುಂಗುರವನು ಗುರುತಾಗಿತ್ತನ ॥೪॥

ಧರಣಿಜೆಯನು ಕಂಡು ವನವನು ಮುರಿದು
ಗುರುತುಗೊಂಡು ಅರಿಪುರವನು
ಸುಟ್ಟುರುಹಿದ ವಾನರವರನಿಗೆ ಸೃಷ್ಟಿಪ ಪದವಿತ್ತಾತನ ॥೫॥

ಶರನಿಧಿಯನು ಕಟ್ಟಿ ಶತ್ರುಕರವನು ಹುಡಿಗುಟ್ಟಿ
ಶರಣವ ಲಂಕೆಗೆ ದೊರೆಯನು ಮಾಡಿ
ಸಿರಿಯನಯೋಧ್ಯೆಗೆ ಕರೆತಂದಾತನ ॥೬॥

ಧರಣಿಯ ಪಾಲಿಸುತ ಧರ್ಮದ ಸರಣಿಯ ಲಾಲಿಸುತ
ಶರಣಾಭರಣ ಪುಲಿಗಿರಿಯೊಳು ನೆಲಸಿದ
ವರದವಿಠಲದೊರೆ ಪರಮೋದಾರನ ॥೭॥

--✿✿✿✿✿--

೩೬೪
ರಾಮಭಜೇ ತೇ ಪದಯುಗಳಂ
(ವರದವಿಠಲ / ವೆಂಕಟವರದಾರ್ಯ / ೧೮೨೦ – ೧೯೦೦)

ರಾಮಭಜೇ ತೇ ಪದಯುಗಳಂ ಸೀತಾ ॥ಪ॥

ರಾಮಭಜೇ ತೇ ಪದಯುಗಳಂ
ರಾಮಸುಂದರ ಘನಶ್ಯಾಮ ರಘೂದ್ವಹ ॥ಅ.ಪ.॥

ದಶರಥ ಹೃದಯಾನಂದಕರಂ ತ್ರಿ
ದಶಗಣ ಚಿತ್ತಾಮೋದಕರಂ ॥೧॥

ಪೂರಿತ ಕೌಶಿಕಜನಂ ಸಂ
ತಾರಿತ ಗೌತಮಲಲನಾಂ ॥೨॥

ಖಂಡಿತ ಶಂಕರಚಾಪಂ ಪರಿ-
ದಂಡಿತ ಭಾರ್ಗವ ಕೋಪಂ ॥೩॥

ಸ್ವೀಕೃತ ಜಾನಕೀಹೃದಯಂ ದೂ
ರೀಕೃತ ಪಾತಕನಿಚಯಂ ॥೪॥

ಪಾಲಿತ ಮಾತಾಪಿತೃವಚನಂ ಸಂ
ಲಾಲಿತ ಮುನಿಜನ ಸ್ತುತಿರಚನಂ ॥೫॥

ಭರತಸಮರ್ಪಿತ ನಿಜರಾಜ್ಯಂ ಮುನಿ
ವರಭಾರದ್ವಾಜಾರ್ಪಿತ ಭೋಜ್ಯಂ ॥೬॥

ದಂಡಕಾರಣ್ಯಂ ಪಾವನಚರಣಂ ಉ-
ದ್ದಂಡವಿರಾಧಾ ಪಾತಕಹರಣಂ ॥೭॥

ಕುಂಭಜಾರ್ಪಿತ ಶರಕೋದಂಡ ಸಂ
ರಂಭ ನಿರ್ಜಿತ ರಾಕ್ಷಸದಂಡಂ ॥೮॥

ಪಂಚವಟೀತಟ ಕೃತವಾದಂ ದೃ
ಗಂಚಲ ಧೃತಗಜದುಲ್ಲಾಸಂ ॥೯॥

ಶೂರ್ಪನಖೀ ವಚನಾಲೋಲಂ ಸಹ
ಜಾರ್ಪಿತ ವಿವಿಧಾಯುಧ ಜಾಲಂ ॥೧೦॥

ರೂಪನಿರ್ಜಿತ ಸುಮಬಾಣಾಂಗಂ ವಿ
ರೂಪಿತ ದುಷ್ಟ ಶೂರ್ಪನಖಾಂಗಂ ॥೧೧॥

ಖರತರ ಖರದೂಷಣಕಾಲಂ ಸುರ
ನರವರ ಮುನಿಗಣ ಪರಿಪಾಲಂ ॥೧೨॥

ಮಾಯಾಮೃಗಾರ್ಪಿತ ಬಾಣವರಂ ಜ-
ಟಾಯು ಸಂಪಾದಿತ ಲೋಕವರಂ ॥೧೩॥

ರಾವಣಹೃತ ನಿಜಪತ್ನೀಕಂ ಲೋ
ಕಾವನಗತ ಕೋಪೋದ್ರೇಕಂ ॥೧೪॥

ಸಾಧಿತ ಶಬರೀ ಮೋಕ್ಷಕರಂ ಕ-
ಬಂಧ ಬಂಧನಮೋಚನ ಚತುರಂ ॥೧೫॥

ವಾತ ತನೂಭವ ಕೃತಸ್ತೋತ್ರಂ ಪಂ
ಪಾತಟ ನಿರ್ಮಿತ ಸುಕ್ಷೇತ್ರಂ ॥೧೬॥

ಶಿಕ್ಷಿತಸಂಕ್ರದನ ತನುಜಂ ಸಂ-
ರಕ್ಷಿತ ಚಂಡಕಿರಣ ತನುಜಂ ॥೧೭॥

ಸೀತಾಲೋಕನ ಕೃತಕಾಮಂ ನಿಜ
ದೂತಾಮೋದನ ಸುಪ್ರೇಮಂ ॥೧೮॥

ನಿಜಕರಭೂಷಣ ದಾತಾರಂ ಧುರ
ವಿಜಯ ವನಾಲಯ ಪರಿವಾರಂ ॥೧೯॥

ಧೂತಾಹೃತ ಶುಭದೃಷ್ಟಾಂತಂ ವಿ-
ಜ್ಞಾತ ನಿಜಸ್ತ್ರೀವೃತ್ತಾಂತಂ ॥೨೦॥

ಭೀಷಣಜಲನಿಧಿ ಬಂಧಕರಂ ವಿ
ಭೀಷಣ ಸಂರಕ್ಷಣಚತುರಂ ॥೨೧॥

ಶೋಷಿತರಾವಣ ಜಲಧಿಂ ಸಂ-
ತೋಷಿತ ದೈವತಪರಿಧಿಂ ॥೨೨॥

ಸೀತಾಸಮಾಶ್ರಿತ ವಾಮಾಂಕಂ ಪರಿ-
ಭೂತ ಪಾತಕ ನಿಜನಾಮಾಂಕಂ। ।೨೩॥

ಸ್ವೀಕೃತ ಸಾಕೇತಾವಾಸಂ ಅಂ-
ಗೀಕೃತ ಮಾನುಷವಿಲಾಸಂ ॥೨೪॥

ವರವ್ಯಾಘ್ರ ಪ್ರಭೂಧರ ಕಲ್ಪತರುಂ ಶ್ರೀ
ವರದವಿಠಲಮತಿಶಯ ರುಚಿರಂ ॥೨೫॥

--✿✿✿✿✿--

೩೬೫
ರಾಮನಾಮವೆ ನಾನಾಕಾರ
(ಜಾಜಿಪುರೀಶ / ನಾರಾಯಣಶರ್ಮ / ೧೯೧೨ - ೧೯೯೨)

ರಾಮನಾಮವೆ ನಾನಾಕಾರ ಈ
ನಾಮವನುಳಿದರೆ ಶೂನ್ಯಾಕಾರ ॥ಪ॥

ಕಾಮಿಸಿ ಭಜಿಸಿರೆ ಆನಂದಕರ
ರಾಮಾ ರಾಮಾ ಜೈ ಜೈ ರಾಮ ॥ಅ.ಪ.॥

ಹಾಡುವ ಭಕ್ತರ ಅನುಮತದಲ್ಲು
ಬೀಡಲಿ ಮೊರೆವ ಶೀಲೆಯರಲ್ಲು
ಸೂಡಿದೆ ನಿನ್ನಯ ರಾಮಾಕಾರ
ರಾಮಾ ರಾಮಾ ಜೈ ಜೈ ರಾಮ ॥೧॥

ಹೂ ಗಿಡ ಬಳ್ಳಿಗಳಲ್ಲೂ ರಾಮ
ಖಗಮಿಗಗಳ ದನಿ ರಾಮನ ನಾಮ
ರಾಗದಿ ನೋಡಿದರೆಲ್ಲೂ ರಾಮ
ರಾಮಾ ರಾಮಾ ಜೈ ಜೈ ರಾಮ ॥೨॥

ಪೂಜೆಯ ಹೂವಲು ರಾಮ ರಾಮ
ತೇಜದ ಗಂಧದ ಪರಿಮಳ ರಾಮ
ರಾಜಿಪ ದೇಗುಲವೆಲ್ಲ ರಾಮ
ರಾಮಾ ರಾಮಾ ಜೈ ಜೈ ರಾಮ ॥೩॥

ಜಾಜಿಪುರೀಶನ ಪಾವನ ನಾಮ
ಸಾಜದಿ ನುತಿಸಿರೊ ರಾಮ ರಾಮ ॥೪॥

--✿✿✿✿✿--

೩೬೬
ರಾಮನ ನೆನೆಬೇಕು ಶ್ರೀರಾಮನ ನೆನೆಬೇಕು
(ಜಾಜಿಪುರೀಶ / ನಾರಾಯಣಶರ್ಮ / ೧೯೧೨ - ೧೯೯೨)

ರಾಮನ ನೆನೆಬೇಕು ಶ್ರೀರಾಮನ ನೆನೆಬೇಕು ॥ಪ॥

ಪಾಮರರೆಲ್ಲರೂ ಏಕಚಿತ್ತದಿ ರಾಮನ ನೆನೆಬೇಕು ॥ಅ.ಪ.॥

ಕೋಲನು ಹಿಡಿದು ಕೂರುವ ಮುನ್ನ
ಎಲ್ಲ ಕೂದಲು ನರೆಯುವ ಮುನ್ನ
ಆಲಿಗಳೆರಡೂ ಕಾಣದ ಮುನ್ನ
ಕಾಲು ಕೈಗಳು ಮಾತು ಕೇಳದ ಮುನ್ನ ॥೧॥

ಅಲ್ಹಾನಂದದಿ ಸುಖದುಃಖವನು ಮರೆಯುತಲಿರಬೇಕು
ಅಲ್ಪರಲೂ ತಾ ಭ್ರಾತೃಪ್ರೇಮವ ಹೊಂದುತಲಿರಬೇಕು
ಸಲ್ಲುವೆಯಾದರೆ ಮಾರುತಿಯಂತುಲಿಬೇಕು
ಕಲ್ಪಿತ ಶ್ರೀಜಾಜಿಪುರೀಶನ ಧ್ಯಾನದಲಿರಬೇಕು ॥೨॥

--✿✿✿✿✿--

೩೬೭
ಕರುಣವೇಕೆ ಬಾರದಯ್ಯ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಕರುಣವೇಕೆ ಬಾರದಯ್ಯ ಧರಣಿಜಾಪ್ರಿಯಾ ॥ಪ॥

ಶರಣಜನರ ಪೊರೆವನೆಂಬ ಬಿರುದ ಪೊತ್ತವನಾಗಿರಲೆನ್ನೊಳು ॥ಅ.ಪ॥

ಯಾಗರಕ್ಷಣೆಗಾಗಿ ಕೌಶಿಕ। ಕೂಗಲಾಕ್ಷಣ ಓಡಿಪೋದೆ ॥
ಕೂಗಿಬೇಡದೆ ಪಾಪದಹಲ್ಯೆಯ।ರೋಗವನಂದಿಸಿದಾತನೆಯೆನ್ನೊಳು ॥೧॥

ಹರನ ಚಾಪವ ಮುರಿದು ಸೀತೆಯ । ಕರವ ಪಿಡಿಯೆ ಕರೆದರಾರು
ಕಿರಿದು ತಾಯ ದುರಾಸೆ ಮನ್ನಿಸಿ ಭರದಿ।
ವನಕೆಪೋದವನೆಯೆನ್ನೊಳು ॥೨॥

ಭಾಮೆಯೆಂಜಲ ತಿಂದೆಪಕ್ಷಿಗೆ । ಪ್ರೇಮತೋರಿ ಲಂಕೆಯ ಸೇರಿ
ಆ ಮಹಾದೈತ್ಯನ ತಮ್ಮನಿಗೊಲಿದೆ ।
ಭೊಮಿಜೆಯರಸ ಮಾಂಗಿರಿರಂಗ ॥೩॥

--✿✿✿✿✿--

೩೬೮
ಕರುಣಾಜಲಧಿ ರಾಮ ಪವನಜಪ್ರೇಮಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಕರುಣಾಜಲಧಿ ರಾಮ । ಪವನಜಪ್ರೇಮಾ ॥ಪ॥

ಪರಮಪಾವನ ನಾಮ । ಲೋಕಾಭಿರಾಮ ॥ಅ.ಪ.॥

ಜಾನಕೀರಾಮ । ದಾನವಭೀಮ
ಭಾನುಕುಲೋದ್ಧಾಮ । ನೀರದಶ್ಯಾಮ ॥೧॥

ಮೌನಿಜನಾರಾಮ । ಶಿವನುತರಾಮ
ಅನುಪಮಸೀಮ । ಮಾಂಗಿರಿಧಾಮ ॥೨॥

--✿✿✿✿✿--

೩೬೯
ಕರುಣಿಸು ರಘುನಂದನ ರಾಮಾ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಕರುಣಿಸು ರಘುನಂದನ ರಾಮಾ
ನಿರುತವು ನಿನ್ನನೆ ಸ್ಮರಿಸುವ ಭಾಗ್ಯವ ॥ಪ॥

ಪರಮಮಂಗಳ ನಾಮಾ । ದುರಿತಭಂಜನ ನಾಮ
ಗಿರಿಜೆ ಪಾಡುವ ನಾಮ । ಜಾನಕೀರಾಮ ॥ಅ.ಪ॥

ರಾಮಾಯೆನೆ ಪಾಪವು ಲಯವಹುದಂತೆ
ರಾಮಾಯೆನೆ ಭಯಗಳು ಪರಿಹರವಂತೆ ॥೧॥

ರಾಮನೆನೆ ಮಾಯೆಯು ಹರವಂತೆ
ರಾಮನ ನುತಿಸೆ ಮನ ಪರವಶವಂತೆ ॥೨॥

ಜಯರಾಮ ಜಯರಾಮ ಎನುತಿರುವಂತೆ
ದಯಮಾಡೊ ಮಾಂಗಿರಿರಂಗ ನೀನಂತೆ ॥೩॥

--✿✿✿✿✿--

೩೭೦
ಕೋಟಿನಾಮಗಳಲ್ಲಿ ಹಿರಿಯದಂತೆ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಕೋಟಿನಾಮಗಳಲ್ಲಿ ಹಿರಿಯದಂತೆ
ಕಾಟದಾ ಶರನಿಧಿಯ ದಾಟಿಸುವುದಂತೆ ॥ಪ॥

ಕೋಟಿನಾಮಂಗಳಿಗೊ ಕೋಟಿಯಾಗಿಹುದಂತೆ
ಸಾಟಿಯಿಲ್ಲದ ಮಂತ್ರಪಾಠವಿದಂತೆ ॥ಅ.ಪ॥

ಭುವನಸುಂದರನಂತೆ ಭವವ ಕಳೆಯುವನಂತೆ
ಶಿವನಿಗೆ ಹಿತವಂತೆ ಭುವನೇಶನಂತೆ
ಅವನಿಸುತೆಗಾಗಿ ದಾನವರ ಹರಿಸಿದನಂತೆ
ಅವನೆ ಮಾಂಗಿರೀಶ ಮಾಧವರಾಮನಂತೆ ॥೧॥

೩೭೧
ಕೌಸಲ್ಯಾಸುಕುಮಾರ ಭಾಷಿತ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಕೌಸಲ್ಯಾ ಸುಕುಮಾರಭಾಷಿತ ಕೋದಂಡಧರ
ವಾಸವನುತ ರಣಧೀರ ಭೂಮಿಸುತಾ ಮೋಹಕ ॥೧॥

ಮುನಿಕೌಶಿಕ ಮಖಪಾಲನ । ಜನಕಸುತಾ ಮನಮೋಹನ
ಮುನಿಸುದತ್ರಿ ಭವಖಂಡನ ಘನದಾನವ ಸತಿಭಂಜನ ॥೨॥

ಭರತಾರ್ಚಿತ ವರಚರಣ । ಖರದೂಷಣ ಸಂಹರಣ
ಮರುತಾತ್ಮಜ ಮಣಿಭೂಷಣ । ಶರಣಾಗತ ಮನತೋಷಣ ॥೩॥

ಲಂಕಾಧಿಪಕುಲನಾಶಕ । ಕಿಂಕರವಾನರಪೋಷಕ
ಪಂಕೇರುಹ ಲೋಚನಾಕಳಂಕ [ಶಂಕರ] ಮಾಂಗಿರಿ ನಾಯಕ ॥೪॥

--✿✿✿✿✿--

೩೭೨
ಚಿಂತಯಾಮಿ ತಾರಕನಾಮಂ ಅಂತರಾತ್ಮ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಚಿಂತಯಾಮಿ ತಾರಕನಾಮಂ ಅಂತರಾತ್ಮ ರಘುರಾಮಂ ॥ಪ॥

ಶಾಂತಿದಾಂತಭರಿತ ಹನುಮಂತಸೇವ್ಯ ಸೀತಾರಾಮ ॥ಅ.ಪ॥

ರಾಕ್ಷಸರಹಿತಾಷ್ಟಾಕ್ಷರಿ ಶೂನ್ಯಂ
ಮಾಕ್ಷರ ಲೋಪ ಪಂಚಾಕ್ಷರಿ ಶೂನ್ಯಂ
ಸಾಕ್ಷರ ರಾಮಾದ್ವಕ್ಷರಿ ಮಾನ್ಯಂ
ರಾಕ್ಷಸನಾಶ ರಾಮಾಕ್ಷರ ಮಾನ್ಯಂ ॥೧॥

ರವಿವಂಶಾಂಬುಧಿ ಚಂದ್ರಪ್ರದೀಪಂ
ಭುವನಮನೋಹರ ದಿವ್ಯಸ್ವರೂಪಂ
ಶಿವಧನುಭಂಜನ ವೀರಪ್ರತಾಪಂ
ಅವನಿಜಾಲೋಲ ವೈಭವಯುತ ಭೂಪಂ ॥೨॥

ಸತ್ಯಧರ್ಮಪರಾಯಣ ರಾಮಂ
ನಿತ್ಯಮುಕ್ತಸೇವಿತ ರಘುರಾಮಂ
ಸತ್ಯಪರಾಕ್ರಮ ಜಗದಭಿರಾಮಂ
ಸ್ತುತ್ಯಚರಿತ್ರ ಮಾಂಗಿರಿವರಧಾಮಂ ॥೩॥

--✿✿✿✿✿--

३೭३
ಚಿಂತಯಾಮಿ ರಾಮಮಮಿತ ಮಹಿಮಂ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ಚಿಂತಯಾಮಿ ರಾಮಮಮಿತಮಹಿಮಂ
ಶಾಂತದಾಂತ ಮಾಕಾಂತ ಧೀಮಂತ ॥ಪ॥

ಅಂತರಾತ್ಮಮಮಲ ಸುಗುಣಭರಿತಂ
ಸಂತ ಹನೂಮಂತನಮಿತ ಚರಿತಂ ॥ಅ.ಪ.॥

ಮೌನಿಯಾಗಪಾಲಮತುಳ ಶೂರಂ ॥೧॥

ಮಾನಿನೀಮಣಿಶಾಪಭಂಗ ಚತುರಂ ॥೨॥

ಜಾನಕೀಹೃದಯಾಪಹಾರ ಧೀರಂ ॥೩॥

ಸಾನುಜಭರತೇಷ್ಟದಾತಮುದಾರಂ ॥೪॥

ದಾನವಖರದೂಷಣ ಸಂಹಾರಂ ॥೫॥

ಆನತಖಚರೇಂದ್ರ ಮೋಕ್ಷದಾತಾರಂ ॥೬॥

ಕಾನನಸತ್ವಾವನಕರ ಸಂಚಾರಂ ॥೭॥

ವಾನರಪತಿಸೇವಿತ ಪರಿವಾರಂ ॥೮॥

ದಾನವರಾವಣಮರ್ದನ ಶೂರಂ ॥೯॥

ದೀನಪಾಲ ಮಾಂಗಿರಿಪತಿ ಗಂಭೀರಂ ॥೧೦॥

--✿✿✿✿✿--

३೭೪
ಜಯ ಜಾನಕೀಪ್ರಿಯ ರಾಘವ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಜಯ ಜಾನಕೀಪ್ರಿಯ ರಾಘವ
ಜಯ ಪಾವನಚರಣಾ
ಜಯ ದಾನವಭಯತಾರಣ
ಜಯ ಭವಸಾಗರತರಣಾ ॥೧॥

ಸಾರಸಭವಸೇವ್ಯಚರಣ
ದಾನವಕುಲಹರಣಾ
ಚಾರುಚರಿತಮಾರಜನಕ
ಸಾಗರಜಾರಮಣಾ ॥೨॥

ಸ್ಮರುಚಿರ ಮಣಿಗಣ ವಿತರಣ
ಸುರನಾಯಕ ಶರಣಾ
ಉರಗಶಯನ ಮರಕತ ಮಾಂ
ಗಿರಿನಾಯಕ ಕರುಣಾ ॥೩॥

--✿✿✿✿✿--

೩೭೫

ಜಯರಾಮ ರಘುರಾಮ ಪುರುಷೋತ್ತಮ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಜಯರಾಮ ರಘುರಾಮ ಪುರುಷೋತ್ತಮ ॥ಪ॥

ತವನಾಮ ಸುಖಧಾಮ ಅಮೃತೋಪಮಾ ರಾಮಾ ॥ಅ.ಪ॥

ರಿಪುಭೀಮಾ ಜಿತಕಾಮ ದೇವೋತ್ತಮ
ಘನಶ್ಯಾಮ ಅಭಿರಾಮ ಸಕಲಾಗಮ ರಾಮ ॥೧॥

ಭವನಾಶ ಜಗದೀಶ ಸುರನಾಯಕ
ಫಣಿಭೂಷ ಸಕಲೇಶ ವರದಾಯಕಾ ॥೨॥

ಪರಮೇಶ ಯಮಪಾಶ ಭವನಾಯಕಾ
ಕಮಲೇಶ ಶ್ರೀಶ ಮಾಂಗಿರಿನಾಯಕ ॥೩॥

--✿✿✿✿✿--

೩೭೬

ಜಾನಕಿರಾಮಾ ಸಾಮಜಪ್ರೇಮಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಜಾನಕಿರಾಮಾ ಸಾಮಜಪ್ರೇಮಾ
ದಾನವಭೀಮಾ ಇನಕುಲಸೋಮಾ ॥ಪ॥

ಪಾವನನಾಮಾ ಜಗದಭಿರಾಮಾ
ಸದ್ಗುಣಶ್ಯಾಮಾ ಅಂಬುದಶ್ಯಾಮಾ ॥ಅ.ಪ.॥

ದಶರಥನಂದನ ಸುರಮುನಿಚಂದನ
ಶರನಿಧಿಬಂಧನ ಶಶಿಸಮವದನ
ದಶಶಿರಭಂಜನ ಜನಮನರಂಜನ
ತ್ರಿಭುವನಪಾವನ ಮಾಂಗಿರಿಮೋಹನ ॥೧॥

೩೭೭
ಜಾನಕೀರಾಮಚಂದ್ರಾಯ ನಮಸ್ತೇ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಜಾನಕೀರಾಮಚಂದ್ರಾಯ ನಮಸ್ತೇ ಶ್ರೀ
ಭಾನುಕೋಟಿಸುಪ್ರಕಾಶ ವಾರಿಧಿಸಮಗಂಭೀರ ||ಪ||

ದಾನವೇಂದ್ರಭೀಷಣಾಯ ದೀನಪಾಲನಚಿಂತನಾಯ
ಮಾನವೇಂದ್ರಗುಣಸಾಂದ್ರ ವೇದವೇದ್ಯರಾಘವಾಯ ||ಅ.ಪ.||

ಸಕಲಲೋಕ ಸನ್ನುತಾಯ ವಿಕಸಿತಾಂಬುಜಲೋಚನಾಯ
ಮಕರಕುಂಡಲಭೂಷಿತಾಯ ಶೋಕನಾಶಚಾರಿತ್ರಾಯ
ಶುಕವಶಿಷ್ಠವಂದಿತಾಯ ಸಕಲಧರ್ಮಪಾಲನಾಯ
ವಕುಳಮಾಲಾಭರಣ ಮಾಂಗಿರಿನಿಲಯಸೂರಿಪೂಜಿತಾಯ ||೧||

--✿✿✿✿✿--

೩೭೮
ಜಾನಕೀಮನೋಹರಾ ಜನಪಕುಮಾರಾ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಜಾನಕೀಮನೋಹರಾ ಜನಪಕುಮಾರಾ
ಭಾನುವಂಶಭಾಸ್ಕರಾ ದುರಿತವಿದೂರಾ ||ಪ||

ಮಾರಕೋಟಿಸುಂದರ ಶರಧಿಗಂಭೀರ
ಶೂರದೈತ್ಯಭೀಕರ ಪರಮಉದಾರ ||೧||

ವಾನರೇಂದ್ರವಂದಿತ ಮೌನಿನಿಕರಸೇವಿತ
ದೀನವತ್ಸಲಾಂಕಿತ ಸಕಲಸನ್ನುತ ||೨||

ಪಾಹಿ ಪಾಹಿ ರಾಘವೇಶ ಪಾಹಿ ಲೋಕೇಶ
ಪಾಹಿ ಪಾಹಿ ಮಾಂಗಿರೀಶ ಸುಪ್ರಕಾಶ ||೩||

೩೭೯
ದಿನಮಣಿ ಕುಲಜಾತಾ ಪ್ರತಾಪ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ದಿನಮಣಿ ಕುಲಜಾತಾ ಪ್ರತಾಪ ॥ಪ॥

ಜನಕಸುತಾನ್ವಿತ ಮುನಿಕುಲಸನ್ನುತ
ಶರಣಾಗತ ವರದಾತಾ ವಿನೀತಾ ॥ಅ.ಪ.॥

ದುರುಳಖರಾರಿ । ಪಾವನಶೌರೀ । ದಶಕಂ
ದರಮದಹಾರಿ । ಉದಾರೀ ॥೧॥

ಜಗದಭಿರಾಮಾ ರಘುಕುಲಸೋಮಾ
ಮರುತಾತ್ಮಜಮನಧಾಮ ಸುನಾಮ ॥೨॥

ಮಾಂಗಿರಿಮಂದಿರ ದೀನಕೃಪಾಕರ
ಪೀತಾಂಬರಧರ ಮಾರಶರೀರ ॥೩॥

--✿✿✿✿✿--

೩೮೦
ದೇವದೇವ ಲೋಕೇಶ್ವರ ರಾಮ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ದೇವದೇವ ಲೋಕೇಶ್ವರ ರಾಮ ॥ಪ॥

ಪಾವನಾತ್ಮ ಪರಾತ್ಪರ ದೋಷದೂರ
ಜೀವಜೀವ ಚರಾಚರ ಗೂಢಚಾರ ॥ಅ.ಪ.॥

ಜಗದಾದಿಮೂಲ ಪಾಲನೈಕಲೀಲಾ
ಭಗವಾನ ತ್ರಿಕಾಲಾತ್ಮಕ ಕಾಲಕಾಲಾ
ನಗನಾಗ ಹಾಲಾಹಲಮಾಯಮಾಲಾ
ತ್ರಿಗುಣಾತ್ಮಕಲೀಲಾ ಕರುಣಾಲವಾಲಾ ॥೧॥

ದುರುಳವಂಶವೇತ್ರಾ । ಸುಜನಾತಪತ್ರಾ
ಪರಮಶುಭಚರಿತ್ರಾ ಸ್ವಪ್ರಕಾಶಗಾತ್ರಾ
ಸರಸಿಜಾತನೇತ್ರಾ ಸಕಲಲೋಕಸೂತ್ರಾ
ಧರಣಿಜಾಕಳತ್ರಾ ಕರುಣ್ಯೈಕಪಾತ್ರಾ ॥೨॥

ಶಿವಶೌರಿ ನೀನೇ। ಭವನಿಂದ್ರ ನೀನೇ
ರವಿಸೋಮ ನೀನೇ । ನವಗ್ರಹವೂ ನೀನೇ
ಅವನಿಯೆಲ್ಲ ನೀನೇ । ಭವಕಳೆವವ ನೀನೇ
ಜವಜೀವನೇ ಶ್ರೀಧವ ಮಾಂಗಿರೀಶಾ ॥ ॥೩॥

--✿✿✿✿✿--

೩೮೧
ಧರಣಿಜಾಪ್ರಿಯ ರಾಮಾ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಧರಣಿಜಾಪ್ರಿಯರಾಮಾ ಮರುತಾನಂದನ ಪ್ರೇಮಾ
ಸುರಮುನಿಮನಧಾಮಾ ರತುನರಾಮಾ ॥ಪ॥

ದುರುಳರಕ್ಕಸಭೀಮ ತರಣಿವಂಶಲಲಾಮಾ
ಪರಮಸುಂದರನಾಮಾ ಲೋಕಾಭಿರಾಮಾ ॥ಅ.ಪ.॥

ಎನ್ನಕಾಯುವರಾರು ನೀನಲ್ಲದಿನ್ನಾರು
ನಿನ್ನಪಾದವತೋರು ಕರುಣವಬೀರು
ಎನ್ನ ಪಾತಕಭಂಗ ನಿನ್ನಿಂದ ನೀಲಾಂಗ
ನಿನ್ನ ಭಕ್ತರಸಂಗವೀಯೋ ಮಾಂಗಿರಿರಂಗ ॥೧॥

--✿✿✿✿✿--

೩೮೨
ಧರಣೀರಮಣಾ ರಾಮ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಧರಣೀರಮಣಾ ರಾಮ । ದುರಿತಹರಣ ನಾಮ ॥ಪ॥

ಸುರನಾಯಕವೈರಿ ಭೀಮಾ । ಸರಸೀರುಹನಯನ ರಾಮಾ ॥ಅ.ಪ.॥

ಪರಮಶಾಂತ ರಮೆಯಕಾಂತ
ಸರಸಿಜಾತ ಭವದೇವಿತ
ಮರುತನಂದನ ನಿರುತಪೂಜಿತ
ಶರಣಜನಸಂಸೇವಿತ ಭಾವಿತ ॥೧॥

ಅಕ್ಷಯಾತ್ಮ ನೀರಜಾಕ್ಷ
ಲಕ್ಷರೂಪ ದಾನವಶಿಕ್ಷ
ಪಕ್ಷಿವಾಹನ ಮೋಕ್ಷದಕ್ಷ
ರಕ್ಷ ನಿತ್ಯಪೂರ್ಣಕಟಾಕ್ಷ ॥೨॥

ಮಂಗಳಾಂಗ ಧಳಿತ ರಥಾಂಗ
ಅಂಗಜಾತಪಿತ ಶುಭಾಂಗ
ಗಂಗಾಧರವಿನುತ ರಂಗ
ಮಾಂಗಿರೀಶ ದೇವೋತ್ತುಂಗ ॥೩॥

--✿✿✿✿✿--

೩೮೩
ನಮೋ ನಮೋ ರಾಮ ರಘೂತ್ತಮ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ನಮೋ ನಮೋ ರಾಮ । ರಘೂತ್ತಮ ॥ಪ॥

ನಮೋ ನಮೋ ಶಿವ । ಮನಾಭಿರಾಮಾ
ನಮೋ ನಮೋ ಭವವಿನಾಶ ನಾಮಾ ॥ಅ.ಪ.॥

ಸತ್ಯಕಾಮ ರವಿವಂಶಲಲಾಮ
ಸತ್ಯಪೂರ್ಣ ಭುವನೇಶ್ವರರಾಮ
ಭೃತ್ಯಪಾಲ ಮಾಂಗಿರಿ ರಾಮ ॥೧॥

ನಾರದನುತ ಪಾವನನಾಮಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ನಾರದನುತ ಪಾವನನಾಮಾ
ನೀರಜಭವಪಿತ ರಣಭೀಮಾ ॥ಪ॥

ಸಾರಸಲೋಚನ ಜಗದಭಿರಾಮಾ
ಸೂರಿಗಣನುತ ರವಿಕುಲಸೋಮಾ ॥೧॥

ದಶರಥನಂದನ ಮುನಿಮುಖಚಂದನ
ನಿಶಿಚರಬಂಧನ ಕಪಿವರಸೇನಾ ॥೨॥

ದಶಮುಖಭಂಜನ ಬಂಧವಿಮೋಚನ
ಪಶುಪತಿಮೋಹನ ಮಾಂಗಿರಿಸದನ ॥೩॥

--✿✿✿✿✿--

೩೮೫

ಪತಿತಪಾವನ ರಮಾಪತಿ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ಪತಿತಪಾವನ ರಮಾಪತಿ ಪರಂಧಾಮಾ ॥ಪ॥

ಗತಿಮತಿ ನಿನ್ನ ನಾಮಾ । ಅಮೃತವು ಸೀತಾರಾಮಾ
ಹಿತಪಿತ ನೀನೆ ರಾಮಾ । ತಾರಕನಾಮಾ ॥ಅ.ಪ.॥

ದಶರಥಬಾಲಾ । ಸುರಮುನಿಪಾಲಾ
ನಿಶಿಚರಶೂಲಾ । ಶ್ರೀವನಮಾಲಾ
ಶಶಿಸಮಪಾಲಾ । ಕರುಣಾಲವಾಲಾ
ದಶಮುಖಕಾಲ । ಮಾಂಗಿರಿಯ ಗೋಪಾಲಾ ॥೧॥

೩೮೬
ಪಾಲಯಮಾಂ ಕರುಣಾಭರಣ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪಾಲಯಮಾಂ ಕರುಣಾಭರಣ ।
ನೀಲಕಾಯ ಜಾನಕೀರಮಣ ॥ಪ॥

ಶೂಲಪಾಣಿ ಸನ್ನುತವರಚರಣ ।
ಭೂಲಲಾಮ ರಾವಣಸಂಹರಣ ॥ಅ.ಪ.॥

ಪುರಹರವಿನುತ ಶಾಪವಿದೂರ ।
ಮರಕತ ಗೋಮೇಧಿಕ ಮಣಿಹಾರ ।
ಸರಸಿಜಕೋಮಲ ಮದನಾಕಾರ ।
ಸುರಪತಿಸನ್ನುತ ವಿಗಮಾಧಾರ ॥ ॥೧॥

ನರಪಕುಮಾರ ಘನಗಂಭೀರ ।
ನಿರುಪಮ ಶೂರಾ ಪುಣ್ಯಶರೀರ ।
ದುರುಳವಿದಾರಾ ಜಗದಾಧಾರ ।
ಪರಮೋದಾರಾ ಮಾಂಗಿರಿವರ ॥ ॥೨॥

--✿✿✿✿✿--

೩೮೭
ಪಾಲಯಾಶು ಮಾಂ ಸೀತಾರಾಮ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪಾಲಯಾಶುಮಾಂ ಸೀತಾರಾಮ
ನೀಲಕಂಠಸನ್ನುತ ಶ್ರೀರಾಮ ॥ಪ॥

ಭೂಲಲಾಮ ಪಾವನಕರನಾಮಾ
ಕಾಲಕರ್ಮಕಾರಣ ಭವಭೀಮ ॥ಅ.ಪ.॥

ದಶರಥನಂದನ ಕೋದಂಡರಾಮ
ಕುಶಿಕಮಹಾಧ್ವರರಕ್ಷಕನಾಮ
ಶಶಿಮುಖಮುನಿಸತಿ ಸನ್ನುತರಾಮ
ನಿಶಿಚರತಾಟಕಾಮರ್ದನ ರಾಮ ॥೧॥

ಜಾನಕೀವಲ್ಲಭ ಜಗದಭಿರಾಮ
ದಾನವರಾವಣಶಿಕ್ಷಕ ರಾಮ
ದೀನಶರಣ ಮಾಂಗಿರಿವರಧಾಮ
ದೀನನೆನ್ನ ಕಾಯೊ ಶ್ರೀರಾಮ ॥೨॥

--✿✿✿✿✿--

೩೮೮
ಪಾವನಕರನಾಮಾ ಪರಮಪುರುಷ ರಾಮಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪಾವನಕರನಾಮಾ ಪರಮಪುರುಷ ರಾಮಾ ॥ಪ॥

ದೇವೋತ್ತಮ ಸಾರ್ವಭೌಮ । ದಾನವಕುಲಭೀಮ ॥ಅ.ಪ.॥

ನಿಗಮಾಗಮ ಪರಿಪೂರಣ । ಸುಗುಣಾಕರ ಮುನಿತೋಷಣ
ಖಗಮಾನಸ ಮಣಿಭೂಷಣ । ಸುರನರಶರಣಾ ॥೧॥

ಜಗಜೀವನ ಲಯಕಾರಣ । ಪವನಾತ್ಮಜ ಕರುಣಾ
ಸುಗುಣಾಕರ ಭವತಾರಣ । ಮಾಂಗಿರೀಶ ಕಮಲಚರಣ ॥೨॥

--✿✿✿✿✿--

೩೮೯
ಪಾಹಿ ಪಾಹಿ ಪರಂಧಾಮ ಸುನಾಮ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪಾಹಿ ಪಾಹಿ ಪರಂಧಾಮ ಸುನಾಮ ಗುರುವಂದಿತ ಶ್ರೀರಾಮ ॥ಪ॥

ಅಹಿಭೂಷಣನುತರಾಮ । ಮಹಿಜಾಪ್ರಿಯಶ್ರೀರಾಮ ॥ಅ.ಪ.॥

ದಶರಥೇಂದ್ರಸುಕುಮಾರ । ನಿಶಿಚರಾಳಿಸಂಹಾರ ।
ಕೌಶಿಕಭಯಪರಿಹಾರ । ಪರಮಶೂರ ಶ್ರೀರಾಮ ॥೧॥

ಮುನಿಗೌತಮಸತಿಪಾವನ । ಜನಕಾತ್ಮಜ ಮನಮೋಹನ ।
ಮುನಿಸನ್ನುತ ಸುರಜೀವನ । ವನಜೇಕ್ಷಣ ಶ್ರೀರಾಮ ॥೨॥

ಜನಕಮನೋಗತಬಂಧಿತ । ಜನಕಜಾ ಸುಮುತ್ರಜಾಯುತ ।
ವನವನಾಂತರ ಸಂಚರಿತ । ಸನಕಾನತ ಶ್ರೀರಾಮ ॥೩॥

ಭರತಾನತ ಪೂಜ್ಯಪಾದ । ಪರಮಾದ್ಭುತ ಶರವಿನೋದ ।
ಸುರಭೀಕರ ದೈತ್ಯಸೂದ । ಅಭಯಪ್ರದ ಶ್ರೀರಾಮ ॥೪॥

ಖರದೂಷಣತ್ರಿಶಿರಾಂತಕಶ್ರೀರಾಮ।ಖಚರಾಧಿಪಪ್ಲವಗೇಶ್ವರರಾಮ
ವರದಾಯಕ ಭಯಹಾರಕ ರಾಮ । ಶುಭಕಾರಕ ಶ್ರೀರಾಮ ॥೫॥

ನಿಶಿತವರಾಸ್ತ್ರ ವಿಜೃಂಭಿತರಾಮ । ನಿಶಿಚರಕಾಲಾಂತಕ ರಣಭೀಮ।
ಕುಶಲ ವಿಭೀಷಣನುತರಾಮ । ಶಶಿಧರಸನ್ನುತ ಶ್ರೀರಾಮ ॥೬॥

ಪವಮಾನಾತ್ಮಜಸೇವಿತರಾಮಾ।ಭುವನೋದ್ಧಾರಣಕಂಕಣರಾಮ।
ಭವಬಂಧನಸಂಹಾರಕ ರಾಮಾ ।ಭುವನಾನಂದದ ಶ್ರೀರಾಮ ॥೭॥

ಪಾವನಸೇತೋಕಾರಕರಾಮಾ । ದಾವಾನಲಸಮರಂಜಕ ರಾಮ ।
ರಾವಣಕುಲವಿಧ್ವಂಸಕ ರಾಮಾ । ಸೀತಾನಾಯಕ ಶ್ರೀರಾಮ ॥೮॥

ಸಾಕೇತಪುರಾಧೀಶ್ವರ ರಾಮ । ರಾಕಾಚಂದ್ರಸುಧಾಕರ ರಾಮ ।
ಏಕಚಕ್ರಾಧಿಪ ರಘುರಾಮ । ಲೋಕಸುಖಂಕರ ಶ್ರೀರಾಮ ॥೯॥

ಅಂಗದ ಹನುಮತ್ಸೇವಿತರಾಮ । ಮಂಗಳಕರ ಸೀತಾರಾಮ ।
ಮಾಂಗಿರಿನಿಲಯ ಶುಭಾನ್ವಿತ ರಾಮ । ಜಗವಂದಿತ ಶ್ರೀರಾಮ ॥೧೦॥

--✿✿✿✿✿--

೩೯೦

ಪಾಹಿ ಮೋಹನರಾಮ ಅಭಿರಾಮ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪಾಹಿಮೋಹನರಾಮ ಅಭಿರಾಮ
ಭೀಮಪರಾಕ್ರಮ ನಿರುಪಮಪ್ರೇಮ ॥ಪ॥

ಪರಶಿವನುತನಾಮ ಪಾವನನಾಮ
ದಾನವಭೀಮ ಕುವಲಯಶ್ಯಾಮ ॥ಅ.ಪ.॥

ಕೋಸಲಪುರಪಾಲ ದಶರಥಬಾಲ
ದುರುಳಕುಲಾನಲ ಘನಗುಣಶೀಲ
ಕನಕದುಕೂಲ ಮಣಿಮಯಮಾಲ
ಜಾನಕಿಲೋಲ ಕರುಣಾಲವಾಲ ॥೧॥

ಪವನಸುತಾನತ ಸುಗುಣಗಣಾನ್ವಿತ
ಭರತಸಂಶೋಭಿತ ಮುನಿಗಣಸೇವಿತ
ಕಮಲದಳಾಯತ ಲೋಚನಸುಲಲಿತ
ಕುಂಭಜಪೂಜಿತ ಮಾಂಗಿರಿನಾಥ ॥೨॥

--✿✿✿✿✿--

೩೯೧

ಪೀತಾಂಬರಧರ ದಶರಥಬಾಲಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪೀತಾಂಬರಧರ ದಶರಥಬಾಲಾ
ಸೀತಾಮನೋಹರ ದಶಶಿರಕಾಲಾ ॥ಪ॥

ಭೀತಜನಾಶ್ರಯ ಮಣಿಮಯಮಾಲಾ
ಶೀತಕೋಪಮ ವದನವಿಶಾಲಾ ॥ಅ.ಪ.॥

ಗೌತಮಮುನಿಸಂಪೂಜಿತಚರಣಾ
ಖ್ಯಾತವಿಭೀಷಣ ಪರಮಾಭರಣಾ
ಪಾತಕಹರ ದಾನವಸಂಹರಣಾ
ವಾತಾತ್ಮಜಸಂಸೇವಿತಚರಣಾ ॥೧॥

ಮಂಗಳಮೂರ್ತಿ ಗರುಡತುರಂಗ
ಸಂಹರಭೀಮ ಶುಭಾಂಗ ಕೃಪಾಂಗ
ಗಂಗಾಧರನುತ ದಿವ್ಯರಥಾಂಗ
ಮಾಂಗಿರಿರಂಗ ಮೋಹನಾಂಗ ನೀಲಾಂಗ ॥೨॥

--✿✿✿✿✿--

೩೯೨

ಪುರುಷೋತ್ತಮ ರಾಘವೇಂದ್ರ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪುರುಷೋತ್ತಮ ರಾಘವೇಂದ್ರ
ಕರುಣಾಕರ ಸುಗುಣಸಾಂದ್ರ ॥ಪ॥

ಶರಣಾಗತಶರಧಿಚಂದ್ರ
ಪರಿಪಾಲಯ ರಾಮಚಂದ್ರ ॥ಅ.ಪ.॥

ದಿನಪಕುಲೋದ್ಧಾಮ ರಾಮ
ಜನಕಸುತಾನಂದದ ಧಾಮ
ದನುಜಕುಲಕುಠಾರ ರಾಮ
ಮುನಿಜನಾಶ್ರಯದಾತ ರಾಮ ॥೧॥

ಪವನಾತ್ಮಜಸೇವ್ಯ ರಾಮ
ಶಿವಸನ್ನುತವೈರಿ ಭೀಮ
ಭುವನೇಶ್ವರ ಸತ್ಯಕಾಮ
ದಿವಿಜಗಣಾರಾಧ್ಯ ರಾಮ ॥೨॥

ಪರಮ ಶಬರಿಗೊಲಿದ ರಾಮ
ವರವಿಭೀಷಣಾಭಿರಾಮ
ನಿರುತಲಕ್ಷ್ಮಣಸೇವಿತರಾಮ
ವರಮಾಂಗಿರಿರಂಗಧಾಮ ॥೩॥

--✿✿✿✿✿--

೩೯೩

ಭಜರೇ ಶ್ರೀರಾಮಂ ಮಾನಸ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಭಜರೇ ಶ್ರೀರಾಮಂ ಮಾನಸ ॥ಪ॥

ಜಾನಕೀರಾಮಂ ದಾನವಭೀಮಂ
ನಿರ್ಜಿತಕಾಮಂ ನಯನಾಭಿರಾಮಂ ॥ಅ.ಪ.॥

ಕರಧೃತಚಾಪಂ ಖಂಡಿತಪಾಪಂ
ರವಿಕುಲದೀಪಂ ಅಸಮಪ್ರತಾಪಂ
ಹನುಮವರೂಥಂ । ಮಾಂಗಿರಿನಾಥಂ
ನಿರುಪಮಶಾಂತಂ ಮಹಿಜಾಕಾಂತಂ ॥೧॥

--✿✿✿✿✿--

೩೯೪

ಮಾಮವತು ಶ್ರೀರಮಾಪತೇ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಮಾಮವತು ಶ್ರೀ ರಮಾಪತೇ । ರಘುಪತೇ ಸೀತಾಪತೇ ॥ಪ॥

ಭೀಮಪರಾಕ್ರಮಾ ದನುಜಾರಾತೇ ।
ಕಾಮಿತಾರ್ಥದಾಯಕ ನಮೋಸ್ತುತೇ ॥ಅ.ಪ.॥

ಆನಕ ನೃಪಾತ್ಮಜಾಯುತ ಸುರಭೂಜಾ ।
ಇನಶಶಿತೇಜ ನಯನಸರೋಜ ।
ವಿನಮಿತ ಶುಂಭ ವಿನತಸುತಾಧ್ವಜ ।
ಮುನಿಪಸಮಾಜ ರೂಪಮನೋಜ ॥ ॥೧॥

ವಾನರಪತಿ ಸಂಸೇವಿತಚರಣಾ ।
ದಾನವವೈರಿ ವಿಭೀಷಣಕರುಣಾ ।
ದೀನಜನಾಶ್ರಯ ಪಾವನಚರಣಾ
ಶ್ರೀನುತ ಮಾಂಗಿರಿ ವೆಂಕಟರಮಣಾ ॥೨॥

--✿✿✿✿✿--

೩೯೫
ರಘುಕುಲತಿಲಕ ಮಾಂ ಪಾಹಿ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ರಘುಕುಲತಿಲಕ ಮಾಂ ಪಾಹಿ ॥ಪ॥

ಅಘಕುಲನಾಶಕ ಮಾಂ ಪಾಹಿ ॥ಅ.ಪ.॥

ಆಹವಭೀಮ ವೈದೇಹಿಮಾನಸ
ಗೇಹಸುಧಾಕರ ಮಾಂ ಪಾಹಿ ರಾಮಾ ॥೧॥

ಕೋದಂಡಧರ ದೀನದಯಾಪರ
ಆದಿಮೂಲಹರಿ ಮಾಂ ಪಾಹಿ ರಾಮ ॥೨॥

ಮಾಂಗಿರಿಮಂದಿರ ತುಂಗಕೃಪಾಕರ
ಗಂಗಾಜನಕಹರಿ ಮಾಂ ಪಾಹಿ ರಾಮಾ ॥೩॥

--✿✿✿✿✿--

೩೯೬

ರಾಜೀವನಯನ ಸೀತಾರಾಮ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ರಾಜೀವನಯನ ಸೀತಾರಾಮ ಪಾಹಿ ಮುದಂ ದೇಹಿ ॥ಪ॥

ರಾಜಾಧಿರಾಜ ಕಲ್ಪಭೂಜ ಸೌಜನ್ಯನಿಲಯರಾಮ ॥ಅ.ಪ.॥

ಸಾಕೇತಾಧಿಪರಾಮ, ಲಂಕಾನತದನುಜಭೀಮ
ಕಾಕಾಸುರನಮಿತ ನಾಮ, ಶ್ರೀಕರಕೀರ್ತಿಕಾಮ
ಏಕಾಂತ ರಘುನಾಮ, ಏಕಾಂಬರ ಶಿವಪ್ರೇಮ
ಸಾಕೇಶ್ವರ ಸಾರ್ವಭೌಮ, ಶ್ರೀಮಾಂಗಿರಿ ರಂಗಧಾಮ ॥೧॥

--✿✿✿✿✿--

೩೯೭

ರಾಜೀವಲೋಚನ ಹರೇ ಮುರಾರೇ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ರಾಜೀವ ಲೋಚನ ಹರೇಮುರಾರೇ
ಮಾಜೀವ ಮೋಹನ ಹರೇಮುರಾರೇ ॥ಪ॥

ರಾಜೇಂದ್ರನಂದನ ಹರೇಮುರಾರೇ
ಓ ಜಾನಕೀಪ್ರಿಯ ಪಾಹಿಮುರಾರೇ ॥ಅ.ಪ॥

ವಾರಾಶಿಗಂಭೀರ ಸಾಕೇತಧಾಮ
ಮಾರಾರಿವಂದಿತ ಲೋಕಾಭಿರಾಮ
ಘೋರಾಘಸಂಹಾರ ರಣರಂಗಭೀಮ
ಶ್ರೀರಾಮ ಜಯರಾಮ ಕಲ್ಯಾಣರಾಮ ॥೧॥

ಪವನಾತ್ಮಜಾನಂದ ದಾತಾಪರೇಶ
ಭವನಾಶ ಜಗದೀಶ ದೈತೇಯನಾಶ
ರವಿಕೋಟಿಸಂಕಾಶ ರವಿತೇಜ ಪೋಷ
ಸುವಿಲಾಸ ಮಾಂಪಾಹಿ ಶ್ರೀಮಾಂಗಿರೀಶಾ ॥೨॥

೩೯೮

ರಾಮಂ ಭಜರೇ ಭಜಮಾನಸ ರಘು

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ರಾಮಂ ಭಜರೇ । ಭಜಮಾನಸ ರಘು ॥ಪ॥

ಭುವನಾಭಿರಾಮಂ ಗುಣರತ್ನಧಾಮಂ ॥ಅ.ಪ.॥

ರಾಮೇತಿ ದೀನಪಾಲ ಲಲಾಮೇತಿ ಶುಭಕರನಾಮಂ ।
ಕೋದಂಡಧರ ರಿಪುದೋರ್ದಂಡ ಸದ್ಗುಣಂ ।
ತಾರಕನಾಮ ರಾಮಂ ಧಾಮಂ ಜಾನಕಿರಾಮಂ ।
ಬಾಲೇಂದುಧರನುತ ಸೌಮಿತ್ರಿ ಸನ್ನುತ ರಾಮಂ ।
ನೀಲಾಂಬುಜಾತರಾಮಂ ಪಟ್ಟಾಭಿರಾಮಂ ।
ಶೃಂಗಾರಪೂರ್ಣ ಶುಭಾಂಗ ಮಾಂಗಿರಿವಾಸ ರಂಗಂ ।
ಸತ್ಕರುಣಾಂತರಂಗಂ ದಾನವಕುಲಭಂಗಂ ॥೧॥

--✿✿✿✿✿--

೩೯೯

ರಾಮಚಂದಿರ ಶ್ಯಾಮಸುಂದರ ಪ್ರೇಮಸಾಗರಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ರಾಮಚಂದಿರ ಶ್ಯಾಮಸುಂದರ ಪ್ರೇಮಸಾಗರಾ ॥ಪ॥

ಭೂಮಿಜಾತೆಯರಸ ಬಂಧುರ ಕೋಮಲಕರ ಶರಣಪಾಲಾ ॥ಅ.ಪ.॥

ವೇದವಿದಿತಾ ಮೋದಭರಿತ ಶ್ರೀಧರಾಚ್ಯುತ
ಸಾದರದೊಳು ನಿನ್ನ ಸಂತತಾರಾಧನೆಗೈಸುವ ಭಾರ ನಿನ್ನದು ॥೧॥

ಶಿಲೆಯ ಸತಿಯಗೈವ ಪಾದವ ತೊಳೆದ ಜನಕನು
ಸುಲಭಮಾರ್ಗದಿ ಶಬರಿ ನಿನ್ನಯ ಜಲಜಪಾದ ಸೇವೆಗೈದಳು ॥೨॥

ಧರೆಯಿದಸ್ಥಿರ ತನುವಿದಸ್ಥಿರ ಜನುಮನಿಸ್ಸಾರಾ
ವರದ ಮಾಂಗಿರೀಶ ನಿನ್ನಯ ಕರುಣವೇಶರಣರ ಪರಮಸೌಭಾಗ್ಯ ॥೩॥

ರಾಮಚಂದ್ರ ರಘುವೀರ ನಮೋ ನಮೋ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ರಾಮಚಂದ್ರ ರಘುವೀರ ನಮೋ ನಮೋ ॥ಪ॥

ಶ್ಯಾಮಾಂಗ ಸುಕುಮಾರಾ ನಮೋ ನಮೋ
ಕಾಮಿತಾರ್ಥದಾತಾರಾ ನಮೋ ನಮೋ ಓಂಕಾರ ॥ಅ.ಪ.॥

ದಶರಥೇಂದ್ರ ಪ್ರಿಯಬಾಲಾ ನಮೋ ನಮೋ
ವಸಿಷ್ಠಾದಿಮುನಿತೋಷಿತಾ ನಮೋ ನಮೋ
ನಿಶಚರೇಭಕುಲಕಾಲಾ ನಮೋ ನಮೋ ಶ್ರೀ ಬಾಲಾ ॥೧॥

ಗೌತಮಸತಿಪರಿಪಾಲಾ ನಮೋ ನಮೋ
ಭೂತನುಜಾರ್ಪಿತಮಾಲಾ ನಮೋ ನಮೋ
ನೀತಿಸುಗುಣಯುತಶೀಲಾ ನಮೋ ನಮೋ ಘನಲೀಲಾ ॥೨॥

ಘೋರಾರಣ್ಯವಿಹಾರಾ ನಮೋ ನಮೋ
ವೀರಖರಾಸುರಮಾರಾ ನಮೋ ನಮೋ
ಮಾರೀಚಾಂತಕ ವೀರಾ ನಮೋ ನಮೋ ಶ್ರೀಕಾರಾ ॥೩॥

ಸೀತಾವಿರಹಸಂತಪ್ತಾ ನಮೋ ನಮೋ
ಭ್ರಾತಾವಚನಸಂತೃಪ್ತಾ ನಮೋ ನಮೋ
ಖ್ಯಾತ ಮೃದುವಾಕ್‌ದೀಪ್ತಾ ನಮೋ ನಮೋ ಸಂತೃಪ್ತಾ ॥೪॥

ಮರುತಾತ್ಮಜನುತಿಪಾತ್ರಾ ನಮೋ ನಮೋ
ವರಸುಗ್ರೀವಸನ್ಮಿತ್ರಾ ನಮೋ ನಮೋ
ಪರಮಪುಣ್ಯಚರಿತ್ರಾ ನಮೋ ನಮೋ ಶ್ರೀಗಾತ್ರಾ ॥೫॥

ಶರಧಿಗರ್ವವಿಭಂಗಾ ನಮೋ ನಮೋ
ಶರಧಿವಿಭೀಷಣಾ ನಮೋ ನಮೋ
ಅರಿಕುಲನಾಶಕರಂಗಾ ನಮೋ ನಮೋ ಶ್ರೀರಂಗಾ ॥೬॥

ರಾವಣಮರ್ದನರಾಮಾ ನಮೋ ನಮೋ
ಭೂವನಿತಾತ್ಮಜಪ್ರೇಮಾ ನಮೋ ನಮೋ
ದೇವದಿವಿಜನುತ ನಮೋ ನಮೋ ಶ್ರೀರಾಮಾ ॥೭॥

ಸತ್ಯಧರ್ಮಪರಿಪಾಲಾ ನಮೋ ನಮೋ
ದೈತ್ಯವರ್ಗನಿರ್ಮೂಲಾ ನಮೋ ನಮೋ
ನಿತ್ಯಮುಕ್ತವನಮಾಲಾ ನಮೋ ನಮೋ ಭೂಪಾಲಾ ॥೮॥

ಮಂಗಳಾಂಗ ನೀಲಾಂಗಾ ನಮೋ ನಮೋ
ರಂಗನಾಥ ರಿಪುಭಂಗಾ ನಮೋ ನಮೋ
ಮಾಂಗಿರೀಶ ಮಾಲಿಂಗಾ ನಮೋ ನಮೋ ಶ್ರೀರಂಗ ॥೯॥

--✿✿✿✿✿--

೪೦೧
ರಾಮಾ ರಘುನಾಯಕಾ ಭೀಮಾ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ರಾಮಾ ರಘುನಾಯಕಾ ಭೀಮಾ
ರಾಘವಾ ವರದಾಯಕಾ ॥ಪ॥

ಸೋಮಸನಾತನ ಭೂಮಿಜನಾಯಕಾ
ಪ್ರೇಮಸಮಾನ್ವಿತ । ಶ್ಯಾಮನೆ ಬಾರೋ ॥ಅ.ಪ.॥

ರಾವಣಮರ್ದನ । ಪಾವನಚರಣಾ
ಶ್ರೀವನಮಾಲಾ । ಧಾರಣಸುಗುಣಾ
ನಾವಿಕಸೇವಿತ । ಸಂತತ ಕರುಣ
ದೇವದೇವಾನತ । ಶರಣಾಭರಣ ॥೧॥

ಮೌನಿಯ ಕಾಂತೆಯ । ಪಾಲಿಸಿದಾತ
ಶೌನಕವಂದಿತ ಕುಶಲವತಾತ
ಹನುಮತ್ಸೇವಿತ ವರವರದಾತ
ಮುನಿಜನ ತೋಷಿತ ಮಾಂಗಿರಿನಾಥ ॥೨॥

೪೦೨
ವಿನಾಯಕಾನತ ರಾಮಾ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ವಿನಾಯಕಾನತ ರಾಮಾ ||ಪ||

ಸುಶೀಲ ನಿರುಪಮಗುಣಾಭಿರಾಮಾ ||ಅ.ಪ.||

[ಸಶೇಷ] ಮನೋಜ ನಿರುಪಮವದನ
ನಿಶಾಕರಾರ್ಭಕ ದಶಶಿರಹನನ
ವಿಶಾಲಲೋಚನ ಕೃಪಾವಲಂಬನ
ದಶರಥನಂದನ ಸದಾನಿರಂಜನ ||೧||

ಸೀತಾವಿರಾಜಿತ ವಾತಾತ್ಮಜಾನತ
ಪೀತಾಂಬರಾಚ್ಯುತ ರಮಾನತ
ಭ್ರಾತಾಭಿವಂದಿತ ವಿಭೀಷಣಾನತ
ಧಾತಾನಂದಿತ ಶ್ರೀಮಾಂಗಿರಿನಾಥ ||೨||

--✿✿✿✿✿--

೪೦೩
ಪಾಲಿಸೆನ್ನ ರಾಮ ರೂಪಜಿತಕಾಮ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಪಾಲಿಸೆನ್ನ ರಾಮ ರೂಪಜಿತಕಾಮ ||ಪ||

ಸದ್ಗುಣರತ್ನಧಾಮ ರಘುಕುಲೋದ್ಧಾಮ ||ಅ.ಪ.||

ಶರಧಿಗಂಭೀರ ಉರುತರಧೀರ
ಭವರುಜೆಸಿಂಧೂರ ಪೀತಾಂಬರಧರ ||೧||

ಘನಪುಣ್ಯನಾಮ ಸೌಭಾಗ್ಯಸೋಮ
ಕುವಲಜೆಸಿಂಧೂರ ಪೀತಾಂಬರಧರ ||೨||

ಸಕಲಪಾಪಹರ ಸುಕವಿರತ್ನಹಾರ
ಜಗದೊಡೆಯವೀರ ಸುಜನಾವಿಹಾರ ॥೩॥

ಸಾಲಿಗ್ರಾಮವಾಸಿ ಬಲಿರಾಜಪೋಷಿ
ಕಲಿದೋಷಹಾರಿ ಪಾಲಿಸೆನ್ನಶೌರಿ ॥೪॥

--✿✿✿✿✿--

೪೦೪
ವೇದವೇದ್ಯರೂಪ ವಿಶ್ವವ್ಯಾಪಕನೇ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ವೇದವೇದ್ಯರೂಪ ವಿಶ್ವವ್ಯಾಪಕನೇ ರಾಮ
ನಾದರೂಪಪ್ರೀತ ವಿಶ್ವರಕ್ಷಕನೇ ರಾಮ ॥ಪ॥

ಆದಿಮಧ್ಯರಹಿತದೇವ ನಾದರಂಜಿತನೇ ರಾಮ ।
ಮಾಧವ ಮಧುಸೂದನ ಹರೇ ಮಧುರಭಾಷಿತನೇ ರಾಮ ॥ಅ.ಪ.॥

ಕಮಲನಯನ ಕಮಲವದನ ಕಮಲನಾಭನೇ
ಕಮಲಹಸ್ತ ಕಮಲಮಸ್ತಕ ಕಮಲವಕ್ಷನೇ
ಕಮಲಸದನ ಕಮಲಶೋಭಿತ ಕಮಲಜಾಪ್ರಿಯನೇ
ಕಮಲಸಂಭವಾದಿನಮಿತ ಕಮಲಾರಾಧಿಕನೆರಾಮ ॥೧॥

ಗಂಗಾಜನಕ ಮಂಗಳಾಂಗ ತುಂಗವಿಕ್ರಮನೇ
ಇಂಗಿತಾರ್ಥದಾತ ಮೌನಿಪುಂಗವಾನತನೇ
ಅಂಗಜಾತವೈರಿಸನ್ನುತ ಅಂಗರೂಪನೇ
ಭೃಂಗಕುಂತಳ ಮಾಂಗಿರೀಶ ರಂಗನಾಥನೇ ರಾಮ ॥೨॥

--✿✿✿✿✿--

೪೦೫
ಶ್ರೀ ರಘುಪತೇ ನಮೋಸ್ತುತೇ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಶ್ರೀರಘುಪತೇ ನಮೋಸ್ತುತೇ
ಚಾರುನೀತಿಯುಕ್ತ ಭೂಪತೇ ॥ಪ॥

ನೀರದಸಮಶರೀರ ಸಮರಾಂಗಣ
ಧೀರ ಸದಾನಂದಕರ ಭೂಮಿಜಾಪತೇ ॥ಅ.ಪ.॥

ಲೋಕಾಭಿರಾಮ ತಾರಕನಾಮ
ಶ್ರೀಕಂಠವಿನುತ ಸಾಕೇತಧಾಮ ॥೧॥

ಸಕಲಕಲಾವಿದ ಭಜಕಪ್ರೇಮ
ಶುಕಶೌನಕ ಮುನಿಸನ್ನುತ ನಾಮ ॥೨॥

ವಿಕಸಿತ ವದನಾಂಭೋರುಹಲೋಚನ
ಸಖ ಮಾಂಗಿರೀಶ ಹನುಮಾನತ ನಾಮ ॥೩॥

--✿✿✿✿✿--

೪೦೬
ಹಿಡಿದಕೈ ಬಿಡಬೇಡವೋ ರಾಮಾ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಹಿಡಿದಕೈಬಿಡಬೇಡವೋ ರಾಮಾ ॥ಪ॥

ಹಿಡಿದ ಕೈ ಬಿಡಬೇಡ ಕಡಲವಾಸವು ಬೇಡ
ತಡಿಗೆ ತಳೆಯದಿರಬೇಡ ಕಡೆಗಣ್ಣಿಡೆ ಬೇಡ ॥ಅ.ಪ.॥

ನುಡಿಕೇಳದೆನಬೇಡಾ ಅಡಿದೋರದಿರಬೇಡ
ಕುಡುಕಹೋಗೆನಬೇಡ ನುಡಿಸದಿರಬೇಡ

ಕೊಡುಕೊಡೆನ್ನಿಸಬೇಡ । ಪಡೆಯುವಾಸೆಯುಬೇಡ
ದೃಢವಾಗಿ ನಿನ್ನಡಿಯ ಹಿಡಿಸದಿರಬೇಡ ॥೧॥

ಬಿಗುಮಾನ ಬೇಡಯ್ಯ ನಗುಮೊಗವ ತೋರಯ್ಯ
ಬಗೆಯರಿತು ನಡೆಸಯ್ಯ ಸುಗತಿದೋರಯ್ಯ
ಬಿಗಿಹಿಡಿದ ಕೈಯ ಜಗುಳಿಸಲು ಬೇಡಯ್ಯ
ನಿಗಮವಂದಿತಜೀಯ ಮಾಂಗಿರಿಯ ರಂಗಯ್ಯ ॥೨॥

--✿✿✿✿✿--

೪೦೭
ಶ್ರೀರಾಮ ಜಯರಾಮ ರಘುರಾಮ ಪಾಹಿ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ – ೧೯೮೪)

ಶ್ರೀರಾಮ ಜಯರಾಮ ರಘುರಾಮ ಪಾಹಿ
ನಾರಾಚಕೋದಂಡಧರ ಧೀರ ಪಾಹಿ ॥ಪ॥

ಮಾರಾರಿನುತನಾಮ ದನುಜಾರಿ ಪಾಹಿ
ಧರಣೀಸುತಾನಂದ ಸುವಿಹಾರಿ ಪಾಹಿ ॥ಅ.ಪ.॥

ಸೌಮಿತ್ರಿ ಭರತಾಪ್ರಜಾತ ಮಾಂಪಾಹಿ
ಮೌನಿಜನಸಂಪ್ರೀತ ಶ್ರೀಲೀಲಪಾಹಿ
ಶ್ರೀಮಾರುತಿಸೇವ್ಯ ಪಾದಾಬ್ಜಪಾಹಿ
ಧೀಮಂತ ಘನಪುಣ್ಯನಾಮ ಮಾಂಪಾಹಿ ॥೧॥

ಭುವನಾಭಿರಾಮಾ ತ್ರಿಮುನಿಸ್ತುತ್ಯಪಾಹಿ
ಭವನಾಶ ಸತ್ಕೀರ್ತಿಕಾಮ ಮಾಂಪಾಹಿ
ನವಮೋಹನಾಂಗ ರಾವಣವೈರಿ ಪಾಹಿ
ಸುವಿಲಾಸದಾತ ಮಾಂಗಿರಿವಾಸ ಪಾಹಿ ॥೨॥

--✿✿✿✿✿--

೪೦೮

ಶ್ರೀರಾಮ ಪಾಹಿ ಮಾಂ ಸದಾಪೂರ್ಣಕಾಮ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಶ್ರೀರಾಮ ಪಾಹಿಮಾಂ ಸದಾಪೂರ್ಣಕಾಮ
ವಾರಿಜಭವವಿನುತನಾಮ ಸಾರಸಾಕ್ಷ ಸಂಗರಭೀಮ ॥ಪ॥

ಮುನಿಕೌಶಿಕ ಮಖಪಾಲಕ ಘನತಾರಕನಾಮ
ವನಜಾಂಬಕ ವರದಾಯಕ ಜನಕಾತ್ಮಜ ಪ್ರೇಮ
ದನುಜಾಂತಕ ಭವಭಂಜಕ ಇನವಂಶಲಲಾಮ
ಜನನಾಯಕ ಫಲದಾಯಕಸದಯ ಮಾಂಗಿರಿರಾಮ ॥೧॥

--✿✿✿✿✿--

೪೦೯

ಹರೇ ರಾಘವ ಪಾಲಯ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಹರೇ ರಾಘವ ಪಾಲಯ ಚಿರಕರುಣಾಲಯ
ಸುರಾನಂದ ಸಂವರ್ಧಕ ಪರಾತ್ಪರಾಪ್ರಮೇಯ ॥ಪ॥

ವರಾಹ ಕೇಸರಿ ದ್ವಿಜಾವತಾರಿ
ಪರೇಶ ಮುರಳಿ ಧರೇಶ ಶೌರಿ
ವಿರಾಧ ಮಾರೀಚ ದಶಾನನಾರಿ
ಸರೋಜನೇತ್ರ ಮಾಂಗಿರಿವಿಹಾರಿ ॥೧॥

--✿✿✿✿✿--

೪೧೦

ಪಾಹಿ ಶ್ರೀ ರಮಾರಮಣ ಸಂತತಂ ಮಾಂ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಪಾಹಿ ಶ್ರೀ ರಮಾರಮಣ ಸಂತತಂಮಾಂ
ಪಾಹಿ ಶ್ರೀ ರಮಾರಮಣ ಪಾವನಸಂಕ್ರಮಣ ॥ಪ॥

ಮೋಹನ ರಂಗನಾಯಕ ಭಕ್ತಜನ
ವ್ಯೂಹಭವಾಂಛಿತದಾಯಕ ಸಕಲ ಜಗ-
ನ್ಮೋಹವಾಯತಬಾಹು ಘನ ನಿಭ-
ದೇಹಖಗಪತಿವಾಹ ವಿದಳಿತ-
ಮೋಹದೇಹ ಸಮೂಹನುತಿಪಾತ್ರ
ಕಮಲದಳನೇತ್ರ ॥೧॥

ದಾನವಮರ್ದನ ಧರ್ಮವಿವರ್ಧನ
ಮಾನಿತಗುಣಾಭರಣಮೌನಿಜನ
ಮಾನಸಾಶ್ರಿತಚರಣ ಕರುಣಾಭರಣ
ದೀನಜನಸಂತಾನ ನಿಕರನಿದಾನ ವಿನುತೇಶನ ನಾರದ
ಗಾನಲೋಲ ಮಹಾನುಭಾವ ಹರೇ
ಮಧುಕೈಟಭಾರೇ ॥೨॥

ತೋಷಿತಾಮರಲೋಕ ದೂಷಿತಾಖಿಲಶೋಕ
ಪೂಷವಂಶಜಪೂಜಿತ ಸೇವಕ ವಿ-
ಭೀಷಣ ವರದಾಯಕ ಪ್ರಣವ ಸೌಧ-
ಶೇಷಶಯನ ವಿಶೇಷ ಮೃದುತರಭಾಷ ವರಮಣಿ
ಭೂಷಕೃತನುತವೇಷ ಶುಭಕರದೋಷ ನಿ
ರ್ದೋಷಪೋಷಿತಾಶೇಷ ॥೩॥

ವಾರಣ ಪರಿಪಾಲ ವನಜಸಂಭವಲೋಲ
ಸೂರಿತನಯರಕ್ಷಕ ರಾವಣಾದಿ
ಕ್ರೂರರಾಕ್ಷಸಶಿಕ್ಷಕ ಕೋಸಲಪುರೀಂದ್ರ
ಮಾರಶತ ಸುಕುಮಾರ ವರರಘುವೀರ ಗುಣಮಣಿ
ಹಾರ ಸುಜನವಿಹಾರ ಜಲಧಿಗಂಭೀರ
ಮೃದುಚರಣ ಮುನಿಶಾಪಹರಣ ॥೪॥

--✿✿✿✿✿--

ಪಾಹಿ ಶ್ರೀ ರಘುವರ ನಿತ್ಯಂ ದೇಹಿ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಪಾಹಿ ಶ್ರೀ ರಘುವರ ನಿತ್ಯಂದೇಹಿ
ಮಾಮನನ್ಯಶರಣಂ ವಂದೇ ದೇಹಿ
ಮಹಿತಾವಕ ದಯಾಂ ದೇಹಿ
ತವಪದಯುಗ ಭಕ್ತಿಂ ದೇಹಿ
ಸುಶರಾಶನಧರ ವೈದೇಹಿ
ವದನಕಮಲ ಮಧುಕರಪಾಹಿ ॥ಪ॥

ಕರುಣಾಕೃತ ಶರಣಾಗತ ಭರಣಾತಿವಿತರಣ
ಅನುಪರಾದಿಮುನಿವಿರೋಧ ಖರದೂಷಣ
ವಿರಾಧಗುರುಧರಾಧರಾಲಿಕುಲಿಶ ॥೧॥

ಶಮಿತಾನಮಮಿತಾ ಸುಖದಮಿತಾಮರವಿನುತ
ವಿಗತಮಾನ ವಿಮಲಮಾನಸ
ವಿಬುಧಗಮ್ಯ ಮಾನಧನಸಮಾನ ಶುಭವಿಗ್ರಹ ॥೨॥

ಧನದಾನುಜಘನದಾವದಹನ ದಾರುಣವನದಾ
ತ್ರಿಭುವನಾಧಿಪತಿ ಗಣಾದಿಹ ಹರವರ
ಗುಣಸನಾದ ದಿವಸನಾದ ಕುಲಪಾವನ ॥೩॥

ದುರಿತಾಪಹ ಚರಿತಾಧೃತ ಭರತಾತ್ರಿಶುಭರತ
ಸುಮಧುರಾಲ ಹಿಮವರಾಲಘಣ ಕೋ-
ಸಲಪುರಾಲಯದುಚಿಲಕಾಮೃತಮುಖಾ ॥೪॥

--✿✿✿✿✿--

೪೧೨

ಶ್ರೀ ರಘುವರ ಸುಗುಣಾಲಯ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಶ್ರೀರಘುವರ ಸುಗುಣಾಲಯ
ಪುರಹರ ಚರಿತನ ನಾಮಧೇಯ
ನೀರದ ನೀಲಶರೀರ ಪಾಹಿ
ಧರಣೀಸುತಾ ಸಹಾಯ ||ಪ||

ಕರುಣಾ ವರುಣಾಲಯ ಪರಿವಾರಿತ
ಹರವೀರನಿಕಾಯ
ಶರಣಾಗತಭಯಹರಣ ಸುಖ
ಪರಿವಾರಕಾಂಜನೇಯ ||೧||

ನೀರಧಿಮದಹರಣ ವಿಶಾರದಶರ
ಸೂರಿಜನ ವಿಧೇಯ
ಘೋರಾಕಾರ ಸುರಾರಿವಿದಾರಣ
ಕಾರಣ ಸಮುದಾಯ ||೨||

ಗುರುಭವದವದಹನಘನಾಘನಸಾರ
ಸೂರಿಜನಭವಮೇಯ
ನಿರವದ್ಯತಪೋನಿರತಿಜಿತೇಂದ್ರಿಯ
ವರಯೋಗಿ ಧ್ಯೇಯ ||೩||

ಭೀಷಣದೂಷಣ ಹರಮೃದುಭಾಷಣ
ತೋಷಿತಗಾಧೇಯ
ಪೋಷಿತ ವಿಭೀಷಣ ವನಪೋಷಣ
ಶೇಷನಾಮಧೇಯ ||೪||

ಗಂಧ ಮತಂಗಜಗಮನಮಹಾ
ಭಾಗವತ ಭಾಗಧೇಯ
ಸಿಂಧುರ ಹಸ್ತಯುತಬಾಹು
ಪ್ರಚೇತಸಮುನಿಗೇಯ ||೫||

ಅತಿ ಶುಭಲಕ್ಷಣ ಜಗದ್ವಿಲಕ್ಷಣ
ಅತಿ ಪರಮೋಪಾಯ
ಶ್ರಿತ ಕಮಲೇಕ್ಷಣ ಬುಧರಕ್ಷಣ
ಖರ ಶಿಕ್ಷಣ ಧೌರೇಯ ॥೬॥

ಭಾಸುರ ಬಾಣಶರಾಸನ ಹಸ್ತವಿ
ಲಾಸಮನುಜಕಾಯ
ಕೋಸಲಪುರವಾಸ ಮಂದಹಾಸ ಸು
ನಾಸಕೋಸಲೇಯ ॥೭॥

--✿✿✿✿✿--

೪೧೩
ಮಾಮವ ರಘುವೀರ ಮಾನಿತ ಮುನಿವರ
(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಮಾಮವ ರಘುವೀರ ಮಾನಿತಮುನಿವರ
ಭೂಮಿಸುತಾನಾಯಕ-ಭಕ್ತಜನ
ಕಾಮಿತಫಲದಾಯಕ ॥ಪ॥

ಗರ್ವಿತಸುತ್ರಾಮತನಯ ವಿರಾಮ
ನೃಪತಿ ಲಲಾಮ ದಶರಥರಾಮ ಸಮರೋದ್ದಾಮ
ದಶಮುಖ ಸಾಮಜಮೃಗೇಂದ್ರಾ ಕೋಸಲಪುರೀಂದ್ರ ॥೧॥

ದಿನಕರಕುಲದೀಪ ಧೃತದಿವ್ಯಶರಚಾಪ
ವನಜಸನ್ನಿಭಗಾತ್ರ ಯೋಗಿವರ್ಯ
ಸನಕಾದಿಮುನಿಪಾತ್ರ-ನಭೋಮಣಿ ॥೨॥

ತನುಜ ಶರಣಪವನಜ ಮುಖ ಪರಿ
ಜನಜಗದಹಿತ ದನುಜಮದಹರ
ಮನುಜತನುಧರ ವನಜದಳನಯನ ಅಮಿತಮುನಿಶಮನ ॥೩॥

ಭಂಡನುದ್ಧತದೋಷ ಪಾಲಿತ ಗೌತಮಯೋಷ
ದಂಡಿತ ಮಾರೀಚ-ಅಬ್ಧಿಗರ್ವ
ಖಂಡಕನಾರಾಚ ದಿವ್ಯರತ್ನ ॥೪॥

ಕುಂಡಲಿಕಲಿಗತ ಗಂಡಯುಗವೇ
ತಂಡಕರಭುಜದಂಡ ಹಿಮಕರ
ಖಂಡಧರಕೋದಂಡದಳನಯನ ಅಗಣಿತಗುಣಗಣ ॥೫॥

ಘಟಿತನಾನಾಭೂಷ ಕಲಿತಾಶ್ರಿತ ಪೋಷ
ತಟಿಧೂಪಾಮಿತವಸನ ಶ್ರೀ ಕೋಸಲ
ಪುಟಾಭೇದನ ನಿವಾಸನಇಂದ್ರನೀಲಾಭ ॥೬॥

ಕುಟಿಲಕಚವೃತ ವಿಟಲತಟಮಣಿ
ಪಟುಲ ಖಚಿತಲನಿಟಟಸಟ ಮೃದು
ಚಟುಲ ಪೀತನತಜಟಿಲ ಮೂಲಧನ ದರಹಸಿತವದನ ॥೭॥

--✿✿✿✿✿--

೪೧೪
ಜಾನಕೀ ಮನೋಹರಾಯ ಜಯಮಂಗಳಂ
(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. – ೧೮ ಶ.)

ಜಾನಕೀ ಮನೋಹರಾಯ ಜಯಮಂಗಳಂ ಪವನ
ಸೂನುನೀತಧರಾಯ ಶುಭಮಂಗಳಂ-ಶ್ರೀ
ಜಾನಕಿಮನೋಹರಾಯ ಜಯಮಂಗಳಂ ॥ಪ॥

ಮಕರಕುಂಡಲಯುಗಳಮಂಡಿತ ಗಂಡಸ್ಥಳಾಯ
ಚಕಿತಮುನಿಶರಣ್ಯಾಯ ಜಯಮಂಗಳಂ
ಅಕಳಂಕಶೇಷಾಂಕ ಸನ್ನಿಭಸೂನಾಯ ಜಲದ ನೀಲ
ಸುಕುಮಾರ ಶರೀರಾಯ ಶುಭಮಂಗಳಂ ॥೧॥

ಗರ್ವಿತರಾವಣಕುಂಭಕರ್ಣವಿದ್ರಾವಣಾಯ
ಸರ್ವಲೋಕ ಶರಣ್ಯಾಯ ಜಯಮಂಗಳಂ
ಗೀರ್ವಾಣ ವಂದಿತಾಂಘ್ರಿಯುಗಾಯ ಸುಜ್ಞಾನಾಯ
ಸುರವಿದ್ಯಾಸ್ವರೂಪಾಯ ಶುಭಮಂಗಳಂ ॥೨॥

ಜಲದಮೂಲ್ಯಮಣಿಸಿಂಹಾಸನಸ್ಥಲಾಯ
ಕೋಸಲನಗರನಿಲಯಾಯ ಜಯಮಂಗಳಂ
ಆಲಜದಳಲೋಚನಾಯ ಶಬರೀವರದಾಯ-ಭಕ್ತ
ಸುಲಭಾಯ ಶ್ರೀರಾಮಾಯ ಶುಭಮಂಗಳಂ ॥೩॥

--✿✿✿✿✿--

೪೧೫
ಪಾಹಿಮಾಂ ಶ್ರೀರಾಮಚಂದ್ರ ನಲಿನಾಸನಂ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಪಾಹಿಮಾಂ ಶ್ರೀರಾಮಚಂದ್ರ ನಲಿನಾಸನಂ
ಭವವಿನುತದಿವ್ಯಗುಣಸಾಂದ್ರಮ್
ದೇಹಿ ತವಪದಕಮಲಭಕ್ತಿಮಾನ ಪಾಹಿ
ದೀನವಾತ್ಸಲ್ಯದಯಾಸಿಂಧೋ ಬಂಧೋ ॥ಪ॥

ತರಣಿಕುಲ ಸಲಿಲನಿಧಿ ಸೋಮ-ತಾಟಕಾ
ತನಯಾದಿ ರಾಕ್ಷಸ ವಿರಾಮ-ಸನ್ಮುದಿತ
ಪುರುಹೂತಮುಖಸುರಸ್ತೋಮ-ಪದರೇಣು
ಪೂತಗೌತಮಮೌನಿಭಾಮ-ಜನಕಜಾ
ಧರಣೀಶ ಕನ್ಯಾಭಿರಾಮ-ಕಾರ್ಮುಕ
ಹರಣಪರೀಭೂತಭೃಗುರಾಮ-ದರದಳಿತ
[ವರ]ನೀಲೋತ್ಪಲಶ್ಯಾಮ ರಿಪುಭೀಮ
ಶರದೇವತಾ ಸಾರ್ವಭೌಮ ॥೧॥

ಜನಕೋಕ್ತಿ ವಿಧೃತ ಭೂಭರಣ–ಜಾನಕೀ
ಸೌಮಿತ್ರಿರಂಜಿತಾನುಸರಣ ಬ್ರಹ್ಮಋಷಿ
ಘನಚಿತ್ರಕೂಟಗಿರಿಶರಣ, ಭರತನಿರ್ಗಮ
ಹೇತುಪಾದವಿತರಣ–ವಿಭುಧರಂ
ಜನಕರ ವಿರಾಧಸಂಹರಣ–ದಂಡಕಾ
ವನನಿಲಯ ನಿಖಿಲಮುನಿಶರಣ–
ಘನತಪೋಧನಸುತೀಕ್ಷ್ಣಾಭರಣ ರಣಕರುಣ
ಘಟಜ ದತ್ತಧನುಪ್ರಹರಣಾಭರಣ ॥೨॥

ಖರವಂಶಹರ ಸಂಪ್ರಹರಶರನಿಹಿತ
ಕನಕಮೃಗದಾರುಣಾಕಾರ–ಸಂಸಾರ
ಪರಮೋಚಿತವಿಹಂಗವೀರ ಪ್ರಶಸಿತಘನ
ಬಂಧು ದನುಜ ಭೂಜಾಪ್ರಹರ–ಅದ್ಭುತಾಶಾ
ಬರ ವಧೂವಿವಿಧೋಪಹರ–ಆಕಲಿತ
ಪಂಪಾವನಾಂತರವಿಹಾರ
ತರಣಿಕುಲಸೌಖ್ಯಕಾರಿ ಸಮೀರಣಕುಮಾರ
ದಳಿತ ವಾಲಿ ಮಹಾಶರೀರಶೂರಾ ॥೩॥

ಅನುಪಮ ಪ್ಲವಗ ಪರಿಹಾರ–ಹೃದಯಸೌಖ್ಯದ
ಹನುಮದ್ವಚನಸಾರ–ಅತಿಜವನ
ವನಚರಾಮೃತವನದೀತೀರ(ಪೃಥುತರಾ)–ಪ್ರಯಿತ
ವಣ ಸಹೋದರ ಭಯವಿದಾರ–ಸೇತುಬಂ–
ಧನ ಜನಿತ ರಕ್ಷೋವಿಚಾರ–ಲೋಕಾಹಿತ
ದಶವದನ ಜೀವಾಪಹರ–ಕಮಲಜ
ವಿನುತ ಮುಖ್ಯ ಬೃಂದಾರಕಸಾದರ–ವಿಹಿತ
ಕೋಸಲ ರಾಜ್ಯಭಾರಾಧೀರಾ ॥೪॥

--✿✿✿✿✿--

ಭಜೇಹಂ ವೀರರಾಘವಂ ಭಜೇಹಂ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. – ೧೮ ಶ.)

ಭಜೇಹಂ ವೀರರಾಘವಂ ಭಜೇಹಂ
ಸಾರಧನುರ್ಗುಣಪೂರಣಾತಿ ವಿಸ್ತಾರಿತ
ಭಾರ್ಗವ ಭೂರಿ ಲಾಘವಮ್ ॥ಪ॥

ಪಾಲಿತ ದಿನಕರಗೋತ್ರ ಸದಾ ಪರಿ–
ಪಾಲಿತ ಶಾಲಿಹೋತ್ರಮ್
ಚರಲಾವಣ್ಯಸ್ಪದಗಾತ್ರಮ್
ಕಲ್ಯಾಣಮಯ ದಿವ್ಯನೇತ್ರಮ್
ಸುಗ್ರೀವ ಜಾಂಬವದಾದಿ ವರಪರಿಸೇವಿತಮ್
ಸಮದಾವರಣ ಜೈತ್ರಮ್ ॥೧॥

ವೀಕ್ಷಾರಣ್ಯಶಯಾನಮ್–ಸಮಾ
ವೃಳೀದಹರಿನಾಮಾನಮ್
ಸಂರಕ್ಷಿತ ಮುನಿಸಂತಾನಮ್
ಸಾರತರ ಕರುಣಾಮೃತನಿದಾನಮ್
ಶುಭಲಕ್ಷಣಲಕ್ಷಿತಮಕ್ಷಯಘನ
ಶರಶಿಕ್ಷಿತಾಮರವಿಪಕ್ಷವಿತಾನಮ್ ॥೨॥

ಗೋಪಾಯಿತ ದೇವೇಶಂ–ಶ್ರೀ
ಕೋಸಲನಗರ ನಿವೇಶಿತಮ್
ಇಂದ್ರೋಪಲಸಂಕಾಶಮ್
ಕೃತದುರ್ಮದಕಬಂಧನಾಶಮ್
ಹೃತ್ತಾಪನಾಶ ಸಮೀಪ ಗತಮ್
ಜಿತಕೋಪಮಮಿತ ಭೂಷಾಭಮಹೀಪಮ್ ॥೩॥

--✿✿✿✿✿--

೪೧೭

ಶ್ರೀ ರಘುಕುಲವರ ಶುಭಕರ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಶ್ರೀರಘುಕುಲವರ ಶುಭಕರ
ಸೀತಾರಾಮಮಾಂ ಪಾಹಿ ||ಪ||

ಸಾರಸದಳನೇತ್ರ ಜಗನ್ನುತಜಲಧರನಿಭಗಾತ್ರ
ಭವಸಂಸಾರ ಕಲುಷಭಂಜನ ಸು-
ಚರಿತ್ರ ಜನಕಜಾಸ್ಯ ಪಂಕೇರುಹಮಿತ್ರ ||೧||

ನವರಸಾಲಪಲ್ಲವ ಮೃದುಪದಯುಗಳ
ನಖರುಚಿಜಿತತಾರಕ
ಭುವನಮೋಹನ ವಿಶ್ರುತಶಂಖಗಳ ||೨||

ಶಿವಸನ್ನುತನಾಮ ಸದ್ಗುಣಶೀಲ ಪೂರ್ಣಕಾಮ-
ನತಕೈರವಸಮೂಹರಂಜನ
ಹಿಮಧಾಮ ರಣಮಹೋಗ್ರರಾಕ್ಷಸಕುಲಭೀಮ ||೩||

ವಿಮಲಕುಂದ ಕುಡ್ಮಲ ಸುಂದರರದನ
ರಥಗಜಾದಿ ಭೃತನ
ಸಂಗರಾಂಗಣ ಜಿತದಶವದನ ||೪||

ಕುಮುದಾರಿಪ್ರತಾಪ ಮೋಹನಗೋಪಬಾಲ ರೂಪ
ಮದಗಜಗಮನಸಾಂದ್ರ
ಸತ್ಕರುಣಾಲಾಪಕಲಿತಶ್ರೀರಾಮಚಂದ್ರಭೂಪಜಿತಕಪೋಲ ||೫||

ಶ್ರಿತಜನಮಂದಾರ ಯೋಗಿಜನಚಿತ್ತ ಸಂಚಾರ
ನತಸುಮಹಿತವಿಶೇಷ
ಭೂಪಾಲಂಕಾರ ಇನಸುತಾದಿ ಪರಿಸೈನ್ಯ ವಿಹಾರ ||೬||

ಅತಿವಿಶಾಲ ಕೋಸಲನಗರ ನಿವಾಸ
ಮಣಿಕುಂಡಲನೀರಾ
ಜಿತಕಪೋಲತಲ ಚಂಪಕಸುಮನಾಸ ॥೭॥

--✿✿✿✿✿--

೪೧೮
ರಾಮ ಪಾಲಯ ಮಾಂ – ಹರೇ ಸೀತಾ
(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. – ೧೮ ಶ.)

ರಾಮ ಪಾಲಯಮಾಂ–ಹರೇ ಸೀತಾ–
ರಾಮಪಾಲಯ ಮಾಮ್
ರಾಮ ರವಿಕುಲಸೋಮ ಜಗದಭಿ
ರಾಮ ನೀರದಶ್ಯಾಮ ದಶರಥ–
ರಾಮ ಪಾಲಯಮಾಮ್ ॥ಪ॥

ಸಾರದಯಾದಾನ ವಿಚಕ್ಷಣ–ಸಕಲ
ಸಾಧುಜನಾವನ ನಿರೀಕ್ಷಣ
ಸುರವರ ಶುಭಕರ ಲಕ್ಷಣ–ದಶ
ವದನಬಾಹುಗರ್ವಶಿಕ್ಷಣ–ಹರೇ
ದೀನಜನಮಂದಾರ ದುರಿತವಿದಾರ
ವರಕರುಣಾಲಯ ಶ್ರೀ ರಘು ॥೧॥

ಭಂಡನಿರ್ಜಿತ ಖರದೂಷಣ–ಪರಿ
ಪಾಲಿತ ವಿನುತವಿಭೀಷಣ–ಆ
ಖಂಡಲಾರ್ಪಿತ ದಿವ್ಯ–ಭೂಷಣ–ದಂಡ–
ಕಾವನಮುನಿ ಭಜನ–ಪೋಷಣ–ಹರೇ
ದಂಡಧರಮಖಂಡನುತಕೋದಂಡ
ಧರದೋರ್ದಂಡ ವಿಕ್ರಮ ॥೨॥

ಅನುಪಮ ಮುನಿಜನ ಸತ್ಯಭೂಷಣ-ಮಾಯಾ
ತನುಜಾರಿ ಮಾರೀಚಭೀಷಣ-ಘೋರ
ವನನಿಧಿ ಘನ ಮದಶೋಷಣ-ಶ್ರೀಮೋ
ಹನರಂಗ ಹರಿಭಜನತೋಷಣ-ಹರೇ
ಇನತನು ಪುರವರ ನಿತ್ಯವೈಭವ
ಜನಿತ ಕೋಸಲ ವಿನುತಶರಬಲ ॥೩॥

--✿✿✿✿✿--

೪೯೯
ಕೋಸಲೇಂದ್ರ ಮಾಮವ ಅಮಿತ
(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಕೋಸಲೇದ್ರ ಮಾಮವ ಅಮಿತ
ಗುಣನಿವಾಸಭಗವನ್
ಭಾಸಮಾನ ಮಹಾಮಣಿಮಂಟಪ
ಪರಿವಿಲಸಿತ ಸಂಹಾಸನವಿರಾಜಿತ
ನೀ ಸರಿ ಸರಿ ಮಾ ರಿ ಮ ಪಾ ನಿ ಪ ಮಾ-
ಪಾ ಸ ಸ ನಿ ಸ ನಿ ಮ ಪ ನಿಪ್ಪಾ ಮ್ಮ ರಿ ಮಾ ರಿ ಸ
ನೀ ರ ಜ ಸ ರ ಮಾ ಸ ಮ ಪಾವನಮಾ
ಪರಿಲಸಿತ ಕೃಪಾ ನಿಪ್ಪ್ಯಾ ಮಧುರಸ ॥ಪ॥

ಬಾಹುಧೃತ ಶರಚಾಪ ಧೃತ
ಭಕ್ತಜನಾಖಿಲತಾಪ
ಅಗ್ರ ವಾಹನ ವಿಮಲರೂಪ
ಹಾರಮಕುಟಕೇಯೂರಕಲಾಪ ॥೧॥

ಜಾನಕೀಲಸಿತಾಂಗ ಜಲ
ಜಾಸ್ಯವಿಲಸಿತಲಂಕ
ಭಾನುವಂಶ ಪಯೋಧಿಶಶಾಂಕ
ಪಾದವಿಹಿತ ಮುನಿತರುಣೀಪಂಕ ॥೨॥

ನೀಲಜಲಧರಗಾತ್ರ ನುತ
ನೀಲನಲಾರಣಪುತ್ರ
ಫಾಲಲೋಚನಮುಖನುತಿಪಾತ್ರ
ಪವನಸುತ ಕಲಿತ ಚಾರುನೇತ್ರ ॥೩॥

--✿✿✿✿✿--

೪೨೦
ಕಲಯಾಮಿ ದಶರಥ ಕುಮಾರಂ
(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಕಲಯಾಮಿ ದಶರಥ ಕುಮಾರಂ ಸಜಲ
ಜಲದ ರೂಪಮತಿಶಯ ಶುಭಕರಂ ॥ಪ॥

ರಮಣಿಯ ಸುಗುಣಾಲವಾಲಂ ಸುಮು-
ಧ್ಯಮ ಭಾಗಲ ಸಮಾನತಪನೀಯ ಚೇಲಮ್
ಸಮರನಿರ್ಜಿತ ವೈರಿಜಾಲಂ-ಸತತ
ಕಮಲಾಸನಾಶ್ಚರ್ಯ- ಕರ ಭವ್ಯಲೀಲಮ್ ॥೧॥

ಜನಕರಾಜ ಸುತಾಕಳತ್ರಂ-ಶ್ವೇತ
ವನರುಹ ಪಲಾಶ ಸಂವಾದಿವರ ನೇತ್ರಮ್
ಘನಕಲುಷವಲ್ಲೀಲ ವಿಚಿತ್ರಂ - ಸಕಲ
ಮುನಿಜನಾಮರನಿಕರ ವಿನುತಚಾರಿತ್ರಮ್ ॥೨॥

ಪರಮಬೋಧಾನಂದರೂಪಂ-ದಿವ್ಯ
ಕರಿಯುಗಳ ವಿಧೃತ ಭಾಸುರ ಬಾಣಚಾಪಮ್
ವರಕೋಸಲಪುರೀಮಹೀಪಂ-ನಿತ್ಯ
ಪರಿಜನೀಕೃತ ವೀರವರಕಲಾಪಮ್ ॥೩॥

--✿✿✿✿✿--

೪೨೧

ಪಾಹಿ ಮಾಂ ಶ್ರೀ ರಘುನಾಯಕ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಪಾಹಿಮಾಂ ಶ್ರೀ ರಘುನಾಯಕ, ಭದ್ರದಾಯಕ
ಭಾಸುರಕೋದಂಡನಾಯಕ
ವಾಹಿನೀಶಮದವಿದಾರಕ ನಿರಯತಾರಕ
ಪಾಲಿತಸೂರ್ಯಕುಮಾರಕ ಕಾಲಸಂಹಾರಕ ॥ಪ॥

ಮುನಿಜನಕ್ಲೇಶಭಂಜನ-ಲೋಕರಂಜನ
ದನುಜಮೇಘಪ್ರಭಂಜನ
ದಿನಕರಕುಲಭೂಷಣ-ದೀನಪೋಷಣ
ವಿನಿಹತಖರದೂಷಣ ಮಂಜುಭಾಷಣ ॥೧॥

ದ್ಯುತಿಜಿತಯೂಥ ವಿರೋಚನ-ಜಲಜಲೋಚನ
ಶ್ರಿತಜನಾಘವಿಮೋಚನ
ಕೃತಕಾಕಾಸುರದಂಡನ-ರುಚಿರಮಂಡನ
ಖೇಚರಸನ್ನುತಭಂಡನವೈರಿಖಂಡನ ॥೨॥

ಧರಣಿತನಯಾರಮಣ-ವಾಲಿದಮನ
ದಾನವೇತಂಡಗಮನ
ಗುರುಲಾವಣ್ಯ ಜಿತಮದನ- ಕುಂದರದನ
ಕೋಸಲನಗರಸದನ ಚಂದ್ರವದನ ॥೩॥

--✿✿✿✿✿--

೪೨೨

ಸಾರಸದಳ ನಯನ ಮಾಮವ ಕ್ಷೀರಜಲಧಿಶಯನ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. - ೧೮ ಶ.)

ಸಾರಸದಳನಯನ ಮಾಮವ ಕ್ಷೀರ ಜಲಧಿಶಯನ
ಮಾರಜನಕವಂದಾರುನಿಕರ ಬ್ರಹ್ಮಬೃಂದಾರಕೇಂದ್ರನುತ ॥ಪ॥

ಅಂಡಜಪತಿ ಕೇತೋ ಶಮದಮ
ಮಂಡನ ಜೀವನ
ಚಂಡಕಿರಣ ಕುಲಮಂಡಲ ಮುನೀಶ್ವರ
ಮಂಡಲ ಮಂಡಿತಕುಂಡಲೀಂದ್ರಶಯನ ॥೧॥

ದಶರಥವರ ಬಾಲರಾಘವ
ದಶಮುಖಕುಲಕಾಲ
ಕುಶಿಕತನಯರಿಪು ನಿಶಿಚರಕುಹರ
ಶಶಿರವಿನಯನ ಶ್ರೀ ಪಶುಪತಿಹಿತಕರ ॥೨॥

ಕರಧೃತಕೋದಂಡ ಕೋಸಲ
ಪುರ ವೈಕುಂಠ
ಘೋರಭವಜಲಧಿಕಾರಕ ನಿಜಪದ
ಸಾರಸಚಿನ್ಮಯ ಶ್ರೀ ರಘುವರ ಶುಭ ॥೩॥

--✿✿✿✿✿--

೪೨೩
ಶ್ರೀವರ ಸೀತಾಧವ ಪಾವನರಾಘವಾ

(ಕೋಸಲಪುರೀಶ / ಮಾರ್ಗದರ್ಶಿ ಶೇಷಯ್ಯಂಗಾರ್ / ೧೭ ಶ. – ೧೮ ಶ.)

ಶ್ರೀವರ ಸೀತಾಧವ ಪಾವನರಾಘವಾ ॥ಪ॥

ಭಾವಜಾತಾಪಿತಾ ಸಾವಕಾಶವೇಕೈ
ಕಾವರನ್ಯರ ಕಾಣೆ ರಾವಣವೈರಿಯೇ ॥ಅ.ಪ.॥

ಜನನಿಜನಕ ನೀನೆ ತನುಮನಧನ ನೀನೇ
ಮುನಿವಂದಿತ ನೀನೇ ಚಿನುಮಯರೂಪನೀನೇ
ಘನಸುಖದಾತನೀನೇ ಯೆನಗೆ ದೈವವುನೀನೇ ॥೧॥

ದೀನಪಾಲನೇ ನಿನ್ನಧೀನ ಸರ್ವಸ್ವವು
ಭಾನುತೇಜಾ ನಿನ್ನಧ್ಯಾನವ ಗೈವೆನೈ
ಶ್ರೀನರಹರಿಪೊರೆ ಸಾನುರಾಗದೊಳೆನ್ನಂ ॥೨॥

ತರಳತನದೆನಿನ್ನಸ್ಮರಿಸದೆ ಈಪರಿ
ದುರುಳನಾನಾದೆನೊ ಪರಿಪರಿವಿಧದೊಳು
ದುರಿತಕೋಟಿಯಗೈದೆಂ ಮರೆಯದೆಪೊರೆದೊರೆ ॥೩॥

ಯೆನ್ನಯೌವನದೊಳು ನಿನ್ನಪೂಜಿಸದಲೆ
ಅನ್ಯಕನ್ನೆಯರೊಳು ಮುನ್ನಮೆ ಬೆರೆಯುತೆ
ಜನ್ಮವ ವ್ಯರ್ಥಗೈದೆಂ ಮನ್ನಿಸಿಪಾಲಿಸೈ ॥೪॥

ಭುಜಗಶಯನಾಹರಿ ಸುಜನಪಾಲಕಶೌರೀ
ಅಜನುತಶಂಕರಾದಿ ವಿಜಪಾಲಕವರಾ
ಭಜಕಫಲದಾಯಕಾ ಗಜವರದಾಯಕ ॥೫॥

--✿✿✿✿✿--

೪೨೪
ಊಂಜಲಾಡಿದ ರಾಮಚಂದ್ರ
(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಊಂಜಲಾಡಿದ ರಾಮಚಂದ್ರ ವರ
ಮಂಜುಳಗಾತ್ರ ಸಾನಂದ ॥ಪ॥

ಕುಂಜಲವರದ ಭೋಗೇಂದ್ರ ನವ
ಪಂಕಜನೇತ್ರ ಜಾನಕೀಂದ್ರಾ ॥ಅ.ಪ.॥

ಅಂಗನಾಮಣಿಯರು ಕೂಡಿ ಬಹು
ಮಂಗಳಗಾನವ ಹಾಡೀ
ಅಂಗಜಮಾತೆಯ ಕೂಡಿ ಸಿರಿ
ರಂಗನಾಥನ ನಲಿದಾಡೀ ॥೧॥

ಅಂಕದೆ ರಮೆಯ ಕುಳ್ಳಿರಿಸಿ ವರ
ಪಂಕಜಹಾರವ ರಚಿಸೀ
ಶಂಕರಪ್ರಿಯಕಂಠಕಿರಿಸಿ ಬಹು
ಕುಂಕುಮಗಂಧವ ಸೂಸೀ ॥೨॥

ಗರುಡಗಂಧರ್ವರ ಗಾನ ವರ
ಸುರ ಕನ್ಯಾ ನಾಟ್ಯಾನ್ಯೂನಾ
ಸರಸೋಲ್ಲಾಸದ ಪಾನ ಮಾಂ
ಗಿರಿಪತಿ ಮೆರೆವ ವಿಮಾನಾ ॥೩॥

--✿✿✿✿✿--

೪೨೫
ಸೀತಾಮನೋಹರ ಪಾತಕಹರಣ

(ಮಾಂಗಿರಿರಂಗ / ಆಸೂರಿ ರಾಮಸ್ವಾಮಿ ಅಯ್ಯಂಗಾರ್ / ೧೮೮೯ - ೧೯೮೪)

ಸೀತಾಮನೋಹರ ಪಾತಕಹರಣ ಪ್ರೀತಿಯಿಂದಲಿತಾನು ॥ಪ॥

ಖ್ಯಾತಚರಿತೆಯಾ ಸೀತೆಯೊಡನೆ ಬೇಗ
ಕೇತಕೀಪೂಚಂಡನಾಡುತ ನೆನೆಯುತ ॥ಅ.ಪ.॥

ಸಂಪನ್ನ ಹರಿತಾನು ಗುಂಪಾಗಿ ಕಟ್ಟಿದ ಸಂಪಿಗೆ ಚೆಂಡನು
ತಂಪಾದ ಗಂಧದೊಳಿಂಪಾಗಲದ್ಭುತ ಸಂಪನ್ನೆ ಸೀತೆಯೊಳು
ಸಂಪ್ರೀತಿಯಿಂದಲಿ ಕಂಪಿನಿಂದಲಿ
ಝಂಪಿಸುತ್ತಿಹ ಕೆಂಪುದಾವರೆ ಗುಂಪಿನಂದಲಿ
ಸೊಂಪುಗೂಡುತ ದಂಪತಿಗಳು ಇಂಪಿನಿಂದ ಚೆಂಡಾಟವಾಡಿದರು ॥೧॥

ಕರುಣಿಪೂರಿತೆಯಾದ ಸಿರಿಯೊಡನಾಹರಿ ಸರಸವನಾಡುತಲಿ
ಇರುವಂತಿ ಮಲ್ಲಿಗೆ ಸುರಹೊನ್ನೆ ಸೇವಂತಿ ವರಗಳಿಂಸಮೆದಿಹ
ಕುರವಕಪೂಚಂಡ ಸರಸಿಜಾಕ್ಷಿಯ ಕರಗಳಿಂದಲಿ
ಪರಿಮಳದ ಪೂಚಂಡತಾನು ಧರಿಸುತಾಕ್ಷಣ
ಸರಸದಿಂದಲಿ ಹರಿಯು ತಾನಾಸಿರಿಗೆ ಬೀರಿದ ॥೨॥

--✿✿✿✿✿--

೪೨೬

ಮರೆಯದೆ ಇರುವಂತೆ ಮಾಡೊ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಮರೆಯದೆ ಇರುವಂತೆ ಮಾಡೊ ರಾಮನೆ ನಿನ್ನ ॥ ॥ಪ॥

ದಶರಥನ- ಮಗನಾಗಿ । ಋಷಿಯ ಯ-ಜ್ಞವ ಕಾಯ್ದು ।
ಪಶುಪತಿಧನುವನು ಮುರಿದು ಸೀತೆಯನು ।
ವಶವ ಮಾಡಿಕೊಂಡಾ ವೈಭವವನು ॥ ॥೧॥

ಜನಕನ-ನುಡಿಯಂತೆ । ವನವಾಸ-ದಲಿನಿಂತು ।
ಜನಕಸುತೆಯ ಬಯಕೆಯ ತೀರಿಸಲಾ ।
ಕನಕಮೃಗವ ಸಂಹಾರವಗೈದುದ ॥ ॥೨॥

ಸೀತೆಯ-ಹುಡುಕುತ್ತ । ಪ್ರೀತಿಯಿಂ- ಗೃಧ್ರನಿಗೆ ।
ಪ್ರೇತಕರ್ಮವನು ಮಾಡಿ ವಾನರ ।
ವ್ರಾತದ ಸೇನೆಯ ಕೂಡಿದುದ ॥ ॥೩॥

ಜಲಧಿಗೆ- ಸೇತುವನು । ನಳನಿಂದ-ಕಟ್ಟಿಸಿ ।
ಛಲದಿಂ ರಾವಣ ಕುಂಭಕರ್ಣರ ।
ಸುಲಭವಾಗಿ ಸಂಹಾರ ಮಾಡಿದುದ ॥ ॥೪॥

ಶರಣರಿ-ಗಭಯದ । ವರವಿತ್ತು-ಸಾಕೇತ ।
ಪುರದ ಸಿಂಹಾಸನದೊಳು ಮಂಡಿಸುವ ।
ಧರಣಿಯ ಪೊರೆದಾ ಚಿದ್ವಿಲಾಸವನು ॥ ॥೫॥

--✿✿✿✿✿--

೪೨೭

ಎಷ್ಟು ದಯಾಳುವೊ ನೀನು

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಎಷ್ಟು ದಯಾಳುವೊ । ನೀನು ರಘೂತ್ತಮ ।
ಎಷ್ಟು ದಯಾಳುವೊ ನೀಂ ॥ ॥ಪ॥

ಶಿಲೆಯಾದವಳ । ಕುಲಜೆಯ ಮಾಡಿದೆ ।
ಜಲಜಸದೃಶ ಪದ । ತಲದ ಸೋಂಕಿನಿಂ ॥ ॥೧॥

ಭಕ್ತಿಯಿಂದಲಿ । ಬಂದ ಶಬರಿಗೆ ।
ಮುಕ್ತಿಯನಿತ್ತೈ । ಭಕ್ತಳೆನುತ್ತಲಿ ॥ ॥೨॥

ಶರಣೆಂದ ವಿಭೀ । ಷಣ ನರರನು ।
ದೊರೆಗಳ ಮಾಡಿದೆ । ಧಾರಿಣಿಗೆಲ್ಲಾ ॥ ॥೩॥

ಧರಣಿಯಭಾರವ । ಪರಿಹರಿಸುತಲಿ ।
ಶರಣಪೊರೆದೈ । ಪರಮಾದರದಿ ॥ ॥೪॥

ಪ್ರೀತಿಮಾಡುವ । ಹೃದಯದೊಳಗೆ ಚಿ ।
ಜ್ಜ್ಯೋತಿಯ ಹಚ್ಚಿದೆ ಪ್ರೀತಿಯಿಂದಲಿ ॥ ॥೫॥

--✿✿✿✿✿--

೪೨೮

ದಾಶರಥೇ ದಯೆ ತೋರಿಸು

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ದಾಶರಥೇ ದಯ । ತೋರಿಸು ನೀಂ ಭವ ।
ದೋಷದಿಂ ಸಂಕಟ । ಪಡುತಿಹೆ ನಾನು ॥ ॥ಪ॥

ನಾವಿಕನಾಪರಿ । ಯಾಚಿಸೆಪದಗಳ ।
ತೀವ್ರದಿ ತೋರಿದ । ಪಾವನಚರಿತ ॥ ॥೧॥

ಕಾಕಾಸುರನಾಗ । ಶೋಕಿಸೆ ಕೊಲ್ಲದೆ ।
ಜೋಕೆಯಿಂದುಳುಹಿದ । ನಾಕೇಶನುತ ॥ ॥೨॥

ಶರಣೆಂದು ಬಂದರೆ । ಚಿನ್ಮಯ ರೂಪವ ।
ನೆರೆತೋರುವ ಭೂ । ವರ ರಘುರಾಮ ॥ ॥೩॥

--✿✿✿✿✿--

೪೨೯
ಚರಣಯುಗವ ತೋರು ನನಗೆ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಚರಣಯುಗವ ತೋರು ನನಗೆ ।
ತರಣಿ-ವಂಶಜಾ ॥ ॥ಪ॥

ಶಿಲೆಯ ಮೆಟ್ಟಿದಾಕ್ಷಣವೆ ।
ಲಲನೆಯ ಮಾಡುತ್ತಲಾಗ ।
ನಲವಿನಿಂದ ಶಾಪವನ್ನು । ತೊಲಗಿ-ಸಿದಂಥ ॥ ॥೧॥

ನಾವೆಯ ಮೇಲೇರುವಾಗ ।
ನಾವಿಕನಿಂ ತೊಳಸಿಕೊಂಡು ।
ಭಾವಶುದ್ಧಿನೋಡುತವನ । ಕಾಪಾ-ಡಿದಂಥ ॥ ॥೨॥

ವನದೊಳಿರುವ ದೊಡ್ಡ ದೊಡ್ಡ ।
ಮುನಿಗಳಿಂದ ಸೇವೆಗೊಂಡು ।
ವನವನೆಲ್ಲ ಕ್ಷೇತ್ರವಾಗಿ । ಮಾಡಿ-ರುವಂಥ ॥ ॥೩॥

ಅನುಪಮ ಸಿಂಹಾಸನದೊಳು ।
ಮನುಜವೇಷದಿಂದ ಕುಳಿತು ।
ಹನುಮನ ಕರಸಂಪುಟದಲಿ । ನೆಟ್ಟಿ-ರುವಂಥ ॥ ॥೪॥

ಬಗೆಬಗೆಯವತಾರದಿಂದ ।
ಜಗದೊಳೆಲ್ಲ ಸಂಚರಿಸುವ ॥
ನಿಗಮವೇದ್ಯ ಚಿತ್ಸ್ವರೂಪ । ವಾಗಿ-ರುವಂಥ ॥ ॥೫॥

--✿✿✿✿✿--

೪೩೦
ದಾಶರಥೇ ರಾಮಚಂದ್ರ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ದಾಶರಥೇ ರಾಮಚಂದ್ರ ।
ವಾಸವಾದಿ ವಿನುತ ನೀಂ ಪೊರೆ ॥ ॥ಪ॥

ದನುಜರನು ಸಂಹರಿಸಿ ।
ಮುನಿಜನಗಳ ಸಂರಕ್ಷಿಸಿ ।
ವನಜನಾಭಮುಖ್ಯರಿಂದ (ಲೀ) ।
ಅನುದಿನವುಂ ಸ್ತುತಿಯನು ಪಡೆಯುತಲಿರುತಿಹ ॥ ॥೧॥

ಕೆಲವು ವರ್ಷದಲ್ಲಿಯೇ ನೀ ।
ಒಲಿದು ತಿರುಗಿದೈ ಅಯೋಧ್ಯೆಗೆ ।
ಹಲವು ಕಾಲವಾಯಿತೆನ್ನ (ನೀ) ।
ನುಳಿದಿರ್ಪರೆ ಸುಲಲಿತಾಂಗ ದುಃಖಭಂಗ ॥ ॥೨॥

ಎನ್ನ ಕಾಮಕ್ರೋಧವರ್ಗ ।
ವನ್ನು ದನುಜರೆಂದು ತಿಳಿದು ।
ಇನ್ನವುಗಳ ನೋಡಿಸುತ್ತ (ಲೀ) ।
ಎನ್ನನು ಪೊರೆ ಚಿನ್ಮಯಾಂಗ ಕೃಪಾಪಾಂಗ ॥ ॥೩॥

--✿✿✿✿✿--

೪೩೧

ಕಾಯೈ ಕರುಣಾಕರ ಶ್ರೀರಾಮಚಂದ್ರ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಕಾಯೈ ಕರುಣಾಕರ । ಶ್ರೀರಾಮಚಂದ್ರ ॥ ॥ಪ॥

ನಿನ್ನವನೆಂದೆನಿಸಿ । ವಿಭೀಷಣ ।
ನನ್ನು ಪೊರೆದೆಯಲ್ಲವೆ ।
ಇನ್ನುನಾನದಕರ್ಹನಲ್ಲದೊ ।
ಡೆನ್ನ ರಾವಣನನ್ನೆಗೈದೊಡ ।
ಮಿನ್ನು ಬರ್ಪಾಮರಣ ಸಮಯದೊ ।
ಳೆನ್ನ ಮುಂಗಡೆಯಗಲದಿರು ನೀಂ ॥ ॥೧॥

ಇಳೆಯೊಳರಿಯರೆಲ್ಲರು । ಸುಗ್ರೀವನ ।
ಗೆಳೆಯನಾಗಿಹೆಯಲ್ಲವೆ ॥
ಗೆಳೆಯನಲ್ಲದೆ ನಿನಗೆ ವಾಲಿಯ ।
ಗೆಳೆಯನಾದೊಡದೇನು ಸಾವಿನ
ತಳಮಳದ ಹೊತ್ತಿನೊಳಗೆನ್ನಯ ।
ಬಳಿಯ ಬಿಟ್ಟೆನ್ನಗಲದಿವ ನೀಂ ॥ ॥೨॥

ಮುನಿಜನಗಳೊಳೆನ್ನನು । ಸೇರಿಸಿ ನಿನ್ನ ।
ಘನಚರಣ ತೋರಿಸೊ ॥
ಮುನಿತನವು ಸಲ್ಲದೊಡೆ ಮರುಕದಿ ।
ಕನಕಮೃಗ ಮೊದಲಾಗಿ ಮಾಡುತ ।
ಕೊನೆಯ ಕಾಲದಿ ತಪ್ಪದೆನ್ನೀ ।
ಮನದೊಳಿರು ಚಿದ್ರೂಪಿನಿಂದಲಿ ॥ ॥೩॥

--✿✿✿✿✿--

೪೩೨
ಇದು ನಿನಗುಚಿತವೆ ?

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)

ಇದು ನಿನಗುಚಿತವೆ । ಎನ್ನ ಕಾಡಿಸುವುದು ।
ಸದಯನೆ ರಾಮಚಂದ್ರ ॥ ॥ಪ॥

ಇದು ನಿನಗುಚಿತವೆ । ದೀನತೆಯನು ನೋಡಿ ।
ಪದವ ತೋರಿಸುತ । ಆದರಿಸದಿಹುದು ॥ ॥ಅ.ಪ.॥

ಪಾಪಿಯೆಂದೆನ್ನಯ ಪಾಪವನೆಣಿಸುತ ।
ಕೋಪ ತೋರುವೆಯ । ಪಾಪಿನಾನಾದರೆ ।
ಶ್ರೀಪತಿಯೆ ನೀನು । ಪಾಪಾಹಾರಕನಲ್ಲವೆ ।
ಕೃಪೆಮಾಡದಿರುವೆ ॥ ॥೧॥

ಶರಣೆಂದ ಮಾತ್ರದಿ । ನಿನ್ನಯ ಕೋಪವು ।
ಇರದೆಂದು ಹೇಳುವರು ॥ ಶರಣು ಶರಣುಭವ ।
ಹರಣ ಸಮರ್ಥನೆ । ಅರಿವಿತ್ತು ಪೊರೆಯಯ್ಯ ।
ಶರಣಯ್ಯ ಜೀಯ ॥ ॥೨॥

ಅರಿಗಳೆಂದೆನ್ನದೆ । ದುರುಳರೆಂದೆನ್ನದೆ ।
ಕರುಣದೋರುವನೆಂಬರು । ಪರಮಾದರದಿ ನಿನ್ನ ।
ಚರಣವ ಹಿಡಿದೀಗ । ಪೊರೆಯೆಂದು ।
ಸೆರಗೊಡ್ಡುವೆ ಚಿನ್ಮಯನೆ ಬೇಡುವೆ ॥ ॥೩॥

--✿✿✿✿✿--

೪೩೩

ಇದಕೆ ಸಂಶಯವಿಲ್ಲ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಇದಕೆ ಸಂಶಯವಿಲ್ಲ । ಶ್ರೀರಾಮಚಂದ್ರನ ।
ಪದವ ಕಂಡವರೆಲ್ಲ । ನಿಜವಾಗಿ । ಧನ್ಯರೋ ಧಾರಿಣಿಯೊಳು ॥ ॥ಪ॥

ಪರಮಾತ್ಮನನು ತನ್ನ ಪರಿಶುದ್ಧ ಕುಲದಲ್ಲಿ ।
ಬರಿಸಿಕೊಂಡವನೀಗ । ನಿಜವಾಗಿ । ಧನ್ಯನೊ ಸೂರ್ಯನು ॥ ॥೧॥

ಹರಿಯನು ತನ್ನಯ । ಶರೀರದೊಳಗೆ ತುಂಬಿ ।
ಧರಸಿಕೊಂಡವಳೀಗ । ನಿಜವಾಗಿ । ಧನ್ಯಳೋ ಆ ಕೌಸಲ್ಯೆ ॥ ॥೨॥

ಮಗನೆಂದು ರಾಮನ । ಬಗೆಬಗೆಯಿಂದಲಿ ।
ಬಿಗಿದಪ್ಪಿಕೊಂಡವ । ನಿಜವಾಗಿ ಧನ್ಯನೊ ಆ ದಶರಥ ॥ ॥೩॥

ಮಂತ್ರಾಧಿದೇವನ । ತಂತ್ರವನರಿಯುತ ।
ಮಂತ್ರವನಿತ್ತವ । ನಿಜವಾಗಿ ಧನ್ಯನೊ । ಆ ಕೌಶಿಕ ॥ ॥೪॥

ಜಲಜಸದೃಶಪಾದ । ತಲವನಿಡುವ ಕಡೆ ।
ಶಿಲೆಯಾಗಿದ್ದಾಕೆಯೆ । ನಿಜವಾಗಿ । ಧನ್ಯಳೊ ಆ ಅಹಲ್ಯೆ ॥ ॥೫॥

ಹರಚಾಪವನು ಬೇಗ । ಮುರಿದಾಶೂರನ ।
ಕರವ ಹಿಡಿದವಳೆ । ನಿಜವಾಗಿ । ಧನ್ಯಳೊ ಸೀತಾದೇವಿ ॥ ॥೬॥

ನದಿಯ ದಾಟಿಪೆನೆಂಬ । ನೆವದಿಂದ ಆ ಮುದ್ದು ॥
ಪದವ ತೊಳೆದವನೆ । ನಿಜವಾಗಿ ಧನ್ಯನೊ ಆ ಗುಹಕನು ॥ ॥೭॥

ಪೂತಾತ್ಮನಿಂದಲೆ ಪ್ರೇತಕರ್ಮವ ಪಡೆ ।
ದಾತನೆ ಭಕ್ತರೊಳು ನಿಜವಾಗಿ । ಧನ್ಯನೊ ಜಟಾಯುವು ॥ ॥೮॥

ತಿಂದುನೋಡಿದ ಹಣ್ಣ । ತಂದು ಸ್ವಾಮಿಗೆ ಕೊಟ್ಟ ॥
ಮಂದಗಮನೆಯೆ ತಾ । ನಿಜವಾಗಿ । ಧನ್ಯಳೊ ಆ ಶಬರಿ ॥ ॥೯॥

ಇಳೆಯ ಸೃಷ್ಟಿಸ್ಥಿತಿಗಳ । ಕರ್ತನನು ತನ್ನ ।
ಗೆಳೆಯನಗೈದವ । ನಿಜವಾಗಿ ಧನ್ಯನೊ ಆ ಸುಗ್ರೀವ ॥ ॥೧೦॥

ಹಿರಿಯನ ತೊರೆಯುತ । ಹಿರಿಯರ ಹಿರಿಯಗೆ ।
ಶರಣೆಂದು ಬಂದವ । ನಿಜವಾಗಿ ಧನ್ಯನೊ ವಿಭೀಷಣ ॥ ॥೧೧॥

ಭಾವಭಕ್ತಿಯೊಳೊಂದು । ಝಾವವೂ ಅಗಲದೆ ।
ಸೇವೆಯಗೈದವ । ನಿಜವಾಗಿ ಧನ್ಯನೊ ಆ ಲಕ್ಶ್ಮಣ ॥ ॥೧೨॥

ಪುಂಡರಬಡಿದು ಭೂ । ಮಂಡಲಮಾತೆಯ ।
ಕಂಡುಬಂದಾತನೆ । ನಿಜವಾಗಿ ಧನ್ಯನೊ ಶ್ರೀ ಹನುಮಂತ ॥೧೩॥

ಹಿರಿಯನ ಪಾದುಕೆ । ಗಳ ಸಿಂಹಾಸನದಲ್ಲಿ ।
ಇರಿಸಿ ಆಳಿದವನೆ । ನಿಜವಾದಿ ಧನ್ಯನೊ ಆ ಭರತನು ॥ ॥೧೪॥

ಗುರುಗಳಿಗೆಲ್ಲಾ । ಗುರುವಾದವನಿಗೆ ।
ಗುರುವಾದಾತನೆ । ನಿಜವಾಗಿ । ಧನ್ಯನೊ ವಸಿಷ್ಠನು ॥ ॥೧೫॥

ಹರಿಯು ಹೂಡಿದ ಮಹ । ತ್ತರವಾದ ಬಾಣದ ।
ಗುರಿಗೆ ಸಿಕ್ಕಿದವರೆ । ನಿಜವಾಗಿ ಧನ್ಯರೊ ಆ ಅಸುರರು ॥ ॥೧೬॥

ಪರಮಾದರದಿಂದ ಪರಮ ಚಿದ್ರೂಪನ ಸ್ಮರಣೆಯ ಗೈ ।
ವರೆ । ನಿಜವಾಗಿ । ಧನ್ಯರೊ ಮಹಾತ್ಮರು ॥ ॥೧೭॥

--✿✿✿✿✿--

೪೩೪

ರಾಮ ಬಾರೋ ರಘುನಂದನ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ರಾಮ ಬಾರೊ ರಘುನಂದನ ।
ರಾಮ ಬಾ ರಾಜೀವಲೋಚನ ॥ ॥ಪ॥

ರವಿವಂಶದ–ಲ್ಲಿ ಅವತಾರಮಾ–ಡಿದ ।
ಕುವಲಯದಳನೇತ್ರನೆ ॥ ॥೧॥

ಕಿರುನಗೆಗೂ–ಡಿದ । ಕರುಣಾಕಟಾ–ಕ್ಷದಿ ।
ಶರಣರ ಪೊರೆಯುವನೆ ॥ ॥೨॥

ನವನೀಲಮೇ–ಘದ । ಛವಿಯಂತೆ ತೋ–ರುವ ।
ರವಿಶತಸಮತೇಜನೆ ॥ ॥೩॥

ಎಳೆ ತುಳಸಿಯ– ಮಾಲೆ । ನಲದಾಡೆ ಕಂಠ–ದಿ ।
ಬೆಳಗುವ ಮೃದುಹೃದಯನೆ ॥ ॥೪॥

ದೇವಾಧಿ ದೇ–ವರು । ಸೇವೆಯ ಮಾ–ಡುವ ।
ಪಾವನ ಚಿದ್ರೂಪನೆ ॥ ॥೫॥

--✿✿✿✿✿--

೪೩೫

ಶ್ರೀ ರಾಮಚಂದ್ರದೇವ ಭೂರಿದಯವ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಶ್ರೀ–ರಾಮಚಂದ್ರದೇವ । ಭೂರಿದಯವ ತೋರಬಾರದೆ ॥ ॥ಪ॥

ಬರಬಾರದ ಜನ್ಮಗಳೊಳು । ಬರಬರುತಲೀ (ದೇವ) ।
ಬರಿದುಃಖವನ್ನು ಪಡುತ । ಕೊರಗುತಿರ್ಪೆನೊ (ದೇವ) ॥ ॥೧॥

ಮೂರುದಿನದ । ಜಗವ ನಂಬಿ । ಗಾರುಗೆಟ್ಟೆನೋ ದೇವ ॥
ದಾರಿತೋರಯ್ಯ ನಿನ್ನ । ಸೇರಿ ಸಂತೋಷಿಪುದಕೆ ॥ ॥೨॥

ದೀನತನದಿ ಬಂದ ನನ್ನ । ನೀನುಪೇಕ್ಷೆ ಮಾಡಿಹೆ ॥
ಮಾನವೇನೀನಡತೆ । ಮಾ–ನಿನೀ–ಯಾಗ್ರಾಣಿಯೇ ॥ ॥೩॥

ಕೇಳು ದೇವ ನಿನ್ನ ನಾಮ । ಜಾಲವೆನ್ನ ನಾಲಿಗೆಗೆ ।
ಲೀಲೆಯಿಂ ಬರಲು ದಯ । ಪಾಲಿಸಬಾರದೇನೊ ॥ ॥೪॥

ಭೋಗಿಗಳೆಲ್ಲರಿಗಭೇದ್ಯ । ಆಗಮಾಂತೈಕವೇದ್ಯ ।
ಯೋಗೀಂದ್ರವಿನುತ ವೇಷ । ಬೇಗ ನೀಂ ಚಿದ್ವಿಶೇಷ ॥ ॥೫॥

--✿✿✿✿✿--

೪೩೬
ಯಾತಕುಪೇಕ್ಷೆಯ ಮಾಡುವೆ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಯಾತಕುಪೇಕ್ಷೆಯ ಮಾಡುವೆ । ರಘುರಾಮ ದಯಾಳೊ ॥ಪ॥

ಎಲ್ಲೆಲ್ಲಿಯೂ ನೀನಿರುತಿಹೆಯೆಂ–ಬರು ।
ಎಲ್ಲಿಯೂ ನನಗೆ ನೀ ಕಾಣಿ–ಸೆ ॥ ॥೧॥

ಎಲ್ಲವ ತಿಳಿಯುವನಾದರೆ ಎ–ನ್ನಯ ।
ಸೊಲ್ಲಿಗೆ ಕಿವಿಗೊಡಬಾ–ರದೆ ॥ ॥೨॥

ಶರಣರಕ್ಷಕನೆಂಬ ಬಿರುದಿಗೊಪ್ಪುವಂತೆ ।
ವರಚಿದ್ರೂಪವ ತೋ–ರದೆ ॥ ॥೩॥

--✿✿✿✿✿--

ಶ್ರೀರಾಮ ರಾಕ್ಷಸಭೀಮ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಶ್ರೀರಾಮ ರಾಕ್ಷಸ । ಭೀಮರವಿಕುಲ ।
ಸೋಮ ಮುನಿಜನರಂಜನ ॥ ನತ
ಕಾಮಿತಾರ್ಥವನಿತ್ತು ರಕ್ಷಿಸು ।
ಸ್ವಾಮಿ ಹರಧನುಭಂಜನ ॥ ॥ಪ॥

ರಾಜೇಂದ್ರ ರಾಘವ ರಾಮಚಂದ್ರನೆ ।
ರಾಮ ರಘುಕುಲಪುಂಗವ ॥
ರಜನೀಚರಾವಳಿ ಹರಣ ದೀಕ್ಷಿತ ।
ರಾಜರಾಜ ಸುವೈಭವ ॥ ॥೧॥

ಪುಣ್ಯೋದಯ ಪುರುಷೋತ್ತಮಾ ।
ಭವರೋಗಹರ ತ್ರಿಗುಣಾತ್ಮಕಾ ॥
ಹನುಮಂತಪ್ರಿಯಗುರು ಕೌಸಲೇಯ ।
ವಿಭೀಷಣಾಭಯದಾಯಕಾ ॥ ॥೨॥

ವೇದಾಂತಸಾರಾ ಸಪ್ತತಾಳೋ ।
ಚ್ಛೇದ ಸತ್ಯಪರಾಕ್ರಮ ।
ವಿದಿತಾಖಿಲಾರ್ಥ ಜಗದ್ಗುರೋಚಿತ
ಭಾರ್ಗವ ದೇವೋತ್ತಮ ॥ ॥೩॥

ಆನತಾಖಿಲಧಾಮ ವಿಶ್ವಾಮಿತ್ರ ।
ಸೇವಾತತ್ಪರಾ ।
ಅನಿಮಿತ್ತ ಬಂಧು ದಯಾಳು ಮಾಯಾಮರ್ನುಜ ।
ಧೀರ ಧನುರ್ಧರ । ॥೪॥

ಶ್ಯಾಮಾಂಗ ಸುಂದರ ಶೂರಶಿವನುತ ।
ಸರ್ವಮುನಿಜನ ಸಂಸ್ತುತ ॥
ಕಮನೀಯವೇಷ ರಘೂತ್ತಮಾ ।
ದೇವೇಶ ಚಿದ್ರೂಪಾನ್ವಿತ ॥ ॥೫॥

೪೩೮

ಜನಕಜಾವರ ರಾಮ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಜನಕಜಾವರ । ರಾಮ । ಕರುಣಾಸಾಗರ ॥ ॥ಪ॥

ಸುರವರನಿಂದ (ಲಿ) । ಪರಿಚರ್ಯೆಗೊಂಬ ।
ಸರಸಿಜನಯನ । ಪೊರೆ ನೀ ಎನ್ನ ॥ ॥ಅ.ಪ.॥

ತಿಳಿಯೆ ನಾನು ಜಪವ ತಪವ ।
ತಿಳಿಯೆ ನಾನು ಪೂಜಾವಿಧವ ॥
ತಿಳಿಯೆ ನಾನು ಸ್ತೋತ್ರವಾ । ರಾಮಚಂದ್ರ॥
ತಿಳಿಯಲರಿಯೆ ವೇದಾರ್ಥ ।
ತಿಳಿಯಲರಿಯೆ ತತ್ತ್ವದಿರುವ ।
ತಿಳಿಯಲರಿಯೆ ಮಂತ್ರಾಕ್ಷರವ ।
ತಿಳಿಸೆನಗೆ ನಿನ್ನೆರಡಕ್ಷರವ ॥ ॥೧॥

ಗುರುಗಳ ಸೇವಿಸಲರಿಯೆ ।
ಪರಮಾರ್ಥವ ಸಾಧಿಸ-ಲರಿಯೆ ।
ಸೆರಗನೊಡ್ಡುವೆನೊ ನಾನು । ರಾಮಚಂದ್ರ ।
ಹರಿಹರಾತ್ಮಕನೆ ಸ್ವಾಮಿ
ಶರಣು ಬಂದ ನನ್ನ ಮೇಲೆ ।
ಕರುಣಾರಸವ-ವ ಸುರಿಸಿ ನಿನ್ನ ।
ಸ್ಮರಣೆ ಇತ್ತು ಕಾಪಾಡೆನ್ನ ॥ ॥೨॥

ವಿಷಯಂಗಳ ತೊರೆಯಲರಿಯೆ ।
ವಿಷಮ ದೃಷ್ಟಿಬಿಡುವದರಿಯೆ ।
ವಿಷಮನಯನ ಮಿತ್ರನೆ । ರಾಮಚಂದ್ರ ।
ಅಸಮಮಹಿಮನಾದ ನಿನ್ನ ।
ವಶವಮಾಡಿಕೊಳ್ಳಲರಿಯೆ ।
ಬಿಸಜನಯನ-ಭಾಗ್ಯವೇಷ ।
ಬೆಸಗೊಳ್ಳುವೆ ಚಿದ್ವಿಶೇಷ ॥ ॥೩॥

೪೩೯

ನಾಮಭಿಕ್ಷೆವೀಯೋ ಪ್ರೇಮದಿ ರಾಮ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ನಾಮಭಿಕ್ಷವೀ-ಯೋ । ಪ್ರೇಮದಿ ರಾಮ ॥ ॥ಪ॥

ಕಾಮಿತ ಶುಭಫಲದಾತ ।
ಸೋಮಾರ್ಧವಿಭೂಷವಿನುತ ॥ ॥ಅ.ಪ.॥

ಅಶನಾದಿಗಳ-ನುನಾ-ರಾಮ ಬೆಸಗೊಳ್ಳುವುದಿಲ್ಲವಯ್ಯಾ ।
ಅಶನಾದಿಗಳಾದಾ ಬಹುವಿಧದ ॥
ವಿಷಯಂಗಳ ಮರೆಸುತ ನಿ । ರ್ವಿಷಯಕ ಮನದಲ್ಲಿ ನಿನ್ನ ।
ಅಸದೃಶನಾಮಾಕ್ಷರಗಳೆ ಬೆಸೆದಿರಲೆಂದೆರಗುವೆ ನಾ ॥ ॥೧॥

ಧನಕನಕಗಳ-ನುನಾ-ರಾಮ । ಮನದೊಳಗಾದರಿಸೆನಯ್ಯ ।
ಮನಸಿನ ಶಾಂತತೆಯನು ಬೇಡುವೆನು ॥
ಜನಕಸುತಾಸುವಿನೋದ । ಮುನಿಜನವಂದಿತ ಪಾದ ।
ಅನವರತವು ನಿನ್ನನ್ನೇ । ನೆನೆಯುತ್ತಿರುವಂತೆ ನನಗೆ ॥ ॥೨॥

ಸತಿಸುತ ಹಿತ-ರನು-ರಾಮ । ಅತಿಹಿತದಿಂ ಬಯಸೆನಯ್ಯ ।
ಮತಿ ಸುಸ್ಥಿರವಾಗುತ್ತಲಿ ನಿನ್ನ ॥
ಅತಿಹಿತದಿಂ ಬಯಸೆನಯ್ಯಾ । ಸತತವು ಸಂಕೀರ್ತಿಸುತಿಹ ।
ಸ್ಥಿತಿಯೊದಗಲು । ಮುನಿವರದ । ಕ್ಷಿತಜಾವರ ಚಿದ್ವಿನೋದ ॥ ॥೩॥

--✿✿✿✿✿--

೪೪೦

ಮಂತ್ರವೆಂದು ಸಿದ್ಧಿಸುವುದೋ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಮಂತ್ರವೆಂದು ಸಿದ್ಧಿಸುವದೋ । ಶ್ರೀರಾಮತಾರಕ ॥ ॥ಪ॥

ಮಂತ್ರಗಳೊಳಗೆಲ್ಲ ಮಹಾ ।
ಮಂತ್ರವೆಂದು ಹೆಸರುಪಡೆದ ॥ ॥ಅ.ಪ.॥

ಗಿರಿಶನು ಬಹುಪ್ರೀತಿಯಿಂದ ।
ಗಿರಿಜೆಗೊರೆದುದಾಗಿ ಮತ್ತೆ ॥
ನರರಿಗೆಲ್ಲ ಕಾಶಿಯಲ್ಲಿ ।
ಮರಣಕಾಲದಲ್ಲಿ ಪೇಳ್ವ ॥ ॥೧॥

ಸುರನರ ಕಿಂಪುರುಷರೆಲ್ಲ ।
ಪರಮಪ್ರೀತಿಯಿಂದಲಿ ॥
ಭರದಿಜಪಿಸಿ ಸೌಖ್ಯದಿಂದ ।
ಮೆರೆಯುವಂತೆ ಮಾಡಿರುವಾ ॥ ॥೨॥

ಮರವೆಯೆಂಬ ಕತ್ತಲೆಯ ।
ತರಣಿಯಂತೆ ಓಡಿಸುವ ॥
ಪರಮತತ್ತ್ವವನ್ನು ತಿಳಿಸಿ ।
ವರಚಿತ್ಸುಖವೀಯುವಂಥ ॥ ॥೩॥

--✿✿✿✿✿--

೪೪೧
ಆ ರಮಣೀಯ ರೂಪ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಆ ರಮಣೀಯ ರೂಪ । ವೆಂದು ನಾನು ಕಾಣುವೆನೊ ॥ ॥ಪ॥

ನೀರಜಾತನಯನ । ಸೀತಾರಮಣನ ಸುಂದರವಾ(ದಾ) ॥ ॥ಅ.ಪ.॥

ಮೆರೆವ ನೀಲಮೇಘ ಸದೃಶ । ವಾದದೇಹಕಾಂತಿಯೂ ।
ಸುರುಚಿರ ನವರತ್ನಖಚಿತ ವರ ಕಿರೀಟಕಾಂತಿಯೂ ॥
ಕಿರುನಗೆಯಿಂ ಬೆಳಕ ಬೀರುತಿರುವ ದಂತಕಾಂತಿಯೂ ।
ಕರುಣಾರಸದಿಂದ ಮಿರುಗುತಿರುವ ಕಣ್ಣಕಾಂತಿಯೂ ॥ ॥೧॥

ತಿಲಕದಿಂದ ಕೂಡಿದ ಫಣಾಫಲಕಕಾಂತಿಯೂ ।
ತುಲಸಿಯಂದದಿಂದಲೆಸೆವ ಹೃದಯಕಾಂತಿಯೂ ॥
ಹಲವು ದೇವತೆಗಳ ಕಿರೀಟಿಗಳ ರತ್ನರಾಜಿಯಿಂದ ।
ಝುಳಝುಳ ಬೆಳಗುತಿಹ ಪಾದತಳದಶುಭ್ರಕಾಂತಿಯೂ ॥ ॥೨॥

ವೇದಗಳೇ ತುಂಬಿತುಳುಕುತಿರುವ ಮುಖದಕಾಂತಿಯೂ ।
ಸಾಧಕಜನಕಭಯವೀವ ವರದಹಸ್ತಕಾಂತಿಯೂ ॥
ಭೇದಬುದ್ಧಿಗಳನು ಕಳೆದು ಸಾಧುಪುರುಷಮೋಹಕಾರಿ ।
ಯಾದ ಚಿದ್ವಿನೋದ ವಿಭವವಾದ ದಿವ್ಯಕಾಂತಿಯೂ ॥ ॥೩॥

--✿✿✿✿✿--

೪೪೨
ಇದಕೀಗ ನಾನೇನ ಮಾಡಲಯ್ಯ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಇದಕೀಗ– ನಾನೇನ ಮಾಡಲಯ್ಯ ।
ಸದಯನೆ ಶ್ರೀ । ರಘುನಾಯಕ ॥ ॥ಪ॥

ಹೃದಯದಿ ನಿನ್ನ । ಪದಗಳನ್ನಿಟ್ಟು ।
ಮುದದಿಂದ ಕಾಪಾ । ಡದೆ ಬಿಟ್ಟಮೇಲೆ ॥ ॥ಅ.ಪ.॥

ವಿಷಯಂಗಳಿಂದ ಸುಖವಪ್ಪುದೆಂದು ।
ದೆಸೆದೆಸೆಗಳ ಓಡಾಡಿ ಬಾಡಿ ॥
ಬಸವಳಿಯುತ ಬಾಯಾರಿ ನಾನು ।
ಬಿಸಜಾಕ್ಷನೇ ಬೆಂಡಾಗಿಹೆನು ॥ ॥೧॥

ಪಾಪದಿಂದ ಭವಕೂಪದಲಿ ಬಿದ್ದು ।
ತಾಪತ್ರಯದೊಳೀಪರಿಯಲ್ಲಿ ॥
ಪಾಪವನೇ ಮಾಡುತ ನಿನ್ನ ।
ಕೋಪಕ್ಕೆ ನಾ ಪಾತ್ರನಾಗಿಹೆನು ॥ ॥೨॥

ಸತಿಸುತರನ್ನು ಸುಖದಾತರೆಂದು ।
ಅತಿಯಾಗಿ ನಂಬಿ ಮತಿಗೆಟ್ಟೆನಯ್ಯ ।
ಹಿತವಾದ ಚಿದ್ರೂಪುಗಾಣದೆ ।
ಕ್ಷಿತಿಯಲ್ಲಿ ದು । ರ್ಗ್ಗತಿಗಿಳಿದೆನು ॥ ॥೩॥

--✿✿✿✿✿--

೪೪೩

ದಯಮಾಡಿ ಕೊಡೊ ಎನ್ನಿಷ್ಟವ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ದಯಮಾಡಿ ಕೊಡೊ ಎನ್ನಿಷ್ಟವ ।
ಶ್ರೀ ರಾಘವ । ಸೀತಾಧವ ॥ ॥ಪ॥

ನಯದಿಂದಲೆನ್ನ ಭವಬಂಧದ ।
ಭಯವನ್ನು ಕಳೆ ಜಯರಾಮಚಂದ್ರ ॥ ॥ಅ.ಪ.॥

ಬುದ್ಧಿ ಇಲ್ಲದಿಹ । ಜನ್ಮಗಳಿಗೆನ್ನ ।
ಒದ್ದು ನೂಕದೆ । ಮನುಜಜನ್ಮದಲ್ಲಿ ॥
ಇದ್ದು ನಿನ್ನಯ । ಮುದ್ದುಪಾದಕೆ ।
ಬಿದ್ದು ಬದುಕುವಂ । ತುದ್ಧರಿಸೆಂಬೆ ॥ ॥೧॥

ಕೊನೆಯಲ್ಲಿ ದುಃಖಾ । ಕರವಾದ ಭೋಗ ।
ವನು ಬೇಡುವಾಸೆ । ಯನು ಸುಟ್ಟು ಹಾಕಿ ॥
ಮನದಲ್ಲಿ ನೀ ಮನೆಮಾಡೆಂದು ।
ಅನುವಿಂದ ನಾ ಬೇಡುವಂತೆ ॥ ॥೨॥

ಸತಿಸುತರಾ । ಬಲೆಯೆಂಬುವಾ ।
ಅತಿ ಕಷ್ಟದಿ । ಸಿಲ್ಕಿರದೆ ॥
ಹಿತವನ್ನು ಮಾ । ಡುವ ಸಾಧುಸಂ ।
ಗತಿಯಲ್ಲಿಯೇ । ಇಡು ಚಿನ್ಮಯ ॥ ॥೩॥

೪೪೪

ದಾಸ್ಯವನೇ ಬೇಡುವೆ ನಿನ್ನ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ದಾಸ್ಯವನೆ ಬೇಡುವೆ ನಿನ್ನ ।
ಬ್ರಹ್ಮೇಂದ್ರವಿನುತ ಸೀತಾಪತೇ ॥ ॥ಪ॥

ಮೌನಿಗಳು । ಹೃದಯದಲಿ ।
ಧ್ಯಾನಿಸುವ । ಪಾದಾರವಿಂದದ ॥ ॥ಅ.ಪ.॥

ಭೂಮಿಭಾರವನು । ಕಳೆದುಭಕ್ತರಿಗೆ ।
ಪ್ರೇಮದಿಂದ ತನ್ನ । ರೂಪವನು ತೋರಿ ॥
ಈ ಮಹಿಗೆಲ್ಲ । ಮುಖ್ಯದೈವವಾದ ।
ಕೋಮಲಾಂತಃಕರ । ಣದ ನಿನ್ನ ಪದ ॥ ॥೧॥

ಹುಟ್ಟುಸಾವುಗಳ । ಸುಳಿಯಲ್ಲಿ ಸಿಕ್ಕಿ ।
ಕಷ್ಟದಿಂದ ದುಃಖ । ಪಡುತಿರುವರ ॥
ಕಷ್ಟವನ್ನು ಹೋಗ । ಲಾಡಿಸುವ ।
ಸೃಷ್ಟಿಗೆಲ್ಲ ಮುಖ್ಯ । ದೈವವಾದ ನಿನ್ನ ॥ ॥೨॥

ಹೊಟ್ಟೆಬಟ್ಟೆಗಾಗಿ । ನಾ ಮಾಡುವ ।
ಕೆಟ್ಟಜನಗಳ । ಸೇವೆ ಸಾಕುಮಾಡಿ ॥
ಇಷ್ಟದೈವದ । ಚಿದ್ರೂಪದ ।
ನೆಟ್ಟನರಿಯುವ ದೃಷ್ಟಿಯೀವ ನಿನ್ನ ॥ ॥೩॥

--✿✿✿✿✿--

೪೪೫

ಚಿತ್ತದಲಿ ನೀ ನಿತ್ಯವೂ ಇರೆನ್ನ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಚಿತ್ತದಲ್ಲಿ ನೀ । ನಿತ್ಯವೂ ಇರೆನ್ನ ।
ಅತ್ತಇತ್ತನೀ । ನಗಲಬೇಡವಯ್ಯ ॥ ॥ಪ॥

ಮನುಜವೇಷದಿಂದ । ಮನವ ಮೋಹಿಸುವ ।
ಮುನಿಜನವಿನುತ । ಜನಕಜಾರಮಣ ॥ ॥ಅ.ಪ.॥

ನಿನ್ನ ಪಾದರಜವನ್ನು । ವೇದ–ಗಳು ।
ಇನ್ನು ಹುಡುಕುತ್ತ । ಕಾಣದಿರುವುವು ॥
ಸನ್ನುತಾಂಗನೇ । ಸಾಮವೇದಪ್ರಿಯ ।
ಇನ್ನು ನಾ ನಿನ್ನ । ಹುಡುಕಬಲ್ಲನೆ ॥ ॥೧॥

ನಾರದಾದಿಗಳು । ನಿನ್ನ ಕೀರ್ತಿಯನು ।
ಪಾರಗಾಣದೆ । ಹಾಡುತಿರುವರು ॥
ಆ ರೀತಿ ನಿನ್ನ । ನೊಲಿಸಬಲ್ಲನೆ ।
ಕಾರುಣ್ಯ ಸಾ । ಗರ ದಯಮಾಡು ॥ ॥೨॥

ಮುನಿಜನಗಳೂ । ನಿನ್ನ ರೂಪವನ್ನು ।
ಮನದಲ್ಲಿ ಕಟ್ಟ । ಲಾರದಿರುವಾಗ ॥
ನನಗೆ ಸಾಧ್ಯವೇ । ನಿನ್ನ ಹಿಡಿವುದು ।
ಅನಿಮಿಷಸ್ತುತ । ಚಿನುಮಯಾತ್ಮನೆ ॥ ॥೩॥

--✿✿✿✿✿--

೪೪೬
ಶರಣಾಗತ ಪರಿಪಾಲಕ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ – ೧೯೩೮)

ಶರಣಾಗತ ಪರಿಪಾಲಕ । ಕರುಣಾಕರ ಶ್ರೀರಾಮ ॥ ॥ಪ॥

ಸೆರಗೊಡ್ಡುತ ಬೇಡಿಕೊಂಬೆ । ಧರಣೀಧರಜಾಕಾಂತ ॥ ॥ಅ.ಪ.॥

ಮೆರೆವ ನಿನ್ನ ರೂಪವೆನ್ನ ।
ಎರಡೂ ನಯನಂಗಳಲ್ಲಿ ॥
ಪರಿಪೂರ್ಣವಾಗಿ ತುಂಬಿ ॥
ಭರದಿಂ ಮಿರುಗುತ್ತಿರುವಂತೊಲಿನೀ ॥
ಸರಸೀರುಹಾಂಬಕ ॥೧॥

ಎನ್ನ ಕಿವಿಯು ನಿನ್ನ ಕೀರ್ತಿ ।
ಯನ್ನೇ ಕೇಳುತ್ತಲಿ ॥
ನಿನ್ನ ಪದಾಂಬುರುಹದಲ್ಲಿ ।
ಎನ್ನೀ ಹಣೆ ತಾನಿರುವಂತೊಲಿನೀ ।
ಸನ್ನುತ ಗುಣಗಣ ॥ ॥೨॥

ಎನ್ನ ಮೂಗು ಎನ್ನ ಮಾಲ್ಯ
ವನ್ನೇ ಮೂಸುತ್ತಲಿ
ನಿನ್ನ ಸುಪ್ರಸಾದದಿಂದ
ಎನ್ನೀ ಜೀವನವಿರುನಂತೊಲಿನೀ
ಚಿನ್ಮಯ ಮೂರುತಿ ॥ ॥೩॥

--✿✿✿✿✿--

೪೪೭
ಶ್ರೀರಾಮ ರಾಮಭದ್ರ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಶ್ರೀರಾಮ ರಾಮಭದ್ರ । ರಾಮಚಂದ್ರ ಮಂಗಳಂ ॥ ॥ಪ॥

ಸೀತಾಲಕ್ಷ್ಮಣಸಮೇತ । ಪೂತಾತ್ಮ-ತ್ರಿದಶವಿನುತ ॥ ॥೧॥

ಭರತಾದಿ-ಸ್ವಜನಸೇವ್ಯ । ಭಕ್ತ ಸಂ-ದೋಹಭಾವ್ಯ ॥ ॥೨॥

ಪರಮಾತ್ಮ-ಪರಬ್ರಹ್ಮ । ಪರಂಜ್ಯೋತಿ-ಪರಂಧಾಮ ॥ ॥೩॥

ವೇದಾಂತ ಸರ್ವಸಾರ । ಖೇದಸಂ-ಹರಣ ಧೀರ ॥ ॥೪॥

ಭಕ್ತ ಸಂ-ಪೂಜ್ಯ ವೇಷ । ಭಕ್ತೇಡ್ಯ ಚಿದ್ವಿಶೇಷ ॥ ॥೫॥

--✿✿✿✿✿--

೪೪೮

ಎಷ್ಟು ಸುಂದರ ಎಷ್ಟುಬಂಧುರ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಎಷ್ಟು ಸುಂದರ । ಎಷ್ಟು ಬಂಧುರ ।
ಈ ಮನೋಹರ । ಕುವರ ॥ ॥ಪ॥

ದೃಷ್ಟಿತಾಕೀತೆಂದು ಹೇಳು ।
ಎಷ್ಟು ಸರ್ವಮೋಹನಾಕಾರ ॥ ॥ಅ.ಪ.॥

ನೀಲಮೇಘಶ್ಯಾಮನು । ವಿ ।
ಶಾಲ ಕಮಲನಯನನು ॥
ಶೀಲ ವಿನಯಸಹಿತನು । ಭೂ ।
ಪಾಲ ಸಂಘಮಹಿತನು ॥ ॥೧॥

ಅಗಲವಾದ ಹಣೆಯು ಬಿಲ್ಲ ।
ಬಗೆಯೊಳಿರವ ಹುಬ್ಬುಗಳು ॥
ಬಿಗಿವಡೆದಿಹ ದೀರ್ಘಬಾಹು ।
ಯುಗಳವು ಬಲು ಶೋಭಿಸುವವು ॥ ॥೨॥

ಬಲು ವಿಶಾಲವಕ್ಷದೆಡೆಯು ।
ಲಲಿತವಾದ ಚಲನವಲನ ॥
ಸಲೆ ಯೌವನದಿ ಶೋಭಿಪ ।
ಕುಲದೀಪಕನೀ ಚಿದ್ರೂಪ ॥ ॥೩॥

--✿✿✿✿✿--

೪೪೯

ಜೋಜೋಜೋ ನೀಲಮೇಘಸಂಕಾಶ

(ಚಿನ್ಮಯ / ಹೊಸಕೆರೆ ಚಿದಂಬರಯ್ಯ / ೧೮೭೦ - ೧೯೩೮)

ಜೋಜೋಜೋ ನೀಲಮೇಘಸಂಕಾಶ
ಲೀಲಾವಿನೋದ ಜೋ ಜೋ ॥ ॥ಪ॥

ಜೋಜೋಜೋ ಜಗನ್ಮೋಹಕಾಮಲರೂಪ ।
ರವಿವಂಶದೀಪ ಜೋಜೋ ॥ ॥ಅ.ಪ.॥

ಕುಲಕೋಟಿಕೋಟಿಗಳಿಗುದ್ಧಾರವನು ಗೈದೆ ।
ಬಲು ಹರ್ಷವಾಯಿತೈದೆ ॥
ಇಳಿಯಾಗುಹೋಗುಗಳ ತಿಳಿದು ನಡೆಸಲು ಬಲ್ಲೆ ।
ನಲವಿಂದ ಮುನಿಜನರನೊಲಿದು ರಕ್ಷಿಸಬಲ್ಲೆ ॥ ॥೧॥

ದುರ್ಜನರತಂಡಗಳ ಜರ್ಜರಗೊಳಿಪೆ ನೀನು ।
ನಿರ್ಜರಿಗಭಯ ನೀನು ॥
ಆರ್ಜವನೆ ಮೊದಲಾದ ಗುಣಗಳಾಕರ ನೀನು ।
ಊರ್ಜಿತ ಶ್ರೀಯಿಂದ ಬಾಳಬಲ್ಲವ ನೀನು ॥ ॥೨॥

ನೀನು ನೋಡಿದಡೆಲ್ಲ ದೇವನಿವಹಕಧೀಶ ।
ಮಾನವೋತ್ತಮನ ವೇಷ ॥
ದೀನಜನಮಂದಾರ ಭೂರಿ ಮಂಗಳಭೂಷ ।
ನೀನಿನ್ನು ಸರ್ವಕಾಧಾರದ ಚಿದಾಕಾಶ ॥ ॥೩॥

--✿✿✿✿✿--

೪೫೦

ಜಯಜಯತು ಶ್ರೀರಾಮ ಇನಕುಲಾಬ್ಧಿಗೆ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಜಯಜಯತು ಶ್ರೀರಾಮಇನಕುಲಾಬ್ಧಿಗೆ ಸೋಮ ।
ಜಯಜಯ ಸುಗುಣಸ್ತೋಮ ಸಾರ್ವಭೌಮಲಲಾಮ ।
ಜಯಜಯ ರಮಾಧಾಮ ದುರುಳ ದೈತ್ಯವಿರಾಮ ।
ಜಯಜಯ ಸುಜನಪ್ರೇಮ ಪೂರ್ಣಕಾಮಾ ॥ಪ॥

ನಿನ್ನ ಅವತಾರ ದುಷ್ಟರಿಗೆ ಬಲುಪರಿ ಘೋರ ।
ನಿನ್ನ ಅವತಾರ ಶಿಷ್ಟರಿಗೆ ನಿರಯವೆ ದೂರ ।
ನಿನ್ನ ಅವತಾರ ಪರಿಹರಿಸಿತೀ ಭೂಭಾರ ।
ನಿನ್ನ ಪೋಲುವ ಧೀರರಿನ್ನುಂಟೆ ಶೂರಾ ॥೧॥

ದಶಕಂಠನಿಗೆ ಪಾಪ ಪರಿಪೂರ್ಣವಾಯಿತೊ ।
ದಶರಥನ ಜನ್ಮಾಂತರದ ಸುಕೃತವೊದಗಿತೊ ।
ದಶದಿಗಾಂತರದೊಳಗೆ ಅಸಮ ಪರದೈವನೆ ತ್ರಿ ।
ದಶರಿಂದ ನೀನವತರಿಸಿದೆ ಶ್ರೀರಾಮಾ ॥೨॥

ಅರಣ್ಯದೊಳಗೊಬ್ಬ ಧರಿಣಿಸುರ ಅಂದು ।
ನೀರೋಯ್ಯುವುತಿರೆ ತನ್ನ ಆರ್ಯರಿಗೆ ಅವನ ಸಂ ।
ಹಾರ ಮಾಡಲು ಶಪಿಸೆ ಅದೆ ಕಾರಣದಲುದಿಸಿ ।
ಧೀರ ಅಭಿನವಜನಾರ್ದನವಿಠ್ಠಲ ಮೆರೆದೆ ॥೩॥

--✿✿✿✿✿--

೪೫೧

ಜನಿಸಲು ರಘುವರ ಜನನಿಜನಕರಾ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಜನಿಸಲು ರಘುವರ ಜನನಿಜನಕರಾ ಮ ।
ಗನ ನೋಡಿ ಸುಖಿಸಿದರಾಗಾ ।
ಜನರ ಕಣ್ಣಿಗೆ ಪುಟ್ಟಿದನು ಎಂಬುದಲ್ಲದೆ ।
ಳ್ಳಿನಿತು ವೃದ್ಧಿ ಹ್ರಾಸ ತನಗೇನಿಲ್ಲದದರಿಂದ ॥ಪ॥

ಪುಟ್ಟಲು ಮಧು ಬಾಯೊ ।
ಳಿಟ್ಟು ಜಾತಕರ್ಮ ಇಷ್ಟಜನರ ಕೂಡಿ ಮಾಡಿ ।
ಶಿಷ್ಟರೆಂದೆನಿಪ ವಶಿಷ್ಠಾದಿ ಋಷಿಗಳು ।
ತೊಟ್ಟಿಲೊಳಗಿಟ್ಟು ಕೊಂಡಾಡಿ ।
ದಿಟ್ಟ ಅನಂತ ಉತ್ಕೃಷ್ಠ ನಾಮ ಪೆಸ ।
ರಿಟ್ಟರು ರಾಮನೆಂದಾಡಿ ।
ಪಟ್ಟಣದೊಳಗೆ ಇದ್ದಷ್ಟು ಸ್ತ್ರೀಯರು ಬಂದು ।
ಘಟ್ಟ್ಯಾಗಿ ಹರಿಯ ಪಾಡಿದರೆಲ್ಲ ಕೂಡಿ ॥೧॥

ಜೋಜೋ ಇನಕುಲಾಂಬುಧಿಗೆ ಪೂರ್ಣಚಂದ್ರ ।
ಜೋಜೋ ಸದ್ಗುಣಸಾಂದ್ರಾ ।

ಜೋಜೋ ದಶರಥ ಕೌಸಲ್ಯಾತ್ಮಜ ರಾಮ ।
ಜೋಜೋ ಪರಿಪೂರ್ಣಕಾಮಾ ।
ಜೋಜೋ ಲೋಕಮೋಹಕ ಬಾಲಕರೂಪ ।
ಜೋಜೋ ರಘುವಂಶದೀಪ ।
ಜೋಜೋ ಎನುತ ರತ್ನಖಚಿತ ತೊಟ್ಟಿಲೊಳಿಟ್ಟು ।
ಜೋಜೋ ಎಂದು ಪಾಡಿದರು ನಾರಿಯರಷ್ಟು ॥೨॥

ಮನುಜರಂದದಿ ತನ್ನ ಮನೆಯೊಳಗತಿಶಯ ।
ಕುಣಿದಾಡಿದನು ಬಲುಮುದದಿ ।
ಮಿನುಗುವ ಮುಕುಟ ಮುತ್ತಿನ ಕುಂಡಲಗಳು ಸು ।
ಕನಕಸರಗಳು ಕಂಧರದಿ ।
ಮಣಿಗಣಖಚಿತ ಕಂಕಣ ಉಡುದಾರ ಕಿಂ ।
ಕಿಣಿ ಗೆಜ್ಜೆಯು ಕಾಲ್ಗಡಗದಿ ।
ಘನ ಅಭಿನವಜನಾರ್ದನವಿಠ್ಠಲ ಚಿಕ್ಕ ।
ತನ ಆಟದಿ ಬೆಳೆದನು ಅನುದಿನದಿ ॥೩॥

--✿✿✿✿✿--

೪೫೨
ಜಾನಕೀರಮಣಗೆ ಜಯಮಂಗಳಂ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಜಾನಕೀರಮಣಗೆ ಜಯಮಂಗಳಂ ।
ಜಾಹ್ನವಿ ಜನಕಗೆ ಶುಭಮಂಗಳಂ ॥ಪ॥

ದಶರಥತನಯಗೆ ದಶಮುಖಹರನಿಗೆ ।
ದಶದಿಶದೊಳು ಮೆರೆವ ಸದೃಶಗೆ ।
ದಶಾವತಾರ ತ್ರಿದಶರೊಡಿಯ ಚತುರ ।
ದಶಲೋಕಗಳ ಸೃಜಿಸುವವಗೆ ॥೧॥

ದಿನಕರದೀಪ್ತಗೆ ದೀನಜನಾಪ್ತಗೆ ।
ದಿನಕರವಂಶಜನೆನಿಸುವವಗೆ ।

ದಿನಕರಸುತ ಕಪಿ ಗಣಕೆಂಜಕೋರಕ ।
ದಿನಕರನೆಂತೆಂದೆನಿಸುವಗೆ ॥೨॥

ಅಭಿನವಜನಾರ್ದನವಿಠಲಬಲೆಯ ।
ಅಭಿಮಾನವ ಕಾಯಿದ ಹರಿಗೆ ।
ಅಬುಜದಳಾಕ್ಷಗೆ ಅಬುಜೋದ್ಭವ ಪಿತ ।
ಅಭಿನಮಿಪರಿಗೆ ಅಭಯಪ್ರದಗೆ ॥೩॥

--✿✿✿✿✿--

೪೫೩
ವರ ಶ್ರೀರಘುಪ ಸೀತಾಸ್ವಯಂವರಕೆ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ವರ ಶ್ರೀ ರಘುಪ ಸೀತಾ ಸ್ವಯಂ ।
ವರಕೆ ತೆರಳಿದ ತ್ವರಿತ ಜನಕರಾಯಾ ಪತ್ರ ।
ಬರದು ನಡದಾಲಸ್ಯ ತಡದ ॥ಪ॥

ಹರನ ಧನುವ ಎತ್ತಿದಂಥವರಿಗೆ ಮಗಳನೂ ।
ಕರದು ಕೊಡುವೆನೆಂದು ಬಹಳ ಹರುಷ ತಾಳ್ವನೂ ।
ಕರಸಿ ದೇಶಾಂತರದಲಿದ್ದ ಸರಿ ಧೊರಿಗಳನೂ ।
ತರುಣಿಮಣಿಯು ಮನಕೆ ಬಂದ ವರನು ಮದಿವ್ಯಾಗಲೆಂದು ।
ಅರಿದು ಭೂಪ ಭರದಿ ಸ್ವಯಂವರವ ಮಾಡ್ದನೂ ॥೧॥

ಋಷಿಯು ಪತ್ರ ನೋಡಿ ಯೋಚಿಸಿದ ಬ್ಯಾಗ ನಾ ।
ಎಸವಯೋಧ್ಯ ಮಾರ್ಗವನು ತ್ಯಜಸಿದನಾಕ್ಷಣಾ ।
ದಶರಥಾತ್ಮಜನು ಎಂದೆನಿಸಿದ ರಾಮನಾ ।
ಬೆಸಸೆ ಕರೆದು ಕುಶಲವಾರ್ತಿ ಉಸುರಿ ತೆರಳು ಎನಲು ಮ ।
ನ್ನಿಸಿ ಸುವಚನ ಏರಿದನು ಹರುಷದಿ ಸ್ಯಂದನಾ ॥೨॥

ಮಿಥಿಲಾಪುರಕೆ ರಾಮ ಚೆಲ್ವರಥವನೇರ್ದನೂ ।
ಪಥದಿ ಬರುತ ಗೌತಮನ ಸತಿಯ ಕಂಡನು ।
ಕ್ಷಿತಿಯಮ್ಯಾಲೆ ಬಿದ್ದ ಶಿಲಾಕೃತಿಯ ತುಳಿದನು ।
ಚತುರ ಅಭಿನವಜನಾರ್ದನವಿಠಲನ್ನ ಪಾದಾ ।
ಶ್ರಿತರ ಪೊರೆವ ಕರೆಯೆ ಬರುವ ಅದ್ಭುತ ಸುಮಹಿಮನು ॥೩॥

--✿✿✿✿✿--

೪೫೪

ರಘುವರ ಬಂದಾ ನೋಡೆ ಮೃಗಮದ ಬಾಲೆ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ರಘುವರ ಬಂದಾ ನೋಡೆ ಮೃಗಮದ ಬಾಲೆ ।
ರಘುವರ ಬಂದಾ ನೋಡೆ ಮೃಗಮದ ಬಾಲೆ ।
ಜಗತ್ಪತಿಜನಕನ ಮಗಳೆ ನಿನಗೆಲಿದು ॥ಪ॥

ಚಂದಿರನಂತೆ ರಾಮಚಂದಿರ ಪೊಳೆವ ಹೇ ।
ಸೋದರೆ ನಿನಗತಿಸುಂದರ ಪುರುಷನೆ ॥೧॥

ರಾಯರಾಯರೊಳಗ ನಾಯಕವಗೆ ತಕ್ಕ ।
ಜಾಯೆ ನಿನಗಅತಿಪ್ರಿಯನೆ ಜಾನಕಿ ॥೨॥

ಎಲ್ಲ ರಾಯರು ಬಂದೀ ಬಿಲ್ಲು ಎತ್ತಲಾರದೆ ।
ನಿಲ್ಲದೆ ಸರಿಯಲು ಬಲ್ಲಿದ ಮುರಿಯಲು ॥೩॥

ಮದುವೆ ಮಾಡುವೆನೆಂದು ಮುದದಿ ಜನಕ ಕರ ।
ಸಿದಾ ದಶರಥನ ಹೇ ಮದಗಜಗಮನೆ ॥೪॥

ಕವಿಗಳಿಂದಲಿ ಅಭಿನವಜನಾರ್ದನವಿಠ ।
ಲ್ಲ ವರವಾಗಿ ನಿನ್ನನು ವಿವಾಹ ಮಾಡಿಕೊಳಲು ॥೫॥

೪೫೫
ಮಂಗಳ ಸುತರಂಗ ರಘುಜ ಸನ್ಮಂಗಳ
(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಮಂಗಳ ಸುತರಂಗ ರಘುಜ ಸನ್ಮಂಗಳ ಸೀತಾಂಗನಿ ವಿವಾಹಕೆ ।
ಅಂಗಿಕರಿಸಿ ಹಿಂಗದಲೆ ಕರದ ರಂಗನೀಯರು ಹಸಿಗೆ ॥ಪ॥

ಖ್ಯಾತನೆ ಸುಪುರಾತನಪುರುಷ ಅಜಾತನೆ ದಶರಥ ನೃಪತಿಗೆ ನೀ ।
ಪೋತನೆನಿಸಿ ಭಕುತರಿಗೀಪ್ಸಿತದಾತನೆ ಬಾ ಹಸಿಗೆ ॥
ನಾಥನ ಹೃನ್ಮಂಡಲ ನಿತ್ಯನಿಕೇತನ ಮಾಡಿಪ್ಪಳೆ ಗಿಳಿ ।
ಮಾತಿನ ಮನ್ಮಾತೆ ಬಾಬಾ ನೂತನ ಹಸಿಮಣಿಗೆ ॥೧॥

ಕನಕಾಂಬರ ಕನಕೋದರ ಮುನಿನಿಕರ ಪೂಜಿತ ।
ದಿನಕರ ಕುಲಮಣಿಯೇ ಬಾಬಾ ಮಣಿಖಚಿತ ಸೂಹಸೀಗೆ ।
ಜನಕಾತ್ಮಜಳೆನಿಸಿದೆ ತ್ರೈಜಗಜನಕೆ ಜಗದೀಶನ ಜಾಯೆ ।
ಘನ ಕರುಣಾಂಬುದೆ ಬಾಬಾ ರಾಮನ ಕೂಡಿ ಹಸಿಗೆ ॥೨॥

ನಿಟಿಲಾಕ್ಷನ ಧನುಭಂಗಿಸಿ ಈ ಚಟುಲಾಕ್ಷಿಯ ಕೂಡಿದೆ ಗತಭವ ।
ಪಟಲ ಅಭಿನವಜನಾರ್ದನವಿಠಲ ಬಾ ಹಸಿಗೆ ।
ಕುಟಿಲಾಳಕೆ ಬಟುಮುತ್ತಿನ ನಿಷ್ಕುಟಿಲಾಭರಣಗಳಿಂ ಶೋಭಿತೆ ।
ತೃಟಿಲವ ತಡಮಾಡದೆ ಈ ಕ್ಷಣ ಚಟುಲೆ ಬಾಹಸಿಗೆ ॥೩॥

--✿✿✿✿✿--

೪೫೬
ಕೇಳಿರ್ರೈ ಕೇಳಿರ್ರೈ ರಾಮನ ಕಥೆ ಕೇಳಿರ್ರೈ
(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಕೇಳಿರ್ರೈ ಕೇಳಿರ್ರೈ ರಾಮನ ಕಥೆ ಕೇಳಿರ್ರೈ ।
ಕೇಳೆ ಇಹದಿ ಸುಖ ಮ್ಯಾಲೆ ಮೋಕ್ಷಸುಖ ॥ಪ॥

ದಶರಥ ತನಗೆ ದಿವಸ ಪೋದವೆನುತಾಲೋ ।
ಚಿಸಿ ರಾಮನಿಗೆ ರಾಜ್ಯ ಅಭಿಷೇಕ ಮಾಡುವೆನೆಂದ ॥೧॥

ಪಟ್ಟ ಹರುಷದಿಂದಕಟ್ಟಿರಾಮಗ ವನ ।
ಮೆಟ್ಟಿ ವೈರಾಗ್ಯವ ತೊಟ್ಟು ನಲಿವನೆಂದಾ ॥೨॥

ಪಟ್ಟಣದೊಳಗಿದ್ದ ಶಿಷ್ಟಜನರು ತಮ್ಮ ।
ಗಿಷ್ಟವೆಂದೆನುತ ವಿಶಿಷ್ಟ ಪೇಳಿದರಾಗ ॥೩॥

ಮನಸಿಲಿದ್ದ ಹಾಗೆ ಜನರು ಪೇಳುವರೆಂದಾ ।
ಕ್ಷಣ ಕೇಳಿ ಪಟ್ಟಣವನೆ ಶೃಂಗರಿಸಿದನು ॥೪॥

ಘನ ಅಭಿನವಜನಾರ್ದನವಿಠ್ಠಲಗೆ ಪಟ್ಟ ।
ವನೆಗಟ್ಟುವರು ಎಂದು ಜನನಿ ಸುಖಿಸಿದಳು ॥೫॥

--✿✿✿✿✿--

೪೫೭

ಸುಖಪೂರ್ಣ ಮೂರುಲೋಕಕ ಸ್ವಾಮಿ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಸುಖಪೂರ್ಣ ಮೂರುಲೋಕಕ ಸ್ವಾಮಿ ಜನಕೆ ಮೋ ।
ಹಕ ತೋರಿಸಿ ನಲಿದಾ ಸುರರ ಕಾರ್ಯಕೆ ಸೇರಿದಾ ॥ಪಾ॥

ಸತಿ ಅನುಜನ ಕೂಡಿ ಪಥದಿ ಬರುತ ಭಾಗೀ ।
ರಥಿಯಾತೀರಕೆ ಬಂದನು ಈಶ್ವರನ ।
ಭಕುತ ಗುಹಕನ ತಾ ಕಂಡನು ॥೧॥

ಸುಖದಿಂದ ಹರನ ಸೇವಕನೆಂದು ತಿಳಿದು ತಾ ।
ಭಕುತಿಯಲಿ ಪೂಜಿಸಿದಾ ॥
ಪ್ರಯಾಗಕ್ಷೇತ್ರಕೆ ತೀವ್ರ ದಾಟಿಸಿದಾ ॥೨॥

ಬಲ್ಲಿದ ಪ್ರಯಾಗದಲ್ಲಿ ಭಾರದ್ವಾಜ ।
ನಿಲ್ಲದೆ ತುತಿಸಿದನು ಕೈಕೊಂಡು ತಾ ।
ನಲ್ಲಿಂದ ತೆರಳಿದನು ॥೩॥

ಚಿತ್ರಕೂಟಕೆ ಸುವಿಚಿತ್ರ ಮಹಿಮ ತಾ ಸೌ ।
ಮಿತ್ರಿಯಿಂದಲಿ ನಡದಾ ಕೆಲವು ದಿನಾ ।
ಗೋತ್ರಾದಿ ವಸತಿಯಾದಾ ॥೪॥

ಘನ ಅಭಿನವಜನಾರ್ದನವಿಠಲನು ಪೋದಾ ।
ಕ್ಷಣ ಮ್ಯಾಲಿನ್ನೆನದದೂ ಅಯೋಧ್ಯ ।
ಪಟ್ಟಣದ ಮಹಿಮೆ ಕೇಳ್ಪುದು ॥೫॥

--✿✿✿✿✿--

೪೫೮
ರಾಮಾ ನಿನ್ನಗಲಿರಲಾರೆವೊ ಸಖ
(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ರಾಮಾ ನಿನ್ನಗಲಿರಲಾರೆವೊ ಸಖ ।
ಧಾಮಾ ದಯದಿಂದಾ ನೋಡೊ ।
ಕಾಮಿತಜನ ಮನೋಕಾಮನದಾತಾ ಸು ।
ತ್ರಾಮವಿನುತ ಭವಭೀಮ ಭಯಾಂತಕಾ ॥ಪ॥

ಸುಂದರಾಂಗ ಸಂರಕ್ಷಕಾ ಮುನಿಮುಖ ।
ವೃಂದಾರಕನುತ ಸತತ ಸುಖ ।
ಸಿಂಧು ಸೇವಕಜನ ಬಂಧು ಭಕತನೋ ನಾ ।
ನೆಂದು ಬಿನ್ನೈಸಿದೆ ಮಂದರೋದ್ಧರ ಮನೋಹರ ।
ಚಂದಿರದಿಂದ ಬಾಬಾ ಕುಂದ ಸುರದನಾ ।
ಆದರದಿಂದ ಇಂದು ಬಂದು ನಿಂದೆ ನೀ ।
ತಂದೆ ನಾನೆಂತೆಂದೆ ಸೀತಾ ॥೧॥

ಕಾಂತೆ ಅನುಜನನಿಂದಲಿ ಅಯೋಧ್ಯದ ।
ಕಿಂತ ಈ ವನವಾಸವೆ ಸುಖದಾ ।
ತಿಂಥಿಣಿ ಹ್ಯಾಗೊ ಅದೆಂತೊ ತಿಳಿದಯೊ ನೀ ।
ನಿಂತಿದ್ದೇ ಸಾಕೇತಾ ಸಂತರ ಪುರದೊಳು ।
ಸಂತತ ಅವರು ಬಲು ಪರಿ ಚಿಂತಿಸುತಿಹರೊ ।
ಬಾರದೇ ಕಾಂತ ಇಲ್ಲೇ ನಿಂತರೆಂತಿರಲೊ ।
ಸಂತರಿಸುವದಕಂತರವೇ ರಘು ॥೨॥

ನೀರಜಜಾಂಡದಿ ಈರೇಳು ಲೋಕಾ ।
ಧಾರಿ ಅಭಿನವಜನಾರ್ದನವಿಠಲಾ ।
ಹಾರೈಸುವೆವೊ ನೀ ಬಾರದಿರಲಯೋಧ್ಯ ।
ಸೇರಲು ಎನಗದೆ ಅರಣ್ಯವೊ ಕರುಣಾ ।
ವಾರಿಧಿ ನೀನು ಬಲುಪರಿ ।
ಚಾರಿವರಿವೆನೊ ಮಹಿಮಾ ಪಾರಧೀರ ಶೂರ ।
ಮಾರನಾಕಾರ ಸುಗುಣಗಂಭೀರ ದಾಶರಥೇ ॥೩॥

--✿✿✿✿✿--

೪೫೫
ಅನುಜ ಲಕ್ಷ್ಮಣನಿಂದ ಶ್ರೀರಾಮವನಿತೆಯ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ಅನುಜ ಲಕ್ಷ್ಮಣನಿಂದ ಶ್ರೀರಾಮ ವನಿತೆಯ ।
ಪುಡುಕುತ ಬಂದಾ ಶ್ರೀ ರಾಮ ॥ಪ॥

ಸ್ಮರತಾ ಮುದಭರಿತನಾದ ಶ್ರೀರಾಮಚಂದ್ರ ಸಿರಿ ತ ।
ನ್ನಗಲಿದ ಕಾಲಕು ಶ್ರೀರಾಮಾ ॥೧॥

ಗುರುತರಿಯದ ಮನುಜನಂತೆ ಶ್ರೀರಾಮ ಇಂಥಾ ।
ಚರಿತ್ರೆಯ ಮಾಡಿ ತೋರಿದ ಶ್ರೀರಾಮ ॥೨॥

ಬರುತ ಬರುತ ತುಂಗಾತೀರ ಶ್ರೀರಾಮ ಅಲ್ಲಿ ।
ವರ ಕಿಷ್ಕಿಂಧ ಗಿರಿ ಸಮೀಪ ಶ್ರೀರಾಮ ॥೩॥

ಇರುವೊಂದು ಪೊಂಪಾ ನಾಮಕ ಶ್ರೀರಾಮಾ ।
ದಿವ್ಯ ಸರೋವರದ ಮ್ಯಾಲೆ ನಿಂದ ಶ್ರೀರಾಮ ॥೪॥

ಪರಿಪರಿಯ ಫಲದ ವೃಕ್ಷ ಶ್ರೀರಾಮಚಂದ್ರ ।
ಸರಸದಿ ಬಕುಳಾ ಮಾಲಿಕಾ ಶ್ರೀ ರಾಮ ॥೫॥

ಎರಳಿ ಪಿಕ ಹಂಸಗಳು ಕಂಡು ಶ್ರೀರಾಮ ತನ್ನ ।
ಅರಸಿಯ ಸ್ಮರಿಸಿದನಾನಂ ರಾಮಾ ॥೬॥

ಹಲವು ವಿಧವಸ್ತು ಗಣ ಕಂಡು ಶ್ರೀರಾಮಾ ತನ್ನ ।
ಲಲನೆಯ ಅವಯವಗಳೆಂದ ಶ್ರೀರಾಮ ॥೭॥

ಭೃಂಗವೆ ಮುಂಗುರುಳು ಎಂದ ಶ್ರೀರಾಮ ಪಿಕ ।
ಸಂಗೀತ ಸುಸ್ವರವೆಂದ ಶ್ರೀರಾಮ ॥೮॥

ನಳಿನ ಕುಸುಮ ನೇತ್ರವೆಂದ ಶ್ರೀರಾಮಚಂದ್ರ ।
ಗಿಳಿ ವಚನವೆ ನುಡಿಗಳೆಂದ ಶ್ರೀರಾಮ ॥೯॥

ಶೃಂಗಾರ ಕಮಲಕೋರಕ ಶ್ರೀರಾಮ ಊರು ।
ಜಂಘಳೆಂದ ಇಂಗಿತದ ಶ್ರೀರಾಮ ॥೧೦॥

ಬಿಡದೆದಳಿಲಂಗ್ಯೆಯೆಂದ ಶ್ರೀರಾಮ ।
ಕದಳಿಗಿಡವೆ ತೊಡೆಗಳೆಂದ ಶ್ರೀರಾಮ ॥೧೧॥

ಬೆಡಗಿನ ಹಂಸಗಮನ ಕೊ ಶ್ರೀರಾಮ ಸೀತೆ ।
ನಡೆವುತ್ತ ಬರುತಿಹ್ಯಳೆಂದು ಶ್ರೀರಾಮಾ ॥೧೨॥

ಇನಿತು ಪರಿಚಿಂತಿಪದು ಕಂಡು ಶ್ರೀರಾಮಚಂದ್ರ ।
ನನು ಸಮ್ಮೈಸಿದನು ಶ್ರೀರಾಮ ॥೧೩॥

ಗುಣಪೂರ್ಣಾ ಸುಖವನದಿ ನೀನು ಶ್ರೀರಾಮ ಮರುಳ ।
ಮನುಜರಂತೆ ಮಾತಾಡುವಿ ಶ್ರೀರಾಮ ॥೧೪॥

ಸುವಿವೇಕಿ ಈ ಚರಿಯ ತೋರಿ ಶ್ರೀರಾಮಚಂದ್ರ ।
ದಿವಿಜಾರಿಗಳ ಕೆಡಿಸಿಬಿಡುವೆ ಶ್ರೀರಾಮ ॥೧೫॥

ಅವಯೋಗಿ ಬಿಟ್ಟಿಯಳೆ ನಿತ್ಯಾ ಶ್ರೀರಾಮ ಅಭಿ ।
ನವಜನಾರ್ದನವಿಠಲ ಶ್ರೀರಾಮ ॥೧೬॥

--✿✿✿✿✿--

೪೬೦
ದೀನೋದ್ಧಾರ ದಯಾಳು
(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ದೀನೋದ್ಧಾರ ದಯಾಳು ।
ನಿನ್ನ ಪದರ್ಥೇನಿಸುತಲಿ ತಂದೆ ।
ನೀನೆಂದೆನುತಲಿ ನಾನು ಸಕಲ ಜಗ ।
ತ್ರಾಣ ಕರೆಯ ಬಂದೆ ॥ಪ॥

ಜಡಿತ ಸುರತ್ನದ ಮುಡಿ ಸ್ವರ್ನಮಯದ ।
ತೊಡಿಗೆ ಪೀತವಸನಾ ।
ಉಡಿಗೆ ಯಲ್ಲೊ ನಾರ್ಮಡಿ ಜಡ ನಿನಗೆ ।
ಲ್ಲೊಡಕೊಂಡಿತೊ ರಾಮಾ ।
ಮಡದಿ ಸೌಭಾಗ್ಯದೊಡತಿ ಇರಲು ।
ನಿನ್ನೊಡ ಹುಟ್ಟಿದನಿಂದಾ ।
ಅಡವಿ ಅಡವಿ ಗಿಡ ಗಿಡ ಚರಿಪುದು ಬಲ್ ।
ಬೆಡಗೊ ದಿವ್ಯಧಾಮಾ ॥೧॥

ಕಾನನಗಿರಿಗುಹ ನಾನಾಮೃಗ ಕ್ಷಿತಿ ।
ಗೇನೊ ಸಕಲಗ್ರಹವೂ ।
ತಾನಾಗಿ ಬಂದು ಏಕಾದಶ ।
ಸ್ಥಾನ ಪೊಂದಿದವೇನೋ ।
ಮೇಣು ಸುರಾಜಧಾನಿ ಅಯೋಧ್ಯಕೆ ।
ಕ್ಷೋಣಿಜ ಗುರುಸೌರಿ ।
ಹೀನ ದ್ವಾದಶ ಜನ್ಮಾಷ್ಟಮಕೆ ।
ತಾನೊದಗಿದವೇನೊ ॥೨॥

ರಾಮ ಅಭಿನವಜನಾರ್ದನವಿಠಲ ।
ಸಾಮಜೇಂದ್ರಪಾಲಾ ।
ಹೇಮಭೂಮಿ ಆ ಗ್ರಾಮದ ಮ್ಯಾಲೆನ್ನ ।
ಪ್ರೇಮ ಪುಟ್ಟದೋನೇಮಾ ।
ಸ್ವಾಮಿತ್ವವು ಸಲ್ಲದು ಎನಗಾಪುರ ।
ಶ್ಯಾಮಾ ಸುಖಶರೀರಾ ।
ಕಾಮಿನಿಯಿಂದ ಬರುವದೊ ಸಕಲ ।
ಗುಣಧಾಮ ಪೂರ್ಣಕಾಮಾ ॥೩॥

--✿✿✿✿✿--

೪೬೧
ನಮೋನಮೋ ರಾಮ

(ಅಭಿನವ ಜನಾರ್ದನ ವಿಠಲ / ಜನಾರ್ದನವಿಠಲ / ೧೭೪೨ - ೧೮೨೨)

ನಮೋ ನಮೋ ರಾಮ ದೇವೋ।
ತ್ತಮಾಂಜನಿಯ ಪ್ರೇಮಾ ।
ಕ್ಷಮಾಪಶ್ರಿತ ಜನಸಮೂಹ ಕಲ್ಪ ।
ದ್ರುಮಾಪರಾಧ ಕ್ಷಮಾಪನಂಕುರು ॥ಪ॥

ಅಜಾತ ನರರೂಪ ರಘುಜಾಮ ।
ಬುಜಾಪ್ತ ಕುಲದೀಪ ।
ಅಜೇಶ ಭುಜಗಾದ್ವಿಜೇಂದ್ರ ಮುಖ ಸುರ ।
ವ್ರಜಾಧಿಪತಿ ಹರೆ ಗಜೇಂದ್ರವರದ ॥೧॥

ಅಯೋಧ್ಯಾಪುರಿ ನಿಲಯನನಿತ್ಯಾ ।
ವಿಯೋಗಿನೀ ಪ್ರೀಯಾ ।
ದಯಾಪ ಅಸ್ಮದ್ಭಯಾಪಹತ ಋಷಿ ।
ಸುಯಾಗರಕ್ಷಕ ತ್ರಯೀಮಯಾತ್ಮಾ ॥೨॥

ಸನಾತನ ಸುಮಿತ್ರಾ ದಶಶಂ ।
ದನಾಖ್ಯ ನೃಪಪುತ್ರಾ ।
ಅನಾದಿ (ಅನಂತ) ಮಂಗಳ ಸುನಾಮಚರಿತಾ ।
ಘನಾಶನಭಿನವಜನಾರ್ದನವಿಠ್ಠಲ ॥೩॥

--✿✿✿✿✿--

೪೬೨
ರಾಮ ರಕ್ಷಿಸೊ ಕೋದಂಡಪಾಣಿ

(ಚೆಲ್ವರಾಮಮೂರ್ತಿ / ....?........../ಕಾಲ. ೧೯ಶ.)

ರಾಮ ರಕ್ಷಿಸೊ ಕೋದಂಡಪಾಣಿ
ರಾಮ ರಕ್ಷಿಸೊ ॥ಪ॥

ಬಾಲತನದೊಲು ಬಹು ಲೀಲೆಯೊಳಗಿದ್ದೆ
ಮೇಲೆ ಯೌವನದಲ್ಲಿ ನಿಮ್ಮ ಪೂಜಿಸದೆ
ಜಾಲಸ್ತ್ರೀಯರ ಕೂಡಾಡಿ ಮರುಳಾದೆ
ಕಾಲನ ಬಾಧೆಗೆ ನಾನು ಗುರಿಯಾದೆ ॥೧॥

ಅಜಮಿಳಗೊಲಿದು ಅಂಬರೀಷನ ಕಾಯ್ದೆ
ಗಜರಾಜ ದ್ರೌಪದಿಯರ ರಕ್ಷಿಸಿದೆ
ಭಜಿಸುವ ಭಕ್ತರ ಪಾಪವ ಹರಿದೆ ಸಿರಿ
ಅಜ ನಿನ್ನ ನೆನೆಯದೆ ನಾ ಮರುಳಾದೆ ॥೨॥

ಪೊಡವಿಗಧಿರವೆಂದು ಕಡಬಡಿ ಎಂದೆ
ದೃಢಭಕ್ತರನು ಪೊರೆದ ಕರುಣಾಸಿಂಧು
ಕಡು ಚೆಲ್ವರಾಮಮೂರುತಿ ಗತಿಯೆಂದು
ಬಿಡದೆ ನಂಬಿದೆ ನಿನ್ನ ಪಾದವ ಬಂಧು ॥೩॥

೪೬೩
ಜಯ ಜಯ ಜಯ ಜಯ ಜಯರಾಮಚಂದ್ರ
(ಖಾದ್ರಿನರಸಿಂಹ / ತಿಪ್ಪಣಾರ್ಯ / ಕಾಲ. ೧೯ಶ.)

ಜಯ ಜಯ ಜಯ ಜಯ
ಜಯರಾಮಚಂದ್ರ ಸಜ್ಜನಪಯೋನಿಧಿಚಂದ್ರ ||ಪ||

ಜಯರಾಘವೇಂದ್ರ ವಿಲಸತ್ ಸುಗುಣಸಾಂದ್ರ ||ಅ.ಪ.||

ಚತುರಾಸ್ಯನುತಿಪಾತ್ರ ಚಾರುನೀರಗಾತ್ರ
ಶತಪತ್ರದಳನೇತ್ರ ಸತ್ಯಚಾರಿತ್ರ
ಶತಮನ್ಯು ಸುತಮಿತ್ರ ಸಾರತರ ಸುಪವಿತ್ರ
ಕ್ರತುಪಾಲ ಧೃತಸೂತ್ರ ಕಮಲಾಕಳತ್ರ ||೧||

ಸನಕಾದಿ ಮುನಿಪಕ್ಷ ವಿಪ್ರಸಂರಕ್ಷ
ದನುಜಗಜ ಹಯಟ್ಯಕ್ಷ ಧರ್ಮಕ್ಷಣದಕ್ಷ
ಕನಕಾಕ್ಷಮದ ಶೀಕ್ಷ ಕರುಣಾಕಟಾಕ್ಷ ||೨||

ಧೀರ ಸನ್ನುತ ನಾಮಧೇಯ ಘನಸಂಗ್ರಾಮ
ಧೀರ ದೇವಲಲಾಮ ದಿತಿಜಾಬ್ಜಸೋಮ
ಭೂರಿ ಸುಕವಿಸ್ತೋಮ ಪೋಷ ಭಕ್ತಪ್ರೇಮ
ಕಾರುಣ್ಯಸೀಮ ಶ್ರೀ ಖಾದ್ರಿಪುರಿಧಾಮ ||೩||

--✿✿✿✿✿--

೪೬೪
ಬಾರೋ ಮನಕೆ ರಾಮ ಬೇಗ
(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೬)

ಬಾರೋ ಮನಕೆ ರಾಮಬೇಗ
ಬರದಿರುವವರೆ ಈಗ ||ಪ||

ಬಾರಿಬಾರಿಗು ನಿನ್ನ ಭಜನೆಯ ಮಾಡುತ
ಸೇರಿಹೆ ಪದವ ಬಂದುತೋರಿಸೋ ಮುದವ ॥೧॥

ಆರುಮಂದಿಯ ಕೂಡೆ ಹೋರಾಡಿ ಬಳಲಿದೆ
ಯಾರೀಗ ಬಿಡಿಸುವರಿಲ್ಲ ನಿನ್ಹೊರತೊಬ್ಬರಿಲ್ಲ ॥೨॥

ಎಂಟು ಆನೆಗಳು ಬೆನ್ನಟ್ಟಿಬಾಧಿಸುತಿವೆ
ನೆಂಟರಿಷ್ಟರು ಬಿಡಿಪರಿಲ್ಲ ನಿನ್ಹೊರತೊಬ್ಬರಿಲ್ಲ ॥೩॥

ಸುರಗಿರಿಯೊಳು ಸುಮ್ಮನಿರುತಿರೆ ನಮ್ಮಂಥ
ಪರದೇಶಿಗಳಿಗಾರು ಗತಿಯೋ ಮುಂದೆಮಗೇನು ಗತಿಯೊ ॥೪॥

--✿✿✿✿✿--

೪೬೫
ಶ್ರೀ ರಾಮಂ ಭಜೇ ರಘುರಾಮಂ ಭಜೇ
(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಶ್ರೀರಾಮಂ ಭಜೇ । ರಘುರಾಮಂ ಭಜೇ ।
ಭಜರೇ ಮಾನಸ ರಾಮಂ ॥ಪ॥

ಸುಂದರರೂಪಂ । ಸುಗುಣಕಲಾಪಂ ।
ಬೃಂದಾರಕಪರಿಪಾಲಂ ।
ಚಂದನಚರ್ಚಿತ । ಚಾರುಶರೀರಂ ।
ಬಂಧುರ ದುರಿತವಿದಾರಂ ॥೧॥

ಕರಧೃತಚಾಪಂ।ಕಮನೀಯರೂಪಂ।
ಖರಮುಖದೈತ್ಯವಿದಾರಂ ।
ನರವರಂ ವೇಷಂ । ನತಜನಪೋಷಂ ।
ಪರಮಾನಂದವಿಲಾಸಂ ॥೨॥

ಧರಣೀಲೀಲಂ । ಧರಣೀ ಪಾಲಂ ।
ನಿರುಪಮ ನಿತ್ಯನಿರಾಕಾರಂ ।
ಸುರಗಿರಿನಿಲಯಂ । ಸುಮನಸಗೇಯಂ ।
ಸಿರಿವರ ವೇಂಕಟರೂಪಂ ॥೩॥

--✿✿✿✿✿--

೪೬೬

ರಾಮ ಪಾಲಯ ಶ್ರೀರಾಮ ಸದಯಾ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೬)

ರಾಮ ಪಾಲಯ । ಶ್ರೀರಾಮ ಸದಯಾ ॥ಪ॥

ದಶರಥ ಬಾಲ । ದಶಮುಖಾ ಕಾಲಾ
ಕುಶಿಕತನಯ ಮುಖ । ಪಾಲ ಸುಕಲಾ ॥೧॥

ಕರಧೃತ ಚಾಪ । ಕಮನೀಯರೂಪಾ ।
ಪರಿವೃತಪುರಹರ ಚಾಪ । ಸುಪಾ ॥೨॥

ಸುರಗಿರಿವಾಸಾ । ಸುರಗಣ ಪೋಷಾ ।
ಪರಮಪಾವನ ವೇಂಕಟೇಶ । ಸರಸಾ ॥೩॥

--✿✿✿✿✿--

೪೬೭

ರಾಮ ರಾಕೇಂದು ಸುಂದರಾ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೬)

ರಾಮರಾಕೇಂದುಸುಂದರಾ । ಶ್ರೀ ರಮಾರಮಣ ॥ಪ॥

ರಾಮ ರಾಕೇಂದುಸುಂರರಾ । ರಾಜಶೇಖರ ನಳಿನನಯನ ।
ರಾಜಸೇವ್ಯ ಚರಣಯುಗಳ । ರಾಕಮನುಜ ರಾಜತೇಜ ॥ಅ.ಪ.॥

ನಿನ್ನ ದರ್ಶನವನ್ನು ಬಯಸುತಾ । ಪಗಲಿರುಳು ನಾನು ।
ನಿನ್ನ ನಾಮಗಳನು ಪಾಡುತಾ । ಮುನ್ನಗೈದ ಸುಕೃತ ಫಲಗ ।
ಳಿನ್ನು ಸಫಲವಾಯಿತೆಂದು । ಧನ್ಯನಾದೆ ತವಪದಾಬ್ಜ ।
ವನ್ನು ನೋಡಿಂ ಪರಮ ಪುರುಷ ॥೧॥

ಧರೆಯ ಭಾರವನಿಳುಹಲೋಸುಗ ।
ನೀ ಮನುಜನಾಗಿ । ಬರುವನೆಂದು ಕಾಯ್ದುಂದೆನಾ ।
ದೊರಕಿತೆಂದು ಪರಮಭಾಗ್ಯ । ವರದೆ ಶ್ರುತಿ ಸಮೂಹವನಿಶ ।
ವರಿಸಿ ಕಾಣಲರಿಯದಮಳ । ಚರಿತ ನಿನ್ನ ಕಂಡೆನೀಗ ॥೨॥

ನಿತ್ಯತೃಪ್ತ ನಿಗಮಗೋಚರ । ನಿರ್ವಿಕಾರ । ಪ್ರತ್ಯ
ಗಾತ್ಮನೀ ಚರಾಚರ । ವಸ್ತುಗಳಲಿ ಬೆರೆದು ಚೇತನವಿತ್ತು ।
ತೋರಿ-ತೋರದಂತೆ ನಿತ್ಯ ಸಾಕ್ಷಿಯೆನಿಸಿ ।
ಜಗಕೆ ಕರ್ತೃವಾದ ಸುರಗಿರೀಶ ॥೩॥

--✿✿✿✿✿--

೪೬೮
ಶ್ರೀರಾಮಚಂದ್ರ ಬರುವ ನಾರೀಮಣಿಯೆ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಶ್ರೀರಾಮಚಂದ್ರ ಬರುವ । ನಾರೀಮಣಿಯೆ ।
ಬಾರೆ ನೋಡುವಾ ॥ಪ॥

ವಾರಿಜದಳನೇತ್ರ ಸಾಕು । ಮಾರವೀರ ।
ಧೀರನಾಗಿಹ ॥ಅ.ಪ॥

ದಶರಥ ಸುಕುಮಾರನಂತೆ । ಕುಶಿಕಜನೊಡನೈತಹನಂತೆ
ಅಸುರೆ ತಾಟಕಿ ಗೆಲಿದವನಂತೆ । ಋಷಿಯ ದುಃಖವ ಕಾಯ್ದನಂತೆ ॥೧॥

ಅನುಜ ಲಕ್ಷಣನಿರುವನಂತೆ । ಜನಕನ ಮನೆಗೈದುವರಂತೆ
ಧನುವವೀತನು ನೋಳ್ಪನಂತೆ । ಘನತರಸಾಹಸಿಗರಂತೆ ॥೨॥

ಸಾಸಿರರವಿಭಾಸನಂತೆ । ದೋಷರಹಿತ ಚರಿತನಂತೆ
ಭಾಸುರಾಂಗನಾದ ಶ್ರೀ । ನಿವಾಸನಂತೆ ವರದನಂತೆ ॥೩॥

--✿✿✿✿✿--

೪೬೯
ಶ್ರೀರಘುವರ ಕರುಣಾಕರ ಸಲಹೈ
(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಶ್ರೀ ರಘುವರ ಕರುಣಾಕರ ಸಲಹೈ ॥
ನೀರಜಪತ್ರನೇತ್ರ । ಸನಕ ನಾರದವಿನುತಾ ॥ಪ॥

ಆನಂದ ಸಚ್ಚಿದಾನಂದ ರೂಪ । ಧ್ಯಾನಗಮ್ಯನೇ ॥
ಮೌನೀಂದ್ರವಂದ್ಯಪಾದ । ದುರಿತಕಾನನದಹನಾ ॥೧॥

ಲೀಲಾಮನುಷ್ಯದೇಹ ಮೌನಿ । ಜಾಲ ಪಾಲಕಾ ॥
ಬಾಲೇಂದು ಮೌಳಿವಂದ್ಯ । ಭಜಕಪಾಲನಚತುರಾ ॥೨॥

"ದೇವಾದ್ರಿವಾಸ" ದೀನಘೋಷ । ರಾವಣಾಂತಕಾ ।
ದೇವಾದಿದೇವಸೇವ್ಯ । ಚರಣಪಾವನಚರಿತಾ ॥೩॥

--✿✿✿✿✿--

೪೭೦
ರಾಮಚಂದ್ರಾ ರಾಜಕುಲೇಂದ್ರ
(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ರಾಮಚಂದ್ರಾ । ರಾಜಕುಲೇಂದ್ರ ॥ಪ॥

ಭ್ರಾಮಕಗೊಳಿಸದಿ । ರ್ಷಸದ್ಗುಣ ಸಾಂದ್ರಾ ॥ಅ.ಪ.॥

ಸಂಸಾರಿಯೆಂಬೆ ನೀ । ಸತ್ಯವೀ ನುಡಿಯು ।
ಸಂಸಾರವೀಕೀಲು । ಲೋಕಕ್ಕೆ ಧಣಿಯು ॥೧॥

ಗೃಹವೆಮೂರ್ಲೋಕವು ಗೃಹಿಣಿಯೆ ಮಾಯೆ
ಅಹಹ ನಿನ್ನಾಜ್ಞೆಯೊ । ಳೈ ಸಹಿಸಿರ್ಪಳೆಲ್ಲಾ ॥೨॥

ಪುರುಷವಾಕ್ಯಗಳೆಲ್ಲ । ಹರಿನೀನೆ ನಿಜವೂ
ಅರಿಯ ಸ್ತ್ರೀವಾಚ್ಯವೆಲ್ಲವು ಸೀತೆದಿಟವೂ ॥೩॥

ಅದರಿಂದ ನೀನೀರ್ವ । ರಲ್ಲದೆ ಬೇರೇ
ಪದಿನಾಲ್ಕು ಲೋಕದಿ । ಬೇರಿಲ್ಲತೋರೇ ॥೪॥

ಸಕಲಚರಾಚರಾ । ತ್ಮಕ ಸರ್ವಸಾಕ್ಷೀ
ಅಕಳಂಕಚರಿತ ಪಾ। ಲಿಸೋ ವಿಶ್ವಕುಕ್ಷೀ ॥೫॥

--✿✿✿✿✿--

೪೭೧
ರಾಮಹರೇ ರಘುರಾಮಹರೇ ತವ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ರಾಮಹರೇ ರಘುರಾಮಹರೇ ತವ ।
ನಾಮ ವದಾಮಿ ಸದಾ ನೃಹರೇ ॥ಪ॥

ಅಗಣಿತಗುಣಮರಮೇಯಮಾಂದ್ಯಂ ।
ಸಕಲ ಜಗಸ್ಥಿತಿ ಸಂಯಮಾದಿಹೇತುಂ ।
ಉಪರಮಮಪರಂ ಪರಾತ್ಮಭೂತಂ ।
ಸತತಮಹಂ ರಘುನಂದನಂ ಪ್ರಪದ್ಯೇ ॥೧॥

ನಿರವಧಿ ಸುಖಮಿಂದೀವರಾಕಟಾಕ್ಷ ।
ಕ್ಷಪಿತ ಸುರೇಂದ್ರ ಚತುರ ಖಾದಿ ದುಃಖಂ ।
ನರವರಮನಿಶಾನತೋಸ್ಮಿ ರಾಮಂ
ವರದಮಹಂ ಶಿರಚಾಪ ಬಾಣಪಾಣಿಂ ॥೨॥

ತ್ರಿಭುವನ ಕಮನೀಯರೂಪಮಾದ್ಯಂ ।
ರವಿಶರಭಾಸುರಮೀಪ್ಸಿತ ಪ್ರದಾನಂ ।
ಸುಶರಣಮನಿಶಂ ಸುರಾಗ್ರಮೂಲೇ ।
ಕೃತನಿಲಯಂ ರಘುನಂದನಂ ಪ್ರಪದ್ಯೇ ॥೩॥

--✿✿✿✿✿--

೪೭೨
ಜಯರಾಮ ಜಿತಕಾಮ ಜಗದೀಶ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೭)

ಜಯರಾಮ । ಜಿತಕಾಮ । ಜಗದೀಶ ಪರಂಧಾಮ ॥ಪ॥

ಲೀಲಾಮಾನುಷ ವೇಷ । ಲಾಲಿತ ಸನ್ಮೃದುಭಾಷ ॥೧॥

ಖರಮುಖ ದೈತ್ಯವಿಹಾರ । ದುರಿತಾರಣ್ಯ ಕುಠಾರ ॥೨॥

"ಅಮರಾಚಲ" ನಿಜಧಾಮ । ಲಾಲಿತಜನಸುಪ್ರೇಮ ॥೩॥

--✿✿✿✿✿--

೪೭೩
ನಿನ್ನವಿನಾ ಅನ್ಯರಕಾಣೆ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೭)

ನಿನ್ನವಿನಾ ಅನ್ಯರ ಕಾಣೆ । ನಾ ನೀರಜಾನಯನ ॥
ಇನಕುಲಪತಿ ಸಕಲಲೋಕ । ಜನಕ ದಾಯಾವನದಿ ರಾಮ ॥ ॥ಪ॥

ಕೊಡುವರೊಳಗೆ ನೀನೆಯೆಂದು ಬಡವನಾದ ನಾನು ಬಂದು
ಉಡಿಯನೊಡ್ಡಿ ಬೇಡುವೆನೀಗ । ದೃಢದಿ ವರವ ಪಾಲಿಸು ಬೇಗ ॥೧॥

ತನುಮನ ಧನ ವನಿತೆಯಾಸೆ । ಎಮಗದೇಕೆ ನಿನ್ನಪಾದ
ವನಜ ಸೇವೆಯೊಂದೇಸಾಕು । ಚಿನುಮಯಾತ್ಮ ಪರಮಪುರುಷ ॥೨॥

ನಿನ್ನ ನಾಮಗಳನೆ ಪಾಡಿ । ನಿನ್ನದಾಸರುಗಳ ಕೂಡಿ
ನಿನ್ನ ಸೇವೆ ಮಾಡಿಮಾಡಿ ।ಧನ್ಯನಾದೆ ಸುರಗಿರೀಶ ॥೩॥

--✿✿✿✿✿--

೪೭೪

ಪಾಹಿ ರಾಘವೇಶಾ ಹರೇರಾಮ

(ಕೋಸಲಪುರ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಪಾಹಿ ರಾಘವೇಶಾ । ಹರೇ ರಾಮ । ಪಾಹಿ ರಾಘವೇಶಾ ॥ಪ॥

ಬಹುಗುಣಕಲಾಪಾ । ಕುಶಾಗ್ರ ಚಾಪ । ಸುಪ್ರತಾಪ ।
ಚತುರ್ಮುಖ ॥ ಸೇವ್ಯಯೋಗಿವರ. ಭಾವ್ಯ ಪದ್ಮಮುಖ ।
ದಿವ್ಯ ಲಕ್ಷ್ಮಣಾಂಚಿತ ಪದಯುಗಳಾ ॥೧॥

ಕಂಜದಳನಿಭಾಕ್ಷ । ಸುಜನರಕ್ಷ । ದನುಜಶೀಕ್ಷ ।
ಪ್ರವೀಣ ಸುರಂಜನಾತಿಮೃದು । ಮಂಜುಭಾಷ ನಿ ।
ರಂಜನಾಗಣಿತ । ನಿರುಪಮಶೀಲಾ ॥೨॥

ದಂತಿರಾಜವರದಾ । ರಾತ್ರಿ ಚಿರದಾ । ವಾಗ್ನಿ ಶರದಾ
ಪ್ರಜಾಶ್ರೀ । ಕಾಂತ ಯೋಗಿವರ । ಚಿಂತನೀಯನೆ ವೇ ।
ದಾಂತವೇದ್ಯ ಕೋಸಲಪುರನಿಲಯ । ॥೩॥

--✿✿✿✿✿--

೪೭೫

ಶ್ರೀರಾಮಂ ಭಜರೇ ಮಾನಸ

(ಕೋಸಲಪುರ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಶ್ರೀರಾಮಂ ಭಜರೇ । ಮಾನಸ । ಶ್ರೀರಾಮಂ ಭಜರೇ॥ಪ॥

ನಾರಾಯಣಮಾದ್ಯಂತ ವಿರಹಿತಂ
ಪಾರರಕಾಂತಚರಿತಂ । ಮಾನಸ ॥೧॥

ನಿತ್ಯಾನಂದಂ ಸತ್ಯಮನಂತಂ
ಪ್ರತ್ಯಗ್ರೂಪಮಜಂ । ಮಾನಸ ॥೨॥

ಸೃಷ್ಟಿಸ್ಥಿತಿಲಯ ಕಾರಣಕರ್ತಾರಂ
ಕಷ್ಟಕಲುಷಹರಣಂ । ಮಾನಸ ॥೩॥

ತ್ರಿಗಮಾತೀತಂ ತ್ರಿಜಗದ್ಭರಿತಂ
ನಿಗಮಾಗಮವೇದ್ಯಂ । ಮಾನಸ ॥೪॥

ಮಾಯಾಮಾನುಷ ಲೀಲಾಕಾರಂ
ಮಾಯಾಗುಣರಹಿತಂ । ಮಾನಸ ॥೫॥

--✿✿✿✿✿--

೪೭೬
ಜಯ ಜಯ ರವಿಕುಲಸೋಮ

(ಶಿವರಾಮ / ಶಿವರಾಮದಾಸ / ೧೮೯೩ - ?)

ಜಯಜಯರವಿಕುಲ ಸೋಮ ಜಯಸಾರ್ವಭೌಮ ॥ಪ॥

ಜಯಜಯ ಸೀತಾನಾಥ ಜಯ ಲಕ್ಷ್ಮಣಸೇವಿತ ॥ಅ.ಪ॥

ಸದಮಲಚರಿತಸಕಲಾಶ್ರಿತ ಪಾರಿಜಾತ ।
ವಿಧಿಸುರಮುನಿ ಮುಖವಿನುತ ವೀರಕೋಟಿ ಸಂಸೇವಿತ ॥೧॥

ಕರಧೃತಶರಚಾಪ ಶ್ರೀಕರ ಸರಸೀರುಹನಯನ ।
ಪರಮಗುಣಾಭರಣ ಶ್ರೀವರದಸದಾನಂದಮಯ ॥೨॥

ಭವಸಾಗರತರಣ ಕೋಮಲತರಶುಭಕರವದನ ।
ಕವಿಜನಸೇವಿತಚರಣ ಶಿವರಾಮದಾಸಾವನ ॥೩॥

--✿✿✿✿✿--

೪೭೭
ರಾಮಸದಾ ಪೊರೆಯೈ ಶ್ರೀರಘು
(ಶಿವರಾಮ / ಶಿವರಾಮದಾಸ / ೧೮೯೩ - ?)

ರಾಮಸದಾ ಪೊರೆಯೈ, ಶ್ರೀರಘು ॥ಪ॥

ರಾಮಾಸದ್ಗುಣಧಮಾ ಮುನಿಜನಕಾಮಾ ಶುಭನಾಮಾ ॥ಅ.ಪ॥

ದಾನವಹರಣಾ, ಜಾನಕಿರಮಣಾ ।
ದೀನಜನೋದ್ಧರಣಾ, ಸುಗುಣಾ ॥ರಾಮ॥ ॥೧॥

ಪರಮಪ್ರಕಾಶಾ, ಭವ್ಯವಿಲಾಸಾ ।
ಭದ್ರಗಿರಿನಿವಾಸಾ, ಶ್ರೀಶಾ ॥ರಾಮ॥ ॥೨॥

ಶೀಲಸುಧೀಜನ, ಪಾಲಸುಕೀರ್ತಿವಿ ।
ಶಾಲ ಸದಾನಂದ, ಲೀಲಾ ॥ರಾಮ॥ ॥೩॥

--✿✿✿✿✿--

೪೭೮
ಕೋದಂಡರಾಮ ಕೋದಂಡರಾಮ
(ಶಿವರಾಮ / ಶಿವರಾಮದಾಸ / ೧೮೯೩ - ?)

ಕೋದಂಡರಾಮ, ಕೋದಂಡರಾಮ,
ವೇದಂಡಭಯಹರ, ಕೋದಂಡರಾಮ ॥ಪ॥

ಜಯರಘುವೀರ, ಜಗದೇಕಶೂರ,
ಭಯದನಿವಾರ, ಭಕ್ತಮಂದಾರ ॥೧॥

ದಶರಥಪುತ್ರ, ಧನ್ಯಚರಿತ್ರ
ಪಶುಪತಿಮಿತ್ರ,ಪರಮಪವಿತ್ರ ॥೨॥

ಭವ್ಯವಿಲಾಸ, ಭಕ್ತಸಂಕಾಶ,
ಭವಭಯಶೋಷ, ಭದ್ರಾದ್ರಿವಾಸ ॥೩॥

೪೭೯

ತಾರಕಮಂತ್ರವ ಕೋರಿಭಜಿಸುವರು

(ಶಿವರಾಮ / ಶಿವರಾಮದಾಸ / ೧೮೯೩ - ?)

ತಾರಕಮಂತ್ರವ ಕೋರಿಭಜಿಸುವರು, ಧನ್ಯರಾಗುವರು ಕೇಳಣ್ಣಾ ॥ಪ॥

ಮೀರಿದಕಾಲನದೂತರ ಪಾಲಿಗೆ, ಮೃತ್ಯುವಿದೆನುತ ತಿಳಿಯಣ್ಣಾ ॥ಅ.ಪ॥

ಇಲ್ಲಿಗಲ್ಲಿಗೆ ತಿರುಗಾಡುತ ಕ್ಷೇತ್ರಗಳೆಲ್ಲ ನೋಡಿ ಸುಖವೇನಣ್ಣಾ?
ಚಿಲ್ಲರೆಮಾರ್ಗಗಳೆಲ್ಲವ ಬಿಡುತಲಿ ಶ್ರೀರಘುರಾಮನ ಭಜಿಸಣ್ಣಾ ॥೧॥

ಎಷ್ಟುಶಾಸ್ತ್ರಗಳನೋದಿ ನೋಡಿದರು, ಏಕೋರಾಮನು ತಿಳಿಯಣ್ಣಾ
ಅಷ್ಟಿಷ್ಟೆನ್ನುವದೇಕೆ ಚರಾಚರ, ಸೃಷ್ಟಿಗೆ ರಾಮನೆ ಗತಿಯಣ್ಣಾ ॥೨॥

ಕರ್ಮಬಂಧಗಳಕಳೆಯುತನಿರ್ಮಲನಾಗುವಮರ್ಮವತಿಳಿಯಣ್ಣಾ
ಧರ್ಮಮಾರ್ಗದಿಂಭದ್ರಾದ್ರೀಶನ, ತತ್ವಾಮೃತವನು ಸವಿಯಣ್ಣಾ ॥೩॥

--✿✿✿✿✿--

೪೮೦

ಭಜರೇ ಶ್ರೀರಾಮಂ ಹೇ ಮಾನಸ

(ಶಿವರಾಮ / ಶಿವರಾಮದಾಸ / ೧೮೯೩ - ?)

ಭಜರೇ ಶ್ರೀರಾಮಂ, ಹೇ ಮಾನಸ, ಭಜರೇ ರಘುರಾಮಂ ॥ಪ॥

ಭಜರಘುರಾಮಂ ಭಂಡನಭೀಮಂ,
ರಜನಿಚತಾಘದಿ ರಾಮಂ ರಾಮಂ ॥ಅ.ಪ॥

ವನರುಹನಯನಂ, ಕನದಹಿಶಯನಂ ।
ಮುನಿಜನಕೋಟಿಸಮಾನಂಮಾನಂ ॥೧॥

ತಾರಕನಾಮಂ, ದಶರಥರಾಮಂ ।
ಚಾರುಭದ್ರಾದ್ರಿಸಂಚಾರಂಧೀರಂ ॥೨॥

ಸೀತಾರಾಮಂ, ಚಿನ್ಮಯಧಾಮಂ ।
ಶ್ರೀತುಲಸೀದಳ ಶ್ರೀಕರಧಾಮಂ ॥೩॥

ಶ್ಯಾಮಲಗಾತ್ರಂ, ಸತ್ಯಚರಿತ್ರಂ ।
ರಾಮದಾಸ ಹೃದ್ರಾಜೀವಮಿತ್ರಂ ॥೪॥

--✿✿✿✿✿--

೪೮೧
ಶ್ರೀರಾಮ ಶ್ರೀರಾಮ ಶ್ರೀ ಸೀತಾರಾಮ
(ಶಿವರಾಮ / ಶಿವರಾಮದಾಸ / ೧೮೯೩ – ?)

ಶ್ರೀರಾಮ! ಶ್ರೀರಾಮಾ!! ಶ್ರೀ ಸೀತಾರಾಮ!!!॥ ಪ॥

ಪಾಹಿ, ಶ್ರೀರಾಮ, ಶ್ರೀರಾಮ, ಶ್ರೀ ಸೀತಾರಾಮ ॥ಅ.ಪ॥

ರಾಮಸತ್ಯಗುಣಧಾಮ, ಭೂಮಿಪತಿ ಸೋಮ, ಮುನಿಜನಕಾಮ,
ದನುಜಕುಲಭೀಮ, ಸಾರತರನೇಮ, ತಾರಕಸುನಾಮ,
ಜಾನಕೀರಾಮ ನಮಸ್ತೇ ॥೧॥

ಕರಕಂಕಣಧರ, ಕರಿಭಯಾಪಹರ, ಶಂಖಚಕ್ರಧರ,
ಜನ್ಮ ಕರ್ಮಹರ, ನಾರದಗುರುವರ, ನತಜನಶುಭಕರ,
ಧೀರಸಜ್ಜನಾಧಾರ ನಮಸ್ತೇ ॥೨॥

ಅಂಗಜಜನಕಸು, ಮಂಗಳಾಂಗಭವಭಂಗ ಸಾಧುಜನಸಂಗ
ದುರಿತನಿಸ್ಸಂಗಖಗೇಶತುರಂಗ ನಿರ್ಮಲೋತ್ತುಂಗ
ಗುಣಾಕರರಂಗ ನಮಸ್ತೇ ॥೩॥

ಧರಣೀಲೀಲಂ । ಧರಣೀ ಪಾಲಂ ।
ನಿರುಪಮ ನಿತ್ಯನಿರಾಕಾರಂ ।
ಸುರಗಿರಿನಿಲಯಂ । ಸುಮನಸಗೇಯಂ ।
ಸಿರಿವರ ವೇಂಕಟರೂಪಂ ॥೩॥

--✿✿✿✿✿--

೪೬೬

ರಾಮ ಪಾಲಯ ಶ್ರೀರಾಮ ಸದಯಾ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ರಾಮ ಪಾಲಯ । ಶ್ರೀರಾಮ ಸದಯಾ ॥ಪ॥

ದಶರಥ ಬಾಲ । ದಶಮುಖಾ ಕಾಲಾ
ಕುಶಿಕತನಯ ಮುಖ । ಪಾಲ ಸುಕಲಾ ॥೧॥

ಕರಧೃತ ಚಾಪ । ಕಮನೀಯರೂಪಾ ।
ಪರಿವೃತಪುರಹರ ಚಾಪ । ಸುಪಾ ॥೨॥

ಸುರಗಿರಿವಾಸಾ । ಸುರಗಣ ಪೋಷಾ ।
ಪರಮಪಾವನ ವೇಂಕಟೇಶ । ಸರಸಾ ॥೩॥

--✿✿✿✿✿--

೪೬೭

ರಾಮ ರಾಕೇಂದು ಸುಂದರಾ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ರಾಮರಾಕೇಂದುಸುಂದರಾ । ಶ್ರೀ ರಮಾರಮಣ ॥ಪ॥

ರಾಮ ರಾಕೇಂದುಸುಂರರಾ । ರಾಜಶೇಖರ ನಳಿನನಯನ ।
ರಾಜಸೇವ್ಯ ಚರಣಯುಗಳ । ರಾಕಮನುಜ ರಾಜತೇಜ ॥ಅ.ಪ.॥

ನಿನ್ನ ದರ್ಶನವನ್ನು ಬಯಸುತಾ । ಪಗಲಿರುಳು ನಾನು ।
ನಿನ್ನ ನಾಮಗಳನು ಪಾಡುತಾ । ಮುನ್ನಗೈದ ಸುಕೃತ ಫಲಗ ।
ಳಿನ್ನು ಸಫಲವಾಯಿತೆಂದು । ಧನ್ಯನಾದೆ ತವಪದಾಬ್ಜ ।
ವನ್ನು ನೋಡಿಂ ಪರಮ ಪುರುಷ ॥೧॥

ಧರೆಯ ಭಾರವನಿಳುಹಲೋಸುಗ ।
ನೀ ಮುನುಜನಾಗಿ । ಬರುವನೆಂದು ಕಾಯ್ದುಂದೆನಾ ।
ದೊರಕಿತೆಂದು ಪರಮಭಾಗ್ಯ । ವರದೆ ಶ್ರುತಿ ಸಮೂಹವನಿಶ ।
ವರಿಸಿ ಕಾಣಲರಿಯದಮಳ । ಚರಿತ ನಿನ್ನ ಕಂಡೆನೀಗ ॥೨॥

ನಿತ್ಯತೃಪ್ತ ನಿಗಮಗೋಚರ । ನಿರ್ವಿಕಾರ । ಪ್ರತ್ಯ
ಗಾತ್ಮನೀ ಚರಾಚರ । ವಸ್ತುಗಳಲಿ ಬೆರೆದು ಚೇತನವಿತ್ತು ।
ತೋರಿ–ತೋರದಂತೆ ನಿತ್ಯ ಸಾಕ್ಷಿಯೆನಿಸಿ ।
ಜಗಕೆ ಕರ್ತೃವಾದ ಸುರಗಿರೀಶ ॥೩॥

--✿✿✿✿✿--

೪೬೮
ಶ್ರೀರಾಮಚಂದ್ರ ಬರುವ ನಾರೀಮಣಿಯೆ
(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ – ೧೯೨೬)

ಶ್ರೀರಾಮಚಂದ್ರ ಬರುವ । ನಾರೀಮಣಿಯೆ ।
ಬಾರೆ ನೋಡುವಾ ॥ಪ॥

ವಾರಿಜದಳನೇತ್ರ ಸಾಕು । ಮಾರವೀರ ।
ಧೀರನಾಗಿಹ ॥ಅ.ಪ॥

ದಶರಥ ಸುಕುಮಾರನಂತೆ । ಕುಶಿಕಜನೊಡನೈತಹನಂತೆ
ಅಸುರೆ ತಾಟಕಿ ಗೆಲಿದವನಂತೆ । ಋಷಿಯ ದುಃಖವ ಕಾಯ್ದನಂತೆ ॥೧॥

ಅನುಜ ಲಕ್ಷ್ಮಣನಿರುವನಂತೆ । ಜನಕನ ಮನೆಗೈದುವರಂತೆ
ಧನುವವೀತನು ನೋಳ್ಪನಂತೆ । ಘನತರಸಾಹಸಿಗರಂತೆ ॥೨॥

ಸಾಸಿರರವಿಭಾಸನಂತೆ । ದೋಷರಹಿತ ಚರಿತನಂತೆ
ಭಾಸುರಾಂಗನಾದ ಶ್ರೀ । ನಿವಾಸನಂತೆ ವರದನಂತೆ ॥೩॥

--✿✿✿✿✿--

೪೬೯
ಶ್ರೀರಘುವರ ಕರುಣಾಕರ ಸಲಹೈ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಶ್ರೀ ರಘುವರ ಕರುಣಾಕರ ಸಲಹೈ ॥
ನೀರಜಪತ್ರನೇತ್ರ । ಸನಕ ನಾರದವಿನುತಾ ॥ಪ॥

ಆನಂದ ಸಚ್ಚಿದಾನಂದ ರೂಪ । ಧ್ಯಾನಗಮ್ಯನೇ ॥
ಮೌನೀಂದ್ರವಂದ್ಯಪಾದ । ದುರಿತಕಾನನದಹನಾ ॥೧॥

ಲೀಲಾಮನುಷ್ಯದೇಹ ಮೌನಿ । ಜಾಲ ಪಾಲಕಾ ॥
ಬಾಲೇಂದು ಮೌಳಿವಂದ್ಯ । ಭಜಕಪಾಲನಚತುರಾ ॥೨॥

"ದೇವಾದ್ರಿವಾಸ" ದೀನಪೋಷ । ರಾವಣಾಂತಕಾ ।
ದೇವಾದಿದೇವಸೇವ್ಯ । ಚರಣಪಾವನಚರಿತಾ ॥೩॥

--✿✿✿✿✿--

೪೭೦
ರಾಮಚಂದ್ರಾ ರಾಜಕುಲೇಂದ್ರ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ರಾಮಚಂದ್ರಾ । ರಾಜಕುಲೇಂದ್ರ ॥ಪ॥

ಭ್ರಾಮಕಗೊಳಿಸದಿ । ಷಡ್ಗುಣ ಸಾಂದ್ರಾ ॥ಅ.ಪ.॥

ಸಂಸಾರಿಯೆಂಬೆ ನೀ । ಸತ್ಯವೀ ನುಡಿಯು ।
ಸಂಸಾರವೀಕೀಳು । ಲೋಕಕ್ಕೆ ಧಣಿಯು ॥೧॥

ಗೃಹವೆಮೂರ್ಲೋಕವು ಗೃಹಿಣಿಯೆ ಮಾಯೆ
ಅಹಹ ನಿನ್ನಾಜ್ಞೆಯೊ । ಳೈ ಸಹಿಸಿರ್ಪಳೆಲ್ಲಾ ॥೨॥

ಪುರುಷವಾಕ್ಯಗಳೆಲ್ಲ । ಹರಿನೀನೆ ನಿಜವೂ
ಅರಿಯ ಸ್ತ್ರೀವಾಚ್ಯವೆಲ್ಲವು ಸೀತೆದಿಟವೂ ॥೩॥

ಅದರಿಂದ ನೀನೀರ್ವ । ರಲ್ಲದೆ ಬೇರೇ
ಪದಿನಾಲ್ಕು ಲೋಕದಿ । ಬೇರಿಲ್ಲತೋರೇ ॥೪॥

ಸಕಲಚರಾಚರಾ । ತ್ಮಕ ಸರ್ವಸಾಕ್ಷೀ
ಅಕಳಂಕಚರಿತ ಪಾ। ಲಿಸೋ ವಿಶ್ವಕುಕ್ಷೀ ॥೫॥

--✿✿✿✿✿--

೪೭೧
ರಾಮಹರೇ ರಘುರಾಮಹರೇ ತವ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೩)

ರಾಮಹರೇ ರಘುರಾಮಹರೇ ತವ ।
ನಾಮ ವದಾಮಿ ಸದಾ ನೃಹರೇ ॥ಪ॥

ಅಗಣಿತಗುಣಮರಮೇಯಮಾಂದ್ಯಂ ।
ಸಕಲ ಜಗಸ್ಥಿತಿ ಸಂಯಮಾದಿಹೇತುಂ ।
ಉಪರಮಮಪರಂ ಪರಾತ್ಮಭೂತಂ ।
ಸತತಮಹಂ ರಘುನಂದನಂ ಪ್ರಪದ್ಯೇ ॥೧॥

ನಿರವಧಿ ಸುಖಮಿಂದೀವರಾಕಟಾಕ್ಷ ।
ಕ್ಷಪಿತ ಸುರೇಂದ್ರ ಚತುರ ಖಾದಿ ದುಃಖಂ ।
ನರವರಮನಿಶಾನತೋಸ್ಮಿ ರಾಮಂ
ವರದಮಹಂ ಶಿರಚಾಪ ಬಾಣಪಾಣಿಂ ॥೨॥

ತ್ರಿಭುವನ ಕಮನೀಯರೂಪಮಾದ್ಯಂ ।
ರವಿಶರಭಾಸುರಮೀಪ್ಸಿತ ಪ್ರದಾನಂ ।
ಸುಶರಣಮನಿಶಂ ಸುರಾಗ್ರಮೂಲೇ ।
ಕೃತನಿಲಯಂ ರಘುನಂದನಂ ಪ್ರಪದ್ಯೇ ॥೩॥

--✿✿✿✿✿--

೪೭೨
ಜಯರಾಮ ಜಿತಕಾಮ ಜಗದೀಶ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಜಯರಾಮ । ಜಿತಕಾಮ । ಜಗದೀಶ ಪರಂಧಾಮ ॥ಪ॥

ಲೀಲಾಮಾನುಷ ವೇಷ । ಲಾಲಿತ ಸನ್ಮೃದುಭಾಷ ॥೧॥

ಖರಮುಖ ದೈತ್ಯವಿಹಾರ । ದುರಿತಾರಣ್ಯ ಕುಠಾರ ॥೨॥

"ಅಮರಾಚಲ" ನಿಜಧಾಮ । ಲಾಲಿತಜನಸುಪ್ರೇಮ ॥೩॥

--✿✿✿✿✿--

೪೭೩
ನಿನ್ನವಿನಾ ಅನ್ಯರಕಾಣೆ

(ಸುರಗಿರಿವಾಸ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ನಿನ್ನವಿನಾ ಅನ್ಯರ ಕಾಣೆ । ನಾ ನೀರಜಾನಯನ ॥
ಇನಕುಲಪತಿ ಸಕಲಲೋಕ । ಜನಕ ದಾಯಾವನದಿ ರಾಮ ॥ ॥ಪ॥

ಕೊಡುವರೊಳಗೆ ನೀನೆಯಂದು ಬಡವನಾದ ನಾನು ಬಂದು
ಉಡಿಯನೊಡ್ಡಿ ಬೇಡುವೆನೀಗ । ದೃಢದಿ ವರವ ಪಾಲಿಸು ಬೇಗ ॥೧॥

ತನುಮನ ಧನ ವನಿತೆಯಾಸೆ । ಎಮಗದೇಕೆ ನಿನ್ನಪಾದ
ವನಜ ಸೇವೆಯೊಂದೇಸಾಕು । ಚಿನುಮಯಾತ್ಮ ಪರಮಪುರುಷ ॥೨॥

ನಿನ್ನ ನಾಮಗಳನೆ ಪಾಡಿ । ನಿನ್ನದಾಸರುಗಳ ಕೂಡಿ
ನಿನ್ನ ಸೇವೆ ಮಾಡಿಮಾಡಿ ।ಧನ್ಯನಾದೆ ಸುರಗಿರೀಶ ॥೩॥

--✿✿✿✿✿--

೪೭೪
ಪಾಹಿ ರಾಘವೇಶಾ ಹರೇರಾಮ

(ಕೋಸಲಪುರ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಪಾಹಿ ರಾಘವೇಶಾ । ಹರೇ ರಾಮ । ಪಾಹಿ ರಾಘವೇಶಾ ॥ಪ॥

ಬಹುಗುಣಕಲಾಪಾ । ಕುಶಾಗ್ರ ಚಾಪ । ಸುಪ್ರತಾಪ ।
ಚತುರ್ಮುಖ ॥ ಸೇವ್ಯಯೋಗಿವರ. ಭಾವ್ಯ ಪದ್ಮಮುಖ ।
ದಿವ್ಯ ಲಕ್ಷ್ಮಣಾಂಚಿತ ಪದಯುಗಳಾ ॥೧॥

ಕಂಜದಳನಿಭಾಕ್ಷ । ಸುಜನರಕ್ಷ । ದನುಜಶೀಕ್ಷ ।
ಪ್ರವೀಣ ಸುರಂಜನಾತಿಮೃದು । ಮಂಜುಭಾಷ ನಿ ।
ರಂಜನಾಗಣಿತ । ನಿರುಪಮಶೀಲಾ ॥೨॥

ದಂತಿರಾಜವರದಾ । ರಾತ್ರಿ ಚರದಾ । ವಾಗ್ನಿ ಶರದಾ
ಪ್ರಜಾಶ್ರೀ । ಕಾಂತ ಯೋಗಿವರ । ಚಿಂತನೀಯನೆ ವೇ ।
ದಾಂತವೇದ್ಯ ಕೋಸಲಪುರನಿಲಯ । ॥೩॥

--✿✿✿✿✿--

೪೭೫
ಶ್ರೀರಾಮಂ ಭಜರೇ ಮಾನಸ

(ಕೋಸಲಪುರ / ಕೆಲ್ಲಂಗೆರೆ ತಿಮ್ಮಪ್ಪದಾಸ / ೧೮೩೪ - ೧೯೨೭)

ಶ್ರೀರಾಮಂ ಭಜರೇ । ಮಾನಸ । ಶ್ರೀರಾಮಂ ಭಜರೇ॥ಪ॥

ನಾರಾಯಣಮಾದ್ಯಂತ ವಿರಹಿತಂ
ಪಾರರಕಾಂತಚರಿತಂ । ಮಾನಸ ॥೧॥

ನಿತ್ಯಾನಂದಂ ಸತ್ಯಮನಂತಂ
ಪ್ರತ್ಯಗ್ರೂಪಮಜಂ । ಮಾನಸ ॥೨॥

ಸೃಷ್ಟಿಸ್ಥಿತಿಲಯ ಕಾರಣಕರ್ತಂ
ಕಷ್ಟಕಲುಷಹರಣಂ । ಮಾನಸ ॥೩॥

ತ್ರಿಗಮಾತೀತಂ ತ್ರಿಜಗದ್ಭರಿತಂ
ನಿಗಮಾಗಮವೇದ್ಯಂ । ಮಾನಸ ॥೪॥

ಮಾಯಾಮಾನುಷ ಲೀಲಾಕಾರಂ
ಮಾಯಾಗುಣರಹಿತಂ । ಮಾನಸ ॥೫॥

--✿✿✿✿✿--

೪೭೬
ಜಯ ಜಯ ರವಿಕುಲಸೋಮ
(ಶಿವರಾಮ / ಶಿವರಾಮದಾಸ / ೧೮೯೩ - ?)

ಜಯಜಯರವಿಕುಲ ಸೋಮ ಜಯಸಾರ್ವಭೌಮ ॥ಪ॥

ಜಯಜಯ ಸೀತಾನಾಥ ಜಯ ಲಕ್ಷ್ಮಣಸೇವಿತ ॥ಅ.ಪ॥

ಸದಮಲಚರಿತಸಕಲಾಶ್ರಿತ ಪಾರಿಜಾತ ।
ವಿಧಿಸುರಮುನಿ ಮುಖವಿನುತ ವೀರಕೋಟಿ ಸಂಸೇವಿತ ॥೧॥

ಕರಧೃತಶರಚಾಪ ಶ್ರೀಕರ ಸರಸೀರುಹನಯನ ।
ಪರಮಗುಣಾಭರಣ ಶ್ರೀವರದಸದಾನಂದಮಯ ॥೨॥

ಭವಸಾಗರತರಣ ಕೋಮಲತರಶುಭಕರವದನ ।
ಕವಿಜನಸೇವಿತಚರಣ ಶಿವರಾಮದಾಸಾವನ ॥೩॥

--✿✿✿✿✿--

೪೭೭
ರಾಮಸದಾ ಪೊರೆಯ್ಯೆ ಶ್ರೀರಘು
(ಶಿವರಾಮ / ಶಿವರಾಮದಾಸ / ೧೮೯೩ - ?)

ರಾಮಸದಾ ಪೊರೆಯ್ಯೆ, ಶ್ರೀರಘು ॥ಪ॥

ರಾಮಾಸದ್ಗುಣಧಮಾ ಮುನಿಜನಕಾಮಾ ಶುಭನಾಮಾ ॥ಅ.ಪ॥

ದಾನವಹರಣಾ, ಜಾನಕಿರಮಣಾ ।
ದೀನಜನೋದ್ಧರಣಾ, ಸುಗುಣಾ ॥ರಾಮ॥ ॥೧॥

ಪರಮಪ್ರಕಾಶಾ, ಭವ್ಯವಿಲಾಸಾ ।
ಭದ್ರಗಿರಿನಿವಾಸಾ, ಶ್ರೀಶಾ ॥ರಾಮ॥ ॥೨॥

ಶೀಲಸುಧೀಜನ, ಪಾಲಸುಕೀರ್ತಿವಿ ।
ಶಾಲ ಸದಾನಂದ, ಲೀಲಾ ॥ರಾಮ॥ ॥೩॥

--✿✿✿✿✿--

೪೭೮
ಕೋದಂಡರಾಮ ಕೋದಂಡರಾಮ
(ಶಿವರಾಮ / ಶಿವರಾಮದಾಸ / ೧೮೯೩ - ?)

ಕೋದಂಡರಾಮ, ಕೋದಂಡರಾಮ,
ವೇದಂಡಭಯಹರ, ಕೋದಂಡರಾಮ ॥ಪ॥

ಜಯರಘುವೀರ, ಜಗದೇಕಶೂರ,
ಭಯದನಿವಾರ, ಭಕ್ತಮಂದಾರ ॥೧॥

ದಶರಥಪುತ್ರ, ಧನ್ಯಚರಿತ್ರ
ಪಶುಪತಿಮಿತ್ರ,ಪರಮಪವಿತ್ರ ॥೨॥

ಭವ್ಯವಿಲಾಸ, ಭಕ್ತಸಂಕಾಶ,
ಭವಭಯಶೋಷ, ಭದ್ರಾದ್ರಿವಾಸ ॥೩॥

೪೭೯

ತಾರಕಮಂತ್ರವ ಕೋರಿಭಜಿಸುವರು

(ಶಿವರಾಮ / ಶಿವರಾಮದಾಸ / ೧೮೯೩ - ?)

ತಾರಕಮಂತ್ರವ ಕೋರಿಭಜಿಸುವರು, ಧನ್ಯರಾಗುವರು ಕೇಳಣ್ಣಾ ॥ಪ॥

ಮೀರಿದಕಾಲನದೂತರ ಪಾಲಿಗೆ, ಮೃತ್ಯುವಿದೆನುತ ತಿಳಿಯಣ್ಣಾ ॥ಅ.ಪ॥

ಇಲ್ಲಿಗಲ್ಲಿಗೆ ತಿರುಗಾಡುತ ಕ್ಷೇತ್ರಗಳೆಲ್ಲ ನೋಡಿ ಸುಖವೇನಣ್ಣಾ?
ಚಿಲ್ಲರೆಮಾರ್ಗಗಳೆಲ್ಲವ ಬಿಡುತಲಿ ಶ್ರೀರಘುರಾಮನ ಭಜಿಸಣ್ಣಾ ॥೧॥

ಎಷ್ಟುಶಾಸ್ತ್ರಗಳನೋದಿ ನೋಡಿದರು, ಏಕೋರಾಮನು ತಿಳಿಯಣ್ಣಾ
ಅಷ್ಟಿಷ್ಟೆನ್ನುವದೇಕೆ ಚರಾಚರ, ಸೃಷ್ಟಿಗೆ ರಾಮನೆ ಗತಿಯಣ್ಣಾ ॥೨॥

ಕರ್ಮಬಂಧಗಳಕಳೆಯುತನಿರ್ಮಲನಾಗುವಮರ್ಮವತಿಳಿಯಣ್ಣಾ
ಧರ್ಮಮಾರ್ಗದಿಂಭದ್ರಾದ್ರೀಶನ, ತತ್ವಾಮೃತವನು ಸವಿಯಣ್ಣಾ ॥೩॥

--✿✿✿✿✿--

೪೮೦

ಭಜರೇ ಶ್ರೀರಾಮಂ ಹೇ ಮಾನಸ

(ಶಿವರಾಮ / ಶಿವರಾಮದಾಸ / ೧೮೯೩ - ?)

ಭಜರೇ ಶ್ರೀರಾಮಂ, ಹೇ ಮಾನಸ, ಭಜರೇ ರಘುರಾಮಂ ॥ಪ॥

ಭಜರಘುರಾಮಂ ಭಂಡನಭೀಮಂ,
ರಜನಿಚತಾಘದಿ ರಾಮಂ ರಾಮಂ ॥ಅ.ಪ॥

ವನರುಹನಯನಂ, ಕನದಹಿಶಯನಂ ।
ಮುನಿಜನಕೋಟಿಸಮಾನಂಮಾನಂ ॥೧॥

ತಾರಕನಾಮಂ, ದಶರಥರಾಮಂ ।
ಚಾರುಭದ್ರಾದ್ರಿಸಂಚಾರಂಧೀರಂ ॥೨॥

ಸೀತಾರಾಮಂ, ಚಿನ್ಮಯಧಾಮಂ ।
ಶ್ರೀತುಲಸೀದಳ ಶ್ರೀಕರಧಾಮಂ ॥೩॥

ಶ್ಯಾಮಲಗಾತ್ರಂ, ಸತ್ಯಚರಿತ್ರಂ ।
ರಾಮದಾಸ ಹೃದ್ರಾಜೀವಮಿತ್ರಂ ॥೪॥

--✿✿✿✿✿--

೪೮೧
ಶ್ರೀರಾಮ ಶ್ರೀರಾಮ ಶ್ರೀ ಸೀತಾರಾಮ
(ಶಿವರಾಮ / ಶಿವರಾಮದಾಸ / ೧೮೬೩ - ?)

ಶ್ರೀರಾಮ! ಶ್ರೀರಾಮಾ!! ಶ್ರೀ ಸೀತಾರಾಮ!!!॥ ಪ॥

ಪಾಹಿ, ಶ್ರೀರಾಮ, ಶ್ರೀರಾಮ, ಶ್ರೀ ಸೀತಾರಾಮ ॥ಅ.ಪ॥

ರಾಮಸತ್ಯಗುಣಧಾಮ, ಭೂಮಿಪತಿ ಸೋಮ, ಮುನಿಜನಕಾಮ,
ದನುಜಕುಲಭೀಮ, ಸಾರತರನೇಮ, ತಾರಕಸುನಾಮ,
ಜಾನಕೀರಾಮ ನಮಸ್ತೇ ॥೧॥

ಕರಕಂಕಣಧರ, ಕರಿಭಯಾಪಹರ, ಶಂಖಚಕ್ರಧರ,
ಜನ್ಮ ಕರ್ಮಹರ, ನಾರದಗುರುವರ, ನತಜನಶುಭಕರ,
ಧೀರಸಜ್ಜನಾಧಾರ ನಮಸ್ತೇ ॥೨॥

ಅಂಗಜಜನಕಸು, ಮಂಗಳಾಂಗಭವಭಂಗ ಸಾಧುಜನಸಂಗ
ದುರಿತನಿಸ್ಸಂಗಖಗೇಶತುರಂಗ ನಿರ್ಮಲೋತ್ತುಂಗ
ಗುಣಾಕರರಂಗ ನಮಸ್ತೇ ॥೩॥

ಶ್ರೀವನಿತಾಮಣಿ, ಸೇವಾನಂದಾ, ಭೂವರನುತಮುನಿ
ಭಾವಾನಂದಾ, ದೇವದೇವಶಿವ ರಾಮಾನಂದಾ,
ಧೀವರ ಪರಮಾನಂದ ನಮಸ್ತೇ ॥೪॥

--✿✿✿✿✿--

೪೮೨
ಕರುಣದಿ ಕಾಯೋ ಶ್ರೀರಾಮ

(ಶಿವರಾಮ / ಶಿವರಾಮದಾಸ / ೧೮೯೩ - ?)

ಕರುಣದಿಕಾಯೋ ಶ್ರೀರಾಮಾ ॥ಪ॥

ದೇವ ಪರಮಪುರುಷ ನಿತ್ಯ ಕೈವಲ್ಯಧಾಮಾ ॥ಅ.ಪ॥

ಶರಣಾಗತಾರ್ತಿ ವಿರಾಮಾ। ರಾಮ!
ಕರುಣಾಕರಾನಂತ ಸೌಭಾಗ್ಯಸೀಮಾ ॥೧॥

ನಿಗಮಗೋಚರ ಲೋಕೋದ್ಧರಣಾ, ರಾಮ!
ಸಗುಣನಿರ್ಗುಣ ಪೂರ್ಣ ಸರ್ವಸಂತ್ರಾಣಾ ॥೨॥

ಭುವನಪಾವನ ಸಾಧುಶರಣಾ, ರಾಮ!
ಭವಸಾಗರೋದ್ಧಾರಕಾ ಧರ್ಮಾಭರಣಾ ॥೩॥

ಬ್ರಹ್ಮಾಂಡಕೋಟಿ ನಿರ್ಣೇತಾ, ರಾಮ!
ಬ್ರಹ್ಮಾಂಡಕೋಟಿ ವಿಖ್ಯಾತಾ ಸುಪ್ರೀತಾ ॥೪॥

ಸತ್ಯಜ್ಞಾನಾನಂದಾಕಾರಾ, ರಾಮ!
ನಿತ್ಯ ನಿರ್ಮಲ ಶಾಂತ ನಿಶ್ಚಲಧೀರ ॥೫॥

ದೋಷಾವಿದೂರಾಪರೇಶಾ, ರಾಮ!
ಭೂಷ ಶಿವರಾಮದಾಸಾ ಸುಪೋಷಾ ॥೬॥

೪೮೩
ರಾಮ ರಾಮ ರಾಮರಾಮ ರಾಮ
(ಶಿವರಾಮ / ಶಿವರಾಮದಾಸ / ೧೮೯೩ - ?)

ರಾಮ! ರಾಮ! ರಾಮ! ರಾಮ! ರಾಮ ॥ಪ॥

ರಾಮ! ರಘುಕುಲತಿಲಕ! ಸುನಾಮ!
ರಾಮ! ರಾಮ! ರಾಮ! ರಾಮ! ರಾಮ ॥ಅ.ಪ॥

ತೋಂತದಿಗಿಣ, ಜಣತಕ, ತಕಧಿಮಿ, ತಧಿಮಿತ।
ರಾಂ–ರಾಂ–ರಾಂ–ರಾಂ ॥೧॥

ಮುನಿಜನಮಾನಸ, ವನಕಭೃಂಗ ಭಕ್ತ,
ಜನನುತ ನಿನ್ನ ಭಜನೆಯನ್ನು
ಮಾಳ್ಪ । ಎನಗೆ ಸಂದರುಶನವನುದಯ
ಪಾಲಿಸಿ, ಕನಿಕರದಿಂದೆನ್ನಕಡಹಾಯ್ಸಯ್ಯ ರಘು ॥೨॥

ತಕಧಿಮಿತ, ಜಣತಕ ರಾಂ ರಾಂ।
ದಿಮಿತದ್ಧಿಮಿತ ತಾರಕನಾಂ, ನಾಂ ॥೩॥

--✿✿✿✿✿--

೪೮೪
ರಾಮ ರಾಮ ರಾಮರಾಮ ರಘುರಾಮ
(ಶಿವರಾಮ / ಶಿವರಾಮದಾಸ / ೧೮೯೩ - ?)

ರಾಮಾ! ರಾಮಾ! ರಾಮಾ! ರಾಮಾ! ರಾಮಾ!
ರಘುರಾಮಾ ॥ಪ॥

ತಾರಕನಾಮಾ! ದನುಜವಿರಾಮಾ! ಜಗದಭಿರಾಮಾ!
ರಾಮಾ!ಶ್ರೀರಾಮಾ! ॥ಅ.ಪ॥

ಶ್ರೀಮದನಂತ ಪರಾತ್ಪರರಾಮಾ!
ಶ್ರೀದಜನಸುತ್ರಾಮಾ! ಮುನಿಜನಧಾಮಾ!
ಮುಖಜಿತಸೋಮಾ! ಕಲುಷವಿರಾಮಾ!
ಕುವಲಯಸುಶ್ಯಾಮಾ! ॥೧॥

--✿✿✿✿✿--

೪೮೫

ಶ್ರೀ ರಘುವರ ಶುಭಕರ ಜಯಮಂಗಳಂ

(ಶಿವರಾಮ / ಶಿವರಾಮದಾಸ / ೧೮೮೩ – ?)

ಶ್ರೀ ರಘುವರ, ಶುಭಕರ, ಜಯಮಂಗಳಂ ॥ಪ॥

ಶ್ರೀ ರಮಣೀವರ, ಧೀರದಯಾಕರ, ನಾರದಮಿತ್ರ,
ಜಿತಗಾತ್ರ, ಸುಪವಿತ್ರ, ಭೂವರ ಶ್ರೀ ॥ಅ.ಪ॥

ರವಿಕುಲಭೂಷ, ಮೃದುಭಾಷ,
ರಾಜೀವಾಕ್ಷಕವಿಜನವಂದಿತ ॥೧॥

ನವರಸಭರಿತ, ಲವಕುಶತಾತ,
ಗುಣಪೂತ, ಶಿವರಾಮವಿನುತ ॥೨॥

--✿✿✿✿✿--

೪೮೬

ಶ್ರೀ ಜಾನಕೀಮಾನಿತಗುಣ ಸುಶೋಭಿತ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ – ೧೯ ಶ.)

ಶ್ರೀಜಾನಕೀಮಾನಿತಗುಣ । ಸುಶೋಭಿತಾಂಘ್ರಿಪಂಕೇರುಹ ॥ಪ॥

ಪೂಜಾದಿಯಿಂ ನೆರೆಪ್ರಾರ್ಥಿಪೆ ।
ಸಂತೋಷವೀವ ಮತಿಯನೀಡು ॥ಅ.ಪ.॥

ವಾತಜಾತಗೈದ । ಸೇವೆಗಳಿಗೆಮೆಚ್ಚಿ ।
ಪ್ರೀತಿಕರಮಾದ । ಅಂಗಸಂಗವಿತ್ತೆ ॥
ದಾತನೆನಿಸಿದೆ । ಸತ್ಯಸಂಧನೆಂಬ ।
ಕೀರ್ತಿಛತ್ರಿಯಾಂತೆ । ರಾಮಚಂದ್ರ ॥೧॥

--✿✿✿✿✿--

೪೮೭
ತನುಸೌಖ್ಯದ ಮಮತೆಯದೂಡಿಸು
(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ – ೧೯ ಶ.)

ತನುಸೌಖ್ಯದ । ಮಮತೆಯದೂಡಿಸು ॥
ದೀನಾಳಿಸೇವ್ಯ । ಭವ್ಯಸ್ವರೂಪ। ॥ಪ॥

ತನುವಿನಪರಿಯ । ಯೋಚಿಸೆಹೇಯವು ।
ಅನಿತುಮಾಂಸವಸಂ । ಗಳಿನೆಕೂಡಿರುವುದು ॥ಅ.ಪ.॥

ಪಲತೆರಜನ್ಮಂಗಳ । ಕಳೆಯುತಲಿ ।
ಹೊಲಸಿನದೇಹವ । ನಂಬುತೆ ಜೀವನು ॥
ತೊಳಲುತೆ ಜನ್ಮದ । ಮರ್ಮವಗಾಣದೆ ।
ಬಳಲುವೆಪೊರೆಯೈ । ಶ್ರೀರಘುರಾಮನೆ ॥೧॥

--✿✿✿✿✿--

೪೮೮
ಏತಕೆ ಮನವನು ಚಂಚಲಗೈಸುತೆ
(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ – ೧೯ ಶ.)

ಏತಕೆಮನವನು । ಚಂಚಲಗೈಸುತೆ ।
ಕಾತರಗೊಳಿಸುವೆಯೊ । ಶ್ರೀರಮಣಾ ॥ಪ॥

ಚೇತನದಂತೆಯೇ । ಕಾರ್ಯಮೆಂದೊಡೆ ।
ನೀತಿಬಾಹಿರಗೆಂತು । ಗತಿತೋರಿಸೆ ॥ಅ.ಪ.॥

ಆಶಿಎತೆಂಬುವ ಸತಿ । ಗನುಚರನಾಗಿ ।
ದಾಸನೆನಿಸಿನಾ । ನಿನ್ನನೆಮರೆತಿಹೆ ॥
ಭಾಸಿತಮುಕ್ತಿವಿ । ಲಾಸಿನಿಯ ಪ್ರೇಮಕೆ ।
ಭಾಜಕನಾಗುವಂತೆ । ಮತಿಯನುಕುಡು ರಾಮ ॥೧॥

--✿✿✿✿✿--

೪೮೯
ನಿಗಮವಂದ್ಯನೆ – ಜಗಕೆ ಲೀಲೆಯ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ – ೧೯ ಶ.)

ನಿಗಮವಂದ್ಯನೆ । ಜಗಕೆಲೀಲೆಯ ।
ಬಗೆಗೆತೋರುವೆ । ಸದಾ ॥ಪ॥

ಜಗದಜೀವಿಗಳಿಗೆ । ಸೊಗವನೀಡುತೆ ।
ಮಿಗಿಲುತೋಷದಿಂದೆ । ಸೇವೆಗೈವೆನಿತ್ಯ ॥ಅ.ಪ.॥

ಮಗುವನೋಡುತೆ । ನಗುತೆಮಾತೆಯು ।
ಮೊಗವಚುಂಬಿಸಿ । ಪಾಲೀವರೀತಿ ॥
ಅಗಣಿತಾತ್ಮನುತಾ । ಸಿಗದೆಮಾಯಕೆ ।
ಜಗವಪಾಲಿಸುವ । ಸುಗುಣಸಾಂದ್ರರಾಮ ॥೧॥

--✿✿✿✿✿--

೪೯೦
ಎನಗೆಂದಿಗೆ ಸಂದರ್ಶನವನೀವೆ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ – ೧೯ ಶ.)

ಎನಗೆಂದಿಗೆ । ಸಂದರ್ಶನವನೀವೆ ॥ಪ॥

ಮನವಾರೆನಿನ್ನಾ । ಪಾದಸೇವೆಗೈವ ।
ಘನಭಕ್ತಿಯಿತ್ತು । ಪಾಲಿಸೈಯ ದೇವ ॥ಅ.ಪ.॥

ಸುದತೀಜಾತರು । ಸೌಖ್ಯಕಾಲದೊಳು ।
ಮುದದಿಂದ ಬಿಡದೆ । ಸೇರಿಬಾಳ್ವರಲೆ ॥ ॥೧॥

ಖೇದವಾಂತು ಜೀವ । ಪೋಪಕಾಲದೊಳು ।
ಸದಯಾತ್ಮರಾಮ । ಚಂದ್ರನೀನೆಕಾಯ್ವೆ ॥೨॥

--✿✿✿✿✿--

೪೯೧
ನಿನ್ನ ಪ್ರೇರಣೆಯಿಂದ ಜನ್ಮಿಸಿದೆ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ನಿನ್ನ ಪ್ರೇರಣೆ । ಯಿಂದ ಜನ್ಮಿಸಿದೆ ।
ಯೆನ್ನಭಾರವ । ದೇನಿರ್ಪುದು ॥ಪ॥

ಮುನ್ನಜನ್ಮದೆ । ರಚಿತಕರ್ಮದಂತೆ ।
ನಿನ್ನಿಚ್ಛೆಯಂತೆ । ಕಾಪಾಡು ದೇವ ॥ಅ.ಪ.॥

ಭವವಾರಿ ರಾಶಿ । ಯೊಳು ಮಗ್ನನಾದೆ ।
ಕಾವರಿಲ್ಲವೊ । ಭುವನೇಶ ॥
ತವದಾಸನ । ಪರಿಯನಿರುಕಿಸಿ ।
ತವೆಪಾಲಿಸೈಯ । ಶ್ರೀರಾಮಚಂದ್ರ ॥೧॥

--✿✿✿✿✿--

೪೯೨
ಏನೀ ಚೋದ್ಯಂಗಳು ದೀನನಾದಯೆನ್ನೊಳು

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ಏನೀಚೋದ್ಯಂಗಳು । ದೀನನಾದಯೆನ್ನೊಳು ॥ಪ॥

ಹೀನನಂತೇತಕೆನ್ನ । ನೀಗೈಯುವೆ ಶ್ರೀಹರಿ ॥ಅ.ಪ.॥

ನಾನು ನನ್ನದೆಂಬ । ಶ್ವಾನನಂತಾದೆನಾ ।
ನಾತ್ಮನಲ್ಲಿ । ಏನಿದು ನಿನ್ನಯಮಾಯ ॥೧॥

ನೀನೇ ಪ್ರೇರಕನಾಗಿ । ಜ್ಞಾನಿಯೆಂದೆನಿಸುವೆ ।
ಜ್ಞಾನದ ಶ್ರೀವರ । ಶ್ರೀಧರ ರಾಮಚಂದ್ರ ॥೨॥

--✿✿✿✿✿--

೪೯೩
ಯೆನ್ನ ಬಿನ್ನಪಗಳನು ಕೇಳಿ ಮನ್ನಿಪಾತ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ಯೆನ್ನ ಬಿನ್ನಪಗಳನು ಕೇಳಿ
ಮನ್ನಿಪಾತ ನೀನೇ ಶ್ರೀಹರಿಯೆ ॥ಪ॥

ಮುನ್ನ ಸಂಸೃತಿಮೋಹದಿಂದೆ ।
ನಿನ್ನಮರೆತೆ ಸದಾನತಸುಖದಾ ॥
ಪನ್ನಗೇಂದ್ರ ಸುಸೌಖ್ಯಪ್ರದ ।
ಶ್ರೀಮೋಕ್ಷಭಾಗ್ಯ ಸುಫಲದಶ್ರೀದ ॥ಅ.ಪ॥

ಭವವಂದಿತಾನತ ಜನಮಂದಾರ
ದಾನವಹರ
ತವಪೂಜಾವಿಧಾನವ ಬೋಧಿಸಿ
ಕಾವ ರಮಾಧವ
ಭುವನಾಧಿಪ ತಾಪತ್ರಯ
ಗಳ ನೀಗ್ಯೆ ನಿರಾಮಯ
ಯುವತೀಮಣಿ ಸೌಖ್ಯಕರ ವರಮೋಕ್ಷ
ವೀವಶ್ರೀಧರ ॥೧॥

--✿✿✿✿✿--

೪೯೪
ಪರಮಗುಣಸಾಂದ್ರ ರಾಮನಿರಾಮಯ
(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ಪರಮಗುಣಸಾಂದ್ರ । ರಾಮನಿರಾಮಯ ॥ಪ॥

ಧುರಧೀರಪರಿಪೂರ್ಣ । ಕೃಪಾಮಯ ।
ಪರಿಪಾಲಸೈಯ್ಯ । ಶ್ರೀವಂದ್ಯಜೀಯ ॥ಅ.ಪ.॥

ಮನದೆ ನೀನೇನಿಂತು । ಮನದ ತೋರಿಕೆಗಳನು ।
ಮಾನ್ಯದನಲವಿನೆ । ಕರ್ಮಕನುವೆನಿಪ ॥
ಘನಸುಖದುಃಖನಿಚಯ । ಕತಿದೂರನಾಗಿಹೆ ।
ಅನುವಿಂದೆನೀಡು । ಪರಮಾರ್ಥಪದವ ॥೧॥

--✿✿✿✿✿--

೪೯೫
ನೀನೆ ಪರಗತಿಮತಿಯೀವ ಕಾವದೇವ
(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ನೀನೇಪರಗತಿಮತಿಯೀವಕಾವದೇವ ।
ಶ್ರೀಶಾಂತಭಾವ ।ಶ್ರೀನಾಥದೇವ । ಮಹಾನುಭಾವ ॥ಪ॥

ಜ್ಞಾನಾದಿಭಕ್ತಿಸುಮದೆಪೂಜಿಪೆಸತತ । ಸದಯಹೃದಯ ।
ಮೌನೀಂದ್ರಸುಜ್ಞಾನಸರಸೀಜಾತಭಾಸಿತದ್ವಾದಶಾತ್ಮನೆ ॥ಅ.ಪ.॥

ವನಿತಾದುರ್ಮ್ಮತಾ । ಮೋಹದುರಾಶೆಯೊಳು ಸುಖವಿಲ್ಲ ।
ಇನಿತೆಲ್ಲಹೀನವೃತ್ತಿಯಾಗಿರೆ ಮಾಡಸಲ್ಲ ॥ ॥೧॥

ಮಾನಿತೆಮೋಕ್ಷಮಾನಿನಿಯಳಿಂ । ಮಾನ್ಯನಾಗಿರಲು ।
ದೀನಾತ್ಮಗೆನಿತ್ಯಸನ್ಮೋಕ್ಷವೀಯ್ಯೆ । ರಾಮಚಂದ್ರ ॥೨॥

೪೯೬

ಪರತರ ಪಾವನನಾಮ ರಾಮ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೭೦ – ೧೯ ಶ.)

ಪರತರಪಾವನ । ನಾಮರಾಮ ।
ಕರುಣವನೀತೋರಿ । ಸದ್ಗತಿಯಿವುದು ॥ಪ॥

ಪರಮಭಕ್ತರ ಪದಾಂ । ಬುಜವಪಿಡಿದು ಸದಾ ।
ಪರಿಪಠಿಸುವ ಚಾರು । ಮತಿಯನುಪಾಲಿಸು ॥ಅ.ಪ.॥

ಹರಿಕಥೆಯನುನಾ । ನವಧರಿಸದಿಹೆನು ।
ಸುರನದಿಯೊಳು ನೆರೆ । ಸ್ನಾನವಗೈಯದೆ ॥
ನಿರುತದೆತವಭಕ್ತಾ । ಗ್ರಣಿಗಳ ಸೇವೆಯ ।
ವಿರಚಿಸದಿಹಚಿತ್ತ । ಪೂರ್ಣಪಾಪಾತ್ಮನಾ ॥೧॥

--✿✿✿✿✿--

೪೯೭

ಎಂದಿಗೆನ್ನನು ಧನ್ಯವಾಗಿಪೆ

(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೭೦ – ೧೯ ಶ.)

ಎಂದಿಗೆನ್ನನು । ಧನ್ಯನಾಗಿಪೆ ॥ಪ॥

ಸಂದ ಭಕ್ತವೃಂದ । ಸುಖೋದಯ
ಇಂದಿರೇಶ ನೀನೇ । ಗತಿಯೆಂಬೆನು ॥ಅ.ಪ॥

ಪರಮಾರ್ಥದಾತ । ಬಿರುದಾಂಕ ಭಕ್ತಿ
ಸಾರಸೌಖ್ಯಪೀರ್ವ । ಚಾರುಜ್ಞಾನವ
ವರ ಮೋಹಾಕಾರ । ಶ್ರೀಕೃಪಾಕರ
ವರವೀಯುತೆನ್ನ । ಸದಾಪಾಲಿಸೈಯ್ಯ ॥೧॥

--✿✿✿✿✿--

೪೯೮
ಸಾರಪದಾಂಭೋಜಶ್ರೀ
(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ಸಾರಪದಾಂಭೋಜಶ್ರೀ । ದಯಾನಿಧೆ । ರಘುಕುಲೇಶ ॥ಪ॥

ಚಾರುತರತ್ವತ್ಪಾದವ । ಭಕ್ತಿಯಿಂದಸಂಪ್ರಾರ್ಥಿಪೆ ॥ಅ.ಪ.॥

ಶ್ರೀರಮ್ಯರಮಾನ್ವಿತ ! । ಭೂನುತ ! ಮಾನಿತ ! ।
ವಾರ್ಧಿಸಂಜಾತೆಹಿತ । ನೀಪೊರೆಕೌಸಲ್ಯಾಸುತ ॥೧॥

--✿✿✿✿✿--

೪೯೯
ಧರಣಿಯು ಜೀರ್ಣ ನಿಲಯದೊಳು
(ರಾಮಚಂದ್ರ / ಆನವಟ್ಟಿ ರಾಮರಾಯ / ೧೮೬೦ - ೧೯ ಶ.)

ಧರಣಿಯು ಜೀರ್ಣ । ನಿಲಯದೊಳು ।
ಪರಿಕಿಪೊಡೆ । ಮಾನವರಹ ॥ ॥ಪ॥

ವರಮಣಿಗಳು । ತುಂಬಿರುವುವು ।
ಚೋರಕಾಲನು । ಸೂರೆಗೈವನು ॥ ॥ಅ.ಪ.॥

ಅರಿತೀಪರಿ ದೇಹ ಸಾರ್ಥಕ । ಗೊಳಿಸಿಕೊಳುಮಾನವ ।
ನಿರುತದೊಳಳಲವಾರ್ಧಿ । ಯನು ನೀದಾಂಟಿ ಭಕ್ತಿಯ ।
ವರನೌಕೆಯಸಾಹ್ಯದಿನೆ । ಪರಮಮುಕ್ತಿ ತೀರಸಾರಲು ।
ಧರಣೀಪಾಲ ರಾಮನನು । ನಿರುತ ಧ್ಯಾನಿಸೈಯ್ಯ ನಿತ್ಯ ॥೧॥

--✿✿✿✿✿--

೫೦೦

ಕಂದರ್ಪಕೋಟಿ ಸುಂದರಾಂಗರಾಮ

(ಧೇನುಪುರೀಶ / ಬೇಟೆರಾಯದೀಕ್ಷಿತ / ೧೮೬೪ - ೧೯೩೭)

ಕಂದರ್ಪಕೋಟಿ ಸುಂದರಾಂಗ ರಾಮ ತೇ ಸುಮಂಗಳಂ ॥ಪ॥

ಮಂದಾರಹೃದಯ ಕುಮುದಚಂದ್ರ ರಾಮ ತೇ ಸುಮಂಗಳಂ
ಬೃಂದಾರಕೇಂದ್ರ ವಂದ್ಯಪಾದ ರಾಮ ತೇ ಸುಮಂಗಳಂ ॥೧॥

ದಿವ್ಯರೂಪ ಕಾಂತಿಮಹಿತ ರಾಮ ತೇ ಸುಮಂಗಳಂ
ಸರ್ವಸುಗುಣ ಪೂರ್ಣಮಹಿತ ರಾಮ ತೇ ಸುಮಂಗಳಂ ॥೨॥

ಸುರಾಸುರಾಳಿ ಗೀಯಮಾನ ರಾಮ ತೇ ಸುಮಂಗಳಂ
ಪುರಾರಿಚಿತ್ತ ಕಮಲಮಿತ್ರ ರಾಮ ತೇ ಸುಮಂಗಳಂ ॥೩॥

ಭಕ್ತಹೃದಯ ಕಮಲಹಂಸ ರಾಮ ತೇ ಸುಮಂಗಳಂ
ಸತ್ವನಿರ್ಜಿತ ದೈತ್ಯಮಂಡಲ ರಾಮ ತೇ ಸುಮಂಗಳಂ ॥೪॥

ದೀನಮಾನವಾಳಿಪಾಲಕ ರಾಮ ತೇ ಸುಮಂಗಳಂ
ಧೇನುನಗರ ದೇವದೇವ ಶ್ರೀ ರಾಮ ತೇ ಸುಮಂಗಳಂ ॥೫॥

--✿✿✿✿✿--

ಅನುಬಂಧ
ಆಕರಗ್ರಂಥ ಸೂಚಿ

ಪುಸ್ತಕ ಸಂಖ್ಯೆ	ಸಂಪುಟ ಸಂಖ್ಯೆ	ಶೀರ್ಷಿಕೆ ಮತ್ತು ಸಂಪಾದಕರು
೧	೧	ಶ್ರೀಪಾದರಾಜರು ಮತ್ತು ಶ್ರೀವ್ಯಾಸರಾಯರ ಕೀರ್ತನೆಗಳು ಸಂ: ಡಾ. ಶ್ರೀನಿವಾಸ ಹಾವನೂರ
೨	೨	ಶ್ರೀವಾದಿರಾಜರ ಕೀರ್ತನೆಗಳು ಸಂ: ಡಾ. ಅರಳುಮಲ್ಲಿಗೆ ಪಾರ್ಥಸಾರಥಿ
೩	೩-೧	ಶ್ರೀಪುರಂದರ ದಾಸರ ಕೀರ್ತನೆಗಳು - ೧ ಸಂ: ಡಾ. ಬಸವರಾಜ ಸಬರದ
೪	೩-೨	ಶ್ರೀಪುರಂದರ ದಾಸರ ಕೀರ್ತನೆಗಳು - ೨ ಸಂ: ಡಾ. ಬಸವರಾಜ ಸಬರದ
೫	೪-೧	ಶ್ರೀಪುರಂದರ ದಾಸರ ಉಗಾಭೋಗಗಳು ಮತ್ತು ಸುಳಾದಿಗಳು ಸಂ: ಪ್ರೊ. ವಸಂತಕುಷ್ಟಗಿ
೬	೫-೧	ಶ್ರೀಕನಕದಾಸರ ಕೀರ್ತನೆಗಳು-೧ ಸಂ: ಪ್ರೊ. ಸುಧಾಕರ
೭	೫-೨	ಶ್ರೀಕನಕದಾಸರ ಕೀರ್ತನೆಗಳು-೨ ಸಂ: ಪ್ರೊ. ಸುಧಾಕರ
೮	೬-೧	ಕಾಖಂಡಕಿ ಶ್ರೀಮಹಿಪತಿರಾಯರ ಕೃತಿಗಳು-೧ ಸಂ: ಕೃಷ್ಣ ಕೊಲ್ಹಾರ ಕುಲಕರ್ಣಿ
೯	೬-೨	ಕಾಖಂಡಕಿ ಶ್ರೀಮಹಿಪತಿರಾಯರ ಕೃತಿಗಳು-೨ ಸಂ: ಕೃಷ್ಣ ಕೊಲ್ಹಾರ ಕುಲಕರ್ಣಿ
೧೦	೭	ಗಲಗಲಿ ಅವ್ವನದರ ಹಾಡುಗಳು ಮತ್ತು ಕೀರ್ತನೆಗಳು ಸಂ: ಹಣುಮಂತ ತಾಸಗಾಂವಕರ
೧೧	೮	ಶ್ರೀಪ್ರಸನ್ನ ವೆಂಕಟದಾಸರ ಕೀರ್ತನೆಗಳು ಸಂ: ಶ್ರೀಮತಿ ಟಿ.ಕೆ. ಇಂದೂಬಾಯಿ

೧೨	೯-೧	ಶ್ರೀವಿಜಯದಾಸರ ಕೀರ್ತನೆಗಳು ಸಂ: ಪ್ರೊ ಜಿ. ಅಶ್ವತ್ಥನಾರಾಯಣ
೧೩	೯-೨	ಶ್ರೀವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು ಸಂ: ಪ್ರೊ ಜಿ. ಅಶ್ವತ್ಥನಾರಾಯಣ
೧೪	೧೦-೧	ಶ್ರೀವಿಜಯದಾಸರ ಸುಳಾದಿಗಳು (ಕ್ಷೇತ್ರದರ್ಶನ) ಸಂ: ಡಾ. ಕೆ. ಗೋಕುಲನಾಥ್
೧೫	೧೦-೨	ಶ್ರೀವಿಜಯದಾಸರ ಸುಳಾದಿಗಳು (ಅತ್ಮನಿವೇದನೆ) ಸಂ: ಡಾ. ಕೆ. ಗೋಕುಲನಾಥ್
೧೬	೧೦-೩	ಶ್ರೀವಿಜಯದಾಸರ ಸುಳಾದಿಗಳು (ತತ್ವನವನೀತ) ಸಂ: ಡಾ. ಕೆ. ಗೋಕುಲನಾಥ್
೧೭	೧೦-೪	ಶ್ರೀವಿಜಯದಾಸರ ಸುಳಾದಿಗಳು (ಸಂಕೀರ್ಣ) ಸಂ: ಡಾ. ಕೆ. ಗೋಕುಲನಾಥ್
೧೮	೧೧-೧	ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು ಸಂ: ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
೧೯	೧೧-೨	ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು ಸಂ: ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
೨೦	೧೨	ಶ್ರಗೋಪಾಲದಾಸರ ಕೀರ್ತನೆಗಳು ಸಂ: ಡಾ. ಅಕ್ಕಮಹಾದೇವಿ
೨೧	೧೩	ಶ್ರೀ ಮೋಹನದಾಸರು ಮತ್ತು ಇತರ ಹರಿದಾಸರ ಕೀರ್ತನೆಗಳು ೧. ಮೋಹನದಾಸರು ೨. ವೇಣುಗೋಪಾಲದಾಸರು (ಪಂಗನಾಮ ತಿಮ್ಮಣ್ಣದಾಸರು) ೩. ವ್ಯಾಸವಿಠಲರು (ಕಲ್ಲೂರ ಸುಬ್ಬಣ್ಣದಾಸರು) ೪. ಗುರುವಿಜಯವಿಠಲರು ೫. ಕೇಶವ ವಿಠಲರು ೬. ಕಮಲಾಪತಿವಿಠಲರು ೭. ವೆಂಕಟವಿಠಲರು ಸಂ : ಡಾ. ರಮಾ ಕಲ್ಲೂರಕರ ಸಂ : ಡಾ. ಸೀತಾ ಗುಡೂರ

೨೨	೧೪	ಶ್ರೀ ಜಗನ್ನಾಥ ದಾಸರ ಕೀರ್ತನೆಗಳು ಸಂ : ಡಾ. ಕೆ. ಎಂ. ಕೃಷ್ಣರಾವ್
೨೩	೧೫	ಶ್ರೀ ಮುದ್ದು ಮೋಹನವಿಠಲ ದಾಸರು ಹಾಗೂ ಇತರರ ಕೀರ್ತನೆಗಳು ೧. ಮುದ್ದುಮೋಹನ ವಿಠಲ ದಾಸರು ೨. ತಂದೆ ಮುದ್ದುಮೋಹನ ವಿಠಲ ದಾಸರು ೩. ಬಾಗೇಪಲ್ಲಿ ಶೇಷದಾಸರು ೪. ಕೃಷ್ಣವಿಠಲ ದಾಸರು ೫. ಸರಗೂರು ವೆಂಕಟವರದಾರ್ಯರು ಸಂ : ಹೆಚ್. ಎ. ಶ್ರೀನಿವಾಸಮೂರ್ತಿ ಎ. ಎನ್. ಅನಂತಸ್ವಾಮಿರಾವ್
೨೪	೧೬	ಉರಗಾದ್ರಿವಾಸ ವಿಠಲದಾಸರು ಮತ್ತು ಇತರರ ಕೀರ್ತನೆಗಳು ೧. ಉರಗಾದ್ರಿ ವಿಠಲದಾಸರು ೨. ರಘುರಾಮ ವಿಠಲದಾಸರು ೩. ಕೇಶವ ದಾಸರು ೪. ನಿಡಂಬೂರು ರಾಮದಾಸರು ೫. ಬಿ. ವೆಂಕಟರಾವ್ ೬. ಅಚಲಾಂದ ದಾಸರು ಸಂ: ಹೆಚ್.ಎನ್. ಶ್ರೀನಿವಾಸಮೂರ್ತಿ ಎ.ಎನ್. ಅನಂತಸ್ವಾಮಿ ರಾವ್ ಡಾ.ಟಿ. ಎನ್. ನಾಗರತ್ನ
೨೫	೧೭	ಶ್ರೀ ಪ್ರಾಣೇಶದಾಸರು, ಶ್ರೀ ಗುರು ಪ್ರಾಣೇಶ ದಾಸರು ಶ್ರೀ ಶ್ರೀಶ ಪ್ರಾಣೇಶ ದಾಸರ ಹಾಡುಗಳು ೧. ಪ್ರಾಣೇಶ ದಾಸರು ೨. ಗುರು ಪ್ರಾಣೇಶ ದಾಸರು ೩. ಶ್ರೀಶ ಪ್ರಾಣೇಶ ದಾಸರು ಸಂ: ಡಾ. ಶ್ರೀಮತಿ ಮಂದಾಕಿನಿ
೨೬	೧೮-೧	ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು ಸಂ : ಲೀಲಾವತಿ ಎಸ್. ರಾವ್
೨೭	೧೮-೨	ನಿಡಗುರುಕಿ ಜೀವೂಬಾಯಿಯವರು ಸಂ : ಲೀಲಾವತಿ ಎಸ್. ರಾವ್

೨೮	೧೮-೩	ಅಂಬಾಬಾಯಿ ಅವರ ಕೀರ್ತನೆಗಳು ಸಂ : ಡಾ. ಅನಂತಪದ್ಮನಾಭ ರಾವ್ ಅವರು
೨೯	೧೮-೪	ನಂಜನಗೂಡು ತಿರುಮಲಾಂಬಾ ಮತ್ತು ಇತರ ಮಹಿಳಾ ಹರಿದಾಸರ ಕೀರ್ತನೆಗಳು ೧. ನಂಜನಗೂಡು ತಿರುಮಲಾಂಬಾ ೨. ಯದುಗಿರಿಯಮ್ಮ ೩. ನಾಡಿಗರ ಶಾಂತಿಬಾಯಿ ೪. ಓರಬಾಯಿ ಲಕ್ಷ್ಮೀಬಾಯಿ ೫. ಸರಸಾಬಾಯಿ ೬. ಬಳ್ಳಾರಿ ರಾಧಾಬಾಯಿ ೭. ಕಳಸದ ಸುಂದರಮ್ಮ ೮. ಗುಂಡಮ್ಮ ೯. ಸರಸ್ವತಿಬಾಯಿ ಸಂ: ಡಾ. ರುಕ್ಮಿಣಿ ಗಿರಿಮಾಜಿ ಡಾ. ನೀ.ಕೃ ರಾಮಶೇಷನ್ ಹೆಚ್.ಎಸ್. ಪದ್ಮಾಮೂರ್ತಿ ಮೀನಾರಾವ್ ಪ್ರೊ. ನಾ. ಗೀತಾಚಾರ್ಯ ಡಾ. ನಳಿನಿ ವೆಂಕಟೇಶ್
೩೦	೧೯	ಹರಪನಹಳ್ಳಿ ಭೀಮವ್ವನ ಕೀರ್ತನೆಗಳು ಸಂ: ಡಾ. ಟಿ. ಎನ್. ನಾಗರತ್ನ ಡಾ. ಅಕ್ಕಮಹಾದೇವಿ
೩೧	೨೦	ಸಿಂದಗಿ ಸಂಪ್ರದಾಯದ ಹಾಗೂ ಇತರ ಸಂತ ಕವಿಗಳ ಕೀರ್ತನೆಗಳು ೧. ಭೀಮಾಶಂಕರರು ೨. ಜಕ್ಕಪ್ಪಯ್ಯನವರು ೩. ಶಿವರಾಮರವರು ೪. ಗುರುರಾಮಲಿಂಗರವರು ೫. ಶ್ರೀಪತಿ–ಅಂಕಿತ ೬. ನರಸಿಂಹ–ಅಂಕಿತ ೭. ವಿಶ್ವಪತಿ–ಅಂಕಿತ ೮. ಸಿದ್ದಗುರು ತ್ರಿಪುರಾಂತಕ ಅಂಕಿತ ೯. ಜ್ಞಾನಬೋಧರು ೧೦. ಅಜ್ಞಾತ ದಾಸರು ೧೧. ಭವತಾರಕರು ೧೨. ರುಕ್ಮಾಂಗದ ಪಂಡಿತರು ಸಂ: ಸಿದ್ದಗುರು ತ್ರಿಪುರಾಂತಕ ಅಂಕಿತ ಸಂ : ಪ್ರೊ. ಬಿ.ಆರ್. ಕುಲಕರ್ಣಿ

೩೨	೨೧-೧	ಶ್ರೀದ ವಿಠಲರು ಮತ್ತು ಧಾರವಾಡ ಪ್ರದೇಶದ ಇತರ ಹರಿದಾಸರ ಕೀರ್ತನೆಗಳು ೧. ಶ್ರೀದವಿಠಲರು ೨. ಶ್ರೀನಿಧಿ ವಿಠಲರು ೩. ಸಿರವತ್ಸಾಂಕಿತರು ೪. ಕದರುಮಂಡಲಗಿ ಹನುಮಯ್ಯನವರು ೫. ಕದರುಮಂಡಲಗೀಶರು ೬. ಮಹಾನಿಧಿವಿಠಲರು ೭. ಹಸನ್ಮುಖ ವಿಠಲರು ೮. ನರಸಿಂಹ ವಿಠಲರು ೯. ಹನುಮೇಶ ವಿಠಲರು ೧೦. ಅಜ್ಞಾತದಾಸರು (ಪಾಂಡುರಂಗ ಪ್ರಾರ್ಥನೆ) ೧೧. ಭೂಪತಿ ವಿಠಲರು ಸಂ: ಡಾ. ಶ್ರೀನಿವಾಸ ಹಾವನೂರ ಶ್ರೀಮತಿ ನಳಿನಿ ವೆಂಕಟೇಶ್
೩೩	೨೧-೨	ಇಂದಿರೇಶರು ಹಾಗೂ ಧಾರವಾಡ ಪ್ರದೇಶದ ಇತರ ಹರಿದಾಸರ ಕೀರ್ತನೆಗಳು ೧. ಇಂದಿರೇಶರು ೨. ಗುರು ಇಂದಿರೇಶರು ೩. ಗೋಪತಿ ಕೃಷ್ಣ ವಿಠಲರು ೪. ರಮಾಪತಿ ವಿಠಲರು ೫. ಸಿರಿಗೋಪಾಲ ದಾಸರು ೬. ರಾಜಗೋಪಾಲ ದಾಸರು ೭. ತಂದೆ ವರದಗೋಪಾಲ ದಾಸರು ೮. ಗುರುತಂದೆ ವರದ ಗೋಪಾಲ ವಿಠಲರು ೯. ಸಿರಿಗುರುತಂದೆ ವರದ ಗೋಪಾಲ ವಿಠಲರು ೧೦. ತಂದೆ ಶ್ರೀನರಹರಿ ದಾಸರು ೧೧. ಐಹೊಳೆ ವೆಂಕಟೇಶರು ೧೨. ಸಿರಿವಿಠಲರು (ಕಲಮದಾನಿ ನಾರಾಯಣರಾವ್) ೧೩. ಗದಗಿನ ವೀರ ನಾರಾಯಣ (ಹುಯಿಲಗೋಳ ನಾರಾಯಣರಾಯರು) ಸಂ: ಡಾ. ಶ್ರೀನಿವಾಸ ಹಾವನೂರ ಶ್ರೀಮತಿ ನಳಿನಿ ವೆಂಕಟೇಶ್

೩೪	೨೨	ಶ್ರೀ ಪ್ರಸನ್ನ ಶ್ರೀನಿವಾಸ ದಾಸರ ಕೀರ್ತನೆಗಳು ಸಂ : ಪ್ರೊ. ಜಿ. ಅಶ್ವತ್ಥನಾರಾಯಣ
೩೫	೨೩	ಶ್ರೀ ತುಪಾಕಿ ವೆಂಕಟರಮಣಾಚಾರ್ಯ ಮತ್ತು ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ ಅವರ ಕೀರ್ತನೆಗಳು ೧. ತುಪಾಕಿ ವೆಂಕಟರಮಣಾಚಾರ್ಯ ೨. ಪಾವಂಜೆ ಲಕಕ್ಷ್ಮೀನಾರ್ಣಪ್ಪಯ್ಯನವರು ಸಂ: ಡಾ. ಶ್ರೀನಿವಾಸ ಹಾವನೂರ ಶ್ರೀಮತಿ ಮೀನಾರಾವ್
೩೬	೨೪	ಶ್ರೀವರಾಹ ತಿಮ್ಮಪ್ಪ ಮತ್ತು ಇತರ ದಕ್ಷಿಣ ಕನ್ನಡದವರ ಕೀರ್ತನೆಗಳು ೧. ವರಾಹ ತಿಮ್ಮಪ್ಪನವರು (ನೆಕ್ಕಾರು ಕೃಷ್ಣದಾಸರು) ೨. ವಿಶ್ವೇಂದ್ರ ತೀರ್ಥರು ೩. ಸದಾನಂದರು ೪. ಬೆಳ್ಳೆ ದಾಸಪ್ಪಯ್ಯನವರು ೫. ಗೋವಿಂದ ದಾಸರು ೬. ವಾಸುದೇವ ಶಾನುಭೋಗ ೭. ಬಂಗ್ಲೆ ನಾರಾಯಣ ಕಾಮತ ೮. ರಘುವರ್ಯರು (ಪಲಿಮಾರು ಮಠ) ೯. ವೆಂಕಣ್ಣಕವಿ ೧೦. ವಾಸುದೇವ ಪ್ರಭು ೧೧. ಶೇಷಪ್ರಭು ಸಂ: ಪ್ರೊ. ಎಂ. ರಾಜಗೋಪಾಲಾಚಾರ್ಯ ಡಾ॥ ಶ್ರೀನಿವಾಸ ಹಾವನೂರ
೨೭	೨೫	ಚಿದಾನಂದ ಅವಧೂತರು ಹಾಗೂ ಕೆಳದಿ ವೆಂಕಣ್ಣ ಕವಿ ಕೀರ್ತನೆಗಳು ಸಂ: ಡಾ. ಡಿ. ಆರ್. ಪಾಂಡುರಂಗ
೨೮	೨೬	ಶ್ರೀ ಗುರು ಜಗನ್ನಾಥ ದಾಸರ ಮತ್ತು ಇತರ ಸಮಕಾಲೀನರ ಕೃತಿಗಳೂ ೧. ಗುರು ಜಗನ್ನಾಥ ದಾಸರು ೨. ವರದೇಶ ವಿಠಲರು

		೩. ಸುಂದರ ವಿಠಲರು ಸಂ: ಡಾ. ನಾರಾಯಣಾಚಾರ್ಯ ಧೂಳಖೇಡ
೩೯	೨೭	ಶ್ರೀ ವಿಜಯ ರಾಮಚಂದ್ರ ಮತ್ತು ಇತರ ಹರಿದಾಸರ ಕೀರ್ತನೆಗಳು ೧. ವಿಜಯ ರಾಮಚಂದ್ರ ವಿಠಲ ೨. ಜಯೇಶ ವಿಠಲರು ೩. ರಂಗೇಶ ವಿಠಲರು ೪. ದಾಸರ ಲಕ್ಷ್ಮೀನಾರಾಯಣರಾಯರು ೫. ವರವಣಿ ರಾಮರಾಯರು (ಕರಿಗಿರೀಶ) ಸಂ : ಡಾ. ಅನಂತಪದ್ಮನಾಭರಾವ್
೪೦	೨೮	ಶ್ರೀ ವಿದ್ಯಾಪ್ರಸನ್ನ ತೀರ್ಥರು ಹಾಗೂ ಇತರ ಯತಿಗಳ ಕೀರ್ತನೆಗಳು ೧. ವಿದ್ಯ ಪ್ರಸನ್ನ ತೀರ್ಥರು ೨. ವ್ಯಾಸತತ್ತ್ವಜ್ಞರು ೩. ವಿದ್ಯಾಕಾಂತ ತೀರ್ಥರು ೪. ವಿಜಯೇಂದ್ರ ತೀರ್ಥರು ೫. ವಿದ್ಯಾರತ್ನಾಕರ ತೀರ್ಥರು ೬. ಪ್ರದ್ಯುಮ್ನ ತೀರ್ಥರು ಸಂ: ಡಾ. ಅನಂತಪದ್ಮನಾಭ ರಾವ್
೪೧	೨೯-೧	ಶ್ರೀ ಅನಂತಾದ್ರೀಶರ ಕೃತಿಗಳು ಹಾಗೂ ಹೆನ್ನೆರಂಗ ದಾಸರ ಕೀರ್ತನೆಗಳು ೧. ಅನಂತಾದ್ರೀಶರು ೨. ಹೆನ್ನೆರಂಗ ದಾಸರು ಸಂ: ಡಾ. ಬಸವರಾಜ ಸಬರದ ಡಾ. ಜಯಲಕ್ಷ್ಮೀಮಂಗಳಮೂರ್ತಿ
೪೨	೨೯-೨	ಅಸ್ಕಿಹಾಲ ಗೋವಿಂದದಾಸರ ಹಾಗೂ ಕಾರ್ಪರ ನರಹರಿ ದಾಸರ ಕೀರ್ತನೆಗಳು ಸಂ: ಡಾ. ಬಸವರಾಜ ಸಬರದ ಡಾ. ಜಯಲಕ್ಷ್ಮೀಮಂಗಳಮೂರ್ತಿ

೪೩	೩೦	ಶಾಮ ಸುಂದರವಿಠಲರು ತಿಮ್ಮಪ್ಪದಾಸರು ಮತ್ತು ಇತರ ಹರಿದಾಸರ ಕೀರ್ತನೆಗಳು ೧. ಶಾಮಸುಂದರ ವಿಠಲರು ೨. ಗೋಪಾಲಾರ್ಯರು ೩. ವೆಂಕಟದಾಸರು ೪. ತಿಮ್ಮಪ್ಪದಾಸರು (ಕಾನಕಾನಹಳ್ಳಿ) ೫. ನಾರಾಯಣ ದಾಸರು ೬. ಮಳಿಗೆ ರಂಗಸ್ವಾಮಿ ದಾಸರು ೭. ಹೊಸಕೆರೆ ಚಿದಂಬರಯ್ಯನವರು ಸಂ: ಶಾಶ್ವತಸ್ವಾಮಿ ಮುಕ್ಕುಂದಿಮಠ ಎನ್. ಹನುಮನಗೌಡ ಪ್ರೊ. ನಾ ಗೀತಾಚಾರ್ಯ ಎನ್.ಎಸ್. ರಾಮಸ್ವಾಮಿ ಅಯ್ಯರ್
೪೪	೩೧-೧	ಶ್ರೀ ಗುರು ಗೋವಿಂದ ವಿಠಲದಾಸರ ಕೀರ್ತನೆಗಳು ಭಾಗ - ೧ ಸಂ: ಕೆ.ಎಸ್. ವೆಂಕಟೇಶ್ (ವರಾಹ ಹರಿವಿಠಲದಾಸರು ಮಂಡ್ಯ)
೪೫	೩೧-೨	ಶ್ರೀ ಗುರು ಗೋವಿಂದ ವಿಠಲದಾಸರ ಕೀರ್ತನೆಗಳು ಭಾಗ - ೨ ಸಂ: ಕೆ.ಎಸ್. ವೆಂಕಟೇಶ್ (ವರಾಹ ಹರಿವಿಠಲದಾಸರು ಮಂಡ್ಯ)
೪೬	೩೨	ಶ್ರೀ ರಾಮದಾಸರ ಕೀರ್ತನೆಗಳು ರಾಮದಾಸರು (ಬಡೇಸಾಹೇಬರು) ಸಂ: ಡಾ. ಸ್ವಾಮಿರಾವ್ ಕುಲಕರ್ಣಿ ಶ್ರೀಮತಿ ಶೀಲಾದಾಸ
೪೭	೩೩	ಶ್ರೀ ಕವಿ ಪರಮದೇವ ಹಾಗೂ ಇತರ ಅದ್ವೈತ ಹರಿದಾಸರ ಕೀರ್ತನೆಗಳು ೧. ಕವಿ ಪರಮದೇವ ೨. ಕರ್ಕಿ ಕೇಶವದಾಸರು ೩. ಬೇಟೆರಾಯ ದೀಕ್ಷಿತರು

		೪. ಶಂಕರಭಟ್ಟ ಅಗ್ನಿಹೋತ್ರಿ ೫. ಭಟಕಳ ಅಪ್ಪಯ್ಯನವರು ಸಂ: ಡಾ. ಕೆಳದಿ ವೆಂಕಟೇಶ ಜೋಯಿಸ ಡಾ. ಡಿ.ಆರ್. ಪಾಂಡುರಂಗ
೪೮	३೪	ಶ್ರೀ ಗುರುರಾಮವಿಠಲರ ಕೀರ್ತನೆಗಳು ಸಂ: ಡಾ. ಅನಂತಪದ್ಮನಾಭ ರಾವ್
೪೯	३೫-೧	ಶ್ರೀ ಬೇಲೂರು ವೈಕುಂಠದಾಸರು ಮತ್ತು ಇತರ ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು ೧. ಬೇಲೂರು ವೈಕುಂಠ ದಾಸರು ೨. ಕವಿಲಕ್ಷ್ಮೀಶ ೩. ತುಳಸೀರಾಮ ದಾಸರು ೪. ಮಳಿಗೆ ರಂಗಸ್ವಾಮಿ ದಾಸರು ೫. ಚನ್ನಪಟ್ಟಣದ ಅಹೋಬಲ ದಾಸರು ೬. ಶಾಮಶರ್ಮರು (ಜಾಜೀಶ) ೭. ಸಂಪತ್ತೆಯ್ಯಂಗಾರ್ ೮. ನಾರಾಯಣಶರ್ಮರು ಸಂ: ನಾ. ಗೀತಾಚಾರ್ಯ
೫೦	३೫-೨	ಆಸೂರಿ ರಾಮಸ್ವಾಮಿ ದಾಸರು ಮತ್ತು ಇತರ ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು ೧. ಆಸೂರಿ ರಾಮಸ್ವಾಮಿ ಕೀರ್ತನೆಗಳು ೨. ಮಾರ್ಗದರ್ಶಿ ಶೇಷಯ್ಯಂಗಾರ್ (ಕೋಸಲಪುರೀಶ) ೩. ಬಡಣ್ಣಯ್ಯಾಚಾರ್ಯರು ಸಂ: ಪ್ರೊ. ನಾ. ಗೀತಾಚಾರ್ಯ
		ಮೇಲ್ಕಂಡ ೫೦ ಪುಸ್ತಕಗಳನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಪ್ರಕಟಿಸಿದ ವರ್ಷ ೨೦೦೩. ೧೪೦ ಜನ ಹರಿದಾಸರು ೧೯೦೦ಕ್ಕೆ ಮುಂಚೆ ಜನಿಸಿದವರ ೧೬೦೦೦ ಕೀರ್ತಣೆಗಳು ಈ ಸಂಪುಟಗಳಲ್ಲಿ ಪ್ರಕಟವಾಗಿವೆ ಅವುಗಳಿಂದ ಶ್ರೀ ರಾಮ ಕೀರ್ತನೆಗಳನ್ನು ಆಯ್ಕೆಮಾಡಿದೆ

೫೧		ಅಭಿನವ ಜನಾರ್ದನ ವಿಠಲರು ಪ್ರೇಮಾದಾಸ ಮತ್ತು ಇತರ ಕೀರ್ತನೆಗಳು ಸಂ: ಗೊರಬಾಳೆ ಹನುಮಂತರಾಯರು ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂದಲ ಲಿಂಗಸೂಗುರು ೨೦೧೩
೫೨		ಕೆಲ್ಲಂಗೆರೆ ತಿಮ್ಮಪ್ಪದಾಸರು ಸಂ: ಪ್ರೊ. ಜಿ. ಅಶ್ವತ್ಥನಾರಾಯಣ ಕೆ.ವಿ. ಶ್ರೀನಿವಾಸ, ಮನೋರಮಾ ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ ಬೆಂಗಳೂರು ೨೦೦೭ (೧), ೨೦೨೩ (೨)
೫೩		ನಿತ್ಯಾನಂದ ವಿಠಲರ ಕೀರ್ತನೆಗಳು ಸಂ: ಡಾ. ಅನಂತಪದ್ಮನಾಭ ರಾವ್ ಪ್ರ: ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ ೨೦೧೭
೫೪		ಶ್ರೀ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು ಲೇ : ಡಾ.ಎ.ಟಿ. ಪಾಟೀಲ ಪ್ರ: ಮಿಂಚಿನ ಬಳ್ಳಿ ಕಾರ್ಯಾಲಯ ಧಾರವಾಡ ೧೯೫೬
೫೫		ಮಹಪತಿ ದಾಸರ ಹಾಡುಗಳು ಸಂ: ಕಾವ್ಯಪ್ರೇಮಿ ಮತ್ತು ಇತರರ ಪ್ರ: ಸಮಾಜ ಪುಸ್ತಕಾಲಯ, ಧಾರವಾಡ ೧೯೭೮
೫೬		ಚೆನ್ನಪಟ್ಟಣದ ಅಹೋಬಲದಾಸರ ಕೀರ್ತನೆಗಳು ಸಂ: ಡಾ. ನಾ ಗೀತಾಚಾರ್ಯ ಪ್ರ: ರಾಜಲಕ್ಷ್ಮಿ ಎಂ. ಆರ್. ನಾರಾಯಣಶರ್ಮ ಸಂಸ್ಕೃತಿ ಕೇಂದ್ರ, ಬೆಂಗಳೂರು ಇಸವಿ ೨೦೦೭ (೧)
೫೭		ತುಳಸಿರಾಮದಾಸರು (ಜೀವನ ಮತ್ತು ಕೀರ್ತನೆಗಳು) ಸಂ: ಡಾ. ನಾ. ಗೀತಾಚಾರ್ಯ ಪ್ರ: ನಾರಾಯಣಶರ್ಮ ಸಂಸ್ಕೃತಿ ಕೇಂದ್ರ ಬೆಂಗಳೂರು ಇಸವಿ ೨೦೨೧

೫೮		ತುಳಸೀ ರಾಮದಾಸರ ಕೀರ್ತನೆಗಳು (ತೆಲುಗು ಕೀರ್ತನೆಗಳ ಕನ್ನಡಾನುವಾದ) ಅನುವಾದ : ಪ್ರೊ. ಎಸ್. ಬಿಳಿಗಿರಿವಾಸನ್ ಸಂ: ಡಾ. ನಾ. ಗೀತಾಚಾರ್ಯ ಪ್ರ: ನಾರಾಯಣಶರ್ಮ ಶತಮಾನೋತ್ಸವ ಸಮಿತಿ, ನಾರಾಯಣಶರ್ಮ ಸಂಸ್ಕೃತಿ ಕೇಂದ್ರ ಬೆಂಗಳೂರು, ಇಸವಿ ೨೦೧೫
೫೯		ತುಳಸೀರಾಮದಾಸರ ಜೀವನ ಚರಿತ್ರೆ ಮತ್ತು ಕೀರ್ತನೆ – ಶತಕಗಳು ಸಂ: ರಾಮಾನುಜ (ಎಂ. ಚೌಡಯ್ಯ) ಪ್ರ: ಎಂ. ಚೌಡಯ್ಯ ಶಾಕಾಂಬರಿನಗರ, ಬೆಂಗಳೂರು
೬೦		ನಾರಾಯಣದಾಸರ ಕೀರ್ತನ ಕುಸಮಾಂಜಲಿ ಸಂ: ಎಂ. ವಿ. ಸೀತಾರಾಮಯ್ಯ ಪ್ರ: ಬಿ.ಎಂ. ಶ್ರೀಸ್ಮಾರಕ ಪ್ರತಿಷ್ಠಾನ ೧೯೮೦
೬೧		ಗಾನಗಂಧರ್ವ ಸುರಪುರದ ಶ್ರೀ ಆನಂದ ದಾಸರು (ಜೀವನ ಮತ್ತು ಕೀರ್ತನೆಗಳು) ಸಂ: ಎ. ಕೃಷ್ಣ ಸುರಪರ ಮತ್ತು ಶ್ರೀ ಹರಿರಾವ್ ಆದವಾನಿ ಪ್ರಕಾಶಬಾಬು ತಾರಾಚಂದ ಜೈನ್ ಪ್ರ: ಅಂಬಾ ಪ್ರಕಾಶನ, ಬೆಂಗಳೂರು, ೨೦೧೧
೬೨		ವಿಜಯದಾಸರ ಕೃತಿಗಳು ಮತ್ತು ಉಗಾಭೋಗಗಳು ಸಂ: ಗೊರಬಾಳ ಹನುಮಂತ ರಾವ್ ಪ್ರ: ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಲ ಲಿಂಗಸೂಗೂರು ೨೦೧೨
೬೩		ಶ್ರೀ ಕನಕದಾಸರ ಕೀರ್ತನೆಗಳು (ಪಂಡಿತ ಆವೃತ್ತಿ) ಸಂ: ಡಾ. ಟಿ. ಎನ್. ನಾಗರತ್ನ ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೨೦೧೪
೬೪		ಶ್ರೀ ಪಾದರಾಜರ ಕೃತಿಗಳು (ಪಂಡಿತ ಆವೃತ್ತಿ) ಸಂ: ಡಾ. ಜಿ. ವರದರಾಜ ರಾವ್ ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೫

೧೫		ಶ್ರೀ ಮಹಿಪತಿರಾಯರ ಕೃತಿಗಳು ಸಂ: ಡಾ. ಜಿ. ವರದರಾಜ ರಾವ್ ಪ್ರ: ಮೈಸೂರು ವಿಶ್ವವಿದ್ಯಾನಿಲಯ
೧೬		ಶ್ರೀ ಗೋಪಾಲದಾಸರ ಕೃತಿಗಳು (ಪಂಡಿತ ಆವೃತ್ತಿ) ಸಂ: ಡಾ. ಟಿ.ಎನ್. ನಾಗರತ್ನ ಪ್ರ: ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕ.ಅ.ಸಂ.
೧೭		ಶ್ರೀ ವಾದಿರಾಜರ ಕೃತಿಗಳು (ಪಂಡಿತ ಆವೃತ್ತಿ) ಸಂ: ಡಾ. ಟಿ. ಎನ್. ನಾಗರತ್ನ ಪ್ರ: ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕ.ಅ.ಸಂ.
೧೮		ಹರಪನಹಳ್ಳಿ ಭೀಮವ್ವನ ಕೃತಿಗಳು ಸಂ: ಡಾ. ಟಿ.ಎನ್. ನಾಗರತ್ನ ಪ್ರ: ಕುವೆಂಪು ಕ.ಅ.ಸಂ. ಮೈವಿವಿ
೧೯		ಶ್ರೀ ಜಗನ್ನಾಥದಾಸರ ಕೃತಿಗಳು (ಪಂಡಿತ ಆವೃತ್ತಿ) ಸಂ: ಡಾ. ಟಿ.ಎನ್. ನಾಗರತ್ನ ಪ್ರ: ಮೈವಿವಿ ಕ.ಅ.ಸಂ.
೨೦		ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು (ಪಂಡಿತ ಆವೃತ್ತಿ) ಸಂ: ಶ್ರೀಮತಿ ಕೆ.ಟಿ. ಇಂದೂಬಾಯಿ ಪ್ರ: ಮೈವಿವಿ ಕ. ಅ ಸಂ
೨೧		ಶ್ರೀ ರಾಮದಾಸರ ಕೃತಿಗಳು ಸಂ: ಟಿ.ಎನ್. ನಾಗರತ್ನ ಪ್ರ: ಮೈವಿವಿ ಕ. ಅ ಸಂ
೨೨		ಶ್ರೀ ವ್ಯಾಸರಾಯರ ಕೃತಿಗಳು (ಪಂಡಿತ ಆವೃತ್ತಿ) ಸಂ: ಟಿ.ಎನ್. ನಾಗರತ್ನ ಪ್ರ: ಮೈಸೂರು ವಿಶ್ವವಿದ್ಯಾನಿಲಯ
೨೩		ಶ್ರೀ ಕನಕದಾಸರ ಸಮಗ್ರ ಕೀರ್ತನೆಗಳು ಸಂ: ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ಪ್ರ: ಐತರೇಯ ಪ್ರಕಾಶನ ವ್ಯಾಸನಕೆರೆ ೨೦೨೦

೭೪		ಪುರಂದರೋಪನಿಷತ್ (ಕೀರ್ತನೆ-ವಿವರಣೆ) ಸಂ: ಶ್ರೀ ಭದ್ರಗಿರಿ ಕೇಶವದಾಸರು ಪ್ರ: ಶ್ರೀ ಕೇಶವದಾಸ ಬುಕ್ ಟ್ರಸ್ಟ್, ನೆಲಮಂಗಲ ಬೆಂಗಳೂರು ೨೦೧೩
೭೫		ಕೇಶವನಾಮ ರಸಾಯನ (ಶಾಮಶರ್ಮರ ಕೀರ್ತನೆಗಳು) ಸಂ: ಡಾ. ನಾ. ಗೀತಾಚಾರ್ಯ ಪ್ರ: ನಾರಾಯಣಶರ್ಮ ಸಂಸ್ಕೃತಿ ಕೇಂದ್ರ, ಬೆಂಗಳೂರು ೨೦೧೧
೭೬		ಭಕ್ತಿ ಗೀತಾವಳಿ (ಕನ್ನಡ ಕೀರ್ತನೆಗಳು) ಲೇ: ಹೊಸಕೆರೆ ಚಿದಂಬರಯ್ಯ ಸಂ: ಪ್ರೊ. ಜಿ. ಅಶ್ವತ್ಥನಾರಾಯಣ ಪ್ರ: ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್, ಬೆಂಗಳೂರು ೨೦೧೨
೭೭		ಭದ್ರಾಚಲ ರಾಮದಾಸ ಚರಿತ್ರೆ (ಹರಿಕಥೆ ಮತ್ತು ಕೀರ್ತನೆಗಳು) ಲೇ : ಕಾ. ಶಿವರಾಮದಾಸ ಪ್ರ: ಬಿ. ಸುಬ್ಬಯ್ಯ ಅಂಡ್ ಸನ್ಸ್ ಕೋಟೆ, ಬೆಂ. ೧೯೧೯
೭೮		ದಾಸಗಾನ ಸೌರಭ (ಸಂಗ್ರಹ) ಸಂಗ್ರಹ : ರಮಾಕೇಶವಮೂರ್ತಿ ಸಂ: ಪ್ರೊ.ಜಿ. ಅಶ್ವತ್ಥನಾರಾಯಣ ಪ್ರ: ಶ್ರೀರಂಗನಾಥ ಪ್ರಕಾಶನ, ಬೆಂಗಳೂರು ೨೦೧೨
೭೯		ಶ್ರೀ ಹರಿದಾಸವಾಣಿ (ಸಂಗ್ರಹ) ಸಂ: ಡಾ. ಹ. ರಾ. ನಾಗರಾಜಾಚಾರ್ಯ ಪ್ರ: ಶ್ರೀ ಹರಿದಾಸ ಸಂಘ, ಬೆಂಗಳೂರು, ಕೃಷ್ಣರಾಜಪುರ
೮೦		ಹರೇ ಶ್ರೀನಿವಾಸ (೩ ಭಾಗಗಳು) (ಸಂಗ್ರಹ) (ದಾಸಗೀತ ಪುಷ್ಪಾಂಜಲಿ) ಸಂ: ಡಾ. ಪೂರ್ಣಭೋಧ ವಾದಿರಾಜಾಚಾರ್ಯ ಕಡಗದ ಕೈ ಪ್ರ: ಸಂಪಾದಕ, ಭಾವನಗರ ಬೆಳಗಾಂವಿ ೨೦೨೩ (೩೦ನೇ ಮುದ್ರಣ)

೮೧		ಸಾಂದರ್ಭಿಕ ಗೀತ ವೈವಿಧ್ಯ (ಸಂಗ್ರಹ) ಸಂ: ಕೆ. ರಾಜಲಕ್ಷ್ಮೀ ಗೋಪಾಲ್ ಪ್ರ: ನಾದ ಪ್ರಕಾಶನ, ಆವಲಹಳ್ಳಿ, ಬೆಂಗಳೂರು ೨೦೦೬ (೨)
೮೨		ಪುರಂದರದಾಸರ ಸಾವಿರಾರು ಹಾಡುಗಳು (ಸಂಪುಟ ೧) ಸಂ: ವಿದ್ಯಾವಾಚಸ್ಪತಿ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಸಹಸಂ: ಹ.ರಾ. ನಾಗರಾಜಾಚಾರ್ಯ ಪ್ರ: ಶ್ರೀ ಹರಿದಾಸ ಸಂಘ ಕೆ.ಆರ್. ಪುರಂ ಬೆಂಗಳೂರು. ೨೦೦೮
೮೩		ಶ್ರೀ ರಾಮಗೀತ ಗುಚ್ಛ (ಸಂಗ್ರಹ) ಸಂ: ಡಿ. ನಂ. ವೆಂಕಟರಮಣಯ್ಯ ಪ್ರ: ಶ್ರೀರಾಮ ಸೇವಾ ಮಂಡಳಿ ವಿಶ್ವೇಶ್ವರಪುರಂ ಬೆಂಗಳೂರು. ೨೦೧೭
೮೪		ಶ್ರೀ ಹರಿಭಜನಮಾಲಾ (ಸಂಗ್ರಹ) ಸಂ: ಸುರೇಖಾ (ವನಮಾಲಾ) ಗೋಪಾಲರಾವ್ ಕುಲಕರ್ಣಿ ಪ್ರ: ಶ್ರೀ ಗೋಪಾಲರಾವ್ ಕೃಷ್ಣರಾವ್ ಕುಲಕರ್ಣಿ ಗದಗ ೧೯೬೦?
೮೫		ಹೃದಯ ಸಂಪುಟ (ಸಂಪ್ರದಾಯದ ಹಾಡುಗಳು) ಸಂ: ವಾಗೀಶ್ವರೀಶಾಸ್ತ್ರಿ ಪ್ರ: ವಾಗ್ದೇವಿ ಕಲಾನಿಕೇತನ, ಬೆಂಗಳೂರು–೨೮ ೨೦೦೮ (೨)
೮೬		ಹಸೆಹಾಡುಗಳು (ಸಂಪ್ರದಾಯದ ಹಾಡುಗಳು) ಸಂ: ಶ್ರೀಮತಿ ರುಕ್ಮಿಣೀ ಉಡುಪ ಪ್ರ: ಸಂಗ್ರಹಕಾರ್ತಿ ಉಡುಪಿ
೮೭		ಸತ್ಯ ವಿಠಲ ರಚಿತ ಸಂಗೀತಶಾರದೆ ಲೇ : ಬಿ.ವಿ. ಸತ್ಯನಾರಾಯಣರಾವ್ (ಸತ್ಯವಿಠಲ) ಪ್ರ : ಲೇಖಕ, ಮಂಜುನಾಥನಗರ, ಬೆಂಗಳೂರು ೨೦೦೧೩(೨)

೮೮		ದಾಸ ಸಾಹಿತ್ಯದಲ್ಲಿ ವನಿತೆಯರು (ಬದುಕು – ಬರಹ) ಸಂ : ಎಚ್.ವಿ. ಶಾಂತಾ ಪ್ರ : ನವಭಾರತೀ ಪ್ರಕಾಶನ ಸರಸ್ವತಿಪುರ ಮೈಸೂರು. ೨೦೧೭
೮೯		ಗುರುಮಧ್ವೇಶ ವಿಠಲರ ಕೀರ್ತನೆಗಳು (ವಿಜಯದಾಸರ ಶಿಷ್ಯರು) ಸಂ : ಗೊರೆಬಾಳ ಹನುಮಂತರಾಯರು ಪ್ರ : ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಲ ಲಿಂಗಸೂಗೂರು ೨೦೧೩
೯೦		ಗಾನ ಸಂಪದ (ಸಂಪ್ರದಾಯದ ಹಾಡುಗಳು) ಸಂ : ಜಾವಗಲ್ ಸೀತಾರಾಮ, ಕೆ.ಎಸ್. ಶೈಲಜಾ ಪ್ರ : ಭಾರತೀ ಪ್ರಕಾಶನ ಮೈಸೂರು ೨೦೧೬
೯೧		ಅಮ್ಮ ಹಾಡಿದ ಸಾಂಪ್ರದಾಯದ ಹಾಡುಗಳು ಹಾಡುಗಾರ್ತಿ : ಸುಬ್ಬಲಕ್ಷ್ಮಮ್ಮ ಅವಧಾನಿ ಸಂ : ಎಸ್. ಜಗನ್ನಾಥ ಪ್ರ : ತನುಮನ ಪ್ರಕಾಶನ, ಮೈಸೂರು ೨೦೧೩
೯೨		ಶ್ರೀ ವೈಷ್ಣವರ ಕೀರ್ತನೆಗಳು (ಸಂಗ್ರಹ) ಸಂ : ಡಾ. ನಾ. ಗೀತಾಚಾರ್ಯ ಪ್ರ : ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಬೆಂಗಳೂರು ೨೦೧೧
೯೩		ಕರ್ಣಾಟಕ ಕೃತಿ ರತ್ನಮಾಲಾ ಲೇ : ಆನವಟ್ಟಿ ರಾಮರಾಯರು ಪ್ರ : ಲೇಖಕರಾ, ಮೈಸೂರು ೧೯೨೨
೯೪		ಸಮಗ್ರ ಹರಿದಾಸ ವಾಙ್ಮಯಕೋಶ ಸಂ : ಶ್ರೀನಿವಾಸ ಹಾವನೂರ ಪ್ರ : ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. ೨೦೧೪
೯೫		ಕನ್ನಡ ಕಾವ್ಯಗಳ ಗೆಜ್ಜೆನಾದ ಸಂಪುಟ – ೧ ಸಂ : ಪ್ರೊ. ಎ.ವಿ. ಸೂರ್ಯನಾರಾಯಣಸ್ವಾಮಿ ಎಚ್.ಎನ್. ಗೋವಿಂದ ಗೌಡ ಪ್ರ : ಹನ್ಯಾಳು ಪ್ರಕಾಶನ ವಿಜಯನಾಗರ ಮೈಸೂರು ೩೨ ೨೦೨೧(೨)

೯೬		ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೧ ಸಂ : ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಪ್ರ : ವಿಜಯ ಪ್ರಕಾಶನ ವಿಜಯಪುರ, ೨೦೧೯
೯೭		ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೨ ಸಂ : ಡಾ. ಕೆ. ಗೋಕುಲನಾಥ್ ಪ್ರ : ವಿಜಯ ಪ್ರಕಾಶನ ವಿಜಯಪುರ, ೨೦೨೦
೯೮		ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೩ ಸಂ : ಡಾ. ಸ್ವಾಮಿರಾವ ಕುಲಕರ್ಣಿ ಪ್ರ : ವಿಜಯ ಪ್ರಕಾಶನ ವಿಜಯಪುರ, ೨೦೨೧
೯೯		ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೪ ಸಂ : ಪ್ರೊ. ಜಿ. ಅಶ್ವತ್ಥನಾರಾಯಣ ಡಾ. ನಾ. ಗೀತಾಚಾರ್ಯ ಪ್ರ : ವಿಜಯ ಪ್ರಕಾಶನ ವಿಜಯಪುರ
೧೦೦		ಕರ್ಣಾಟಕ ಕೃತಿ ರತ್ನಮಾಲಾ ಭಾಗ-೧ ಲೇ/ಅನು : ಮ॥ ಆನವಟ್ಟಿ ರಾಮರಾಯರು ಪ್ರ : ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು ೧೯೩೩

ಶ್ರೀ ಜಯರಾಮ ಸೇವಾ ಮಂಡಳಿಯ - ಪ್ರಕಟಣೆಗಳು

#	ಪುಸ್ತಕ	ಪ್ರಧಾನ ಸಂಪಾದಕರು
1	ಶ್ರೀರಾಮ ಸಂಭವ	ಪ್ರೊ॥ ಜಿ ವೆಂಕಟಸುಬ್ಬಯ್ಯ
2	ಸಂಸ್ಕೃತದ ರಾಮಾಯಣ ನಾಟಕಗಳಲ್ಲಿ ಪಾತ್ರವೈವಿಧ್ಯ	ಪ್ರೊ॥ ಜಿ ವೆಂಕಟಸುಬ್ಬಯ್ಯ
3	ಬಾಳಿಗೊಂದು ಬೆಳಕು - ರಾಮಾಯಣದ ದೃಷ್ಟಿ	ಪ್ರೊ॥ ಜಿ ವೆಂಕಟಸುಬ್ಬಯ್ಯ
4	ರಾಮಾಯಣದ ಅಂತರಂಗ	ಪ್ರೊ॥ ಜಿ ವೆಂಕಟಸುಬ್ಬಯ್ಯ
5	ಪದಜೀವಿ	ಶ್ರೀ ಎಸ್ ಕೆ ಗೋಪಾಲಕೃಷ್ಣ
6	ಶಾಸ್ತ್ರಜೀವಿತ	ಪ್ರೊ॥ ಮಲ್ಲೇಪುರಂ ಜಿ ವೆಂಕಟೇಶ್, ಡಾ॥ ಶ್ರೀನಿವಾಸ ವರ್ಖೇಡಿ
7	ಶತನಮನ (ಜಿ.ವಿ ಸಂಭಾವನ ಸಂಪುಟ)	ಡಾ॥ ಪಿ ವಿ ನಾರಾಯಣ
8	ಸಂಸ್ಕೃತ ಭಾಷೆ-ಸಾಹಿತ್ಯಕ್ಕೆ ಕರ್ನಾಟಕದ ರಾಜಮನೆತನಗಳ ಕೊಡುಗೆ	ಡಾ॥ ಎಂ ಕೆ ಶ್ರೀಧರ್
9	ಸಚಿತ್ರ ರಾಮಾಯಣ ದರ್ಶನ (ಕನ್ನಡ)	ಪ್ರೊ॥ ಜಿ ವೆಂಕಟಸುಬ್ಬಯ್ಯ, ಡಾ॥ ವನಿತಾ ರಾಮಸ್ವಾಮಿ (ಕನ್ನಡ) ವಿದ್ವಾನ್ ಸೂರ್ಯಹೆಬ್ಬಾರ್ (ಸಂಸ್ಕೃತ) ಸ್ವಾಮಿ ಚಿದಾನಂದ (English)
10	सचित्र रामायण दर्शन (ಸಂಸ್ಕೃತ)	
11	SACHITRA RAMAYANA DARSHANA	
12	ಧರ್ಮ ಪಥ ದರ್ಶನ	ಶ್ರೀ ಎಸ್ ಕೆ ಗೋಪಾಲಕೃಷ್ಣ
13	ಶ್ರೀಮದ್ರಾಮಾಯಣ ಸುಭಾಷಿತ ಮಂಜರಿ	ವಿದುಷಿ ಸುಮಿತ್ರ ಸತೀಶ್
14	ಶ್ರೀ ರಾಮಾಂಜನೇಯ ಸ್ತೋತ್ರಗಳು	ಶ್ರೀ ಶರತ್ ಹರಿಹರಪುರ ಸತೀಶ್
15	ಸಂಪೂರ್ಣ ವಾಲ್ಮೀಕಿ ರಾಮಾಯಣ ಮತ್ತು ರಾಮಾಯಣದ ಮಹಾಪುರುಷರು	ಶ್ರೀ ದೇವುಡು ನರಸಿಂಹ ಶಾಸ್ತ್ರಿ
16	SRIMADRAMAYANA CHITRAMANJARI (ಇಂಗ್ಲಿಷ್)	ಚಿತ್ರಗಳು: ಶ್ರೀ ಮೋಹನದಾಸ್ ಮಾರತ್ ಚಿತ್ರಗಳಿಗೆ ಬಣ್ಣ: ಶ್ರೀ ಮನೋಜ್ ಟಿ ಎಂ ಇಂಗ್ಲಿಷ್ ಕಥನ: ಪ್ರೊ ॥ ಶ್ರೀ ಸುಬ್ಬರಾವ್ ಕನ್ನಡಕ್ಕೆ: ಪ್ರೊ॥ ಶ್ರೀಮತಿ ಗಾಯತ್ರಿ ಮೂರ್ತಿ ಸಂಸ್ಕೃತಕ್ಕೆ: ವಿದುಷಿ ॥ ಸುಮಿತ್ರ ಸತೀಶ್
17	ಶ್ರೀಮದ್ರಾಮಾಯಣ ಚಿತ್ರಮಂಜರಿ (ಕನ್ನಡ)	
18	श्रीमद्रामायण चित्रमञ्जरी (ಸಂಸ್ಕೃತ)	
19	ಹರಿದಾಸರು ಹಾಡಿರುವ ಶ್ರೀರಾಮನ ಕನ್ನಡ ಕೀರ್ತನೆಗಳು	ಪ್ರೊ॥ ಶ್ರೀ ಜಿ ಅಶ್ವತ್ಥನಾರಾಯಣ
20	ವಾಲ್ಮೀಕಿ ರಾಮಾಯಣ ಅಂತರಾರ್ಥಗಳು	ಶ್ರೀ ಎಸ್ ಆರ್ ಕೃಷ್ಣಮೂರ್ತಿ

ತೇರಾ ಕೋಟಿ ಶ್ರೀ ರಾಮ ನಾಮ ಲೇಖನ ಯಜ್ಞ

TERAH KOTI SRI RAMA NAMA LEKHANA YAGNA

ತ್ರಯೋದಾಕ್ಷರ ಶ್ರೀ ರಾಮ ನಾಮ ಜಪ ಅಥವ "ಶ್ರೀರಾಮ ಜಯರಾಮ ಜಯಜಯ ರಾಮ" ಎನ್ನುವ ಹದಿಮೂರು ಅಕ್ಷರ ರಾಮ ಜಪಗಳಲೆಲ್ಲಾ ಅತಿ ಮಹತ್ವವಾದದ್ದು. ಈ ದಿವ್ಯ ಮಂತ್ರವನ್ನು ಬರೆಯುವುದರಿಂದ ಸರ್ವ ಪುರುಷಾರ್ಥ ಬಯಕೆಗಳು ಸಿದ್ಧಿಸುವುದು.

ಶ್ರೀ ಜಯರಾಮ ಸೇವಾ ಮಂಡಳಿಯು "ತೇರಾ ಕೋಟಿ ತ್ರಯೋದಾಕ್ಷರ ಶ್ರೀ ರಾಮ ನಾಮ ಲೇಖನ ಯಜ್ಞ"ವನ್ನು ಯೆಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳ ದಿವ್ಯ ಮಾರ್ಗದರ್ಶನ ಹಾಗೂ ಆಶೀರ್ವಾದಗಳೊಂದಿಗೆ ಹಮ್ಮಿಕೊಂಡಿತ್ತು. ಈ ಯಜ್ಞದಲ್ಲಿ 13 ಕೋಟಿ ರಾಮನಾಮಗಳಿರುವ ಪುಸ್ತಕಗಳನ್ನು ಮಂದಿರದಲ್ಲಿ ನಿರ್ಮಾಣಗೊಂಡ? ಹೊಸ ಸ್ತೂಪದ ಅಡಿಯಲ್ಲಿ ಸುಮಾರು 50,000 ಪುಸ್ತಕಗಳನ್ನು ಮುಡಿಪಾಗಿಡಲಾಗಿದೆ. ಸಾವಿರಾರು ಭಕ್ತರು ಶ್ರೀ ರಾಮನಾಮ ಲೇಖನದಲ್ಲಿ ಪಾಲ್ಗೊಂಡು ಕೃತಾರ್ಥರಾಗಿ ಶ್ರೀರಾಮನ ಕೃಪೆಗೆ ಪಾತ್ರರಾಗಿದ್ದಾರೆ.

ಈ ಯಜ್ಞನ ಅಂಗವಾಗಿ ಮಂಡಳಿಯು 10ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವುದು ಹೆಮ್ಮೆಯ ವಿಷಯ?. ಆ ಪುಸ್ತಕಗಳಲ್ಲಿ "ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು" ಎಂಬ ಈ ಪುಸ್ತಕವೂ ಒಂದು.



ಶ್ರೀ ಎಂ.ಪಿ ವೆಂಕಟೇಶ್ ಮೂರ್ತಿ, ಮಲ್ಲತ್ತಹಳ್ಳಿ

ರಾಮನಾಮ್ಯೈವ ನಾಮ್ಯೈವ ನಾಮ್ಯೈವ ಮಮ ಜೀವನಮ್ ।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥

ರಾಮ ನಾಮವೇ ನನ್ನ ಜೀವನವು
ಕಲಿಯುಗದಲ್ಲಿ ಪರಮಗತಿಯನ್ನು ಹೊಂದಲು
ಬೇರೆ ಯಾವ ಉಪಾಯವೂ ಇಲ್ಲ.

ಶ್ರೀ ಜಯರಾಮ ಸೇವಾ ಮಂಡಳಿ (ರಿ.)
492/ಎ, 1ನೇ ಮುಖ್ಯ ರಸ್ತೆ, 8ನೇ ಬಡಾವಣೆ,
ಜಯನಗರ, ಬೆಂಗಳೂರು - 560070
ದೂರವಾಣಿ: 080 22445232

ಬೆಲೆ ₹400